
ಅಹರ್ನಿಶಿ

ನಮ್ಮ ಶಾಮಣ್ಣ

ಕಡಿದಾಳು ಶಾಮಣ್ಣ ಗೌರವ ಗ್ರಂಥ

ಸಂಪಾದಕರು

ಡಿ.ಎಸ್. ನಾಗಭೂಷಣ, ಎಂ.ಬಿ. ನಟರಾಜ್, ಬಿ.ಚಂದ್ರೇಗೌಡ



ನಮ್ಮ ಶಾಮಣ್ಣ

(ಕಡಿದಾಳು ಶಾಮಣ್ಣ ಗೌರವ ಗ್ರಂಥ)

ಸಂಪಾದಕರು

ಡಿ.ಎಸ್.ನಾಗಭೂಷಣ
ಎಂ.ಬಿ.ನಟರಾಜ್
ಬಿ.ಚಂದ್ರೇಗೌಡ

ಅಹರ್ನಿಶಿ ಪ್ರಕಾಶನ
ಜ್ಞಾನವಿಹಾರ ಬಡಾವಣೆ
ಕಂಟ್ರಿಕ್ಲಬ್ ಎದುರು
ವಿದ್ಯಾನಗರ
ಶಿವಮೊಗ್ಗ–೫೭೭೨೦೩

Namma Shamanna(Felicitation Volume) Presented to Kadidal Shamanna edited by D.S.Nagbhushana, M.B.Nataraj and B.Chandre Gowda, published by Aharnishi Prakashana, Jnanavihara Extention, In front of Country Club, Vidyanagara, Shimoga, Karnataka. Ph-9449174662.
akshatha.shimoga@gmail.com

ಮೊದಲ ಮುದ್ರಣ	:	2016
ಬಳಸಿರುವ ಕಾಗದ	:	70 ಜಿಎಸ್ ಎಮ್ ಎನ್ ಎಸ್ ಮೆಪ್ಲಿತೊ
ಪುಸ್ತಕದ ಆಕಾರ	:	1/8 ಡೆಮಿ
ಪುಟಗಳು	:	22+422+8
ಬೆಲೆ ರೂ.	:	375/–
ಹಕ್ಕುಗಳು	:	ಆಯಾ ಲೇಖಕರದ್ದು
ಮುಖಪುಟ	:	ಅರುಣ್ ಕುಮಾರ್
ಮುಖಪುಟ ಚಿತ್ರ	:	ಶಿವಮೊಗ್ಗ ನಂದನ್
ಹಿಂಬದಿ ಚಿತ್ರ	:	ಕೌಶಿಕ್ ಕಡಿದಾಳ್
ಅಕ್ಷರ ಸಂಯೋಜನೆ	:	ಶ್ರೀ ಸಾವಳಗಿ ಶಿವಲಿಂಗೇಶ್ವರ ಗ್ರಾಫಿಕ್ಸ್, ವಿದ್ಯಾರಣ್ಯ

ಪ್ರಕಾಶಕರ ವಿಳಾಸ
ಅಕ್ಷತಾ ಹುಂಚದಕಟ್ಟೆ
ಅಹರ್ನಿಶಿ ಪ್ರಕಾಶನ
ಜ್ಞಾನವಿಹಾರ ಬಡಾವಣೆ
ಕಂಟ್ರಿ ಕ್ಲಬ್ ಎದುರು
ವಿದ್ಯಾನಗರ
ಶಿವಮೊಗ್ಗ–೫೭೭೨೦೩
ಸೆಲ್: ೯೪೪೯೧೭೪೬೬೨

ಪ್ರಸಾರಣೆ: ಯುವರಾಜ್ ಕೆ.

ಮುದ್ರಕರು:
ರಿಪ್ಲಿಕ ಆಫ್‌ಸೆಟ್ ಪ್ರಿಂಟರ್ಸ್
ರಾಜಾಜಿನಗರ ಇಂಡಸ್ಟ್ರಿಯಲ್ ಟೌನ್
ಬೆಂಗಳೂರು–೫೬೦೦೪೪
ದೂರವಾಣಿ : 23357963, 23355337

ಶಾಮಣ್ಣ ಗೌರವ ಗ್ರಂಥ ಸಮಿತಿ

ಗೌ.ಅಧ್ಯಕ್ಷರು

ಕಿಮ್ಮನೆ ರತ್ನಾಕರ್

ಅಧ್ಯಕ್ಷರು

ಬಿ.ಅನಸೂಯಮ್ಮ

ಕಾರ್ಯದರ್ಶಿ

ಕೆ.ಆರ್.ದಯಾನಂದ

ಸದಸ್ಯರು

ಡಿ.ಎಸ್.ನಾಗಭೂಷಣ

ಎಂ.ಬಿ.ನಟರಾಜ್

ಬಿ.ಚಂದ್ರೇಗೌಡ

ಸಂಪಾದಕರ ಮಾತು

ಕಳೆದ ಇಪ್ಪತ್ತು-ಇಪ್ಪತ್ತೈದು ವರ್ಷಗಳಲ್ಲಿ ನಮ್ಮ ಬದುಕು ಎಷ್ಟು ವೇಗವನ್ನು ಗಳಿಸಿಕೊಂಡಿದೆಯೆಂದರೆ, ಈ ಅವಧಿಗೆ ಮುಂಚಿನ ಬದುಕಿನ ಮಾದರಿ-ಮೌಲ್ಯಗಳೆಲ್ಲವೂ ಈಗ ಬಹು ಪ್ರಾಚೀನವೆಂಬಂತೆ ಕಾಣತೊಡಗಿವೆ. ಅಷ್ಟೇ ಅಲ್ಲ, ಈ ವೇಗಕ್ಕೆ ಆ ಕಾಲದ ನಮ್ಮ ನೆನಪುಗಳೂ ಎಷ್ಟು ಅಸ್ತವ್ಯಸ್ತವಾಗುತ್ತಿವೆಯೆಂದರೆ ಆ ಮಾದರಿಗಳು ಮತ್ತು ಮೌಲ್ಯಗಳು ಇಂದು ಅಪ್ರಸ್ತುತವೂ, ಅಸಂಗತವೂ ಆಗಿ ಕಾಣತೊಡಗುವ ಅಪಾಯಕ್ಕೀಡಾಗಿವೆ. ಇಂತಹ ಸಂದರ್ಭದಲ್ಲಿ ಇಂತಹ ಬದುಕಿನ ಮಾದರಿ ಮತ್ತು ಮೌಲ್ಯಗಳನ್ನು ಪ್ರತಿನಿಧಿಸುವ ಕಡಿದಾಳು ಶಾಮಣ್ಣನವರನ್ನು ಕುರಿತ ಗೌರವ ಗ್ರಂಥ ಪ್ರಕಟವಾಗುತ್ತಿದೆ. ಅಥವಾ ಈ ಗ್ರಂಥದ ಸಂಪಾದಕನೊಬ್ಬನಾಗಿ ಹೇಳುವುದಾದರೆ, ಈ ಕಾರಣದಿಂದಲೇ ಇಂತಹ ಗ್ರಂಥವನ್ನು ಹೊರತರುವ ತುರ್ತು ಮತ್ತು ಒತ್ತಾಯಗಳು ಹುಟ್ಟಿಕೊಂಡಿವೆ. ಈ ಅರ್ಥದಲ್ಲಿ ಈ ಗ್ರಂಥ ಸಾತತ್ಯವಿಲ್ಲದೆಯೇ ಕಳೆದು ಹೋಗುತ್ತಿರುವ ಮತ್ತು ಕಳೆದುಹೋಗಬಾರದ ಕಾಲವೊಂದರ ನೆನಪುಗಳನ್ನು ದಾಖಲಿಸುವ ಗ್ರಂಥ. ಆ ಮೂಲಕ ಆ ಕಾಲಕ್ಕೆ ಈ ಕಾಲದೊಂದಿಗೆ ಸಾತತ್ಯವನ್ನು ಕಲ್ಪಿಸಲೆತ್ನಿಸುವ ಗ್ರಂಥವೂ ಆಗಿದೆ.

ಈ ಗೌರವ ಗ್ರಂಥವನ್ನು ರೂಪಿಸುವಾಗ ನಾವು ಲೇಖಕರನ್ನು ಆಯ್ಕೆ ಮಾಡಿಕೊಂಡದ್ದೂ ಈ ಹಿನ್ನೆಲೆಯಲ್ಲೇ. ಅದು ಒಂದು ವ್ಯಕ್ತಿತ್ವವನ್ನು ಪರಿಚಯಿಸುತ್ತಿರುವಾಗಲೇ, ಆ ಕಾಲವನ್ನೂ ಪರಿಚಯಿಸುವಂತಿರಬೇಕು.

ಹಾಗಿದ್ದಾಗ ಮಾತ್ರ ಒಂದು ವ್ಯಕ್ತಿತ್ವದ ಸಾವಯವ ಚಿತ್ರ ನಮಗೆ ದೊರಕುವುದು. ಅಂದರೆ ಆ ಕಾಲದ ಸಂಕಟಗಳು, ಸವಾಲುಗಳ ಜೊತೆಗೇ ಆ ಕಾಲದ ಆದರ್ಶಗಳು ಮತ್ತು ಮೌಲ್ಯಗಳೂ ಮತ್ತು ಇವನ್ನು ಅರ್ಥಪೂರ್ಣಗೊಳಿಸಿ ಬೆಳಗಿಸಿದ ಸಾಮಾಜಿಕ-ರಾಜಕೀಯ-ಸಾಂಸ್ಕೃತಿಕ ಬೆಳವಣಿಗೆಗಳೂ ನಿರೂಪಿತವಾಗಬೇಕು. ಅಲ್ಲದೆ ಇವು ಯಾವ ಶಿಷ್ಟ ನುಡಿಗಟ್ಟುಗಳ ಭಾರವಿಲ್ಲದೆ-ಕಡಿದಾಳು ಶಾಮಣ್ಣನವರ ವ್ಯಕ್ತಿತ್ವದಂತೆಯೇ-ಲೋಕಾಭಿರಾಮವಾಗಿ ನಿರೂಪಣೆಗೊಳ್ಳಬೇಕು. ಹಾಗಾಗಿಯೇ ನಾವು ಯಾವ ಲೇಖಕರಿಗೂ ನಿರ್ದಿಷ್ಟ ವಿಷಯ ಕೊಟ್ಟು ಬರೆಯಲು ಹೇಳಲಿಲ್ಲ. ಸುಮ್ಮನೆ, ಶಾಮಣ್ಣನ ಬಗ್ಗೆ ನಿಮಗೇನು ಬರೆಯಬೇಕೆನಿಸುವುದೋ ಅದನ್ನು ಬರೆಯುವಂತೆ ಕೋರಿಕೊಂಡೆವು. ಶಾಮಣ್ಣನವರ ಸಹವಾಸ ದೊಡ್ಡದು ಮತ್ತು ಅಷ್ಟೇ ಪ್ರೀತಿಪಾತ್ರವಾದುದು. ಹಾಗಾಗಿ ನಾವು ಕೋರಿಕೊಂಡ ಬಹುಪಾಲು ಜನ ಬರೆದಿದ್ದಾರೆ. ಅವರ ವೈವಿಧ್ಯತೆಯಂತೆಯೇ ಅವರ ಬರಹಗಳಿವೆ ಮತ್ತು ಆ ವೈವಿಧ್ಯತೆ ಶಾಮಣ್ಣನ ವ್ಯಕ್ತಿತ್ವದ ವೈವಿಧ್ಯತೆಯನ್ನೂ ಚಿತ್ರಿಸಿವೆ ಎಂದು ನಾವು ಭಾವಿಸಿದ್ದೇವೆ.

ಶಾಮಣ್ಣ ಬಾಲ್ಯದಿಂದಲೂ ಸಮೂಹದ ಮನುಷ್ಯ. ಮಕ್ಕಳು ತುಂಬಿದ ದೊಡ್ಡ ಕುಟುಂಬದ ಹಿರಿಮಗನಾಗಿ ಆರಂಭವಾದ ಈ ಸಾಮೂಹಿಕತೆ, ಅವರ ಬದುಕಿನುದ್ದಕ್ಕೂ ಮುಂದುವರೆದು ಅವರನ್ನು ಬೆಳೆಸಿದೆ; ಜೊತೆಗೆ ಅವರು ಕಟ್ಟಿಕೊಂಡ ಸಮೂಹವನ್ನೂ. ಭೂಮಾಲೀಕರ ಕುಟುಂಬದ ಮಗನಾದ ಶಾಮಣ್ಣ ಬಾಲ್ಯದಲ್ಲೇ ಗೇಣಿ ಪದ್ಧತಿಯ ಬವಣೆಯನ್ನು ನೋಡಿ ತಮ್ಮ ಕುಟುಂಬದ ಬಗ್ಗೆ ಮುಜುಗರಪಟ್ಟುಕೊಂಡವರು; ಆ ಪದ್ಧತಿ ಬಗ್ಗೆ ಅಸಮಧಾನಗೊಂಡವರು. ಲೋಹಿಯಾ ವಿಚಾರಗಳಿಂದ ಪ್ರಭಾವಿತರಾಗಿ ತಮ್ಮೂರಿನ ಸುತ್ತಮುತ್ತಲೇ ಅವಧೂತನಂತೆ ಸಂಚರಿಸುತ್ತಾ ಸಮಾಜವಾದಿ ಚಳುವಳಿಯನ್ನು ಕಟ್ಟುತ್ತಿದ್ದ ಶಾಂತವೇರಿ ಗೋಪಾಲ ಗೌಡರ ಪ್ರಭಾವಕ್ಕೆ ಸಿಕ್ಕಿ ಬದುಕಿನ ದಿಕ್ಕನ್ನೇ ಬದಲಾಯಿಸಿಕೊಂಡವರು. ಹಾಗೇ ಇದಕ್ಕೆ ಪೂರಕವಾಗಿ ಮೈಸೂರಿನಲ್ಲಿ ಓದುತ್ತಿರುವಾಗ ಕುವೆಂಪು ಅವರ ಆಪ್ತ ವಲಯದಲ್ಲಿ ಬೆಳೆದು ಅವರ ವ್ಯಕ್ತಿ-ವಿಚಾರಗಳ ಪ್ರಭಾವಕ್ಕೂ ಒಳಗಾಗಿ ತಮ್ಮ ವಿಚಾರಶೀಲತೆಯನ್ನು ರೂಪಿಸಿಕೊಂಡವರು. ಮುಂದೆ ಗೋಪಾಲ ಗೌಡರು ಬದುಕಿರುವವರೆಗೂ ಅವರ ಶಿಷ್ಯತ್ವದಲ್ಲಿ ಬೆಳೆದ ಶಾಮಣ್ಣ, ಆ ಶಿಷ್ಯತ್ವದ ಭಾಗವಾಗಿ ತಾವು ಕೂಡಿಕೊಂಡ ಒಂದು ವಿಶಿಷ್ಟ ಗೆಳೆಯರ ಗುಂಪಿನ ಸದಸ್ಯರಾಗಿ ಮಾಡಿದ ಕೆಲಸ ಕನಿಷ್ಠ ಕರ್ನಾಟಕದ ದಕ್ಷಿಣ ಭಾಗದ ಆಧುನಿಕ ಇತಿಹಾಸ ಪುಟಗಳಲ್ಲಿ ಬಹುಕಾಲ ಅಳಿಸಿಹೋಗದಂತಹದ್ದು.

'ಸಮಾಜವಾದಿ ಯುವಜನ ಸಭಾ'ದ ಸದಸ್ಯರಾಗಿ ಗೆಳೆಯರಾದ ಪೂರ್ಣಚಂದ್ರ ತೇಜಸ್ವಿ ಮತ್ತು ಎನ್.ಡಿ. ಸುಂದರೇಶರೊಂದಿಗೆ ಶಾಮಣ್ಣ ಆಡಾಡುತ್ತಲೇ-ಈ

ಮೂವರ ಶೈಲಿಯೇ ಅದು-ತಮ್ಮ ಕಾಲದ ಯುವಜನಾಂಗವನ್ನು ಪ್ರಭಾವಿಸಿ ರೂಪಿಸಿದ ರೀತಿ ಆ ಕಾಲದ ಹಲವು ಹೋರಾಟಗಳ ಇತಿಹಾಸದಲ್ಲಿ ಪ್ರತಿಬಿಂಬಿತ ವಾಗಿದೆ. ಅದು ಭೂ ಸುಧಾರಣೆಯ ವಿಷಯವಾಗಿರಬಹುದು, ಇಂಗ್ಲಿಷ್ ತೊಲಗಿಸಿ ಆಂದೋಲನವಾಗಿರಬಹುದು, ಜಾತಿ ಬಿಡಿ ಆಂದೋಲನವಾಗಿರಬಹುದು, ಕುವೆಂಪು ಪ್ರಣೀತ 'ಮಂತ್ರ ಮಾಂಗಲ್ಯ'ದ ಸರಳ ವಿವಾಹ ಆಂದೋಲನವಾಗಿರ ಬಹುದು, ಜೆಪಿಯವರ 'ಸಂಪೂರ್ಣ ಕ್ರಾಂತಿ' ಆಂದೋಲನವಾಗಿರಬಹುದು, ಗ್ರಾಮಾಂತರ ಸಾಕ್ಷರತಾ ಆಂದೋಲನವಾಗಿರಬಹುದು, ಗ್ರಂಥಾಲಯ ಆಂದೋಲನವಾಗಿರ ಬಹುದು, ಗ್ರಾಮ ನೈರ್ಮಲ್ಯ ಆಂದೋಲನವಾಗಿರಬಹುದು ಅಥವಾ ಇವೆಲ್ಲವನ್ನೂ ಒಳಗೊಂಡಿದೆ ಎಂದು ಅವರು ನಂಬಿದ್ದ ನಿರ್ಣಾಯಕ ರೈತ ಆಂದೋಲನವಾಗಿರ ಬಹುದು(ಮತ್ತು ಅದರ ಮೂಲಕ ಸಂವಾದಿಸಿದ ದಲಿತ ಆಂದೋಲನವೇ ಆಗಿರಬಹುದು) ಶಾಮಣ್ಣ ಆಧುನಿಕ ಕರ್ನಾಟಕದ ಈ ಎಲ್ಲ ಆಂದೋಲನಗಳ ಮೂಲಕ ತಮ್ಮ ವ್ಯಕ್ತಿತ್ವ ರೂಪಿಸಿಕೊಂಡವರು ಮತ್ತು ಹಾಗೆ ರೂಪಿಸಿಕೊಂಡ ವ್ಯಕ್ತಿತ್ವದ ಸತ್ವವನ್ನು ಆ ಆಂದೋಲನಗಳಿಗೇ ಧಾರೆಯೆರೆದು ಅವನ್ನು 'ಜೀವಂತ' ಗೊಳಿಸಿದವರು.

ಇಲ್ಲಿ 'ಜೀವಂತ' ಎಂಬ ನಿರ್ದಿಷ್ಟ ಶಬ್ದದ ಬಳಕೆಯೇ ಏಕೆ ಎಂಬುದು ಶಾಮಣ್ಣನವರೊಂದಿಗೆ ಒಡನಾಡಿದ ಎಲ್ಲರಿಗೂ ಗೊತ್ತು. ಅದನ್ನು ಅವರುಗಳು ಹಾಸ್ಯ ಅಥವಾ ವಿನೋದವೆಂದು ಸುಲಭವಾಗಿ ವರ್ಣಿಸುವರು. ಆದರೆ ಅದು ಅಷ್ಟು ಸರಳ ವರ್ಣನೆಗೆ ಸಿಗುವಂತಹ ಸತ್ವವಲ್ಲ. ಅವರ ಆಪ್ತ ಒಡನಾಡಿ ಪೂರ್ಣಚಂದ್ರ ತೇಜಸ್ವಿ ಹೇಳುವಂತೆ ಒಂದು ವಿದ್ಯಮಾನವನ್ನು ಹಲವು ಬಗೆಗಳಲ್ಲಿ ಗ್ರಹಿಸಲು ನೆರವಾಗುವ ಮಾನವ ಸಂಪನ್ಮೂಲವದು! ಈ ಅರ್ಥದಲ್ಲಿ ತೇಜಸ್ವಿಯವರ ಸಾಹಿತ್ಯದ ಜೀವಂತಿಕೆಯನ್ನು ಹೆಚ್ಚಿಸಿದವರು ಶಾಮಣ್ಣ ಎಂದೂ ಹೇಳಬಹುದು. ಇದನ್ನೇ ಇವರ ಗುರುಗಳಾದ ಪ್ರಭುಶಂಕರ ಹೀಗೆ ವರ್ಣಿಸುವರು: 'ಶಾಮಣ್ಣ ಯಾವ ಸಂಗತಿಯನ್ನೂ ಅತೀ ಗಂಭೀರವಾಗಿ ಪರಿಗಣಿಸಿದವನಲ್ಲ. ಎಂಥದೇ ತಲೆ ಹೋಗುವ ಸಂಗತಿಯಾಗಿರಲಿ, ಅದರಲ್ಲಿದ್ದ ಇನ್ನೊಂದು ಮುಖವನ್ನು ಗುರುತಿಸಿ, ಅದನ್ನು ವಿಡಂಬನಾತ್ಮಕವಾಗಿ ಬಿಂಬಿಸುತ್ತಿದ್ದ. ಹಾಗಾಗಿ ನಾವು ಅವನ ಮಾತನ್ನು ಹಗುರವಾಗಿ ಪರಿಗಣಿಸುವಂತೆ, ಇಲ್ಲವೇ ತೆಗೆದುಹಾಕುವಂತೆ ಇರಲಿಲ್ಲ.'

ಸಮಾಜವಾದ ಎಂಬುದು ಇಂದು ಅಷ್ಟೇನೂ ಉತ್ಸಾಹ ಹುಟ್ಟಿಸದ ಶಬ್ದ. ಸಮಾಜವಾದಿಗಳೆನಿಸಿಕೊಂಡ ಅನೇಕ ನಾಯಕರು ತಮ್ಮ ವರ್ತನೆಗಳಿಂದ ಅದರ ಮರ್ಯಾದೆ ಕಳೆದಿದ್ದಾರೆ. ಆದರೆ ಶಾಮಣ್ಣ ಅದರಿಂದ ಒಂದಿನಿತೂ ವಿಚಲಿತರಾಗದೆ ತಮ್ಮನ್ನು ಸಮಾಜವಾದಿಯೆಂದು ಕರೆದುಕೊಳ್ಳಲು ಹೆಮ್ಮೆ ಪಡುತ್ತಾರೆ. ಕಾರಣ:

ಅವರು ನಿಜ ಸಮಾಜವಾದಿಯಾಗಿ ಬದುಕಿ ಸಮಾಜವಾದದ ಗೌರವವನ್ನು ಕಾಪಾಡಿಕೊಂಡು ಬಂದಿದ್ದಾರೆ. ಸಮಾಜವಾದಿ ಮಾದರಿಯ ಬದುಕು ಎಂದರೇನು ಎಂಬುದನ್ನು ಬದುಕಿ ತೋರಿಸಿದ್ದಾರೆ. ಅವರ ಹಿರಿಯ ಗೆಳೆಯ, ಗುರು ಸರೋದ್ ವಾದಕ ಪಂಡಿತ್ ರಾಜೀವ್ ತಾರಾನಾಥ್ ಶಾಮಣ್ಣನ ವ್ಯಕ್ತಿತ್ವವನ್ನು ಕಟ್ಟಿಕೊಟ್ಟಿರುವ ಈ ಬಗೆ ಇದನ್ನು ಸಮರ್ಥವಾಗಿ ವಿವರಿಸುತ್ತದೆ: 'ಇವತ್ತಿನ ದಿನ ಎಲ್ಲಾ ಕಡೆ ಜನರ ತಲೆ ಕೆಡಿಸುವ ಫ್ಯಾಸಿಸಂ ಬೆಳೆಯುತ್ತಿದೆ. ದೇಶದಲ್ಲಿ ಇರುವುದೇ ಬೇಡ ಎನ್ನಿಸುವಂತ ಸ್ಥಿತಿಯನ್ನು ನಿರ್ಮಿಸುತ್ತಿದ್ದಾರೆ. ಅದನ್ನು ಎದುರಿಸಲು ಶಾಮಣ್ಣನಂತ ಶಕ್ತಿಗಳು ಇರಬೇಕು. ಜನಗಳಲ್ಲಿ ಆರೋಗ್ಯವಾದ ಮನಸ್ಸು, ಆರೋಗ್ಯಕರ ಧೋರಣೆ, ಆರೋಗ್ಯಕರ ವ್ಯಕ್ತಿತ್ವವನ್ನು ಬೆಳೆಸುವಲ್ಲಿ ಶಾಮಣ್ಣ ಧೈರ್ಯವಾಗಿ ತೊಡಗಿಸಿ ಕೊಂಡಿದ್ದಾರೆ. ಅದು ಬಹುಮುಖ್ಯ.

...ಲೆಕ್ಚರ್‌ಬಾಜಿ ಅವರ ಧಾಟಿ ಅಲ್ಲ. ಬದುಕಿನ ಸರಳತೆ, ಚೊಕ್ಕತನ, ಮನವ ತೆರೆದಿಟ್ಟ ಬಗೆಯ ಒಂದು ಗೆಳೆತನ, ತೆರದ ಮನಸ್ಸು ಅವರ ವಿಶೇಷ: ಅವರ ಜೊತೆಗಿದ್ದವರಿಗದು ಗೊತ್ತಾಗುತ್ತದೆ. ಇನ್ನು ಅದಕ್ಕಿಂತ ಇನ್ನೇನು ಬೇಕು? ಅಂಥವರಿರಬೇಕು; ಸುಮ್ಮನೆ ಬದುಕಿ ಅವರ ಪ್ರಭಾವ ಹಬ್ಬಬೇಕು. ಟೈಮ್ ಸಿಕ್ಕಾಗ ಕೊಂಚ ಸರೋದ್ ನುಡಿಸಬೇಕು. ಅದರ ಗೀಳನ್ನು ಯಾವತ್ತೂ ಇಟ್ಕೋಬೇಕು; ಇಟ್ಕೊಂಡಿದ್ದಾರೆ ಕೂಡ.'

ಇದಷ್ಟೇ ಅಲ್ಲ, ಶಾಮಣ್ಣನವರ ಸಹಪಾಠಿ ಮತ್ತು ಜೀವದ ಗೆಳೆಯ ಸೈಯ್ಯದ್ ಅಬ್ದುಲ್ ಖಾಜಿ ಹೇಳುವ ಈ ಮಾತು ಶಾಮಣ್ಣನಂತವರು ಸಮಾಜವಾದವನ್ನು ಕೇವಲ ಒಂದು ರಾಜಕೀಯ ಚಿಂತನೆಯಾಗಿ ಮಾತ್ರ ಅರ್ಥೈಸಿಕೊಳ್ಳದೆ ಅದನ್ನೊಂದು ನೈತಿಕ ಪ್ರಜ್ಞೆಯಾಗಿಯೂ ಗ್ರಹಿಸಿ ಪರಿಪಾಲಿಸಿಕೊಂಡು ಬಂದ ಪರಿಯನ್ನು ಸೂಚಿಸುತ್ತದೆ: 'ನನ್ನ ಬದುಕಿನ ಬಹು ದೊಡ್ಡ ಸಂಪಾದನೆ ಎಂದರೆ ಶಾಮಣ್ಣ, ತೇಜಸ್ವಿ ಒಡನಾಟ. ಎಲ್ಲಾ ಬೇಸಿಗೆ ರಜೆಯಲ್ಲೂ ಮಲೆನಾಡಿನ ಅವರ ಮನೆಗಳಿಗೆ ಹೋಗಿದ್ದೇನೆ. ಅವರ ನಂಟರುಗಳ ಮನೆಗೆ ಹೋಗಿದ್ದೇನೆ. ಕೋಣಂದೂರು ಲಿಂಗಪ್ಪನ ಜೊತೆಯೂ ತಿರುಗಿದ್ದೇನೆ. ಬಹಳ ಒಳ್ಳೆ ದಿನಗಳವು. ಶಾಮಣ್ಣ – ತೇಜಸ್ವಿ ಒಡನಾಟದಿಂದ ನಾನು ಬದುಕಿನಲ್ಲಿ ನೈತಿಕತೆ ಉಳಿಸಿಕೊಂಡು ಬಂದೆ. ಯಾವುದೇ ಸಂದರ್ಭದಲ್ಲಿ ಲಂಚ ರುಶುವತ್ತು ನನ್ನ ಬಳಿ ಸುಳಿಯದಂತೆ ನೋಡಿಕೊಂಡೆ. ಹಾಗಾಗಿ ಈಗಲೂ ಬಾಡಿಗೆ ಮನೆಯಲ್ಲಿದ್ದೇನೆ. ನನಗೊಂದು ಮೂರುವರೆ ಸಾವಿರ ಪಿಂಚಣಿ ಬರುತ್ತಿದೆ. ಮಕ್ಕಳು ಓದಿ ಅವರ ಕಾಲ ಮೇಲೆ ನಿಂತುಕೊಂಡಿದ್ದರಿಂದ ನೆಮ್ಮದಿಯಾಗಿದ್ದೇನೆ.'

ಶಾಮಣ್ಣನವರಲ್ಲಿ ಅರಳಿಕೊಂಡ ಲೋಹಿಯಾ ಸಮಾಜವಾದಕ್ಕೆ ಇದಕ್ಕಿಂತ ದೊಡ್ಡ ಅರ್ಹತಾ ಪತ್ರ ಬೇಕೆ? ಶಾಮಣ್ಣನ ಸಮಾಜವಾದ ಒಂದು ವೈಯಕ್ತಿಕ

ನೈತಿಕ ಪ್ರಜ್ಞೆಯಾಗಿ ಮಾತ್ರವಲ್ಲದೆ, ಒಂದು ದಟ್ಟ ಸಾಮಾಜಿಕ ಪ್ರಜ್ಞೆಯಾಗಿಯೂ ಕ್ರಿಯಾಶೀಲವಾದ ಹಲವು ಬಗೆಗಳನ್ನು–ಮೇಲೆ ತಿಳಿಸಿದ ಹಲವು ಆಂದೋಲನಗಳ ವಿವರಗಳ ಮೂಲಕ–ಇಲ್ಲಿ ಹಲವರು ವರ್ಣಿಸಿದ್ದಾರೆ. ಆದರೆ ಅವೆಲ್ಲ ಕೆಲವರಿಗೆ ಇತಿಹಾಸದಂತೆ ಕಾಣಬಹುದು. ಆದರೆ ಶಾಮಣ್ಣ ಆ ಇತಿಹಾಸವನ್ನು ಇಂದಿನ ವರ್ತಮಾನಕ್ಕೂ ವಿಸ್ತರಿಸಿಕೊಂಡಿರುವ ಪರಿಯನ್ನು ಅರ್ಥ ಮಾಡಿಕೊಳ್ಳಬೇಕಾದರೆ, ಅವರ ಕಿರಿಯ ಗೆಳೆಯ ಲೈಬ್ರರಿ ವಿಶ್ವನಾಥ್‌ರ ಈ ಮಾತುಗಳನ್ನು ಗಮನಿಸಬೇಕು:

'ಮೈದೊಳಲು, ಅಗರದಹಳ್ಳಿ, ಭಗವತೀಕೆರೆ ಈ ಗ್ರಾಮೀಣ ಪ್ರದೇಶದಲ್ಲಿ ಅಪರೂಪದ ವ್ಯಕ್ತಿಯೊಂದು ನಮ್ಮ ಹಳ್ಳಿಗರ ಜೊತೆ ಬೆರೆಯುತ್ತ ಓಡಾಡುತ್ತಿರುವುದು ತಾರುಣ್ಯದಲ್ಲಿ ಪ್ರಾಪ್ತಿಯಾದ ನಮ್ಮ ಹೊಸ ಕಣ್ಣುಗಳಿಗೆ ಗೋಚರಿಸಿತು. ಅವರ ಸರಳತೆ, ವಿಶ್ವಾಸ ತುಂಬಿದ ಮಾತುಕತೆಗಳು ನಮ್ಮನ್ನು ಆಕರ್ಷಿಸಿದವು. ಅವರ ಆಕಾರದಿಂದಲೇ ನಮಗೆ ಎಲ್ಲಿಂದಲೊ ಬಂದ ಪ್ರವಾದಿಯಂತೆ ಕಾಣುತ್ತಿದ್ದರು. ಅವರ ನಡವಳಿಕೆಯಲ್ಲಿ ಜಾತಿಪಾತಿಗಳ ವಾಸನೆಯಿರಲಿಲ್ಲ. ದೇವರು ದಿಂಡಿರ ಸಹವಾಸವಿರಲಿಲ್ಲ. ಪ್ರೀತಿ–ಪ್ರೇಮ ಸಹಬಾಳ್ವೆಯ ವಿವೇಕ ಅವರ ಬಾಯಿಂದ ಬರುತ್ತಿದ್ದವು. ಸಹಜವಾಗಿ ನಮಗೆ ಶಾಮಣ್ಣನವರನ್ನು ಕಂಡರೆ ಇವರೇ ನಮ್ಮ ನಿಜವಾದ ನಾಯಕರು ಅನ್ನಿಸಿತು.

..... ಶಾಮಣ್ಣನವರು ಮಲೆನಾಡನ್ನು ಬಿಟ್ಟು ನಮ್ಮ ಪ್ರದೇಶಕ್ಕೆ ಬಂದು ನೆಲೆಸಿದ್ದೇ ನಮ್ಮ ಭಾಗ್ಯ ಎಂದುಕೊಂಡಿದ್ದೇವೆ. ಶ್ರೀದೇವಕ್ಕ ಮತ್ತು ಶಾಮಣ್ಣನವರು ನಮ್ಮಲ್ಲಿ ಇರುವುದೇ ನಮಗೊಂದು ಹೆಮ್ಮೆಯ ಸಂಗತಿ. ನಾವು ಎಲ್ಲೇ ಹೋದರೂ ಶಾಮಣ್ಣನವರ ಜೊತೆಗಿದ್ದೇವೆ ಎಂದು ಹೇಳಿಕೊಳ್ಳುವುದೇ ಸಂಭ್ರಮವೆನಿಸಿದೆ. ತಾಲೂಕಾಫೀಸು, ಡಿ.ಸಿ. ಕಛೇರಿ, ಪೋಲಿಸ್ ಠಾಣೆ ಹೀಗೆ ಸರಕಾರಿ ಕಛೇರಿಗಳಲ್ಲಿ ಶಾಮಣ್ಣ ಕಳುಹಿಸಿದ್ದಾರೆ ಎಂದರೆ ಸರಕಾರಿ ಜನ ನಮ್ಮ ಕಡೆ ತುಸು ಗಮನ ಕೊಡುತ್ತಾರೆ. ಅವರ ಮನೆಗೆ ಹೋಗಿ ಬಂದರೆ ಹೊಸ ಆಲೋಚನೆಯನ್ನು ನಮ್ಮ ತಲೆಗೆ ಬಿಟ್ಟು ಕಳುಹಿಸುತ್ತಾರೆ. ಅವರ ತೋಟ, ಮನೆ, ಜಾತಿ ಮತಗಳನ್ನು ಮೀರಿ, ಇದು ನಮ್ಮ ಅಯ್ಯನವರ ಮನೆ, ತೋಟ ಎಂಬ ಭಾವನೆ ಬರುವಂತೆ ಅವರು ಇಲ್ಲಿ ಬಾಳಿದ್ದಾರೆ. ನಾನೀಗಲೂ ಅವರ ಜೊತೆ ಇದ್ದೇನೆ. ಮೈದೊಳಲಿಗೆ ಬಂದರೆ ನಮ್ಮ ಲೈಬ್ರರಿಗೆ ಬರದೇ ಹೋಗುವುದಿಲ್ಲ.'

ಹೀಗೆ ಕುವೆಂಪು ತಮ್ಮ 'ಮಲೆಗಳಲ್ಲಿ ಮದುಮಗಳು' ಕಾದಂಬರಿಯಲ್ಲಿ ರೂಪಕ ಭಾಷೆಯಲ್ಲಿ ಹೇಳುವ 'ಸ್ಥಳೀಯ ದೇವತೆ'ಗಳನ್ನು ಜಾಗೃತಗೊಳಿಸುವ ಕೆಲಸವನ್ನು ಜೀವನಪೂರ್ತಿ ಮಾಡುತ್ತಾ ಬಂದಿರುವ ಶಾಮಣ್ಣ, ನಮ್ಮ ಲೌಕಿಕ ಪ್ರಭುತ್ವವನ್ನೂ ಪ್ರಭಾವಿಸಿರುವ ರೀತಿ ಬೆರಗುಗೊಳಿಸುವಂತಹದ್ದು. ಆ ಬೆರಗನ್ನು ಗೆಳೆಯ ರಾಜೇಂದ್ರ

ಚೆನ್ನಿ ಚಿತ್ರಿಸಿರುವ ರೀತಿ ಇದು: 'ಪ್ರಭುತ್ವದ ಅಧಿಕಾರದ ಕಣ್ಣಿಗೆ ರಾಚುವಂಥ ಸಂಕೇತಗಳಾದ ಪೊಲೀಸ್/ಗೃಹ ಇಲಾಖೆಯ ವಾಹನಗಳ, ರಾಜಧಾನಿಯ ಪ್ರಧಾನ ರಸ್ತೆಯಲ್ಲಿ ನಿಂತಿದ್ದು, ಗೃಹಮಂತ್ರಿಗಳು ಚಲಿಸುತ್ತಿದ್ದ ವಾಹನದಿಂದಲೇ ಶಾಮಣ್ಣನನ್ನು ನೋಡಿ ಇಡೀ ಟ್ರಾಫಿಕ್ ನಿಲ್ಲಿಸಿ ಶಾಮಣ್ಣನನ್ನು ಮಾತನಾಡಿಸಲು ಬಂದಿದ್ದು ಇದೆಲ್ಲಾ ಶಾಮಣ್ಣನ ವ್ಯಕ್ತಿತ್ವದ ಅವ್ಯಕ್ತ ಘನತೆಯ ರೂಪಕವಾಗಿ ನನಗೆ ಕಂಡಿದೆ. (ಎಂ.ಪಿ.) ಪ್ರಕಾಶರು ಗೃಹಮಂತ್ರಿಗಳೆನ್ನುವುದನ್ನು ಗಮನಿಸದೇ ಇದ್ದಂತ ಶಾಮಣ್ಣನ ನಿಲುವು, ನಿಂತುಕೊಂಡ ರೀತಿ ರೈತ ಸಂಘದ ಮೊದಲ ಹುರುಪಿನ ದಿನಗಳಲ್ಲಿ ತಮ್ಮ ಘನತೆಯಿಂದ ಪ್ರಭುತ್ವವನ್ನು ಮಣಿಸಿದ ರೈತರ ನೆನಪನ್ನು ಹೊತ್ತು ತಂದಿತು.'

ಚೆನ್ನಿಯವರು ಹೇಳುವ ಪ್ರಭುತ್ವವನ್ನು ಮಣಿಸಿದ ಘನತೆಯ ರೈತಸಂಘವನ್ನು ಕಟ್ಟಿದ ಪ್ರಮುಖರಲ್ಲಿ ಶಾಮಣ್ಣ ಕೂಡ ಒಬ್ಬರು. ಅದರ ವಿವರಗಳನ್ನು–ಅದರೆಲ್ಲ ಬಣ್ಣ ಬೆಡಗುಗಳೊಂದಿಗೆ–ಈ ಗ್ರಂಥದಲ್ಲಿ ಅವರ ರೈತ ಹೋರಾಟದ ಒಡನಾಡಿಗಳು ಬರೆದಿದ್ದಾರೆ. ಈ ಚಳುವಳಿಯ ಭಾಗವಾಗಿ ಒಮ್ಮೆ ಜೈಲುಪಾಲಾಗಿದ್ದ ಒಬ್ಬ ಹೋರಾಟಗಾರ್ತಿಯ ಚಿಕ್ಕಮಗುವನ್ನು ಒಂದು ಇಡೀ ರಾತ್ರಿ ನೋಡಿಕೊಳ್ಳುವ ಹೊಣೆ ಹೊತ್ತ ಶಾಮಣ್ಣನ ಚಿತ್ರ ಈ ಚಳುವಳಿಯೊಂದಿಗೆ ಇದ್ದ ಅವರ ಕರುಳ ಸಂಬಂಧಕ್ಕೆ ಹಲವು ಅರ್ಥಗಳಲ್ಲಿ ಒಂದು ರೂಪಕದಂತಿದೆ. ಆಗ ರೈತರ ಪರ ವಕೀಲರಾಗಿದ್ದ ಕಿಮ್ಮನೆ ರತ್ನಾಕರ ಅವರು ನೀಡಿರುವ ಚಿತ್ರವಿದು: 'ಆಗ ಕಡಿದಾಳ್ ಶಾಮಣ್ಣನವರು ಮಗುವನ್ನು ನೋಡಿಕೊಂಡ ರೀತಿ, ರಾತ್ರಿಯೆಲ್ಲಾ ಮಗುವಿನ ಅರಚಾಟ, ಮಗುವಿನ ಶೌಚ ಕಾರ್ಯಗಳ ನಿರ್ವಹಣೆ... ಹಾಗೇ, ಆ ಕೇಸಿನಲ್ಲಿ ಸದರಿ ಆರೋಪಿಯನ್ನು ಜೈಲಿನಿಂದ ಹೊರ ತರಲು ಪಟ್ಟ ಶ್ರಮದ್ದೇ ಒಂದು ಕಥೆ.'

ಆಧುನಿಕ ಕರ್ನಾಟಕದ ಅತ್ಯಂತ ಪ್ರಭಾವಶಾಲಿ ಆಂದೋಲನವೆನಿಸಿದ್ದ ರೈತ ಚಳುವಳಿಗೆ ಸ್ಫೂರ್ತಿಯಾಗಿದ್ದ ಸಮಾಜವಾದಿ ಮೌಲ್ಯಗಳಿಂದ ಸಂಘಟನೆ ವಿಮುಖ ವಾಗುತ್ತಿದೆ ಎನಿಸಿದಾಗ ಎಚ್ಚರಿಕೆ ನೀಡಿದ್ದೇ ತಪ್ಪಾಗಿ, ಅದು ಶಾಮಣ್ಣನವರನ್ನು ಸಂಘಟನೆಯಿಂದ ಹೊರದೂಡಲು ಕಾರಣವಾಗಿ ಅದರ ವಿಚ್ಛಿದ್ರೀಕರಣಕ್ಕೆ ನಾಂದಿಯಾಯಿತು. ರೈತ ಚಳುವಳಿಯ ಪರವಾಗಿ ಜನತೆಯ ಅಭ್ಯರ್ಥಿಯಾಗಿ ಒಮ್ಮೆ ಚುನಾವಣೆಗೆ ನಿಂತಿದ್ದ ನ್ಯಾ. ಎ.ಜೆ. ಸದಾಶಿವ ಅವರು ಈ ಸಂದರ್ಭವನ್ನು ವಿಷಾದದಿಂದ ನೆನಪಿಸಿಕೊಳ್ಳುವುದು ಹೀಗೆ: 'ರಾಜ್ಯದ ಒಂದು ಪ್ರಬುದ್ಧ, ಪ್ರಬಲ ಸಂಘಟನೆ–ಲಕ್ಷಾಂತರ ಜನರಿಗೆ ಆಸರೆಯಾಗಬೇಕಿದ್ದ, ಆಸರೆಯಾಗಿದ್ದ ಸಂಘಟನೆ–ತನ್ನ ನಾಯಕರ ತಪ್ಪು ಹೆಜ್ಜೆಯಿಂದಾಗಿ ಛಿದ್ರವಾಗಿ ಲಕ್ಷಾಂತರ ರೈತರನ್ನು ನಿಸ್ಸಹಾಯಕತೆಗೆ ದೂಡಿತು. ಇದೆಲ್ಲ ನೆನಪಾದಾಗ ಶ್ರೀ ಶಾಮಣ್ಣ ಮೌನಿಯಾಗುತ್ತಾರೆ. ಅವರ ಹಾಸ್ಯ ತುಂಬಿದ ವ್ಯಂಗ್ಯ (ಸಂಘಟನೆಗೆ) ಆತ್ಮಶೋಧಕವಾಗಬೇಕಿತ್ತು. ನೋವು

ತುಂಬಿದ ದನಿ ಎಚ್ಚರಿಕೆಯಾಗಬೇಕಿತ್ತು. ಕಣ್ಣೆದುರು ನಡೆದ ದುರಂತವನ್ನು ನೆನೆಸಿಕೊಳ್ಳುವಾಗ ಮರಗಟ್ಟಿದ ಮನಸ್ಸನ್ನು ನೋಡಲಾಗದು.'

ಶಾಮಣ್ಣ ಈ ಆಘಾತದಿಂದ ಇನ್ನೂ ಪೂರ್ಣ ಚೇತರಿಸಿಕೊಂಡಂತಿಲ್ಲ. ಆದರೂ ಅವರ ವ್ಯಕ್ತಿತ್ವದ ಸಮಗ್ರತೆಗೆ ಕುಂದುಂಟಾಗಿಲ್ಲ. ಶಾಮಣ್ಣನವರ ಹೋರಾಟಗಳ ಓರ್ವ ಒಡನಾಡಿ ದಿ. ಕೆ. ರಾಮದಾಸ್‌ರ ಮಗಳು ಸ್ನೇಹಾ ಈಗಲೂ ಶಾಮಣ್ಣ ನವರನ್ನು ಕಾಣುವುದು ಹೀಗೆ: 'ಶಾಮಣ್ಣ ಇರುವುದೇ ಹೀಗೆ: ಓಶಿರ ಹರೆಯದಲ್ಲೂ, ಚಿಕ್ಕವರೂ ನಾಚಿಕೊಳ್ಳುವಷ್ಟು ಬತ್ತದ ಉತ್ಸಾಹ. ತಮ್ಮದೇ ಲೋಕದಲ್ಲಿ ವಿಹರಿಸುತ್ತಿರುವಂತೆ ಕಂಡರೂ, ಕಣ್ಣ ವ್ಯಾಪ್ತಿಯಲ್ಲಿ ವಾಸ್ತವದೆಡೆಗಿನ ಚಿಕಿತ್ಸಕ ನೋಟ ಸದಾ ಜಾಗರೂಕ. 'ಹಿಂಗೆಲ್ಲ ಆಗ್ತದಲ್ಲ, ಎಂತದ್ರೀ ಮಾರಾಯ್ರೆ' ಎಂದು ತಳಮಳಿಸುತ್ತಿದ್ದಾರೆಂದರೆ ಶಾಮಣ್ಣ ಏನಕ್ಕೋ ಬೇಸರಗೊಂಡಿದ್ದಾರೆ ಎಂದರ್ಥ. ಇದ್ದ ತಾವಿನಿಂದ ಎದ್ದು ಹೊರಟರೆಂದರೆ, ತಾನಿರುವುದಕ್ಕೆ ಇದು ಲಾಯಕ್ಕಾದ ಜಾಗ ಅಲ್ಲ ಎಂದು ಭಾವಿಸಿದ್ದಾರೆ ಎಂದುಕೊಳ್ಳಬೇಕು. ನುಡಿಯಲ್ಲಿ, ನಡೆಯಲ್ಲಿ ಯಾವುದೇ ಕಾರಣಕ್ಕೂ, ಯಾವತ್ತೂ ಎಚ್ಚರ ತಪ್ಪಿದವರಲ್ಲ.'

'ಸಣ್ಣ ಜಲಮೂಲವೊಂದು ಉಕ್ಕುತ್ತ, ಹರಿಯುತ್ತ, ಮುಂದೆ ಮುಂದೆ ಸಾಗುತ್ತ, ಸಣ್ಣ ಸಣ್ಣ ಹಳ್ಳಗಳನ್ನು ತನ್ನ ತೆಕ್ಕೆಗೆ ತೆಗೆದುಕೊಳ್ಳುತ್ತ ತೊರೆಯಾಗಿ, ನದಿಯಾಗಿ ರೂಪಾಂತರ ಹೊಂದುವ ರೂಪಕವೇ ಈ ಶಾಮಣ್ಣ' ಎಂದೆನ್ನುವ ಲೇಖಕ ಜಿ.ಪಿ. ಬಸವರಾಜು ಅವರ ಮಾತಿನಂತೆ ಸ್ನೇಹಳಂಥಹ ಹಲವು ಜನ ಯುವ ತಲೆಮಾರಿನವರನ್ನು–ಇಂತಹ ಎಷ್ಟೊಂದು ಜನ ಈ ಗೌರವ ಗ್ರಂಥಕ್ಕಾಗಿ ಬರೆದಿದ್ದಾರೆ!– ತಮ್ಮ ವ್ಯಕ್ತಿತ್ವದ ಸಮಗ್ರತೆಯಿಂದ ಈಗಲೂ 'ಸ್ಪರ್ಶಿ'ಸುತ್ತಿರುವ ಈ ಶಾಮಣ್ಣ ಒಮ್ಮೆಗೇ ನೋಡಿದರೆ ಹೇಗೆ ಕಾಣುವರು? ಲೇಖಕಿ ವೈದೇಹಿಯವರ ಕಣ್ಣಿಗೆ ಕಂಡ ಈ ಶಾಮಣ್ಣನೇ ನಮ್ಮೆಲ್ಲರಿಗೂ ಪ್ರಿಯವಾಗಿರುವ ಶಾಮಣ್ಣ: 'ಶಾಮಣ್ಣ ತಾನೇ ಪರಿಚಯ ಹೇಳಿಕೊಳ್ಳುತ್ತ ಒಳಗೆ ಬಂದರು. ಅವರು ಪರಿಚಯ ಹೇಳುತ್ತಿದ್ದಂತೆ, ಅಯ್ಯ, ಈತ ನಮಗೆಲ್ಲ ಗೊತ್ತು ಎಂಬ ಭಾವ ಬಂತು. ಮತ್ತು ಅಂದಿನಿಂದ ಇಂದಿಗೂ ಅವರು ಇರುವುದು ಹೀಗೆಯೆ. ಈತ ನಮಗೆಲ್ಲ ಗೊತ್ತು ಎಂಬಂತೆಯೇ. ನಡುವೆ ತಿಂಗಳುಗಳ ಕಾಲ ನೋಡದೆ ಮಾತಾಡದೆ ಇದ್ದರೂ. ಇದು ಒಂಚೂರೂ ಅತ್ತಿತ್ತಾಗಲಿಲ್ಲ. ಅಂಥವರು ಶಾಮಣ್ಣ. ಒಮ್ಮೆ ನೋಡಿದೆವೆಂದರೆ, ಮಾತಾಡಿದೆವೆಂದರೆ ಎದುರಿಗಿರುವವರ ಮನಸ್ಸಿನೊಳಗೆ ಇಳಿದು ಬಿಡುವ ತಿಳಿಗೊಳದಂಥ ವ್ಯಕ್ತಿ.' ವೈದೇಹಿಯವರು ಅವರ ವರ್ಣನೆಯನ್ನು ಅಲ್ಲಿಗೇ ಮುಗಿಸದೆ ಈ ಮಾತುಗಳಲ್ಲಿ ಮುಂದುವರೆಯುತ್ತಾರೆ ಅಥವಾ ಮಾತು ಮುಗಿಸುತ್ತಾರೆ: 'ಇವರು ಸಾಮಾನ್ಯವಾಗಿ ತನ್ನ ಸಂತೋಷವನ್ನು ಹಂಚಿಕೊಳ್ಳುವ ಹೊತ್ತಿಗೆ ಇನ್ನೊಬ್ಬರಿಗೆ ಕರೆಕರೆಯಾದೀತು,

ರಗಳೆಯಾದೀತು ಎಂದೆಲ್ಲ ಯೋಚಿಸುವವರಲ್ಲ. ಆ ಯೋಚನೆಗಳನ್ನೆಲ್ಲ ಶ್ರೀದೇವಿಯೇ ಮಾಡಬೇಕು!'

ಇದೀಗ ಶಾಮಣ್ಣನ ವ್ಯಕ್ತಿತ್ವದ ಪೂರ್ಣತೆಯ ಮಾತು! ಅಥವಾ ತಿಳಿಗೊಳದಂತಹ ವ್ಯಕ್ತಿ ರೂಪುಗೊಂಡದ್ದು ಬರೀ ಸಾರ್ವಜನಿಕ ಜೀವನದ ಒಡನಾಟದಲ್ಲಲ್ಲ ಎಂಬ ಸತ್ಯ ಹೊರಬೀಳುವ ಸಂದರ್ಭ! ಶಾಮಣ್ಣನವರನ್ನು ಅವರ ಕುಟುಂಬದ ಪರಿಸರದಲ್ಲಿ ಕಂಡಿರುವ ಎಲ್ಲರೂ–ಇಲ್ಲಿನ ಹಲವು ಲೇಖಕರೂ–ಪ್ರಸ್ತಾಪಿಸುವ ಅವರ ಪತ್ನಿ 'ಶ್ರೀದೇವಕ್ಕ'ನ ಸಂಗತಿ ಇದು. ತಮ್ಮ ಲೇಖನವನ್ನು ಶಾಮಣ್ಣನ ಬಗ್ಗೆ ಒಂದು ದೂರು ದಾಖಲಿಸುತ್ತಾ ಮುಗಿಸುವ ಮುನ್ನ ಅವರ ಗೆಳೆಯ ಎಚ್.ಎಲ್. ಕೇಶವಮೂರ್ತಿಯವರು ಅದೇ ಧಾಟಿಯಲ್ಲಿ ಈ ಮಾತುಗಳನ್ನೂ ಬರೆಯುವರು: 'ಕೊನೆಯಲ್ಲಿ ಇದನ್ನು ಹೇಳಲೇಬೇಕು. ಹಲವು ಕ್ಷೇತ್ರಗಳಲ್ಲಿ ಅಭಿರುಚಿ ಇರುವ ಶಾಮಣ್ಣ ರೈತರಾಗಿದ್ದೂ, ರೈತರಾಗಿರಲಿಲ್ಲ! ವ್ಯವಸಾಯದ ಸಂಪೂರ್ಣ ಜವಾಬ್ದಾರಿ ಶ್ರೀದೇವಿ ಅವರದ್ದು. ಶಾಮಣ್ಣನಿಗೆ ಶ್ರೀದೇವಿ ಬಾಳಸಂಗಾತಿಯಾಗಿರದಿದ್ದರೆ, ಈಗಿನ ಶಾಮಣ್ಣ ಆಗಿರುತ್ತಿರಲಿಲ್ಲ.' ನಾನು ಮುಂದೆ ಪ್ರಸ್ತಾಪ ಮಾಡಲಿರುವ ಕೇಶವಮೂರ್ತಿಯವರ ದೂರಿನಲ್ಲಿ ಸತ್ಯ ಇರದೇ ಇರಬಹುದು; ಆದರೆ ಆ ದೂರಿನ ಮುಂದುವರಿಕೆಯಂತೆ ಕಾಣುವ ಮೇಲಿನ ಮಾತುಗಳು ಮಾತ್ರ ಸತ್ಯಸ್ಯ ಸತ್ಯ. ಅಂದರೆ ಇದರರ್ಥ ಇಷ್ಟೆ: ಶಾಮಣ್ಣ ಎಷ್ಟು ಸಾರ್ವಜನಿಕ ವ್ಯಕ್ತಿಯೋ ಅಷ್ಟು ಕುಟುಂಬದ ವ್ಯಕ್ತಿಯೂ ಹೌದು. ಬಹಳಷ್ಟು ಸಮಾಜವಾದಿಗಳ ಜೀವನದಲ್ಲಿ ಕಾಣದ ಗುಣವಿದು. ಇದನ್ನು ಮತ್ತೋರ್ವ ಚಳುವಳಿಕಾರ, 'ಚರಕ'ದ ಪ್ರಸನ್ನ ಇನ್ನಷ್ಟು ವಿವರಿಸುವರು: 'ಶಾಮಣ್ಣ ಭಾಗ್ಯಶಾಲಿ. ಒಳ್ಳೆಯ ಮಡದಿ, ಒಳ್ಳೆಯ ಮಕ್ಕಳನ್ನು ಪಡೆದವರು ಅವರು. ಮಡದಿ ಮಕ್ಕಳು ಅವರಿಗೆ ಒಳ್ಳೆಯವರಾಗಿ ಪರಿಣಮಿಸುವುದು ಕೇವಲ ಭಾಗ್ಯದಿಂದ ಮಾತ್ರವಲ್ಲ. ಅದರಲ್ಲಿ ಗಂಡನ ಪ್ರಯತ್ನವೂ ಇದೆ ಎಂದು ನಂಬುವವನು ನಾನು'. ಈ ಪುಸ್ತಕದಲ್ಲಿರುವ 'ಮನೆಯಂಗಳದಿಂದ...' ವಿಭಾಗದ ಬರಹಗಳು ಶಾಮಣ್ಣನ ವ್ಯಕ್ತಿತ್ವದ ಈ ಭಾಗದ –ಕುಟುಂಬಸ್ಥಿಕೆಯ–ಮೇಲೆ ಬೆಳಕು ಚೆಲ್ಲುತ್ತವೆ. ಈ ಸಂದರ್ಭದಲ್ಲಿ ಉಲ್ಲೇಖಿಸಲೇಬೇಕಾದ ಒಂದು ಮಾತೆಂದರೆ, ಶಾಮಣ್ಣನವರನ್ನು, ಅವರ ಭಾವಮೈದುನ ಡಾ. ಎಚ್.ಎಸ್. ಈಶ್ವರ ಅವರ ಪ್ರಕಾರ, ಹೆಣ್ಣು ಕೊಟ್ಟ ಅವರ ಮಾವ 'ಶ್ಯಾಮದೇವರು' ಎಂದು ಕರೆಯುತ್ತಿದ್ದರೆಂಬುದು! ಶಾಮಣ್ಣನವರಿಗೆ ಇದಕ್ಕಿಂತ ದೊಡ್ಡ ಬಿರುದು ಇನ್ನೆಲ್ಲಿ ಸಿಕ್ಕೀತು?

ಈ ಬಿರುದಿನೊಂದಿಗೇ ಅವರ ಆಪ್ತ ಬಂಧುವೂ, ಬಾಲ್ಯದ ಗೆಳೆಯರೂ ಆದ ಕೆ.ಟಿ. ಮೋಹನ್ ದಾಖಲಿಸುವ ಈ ಮಾತುಗಳನ್ನೂ ಗಮನಿಸಬೇಕು : 'ಕಾಯಾ–ವಾಚಾ–ಮನಸಾ ಅವನೆಷ್ಟು ಸರಳ ವ್ಯಕ್ತಿ ಎಂದರೆ, ಮೇಲು ನೋಟಕ್ಕೆ ಹಲವರಿಗೆ

ಅವನೊಬ್ಬ ಜವಾಬ್ದಾರಿ ಇಲ್ಲದ ವ್ಯಕ್ತಿಯಾಗಿ ಕಂಡಿರಲೂ ಸಾಕು. ಆದರೆ ಅವನದ್ದು ಬೇಜವಾಬ್ದಾರಿಯ ವರ್ತನೆಯಲ್ಲ ಎಂಬುದು ಗೊತ್ತಿದ್ದವರಿಗೆ ಮಾತ್ರ ಗೊತ್ತು. ಅವನು ತನ್ನ ಬದುಕಿನ ಪ್ರತಿಕ್ಷಣಗಳನ್ನು, ಸಂಗತಿಗಳನ್ನು ತನ್ನದೇ ಆದ ರೀತಿಯಲ್ಲಿ ಅನುಭವಿಸುತ್ತಾ ಬದುಕಿದವನು. ಅವನು ತನ್ನ ಜೀವನವನ್ನು, ಯಾರಿಗೂ ಯಾವ ರೀತಿಯಲ್ಲೂ ತೊಂದರೆ ಕೊಡದೇ, ಸದಾ ಒಳ್ಳೆಯದನ್ನೇ ಚಿಂತಿಸುತ್ತಾ, ಬದುಕು ರೂಪಿಸಿಕೊಂಡ ಒಬ್ಬ ಸಜ್ಜನ ವ್ಯಕ್ತಿ.'

ಈ ಎಲ್ಲ ಹಿನ್ನೆಲೆಯಲ್ಲಿ ಶಾಮಣ್ಣನ ಬಗೆಗಿನ ಅವರ ಆಪ್ತ ಗೆಳೆಯರ ದೂರನ್ನು ಗಮನಿಸೋಣ. ಮುಖ್ಯವಾದ ದೂರೆಂದರೆ, ಶಾಮಣ್ಣ ದಾಕ್ಷಿಣ್ಯದ ಮನುಷ್ಯ, ಹೇಳಬೇಕಾದ್ದನ್ನು ನೇರವಾಗಿ ಹೇಳುವುದಿಲ್ಲ, 'ತುಂಬ ಒಳ್ಳೆಯತನ ತುಂಬ ಕೆಟ್ಟದು' ಇತ್ಯಾದಿ. ಶಾಮಣ್ಣನ ಸಮಾಜವಾದಿ ಚಳುವಳಿಯ ದಿನಗಳ ಗೆಳೆಯರೇ ಆದ ಬಿ.ಎನ್. ಶ್ರೀರಾಮ್ ಮತ್ತು ಎಚ್.ಎಲ್ ಕೇಶವಮೂರ್ತಿಯವರು, ಅವರ ಈ ಗುಣಕ್ಕೆ ಉದಾಹರಣೆಯೆಂಬಂತೆ ಉಲ್ಲೇಖಿಸುವ ಘಟನೆ ಎಂದರೆ, ಕಳೆದ ವರ್ಷದ ದಸರಾ ಉದ್ಘಾಟನೆಗೆ ತಮ್ಮ ಗೆಳೆಯ ಸಿದ್ಧರಾಮಯ್ಯನವರಿಂದ ಆಹ್ವಾನ ಪಡೆದ ಶಾಮಣ್ಣ ತಾವು ಹಿಂದೊಮ್ಮೆ ದಸರಾ ಅಚರಣೆಯನ್ನು ರಾಜಪ್ರಭುತ್ವದ ಸಂಕೇತವೆಂದು ವಿರೋಧಿಸಿ ಪ್ರತಿಭಟನೆ ನಡೆಸಿದುದನ್ನು ಮರೆತು, ಈ ಉದ್ಘಾಟನೆಗೆ ಬರುವುದಿಲ್ಲ ಎಂದು ಹೇಳಲು ಆ ತಾತ್ವಿಕ ಕಾರಣ ನೀಡದೆ, ರೈತರ ಆತ್ಮಹತ್ಯೆ, ಬೆಳೆಗೆ ಬೆಲೆ ಇಲ್ಲ ಇತ್ಯಾದಿ ಕಾರಣಗಳನ್ನು ನೀಡುತ್ತಾ ತಾವು ವಿಧಾನಸೌಧದ ಕಸ ಬೇಕಾದರೆ ಹೊಡೆಯುವೆ ಎಂಬಿತ್ಯಾದಿ ಅಸಂಬದ್ಧ ಮಾತುಗಳನ್ನಾಡಿದರು ಎಂಬುದು.

ಈ ಗೌರವ ಗ್ರಂಥದ ಸಂಪಾದಕನಾಗಿ ನಾನು ಶಾಮಣ್ಣ ಅವರ ಪರ ವಹಿಸಿ ಮಾತನಾಡುವ ಅವಶ್ಯಕತೆ ಏನಿಲ್ಲ. ಆದರೂ ದೂರುದಾರರಾದ ಈ ಹಿರಿಯ ಗೆಳೆಯರಿಗೆ ಒಂದು ಮಾತು ಹೇಳಬಹುದು: ಗೋಪಾಲಗೌಡರ ಕಾಲದಲ್ಲಿ ದಸರಾ ಭಾಗವಾಗಿ ನಡೆಯುತ್ತಿದ್ದುದು ಮಹಾರಾಜರ ಜಂಬೂ ಸವಾರಿ. ಅದು 'ಓರೋರ್ವರ ಗರ್ವದ ಕಾಲ'ದ ಪ್ರತಿಬಿಂಬದಂತಿದ್ದ ರಾಜಪ್ರಭುತ್ವದ ಸಂಕೇತ. ಆದರೀಗ ಮಹಾರಾಜರ ಜಂಬೂಸವಾರಿ ಇಲ್ಲ. ದಸರಾ ಈಗ ಒಂದು ಪರಂಪರೆಯ ಸಾಂಸ್ಕೃತಿಕ ನೆನಪಿನ ಆಚರಣೆಯಾಗಿ ತನ್ನ ಸ್ವರೂಪವನ್ನು ಬದಲಿಸಿಕೊಂಡಿದೆ. ನಾವು ಹಳೆಯ ಶೈಲಿಯ ಆಭರಣಗಳನ್ನು ಕರಗಿಸಿ ಹೊಸ ಕಾಲದ ಆಭರಣಗಳನ್ನು ಮಾಡಿಕೊಳ್ಳುವಂತೆ ನಮ್ಮ ಪರಂಪರೆಯನ್ನು ಆಧುನಿಕ ರೂಪಗಳಿಗೆ ಅಳವಡಿಸಿಕೊಳ್ಳಬೇಕು ಎಂಬ ತಮ್ಮ ವೈಚಾರಿಕ ಗುರು ಕುವೆಂಪು ಅವರ ಮಾತನ್ನು ಶಾಮಣ್ಣ ಒಪ್ಪಿ ಈಗಿನ ದಸರಾ ಆಚರಣೆಗಳನ್ನು ಮಾನ್ಯಮಾಡಿರಲೂಬಹುದು. ಇದನ್ನು ಖಚಿತಪಡಿಸಿಕೊಳ್ಳದೆ ಈ ಗೆಳೆಯರು ಹೀಗೆ ದೂರುವುದು ಸರಿಯಲ್ಲವೆಂದೇ

ನನ್ನ ಅಭಿಪ್ರಾಯ. ಶಾಮಣ್ಣ ಕುವೆಂಪು ಅವರ ವಿಚಾರಶೀಲತೆಯನ್ನು ಅನುಸರಿಸಿದವರು ಎಂಬುದನ್ನೂ ನಾವಿಲ್ಲಿ ಗಮನಿಸಬೇಕಲ್ಲವೆ?

ಹೀಗೇ ಶಾಮಣ್ಣನವರ ಬಗ್ಗೆ ಸಣ್ಣಪುಟ್ಟ ಟೀಕೆಗಳು ಇವೆ. ಶಾಮಣ್ಣ ಮತ್ತು ಅವರ ಸೋದರ ದಯಾನಂದ ಅವರಿಗೆ ಸಂಬಂಧಿಸಿದಂತೆ ಚಾಲ್ತಿಯಲ್ಲಿದ್ದ 'ಆಕ್ಷೇಪಾರ್ಹ ಘಟನೆ'ಯೊಂದರ ಬಗ್ಗೆ ಸ್ವತಃ ದಯಾನಂದರೇ ಇಲ್ಲಿ ಒಂದು ಸ್ಪಷ್ಟ ಚಿತ್ರ ನೀಡಿ, ವಿವಾದದ ಸುತ್ತಲಿದ್ದ ಮಂಜನ್ನು ಕರಗಿಸಿದ್ದಾರೆ. ಸಾರ್ವಜನಿಕ ಜೀವನವನ್ನು ಇಷ್ಟು ದೀರ್ಘ ಕಾಲ ಮತ್ತು ಇಷ್ಟು ವಿಶಾಲ ತೆಕ್ಕೆಯಲ್ಲಿ ಅಪ್ಪಿಕೊಂಡ ಶಾಮಣ್ಣನ ಬಗ್ಗೆ ದೂರು-ಟೀಕೆ-ಆಕ್ಷೇಪಗಳು ಇರಲೂ ಸಾಕು. ಇದನ್ನೆಲ್ಲ ಸಂಪಾದಕರಲ್ಲೊಬ್ಬರಾದ ಗೆಳೆಯ ಎಂ.ಬಿ. ನಟರಾಜ್ ನೋಡುವುದು ಹೀಗೆ: 'ಅವರ ಸ್ವಭಾವದ ವೈಪರೀತ್ಯವನ್ನು ಅನೇಕರು 'ಏ... ಅವರದು ರಾಜಿಯಾಗುವ ಮನೋಭಾವ' ಎಂದು ವಿಶ್ಲೇಷಿಸುತ್ತಾರೆ. ಒಂದು ದಿನ, ನಾವು ಗೆಳೆಯರೆಲ್ಲ ಮಾತನಾಡುತ್ತಿರುವಾಗ, ಆರ್.ಎಸ್.ಎಸ್.ನವರ ಉಪಟಳದ ಬಗ್ಗೆ 'ಕೆರಳಿದ' ಶಾಮಣ್ಣ "ರೀ... ನಮ್ಮ ಮೇಲೆ ಕೈಹಾಕಿದ ಆ ಕಿಡಿಗೇಡಿಗಳ ವಿರುದ್ಧ ನಾವು ಯಾವಾಗ ರೀ ಸೇಡು ತೀರಿಸಿಕೊಳ್ಳೋದು...?" ಎನ್ನುತ್ತ ಬೇಸರದಿಂದ, ಅಸಹಾಯಕತೆಯಿಂದ ಹೊರಟರು. ಮತ್ತೆ ಎಷ್ಟೋ ದಿನ ಅವರು ಭೇಟಿಯಾಗಲಿಲ್ಲ.

ಶಾಮಣ್ಣನವರಿಗೆ ಗುರಿ ಯಾವುದೋ...? ಅವರಿಗೆ ಅವರದೇ ಆದ ದಾರಿ, ಅವರದೇ ಆದ ನಡಿಗೆ!'

ಹೌದು, ಬದುಕಿದ್ದಾಗಲೇ ಒಂದು ನಾಟಕದ ನಾಯಕ ಪಾತ್ರವಾಗಿ (ಇದನ್ನು ರಚಿಸಿರುವವರು ನಮ್ಮ ಇನ್ನೋರ್ವ ಸಂಪಾದಕರಾದ ಬಿ. ಚಂದ್ರೇಗೌಡರು) ಅಚ್ಚರಿ ಹುಟ್ಟಿಸುವ ಬದುಕು ನಡೆಸುತ್ತಿರುವ ಶಾಮಣ್ಣನಂತಹ ಹಿರಿಯ ಜೀವಗಳಿಗೆ ಅವರದೇ ಗುರಿ. ಅವರದ್ದೇ ಆದ ದಾರಿ, ಅವರದೇ ಆದ ನಡಿಗೆ ಇರುತ್ತವೆ. ಹಾಗಾಗಿ ಅವನ್ನು ಆ ನಾಟಕವನ್ನು ಸಾವಿರಾರು ಜನ ನೋಡಿರುವಂತೆ ಅಚ್ಚರಿಯಿಂದ ನೋಡುವ ಮುಕ್ತ ಮನಸ್ಸುಗಳಷ್ಟೇ ನಮಗೆ ಸದ್ಯಕ್ಕೆ ಬೇಕಾಗಿರುವುದು. ಆಗ ಇಂತಹ ಟೀಕೆಗಳು ಸ್ವತಃ ನಮ್ಮ ಮನಸ್ಸಿನ ಗಂಟುಗಳು ಎಂಬ ಅರಿವಾಗುತ್ತದೆ. ಈ ಗ್ರಂಥ ಇಂತಹ ಮುಕ್ತ ಮನಸ್ಸುಗಳನ್ನು ಹೆಚ್ಚೆಚ್ಚು ಸಂಖ್ಯೆಯಲ್ಲಿ ಸೃಷ್ಟಿಸುವಂತಾಗಲಿ ಎಂದೇ ಸಂಪಾದಕರ ಆಶಯ ಮತ್ತು ಹಾರೈಕೆ.

ಕೊನೆಯಲ್ಲಿ ಎಚ್.ಎಲ್ ಕೇಶವಮೂರ್ತಿಯವರು ಉಲ್ಲೇಖಿಸಿರುವ, ಶಾಮಣ್ಣ ಮತ್ತವರ ಗೆಳೆಯರ ಬಗ್ಗೆ ಅವರ ಗುರುಗಳಾದ ಡಾ. ಪ್ರಭುಶಂಕರ ಅವರು ಆಡಿದ ಮಾತುಗಳನ್ನು ಉಲ್ಲೇಖಿಸಿಯೇ ನನ್ನ ಈ ಮಾತುಗಳನ್ನು ಮುಗಿಸಿ ಈ ಮುನ್ನುಡಿ ಮಾತುಗಳ ಕ್ಷಿತಿಜವನ್ನು ಕಾಣಿಸಬೇಕಿದೆ. ಆ ಮಾತುಗಳೆಂದರೆ, 'ರಾಮದಾಸ್, ತೇಜಸ್ವಿ, ಸುಂದರೇಶ್, ಶಾಮಣ್ಣ ಇವರೆಲ್ಲ ನನ್ನ ವಿದ್ಯಾರ್ಥಿಗಳು ಅಂತ ಹೇಳ್ತಾರೆ.

ಆದರೆ ಅವರನ್ನು ನಾನು ತರಗತಿಯಲ್ಲಿ ನೋಡಿದ ನೆನಪೇ ಇಲ್ಲ. ಹೀಗೆ ಬಾರದಿದ್ದುದರಿಂದಲೇ ಅವರು ಏನನ್ನಾದರೂ ಸಾಧಿಸಲು ಸಾಧ್ಯವಾಯಿತು'. ಆ ಮಾತುಗಳನ್ನು ಅವರು ಲಘುಧಾಟಿಯಲ್ಲಿ ಹೇಳಿರುವರಾದರೂ ಅದರಲ್ಲಿ ಸತ್ಯ ಇತ್ತು. ಇವರೆಲ್ಲ ಪಾರಂಪರಿಕ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳಲ್ಲ. ಜನತಾ ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳು. ಅಲ್ಲಿ ಅವರು ಕಲಿತದ್ದೇ ಹೆಚ್ಚು.'

ಹಾಗಾಗಿಯೇ ಶಾಮಣ್ಣ ಎಂದರೆ ಒಬ್ಬ ವ್ಯಕ್ತಿಯಲ್ಲ. ಒಂದು ಮೌಲ್ಯ; ಒಂದು ಬದುಕಿನ ಮಾದರಿ; ಒಂದು ಕಾಲ; ಮುಗಿಯದ ಒಂದು ಇತಿಹಾಸ.

***

ಶಾಮಣ್ಣನವರಿಗೆ ಎಪ್ಪತ್ತೈದು ತುಂಬುತ್ತಿದ್ದ ಹೊತ್ತಿನಲ್ಲಿ ಈ ಗ್ರಂಥದ ಹೊಳಹು ಹುಟ್ಟಿತು. ಆ ಹೊಳಹು ಸಾಕಾರಗೊಳ್ಳುವ ಈ ಹೊತ್ತಿಗೆ ಶಾಮಣ್ಣ ಎಪ್ಪತ್ತೈದನ್ನು ದಾಟಿ ಹೋಗಿದ್ದಾರೆ. ಅದು–ಈ ಮುನ್ನ ಪ್ರಸ್ತಾಪಿಸಿದ– ಈ ಕಾಲದ ವೇಗ. ಆದರೆ ಶಾಮಣ್ಣ ಇದನ್ನೆಲ್ಲ ಲೆಕ್ಕಿಸದೆ, ಎಲ್ಲ ಕಾಲಗಳನ್ನೂ ಧಿಕ್ಕರಿಸಿದವರಂತೆ, ನಮ್ಮ ಮಧ್ಯೆ ತಾವೇ ತಾವಾಗಿ ಇದ್ದಾರೆ. ಆ ತಾವೇ ತಾವಾಗಿ ಇರುವುದರಲ್ಲಿ ತಮ್ಮಂತೆ ತಾವು ಇರುವುದೂ ಸೇರಿಕೊಂಡಿದೆ. ಆದರೆ ಅದರಲ್ಲಿ ಅವರು ಒಬ್ಬಂಟಿಗರಲ್ಲ ಎಂದು ಸೂಚಿಸುವುದಕ್ಕಾಗಿಯೂ ಇಂತಹ ಗ್ರಂಥವೊಂದು ಅಗತ್ಯವಿದೆಯೆಂದು ಭಾವಿಸಿ ಈ ಗ್ರಂಥವನ್ನು ಹೊರತರಲಾಗುತ್ತಿದೆ. ಈ ಗ್ರಂಥ ಶಾಮಣ್ಣನವರ ವ್ಯಕ್ತಿತ್ವದ ಒಂದು ಸಮಗ್ರ ಚಿತ್ರ ನೀಡುವಂತಹ ಎಲ್ಲ ಪ್ರಯತ್ನಗಳನ್ನೂ ಸಂಪಾದಕ ಮಂಡಳಿ ಮಾಡಿದೆ. ಹಾಗಾಗಿಯೇ ಈ ಗ್ರಂಥ ಹಲವು ವಿಭಾಗಗಳನ್ನು ಹೊಂದಿದೆ. ಈಗ ಬದುಕಿರದ ಶಾಮಣ್ಣನ ಒಡನಾಡಿಗಳ ಬರಹಗಳನ್ನು ಹುಡುಕಿ ಇಲ್ಲಿ ಸೇರಿಸಿದ್ದೇವೆ. ಹಾಗೆ ಬರಹ ಸಿಗದವರ ಮಾತುಗಳನ್ನು ಶಾಮಣ್ಣನನ್ನು ಕುರಿತ ಒಂದು ಸಾಕ್ಷ್ಯಚಿತ್ರದಿಂದ ಹೆಕ್ಕಿ ಲಿಪೀಕರಿಸಿ ಅಳವಡಿಸಿದ್ದೇವೆ.

ಈ ಜವಾಬ್ದಾರಿಯನ್ನು ನಾವು ನಿರ್ವಹಿಸುವಲ್ಲಿ ಹಲವರು ಹಲವು ರೀತಿಯಲ್ಲಿ ಸಹಕರಿಸಿದ್ದಾರೆ. ಮೊದಲಾಗಿ ಕಡಿದಾಳು ಶಾಮಣ್ಣ ಗೌರವ ಗ್ರಂಥ ಸಮಿತಿಯಲ್ಲಿರಲು ಒಪ್ಪಿದ ಎಲ್ಲ ಮಹನೀಯರುಗಳಿಗೂ ನಮ್ಮ ಕೃತಜ್ಞತೆಗಳು. ನಂತರ, ನಮ್ಮ ಕೋರಿಕೆಗೆ ಓಗೊಟ್ಟು ಲೇಖನಗಳನ್ನು ಬರೆದು ಕಳಿಸಿದ ಎಲ್ಲ ಲೇಖಕರಿಗೂ, ಸಂದರ್ಶಕರಿಗೂ, ಅನುವಾದಕರಿಗೂ ಮತ್ತು ಲಿಪಿಕಾರರಿಗೂ ನಮ್ಮ ಧನ್ಯವಾದಗಳು. ಪೂರ್ಣಚಂದ್ರ ತೇಜಸ್ವಿಯವರ 'ಅಣ್ಣನ ನೆನಪುಗಳು' ಪುಸ್ತಕದಿಂದ ಕೆಲವು ಭಾಗಗಳನ್ನು ಬಳಸಿಕೊಳ್ಳಲು ಅನುಮತಿ ನೀಡಿದ ಶ್ರೀಮತಿ ರಾಜೇಶ್ವರಿ ತೇಜಸ್ವಿಯವರಿಗೂ ಮತ್ತು ಪಿ. ಲಂಕೇಶ್ ಅವರ 'ಟೀಕೆ ಟಿಪ್ಪಣಿಗಳು' ಸಂಪುಟವೊಂದರಿಂದ 'ಗಡ್ಡದ ಶಾಮಣ್ಣ' ಲೇಖನವನ್ನು ಬಳಸಿಕೊಳ್ಳಲು ಅನುಮತಿ ನೀಡಿದ ಶ್ರೀಮತಿ ಗೌರಿ ಲಂಕೇಶ್ ಅವರಿಗೂ ಸಹ. ಹಾಗೇ, ಸಂಪಾದಕೀಯ ಕೆಲಸಗಳಲ್ಲಿ ಎಲ್ಲ ರೀತಿಯಲ್ಲಿ

ಸಹಕರಿಸಿದ ಕಡಿದಾಳು ಕುಟುಂಬದ ಎಲ್ಲ ಸದಸ್ಯರಿಗೆ, ವಿಶೇಷವಾಗಿ ಗೌರವ ಗ್ರಂಥ ಸಮಿತಿಯಲ್ಲಿದ್ದು ನಮ್ಮೊಡನೆ ಸಹಕರಿಸಿದ ಕೆ.ಆರ್. ದಯಾನಂದ ಅವರಿಗೆ ವಂದನೆಗಳು ಸಲ್ಲುತ್ತವೆ. ಮುಖ್ಯವಾಗಿ, ಗೌರವ ಗ್ರಂಥ ಸಮಿತಿಯೇ ಈ ಪುಸ್ತಕದ ಪ್ರಕಟಣೆಯನ್ನು ಮಾಡುವ ಸಿದ್ಧತೆಯಲ್ಲಿದ್ದಾಗ ಶಾಮಣ್ಣನವರ ಮೇಲಿನ ಅಭಿಮಾನದಿಂದ ಪ್ರಕಟಣೆಯ ಜವಾಬ್ದಾರಿ ಹೊರಲು ಮುಂದೆ ಬಂದ ಶಿವಮೊಗ್ಗದ ಅಹರ್ನಿಶಿ ಪ್ರಕಾಶನದ ಅಕ್ಷತಾ ಹುಂಚದಕಟ್ಟೆಯವರಿಗೆ ನಾವು ಅಭಾರಿಯಾಗಿದ್ದೇವೆ. ಅಕ್ಷತಾ ಪ್ರಕಾಶಕಿಯಾಗಿ ತಾಂತ್ರಿಕವಾಗಿ, ಕೇವಲ ಮುದ್ರಣದ ಹೊಣೆಯನ್ನಷ್ಟೇ ಹೊರದೆ ಪುಸ್ತಕದ ಎಲ್ಲ ಲೇಖನಗಳ ಮೇಲೂ ಕಣ್ಣಾಡಿಸಿ ಸಂಪಾದಕರ ಕಣ್ತಪ್ಪಿ ಉಳಿದು ಹೋಗಿದ್ದ ಕೆಲವು ಮಾಹಿತಿ ದೋಷಗಳನ್ನು ತಿದ್ದಲು ನೆರವಾಗಿದ್ದಾರೆ. ಇಲ್ಲಿಯೇ ಹೇಳಬೇಕಾದ ಇನ್ನೊಂದು ಮಾತೆಂದರೆ, ನಾವು ಲೇಖಕರಿಗೆ ನಿರ್ದಿಷ್ಟ ವಿಷಯ ನೀಡಿ ಬರೆಯಲು ಹೇಳದ್ದರಿಂದ ಶಾಮಣ್ಣನ ಬದುಕಿನ ಹಲವು ವಿವರಗಳು ಹಲವರ ಲೇಖನಗಳಲ್ಲಿ ಪುನರಾವರ್ತನೆಗೊಂಡಿವೆ. ನಾವು ಅವನ್ನು ಆದಷ್ಟೂ ನಿವಾರಿಸಲು ಪ್ರಯತ್ನಿಸಿದ್ದೇವಾದರೂ, ಆಯಾ ಲೇಖನಗಳ ಚೌಕಟ್ಟುಗಳಿಗೆ ಅಂಟಿಕೊಂಡಿರುವ ಸಂದರ್ಭಗಳಲ್ಲಿ ಅವು ಹಾಗೇ ಉಳಿದುಕೊಂಡುಬಿಟ್ಟವೆ. ಇದಕ್ಕಾಗಿ ಓದುಗರ ಕ್ಷಮೆ ಮತ್ತು ಸಹನೆಗಳೆರಡನ್ನೂ ಬೇಡುತ್ತೇವೆ.

ಕೊನೆಯದಾಗಿ, ವೈಯಕ್ತಿಕವಾಗಿ ನಾನು ನನ್ನ ಸಹ ಸಂಪಾದಕರೂ, ಅದಕ್ಕಿಂತಲೂ ಹೆಚ್ಚಾಗಿ ಆಪ್ತ ಗೆಳೆಯರೂ ಆದ ಎಂ.ಬಿ. ನಟರಾಜ್ ಮತ್ತು ಬಿ. ಚಂದ್ರೇಗೌಡರ ಸಹಕಾರವನ್ನು ಇಲ್ಲಿ ನೆನೆಯಲೇಬೇಕು. ಇವರಿಬ್ಬರೂ ತಮ್ಮ ಕಾರ್ಯಭಾರಗಳ ನಡುವೆ ಸಂಪಾದಕೀಯ ಸಭೆಗಳಿಗೆ ಬಂದು ಈ ಗ್ರಂಥ ಸಮೃದ್ಧವಾಗಿ ಬರಲು ಹಲವು ಸಲಹೆ ಸೂಚನೆಗಳನ್ನು ನೀಡಿದ್ದಾರೆ. ವಿಶೇಷವಾಗಿ, ಲೇಖನ ಬರೆಯಲು ಬಾರದ/ಆಗದ ಶಾಮಣ್ಣನವರ ಹಲವು ಒಡನಾಡಿಗಳ ಮಾತುಗಳನ್ನು ಬರಹ ರೂಪಕ್ಕೆ ಇಳಿಸಿ ಸಹಕರಿಸಿದ ಚಂದ್ರೇಗೌಡರಿಗೆ ನನ್ನ ನೆನಕೆಗಳು ಸಲ್ಲುತ್ತವೆ.

ಇದರ ಜೊತೆಗೆ, ಪುಸ್ತಕದ ಮುಖಪುಟ ವಿನ್ಯಾಸ ಮಾಡಿರುವ ಅರುಣ್ ಕುಮಾರ್ ಅವರಿಗೂ, ಅದಕ್ಕಾಗಿ ಶಾಮಣ್ಣನವರ ಚಿತ್ರಗಳನ್ನು ಒದಗಿಸಿದ ಶಿವಮೊಗ್ಗ ನಂದನ್ ಮತ್ತು ಕೌಶಿಕ್ ಕಡಿದಾಳ್ ಅವರಿಗೂ, ಪುಸ್ತಕ ವಿನ್ಯಾಸ ಮಾಡಿರುವ ಶ್ರೀ ಸಾವಳಗಿ ಶಿವಲಿಂಗೇಶ್ವರ ಗ್ರಾಫಿಕ್ಸ್‌ನವರಿಗೂ ಮತ್ತು ಪುಸ್ತಕವನ್ನು ಅಂದವಾಗಿ ಮುದ್ರಿಸಿಕೊಟ್ಟಿರುವ ರಿಪ್ಲಿಕಾ ಆಫ್‌ಸೆಟ್ ಮುದ್ರಣಾಲಯದ ದಯಾನಂದ್ ಹಾಗೂ ಅವರ ಸಿಬ್ಬಂದಿ ವರ್ಗದವರಿಗೂ ನಮ್ಮೆಲ್ಲರ ನಮನಗಳು ಸಲ್ಲುತ್ತವೆ.

ಶಿವಮೊಗ್ಗ **ಡಿ.ಎಸ್. ನಾಗಭೂಷಣ**

೧೪ ಏಪ್ರಿಲ್ ೨೦೧೬ ಸಂಪಾದಕ ಮಂಡಳಿಯ ಪರವಾಗಿ

ಪರಿವಿಡಿ

ಭಾಗ ನಾಲ್ಕು

ಕಿರಿಯ ಗೆಳೆಯರಿಂದ / ೧೭೭

ಗುರು ಹಿರಿಯರಿಂದ...

ಅಪರೂಪದ ಶಿಷ್ಯ ಶಾಮಣ್ಣ

ಡಾ. ಪ್ರಭುಶಂಕರ

ಶಾಮಣ್ಣ ಮೈಸೂರು ಮಹಾರಾಜ ಕಾಲೇಜಿನಲ್ಲಿ ನನ್ನ ಪದವಿ ವಿದ್ಯಾರ್ಥಿ. ಎಲ್ಲರೊಡನೆಯೂ ಸ್ನೇಹ, ಸೌಹಾರ್ದತೆಯಿಂದ ಬೆರೆಯುವ ಸರಳ, ವಿಶಿಷ್ಟ ಸ್ವಭಾವದ ಮನುಷ್ಯ. ಆತನ ಬಗ್ಗೆ ನನಗಂತೂ ಯಾವತ್ತೂ ವಿಶೇಷ ಆಸ್ಥೆ, ಕಾಳಜಿ. ಸದಾ ಪ್ರೀತ್ಯಾದರಗಳ ಪರಸ್ಪರ ವಿನಿಮಯದ ಕಾರಣಕ್ಕೆ ನಮ್ಮ ಸಂಬಂಧ ಔಪಚಾರಿಕವೆನ್ನಿಸಲಿಲ್ಲ. ಗುರು-ಶಿಷ್ಯರನ್ನು ಮೀರಿದ ಭಾವನೆಗಳಿಂದ ಕೂಡಿದ್ದದು.

ಹಾಸ್ಯಪ್ರಜ್ಞೆ ಆತನಲ್ಲಿ ಅತ್ಯಂತ ಸಹಜ, ಸ್ವಾಭಾವಿಕವೆನ್ನುವಂತೆ ಅಡಕವಾಗಿತ್ತು. ಒಮ್ಮೊಮ್ಮೆ ತಾನಷ್ಟೆ ಅಲ್ಲ, ಸುತ್ತಲಿನವರನ್ನೂ ನಗುವಿನ ಹೊನಲಲ್ಲಿ ಮುಳುಗಿಸಿ ಬಿಡುತ್ತಿದ್ದವನು. ಹಾಗೆಯೇ ಫೋಟೋಗ್ರಫಿಯೂ ಸಹಜ ಸ್ವಭಾವಕ್ಕೆ ಹೊಂದಿಕೆಯಾಗುವ ಅಂಶ. ಸದಾ ಕ್ಯಾಮೆರಾವನ್ನು ತಗುಲಿಸಿಕೊಂಡು ನಮ್ಮ ಫೋಟೋಗಳನ್ನು ಸುಸ್ತೇ ಆಗದವನಂತೆ ಕ್ಲಿಕ್ಕಿಸುತ್ತಲೇ ಇರುತ್ತಿದ್ದ. ಅಷ್ಟೇನು ಚೆನ್ನಾಗಿ ಹಾಡುತ್ತಿರಲಿಲ್ಲವಾದರೂ ಹಾಡುವುದು, ವಾದ್ಯಗಳನ್ನು ನುಡಿಸುವುದು ಆತನಿಗೆ ಇಷ್ಟ. ಅದನ್ನು ಕೇಳುವುದು ನಮಗೂ ಖುಷಿ.

ಶಾಮಣ್ಣ ಎಂದರೆ ಎಷ್ಟೋ ಚದುರಿದ ಚಿತ್ರಗಳ ಆಗರ. ಆತ ಇಟ್ಟಿದ್ದ ಪ್ರಿಂಟಿಂಗ್ ಪ್ರೆಸ್ ಅಂತಹ ಚಿತ್ರಗಳ ಕೇಂದ್ರಗಳಲ್ಲೊಂದು. ಅದಕ್ಕೆ ಸಂಬಂಧಪಟ್ಟ ಎಲ್ಲ ತಂಟೆ-ತಕರಾರುಗಳಲ್ಲೂ ನಾವೆಲ್ಲ ಸದಾ ಅವನ ಪಕ್ಷದಲ್ಲೇ ಇರುತ್ತಿದ್ದೆವು. ಅವನಿಗೂ ನಾವೆಂದರೆ ತುಂಬಾನೆ ಇಷ್ಟ. ಯಾವುದೇ ಸಭೆ ಸಮಾರಂಭ ಅಂತ ಕರೆದರೆ ತಪ್ಪದೆ ಬರುತ್ತಿದ್ದ. ಆತ ಏನನ್ನು ಮಾಡಿದರೂ ನಾವ್ಯಾರೂ ಅವನ ಮೇಲೆ ಕೋಪಿಸಿಕೊಳ್ಳುವುದು ಸಾಧ್ಯವಾಗದ ಮಾತು. ಜಂಟ್ಲ್‌ಮನ್ ಗುಂಪಿಗೆ ಸೇರಿದವನು. ಸದಾ ಕಷ್ಟದಲ್ಲಿದ್ದವರ ಸಹಾಯಕ್ಕೆ ಮುಂದಾಗುತ್ತಿದ್ದ. ಇಂಥ ಸ್ಪಂದನೆಯ ಗುಣದ ಕಾರಣಕ್ಕೇ ಎಲ್ಲರಿಗೂ ಇಷ್ಟವಾಗುತ್ತಿದ್ದ. ಕುವೆಂಪು ಕೂಡ "ಓ...ಶಾಮಣ್ಣನಾ..." ಎಂದು ರಾಗವಾಗಿ ಮಾತು ಶುರುಮಾಡುತ್ತಿದ್ದದ್ದು ನೆನಪು.

'ಏನಯ್ಯ ಶಾಮಣ್ಣ, ಏನ್ಸಮಾಚಾರ...' ಎಂದು ಕೇಳಿದರೆ, 'ಹೇಳಿ ಮೇಷ್ಟ್ರೇ...' ಎಂದು ಅಷ್ಟೇ ಪ್ರೀತಿಯಿಂದ ಪ್ರತಿಕ್ರಿಯಿಸುವನು. ಯಾವ ಸಂಗತಿಯನ್ನೂ ಅತೀ ಗಂಭೀರವಾಗಿ ಪರಿಗಣಿಸಿದವನಲ್ಲ. ಎಂಥದೇ ತಲೆ ಹೋಗುವ ಸಂಗತಿಯಾಗಿರಲಿ, ಅದರಲ್ಲಿದ್ದ ಇನ್ನೊಂದು ಮುಖವನ್ನು ಗುರುತಿಸಿ, ಅದನ್ನು ವಿಡಂಬನಾತ್ಮಕವಾಗಿ ಬಿಂಬಿಸುತ್ತಿದ್ದ. ಹಾಗಾಗಿ ನಾವು ಅವನ ಮಾತನ್ನು ಹಗುರವಾಗಿ ಪರಿಗಣಿಸುವಂತೆ, ಇಲ್ಲವೇ ತೆಗೆದುಹಾಕುವಂತೆ ಇರಲಿಲ್ಲ.

ಪತ್ನಿ ಶ್ರೀದೇವಿ ಜತೆ ಮೈಸೂರಿಗೆ ಬಂದಾಗಲೆಲ್ಲ 'ಮೇಷ್ಟ್ರೇ' ಎನ್ನುತ್ತ ನನ್ನನ್ನು ನೋಡಲು ಬರುವನು. ಸ್ವಲ್ಪ ಹೊತ್ತಿದ್ದು ಉಭಯಕುಶಲೋಪರಿ ವಿಚಾರಿಸಿ, ಹರಟೆ ಹೊಡೆದು ಮನಸ್ಸನ್ನು ಉಲ್ಲಾಸಗೊಳಿಸಿ ತೆರಳುವನು. ಅವರ ಭಗವತಿಕೆರೆಯ ತೋಟಕ್ಕೆ ಹೋದರಂತೂ ಅದೇನು ಸಂಭ್ರಮ, ಆತಿಥ್ಯ! ಶಾಮಣ್ಣನಂತ ಶಿಷ್ಯರು ಎಲ್ಲಾ ಮೇಷ್ಟ್ರುಗಳಿಗೂ ಸಿಗುವುದಿಲ್ಲ.

ನೀರಿನಂತಹ ಮನುಷ್ಯ ಶಾಮಣ್ಣ

ಪಂಡಿತ್ ರಾಜೀವ ತಾರಾನಾಥ್

೧೯೫೮-೫೯ರ ಸುಮಾರಿನಲ್ಲಿ ನಾನು ಕೋಲ್ಕತ್ತಾದಲ್ಲಿ ನನ್ನ ಗುರುಗಳಾದ ಅಲಿ ಅಕ್ಬರ್ ಖಾನ್ ಸಾಹೇಬರ ಬಳಿ ಸರೋದ್ ಕಲಿಯುತ್ತಿದ್ದೆ. ಖಾನ್ ಸಾಹೇಬರು ಪಂಡಿತ್ ರವಿಶಂಕರ್ ಜೊತೆಗೆ ಮೈಸೂರಿಗೆ ಕಚೇರಿ ನೀಡಲು ಬಂದಿದ್ದರು. ಆಗ, ಶಾಮಣ್ಣ "ನನಗೂ ಪಾಠ ಹೇಳಿಕೊಡಿ. ನಿಮ್ಮಲ್ಲಿಗೆ ಬರ್ತೇನೆ" ಎಂದು ಕೇಳಿದ್ದರು ಅಂತ ಕಾಣುತ್ತೆ. ಅದಕ್ಕವರು, "ನನ್ನ ಶಿಷ್ಯ, ನಿಮ್ಮವನೇ ಮನುಷ್ಯ ಮೈಸೂರಿಗೆ ಬರ್ತಿದ್ದಾನೆ. ಅವನ ಹತ್ತಿರ ಕೇಳು. ಹೇಳಿಕೊಡುತ್ತಾನೆ" ಎಂದಿದ್ದರು. ನಾನು ಮೈಸೂರಿಗೆ ಬರುತ್ತಿದ್ದಂತೆ ಅವರು ನನ್ನ ಸಂಪರ್ಕಕ್ಕೆ ಬಂದರು. ಬಹಳ ಹತ್ತಿರದ ಶಿಷ್ಯರು ಮತ್ತು ಮಿತ್ರರೂ ಆದರು. ಅನ್ಯೋನ್ಯವಾದ ಗೆಳೆತನ ಬೆಳೆಯಿತು. ನೀರಿನಂತ ಮನುಷ್ಯ ಅವರು. ಯಾವ ರೀತಿಯ ಕತ್ತಲೆಯೂ ಅವರಲ್ಲಿಲ್ಲ.

ನಾನು, ಶಾಮಣ್ಣ ಸರಸ್ವತಿಪುರಂನಲ್ಲಿ ಬಾಡಿಗೆ ಮನೆಯೊಂದನ್ನು ಹಿಡಿದೆವು. ಇನ್ನೇನು ಮೈಸೂರಿಗೆ ಬರಲಿದ್ದ ಎಸ್.ಎಸ್.ಶೆಟ್ಟರ್ ಅವರು ನಮ್ಮನ್ನು ಕೂಡಿಕೊಳ್ಳುವವರಿದ್ದರು. ಆ ಮನೆಗೆ ಇನ್ನೂ ಕಿಟಕಿ

ಯನ್ನೇ ಅಳವಡಿಸಿರಲಿಲ್ಲ. ಸೊಳ್ಳೆಯೋ ಸೊಳ್ಳೆ. ಒಂದು ವಾರಕ್ಕೆಲ್ಲ ಸಾಕಾಯ್ತು. ಆ ಮನೆ ಬಿಟ್ಟು ನನ್ನ ಸೋದರತ್ತೆ ಮನೆಗೆ ಹೋದೆವು.

ಆಗ ಶಾಮಣ್ಣನ ಬಳಿ ಎಲ್ಲಿಂದಲೋ ಖರೀದಿಸಿ ತಂದಿದ್ದ ಕೆಟ್ಟ ಸರೋದ್ ಒಂದು ಇದ್ದಿತು. ಅದರಲ್ಲೇ ಅವರು ಕಲಿಯುತ್ತಿದ್ದರು. ಆ ವಾದ್ಯಕ್ಕೆ ಅದರದ್ದೇ ಆದ ಲಿಮಿಟೇಷನ್‌ಗಳಿದ್ದವು. ಸಂಗೀತದಲ್ಲಿ ತೆಗೆಯಬಹುದಾದುದನ್ನು ಅದರಲ್ಲಿ ತೆಗೆಯಲು ಆಗ್ತಿರಲಿಲ್ಲ. ಸಂಗೀತದ ಜತೆಗೆ ಅವರಿಗೆ ಸಮಾಜವಾದದ ಸಂಸರ್ಗ ಬೆಳೆಯಿತು. ಅವರಿಗೂ ನನಗೂ ಅನಂತಮೂರ್ತಿ, ತೇಜಸ್ವಿಯಂತವರು ಹತ್ತಿರ ವಾಗಿದ್ದರು.

ಮುಂದೆ ಶಾಮಣ್ಣ ಸರೋದ್ ಕಲಿಯುವುದಕ್ಕಂತಲೇ ಬೊಂಬಾಯಿಗೆ ಹೋದರು. ನಮ್ಮ ಸಂಪರ್ಕ ತಪ್ಪಿಹೋಯಿತು. ಎಷ್ಟೋ ವರ್ಷ ಕಳೆದ ಮೇಲೆ, ನಾನು ಇಂಗ್ಲಿಷ್ ಮಾಸ್ತರಿಕೆಗೆ ರಾಜೀನಾಮೆ ಕೊಟ್ಟು ಸಂಗೀತ ಕಚೇರಿಗಳನ್ನು ನೀಡಲು ಶುರುಮಾಡಿದೆ. ಶಾಮಣ್ಣ ಮತ್ತೆ ಸಿಕ್ಕರು. ಆಗಲೂ ಅದೇ ಶಾಮಣ್ಣ. ಕರಿ ಗಡ್ಡ ಬಿಳಿಯಾಗಿದ್ದರ ಹೊರತು ಅದೇ ಬೆಚ್ಚನೆಯ ಪ್ರೀತಿ. ಅದೇ ಆಪ್ತತೆ, ಹತ್ತಿರತನ. ಅದೇ ಶಾಮಣ್ಣನ ವಿಶೇಷ.

ಈಗವರು ರೈತ ಸಂಘ ಮತ್ತಿತರ ಹೋರಾಟಗಳಲ್ಲಿ ತನ್ಮಯರಾಗಿದ್ದಾರೆ. ಆದ್ರೂ ಸಂಗೀತದ ಗೀಳು ಉಳಿಸಿಕೊಂಡಿದ್ದಾರೆ. ಸರೋದ್ ಬಾರಿಸುತ್ತಾರೆ. ಶಿವಮೊಗ್ಗದಲ್ಲಿ ನನ್ನದೇ ಎರಡು ಮೂರು ಕಚೇರಿಗಳನ್ನು ಏರ್ಪಡಿಸುವುದರಲ್ಲಿ ಅವರದೇ ದೊಡ್ಡ ಪಾತ್ರ. ಈಗ ನನ್ನಲ್ಲಿಗೆ ಪ್ರೀತಿಯ ಕಾರಣಕ್ಕೆ ಬರುತ್ತಾರೆ. ಸಂಗೀತ ಸಿಕ್ಕರೆ ಕೇಳುತ್ತಿರುತ್ತಾರೆ. ಎರಡು ಮೂರು ವರ್ಷದ ಹಿಂದೆ ಬಂದಾಗ, 'ನನಗೊಂದು ಒಳ್ಳೆಯ ಸರೋದ್ ಬೇಕು' ಅಂತ ಕೇಳಿದರು. ಗೆಳೆಯರೊಬ್ಬರ ಹತ್ತಿರ ಅದನ್ನು ತೆಗೆಸಿಕೊಟ್ಟೆ.

ವಿದ್ಯಾರ್ಥಿಯಾಗಿದ್ದಾಗ ಸಂಗೀತವನ್ನೇ ಮಾಡ್ಬೇಕು ಅಂದ್ಕೊಂಡಿದ್ದರೆನ್ನಿಸುತ್ತೆ. ಆ ನಂತರ ಅವರಿಗೆ ಭೂಮಿ, ರೈತರು, ರೈತ ಚಳವಳಿ ಹತ್ತಿರವಾಯಿತು. ಕಾಗೋಡು ಸತ್ಯಾಗ್ರಹ, ಗೋಪಾಲಗೌಡರ ಸಾಂಗತ್ಯ ದೊರೆಯಿತು. ಒಮ್ಮೆ ತೀರ್ಥಹಳ್ಳಿಗೆ ಕಚೇರಿ ನೀಡಲು ಹೋಗಿದ್ದಾಗ ಗೋಪಾಲಗೌಡರ ಭೇಟಿ ಅವಕಾಶ ನನಗೂ ಸಿಕ್ಕಿತ್ತು. ಅತ್ಯಂತ ಸರಳ ಮನುಷ್ಯ ಅವರು. ಹೀಗೆ, ಶಾಮಣ್ಣ ಇದ್ದ ವಾತಾವರಣವೇ ಬೇರೆ ಇತ್ತು. ಸಂಗೀತದ ಬಗ್ಗೆ ಆಸಕ್ತಿ, ಕಚೇರಿ ಏರ್ಪಡಿಸುವ ಕಾಳಜಿಯ ಜತೆಗೇ ಚಳವಳಿಗಳಲ್ಲೂ ತೊಡಗಿಸಿಕೊಂಡಿದ್ದರಿಂದ ಅವರ ವ್ಯಕ್ತಿತ್ವ ಬೇರೆಯದೇ ನೆಲೆಯಲ್ಲಿ ಬೆಳೆಯಿತು. ಇವತ್ತಿನ ದಿನ ಎಲ್ಲಾ ಕಡೆ ಜನರ ತಲೆ ಕೆಡಿಸುವ ಫ್ಯಾಸಿಸಂ ಬೆಳೆಯುತ್ತಿದೆ. ದೇಶದಲ್ಲಿ ಇರುವುದೇ ಬೇಡ ಎನ್ನಿಸುವಂತ ಸ್ಥಿತಿಯನ್ನು ನಿರ್ಮಿಸುತ್ತಿದ್ದಾರೆ. ಅದನ್ನು ಎದುರಿಸಲು ಶಾಮಣ್ಣನಂತ ಶಕ್ತಿಗಳು ಇರಬೇಕು. ಜನಗಳಲ್ಲಿ ಆರೋಗ್ಯವಾದ ಮನಸ್ಸು, ಆರೋಗ್ಯಕರ ಧೋರಣೆ, ಆರೋಗ್ಯಕರ ವ್ಯಕ್ತಿತ್ವವನ್ನು ಬೆಳೆಸುವಲ್ಲಿ ಶಾಮಣ್ಣ ಧೈರ್ಯವಾಗಿ ತೊಡಗಿಸಿಕೊಂಡಿದ್ದಾರೆ. ಅದು ಬಹುಮುಖ್ಯ.

ಹಿರಿಯ ವ್ಯಕ್ತಿ; ಹಣ್ಣಾದ ಧ್ವನಿ. ಆ ರೀತಿಯಲ್ಲಿ ನಾಡಿನ ಸಾಂಸ್ಕೃತಿಕ ಜೀವನಕ್ಕೆ ಮುಖ್ಯರಾದವರು. ತಮಿಳಿನಲ್ಲಿ ಸಂಸ್ಕೃತಿಗೆ 'ಪಣ್ಪಾಡ್' (ಪಣ್-ಪಾಡು) ಎನ್ನುವರು. ಕನ್ನಡದಲ್ಲಿ ಅದನ್ನು ಪಕ್ವವಾದ ಸ್ಥಿತಿ ಎನ್ನಬಹುದು. ಶಾಮಣ್ಣನದು ಆ ತರದ ಸಂಸ್ಕೃತಿ, ಪಕ್ವವಾದ ವ್ಯಕ್ತಿತ್ವ. ಅದು ತನ್ನ ಪ್ರಭಾವವನ್ನು ಸುತ್ತಲ ಜನರ ಮೇಲೂ ಚೆಲ್ಲುತ್ತಿರುತ್ತದೆ. ಈಗಿನ ಕಾಲಕ್ಕದು ಅತ್ಯವಶ್ಯಕ.

ನನ್ನ ಹಳೆಯ ಗೆಳೆಯ, ಹಳೆಯ ಸಾಥಿ ಎಲ್ಲವನ್ನೂ ಮೀರಿ ತಾವು ಬೆಳೆದಿದ್ದಾರೆ. ರಾಜಕೀಯ, ಲೆಕ್ಚರ್‌ಬಾಜಿ ಅವರ ಧಾಟಿ ಅಲ್ಲ. ಬದುಕಿನ ಸರಳತೆ, ಚೊಕ್ಕತನ, ಮನವ ತೆರೆದಿಟ್ಟ ಬಗೆಯ ಒಂದು ಗೆಳೆತನ, ತೆರದ ಮನಸ್ಸು ಅವರ ವಿಶೇಷ. ಅವರ ಜೊತೆಗಿದ್ದವರಿಗದು ಗೊತ್ತಾಗುತ್ತದೆ. ಇನ್ನು ಅದಕ್ಕಿಂತ ಇನ್ನೇನು ಬೇಕು? ಅಂಥವರಿರಬೇಕು; ಸುಮ್ಮನೆ ಬದುಕಿ ಅವರ ಪ್ರಭಾವ ಹಬ್ಬಬೇಕು. ಟೈಮ್ ಸಿಕ್ಕಾಗ ಕೊಂಚ ಸರೋದ್ ನುಡಿಸಬೇಕು. ಅದರ ಗೀಳನ್ನು ಯಾವತ್ತೂ ಇಟ್ಕೋಬೇಕು; ಇಟ್ಕೊಂಡಿದ್ದಾರೆ ಕೂಡ.

ಶಾಮಣ್ಣನಂತವರ ಬಗ್ಗೆ ಇಂಥ ಗೌರವ ಗ್ರಂಥಗಳು ಕೆಲವಾದರೂ ಇರುವುದು ಒಳ್ಳೆಯದು. ಗ್ರಂಥವನ್ನು ಓದುವಾಗಲಾದರೂ ಅಂತಹ ಮನುಷ್ಯನ ವ್ಯಕ್ತಿತ್ವ ನಮ್ಮ ಮೇಲೆ ಮೂಡುತ್ತದೆ; ಸ್ವಲ್ಪ ಕಾಲವಾದರೂ ಇರುತ್ತದೆ. ಈಗಿನ ಪರಿಸ್ಥಿತಿಯಲ್ಲಿ ಇದು ಬಹಳೇ ಮುಖ್ಯ. ಈ ಧ್ವನಿ, ಈ ನಿಲುವು, ಈ ಸರಳತೆ ..

ನಮ್ಮಮ್ಮನ ಇನ್ನೊಬ್ಬ ಮಗ: ಶಾಮಣ್ಣ

ಡಾ.ಯು.ಆರ್. ಅನಂತಮೂರ್ತಿ

ನಾನು ಮೇಷ್ಟ್ರಾಗಿದ್ದ ಕಾಲದಿಂದ, ಶಾಮಣ್ಣ ನನಗೆ ಗುರುತು ಅನ್ನೋದಕ್ಕಿಂತ ಹೆಚ್ಚಾಗಿ ಅವರ ಕುಲ ಇದೆಯಲ್ಲ, ಕಡಿದಾಳ್ ಮಂಜಪ್ಪ ಗೌಡ್ರು, ಮತ್ತವರ ತಂದೆ, ಅವರ ಊರು, ಅಮೇಲೆ ಆ ಊರಿನ ಹತ್ತಿರ ಇದ್ದ ಬಸವಾನಿ, ಬಸವಾನಿಯಲ್ಲಿ ಒಬ್ಬರು ರಾಮ ಶರ್ಮರು ಅಂತ; ಅವರು ರೈತರನ್ನ ಒಟ್ಟು ಮಾಡಿ ಅವರನ್ನ ಹೋರಾಟಕ್ಕೆ ಸಿದ್ಧ ಮಾಡ್ತಾ ಇದ್ದದ್ದು....ಇವೆಲ್ಲ ಒಟ್ಟಾಗಿ ಬರ್ತದೆ ನಂಗೆ ಶಾಮಣ್ಣನ ನೆನಪಾದಾಗ.

ಇನ್ನೊಂದು, ಶಾಮಣ್ಣ ನಮ್ಮ ನಡುವೆ ಪ್ರಸಿದ್ಧನಾದದ್ದು 'ದಂತವಾದ್ಯ'ದಿಂದ. ಬೇರೆಯವರೆಲ್ಲ ಸಿಳ್ಳೆ ಹಾಕಿ ಸಂತೋಷ ಪಡಿಸ್ತಾ ಇದ್ದರೆ, ಶಾಮಣ್ಣ ಅವರ ಬೆರಳುಗಳನ್ನ ತಗೊಂಡು ಹಲ್ಲುಗಳಿಗೆ ಕಟಕಟಕಟ ಕಟಾಂತ ಹೊಡೀತಾ ಅದರ ಮುಖಾಂತರ ಎಲ್ಲ ರೀತಿಯ ಲಯವನ್ನೂ ಹೊರಡಿಸ್ತಾ ಇದ್ದರು. ಅವರು ಅದನ್ನು 'ದಂತವಾದ್ಯ' ಅಂತಲೇ ಕರೀತಾ ಇದ್ದರು. ಸಂಗೀತ ಅನ್ನುವುದು ಅವರಿಗೆ ಪ್ರಾಯಶಃ ಅತ್ಯಂತ 'ಒಳಗೆ' ಇರುವಂಥ ಒಂದು ವಿಷಯ. ಹಾಗಾಗಿ ಅವರು ನಮ್ಮ ರಾಜೀವ್ ತಾರಾನಾಥ್‌ಗೆ ಹತ್ತಿರವಾದರು.

ಆಮೇಲೆ ಕಲಿಯೋಕ್ಕೆ ಶುರುಮಾಡಿದರು, ರಾಜೀವ್ ತಾರಾನಾಥ್‌ರ ಹತ್ತಿರ. ತೇಜಸ್ವಿನೂ ಕಲೀತಾ ಇದ್ದರು. ಶಾಮಣ್ಣನೂ ಕಲೀತಾ ಇದ್ದರು. ಆದರೆ ಶಾಮಣ್ಣ ತೇಜಸ್ವಿಗಿಂತ ಹೆಚ್ಚು ಸೀರಿಯಸ್ ಆಗಿ ಕಲೀತಾ ಇದ್ದರು ಅಂತ ನನ್ನ ನೆನಪು. ಕುವೆಂಪುರವರ ಮನೆಯನ್ನ ಇವರೆಲ್ಲ ತಮ್ಮ ಬಟ್ಟೆಯನ್ನು ಒಣಗ್ಹಾಕುವ ಒಂದು ಜಾಗವಾಗಿ ಮಾಡಿಕೊಂಡಿದ್ದರು. So ಇದ್ರಿಂದ ಇವರಿಗೆ ಇರ್ಲಿಕ್ಕೆ, ಹಾಡ್ಲಿಕ್ಕೆ, ಬಟ್ಟೆ ಒಗಿಲಿಕ್ಕೆ: ಹೀಗೆ ಈ ವೈಸ್‌ಛಾನ್ಸ್‌ಲರ್ ಮನೆಯನ್ನ ಒಂದು ಸಾಮಾನ್ಯ ಮನೆಯಾಗಿ ಪರಿವರ್ತಿಸಿದ್ರು. ಅದಕ್ಕೆ ಕುವೆಂಪು ಅವರು ಕೂಡ ಅವಕಾಶ ಮಾಡಿಕೊಟ್ಟಿದ್ದರು.

ಒಂದು ರೀತಿಯಲ್ಲಿ ಸಮಾನತೆ, ಸಹಜತೆ, ಸರಳತೆ ಇವೆಲ್ಲವನ್ನೂ ನಾನು ಒಂದು ರೀತಿ ಅದರ ತುದಿಯಲ್ಲಿ, ಅದರ ತೀವ್ರತೆಯಲ್ಲಿ ಪ್ರತ್ಯಕ್ಷವಾಗಿ ಕಂಡಿದ್ದು ಶಾಮಣ್ಣನಲ್ಲಿ. ಆಮೇಲೆ ಅವರು ನಂಜುಂಡಸ್ವಾಮಿ ಜೊತೆಗೆ ಸೇರಿ ಹೋರಾಟಕ್ಕಿಳಿದ್ರು, ಅವರು ಏನೇ ಮಾಡ್ಲಿ, ಎಂತದೇ ಇರ್ಲಿ ನಮ್ಮನೆಗೆ ಬಂದರೆ, ನಮ್ಮಮ್ಮನಿಗೆ ನಾವೆಲ್ಲ ಮಕ್ಕಳಿದ್ದ ಹಾಗೆ; ಇನ್ನೊಬ್ಬ ಮಗ ಇದ್ದಂಗೆ ಇದ್ದರು ಅವರು. ಮತ್ತೊಬ್ಬರು ಅಂದರೆ ಕೋಣಂದೂರು ಲಿಂಗಪ್ಪ, ನಮ್ಮನೇಲಿ ಹಾಗೆ ಇರ್ತಾ ಇದ್ದವರು. ಶಾಮಣ್ಣನೂ ಅವರ ಜೊತೆಗೆ ನಮ್ಮನೇಲಿ–ನಂಜೊತೆ ಮಟ್ಟಿಗೆ ಮಾತ್ರ ಅಲ್ಲ ಅವರು ವ್ಯವಹರಿಸ್ತಾ ಇದ್ದದ್ದು; ನನ್ನಮ್ಮನೊಂದಿಗೆ–ಕೊನೆವರೆಗೂ, ನನ್ನಮ್ಮ ಸಾಯುವ ತನಕ ನನ್ನಮ್ಮನಿಗೆ ತುಂಬಾ ಹತ್ತಿರದವರಾಗಿದ್ರು.

(ಕಡಿದಾಳು ಶಾಮಣ್ಣನವರನ್ನು ಕುರಿತು ವಾರ್ತಾ ಇಲಾಖೆ ತಯಾರಿಸಿರುವ ಸಾಕ್ಷ್ಯಚಿತ್ರದಿಂದ) (ಧ್ವನಿಯಿಂದ ಲಿಪಿಗೆ: **ಟಿ.ಎಲ್ ರೇಖಾಂಬ)**

ಸಾತ್ವಿಕತೆಯ ಎಲ್ಲೆ ಮೀರದ ಶಾಮಣ್ಣ

ಎಸ್. ಎಲ್. ಭೈರಪ್ಪ

ಕಡಿದಾಳು ಶಾಮಣ್ಣನವರ ವ್ಯಕ್ತಿತ್ವವನ್ನು ಬಿಂಬಿಸುವ ಗೌರವ ಗ್ರಂಥವನ್ನು ತರುವ ನಿಮ್ಮ ಯೋಜನೆ ಅಗತ್ಯವೂ, ಉಚಿತವೂ ಆಗಿದೆ. ಶ್ಯಾಮಣ್ಣನವರು ಮುನ್ನಡೆಸಿರುವ ಚಳುವಳಿಗಳಲ್ಲಿ ಸಾತ್ವಿಕ ಶಕ್ತಿಯನ್ನು ಮೀರದೆ ನಡೆಸಿದ್ದಾರೆ. ಸಾತ್ತ್ವಿಕ ಮಾರ್ಗದಲ್ಲಿಯೇ ಸಾಮಾಜಿಕ ಸುಧಾರಣೆಯನ್ನು ಮಾಡಲು ಅವರು ಶ್ರಮಿಸಿದ್ದಾರೆ. ಹೀಗಾಗಿ ಎಲ್ಲರೂ ಅವರನ್ನು ಪ್ರೀತಿಸುತ್ತಾರೆ.

ಹಲವು ವರ್ಷಗಳ ಹಿಂದೆ ಅವರು ನನ್ನನ್ನು ಅವರ ತೋಟದ ಮನೆಗೆ ಕರೆದೊಯ್ದರು. ನಾಲ್ಕೈದು ವರ್ಷದ ನಂತರ ನಾನೇ ಒಮ್ಮೆ ಪುನರಾಮಂತ್ರಣವಿಲ್ಲದೆ ಅವರ ಮನೆಗೆ ಹೋಗಿ ಎರಡು ದಿನವಿದ್ದು ಬಂದೆ. ಅವರ ಆತ್ಮೀಯತೆ ಅಂಥದು. ನನ್ನ ಗಾಢ ಮಿತ್ರರಾಗಿದ್ದ ಹಾ.ಮಾ ನಾಯಕರ ತಂಗಿಯೂ ಶ್ಯಾಮಣ್ಣನವರ ಕುಟುಂಬವಾಗಿರುವುದು ನನಗೆ ಶ್ಯಾಮಣ್ಣನವರೊಡನೆ ಇರುವ ಸ್ನೇಹಕ್ಕೆ ಇನ್ನೊಂದು ಕಾರಣ.

ಗೌರವ ಗ್ರಂಥವು ಅವರ ಕಾರ್ಯಕ್ಷೇತ್ರದ ಎಲ್ಲ ಮುಖಗಳನ್ನು ಒಳಗೊಳ್ಳುವಂತಿರಲಿ.

ನುಡಿದಂತೆ ನಡೆಯುವ ಶಾಮಣ್ಣ

ನ್ಯಾ. ಎನ್.ಡಿ. ವೆಂಕಟೇಶ್

ಕಡಿದಾಳ್ ಶಾಮಣ್ಣನವರ ಗೌರವ ಗ್ರಂಥಕ್ಕೆ ಅವರನ್ನು ಕುರಿತ ಒಂದು ಲೇಖನ ಬರೆಯಲು ಕೇಳಿರುವಿರಿ. ನನಗೆ ತಿಳಿದಿರುವ ಅವರ ವ್ಯಕ್ತಿತ್ವವನ್ನು ಕುರಿತ ನಾಲ್ಕು ಮಾತುಗಳನ್ನು ದಾಖಲಿಸಲು ಈ ಪತ್ರ ಬರೆಯುತ್ತಿದ್ದೇನೆ.

ಶ್ಯಾಮಣ್ಣನವರು ನನಗೆ ಅನೇಕ ವರ್ಷಗಳಿಂದ ಪರಿಚಿತರು. ಅವರ ಸರಳ ಜೀವನ, ಸಜ್ಜನಿಕೆ ಮೆಚ್ಚುವಂತದ್ದು. ಚಿಕ್ಕಂದಿನಿಂದಲೇ ನಮ್ಮ ಭಾಷೆ, ಸಂಸ್ಕೃತಿ ಮತ್ತು ಸಾಮಾಜಿಕ ಸಾಮರಸ್ಯಗಳನ್ನು ಪ್ರತಿಪಾದಿಸುತ್ತಿರುವವರು.

ಪ್ರೊ.ಎಂ.ಡಿ. ನಂಜುಂಡಸ್ವಾಮಿ, ಎನ್.ಡಿ. ಸುಂದರೇಶ್ ಮತ್ತು ಇತರ ಸಮಾನ ಧ್ಯೇಯದವರೊಂದಿಗೆ ರೈತರಲ್ಲಿ ಜಾಗೃತಿ ಮೂಡಿಸಲು ಶ್ರಮಿಸಿದರು. ಅಧಿಕಾರ, ಹಣ ಗಳಿಸುವಿಕೆಯಿಂದ ದೂರವಿದ್ದು ನುಡಿದಂತೆ ನಡೆಯುತ್ತಿರುವ ನಮ್ಮ ನಾಡಿನ ಅಪರೂಪದ ವ್ಯಕ್ತಿಗಳಲ್ಲಿ ಅವರೊಬ್ಬರು. ನನಗೆ ನೆನಪಿರುವಷ್ಟು ಬರೆದಿದ್ದೇನೆ.

ನೋವ ನುಂಗಿ ನಗುವ ತುಳುಕಿಸುವ ಶಾಮಣ್ಣ

ನ್ಯಾ. ಎ.ಜೆ. ಸದಾಶಿವ

ಸುಮಾರು ಎರಡು ತಿಂಗಳುಗಳ ಹಿಂದೆ ಡಿ.ಎಸ್. ನಾಗಭೂಷಣರವರು ಕಡಿದಾಳು ಶಾಮಣ್ಣನವರಿಗೊಂದು–ಅವರ ಎಪ್ಪತ್ತೈದರ ಹರೆಯದ ಸೇವೆಯನ್ನು ಸ್ಮರಿಸುವ–ಗೌರವ ಗ್ರಂಥ ಸಮರ್ಪಿಸ ಬೇಕು, ಅದಕ್ಕೆ ನನ್ನದೊಂದು ಲೇಖನ ಬೇಕೆಂದು ಪತ್ರ ಬರೆದಿದ್ದರು. ಕಡಿದಾಳ್ ಶಾಮಣ್ಣನವರ ಬಗೆಗೆ ಬರೆಯುವಷ್ಟು ಮಾಹಿತಿ ಮತ್ತು ಶಕ್ತಿ ನನ್ನಲ್ಲಿಲ್ಲವಾದುದರ ಪ್ರಯುಕ್ತ, ನಾಗಭೂಷಣ ಅವರ ಪತ್ರವನ್ನು ಮರೆತು ಬಿಟ್ಟಿದ್ದೆ. ಆದರೆ, ಅವರಿಂದ ದೂರವಾಣಿಯ ಕೋರಿಕೆಯೊಂದಿಗೆ 'ನೆನಪೋಲೆ'ಯೊಂದು ಬಂದ ನಂತರ ಈ ದುಸ್ಸಾಹಸಕ್ಕೆ ಕೈ ಹಾಕಿದ್ದೇನೆ.

'ದುಸ್ಸಾಹಸ' ಎಂದ ಮಾತ್ರಕ್ಕೆ ತಪ್ಪು ತಿಳಿಯಬೇಕಿಲ್ಲ. ಕಡಿದಾಳ್ ಶಾಮಣ್ಣನವರ ಚಿಂತನೆಗಳು, ಆದರ್ಶಗಳು, ಅವುಗಳನ್ನು ನಡೆಸಬೇಕೆಂದಿದ್ದ ವಿಧಾನಗಳು, ಕಂಡ ಕನಸುಗಳು, ಅವುಗಳ ವೈಫಲ್ಯಗಳು, ಉಂಟಾದ ನಿರಾಶೆಗಳು, ಅವುಗಳಿಂದ ಅವರು ಅನುಭವಿಸಿದ ನೋವು;

ರೈತಸಮುದಾಯದ ಆಶೋತ್ತರಗಳು ಮುರಿದುಬಿದ್ದಾಗ ಅವರು ಪಟ್ಟ ಸದ್ದಿಲ್ಲದ ಶೋಕ, ಹೇಳಲು, ಬರೆಯಲು ಸಾಧ್ಯವಿಲ್ಲದ ಸಂಕಟ.

ಶ್ರೀ ಕಡಿದಾಳ್ ಶಾಮಣ್ಣನವರ ಮೈಸೂರಿನ ದಿನಗಳ ಪರಿಚಯ ನನಗೆ ಅಷ್ಟು ಹೆಚ್ಚಿಗೆ ಇಲ್ಲ. ಆದರೆ, ಅವರ ಕುರುಚಲು ಗಡ್ಡದಿಂದಾಗಿ ಅವರನ್ನು ಮರೆಯಲಾಗಿರಲಿಲ್ಲ. ಅಲ್ಲಲ್ಲಿ ಅವರ ಮಾತುಗಳಲ್ಲಿ ಕುಣಿಯುತ್ತಿದ್ದ ಉಲ್ಲಾಸ, ಉತ್ಸಾಹಗಳನ್ನು ದೂರದಿಂದ ನೋಡುತ್ತಿದ್ದ ನಮಗೂ ಖುಷಿ ತರುತ್ತಿದ್ದವು.

ಅವರು ತಮ್ಮನ್ನು ರೈತಚಳುವಳಿಗೆ, ದಲಿತ ಚಳುವಳಿಗಳಿಗೆ ತೊಡಗಿಸಿಕೊಂಡ ನಂತರ, ಅವರ ಉತ್ಸಾಹ, ಹುಮ್ಮಸ್ಸು ಇಮ್ಮಡಿಯಾದವು. ತಮ್ಮ ಮಾತುಗಳಿಗೆ ತಾವೇ ನಕ್ಕು ಇತರರನ್ನು ನಗಿಸಿ, ಇಡೀ ಚಳುವಳಿಯನ್ನು ನಡೆಸಿದ ರೀತಿ ಮರೆಯಲಾರದಂತಹುದು. ಅನಂತರದ ದಿನಗಳಲ್ಲಿ, ಅಂದರೆ ಬಹುಶಃ ೧೯೮೩-೮೪ರ ರಾಜ್ಯದ ರಾಜಕೀಯ ರಂಗಕ್ಕೆ ರೈತ ಸಂಘ ತನ್ನ ಚಟುವಟಿಕೆಗಳನ್ನು ವಿಸ್ತರಿಸಿದ ನಂತರ, ಅವರ ನಡೆ-ನುಡಿ ಮತ್ತು ನೋಟದಲ್ಲಿ ನೋವಿನ ಛಾಯೆ ಕಾಣಲಾರಂಭಿಸಿತು. ರಾಜಕೀಯದಿಂದ ಬಹಳ ಕಾಲ ದೂರವೇ ಉಳಿದಿದ್ದ ರೈತ ಸಂಘ, ೧೯೮೫ರಲ್ಲಿ ನೇರ ಚುನಾವಣೆಗೆ ಧುಮುಕಿತು. ಬಹುಶಃ ಈ ನಿರ್ಧಾರ ರೈತ ಚಳುವಳಿಗೆ ಮಾರಕವಾಯಿತು ಎನ್ನಬೇಕು.

ರೈತ ಸಂಘದ ಚಳುವಳಿಯಲ್ಲಿ-ರೈತ ಚಳುವಳಿ ಮಾತ್ರವೇ ಅಲ್ಲ, ಯಾವುದೇ ರಾಜಕೀಯ ಚಳುವಳಿಯಲ್ಲಿಯೂ - ನಾನು ಸ್ವತಃ ಭಾಗವಹಿಸದಿದ್ದರೂ, ಅವುಗಳನ್ನು ಬೆಂಬಲಿಸುತ್ತಿದ್ದೆ. ರೈತ ಚಳುವಳಿ ರಾಜ್ಯದಲ್ಲಿ ಬೆಳೆದ ರೀತಿ, ಗಳಿಸಿದ ಗೌರವ, ಸೃಷ್ಟಿಸಿದ ಸಂಚಲನ ಕೃಷಿ ಹಿನ್ನೆಲೆಯಿಂದ ಬಂದ ನನ್ನಂತಹವರಿಗೆಲ್ಲರಿಗೂ ಖುಷಿ ತಂದಿತ್ತು. ಅವರು ಚುನಾವಣೆಯಲ್ಲಿ ಭಾಗಿಗಳಾಗುವ ನಿರ್ಧಾರ ರೈತ ಚಳುವಳಿಯಲ್ಲಿ ಆಸಕ್ತಿ ವಹಿಸಿದ್ದ ನನ್ನಂತಹವರಲ್ಲಿ ನೋವು ಮೂಡಿಸಿತು. ಇಲ್ಲಿನ ವ್ಯಂಗ್ಯವೆಂದರೆ ರೈತ ಚಳುವಳಿಯ ಅಧಿನಾಯಕ ಕೀರ್ತಿಶೇಷ ನಂಜುಂಡಸ್ವಾಮಿಯವರ ಮಾತುಗಳು ನನ್ನನ್ನೂ ಅವರು ರೂಪಿಸಿದ್ದ 'ಮತದಾರರ' ಅಭ್ಯರ್ಥಿಯಾಗಲು ಒಪ್ಪಿಸಿತು; ೧೯೮೮ರ ಲೋಕಸಭಾ ಚುನಾವಣೆಯಲ್ಲಿ 'ಡಿಪಾಸಿಟ್' ಕಳೆದುಕೊಂಡ ಅಭ್ಯರ್ಥಿಗಳಲ್ಲಿ ನನ್ನನ್ನೂ ಒಬ್ಬನನ್ನಾಗಿಸಿತು.

ಇಷ್ಟೆಲ್ಲಾ ನಡೆಯುವಾಗ ರೈತ ಚಳುವಳಿಯ ಮೂಲ ಪ್ರವರ್ತಕರೊಬ್ಬರು ನಿರಾಶೆಯ ನಿಟ್ಟುಸಿರು ಬಿಡುತ್ತಾ ಮೌನಿಯಾಗಿದ್ದರು; ಅವರೇ ಕಡಿದಾಳ್ ಶಾಮಣ್ಣ. ಆ ಚುನಾವಣೆಯುದ್ದಕ್ಕೂ, ಅವರು ತಮ್ಮ ನೋವನ್ನು, ನಿರಾಶೆಯನ್ನು ವ್ಯಕ್ತಪಡಿಸದೆ ಚುನಾವಣೆಯಲ್ಲಿ ಭಾಗವಹಿಸಿದರು. ಚುನಾವಣೆಯ ಫಲಿತಾಂಶ ಬಂದಾಗ ಅನೇಕರಿಗೆ ನಿರಾಶೆಯೆನಿಸಿದರೂ ಶಾಮಣ್ಣನವರು ಮಾತ್ರ ನಿರಾಶೆಯನ್ನು

ಬಹಿರಂಗಗೊಳಿಸಲಿಲ್ಲ. ಮೌನವಾಗಿ ನೋವನ್ನು ಅನುಭವಿಸಿದರು. ಅವರಿಗೆ ಚುನಾವಣಾ ಫಲಿತಾಂಶಕ್ಕಿಂತ ಹೆಚ್ಚಾಗಿ, ಮತದಾರರ ಅಭ್ಯರ್ಥಿಗಳು ಗಳಿಸಿದ ಮತಗಳು ಹೆಚ್ಚು ವ್ಯಥೆಯನ್ನುಂಟು ಮಾಡಿರಬೇಕು. ನಮ್ಮ ಜನರ ಬದ್ಧತೆಯ ಬಗೆಗೆ ಸಂಶಯ ಮೂಡಿತು. ಚುನಾವಣೆಯ ನಂತರ ಶಿವಮೊಗ್ಗದಲ್ಲಿ ನಡೆದ 'ಅವಲೋಕನ' ಸಭೆಯಲ್ಲಿ ಈ ವಿಷಯವಾಗಿ ಮಾತನಾಡಿ ತಮ್ಮ ನಿರಾಶೆಯನ್ನು, ನೋವನ್ನು ವ್ಯಕ್ತಪಡಿಸಿದರು ಎಂದು ನನ್ನ ನೆನಪು.

ಕಡಿದಾಳ್ ಶಾಮಣ್ಣನವರು ಜನ ಸಾಮಾನ್ಯರ ಬದುಕನ್ನು, ಅದರಲ್ಲಿಯೂ ಕೃಷಿಕರ, ದಲಿತರ ನೋವು ನಲಿವುಗಳನ್ನು ತಮ್ಮ ನೋವು ನಲಿವೆಂದುಕೊಂಡವರು. ಅವರು ಅದನ್ನು ವ್ಯಕ್ತಪಡಿಸುವ ರೀತಿ ಅವರದೇ ಆದ ವೈಶಿಷ್ಟ್ಯ. ಅವರ ಮಾತುಗಳಲ್ಲಿ ವ್ಯಂಗ್ಯ ಕಂಡರೂ, ಅಲ್ಲಿ ಹುದುಗಿರುವ ನೋವು, ಸಂಕಟ ಮತ್ತು ದಯನೀಯ ಭಾವ ಹೃದಯ ಹಿಂಡುವಂತಹುದು. ಅವರ ನಗುವಿನಲ್ಲಿ ಕಾಣುವ ನೋವು, ಸಂಕಟ ಮತ್ತು ನಿಸ್ಸಹಾಯಕತೆ ಹೃದಯವನ್ನು ಹಿಂಡುವಂತಹುದು.

ರಾಜ್ಯದ ಒಂದು ಪ್ರಬುದ್ಧ, ಪ್ರಬಲ ಸಂಘಟನೆ–ಲಕ್ಷಾಂತರ ಜನರಿಗೆ ಆಸರೆಯಾಗಬೇಕಿದ್ದ, ಆಸರೆಯಾಗಿದ್ದ ಸಂಘಟನೆ–ತನ್ನ ನಾಯಕರ ತಪ್ಪು ಹೆಜ್ಜೆಯಿಂದಾಗಿ ಛಿದ್ರವಾಗಿ ಲಕ್ಷಾಂತರ ರೈತರನ್ನು ನಿಸ್ಸಹಾಯಕತೆಗೆ ದೂಡಿತು. ಇದೆಲ್ಲ ನೆನಪಾದಾಗ ಶ್ರೀ ಶಾಮಣ್ಣ ಮೌನಿಯಾಗುತ್ತಾರೆ. ಅವರ ಹಾಸ್ಯ ತುಂಬಿದ ವ್ಯಂಗ್ಯ ಆತ್ಮಶೋಧಕವಾಗಬೇಕಿತ್ತು. ನೋವು ತುಂಬಿದ ದನಿ ಎಚ್ಚರಿಕೆಯಾಗಬೇಕಿತ್ತು. ಕಣ್ಣೆದುರು ನಡೆದ ದುರಂತವನ್ನು ನೆನೆಸಿಕೊಳ್ಳುವಾಗ ಮರಗಟ್ಟಿದ ಮನಸ್ಸನ್ನು ನೋಡಲಾಗದು.

ಮೈಸೂರಿನ ಕಾಫಿಹೌಸ್‌ನಲ್ಲಿ ತನ್ನ ಸುತ್ತ ಮುತ್ತಲಿದ್ದವರನ್ನು ನಗಿಸಿ ತಾನೂ ನಗುತ್ತಿದ್ದ ಆಹ್ಲಾದಕರ ದಿನಗಳಿಗೂ, ಅನಂತರ ಕೃಷಿಗೆ ಕೈಹಾಕಿ ಕೃಷಿಕರ ಸಮಸ್ಯೆಗಳನ್ನು ಬಗೆಹರಿಸಿಲು ರೈತ ಚಳುವಳಿ ಪ್ರಾರಂಭಿಸಿ, ಅವುಗಳಿಗೆ ಉತ್ತರ ಹುಡುಕುತ್ತಾ ಫಲ ಸಿಗದೆ, ಸಿಕ್ಕಿ ಕೈ ಜಾರಿ ಹೋದುದನ್ನು, ಮತ್ತೆ ಅದನ್ನು ತಿರುಗಿ ಗಳಿಸುವ ದಾರಿ ಹುಡುಕುತ್ತಾ ಕೆಲ ಸಾರಿ ಮೌನವಾಗಿ, ತನ್ನಷ್ಟಕ್ಕೆ ತಾನೇ ನಗುತ್ತಾ, ಬೈರಾಗಿಯಂತೆ ಒಮ್ಮೆ ನೆಲ ಮತ್ತೊಮ್ಮೆ ಆಕಾಶ ನೋಡುತ್ತಾ ಸಾಗುತ್ತಿರುವ ಕಡಿದಾಳ್ ಶಾಮಣ್ಣನಿಗೆ ಉತ್ತರ ಸಿಗ್ಗೆ ನಮಗೆಲ್ಲರಿಗೂ ಖುಷಿ ಮತ್ತು ಆನಂದ. ಇಲ್ಲದೆ ಹೋದರೆ......

ಸಿದ್ಧಾಂತದ ಬಗ್ಗೆ ನಿಷ್ಠೆ, ರೈತರ ಪರ ಕಾಳಜಿ

ಬಿ.ಎಸ್. ವಿಶ್ವನಾಥ್

ಕಡಿದಾಳ್ ಶಾಮಣ್ಣರವರು ರೈತ ಸಮುದಾಯದ ನಾಯಕರು. ಅವರನ್ನು ನಾಯಕತ್ವ ಅರಸಿಕೊಂಡು ಬಂದುದು. ಅವರು ವೇದಿಕೆ ಹತ್ತಿ ಭಾಷಣ ಮಾಡಿ ನಾಯಕರಾದವರಲ್ಲ. ಜನಸಮೂಹದಿಂದ ಮೇಲೆದ್ದು, ಜನರ ನಾಡಿಮಿಡಿತವನ್ನು ಅರಿತವರಾಗಿದ್ದು, ಜನತೆಗಾಗಿ ತಮ್ಮನ್ನು ಸಮರ್ಪಿಸಿಕೊಂಡ ಮಹಾನ್ ನಾಯಕ ಕಡಿದಾಳ್ ಶಾಮಣ್ಣನವರು. ತಮಗೆ ಪ್ರಿಯವಾದ ವಿಷಯವನ್ನು ಗಂಭೀರ ಚಿಂತನೆಯ ಒರೆಗಲ್ಲಿಗೆ ಹಚ್ಚಿ, ಅದರ ಸಾಧನೆಗೆ ನಿರಂತರ ಹೋರಾಟವನ್ನು ಮಾಡಿ ಕೊಂಡು ಬಂದವರು. ತಾವು ನಂಬಿದ, ಒಪ್ಪಿಕೊಂಡ, ಅಪ್ಪಿಕೊಂಡ ಸಿದ್ಧಾಂತವನ್ನು ಕೈಬಿಡದೆ, ಬದಲಿಸಿ ಕೊಳ್ಳದೆ, ಪ್ರತಿಪಾದಿಸುತ್ತಾ ಬಂದವರು. ಕಡಿದಾಳ್ ಶಾಮಣ್ಣರವರಿಗೆ ರೈತರ ಬಗ್ಗೆ ಅಪಾರ ಕಾಳಜಿ. ಮಣ್ಣಿನ ವಾಸನೆಯನ್ನು ಆಘ್ರಾಣಿಸಿದ್ದ ಅವರು ಅದರಲ್ಲೇ ಮಿಂದು, ತೊಯ್ದು ಮೇಲೇಳುವ, ಮುಳುಗುವ ರೈತರನ್ನು ಸಂರಕ್ಷಿಸುವ ದೃಢ ಸಂಕಲ್ಪ ಅವರದು. ಜಾತ್ಯಾತೀತ ಸಮಾಜ ನಿರ್ಮಾಣಕ್ಕೆ ಅವರ ಕೊಡುಗೆ ಅಪಾರವಾದುದು.

ಮಲೆನಾಡಿನ ಹಳ್ಳಿ ಕಡಿದಾಳಿನಲ್ಲಿ ಹುಟ್ಟಿದ ಶಾಮಣ್ಣ ತಮ್ಮ ಹಳ್ಳಿಯನ್ನು ಹಸಿರಿನಿಂದ ಕಂಗೊಳಿಸುವಂತೆ ಮಾಡಿರುವುದು ಅವರ ಹೆಗ್ಗಳಿಕೆ. ಶಾಮಣ್ಣರವರಿಗೆ ಶಾಂತವೇರಿ ಗೋಪಾಲಗೌಡರು, ರಾಮಮನೋಹರ ಲೋಹಿಯಾರವರು ತುಂಬು ಆಪ್ತರು. ಗಾಂಧೀಜಿಯವರ ತತ್ವ ಪ್ರಚಾರಕರಾಗಿ ಹಿಂಸೆಯನ್ನು ಎಂದೂ ಪ್ರತಿಪಾದಿಸದೆ ವೈಚಾರಿಕ ನಿಲುವನ್ನು ಬಿಟ್ಟುಕೊಡದೆ ಹಲವಾರು ಚಳುವಳಿಗಳನ್ನು ಜೀವಂತವಾಗಿ ಕಟ್ಟಿ, ಸಮುದಾಯದ ಜೊತೆ ಒಂದಾಗಿ ಬಾಳುವುದು ಸಾಧ್ಯ ಎಂಬುದನ್ನು ತೋರಿಸಿಕೊಟ್ಟಿದ್ದಾರೆ.

ಕಡಿದಾಳ್ ಶಾಮಣ್ಣರವರು ರಾಜ್ಯದ ಎಲ್ಲಾ ದಿಕ್ಕುಗಳಲ್ಲೂ ಸಂಚರಿಸಿ, ಸಮುದಾಯದಲ್ಲಿ ತುಳಿತಕ್ಕೆ ಒಳಗಾದವರ ಧ್ವನಿಯಾಗಿ ಅವರ ಕಷ್ಟ, ದುಃಖ-ದುಮ್ಮಾನಗಳಲ್ಲಿ ಪಾಲ್ಗೊಂಡಿದ್ದಾರೆ. ಅದರ ಪರಿಣಾಮವಾಗಿ ಕಡಿದಾಳ್ ಶಾಮಣ್ಣ ಎಲ್ಲರ ಆತ್ಮೀಯರೆನಿಸಿಕೊಂಡಿದ್ದಾರೆ. ಎಲ್ಲರೊಳಗೊಬ್ಬರಾಗಿದ್ದಾರೆ. ಮೂಲತಃ ಶಾಮಣ್ಣ ಆದರ್ಶ ಮೇಷ್ಟ್ರು. ನಾನು ಅವರನ್ನು ಮೊದಲು ಭೇಟಿಯಾದುದು ಅವರು "ಮೇಷ್ಟ್ರು" ಆಗಿದ್ದಾಗಲೇ.

ಸುಮಾರು ಅರ್ಧ ಶತಮಾನದ ಹಿಂದೆ ನನ್ನ ಪದವಿ ವಿದ್ಯಾಭ್ಯಾಸದ ನಂತರ ತೀರ್ಥಹಳ್ಳಿಗೆ ಬಂದೆ. ತೀರ್ಥಹಳ್ಳಿಯಲ್ಲಿ ನಮ್ಮ ತಂದೆಯವರ ಕೃಷಿ ಚಟುವಟಿಕೆಗಳನ್ನು ಗಮನಿಸುತ್ತಿರುವ ತರುಣದಲ್ಲೇ ನನಗೊಂದು ಮಹದವಕಾಶ ಲಭ್ಯವಾಯಿತು. ದೆಹಲಿಯ ರಾಷ್ಟ್ರೀಯ ಸಹಕಾರಿ ಯೂನಿಯನ್ ಜಪಾನಿನಲ್ಲಿ ಮೂರು ತಿಂಗಳ ಕೃಷಿ ಅಧ್ಯಯನ ಪ್ರವಾಸಕ್ಕೆ ನನ್ನನ್ನು ಆಯ್ಕೆ ಮಾಡಿತು. ಬಹಳ ಸಂತೋಷದಿಂದ, ಉತ್ಸಾಹದಿಂದ ಜಪಾನ್ ಪ್ರವಾಸ ಕೈಗೊಂಡೆ. ಮೂರು ತಿಂಗಳ ಅಧ್ಯಯನ ಮುಗಿಸಿ, ವಾಪಸ್ಸಾಗುವ ವೇಳೆಗೆ ಕಡಿದಾಳ್ ಶಾಮಣ್ಣರವರು ಬಸವಾನಿ ಪ್ರೌಢಶಾಲೆಯ ಮುಖ್ಯೋಪಾಧ್ಯಾಯರಾಗಿದ್ದರು. ಶಾಮಣ್ಣರವರ ಬಗ್ಗೆ ಜನತೆ ಅತ್ಯಂತ ಗೌರವದಿಂದ ಮಾತನಾಡುವುದನ್ನು ಕೇಳಿದ್ದೆ. ಅದರ ಪರಿಣಾಮವಾಗಿ ಶಾಮಣ್ಣರವರ ಬಗ್ಗೆ ನನ್ನಲ್ಲೂ ತುಂಬು ಗೌರವದ ಭಾವನೆ ತುಂಬಿ ಬಂದಿತು. ಜೊತೆಗೆ, ಅವರ ಬಗ್ಗೆ ಗೌರವ ಮಿಶ್ರಿತ ಭಯವೂ ಉಂಟಾಯಿತು. ಅವರ ಶಿಸ್ತು, ಸಂಯಮ, ಸೇವಾಮನೋಭಾವ, ಗ್ರಾಮೀಣ ಪ್ರದೇಶದ ಬಗೆಗಿನ ಕಾಳಜಿ, ರೈತರ ಬಗೆಗಿನ ಆಸ್ತೆ, ಮೊದಲಾದವು ಅವರ ಬಗ್ಗೆ ನಮಗೆ ಗೌರವ ಮಿಶ್ರಿತ ಭಯ ಉಂಟಾಗಲು ಕಾರಣವಾಯಿತು. ಇದೇ ಸಂದರ್ಭದಲ್ಲಿ ನನಗೆ ಆಶ್ಚರ್ಯ ಮತ್ತು ಆನಂದ ಉಂಟಾಗುವ ಘಟನೆ ನಡೆಯಿತು.

ಕಡಿದಾಳ್ ಶಾಮಣ್ಣರವರು ಅವರು ಮುಖ್ಯೋಪಾಧ್ಯಾಯರಾಗಿದ್ದ ಶಾಲೆಯ ವಿದ್ಯಾರ್ಥಿಗಳನ್ನುದ್ದೇಶಿಸಿ ನನ್ನ ಜಪಾನ್ ಅನುಭವದ ಬಗ್ಗೆ ಮಾತನಾಡಲು ಆಹ್ವಾನಿಸಿದರು. ನನಗೆ ಭಯವೂ, ಸಂತೋಷವೂ ಉಂಟಾಯಿತು. ವಿದ್ಯಾರ್ಥಿ

ಗಳನ್ನುದ್ದೇಶಿಸಿ ಮಾತನಾಡಿದೆ. ನನ್ನ ಅನುಭವದ ವಿವರಣೆ ಶಾಮಣ್ಣರವರ ಮೇಲೆ ತುಂಬಾ ಪ್ರಭಾವ ಬೀರಿರಬಹುದು. ನನ್ನ ಮಾತಿನ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು. ಅದು ಹತ್ತಿರದಿಂದ ಮೊದಲ ಬಾರಿಗೆ ಶಾಮಣ್ಣರವರನ್ನು ನೋಡಿದ ಪ್ರಕರಣ. ಅಲ್ಲಿಂದಾಚೆಗೆ ಅವರ ಬಗ್ಗೆ, ಅವರ ಚಟುವಟಿಕೆಯ ಬಗ್ಗೆ ದೂರದಿಂದ ಕೇಳುತ್ತಿದ್ದೆ, ನೋಡುತ್ತಿದ್ದೆ.

ಕಾಲ ಉರುಳಿದಂತೆ ಹಲವು ವರ್ಷಗಳ ನಂತರ, ಇಂದಿನ ಕರ್ನಾಟಕ ರಾಜ್ಯ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕಿನ ಅಧ್ಯಕ್ಷನಾಗಿ ಆಯ್ಕೆಯಾದೆ. ಅಂತಹ ಸಂದರ್ಭವೊಂದರಲ್ಲಿ ಶಾಮಣ್ಣರವರಿಂದ ದೂರವಾಣಿ ಕರೆ ಬಂತು. ಅವರು ಬೆಂಗಳೂರಿಗೆ ಬಂದು ನನ್ನನ್ನು ಭೇಟಿ ಮಾಡುವ ಅಪೇಕ್ಷೆಯನ್ನು ವ್ಯಕ್ತ ಮಾಡಿದರು. ನನಗೆ ಸ್ವಲ್ಪ ಭಯವೂ ಆಯಿತು. ಏಕೆಂದರೆ, ನಾನು ಬ್ಯಾಂಕಿನ ಅಧ್ಯಕ್ಷನಾಗಿ ಏನಾದರೂ ತಪ್ಪೆಸಗಿರಬಹುದಾ, ಅದರ ಬಗ್ಗೆ ಪ್ರಶ್ನಿಸಲು ಬರುತ್ತಿದ್ದಾರಾ ಎನಿಸಿತು. ಏಕೆಂದರೆ, ವಾಸ್ತವಿಕವಾಗಿ ಶಾಮಣ್ಣರವರು ನೇರ, ದಿಟ್ಟ, ಮಾತುಗಾರರು. ಯಾರ ಮುಲಾಜಿಗೂ ಒಳಗಾಗದವರು. ಹಾಗಾಗಿ ಅಂತಹ ಭಾವನೆ ಬಂದುದುಂಟು.

ಒಂದು ದಿನ ಬ್ಯಾಂಕಿಗೆ ಶಾಮಣ್ಣರವರು ಬಂದರು. ಬ್ಯಾಂಕಿನ ಕಾರ್ಯಚಟುವಟಿಕೆಗಳನ್ನು ಕೇಳಿ ತಿಳಿದುಕೊಂಡರು. ನಂತರ ಅತ್ಯುತ್ತಮವಾದ ದೀರ್ಘಕಾಲಿಕ ಪ್ರಭಾವ ಬೀರಬಲ್ಲ ರೈತರಿಗೆ ವಿಶೇಷ ಸೌಲಭ್ಯ ಉಂಟು ಮಾಡುವ ಸಲಹೆಯೊಂದನ್ನು ನೀಡಿದರು. ಶಾಮಣ್ಣರವರ ಸಲಹೆ ನನಗೆ ಅತ್ಯಂತ ಸಂತೋಷವೆನಿಸಿತು. ಅವರ ದೂರದೃಷ್ಟಿ, ರೈತರ ಪರ ಕಾಳಜಿ ಬಗ್ಗೆ ತುಂಬು ಮೆಚ್ಚುಗೆಯಾಯಿತು.

ಬ್ಯಾಂಕಿನ ಮೂಲಕ ಗ್ರಾಮೀಣ ಪ್ರದೇಶದ ಜನ ಸಮುದಾಯಕ್ಕೆ ಅನುಕೂಲವಾಗುವಂತೆ ಶೌಚಾಲಯಗಳನ್ನು ನಿರ್ಮಿಸುವ ಬೃಹತ್ ಯೋಜನೆಯನ್ನು ಹಮ್ಮಿಕೊಳ್ಳಲು ಅವರು ಸಲಹೆ ಮಾಡಿದರು. ಅವರ ಸಲಹೆಯನ್ನು ಗಂಭೀರವಾಗಿ ಪರಿಗಣಿಸಿದ ನಾನು ಆ ದಿಸೆಯಲ್ಲಿ ಬ್ಯಾಂಕಿನ ಮೂಲಕ ಯೋಜನೆಗಳನ್ನು ರೂಪಿಸಲು ಪ್ರಯತ್ನ ಮಾಡಿದುದುಂಟು.

ಇಂದು ನಾವು ಗ್ರಾಮೀಣ ಪ್ರದೇಶದ ಜನ ಸಮುದಾಯಕ್ಕೆ ಶೌಚಾಲಯ ನಿರ್ಮಿಸುವ, ಶುದ್ಧ ಕುಡಿಯುವ ನೀರು ಒದಗಿಸುವ ಬಗ್ಗೆ ಮಾತನಾಡುತ್ತೇವೆ, ಚಿಂತೆ ಮಾಡುತ್ತೇವೆ, ಯೋಜನೆಗಳನ್ನು ರೂಪಿಸಲು ಪ್ರಯತ್ನಿಸುತ್ತೇವೆ. ಆದರೆ, ಅರ್ಧ ಶತಮಾನದ ಹಿಂದೆ ಕಡಿದಾಳ್ ಶಾಮಣ್ಣರವರು ಇಂತಹ ದೂರದೃಷ್ಟಿಯ ಯೋಚನೆಗಳನ್ನು ಜನತೆಯ ಮುಂದೆ, ಸಂಘ-ಸಂಸ್ಥೆಗಳ ಮುಂದೆ ಇಡುತ್ತಿದ್ದರು. ಈ ಅಂಶವೇ ಅವರನ್ನು ನಾಯಕರನ್ನಾಗಿ, ಜನಪ್ರಿಯರನ್ನಾಗಿ, ರೈತ ಬಂಧುವಾಗಿ ಗ್ರಾಮೀಣ ಪ್ರದೇಶದ ಆಶಾಕಿರಣವಾಗಿ ರೂಪಿಸಿದೆ. ಇಳಿ ವಯಸ್ಸಿನಲ್ಲೂ ಅದಮ್ಯ

ಚೇತನವನ್ನು ಹೊಂದಿದ್ದು, ರೈತರ, ಗ್ರಾಮೀಣ ಜನರ ಸೇವೆಗೆ ತಮ್ಮನ್ನು ತಾವು ತೊಡಗಿಸಿಕೊಂಡಿರುವ ಕಡಿದಾಳ್ ಶಾಮಣ್ಣರವರು ನಮಗಾಗಿ, ರೈತರಿಗಾಗಿ, ಗ್ರಾಮೀಣ ಪ್ರದೇಶದ ಜನರಿಗಾಗಿ ಬಹಳ ಕಾಲ ಆರೋಗ್ಯದಿಂದ ಬದುಕಬೇಕು, ಮಾರ್ಗದರ್ಶನ ಮಾಡಬೇಕು ಎಂಬುದೇ ಅವರನ್ನು ಬಲ್ಲವರ ಮಹತ್ವಾಕಾಂಕ್ಷೆ.

ನಮ್ಮ 'ಶ್ಯಾಮದೇವರು'!

ಡಾ. ಹೆಚ್.ಎಸ್. ಈಶ್ವರ್

ಕಡಿದಾಳು ಶ್ಯಾಮಣ್ಣ—ಅರವತ್ತಕ್ಕೂ ಹೆಚ್ಚು ವರ್ಷಗಳ ಪರಿಚಯ, ಸ್ನೇಹ, ಸಂಬಂಧ ಹಾಗೂ ಒಡನಾಟ. ಹಾಗಾದರೂ ಇನ್ನೂ ಒಗಟಾಗಿಯೇ ಉಳಿದು ಬಂದಿರುವ ನಿಗೂಢ ಮನುಷ್ಯ, ಒಂದು ಕೌತುಕ. ಅವರೊಬ್ಬ ಸರಳ ವ್ಯಕ್ತಿ ಆದರೆ ಅವರದು ಸಂಕೀರ್ಣ ವ್ಯಕ್ತಿತ್ವ. ಹಾಸ್ಯದ ಹೊನಲು ಹರಿಸುವ ಅವರಲ್ಲಿ ಗಾಂಭೀರ್ಯಕ್ಕೆ ಕೊರತೆಯಿಲ್ಲ. ಹೊರ ನೋಟಕ್ಕೆ ಎಲ್ಲವನ್ನು ಲಘುವಾಗಿ ಕಾಣುವ ಅವರ ನಡವಳಿಕೆಯ ಹಿಂದೆ ಯಾವತ್ತೂ ಘನ ಉದ್ದೇಶಗಳು ಹುದುಗಿರುತ್ತವೆ ಎನ್ನುವುದು ಸತ್ಯ. ಮಗುವಿನ ಮುಗ್ಧ ಮನಸ್ಸು, ಅಷ್ಟೇ ಕಠೋರವಾದ ನೀತಿ ನಿಲುವುಗಳು. ಸೌಹಾರ್ದತೆಯ ಜೊತೆಯಲ್ಲಿ ಹುದುಗಿಕೊಂಡಿರುವ ಸಾತ್ವಿಕ ಕೋಪ. ಹೀಗೆ ದ್ವಂದ್ವಗಳ ಸಂಗಮವನ್ನು ಶ್ಯಾಮಣ್ಣನಲ್ಲಿ ಕಾಣಬಹುದು. ಈ ಬಗೆಯ ವೈರುಧ್ಯಗಳ ಸಮನ್ವಯ ಪರಿಪೂರ್ಣತೆಯ ಲಕ್ಷಣ ಎನ್ನುವುದು ಓಶೋ (ರಜನೀಶ) ಅಭಿಪ್ರಾಯ. ಬಹುಶಃ ಅವರ ಈ ಪರಿಪೂರ್ಣ ವ್ಯಕ್ತಿತ್ವವೇ ಅವರ ನಿಗೂಢತೆಯ ಕಾರಣ ಇರಲೂಬಹುದು.

ಶ್ಯಾಮಣ್ಣ ಮತ್ತು ನಾನು ಹತ್ತಿರದ ಊರುಗಳಲ್ಲಿ ಹುಟ್ಟಿ ಬೆಳೆದಿದ್ದು, ನಮ್ಮ ಕುಟುಂಬಗಳ ನಡುವೆ ಸಂಬಂಧಗಳು ಇದ್ದಾಗ್ಯೂ ನಾವು ಮೊದಲು ಪರಸ್ಪರ ಭೆಟ್ಟಿ ಆದದ್ದು ಮೈಸೂರಿನಲ್ಲಿ ನಮ್ಮ ಕಾಲೇಜಿನ ಓದಿನ ದಿನಗಳಲ್ಲಿ ಎನ್ನುವುದು ನನ್ನ ನೆನಪು. ಆಗ ನಾನು ಮಹಾರಾಜಾ ಕಾಲೇಜಿನಲ್ಲಿ ಆನರ್ಸ್ ಓದುತ್ತಿದ್ದು, ಅದೇ ಕಾಲೇಜಿನ ಹಾಸ್ಟೆಲ್‌ನಲ್ಲಿ ವಿದ್ಯಾರ್ಥಿಯಾಗಿದ್ದೆ. ಆ ಸಮಯಕ್ಕೆ ಶ್ಯಾಮಣ್ಣ ಶಿವಮೊಗ್ಗದಲ್ಲಿ ಅವರ ಇಂಟರ್‌ಮೀಡಿಯಟ್ ಕೋರ್ಸು ಮುಗಿಸಿ, ಯಾವುದೋ ಕೆಲವು ವಿಷಯಗಳಲ್ಲಿ ಪೂರಕ ಪರೀಕ್ಷೆಗಳ ತಯಾರಿಗೆ ಮೈಸೂರಿಗೆ ಬಂದು ನಮ್ಮ ಹಾಸ್ಟೆಲಿನ ಹತ್ತಿರದ ಮನೆಯೊಂದರಲ್ಲಿ ವಾಸವಾಗಿದ್ದರು. ಅವರ ಸೋದರ ಸಂಬಂಧಿಗಳಾಗಿದ್ದ ಕಡಿದಾಳು ಶ್ರೀಕಂಠ ಮತ್ತು ಕಡಿದಾಳು ರಾಮಪ್ಪ ಕೂಡಾ ನನ್ನ ಹಾಸ್ಟೆಲ್‌ನಲ್ಲಿ ಇದ್ದು, ಅವರು ನನಗೆ ಆತ್ಮೀಯ ಸ್ನೇಹಿತರಾಗಿದ್ದರು. ತಮ್ಮ ಸೋದರರನ್ನು ನೋಡಲು ಬರುತ್ತಿದ್ದ ಶ್ಯಾಮಣ್ಣ ನನಗೆ ಹಾಗೆ ಪರಿಚಯವಾದರು, ಸ್ನೇಹಿತರಾದರು–ಬಂಧುತ್ವವನ್ನು ಮೀರಿ ಆತ್ಮೀಯರೂ ಆದರು. ಮುಂದೆ ಅವರು ಹಲವು ವರ್ಷಗಳ ಕಾಲ ಮೈಸೂರಿನಲ್ಲಿಯೇ ಓದು ಮತ್ತು ಉದ್ಯೋಗ ನಿಮಿತ್ತ ಉಳಿದುಕೊಂಡರು. ಆ ದಿನಗಳಲ್ಲಿ ನಮ್ಮ ಒಡನಾಟದ ಸವಿನೆನಪುಗಳು ಯಾವತ್ತೂ ನನ್ನಲ್ಲಿ ಉಳಿದುಕೊಂಡು ಬಂದಿವೆ.

ಶ್ಯಾಮಣ್ಣ ಮೈಸೂರಿಗೆ ಬಂದ ಸಮಯಕ್ಕೆ ಅವರ ಶಿವಮೊಗ್ಗದ ಸಹಪಾಠಿಯಾಗಿದ್ದ ತೇಜಸ್ವಿ ಕೂಡಾ ಅಲ್ಲಿಗೆ ಬಂದರು. ಆ ಕಾಲಕ್ಕೆ ತೇಜಸ್ವಿ–ಶ್ಯಾಮಣ್ಣ ಜೋಡಿ ಕಾಲೇಜಿನ ತುಂಬಾ ಮನೆಮಾತು. ಆ ಜೋಡಿಗೆ ಹತ್ತಿರವಾಗಿದ್ದವರು ಕೋಣಂದೂರು ಲಿಂಗಪ್ಪನವರು. ನಾನು ಆ ಗುಂಪಿನ ಭಾಗವಾಗಿರದಿದ್ದರೂ, ಅವರ ಚಟುವಟಿಕೆಗಳನ್ನು ಹತ್ತಿರದಿಂದ ನೋಡುವ, ಅವರ ಮಾತುಕತೆಗಳಲ್ಲಿ ಸೇರುವ ಅವಕಾಶಗಳಂತೂ ಇರುತ್ತಿದ್ದುವು. ತೇಜಸ್ವಿಯವರಂತೂ ಯಾವುದೇ ದಯ ದಾಕ್ಷಿಣ್ಯಗಳನ್ನು ತೋರದೆ, 'ರೀ ಹಲ್ಕಾಗಳಿರಾ, ಅದೇನು ಓದು ಓದು ಅಂತ ಯಾವಾಗಲೂ ಸಾಯ್ತಿರಾ, ಬನ್ರಿ ಇಲ್ಲಿ' ಎಂದು ರೂಮು ಎದುರು ಕೂಗುತ್ತಿದ್ದರು; ಅವರಿಗೆ ಹೆದರಿ ಜೊತೆಯಲ್ಲಿ ಹೋಗುವುದು ಅನಿವಾರ್ಯವಾಗುತ್ತಿತ್ತು. ಅಂದಿನ ಆ ಸಂದರ್ಭಗಳು ಇಂದಿಗೂ ಉಲ್ಲಾಸ ಕೊಡುತ್ತವೆ. ಅವರು ಹಮ್ಮಿಕೊಳ್ಳುತ್ತಿದ್ದ ಕಾರ್ಯಕ್ರಮಗಳು ವಿನೂತನ ಬಗೆಯವು. ಅಂಥ ಒಂದು ಯೋಜನೆ ಬೀದಿ ನಾಯಿ ಮರಿಗಳಿಗೆ ವಸತಿ ಕಲ್ಪಿಸುವುದು. ಅನಾಥ ನಾಯಿ ಮರಿಗಳನ್ನು ಯಾವುದೋ ಶ್ರೀಮಂತರ ಮನೆಯ ಗೇಟ್ ಒಳಗಡೆ ಬಿಟ್ಟು ಬರುವುದು. ಅವುಗಳ ಅದೃಷ್ಟ ಚೆನ್ನಾಗಿದ್ದರೆ ಆ ಮನೆಯವರು ಅವುಗಳಿಗೆ ಕರುಣೆ ತೋರಿ ಅಲ್ಲಿಯೇ ಸಾಕಿಕೊಂಡಾರು ಎನ್ನುವುದು ಉದ್ದೇಶ.

ಆ ದಿನಗಳನ್ನು ನೆನಪಿಸಿಕೊಂಡಾಗ ಶ್ಯಾಮಣ್ಣ ಅವರ ಹಲವು ಹಾಸ್ಯ ಪ್ರಸಂಗಗಳು ತೆರೆದುಕೊಳ್ಳುತ್ತಾ ಹೋಗುತ್ತವೆ. ಒಂದು ಸಂದರ್ಭದಲ್ಲಿ ನಾನು ಫ್ಲೂ ಜ್ವರದಿಂದ ನರಳುತ್ತಿದ್ದು, ನನಗೆ ಹಾಸ್ಟೆಲಿನಲ್ಲಿ ರವೆ ಗಂಜಿ ಕೊಡುವ ವ್ಯವಸ್ಥೆ ಇತ್ತು. ನನಗೆ ಅದು ಇಷ್ಟವಾಗುತ್ತಿರಲಿಲ್ಲ. ಒಮ್ಮೆ ಶ್ಯಾಮಣ್ಣ ನನ್ನನ್ನು ನೋಡಲು ಬಂದಾಗ ಅವರಿಗೆ ನನ್ನ ಕಷ್ಟ ಹೇಳಿದೆ. ಅದಕ್ಕೆ ಅವರೇನೂ ಪರಿಹಾರ ಕೊಡಲಿಲ್ಲ. ಬದಲಿಗೆ ನೀವು ಗಂಜಿ ಏನು ಮಾಡುತ್ತೀರಿ ಎಂದು ವಿಚಾರಿಸಿದರು. ಅದನ್ನು ವಾಪಾಸು ಕಳಿಸುತ್ತಿದ್ದೇನೆಂದು ನಾನು ಹೇಳಿದೆ. "ಅಯ್ಯೋ ಮಾರಾಯ್ರ, ವಾಪಾಸು ಯಾಕೆ ಕಳ್ಸತೀರ. ಹಾಗೇ ಇಟ್ಟಿರಿ. ಅದನ್ನು ಉಪಯೋಗಿಸ್ಕೋಣ್ರಿ" ಅಂತ ಹೇಳಿ ಹೋದವರು, ಮಾರನೆಯ ದಿನ ಗಂಜಿ ಬರುವ ಸಮಯಕ್ಕೆ ಒಂದು ಪೊಟ್ಟಣ ಸಕ್ಕರೆಯೊಂದಿಗೆ ಹಾಜರಾದರು. ಗಂಜಿಗೆ ಜಾಸ್ತಿ ಪ್ರಮಾಣದ ಸಕ್ಕರೆ ಸೇರಿಸಿ, ಪೂರ್ತಿ ಗಂಜಿಯನ್ನು ಸಂತೋಷದಿಂದ ಸವಿದರು. ಈ ಕಾರ್ಯಕ್ರಮ ನನ್ನ ಜ್ವರ ವಾಸಿಯಾಗುವವರೆಗೂ ನಡೆದುಕೊಂಡು ಹೋಯಿತು ಎಂದು ನನ್ನ ನೆನಪು. ನನಗೆ ಜ್ವರ ಬಿಟ್ಟು ಗಂಜಿ ಪೂರೈಕೆ ನಿಂತು ಹೋದದ್ದು ಶ್ಯಾಮಣ್ಣಗೆ ಬೇಸರ ತಂದಿದ್ದಿರಬಹುದು ಎನ್ನುವುದು ನನ್ನ ಈಗಿನ ಆಲೋಚನೆ!

ಶ್ಯಾಮಣ್ಣ ಹಲ್ಲುಗಳ ಮೇಲೆ ಬೆರಳು ಕುಟ್ಟಿ ಸಂಗೀತ ಸೃಷ್ಟಿಸುವ ಅಪೂರ್ವ ಕುಶಲತೆಯನ್ನು ರೂಢಿಸಿಕೊಂಡಿದ್ದರು ಮತ್ತು ಅವರ ಈ ಪ್ರದರ್ಶನ ಮೈಸೂರಿನ ಕಾಲೇಜುಗಳಲ್ಲಿ ತುಂಬಾ ಜನಪ್ರಿಯವಾಗಿತ್ತು. ಯುವರಾಜ ಕಾಲೇಜಿನ ಪ್ರಿನ್ಸಿಪಾಲರಾಗಿದ್ದ ಡಾ. ಸೀಬಯ್ಯನವರು ಅದಕ್ಕೆ 'ದಂತವಾದ್ಯ' ಎಂದು ನಾಮಕರಣ ಮಾಡಿ, ಶ್ಯಾಮಣ್ಣನಿಗೆ 'ದಂತವಾದ್ಯ ಪ್ರವೀಣ' ಎಂಬ ಬಿರುದನ್ನು ಘೋಷಿಸಿದ್ದರು. ಹಾಗಾಗಿ ಮೈಸೂರಿನ ಕಾಲೇಜುಗಳ ಕಾರ್ಯಕ್ರಮ ನಿಯೋಜಕರು ಶ್ಯಾಮಣ್ಣನಿಗೆ ಮುಗಿಬೀಳುತ್ತಿದ್ದರು. ಶ್ಯಾಮಣ್ಣನೂ ಅಷ್ಟೇ ಉತ್ಸಾಹದಿಂದ ಆ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ಚಪ್ಪಾಳೆ ಗಿಟ್ಟಿಸುತ್ತಿದ್ದರು. ವಿಶೇಷ ಅತಿಥಿಯಾಗಿ ಆಮಂತ್ರಿತರಾದ ಅವರಿಗೆ ಒಳ್ಳೆ ತಿಂಡಿ ಪಾನೀಯಗಳು ಸಿಕ್ಕುತ್ತಿದ್ದುವು ಎಂಬ ಅವರ ಉತ್ಸಾಹದ ಹಿಂದಿನ ನಿಗೂಢ ರಹಸ್ಯವನ್ನು ಅವರೇ ತಮ್ಮ ಆಪ್ತ ವಲಯಕ್ಕೆ ಬಯಲು ಮಾಡಿದ್ದರು.

ಹಾಸ್ಯ ಪ್ರವೃತ್ತಿ ಶ್ಯಾಮಣ್ಣನ ಬದುಕಿನ 'ಹಾಲ್‌ಮಾರ್ಕ್'. ಇವುಗಳಲ್ಲಿ ಬಹುಪಾಲು ಜೋಕ್‌ಗಳು ಅವರಿಗೇ ಸಂಬಂಧಿಸಿದವು. ಉದಾಹರಣೆಯಾಗಿ ಅವರೇ ಹೇಳುವ ಅಂತ ಒಂದು ಜೋಕ್‌ನ್ನು ಇಲ್ಲಿ ನೆನಪಿಸಿಕೊಳ್ಳಬಹುದು. ಅವರು ಬಿ.ಎ. ಪರೀಕ್ಷೆಯಲ್ಲಿ ಎರಡು ವಿಷಯಗಳಲ್ಲಿ ಅನುತ್ತೀರ್ಣರಾಗಿದ್ದ ಸಂದರ್ಭ. ಅವುಗಳ ಪೂರಕ ಪರೀಕ್ಷೆ ತೆಗೆದುಕೊಳ್ಳಬೇಕಿತ್ತು. ಎರಡು ವಿಷಯಗಳ ಪರೀಕ್ಷೆಗಳನ್ನು ಒಂದೇ ಬಾರಿಗೆ

ತೆಗೆದುಕೊಳ್ಳಬೇಕೋ ಅಥವಾ ಒಂದೊಂದೇ ವಿಷಯಗಳನ್ನು ಎರಡು ಬಾರಿ ತೆಗೆದುಕೊಳ್ಳಬೇಕೋ ಎನ್ನುವ ಗೊಂದಲ ಅವರನ್ನು ಕಾಡುತ್ತಿತ್ತು. ತಮ್ಮ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಲು ಅವರು ತಮ್ಮ ನೆಚ್ಚಿನ ಗುರುಗಳಾಗಿದ್ದ ಪ್ರೊ. ಪರಮೇಶ್ವರ ಭಟ್ಟರ ಬಳಿ ಹೋಗಿ, "ಸಾರ್, ಒಂದಕ್ಕೆ ಕುಳಿತುಕೊಳ್ಳಲೋ ಅಥವ ಎರಡಕ್ಕೆ ಕುಳಿತುಕೊಳ್ಳಲೋ?" ಎಂದು ಅವರ ಸಲಹೆ ಕೇಳಿದರು. ಅದಕ್ಕೆ ಪ್ರೊ ಭಟ್ಟರು ಹೇಳಿದರಂತೆ, "ಒಂದಕ್ಕಾದರೆ ನಿಂತುಕೋ, ಎರಡಕ್ಕಾದರೆ ಕುಳಿತುಕೋ." ಇದನ್ನು ವಾಸ್ತವವಾಗಿ ಪ್ರೊ. ಭಟ್ಟರೇ ಹೇಳಿದರೋ ಅಥವ ಶ್ಯಾಮಣ್ಣ ಸೃಷ್ಟಿಸಿಕೊಂಡು ಹೇಳಿದರೋ ಗೊತ್ತಿಲ್ಲ! ಪ್ರೊ. ಭಟ್ಟರು ನನಗೂ ಗುರುಗಳಾಗಿದ್ದರು. ಅವರನ್ನು ಹತ್ತಿರದಿಂದ ಬಲ್ಲ ನನಗೆ ಅವರು ಈ ಮಾತುಗಳನ್ನು ಹೇಳಿದ್ದರೂ ಆಶ್ಚರ್ಯ ಎನ್ನಿಸುವುದಿಲ್ಲ.

ಹೀಗೆ ಶ್ಯಾಮಣ್ಣನ ಬಗೆಗಿನ ವಿನೋದ ಪ್ರಸಂಗಗಳನ್ನು ಪಟ್ಟಿ ಮಾಡುತ್ತಾ ಹೋದರೆ ಅದಕ್ಕೆ ಕೊನೆ ಇರುವುದಿಲ್ಲ. ಆದರೆ ಅವರ ಈ ತಮಾಷೆಯ ಮುಖ ಕೆಲವೊಮ್ಮೆ ಅವರ ಗಂಭೀರ ಹಾಗೂ ಮಹತ್ವಪೂರ್ಣ ವ್ಯಕ್ತಿತ್ವವನ್ನು ಮುಚ್ಚಿ ಹಾಕುವ ಅಪಾಯದ ಕಾರಣ ಅದನ್ನು ಇಲ್ಲಿ ವಿಸ್ತರಿಸುವುದಿಲ್ಲ. ವಾಸ್ತವದಲ್ಲಿ ಶ್ಯಾಮಣ್ಣ ಒಬ್ಬ ಗಹನವಾದ ವ್ಯಕ್ತಿ.

ಬಹುಮುಖ ಪ್ರತಿಭಾವಂತ. ಸಂಗೀತಗಾರ, ಸಾಹಿತ್ಯಾಸಕ್ತ, ಬರಹಗಾರ, ಛಾಯಾಚಿತ್ರಗ್ರಾಹಕ, ಮೆಕ್ಯಾನಿಕ್, ಇನ್ನೂ ಏನೇನೋ ಆಗಿರುವ ಅವರು ಈ ಎಲ್ಲದರಲ್ಲೂ ಸಮಾನ ಆಸಕ್ತಿ ಹೊಂದಿದ್ದು, ಸದಾ ಅವುಗಳಲ್ಲಿ ತಮ್ಮ ಆನಂದವನ್ನು ಅನುಭವಿಸುತ್ತಾರೆ. ಇವು ಅವರ ಹವ್ಯಾಸಗಳು ಮಾತ್ರ. ಶ್ಯಾಮಣ್ಣನವರ ಕಾರ್ಯಕ್ಷೇತ್ರಗಳ ವ್ಯಾಪ್ತಿ ಇನ್ನೂ ವಿಶಾಲವಾದದ್ದು. ಆರಂಭದಲ್ಲಿ ಅವರೊಬ್ಬ ಅಧ್ಯಾಪಕ. ಆ ನಂತರದಲ್ಲಿ ಕೃಷಿಕಾರ, ಸಾಮಾಜಿಕ ಕಾರ್ಯಕರ್ತ, ರೈತ ಹೋರಾಟಗಾರ, ವಿವಿಧ ಚಳುವಳಿಗಳಲ್ಲಿ ಸಕ್ರಿಯ ಪಾಲುದಾರ, ಮತ್ತು ಯಾರ ಯಾರದೋ ಕಷ್ಟ ಸುಖಗಳಿಗೆ ಸ್ಪಂದಿಸುವ ಮಾನವೀಯ ವ್ಯಕ್ತಿ. ಈ ಪ್ರತಿ ಕ್ಷೇತ್ರದಲ್ಲೂ ಅವರದು ಸಮರ್ಪಣಾ ಸೇವೆ ಮತ್ತು ಅದರಲ್ಲಿ ಅವರದೇ ಛಾಪು.

ಶ್ಯಾಮಣ್ಣ ಒಬ್ಬ ಸಮಾಜ ವಿಜ್ಞಾನಿ ಎನ್ನುವ ವಿಚಾರ ಅನೇಕರ ಗಮನಕ್ಕೆ ಬಾರದೆ ಇರಬಹುದು. ಶೈಕ್ಷಣಿಕವಾಗಿ ಮತ್ತು ವಾಸ್ತವಿಕ ನೆಲೆಯಲ್ಲಿ ಅವರೊಬ್ಬ ಸಮಾಜ ಶಾಸ್ತ್ರದ ಶ್ರದ್ಧಾವಂತ ವಿದ್ಯಾರ್ಥಿ. ಸಮಾಜಶಾಸ್ತ್ರದಲ್ಲಿ ಮೈಸೂರು ವಿಶ್ವವಿದ್ಯಾಲಯದ ಸ್ನಾತಕೋತ್ತರ ಪದವೀಧರರಾಗಿರುವ ಶ್ಯಾಮಣ್ಣ ಕೇವಲ 'ಆರ್ಮ್‌ಚೇರ್' ವೇದಾಂತಿಯಾಗಿ ಉಳಿಯಲಿಲ್ಲ. ಬದಲಾಗಿ ಸಮಾಜದ ಸಮಸ್ಯೆಗಳನ್ನು, ಆಗುಹೋಗುಗಳನ್ನು ಸೂಕ್ಷ್ಮವಾಗಿ ಗಮನಿಸಿ, ಅವುಗಳ ಬಗ್ಗೆ ಆಳವಾಗಿ ಚಿಂತಿಸಿ, ವಿಶ್ಲೇಷಿಸುವ ಮತ್ತು ಅವುಗಳಿಗೆ ಸಕಾರಾತ್ಮಕವಾಗಿ ಸ್ಪಂದಿಸುವ

ಅವರನ್ನು ಏಕಕಾಲದಲ್ಲಿ ಒಬ್ಬ ವಿಜ್ಞಾನಿಯಾಗಿ ಮತ್ತು ಸಾಮಾಜಿಕ ಚಿಂತಕ ಹಾಗೂ ಕಾರ್ಯಕರ್ತನಾಗಿ ಪರಿಗಣಿಸುವುದು ಸಾಧ್ಯ. ಬದುಕಿನ ಬಹುಪಾಲು ಸಮಯವನ್ನು ರೈತ ಚಳುವಳಿಗಳಲ್ಲಿ ತೊಡಗಿಸಿಕೊಂಡಿರುವ ಶ್ಯಾಮಣ್ಣ ರೈತರ ಸಮಸ್ಯೆಗಳನ್ನು ಆಳವಾಗಿ ಅಭ್ಯಾಸ ಮಾಡಿದ್ದಾರೆ; ಆ ಕುರಿತು ಅಧಿಕಾರಯುತವಾಗಿ ಮಾತನಾಡಬಲ್ಲ ಕೆಲವೇ ಕೆಲವು ಜನರಲ್ಲಿ ಅವರನ್ನು ಗುರುತಿಸಬಹುದು. ಗ್ರಾಮೀಣ ಶೌಚಾಲಯ ವ್ಯವಸ್ಥೆ, ಗ್ರಂಥಾಲಯಗಳ ಬಳಕೆ, ಮೂಢನಂಬಿಕೆಗಳ ನಿವಾರಣೆ, ಸರಳ ವಿವಾಹ ಇಂಥಹ ಹತ್ತು ಹಲವಾರು ವಿಚಾರಗಳು ಅವರ ಕಾರ್ಯಕ್ಷೇತ್ರದ ವ್ಯಾಪ್ತಿಯಲ್ಲಿ ಸೇರಿಕೊಂಡಿವೆ. ಆ ಕುರಿತು ಜನಜಾಗೃತಿ ಮೂಡಿಸುವ ಕಾರ್ಯಕ್ರಮಗಳು ಮತ್ತು ಚಳುವಳಿಗಲ್ಲಿ ತಮ್ಮನ್ನು ಉತ್ಸಾಹದಿಂದ ತೊಡಗಿಸಿಕೊಂಡು ಅದೆಷ್ಟೋ ವರ್ಷಗಳು ದುಡಿಯುತ್ತಾ ಬಂದಿದ್ದಾರೆ. ಈ ದುಡಿಮೆಯ ಹಿಂದೆ ಯಾವುದೇ ಬಗೆಯ ನಿರೀಕ್ಷೆಗಳನ್ನು ಅವರು ಇಟ್ಟುಕೊಂಡಿಲ್ಲ ಎನ್ನುವುದನ್ನು ಅವರನ್ನು ಆತ್ಮೀಯವಾಗಿ ಬಲ್ಲವರೆಲ್ಲರೂ ಬಲ್ಲರು. ಶ್ಯಾಮಣ್ಣ ಅವರದ್ದು ಒಂದು ಬಗೆಯ ಭಗವದ್ಗೀತೆಯಲ್ಲಿ ಕಾಣುವ 'ನಿಷ್ಕಾಮಕರ್ಮ.' ಭಗವದ್ಗೀತೆಯ ಬಗೆಗೆ ಅವರ ವೈಯಕ್ತಿಕ ನಿಲುವು ಏನಾದರೂ ಇರಬಹುದು; ಹಾಗಾದರೂ ಅವರಲ್ಲಿ ಕಾಣುವುದು ಅದೇ ಮನೋಭಾವವನ್ನು ಎನ್ನುವುದು ಮಾತ್ರ ಸತ್ಯ. ಅವರನ್ನು ಅರಿಸಿ ಬಂದ ಹಲವು ಪ್ರಶಸ್ತಿಗಳನ್ನು, ಗೌರವಗಳನ್ನು ತಿರಸ್ಕರಿಸಿರುವುದೇ ಈ ಹೇಳಿಕೆಗೆ ಸಾಕ್ಷಿ.

ಭಾರತ ಸಂವಿಧಾನದ 'ಸಮಾಜವಾದ' ಮತ್ತು 'ಜಾತ್ಯಾತೀತತೆ' ಆಶಯಗಳ ಜೀವಂತ ನಿದರ್ಶನವಾಗಿ ಶ್ಯಾಮಣ್ಣ ಬದುಕಿದ್ದಾರೆ ಎನ್ನುವುದು ಅತಿಶಯೋಕ್ತಿಯ ಮಾತಲ್ಲ. ನನಗೆ ತಿಳಿದಂತೆ ತಮ್ಮ ವಿದ್ಯಾರ್ಥಿ ದಿನಗಳಿಂದಲೇ ಅವರು ಸಮಾಜವಾದದ ತತ್ವಗಳಿಗೆ ಕಟ್ಟುಬಿದ್ದವರು; ಲೋಹಿಯಾ ಪ್ರಭಾವಕ್ಕೆ ಒಳಗಾದವರು. ಅವರು ಕೇವಲ ತಾತ್ವಿಕವಾಗಿ ಸಮಾಜವಾದಿಗಳಾಗಿಲ್ಲ, ದೈನಂದಿನ ಬದುಕಿನ ಆಚರಣೆಗಳಲ್ಲೂ ಸಮಾನತೆಯನ್ನು ಆಚರಿಸುತ್ತಾ ಬಂದಿದ್ದಾರೆ. ಇನ್ನು ಜಾತಿಯ ಸೋಂಕು ಅವರ ಹತ್ತಿರ ಸುಳಿದ ನಿದರ್ಶನಗಳು ಇಲ್ಲವೇ ಇಲ್ಲ. ಜಾತಿಯ ಪ್ರಶ್ನೆ ಬಂದಾಗ ಅವರು ಜಿಗುಪ್ಸೆಯಿಂದ ಮಾತಾಡುತ್ತಾರೆ, ಕೆಂಡಾಮಂಡಲವಾಗುತ್ತಾರೆ. ಚುನಾವಣಾ ರಾಜಕೀಯದ ಎಲ್ಲ ಲೋಪದೋಷಗಳನ್ನು ಒಪ್ಪಿಕೊಳ್ಳುತ್ತಲೇ ಪ್ರಜಾಪ್ರಭುತ್ವದಲ್ಲಿ ಅಚಲವಾದ ವಿಶ್ವಾಸ ಇಟ್ಟುಕೊಂಡಿರುವ ಶ್ಯಾಮಣ್ಣ ಆ ವ್ಯವಸ್ಥೆಗೆ ಒದಗಿಬರುವ ಯಾವುದೇ ಅಡೆತಡೆಗಳಿಗೆ ತಮ್ಮ ತೀವ್ರ ಪ್ರತಿಭಟನೆಯನ್ನು ದಾಖಲಿಸುತ್ತಲೇ ಬಂದಿದ್ದಾರೆ.

ಶ್ಯಾಮಣ್ಣ ವಯಸ್ಸಿನಲ್ಲಿ ನನಗಿಂತ ನಾಲ್ಕಾರು ತಿಂಗಳು ಹಿರಿಯರು. ನನಗೆ ವಯಸ್ಸಾಯಿತು ಎಂದು ನೆಪವೊಡ್ಡಿ ನನ್ನ ಚಟುವಟಿಕೆಗಳನ್ನು ಮನೆಗಷ್ಟೇ ಸೀಮಿತ ಮಾಡಿಕೊಂಡಿದ್ದೇನೆ. ಆದರೆ ಶ್ಯಾಮಣ್ಣನ ಜೀವನೋತ್ಸಾಹ ನನಗೆ ಅಚ್ಚರಿ ಎನಿಸುತ್ತದೆ.

ಒಂದು ದಿನ ರೈತ ಸಮ್ಮೇಳನ ಎಂದು ಬೆಳಗಾವಿಯಲ್ಲೋ ಧಾರವಾಡದಲ್ಲೋ ಇರುವ ಶ್ಯಾಮಣ್ಣ ಮಾರನೆಯ ದಿನ ಯಾವುದೋ ಶಾಲೆಯಲ್ಲಿ ಮಕ್ಕಳ ಸಂಗೀತ ಕಾರ್ಯಕ್ರಮ ಎಂದು ಇನ್ನಾವುದೋ ಊರಿನಲ್ಲಿ ಕಾಣಿಸಿಕೊಳ್ಳುತ್ತಾರೆ. ಅವರ ಪ್ರಯಾಣಕ್ಕೆ ಯಾವುದೇ ಬಗೆಯ ಪೂರ್ವಸಿದ್ಧತೆ ಇರುವುದಿಲ್ಲ—ಬಸ್ಸು, ಕಾರು, ರೈಲು, ಬೈಸಿಕಲ್ ಯಾವುದಾದರೂ ಸರಿ; ಯಾವುದೇ ವಾಹನ ಸೌಲಭ್ಯ ಇಲ್ಲದಿದ್ದರೂ ನಡೆದೀತು; ಕಾಲ್ನಡಿಗೆಯಲ್ಲೇ ತಮ್ಮ ಗುರಿ ಮುಟ್ಟುತ್ತಾರೆ. ಹಾಗೆ ಪ್ರಯಾಣದಲ್ಲಿ ತೊಡಗಿಸಿಕೊಳ್ಳುವುದೇ ಅವರ ಆರೋಗ್ಯದ ಗುಟ್ಟು ಎಂದು ಅವರ ಆಪ್ತರು ಹೇಳುತ್ತಾರೆ. ಅವರ ಪ್ರಯಾಣಕ್ಕೆ ಸಂಬಂಧಿಸಿದ ಒಂದು ಸನ್ನಿವೇಶ ನನಗೆ ನೆನಪಿಗೆ ಬರುತ್ತಿದೆ. ಆಗ ನಾನು ಮಣಿಪಾಲದಲ್ಲಿ ಕೆಲಸ ಮಾಡುತ್ತಿದ್ದೆ. ಕಾಸರಗೋಡಿನ ಹತ್ತಿರದ ಹಳ್ಳಿಯೊಂದರಲ್ಲಿ ಏನೋ ಕಾರ್ಯಕ್ರಮಕ್ಕೆ ಹೋಗುವ ಹಾದಿಯಲ್ಲಿ ಶ್ರೀದೇವಿ–ಶ್ಯಾಮಣ್ಣ ನಮ್ಮಲ್ಲಿ ಬಂದು, ನಮ್ಮನ್ನು ಮಾತನಾಡಿಸಿಕೊಂಡು ಮಂಗಳೂರಿನತ್ತ ಪ್ರಯಾಣ ಮಾಡಿದರು. ಮಂಗಳೂರು ಸಮೀಪ ಹೋದಾಗ ಯಾರೋ ಹೇಳಿದರಂತೆ, 'ನೀವು ಹೋಗಬೇಕಾದ ಹಳ್ಳಿ ಇರುವುದು ಕಾಸರಗೋಡಿನಲ್ಲಿ ಅಲ್ಲ, ಹೊನ್ನಾವರದ ಹತ್ತಿರ' ಎಂದು. ಸುಮಾರು ೩೦೦ ಕಿಲೋ ಮೀಟರ್ ತಪ್ಪು ಮಾರ್ಗದಲ್ಲಿ ಹೋಗಿದ್ದ ಅವರು ಸ್ವಲ್ಪವೂ ಬೇಸರಿಸಿಕೊಳ್ಳದೆ ತಮ್ಮ ಪ್ರಯಾಣದ ದಿಕ್ಕು ಬದಲಿಸಿ ಹೊನ್ನಾವರ ತಲುಪಿದ್ದಾಗಿ ಶ್ರೀದೇವಿ ನಂತರದಲ್ಲಿ ಫೋನ್ ಮಾಡಿ ತಿಳಿಸಿದಳು. ಈ ಬಗೆಯ ಸಮಾಧಾನ ಚಿತ್ತ ಶ್ಯಾಮಣ್ಣನಿಗೆ ಮಾತ್ರವೇ ಸಾಧ್ಯ!

ಶ್ಯಾಮಣ್ಣನ ಬಗ್ಗೆ ಇಷ್ಟೆಲ್ಲಾ ಹೇಳಿದ ಮೇಲೆ ಅವರ ಎಲ್ಲ ನೀತಿ ನಿಲುವುಗಳನ್ನು ಬೆಂಬಲಿಸುತ್ತಾ, ಅವರ ಎಲ್ಲ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಭಾಗಿಯಾಗಿ, ಮನೆಯ ವ್ಯವಹಾರಗಳ ಎಲ್ಲ ಜವಾಬ್ದಾರಿಗಳನ್ನು ತಾನೇ ನಿಭಾಯಿಸುತ್ತಾ, ಅವರ ಸಾಧನೆಗಳಲ್ಲಿ ಪಾಲುದಾರಳಾಗಿರುವ ಸಹಧರ್ಮಿಣಿ ಶ್ರೀದೇವಿಯ ಬಗ್ಗೆ ಒಂದು ಅಡಿಟಿಪ್ಪಣಿ ಇಲ್ಲಿ ಅವಶ್ಯಕವಾಗಿ ಸೇರಲೇಬೇಕು. ಶ್ರೀದೇವಿ ನನ್ನ ಸ್ವಂತ ತಂಗಿ; ಹಾಗಾಗಿ ಅವಳನ್ನು ಕುರಿತು ಸಂಕೋಚದಿಂದಲೇ ಬರೆಯುವುದು ಅನಿವಾರ್ಯ. ಶ್ರೀದೇವಿ–ಶ್ಯಾಮಣ್ಣ ಪರಸ್ಪರ ಪ್ರೀತಿಸಿ ಮದುವೆಯಾದವರು. ಅವರದು ಅನನ್ಯ ಸಂಬಂಧ, ಒಂದು ಅದ್ಭುತ ಮಾದರಿ. ಸಹಬಾಳ್ವೆ, ಅನ್ಯೋನ್ಯತೆ, ಸಹಕಾರ, ಸುಸಂಗತತೆ ಅವರ ದಾಂಪತ್ಯ ಬದುಕಿನ ವೈಶಿಷ್ಟ್ಯ. ಶ್ಯಾಮಣ್ಣನ ಮೌಲ್ಯಗಳಲ್ಲಿ ಅಷ್ಟೇ ಆಳವಾದ ನಂಬಿಕೆಯಿರುವ ಶ್ರೀದೇವಿ ಅವುಗಳ ಆಚರಣೆಯಲ್ಲಿ ಎಂದೂ ಹಿಂದೆ ಬಿದ್ದಿಲ್ಲ. ಪ್ರೀತಿ–ವಿಶ್ವಾಸಗಳನ್ನು ತೋರುವಲ್ಲಿ, ಕಷ್ಟ–ಸುಖಗಳನ್ನು ಹಂಚಿಕೊಳ್ಳುವಲ್ಲಿ, ರೋಗಿಗಳು ಅಥವ ಬಡವರ ಬಗ್ಗೆ ಕಾಳಜಿ ವಹಿಸುವಲ್ಲಿ ಅವಳದು ಒಂದು ಕೈ ಮೇಲೆ ಎಂದರೂ ಅತಿಶಯೋಕ್ತಿ ಎನಿಸದು. ಕಷ್ಟದಲ್ಲಿರುವವರನ್ನು ಕಂಡರೆ ಅವಳಿಗೆ

ಸುಲಭವಾಗಿ ಕಣ್ಣೀರು ಬರುತ್ತದೆ. ಯಾರಿಗೂ ಗೊತ್ತಾಗದಂತೆ ಅಷ್ಟೋ ಇಷ್ಟೋ ಧನ ಸಹಾಯವೂ ನಡೆಯುತ್ತದೆ. ಶ್ರೀದೇವಿ ಬಂದರೆ ಬರಿ ಕೈಯಲ್ಲಿ ಬರುವುದಿಲ್ಲ ಎನ್ನುವ ವಿಚಾರ ಅವಳನ್ನು ಬಲ್ಲವರು ದೃಢೀಕರಿಸುತ್ತಾರೆ. ಅವಳ ಮಕ್ಕಳು ಉಲೂಪಿ ಮತ್ತು ಲಾಜವಂತಿ ಸಹ ಅದೇ ಮಾದರಿಯಲ್ಲಿ ಬೆಳೆದು ಬಂದಿದ್ದಾರೆ. ಶ್ಯಾಮಣ್ಣನ ಸಂಸಾರ ಉದಾತ್ತ ಮೌಲ್ಯಗಳ ಒಂದು 'ಜಾಯಿಂಟ್ ಸ್ಟಾಕ್ ಕಂಪನಿ.'

ನನ್ನ ತಂದೆ ಹಾರೋಗದ್ದೆ ಶ್ರೀನಿವಾಸ ನಾಯಕರು ತಮ್ಮ ಅಳಿಯ ಶ್ಯಾಮಣ್ಣನನ್ನು 'ಶ್ಯಾಮದೇವರು' ಎಂದು ಪ್ರೀತಿಯಿಂದ ಸಂಬೋಧಿಸುತ್ತಿದ್ದರು. ಇದರಿಂದ ಪ್ರೇರಿತರಾಗಿ ಮನೆಮಂದಿಯೆಲ್ಲ ಅವರನ್ನು ಶ್ಯಾಮದೇವರು ಎಂದು ತಮಾಷೆ ಮಾಡುತ್ತಿದ್ದರು. ನಮ್ಮ ಪ್ರೀತಿಯ ಶ್ಯಾಮದೇವರು ಮತ್ತು ಅವರ ಕುಟುಂಬದ ಎಲ್ಲರಿಗೂ ಶುಭ ಹಾರೈಕೆಗಳು.

ಸಮಾಜವಾದಿ ರೈತ ಹೋರಾಟಗಾರ

ಬಿ.ವಿ.ಮೂರ್ತಿ

ಕಡಿದಾಳ್ ಕುಟುಂಬವೇ ಕಾಂಗ್ರೆಸ್. ಶಾಮಣ್ಣನ ತಂದೆ ರಾಮಪ್ಪಗೌಡರು ದಿನಾ ರಾಟೆಯಿಂದ ನೇಯ್ದದ್ದನ್ನು ಖಾದಿ ಭಂಡಾರಕ್ಕೆ ಲಡಿ ಕೊಟ್ಟು ಧರಿಸುತ್ತಿದ್ದ ಅಪ್ಪಟ ಕಾಂಗ್ರೆಸ್ಸಿನವರು. ಶಾಮಣ್ಣ ರಾಟೆ ತಿರುಗುವುದನ್ನು ನೋಡುತ್ತಿದ್ದ. ಮನೆಯಲ್ಲಿ ಕಾಂಗ್ರೆಸ್ ವಾತಾವರಣ. ಬಂದವರು ಹೋದವರ ಮಾತು ಕಾಂಗ್ರೆಸ್ಸಿನದ್ದೆ. ಇವ್ಯಾವುದೂ ಶಾಮಣ್ಣನ ಮನಸ್ಸನ್ನು ಕಾಂಗ್ರೆಸ್ಸಿನ ಕಡೆ ತಿರುಗಿಸಲಿಲ್ಲ.

ಕಡಿದಾಳ್ ಮಂಜಪ್ಪನವರು ಶಿವಮೊಗ್ಗದ ಪ್ರಸಿದ್ಧ ವಕೀಲರು. ಕಾಂಗ್ರೆಸ್ ನಾಯಕರು. ಆದ್ದರಿಂದ ಕಡಿದಾಳು ಗ್ರಾಮವಿದ್ದ ಮುತ್ತೂರು ಹೋಬಳಿಗೆ ಕಾಂಗ್ರೆಸ್ ಒಲವಿತ್ತು. ಕಾಂಗ್ರೆಸ್ ಹೋರಾಟಗಾರರಾದ ಕಡಿದಾಳ್ ತಮ್ಮಯ್ಯಗೌಡರು ಸ್ವಾತಂತ್ರ್ಯ ಬಂದ ದಿನ ತೆರೆದ ಮೆರವಣಿಗೆಯಲ್ಲಿ ಶಾಮಣ್ಣನಿಗೆ ಕಾಂಗ್ರೆಸ್ ಬಾವುಟ ಕೊಟ್ಟರೂ ಈ ಎಳೆಯ ಮನಸ್ಸಿನ ಮೇಲೆ ಕಾಂಗ್ರೆಸ್ ಒಲವು ಬರಲೇ ಇಲ್ಲ.

ಶಾಮಣ್ಣನಿಗೆ ಪ್ರಾಥಮಿಕ ಶಿಕ್ಷಣ ಹತ್ತಿರದ ಹಾರೋಗೊಳಿಗೆಯಲ್ಲೇ ಮುಗಿಯಿತು. ಮನೆಯಲ್ಲಿ ಮುಂದಿನ

ಶಿಕ್ಷಣ ಎಲ್ಲಿ ಎಂಬುದು ರಾಮಪ್ಪ ಗೌಡರ ತಂಗಿ ಮನೆ ಮೂಡುವಳ್ಳಿಯಲ್ಲೇ ತೀರ್ಮಾನವಾಯಿತು. ಕುಟುಂಬದ ಮತ್ತು ಬಂಧುಗಳ ಮಕ್ಕಳಿಗಾಗಿ, ವ್ಯವಹಾರಕ್ಕಾಗಿ ಹಿರಿಯರಾದ ಅಣ್ಣಯ್ಯ ಹೆಗ್ಗಡೇರ ಮೇಗರವಳ್ಳಿ ಮನೆಯಲ್ಲಿ ಶಾಮಣ್ಣನವರ ಶಿಕ್ಷಣ ಆರಂಭವಾಯಿತು. ಇದೊಂದು ವಿದ್ಯಾರ್ಥಿ ನಿಲಯವಾಯಿತು.

ಆಗ ತೀರ್ಥಹಳ್ಳಿ ಬಿಟ್ಟರೆ ಮೇಗರವಳ್ಳಿಯೇ ದೊಡ್ಡಪೇಟೆ. ಈ ಊರು ಶಾಮಣ್ಣನಿಗೆ ಖುಷಿ ಕೊಟ್ಟಿತು. ನಾನಾ ಮುಖವಾಗಿ ಇವನ ವ್ಯಕ್ತಿತ್ವವನ್ನು ರೂಪಿಸಿತು. ಸೋಷಿಯಲಿಸ್ಟ್ ಪದವನ್ನು ಇಲ್ಲಿ ಕೇಳಿ, ಅದನ್ನೇ ಹಿಂಬಾಲಿಸಿ ಹೋಗಿ, ಅಗ್ರಗಣ್ಯ ಸಮಾಜವಾದಿ ರೈತ ಹೋರಾಟಗಾರರಾಗಿದ್ದಾರೆ ಶಾಮಣ್ಣ. ಆ ಬೆಳಕಿನಲ್ಲಿ ಅವರು ಮೂಢನಂಬಿಕೆ, ಶೋಷಣೆ ವಿರುದ್ಧ ಹೋರಾಟಕ್ಕೆ ಅಣಿ ಆದರು. ಇದಕ್ಕೆ ಒತ್ತು ಕೊಡುವಂತಹ ಘಟನೆ ಅಲ್ಲಿ ನಡೆಯಿತು. ಒಂದು ದಿನ ಗುಮಾಸ್ತ ಗುಂಡು ಕಾಮತ್ ಮತ್ತು ವಸೂಲಿ ಸಾಬರನ್ನು ಗೇಣಿ ಭತ್ತ ವಸೂಲಿಗೆ ಹೊರಡಿಸಿದರು. ಅಲ್ಲಿದ್ದ ಶಾಮಣ್ಣನಿಗೆ ನೀನು ಹೋಗು ಎಂದು ಕಳಿಸಿದರು. ವಸೂಲಿ ಸಾಬರೆಂದರೆ ಅವರು ಕ್ರೂರಿಗಳು, ಯಮದೂತರಂತಿದ್ದರು. ಇವರ ಕ್ಲಾಸ್‌ಮೇಟ್ ಸರಸ್ವತಿಯ ಮನೆ ಆದಾಗಿತ್ತು. ತಂದೆ ಮನೆಯಲ್ಲಿರಲಿಲ್ಲ. 'ಏನು ಬಂದ್ರಿ?' ಎಂದು ಕೇಳಿದಳು. 'ಮೊನ್ನೆ ತಗಂಡು ಹೋಗಿದ್ದೀರಿ. ಇನ್ನೆಂತ ಗೇಣಿ ಭತ್ತ?' ಎಂದಳು. ಗೇಣಿ ಭತ್ತ ವಸೂಲಿ ಸಾಬ್ರೂ ಜಬ್ರದಸ್ತಾಗಿ ಹೇಳಿದರು, 'ಗದ್ದೆ ವಹಿಸಿಕೊಂಡ ಮೇಲೆ ಗೇಣಿ ಕೊಡಲಿಕ್ಕೆ ಆಗಲ್ವ, ಇನ್ನೂ ಹಳೇ ಬಾಕಿ ಇದೆ'. ಸರಸ್ವತಿ ೩ ಚೀಲ ಭತ್ತವನ್ನು ಕಣ್ಣಲ್ಲಿ ನೀರು ಸುರಿಸುತ್ತಾ ತಂದು ಹಾಕಿದಳು. ಅವರು ಹೊರಟಾಗ 'ಗಂಗೋದಕ ತಗಂಡು ಹೋಗಿ' ಎಂದಳು. ಬಡವರ ಅನ್ನ ಕಿತ್ತುಕೊಳ್ಳುವ ಈ ವ್ಯವಸ್ಥೆ ಶಾಮಣ್ಣ ಮನ ಕಲಕಿತು. ಮುಂದೆ ಗೇಣಿ ಭತ್ತ ವಸೂಲಿಗೆ ಹೋಗಲಿಲ್ಲ.

ಮೇಗರವಳ್ಳಿಯಲ್ಲಿ ಗುಂಡ ಭಂಡಾರಿಯೆಂಬ ಬಸ್ ಡ್ರೈವರ್ ಇದ್ದರು. ಅವರು ಯಕ್ಷಗಾನ ಕಲಾವಿದರು. ದೀಪಾವಳಿಯಲ್ಲಿ ಮೇಳ ಕಟ್ಟಿ ಯಕ್ಷಗಾನದಿಂದ ಜನರನ್ನು ದೇವರನ್ನು ರಂಜಿಸುತ್ತಿದ್ದರು. ಇಲ್ಲಿ ಹರಕೆ ಆಟಗಳು ಆಗುತ್ತಿತ್ತು. ಆಟದ ಬಯಲು ಮನೆ ಹತ್ತಿರವೇ ಇತ್ತು. ಚಂಡೆ ಕೇಳಿದ ಕೂಡಲೆ ಹಾಸಿಗೆಯಿಂದೆದ್ದು, ರಂಗಸ್ಥಳಕ್ಕೆ ಶಾಮಣ್ಣ ಹೋಗುತ್ತಿದ್ದ. ಬಣ್ಣದ ಕೋಣೆಯಿಂದ ಎಲ್ಲಾ ಕಡೆ ಪ್ರವೇಶವಿತ್ತು. ದಿನ ಕಳೆದಂತೆ ಚಂಡೆ, ಮದ್ದಲೆ ಮತ್ತು ತಬಲ ಪ್ರಥಮ ಪಾಠವಾಯಿತು. ಊರಿನಲ್ಲಿ ಪ್ರಾಥಮಿಕ ಶಾಲೆ ಕಲಿಯುವಾಗ, ಹರಿಜನ ದನಗಾಯಿ ಸಿದ್ಧ ಕೊಳಲು ಊದುವುದನ್ನು ನೋಡಿ, ಕೊಳಲು ಮಾಡಿಸಿಕೊಂಡ ಶಾಮಣ್ಣ ಮುಂದೆ ವೇಣುಗಾನಕ್ಕೂ ಪ್ರಸಿದ್ಧ ರಾದರು. ಮೇಗರವಳ್ಳಿಯಲ್ಲಿ ಶಾಮಣ್ಣ ಎಲ್ಲರಿಗೂ ಬೇಕಾದವನಾದ. ಮೇಗರವಳ್ಳಿಯಲ್ಲಿ ಪ್ರೌಢಶಿಕ್ಷಣ ಮುಗಿಸಿ, ಶಿವಮೊಗ್ಗ ಸಹ್ಯಾದ್ರಿ ಕಾಲೇಜಿಗೆ

ಹೋಗುವಾಗ ಮೇಗರವಳ್ಳಿ ಬಗ್ಗೆ ಹೇಳಿದ್ದು "ಬಾಲ್ಯದಿಂದ ಪ್ರೌಢಾವಸ್ಥೆವರೆಗೆ ಬೆಳೆಸಿದ್ದ ಈ ಊರು ವಿವಿಧ ಆಸಕ್ತಿಗಳನ್ನು ಬೆಳೆಯಿಸಿಕೊಂಡು ಈ ಮೂಲಕ ನನ್ನ ವ್ಯಕ್ತಿತ್ವವನ್ನು ರೂಪಿಸಿಕೊಳ್ಳಲು ಕಾರಣವಾಯಿತು".

ಶಾಮಣ್ಣ ಶಿವಮೊಗ್ಗ ಸಹ್ಯಾದ್ರಿ ಕಾಲೇಜಿಗೆ ಸೇರಿದಾಗ ಕಾಗೋಡು ಸತ್ಯಾಗ್ರಹ ಆರಂಭವಾಗಿತ್ತು. ಅನಂತಮೂರ್ತಿಯವರ ತಂದೆ ರಾಜಗೋಪಾಲಾಚಾರ್ಯರ ಮಾರುತಿ ಪ್ರೆಸ್ ಕಾಗೋಡು ಸತ್ಯಾಗ್ರದ ಜಿಲ್ಲಾ ಕಛೇರಿಯಂತಿತ್ತು. ಅಲ್ಲೇ ಓಡಾಡುತ್ತಿದ್ದ ಅಣ್ಣಯ್ಯ, ಪೊನ್ನಮ್ಮ ಅವರ ಪರಿಚಯವಾಗಿ ಸಾಂಗತ್ಯ ಬೆಳೆಯಿತು. ಸಾಹಿತ್ಯದಲ್ಲಿ ಹೊಸ ಸೃಷ್ಟಿ ಮತ್ತು ಹೊಸ ದೃಷ್ಟಿಯನ್ನು ಬೆಳೆಯಿಸಿಕೊಳ್ಳುತ್ತಿದ್ದ ಪೂರ್ಣಚಂದ್ರ ತೇಜಸ್ವಿ, ಅಭಿಮನ್ಯುವಿನಂತ ಹೋರಾಟಗಾರ ಎನ್.ಡಿ. ಸುಂದರೇಶ್, ಕೋಣಂದೂರು ಲಿಂಗಪ್ಪ ಈ ಪಡೆ ಮುಂದೆ ಸಮಾಜವಾದವನ್ನೇ ಉಸಿರಾಗಿ ಮಾಡಿಕೊಂಡಿತು. ಇವರ ಮನಸ್ಸು ಸಮಾಜವಾದಿ ಹೋರಾಟಕ್ಕೆ ಸೀಮಿತವಾಗದೇ ಮೂಢನಂಬಿಕೆ ವಿರುದ್ಧ ಹೋರಾಟ ರೂಪಿಸಿತು. ಹಾಗೇ, ಈ ಪಡೆ ಕುವೆಂಪು ಅವರ 'ಮಂತ್ರ ಮಾಂಗಲ್ಯ'ದಿಂದ ಸಾವಿರಾರು ಮದುವೆಗಳಿಗೆ ಕಾರಣರಾದರು.

ಶಾಮಣ್ಣ ಇಂಟರ್‌ಮೀಡಿಯಟ್‌ನಲ್ಲಿ ತೇರ್ಗಡೆಯಾಗಲಿಲ್ಲ. ಊರಿಗೆ ಬಂದು ನೇಗಿಲಯೋಗಿಯಾದ. ರಾಮಪ್ಪ ಗೌಡರಿಗೆ ಮಗ ಕೈಗೆ ಬಂದನೆಂದು ಅಪಾರ ಸಂತಸವಾಯಿತು. ಆ ಸಂತೋಷ ಬಹಳ ದಿನ ಉಳಿಯಲಿಲ್ಲ. ತೇಜಸ್ವಿಯವರ ಪತ್ರ ಮೇಲಿಂದ ಮೇಲೆ ಬಂತು. ಮೈಸೂರಿಗೆ ಹೋಗಿ ಶಿಕ್ಷಣ ಮುಂದುವರೆದು ಎಂ.ಎ. ಪಾಸು ಮಾಡಿದರು ಶಾಮಣ್ಣ. ಉತ್ತಮವಾದ ಪ್ರಿಂಟಿಂಗ್ ಪ್ರೆಸ್ ಸ್ಥಾಪಿಸಿ ಪುಸ್ತಕ ಪ್ರಕಟಣೆ ಆರಂಭವಾಯಿತು. ಕೋಣಂದೂರು ಲಿಂಗಪ್ಪನವರ ಜೊತೆ ಸಮಾಜವಾದಿ ಯುವಜನ ಸಭಾ ಸೇರಿ ಮಹಾರಾಜರಿಲ್ಲದಿದ್ದರೂ ದಸರಾ ಜಂಬೂಸವಾರಿ ವಿರುದ್ಧ ಕಪ್ಪು ಬಾವುಟ ಪ್ರದರ್ಶನ ಮುಂತಾದ ಕೆಲಸ ಮಾಡಿದರು.

ಶುಂಠಿಕಟ್ಟೆ, ಮಾಳೂರಿನಲ್ಲಿ ಮಾದರಿ ಶಿಕ್ಷಕರಾಗಿ ಶಾಲೆಯ ಕಟ್ಟಡಕ್ಕೆ ಕಾರಣರಾದರು. ಹಾಡು, ನಾಟಕ ಕಲಿಸಿ ಶಾಲೆಗೆ ಹೊಸದಿಕ್ಕನ್ನು ತೋರಿಸಿದರು. ಈ ಮಧ್ಯೆ ತಂದೆ ಅಡಿಕೆ ಮಂಡಿಗೆ ಹೋಗಲು ಹೇಳಿದರೂ ಒಪ್ಪಿಕೊಳ್ಳಲಿಲ್ಲ. ತೀರ್ಥಹಳ್ಳಿ ತುಂಗಾ ಕಾಲೇಜಿನಲ್ಲಿ ಉಪನ್ಯಾಸಕರ ಜಾಗ ಖಾಲಿ ಇತ್ತು. ತೀರ್ಥಹಳ್ಳಿಯ ಯಾವುದೋ ಸಮಾರಂಭಕ್ಕೆ ಗೋಪಾಲಗೌಡರು ಬಂದಾಗ ಗೌಡರು 'ಏನೋ ಶಾಮಣ್ಣ ನೀನು ಉಪನ್ಯಾಸಕಗಿರಿಯೂ ಬೇಕು, ಜಮೀನು ಬೇಕು ಅಂತೀಯಾ. ಹೀಗಾದರೆ ಬಡವರು ಬಡವರಾಗೇ ಉಳೀತಾರೆ' ಎಂದು ಹೇಳಿದ್ದನ್ನು ಕೇಳಿ ಜಮೀನು ಮಾಡಲು ನಿಶ್ಚಯಿಸಿದರು. ಇವರ ತಂದೆ ಭದ್ರಾವತಿ ತಾಲ್ಲೂಕಿನ ಭಗವತಿಕೆರೆಯಲ್ಲಿ ಶಾಮಣ್ಣನಿಗಾಗಿ ಜಮೀನು ಕೊಂಡರು. ಶಾಮಣ್ಣ ಭಗವತಿಕೆರೆಯ

ಜಮೀನನ್ನು ಸ್ವಲ್ಪ ಹದ ಮಾಡಿ ಭತ್ತದ ಬೆಳೆ ಕಾಣಿಸಿದ್ದರು. ಆಗ ಶಾಮಣ್ಣ ಗೃಹಸ್ಥರಾಗಿದ್ದರು.

ಶಾಮಣ್ಣನ ಜೀವನ ಸಂಗಾತಿ ಶ್ರೀದೇವಿ ಪದವೀಧರೆ. ಅವಳು ಸಾಹಿತ್ಯ ದಿಗ್ಗಜರಾಗಿದ್ದ ಹಾ.ಮಾ. ನಾಯಕರ ಸಹೋದರಿ. ಶಾಮಣ್ಣ-ಶ್ರೀದೇವಿಯವರದ್ದು ಈಗಿನಂತೆ ಸಿನಿಮಾ ಪಾರ್ಕಿನ ಪ್ರೇಮವಾಗಿರದೇ ತಾತ್ವಿಕ ಪ್ರೇಮವಾಗಿತ್ತು. ಶಿವಮೊಗ್ಗ ಜಿಲ್ಲಾ ಸಹಕಾರಿ ಬ್ಯಾಂಕಿನ ಆವರಣದಲ್ಲಿ ಮಂತ್ರ ಮಾಂಗಲ್ಯದಿಂದ ಮದುವೆಯಾಯಿತು.

ಹಿಂದೆ ಕರಡಿಗುಡ್ಡ ಎಂಬ ಹೆಸರಿನಿಂದ ಕರೆಯಲ್ಪಡುತ್ತಿದ್ದ ಭಗವತಿಕೆರೆ ನೀರಾವರಿಯಾದರೂ ಕುರುಚಲುಗಾಡು. ಹೆಸರಿನಂತೆ ಕರಡಿ ಕಾಡೆಮ್ಮೆ ಕಾಡಂದಿ ಇವುಗಳ ಆವಾಸ ಸ್ಥಾನ. ಶಾಮಣ್ಣನವರ ಅರಮನೆ ಆಗ ಒಂದು ಗುಡಿಸಲು. ಮಳೆ ಬಂದರೆ ನೀರೆಲ್ಲಾ ಒಳಗೆ. ದೊಡ್ಡ ಗಾಳಿ ಬಂದರೆ ಹುಲ್ಲು ಹಾರಿ ಹೋಗುತ್ತಿತ್ತು. ಲೆಟ್ರಿನ್-ಬಾತ್ ರೂಂಗಳು ಇರಲೇ ಇಲ್ಲ. ಬಂದವರಿಗೆ, ಇದ್ದವರಿಗೆ ಚಾಪೆ ಮಾತ್ರ. ಶಾಮಣ್ಣನ ಜೊತೆ ಸೀತಾದೇವಿ(ಶ್ರೀದೇವಿ ಈ ಅರಮನೆಗೆ ಬರುತ್ತಾಳೆ). ಅವಳೇನು ಸುಖ-ಸೌಲಭ್ಯ ನಂಬಿ ಇಚ್ಛಿಸಿ ಬಂದವಳಲ್ಲ. ಶಾಮಣ್ಣನ ಜೀವನಕ್ಕೆ ಕೈ ಜೋಡಿಸಲು ಬಂದವಳು. ಅವಳು ಬರುವಾಗ ಭತ್ತ, ಆಲೂಗೆಡ್ಡೆ ಬೆಳೆ, ಅಡಿಕೆ ತೋಟ ಇತ್ತು. ಸುಗ್ಗಿಯಲ್ಲಿ ಕೆಲಸಗಾರರ ಜೊತೆ ಕೈ ಜೋಡಿಸಿ ಕೆಲಸ ಮಾಡಿದಳು. ಎಲ್ಲಾ ರೈತರಂತೆ ಸಾಲ-ಶೂಲ ಎಲ್ಲ ಅನುಭವಿಸಿದರು. ನಿಧಾನವಾಗಿ ಜಮೀನು ಅಭಿವೃದ್ಧಿ ಮಾಡಿ ಕೊಂಡು ಬಂದಳು. ಅವನ ಜೊತೆ ಹೋಗುತ್ತಾ ರೈತ ಹೋರಾಟಕ್ಕೆ ಕೈ ಜೋಡಿಸಿದಳು. ರಾಮೇಗೌಡರು, ಮೊಮ್ಮಗಳು ಹುಟ್ಟಿದಾಗ ಇಪ್ಪತ್ತೆರಡು ಸಾವಿರ ರೂಪಾಯಿ ವೆಚ್ಚದ ಮನೆ ಕಟ್ಟಿಸಿಕೊಟ್ಟರು. ಪ್ರಕೃತಿ ಈ ದಂಪತಿಗಳ ವ್ಯಾಮೋಹಕ್ಕೆ ಒಳಗಾದಂತೆ ಇಬ್ಬರು ಹೆಣ್ಣು ಮಕ್ಕಳನ್ನು ಕೊಟ್ಟಿತು. ಒಬ್ಬಳು ಇಂಜಿನಿಯರ್, ಮತ್ತೊಬ್ಬಳು ದಂತ ವೈದ್ಯೆ. ಅವರದ್ದು ಸುಖೀ ಸಂಸಾರ. ತೋಟದ ಆದಾಯವನ್ನು ಹೆಚ್ಚು ಪರಿಶ್ರಮದಿಂದ ಹೆಚ್ಚಿಸಿಕೊಂಡು ಸ್ವಲ್ಪ ಬದಲಾವಣೆ ಮಾಡಿಕೊಂಡಿದ್ದಾರೆ. ಈ ಸೀತೆಗೆ ರಾಕ್ಷಸರ ಭಯವಿಲ್ಲ. ರಾಕ್ಷಸರಾಗಿ ಕಾಡುವ ಅನಕ್ಷರತೆ, ಮದ್ಯಪಾನ, ಮೂಢನಂಬಿಕೆ ತೊಲಗಿಸಲು ಶ್ರಮಿಸುತ್ತಿದ್ದಾಳೆ ಶಾಮಣ್ಣನ ಜೊತೆ.

ಗ್ರಾಮ ಸ್ವರಾಜ್ಯ

ನಾನು ಒಮ್ಮೆ ಶಾಮಣ್ಣನ ಅಡಿಕೆ ತೋಟ ನೋಡಲು ಹೋದೆ. ಆದರೆ ನಾನು ನೋಡಿದ್ದೇ ಬೇರೆ. ನನ್ನನ್ನು ಅಲ್ಲಿನ ಕ್ಯಾಂಪಿಗೆ ಕರೆದುಕೊಂಡು ಹೋದಾಗ ಜನ ಮುತ್ತಿಕೊಂಡರು. ನಾನು ಕೆಲವು ಘಂಟೆ ದೊಡ್ಡ ಮನುಷ್ಯನಾಗಿದ್ದೆ. ಅಲ್ಲಿರುವ ಕುಟುಂಬಗಳು ಬಂದು ನಾವು ಒಂದು ಕಾಲದ ನಿರ್ಗತಿಕರು. ಇವರು (ಶಾಮಣ್ಣ)

ಮನೆ ಮಾಡಿಸಿಕೊಟ್ಟಿದ್ದಾರೆ. ಜಮೀನು ಮಾಡಿಸಿಕೊಟ್ಟಿದ್ದಾರೆ. ಸರ್ಕಾರದಿಂದ ಸವಲತ್ತು ಕೊಡಿಸುತ್ತಾರೆ ಎಂದು ವಿವರಿಸಿದರು.

ಫೋಟೋಗ್ರಫಿ

ಶಾಮಣ್ಣನವರು ಅತ್ಯುತ್ತಮ ಫೋಟೋಗ್ರಾಫರ್. ಫೋಟೋಗ್ರಫಿ ಎನ್ನುವುದು ಒಂದು ಮಾಧ್ಯಮ. ಅದರ ಪರಿಣಿತಿ ಹೊಂದಿ ಲಕ್ಷಾಂತರ ಫೋಟೋ ಕ್ಲಿಕ್ಕಿಸಿದ್ದಾರೆ. ಅನೇಕ ಕಡೆ ಫೋಟೋ ಪ್ರದರ್ಶನವಾಗಿದೆ.

ಶಾಮಣ್ಣನೊಳಗೆ ಇನ್ನೊಬ್ಬ ಸಾಂಸ್ಕೃತಿಕ ಶಾಮಣ್ಣನಿದ್ದ. ಅವನೇ ಸರೋದ್ ವಾದಕ. ಸರೋದ್ ಭಾರತದಲ್ಲೇ ಶ್ರೇಷ್ಠ ವಾದ್ಯ. ಇದರ ಅತ್ಯುನ್ನತ ವಿದ್ವಾಂಸ ಅಲೀ ಅಕ್ಬರ್‌ಖಾನ್ ಅವರು ಶಾಮಣ್ಣನ ಆಸಕ್ತಿ ನೋಡಿ ಎರಡು ವರ್ಷ ಮನೆಯಲ್ಲಿಟ್ಟುಕೊಂಡು ಯಾರಿಗೂ ಸಿಕ್ಕದ ಅವಕಾಶ ಕೊಟ್ಟರು. ನಮ್ಮಲ್ಲಿ ಎಷ್ಟು ಜನ ಪ್ರೋತ್ಸಾಹ ದೃಷ್ಟಿಯಿಂದಾದರೂ ಶಾಮಣ್ಣನ ಸರೋದ್‌ವಾದನ ಕೇಳಿದ್ದಾರೆ? ಈಗಲಾದರೂ ಮಲೆನಾಡಿನ ಜನ ಕಛೇರಿ ಏರ್ಪಡಿಸಿ ಏನೊಂತಲಾದರೂ ನೋಡಬೇಕು.

ಒಬ್ಬ ದೊಡ್ಡ ಮುಖಂಡನಿಗೆ ಇರಬೇಕಾದ ದೂರದೃಷ್ಟಿ ತಾಳ್ಮೆ ಶಾಮಣ್ಣನಲ್ಲಿ ಮನೆ ಮಾಡಿದೆ. ಎಂದೂ ಗದ್ದುಗೆಗೆ ಇಷ್ಟಪಡಲಿಲ್ಲ. ಸಂಪೂರ್ಣ ಬಯಲು ಶೌಚಾಲಯ ಮುಕ್ತ ಗ್ರಾಮ ಮಾಡಿದ್ದಾರೆ. ಮಂತ್ರಿಗಳು ಬಂದು ಹೋಗಿ ನೋಡಿ ಯೋಜನೆ ಮಾಡಿದರು. ಮುಂದಿನ ಮಂತ್ರಿ ನಿಲ್ಲಿಸಿದರು. ಇನ್ನು ಪಾನ ನಿಷೇದ, ವಯಸ್ಕರ ಶಿಕ್ಷಣ ಮುಂತಾದ ರಚನಾತ್ಮಕ ಕಾರ್ಯಗಳಲ್ಲಿ ದಂಪತಿಗಳು ತೊಡಗಿಸಿಕೊಂಡಿದ್ದನ್ನು ನಾನು ಕಂಡೆ.

ಶಾಮಣ್ಣನ ರಚನಾತ್ಮಕ ಕೆಲಸವನ್ನು ಮೆಚ್ಚಿ ಸರ್ಕಾರ ರಾಜ್ಯೋತ್ಸವ ಪ್ರಶಸ್ತಿಯನ್ನು ಘೋಷಿಸಿತು. ಮುಖ್ಯಮಂತ್ರಿ ದೇವೇಗೌಡರ ಕಾಲದಲ್ಲಿ ಜಮೀನಿಲ್ಲದವರಿಗೆ ಜಮೀನು ಮಾರಲು ಇದ್ದ ನಿಷೇಧವನ್ನು ಕಿತ್ತುಕೊಂಡಿದ್ದಕ್ಕಾಗಿ ಶೌಚಾಲಯದ ಕಾಯ್ದೆಯನ್ನು ಹಿಂಪಡೆದಿದ್ದಕ್ಕಾಗಿ ರಾಜ್ಯೋತ್ಸವ ಪ್ರಶಸ್ತಿಯನ್ನು ತಿರಸ್ಕರಿಸಿದರು. ಅದು ಒಂದು ಚೇಳು ಇದ್ದಂತೆ ಅವರಿಗೆ. ಪದವಿ, ಪ್ರಶಸ್ತಿ, ಶ್ಲಾಘನೆ ಇವೆಲ್ಲ.

ಅವರಿಗೆ ಅಗಲಿಕೆಯ ಶೋಕ ಕಾಡುತ್ತಿದೆ. ಸಮಾಜವಾದಿಗಳಾಗಿ ರೈತರ ಹೋರಾಟಕ್ಕೆ ಪತ್ರಕರ್ತರಾಗಿ ಬೆನ್ನೆಲುಬಾಗಿದ್ದ ಲಂಕೇಶ್, ಒಡನಾಡಿಗಳಾಗಿದ್ದ ಪೂರ್ಣ ಚಂದ್ರ ತೇಜಸ್ವಿ, ಹೋರಾಟಗಾರ ಎನ್.ಡಿ. ಸುಂದರೇಶ್, ನಂಜುಂಡಸ್ವಾಮಿ ಇತರರದ್ದು. ಆದರೂ ಈ ಅಗಲಿಕೆಯನ್ನು ನುಂಗಿಕೊಂಡು ಹೋರಾಟ ನಡೆಸುತ್ತಿದ್ದಾರೆ.

ಗೆಳೆಯರ ಬಳಗದಿಂದ...

ಶಾಮಣ್ಣನಿಗೊಂದು ಸಾನೆಟ್

ತೇಜಸ್ವಿ, ಕಡಿದಾಳು, ಕೋಣಂದೂರು ನಾನು
(ಸುಂದರೇಶರನ್ನು ಸೇರಿಸಿದರೆ ತಪ್ಪೇನಿಲ್ಲ)
ಒಂದು ಕಾಲದಲ್ಲಿ ಗುಂಪು; ಅಲ್ಲ, ಬಳಗ; ವಿಚಿತ್ರ
ಆ ಮಲೆನಾಡ ಮಂದಿಗೆ, ನನಗೆ ಎತ್ತಣಿಂದೆತ್ತ ಸಂಬಂಧ!
ನಮ್ಮಲ್ಲಿ ಶಾಮಣ್ಣ ಮುಗ್ಧಾತಿಮುಗ್ಧ; ಈಗ ವಿದಗ್ಧ.
(ಹೆಣ್ಣನ್ನು ಕುರಿತ ಕುತೂಹಲದ ಪ್ರಶ್ನೆಗಳೆನಿತೊ
ಶಾಮಣ್ಣರಿಂದ; ಉತ್ತರ ದೊರೆತು ಬಹುಕಾಲವಾಗಿರಬೇಕು!
ಅಂದ ಹಾಗೇ, ಆ ಬಗೆಗೆ ನಾನೇನೂ ತಜ್ಞನಾಗಿರಲಿಲ್ಲ)

ದಸರಾ ಮಹೋತ್ಸವದ ಉದ್ಘಾಟನೆಗೆ ಆಹ್ವಾನ
ಗೊಳ್ಳುವನಿತು ಎತ್ತರಕೆ ಬೆಳೆದರು ಗೆಳೆಯ ಶಾಮಣ್ಣ;
ನಿರಾಕರಿಸಿ ಮತ್ತೂ ಎತ್ತರಕ್ಕೇರಿದರು, ಭೇಷ್ !
(ನನ್ನನ್ನು ಕೇಳಿದ್ದರೆ, ಕೂಡಲೇ ಒಪ್ಪಿಬಿಡುತ್ತಿದ್ದೆ?)
ರೈತ ಜನತೆಯ ತಲೆಯಾಳು ಕಡಿದಾಳು; ಥೇಟ್ ಖುಷಿ!
ಮಿತ್ರನನ್ನು ನೆನದಾಗ ನನಗೆ ಹೆಮ್ಮೆ : ನೆನಪು, ಖುಷಿ!

—ಸಿ.ಪಿ.ಕೆ

ಶಾಮಣ್ಣನ ಸಹವಾಸದಲ್ಲಿ...

ಕೆ.ಪಿ. ಪೂರ್ಣಚಂದ್ರ ತೇಜಸ್ವಿ

ನಾನು ಶಿವಮೊಗ್ಗಕ್ಕೆ ಹೋದಾಗ ಶಾಮಣ್ಣ ನನ್ನ ಮಿತ್ರರಾದರು. ಅವರಿಗೆ ಹಳ್ಳಿಯ ನಾಟಕ ಇತ್ಯಾದಿಗಳ ಸಂಪರ್ಕ ಇದ್ದುದರಿಂದಲೋ ಏನೋ ಅಲ್ಪಸ್ವಲ್ಪ ಅಭಿರುಚಿ ಸಂಗೀತದಲ್ಲಿ ಇತ್ತು. ಬಾಯಲ್ಲಿ ಉರುಟಿ ಹಾಡು ಬಾರಿಸುವ ಮೌತ್ ಆರ್ಗನ್ ಜೇಬಿನಲ್ಲಿಟ್ಟು ಕೊಂಡು ಆಗೀಗ ಊದುತ್ತಿದ್ದರು. ಅವರ ಮನೆ ದನ ಕಾಯುವವನ ಬಳಿ ಕೊಳಲು ಊದುವುದನ್ನು ಕಲಿತು ಸಂತೆಯಿಂದ ಬಣ್ಣಬಣ್ಣದ ವಾಟೆಕೊಳಲೊಂದನ್ನು ತಂದು ಊದಿ ತೋರಿಸುತ್ತಿದ್ದರು. ಆ ಆಟದ ಕೊಳಲಿನಲ್ಲಿ ಸರಿಗಮ ಬಾರಿಸುವುದಿರಲಿ ಸದ್ದು ಹೊರಡಿಸುವುದೇ ಕಷ್ಟಸಾಧ್ಯದ ಕೆಲಸವಾಗಿತ್ತು. ಆದ್ದರಿಂದ ಅದರಲ್ಲಿ ಶಾಮಣ್ಣ ಪೀ ಪೂ ಪೇ ಎಂದು ಸದ್ದು ಬರಿಸಿದರೂ ನಮಗೆ ಅಸಾಧ್ಯ ಸಾಧನೆ ಎಂದೆನಿಸಿ ಒಂದಲ್ಲ ಒಂದು ದಿನ ನೀವು ಮಹಾ ಕಲಾವಿದ ಆಗುವುದೇ ಸೈ ಎಂದು ಹುರಿದುಂಬಿಸುತ್ತಿದ್ದೆವು.

ಒಂದು ದಿನ ಶಾಮಣ್ಣ ನನ್ನ ಹತ್ತಿರ ಬಂದು ಪೇಟೆ ಬೀದಿಯ ಅಂಗಡಿಯಲ್ಲಿ ಒಂದು ಅದ್ಭುತವಾದ ಯಾವುದೋ ವಾದ್ಯ ನೇತುಹಾಕಿದ್ದಾನೆಂದು ಹೇಳಿ

ಅದನ್ನು ತೋರಿಸಲು ನನ್ನನ್ನು ಕರೆದುಕೊಂಡು ಹೋದರು. ಗ್ರೀನ್ ಶಾಪಿನ ಹೊರಗಡೆ ಶಾಮಣ್ಣ ಹೇಳಿದ ಅದ್ಭುತ ವಾದ್ಯ ನೇತಾಡುತ್ತಾ ಇತ್ತು. ಅಂಗಡಿಯವರಿಗೆ ಅದೆಂಥ ವಾದ್ಯ ಎಂದು ಕೇಳಿದ್ದಕ್ಕೆ ಆತ ಅದು 'ಬುಲ್‌ಬುಲ್ ತರಂಗ್' ಎಂದೂ, ಇದು ಹೆಚ್ಚಾಗಿ ಸಾಬರು ಉಪಯೋಗಿಸುವ ವಾದ್ಯವೆಂದೂ, ಅವರ ಹಬ್ಬ ಹರಿದಿನಗಳಲ್ಲಿ ಸಾವಿರಾರು ರೂಪಾಯಿ ಖರ್ಚುಮಾಡಿ ಈ ವಾದ್ಯ ಬಾರಿಸುವವರನ್ನು ಬೊಂಬಾಯಿಂದ ಕರೆಸುತ್ತಾರೆಂದೂ ಹೇಳಿದ. 'ಬುಲ್‌ಬುಲ್ ತರಂಗ್' ಎನ್ನುವ ಅದರ ಹೆಸರಿಗೇ ಮರುಳಾಗಿ ಶಾಮಣ್ಣ "ಮಾರಾಯ ಅದನ್ನು ಕೆಳಗಿಳಿಸಿ" ಎಂದರು. ಅದನ್ನು ವಿವರವಾಗಿ ಇಬ್ಬರೂ ಪರಿಶೀಲಿಸಿದೆವು. ಅದಕ್ಕೆ ಟೈಪ್‌ರೈಟರಿಗೆ ಇರುವ ಹಾಗೆ ಒತ್ತುವ ಕೀಲುಗಳೆಲ್ಲಾ ಇದ್ದುವು. ನಾನು ನೋಡಿದ ಯಾವ ವಾದ್ಯಕ್ಕೂ ಈ ರೀತಿ ಒತ್ತುವ ಬಟನ್ನುಗಳನ್ನು ನೋಡಿರಲಿಲ್ಲ. ಹಾಗಾದರೆ ಇದ್ಯಾವುದೋ ಅತ್ಯಾಧುನಿಕ ತಂತ್ರಜ್ಞಾನ ಅಳವಡಿಸಿದ ಹಾಡುವ ಯಂತ್ರವೇ ಸರಿ ಎಂದು ಆಲೋಚಿಸಿದೆ. ಅಂಗಡಿಯವನೇನೋ ಇದೊಂದು ಅದ್ಭುತ ವಾದ್ಯವೆಂದು ಹೊಗಳಿ, ಅದರ ಹೆಸರು ಕೇಳಿಲ್ಲದ ನಮ್ಮ ಅಜ್ಞಾನಕ್ಕೆ ಕನಿಕರ ಸೂಚಿಸಿ, ಅದರ ಮೇಲೆ ಹನ್ನೆರಡು ರೂಪಾಯಿ ಎಂದು ಹೇಳಿದ. ಅದರ ಬೆಲೆ ಕೇಳಿದ ಕೂಡಲೆ ನನಗೆ ಆ ವಾದ್ಯದ ಮಹತ್ತಿನ ಬಗ್ಗೆ ಸ್ವಲ್ಪ ಅನುಮಾನ ಆರಂಭವಾಯ್ತು, ಇದು ಶಾಮಣ್ಣನ ಹತ್ತಿರವಿದ್ದ ಕೊಳಲಿನಂತೆಯೇ ನಕಲಿ ಮಾಡಿರಬಹುದು ಎಂದು. ಜೊತೆಗೆ ಈ ವಾದ್ಯವನ್ನು ಅಂಗಡಿಯವ ಇಷ್ಟೊಂದು ಹೊಗಳಿದರೂ ರೇಡಿಯೋದಲ್ಲಾಗಲೀ ಅಥವಾ ಬೇರೆಡೆಗಳಲ್ಲಾಗಲೀ ಇದರ ಕಛೇರಿಗಳನ್ನೇ ನಾವು ಕೇಳಿಲ್ಲ! ಇದನ್ನೆಲ್ಲಾ ಯೋಚಿಸಿ ಶಾಮಣ್ಣನಿಗೆ ಇದನ್ನು ಕೊಳ್ಳುವುದು ಬೇಡ ಈ ವಾದ್ಯದ ಹೆಸರೇ ನಾನು ಈವರೆಗೂ ಕೇಳಿಲ್ಲ ಎಂದು ಅನುಮಾನ ಸೂಚಿಸಿದೆ. ಶಾಮಣ್ಣ ಮನಸ್ಸಿಲ್ಲದ ಮನಸ್ಸಿನಿಂದ ಹಿಂದಿರುಗಿದರು.

ಆದರೆ ಶಾಮಣ್ಣ ಅದನ್ನು ಕೊಳ್ಳಲು ನಾನು ಪ್ರೋತ್ಸಾಹಿಸಬಹುದೆಂದು ಕರೆದೊಯ್ದಿದ್ದು, ಏಕೆಂದರೆ ನಾನು ಮನೆಗೆ ಹೋದಕೂಡಲೇ ಅವರು ಅದನ್ನು ಕೊಂಡಿದ್ದರು. ಮಾರನೇ ದಿನ ನಾನು ಅವರನ್ನು ನೋಡಲು ಒಕ್ಕಲಿಗರ ಹಾಸ್ಟೆಲಿಗೆ ಹೋದಾಗ ಶಾಮಣ್ಣನ ರೂಮಿನಿಂದ ಜುಯ್ ಜುಯ್ ಗಿಲಿಗಿಲಿ ಎಂದು ಬಳೆ ಅಲ್ಲಾಡಿಸಿದಂತೆ ಸದ್ದು ಕೇಳಿತು. ಒಳಗೆ ಶಾಮಣ್ಣ ಆ ವಾದ್ಯ ಮಿಡಿಯಲು ಕೊಟ್ಟಿದ್ದ ಪ್ಲಾಸ್ಟಿಕ್ ಚೂರಿನಿಂದ ಬುಲ್ ಬುಲ್ ತರಂಗ್ ಮಿಡಿಯುತ್ತಾ ಯಾವುದೋ ಸಿನೆಮಾ ಹಾಡು ಬಾರಿಸಲು ಪ್ರಯತ್ನಿಸುತ್ತಾ ಇದ್ದರು. ನನಗಂತೂ ಬರೇ ಚಯ್ ಚಯ್ ಎಂದು ಸದ್ದು ಮಾಡುವ ಆ ವಿಚಿತ್ರ ವಾದ್ಯದಿಂದ ಯಾವ ಹಾಡನ್ನೂ ಬಾರಿಸಲು ಸಾಧ್ಯವಿಲ್ಲವೆಂದೆನ್ನಿಸಿತು. ಆದರೆ ಶಾಮಣ್ಣ ಎದೆಗುಂದದೆ ಆ ವಾದ್ಯದ

ಜೊತೆ ಬಂದಿದ್ದ ಕೀಲಿ ಸಹಾಯದಿಂದ ಅದರ ತಂತಿಗಳನ್ನು ಬಿಗಿ ಮಾಡುತ್ತಾ ಸಡಿಲ ಮಾಡುತ್ತಾ ಸುಶ್ರಾವ್ಯವಾದ ಸದ್ದು ಬರಿಸಲು ಸಾಧ್ಯವೆ ಎಂದು ನಿರಂತರವಾಗಿ ಪ್ರಯತ್ನಿಸುತ್ತಲೇ ಇದ್ದರು. ಶಿವಮೊಗ್ಗದಲ್ಲಿ ನನಗಾದ ಸಂಗೀತದ ಸಂಪರ್ಕ ಎಂದರೆ ಇಷ್ಟೇ, ಭಾರತೀಯ ಸಂಗೀತದ ಯಾವ ಹಿನ್ನಲೆಯೂ ಇಲ್ಲದ ಶಾಮಣ್ಣ ಆಟದ ಸಾಮಾನುಗಳಂಥ ವಾದ್ಯಗಳನ್ನು ತಂದುಕೊಂಡು ಅವುಗಳಲ್ಲಿ ಹಾಡು ಬಾರಿಸಲು ಹೆಣಗುತ್ತಿದ್ದುದು. ಅವರ ಉದ್ದೇಶವೂ ಅಂತಿಮವಾಗಿ ಆಗ ಚಾಲ್ತಿಯಲ್ಲಿದ್ದ ಸಿನೆಮಾ ಹಾಡುಗಳನ್ನು ಬಾರಿಸುವುದೇ ಆಗಿತ್ತು. ಶಾಮಣ್ಣನ ಕುತೂಹಲ ಯಾವುದೇ ರೀತಿಯೇ ಆಗಿರಲಿ, ಅದೂ ಸಹ ನನಗೆ ಸಂಗೀತದ ಬಗ್ಗೆ ಸ್ವಲ್ಪವಾದರೂ ಅಭಿರುಚಿಯನ್ನು ಕೆರಳಿಸಲಿಲ್ಲ.

ಒಂದು ದಿನ ಅಣ್ಣ ಮನೆಯ ಮುಂದುಗಡೆ ವರಾಂಡದಲ್ಲಿ ಪತ್ರಿಕೆ ಓದುತ್ತಾ ಕೂತಿದ್ದವರು ಎತ್ತಲೋ ಹೋಗುತ್ತಿದ್ದ ನನಗೆ ಅಲ್ಲಿದ್ದ ಇನ್ವಿಟೇಷನ್ ತೋರಿಸುತ್ತಾ "ಏನಯ್ಯ ಇದೂ ಕಡಿದಾಳು ಶಾಮಣ್ಣನ ದಂತ ವಾದ್ಯ ಅಂತ ಇದೆಯಲ್ಲಾ? ಇದು ಯಾವ ವಾದ್ಯ? ಹ್ಯಾಗೆ ಬಾರಿಸುವುದು? ಸರೋದ್ ಸಿತಾರ್ ಕಲಿಯುತ್ತೇನೆ ಅಂತ ಓಡಾಡುತ್ತಿದ್ರಿ, ಈಗ ನೋಡಿದರೆ ದಂತ ವಾದ್ಯ ಅಂತ ಪ್ರಿಂಟ್ ಮಾಡಿದ್ದಾರಲ್ಲಾ?' ಎಂದು ಆಶ್ಚರ್ಯಚಕಿತರಾಗಿ ಕೇಳಿದರು. ನನಗೆ ಶಾಮಣ್ಣನ ದಂತವಾದ್ಯದ ವಿಚಾರ ಗೊತ್ತಿದ್ದರೂ ಅದರಲ್ಲಿ ಇವರು ಕಛೇರಿ ನಡೆಸುವಷ್ಟು ಮುಂದುವರಿದಿದ್ದು ನೋಡಿ ಅಚ್ಚರಿಯಾಗಿ ಆ ಆಮಂತ್ರಣ ಪತ್ರಿಕೆ ತಗೊಂಡು ನೋಡಿದೆ. ಯುವರಾಜಾ ಕಾಲೇಜಿನ ಯಾವುದೋ ಒಂದು ಸಮಾರಂಭದಲ್ಲಿ ಶಾಮಣ್ಣನ ಸಂಗೀತದ ಪ್ರೋಗ್ರಾಂ ಅಚ್ಚಾಗಿತ್ತು. ಅಣ್ಣ ವೈಸ್ ಛಾನ್ಸಲರ್ ಆಗಿದ್ದರಿಂದ ಸಂಪ್ರದಾಯದಂತೆ ಅವರಿಗೂ ಇನ್ವಿಟೇಷನ್ ಕಳಿಸಿದ್ದರು. ಅಣ್ಣನಿಗೆ ಶಾಮಣ್ಣನ ದಂತವಾದ್ಯದ ವಿಚಾರ ಹೇಳಿದೆ. ಕೇಳಿ ಗಟ್ಟಿಯಾಗಿ ನಕ್ಕರೂ, ಕುತೂಹಲ ವ್ಯಕ್ತಪಡಿಸಿದರು.

ಶಾಮಣ್ಣನ ಸಂಗೀತದ ಗೀಳು ಹೇಗಿತ್ತೆಂದರೆ ಸದ್ದು ಹೊರಡಿಸಬಹುದಾದ ಏನೇನು ಸಿಕ್ಕರೂ ಅದರಲ್ಲಿ ಏನಾದರೂ ಸಂಗೀತ ಬಾರಿಸಲು ಸಾಧ್ಯವೆ ಎಂದು ಪ್ರಯತ್ನಿಸುತ್ತಿದ್ದರು. ಅವರ ಲೇಟೆಸ್ಟ್ ಪ್ರಯೋಗ ಎಂದರೆ ಬೆರಳಿನಿಂದ ಹಲ್ಲಿಗೆ ಟಕಟಕ ಕುಟ್ಟುತ್ತಾ ಘಟಂ ರೀತಿ ಸದ್ದು ಹೊರಡಿಸುವುದು. ಆದರೆ ಹಾಗೇ ಕುಟ್ಟುತ್ತಾ ಬಾಯಿಯ ಸುತ್ತಳತೆಯನ್ನು ಹೆಚ್ಚು ಕಡಿಮೆ ಮಾಡುವುದರ ಮೂಲಕ ಹಲ್ಲು ಕುಟ್ಟುವ ಟಕಟಕ ಸದ್ದಿನಲ್ಲೇ ಅನೇಕ ವೈವಿಧ್ಯತರ ಶಬ್ದಗಳನ್ನು ಹೊರಡಿಸಬಹುದು ಎಂದು ಕಂಡುಕೊಂಡರು. ಹಾಗೇ ಪ್ರಯತ್ನಿಸುತ್ತಾ ನಿಧಾನವಾಗಿ ಒಂದು ದಿನ 'ಮೇರಾ ಜೂತಾ ಹೈ ಜಾಪಾನಿ' ಎಂಬ ಸಿನೆಮಾ ಹಾಡನ್ನು ಅನುಕರಣೆ ಮಾಡೇಬಿಟ್ಟರು. ಸಿನೆಮಾ ಪ್ರೇಮಿಗಳಾದ ಹಾಸ್ಟಲ್ ಹುಡುಗರಿಗೆಲ್ಲಾ ಥ್ರಿಲ್ಲೋಥ್ರಿಲ್ಲು! "ಅಯ್ಯಯ್ಯೋ! ಶಾಮಣ್ಣೋರು ಹಲ್ನಾಗೇ ಹಾಡು ಬಾರಿಸ್ತಾರಂತೆ ಕಣಲೇ!"

ಎಂದು ಎಲ್ಲರೂ ಶಾಮಣ್ಣನ ರೂಮಿಗೆ ನುಗ್ಗಿದರು. ಶಾಮಣ್ಣನ ಹಲ್ಲುಗಳಿಗೆ ಪುರುಸೊತ್ತೇ ಇಲ್ಲ. ಶಾಮಣ್ಣನ ಪ್ರತಿಭೆಯನ್ನು ಕಂಡು ತಲೆದೂಗಿದ ಕೆ.ಹೆಚ್. ಶ್ರೀನಿವಾಸ್ ಈ ಸಂಗೀತಕ್ಕೆ ಹಲ್ಲಿನಲ್ಲಿ ಹಾಡು ಬಾರಿಸುವುದು ಎಂದೆಲ್ಲಾ ಕರೆಯುವುದು ಸರಿಯಲ್ಲ ಎಂದು 'ದಂತವಾದ್ಯ' ಎಂದು ವಿಧ್ಯುಕ್ತವಾಗಿ ನಾಮಕರಣ ಮಾಡಿದರು.

ಯುವರಾಜಾ ಕಾಲೇಜಿನ ಸಮಾರಂಭದಲ್ಲಿ ನೀವೊಂದು ಕಛೇರಿ ಕೊಡಲೇ ಬೇಕು ಎಂದು ಹಾಸ್ಟೆಲಿನಲ್ಲಿದ್ದ ಯುವರಾಜಾ ಕಾಲೇಜಿನ ಅಭಿಮಾನಿಗಳೆಲ್ಲಾ ಶಾಮಣ್ಣನನ್ನು ಪೀಡಿಸಿದರು. ಹಾಗಾಗಿ ಯುವರಾಜಾ ಕಾಲೇಜಿನಲ್ಲಿ ಶಾಮಣ್ಣನ ದಂತವಾದ್ಯ ಕಛೇರಿ ಏರ್ಪಾಡಾಗಿ ಅದು ಹೇಗೋ ಅಣ್ಣನ ಕೈಸೇರಿತ್ತು. ಯುವರಾಜಾ ಕಾಲೇಜಿನಲ್ಲಿ ಶಾಮಣ್ಣನ ದಂತವಾದ್ಯ ಪ್ರಚಂಡ ಯಶಸ್ಸು ಗಳಿಸಿತು. ಆಗ ಸೀಬಯ್ಯನವರು ಯುವರಾಜಾ ಕಾಲೇಜಿನ ಪ್ರಿನ್ಸಿಪಾಲರಾಗಿದ್ದರು. ಸಭೆಗೆ ಅವರದೇ ಅಧ್ಯಕ್ಷತೆ. 'ಈಗ ಶಾಮಣ್ಣನವರಿಂದ ದಂತವಾದ್ಯ ಸಂಗೀತ' ಎಂದು ಅವರು ಮೈಕಿನಲ್ಲಿ ಹೇಳಿದ ಕೂಡಲೇ ಶಾಮಣ್ಣ ವೇದಿಕೆ ಹತ್ತಿದರು. ಕೈಯ್ಯಲ್ಲಿ ಯಾವ ವಾದ್ಯವೂ ಇಲ್ಲದೆ ವೇದಿಕೆ ಹತ್ತುತ್ತಿದ್ದ ಅವರತ್ತ ಸೀಬಯ್ಯನವರು ಸಿನಿಕಮೋರೆ ಮಾಡಿಕೊಂಡು ನೋಡಿದರು. ಶಾಮಣ್ಣನಿಗೂ ಸಂಕೋಚ ಗಾಬರಿಗಳಿದ್ದುವು. ಮೈಕಿನ ಹತ್ತಿರ ಹಲ್ಲು ಕಿರಿದು ಶಾಮಣ್ಣ ಮೇರಾ ಜೂತಾ ಹೈ ಜಾಪಾನಿ ಹಾಡಿನ ಮೊದಲ ಚರಣ ಬಾರಿಸಿದ ಕೂಡಲೇ ಚಪ್ಪಾಳೆಯ ಸುರಿಮಳೆ ಶುರುವಾಯ್ತು. ಹೊರಗಡೆ ಸಾಧಾರಣವಾಗಿ ಕೇಳುತ್ತಿದ್ದ ಶಾಮಣ್ಣನ ಹಲ್ಲು ಕುಟ್ಟುವ ಸದ್ದು ಮೈಕಿನ ಹತ್ತಿರದಲ್ಲಿ ಕುಟ್ಟಿದಾಗ ಅದ್ಭುತವಾಗಿ ಕೇಳುತ್ತಿತ್ತು. ಅಲ್ಲದೆ ಬಾಯಿಯ ಸುತ್ತಳತೆಯನ್ನು ಹೆಚ್ಚು ಕಡಿಮೆ ಮಾಡಿ ಅವರು ಸದ್ದಿನಲ್ಲಿ ತರುತ್ತಿದ್ದ ಏರಿಳಿತ ಬಹಳ ಸ್ಪಷ್ಟವಾಗಿ ಕೇಳುತ್ತಿತ್ತು. ಅನೇಕ ಹುಡುಗರು ಶಾಮಣ್ಣ ಹಾಡು ಬಾರಿಸಿದಂತೆ ಮೆಲುದನಿಯಲ್ಲಿ ಹಾಡನ್ನೂ ಹೇಳತೊಡಗಿದರು. ಶಾಮಣ್ಣನ ಕಛೇರಿ ಮುಗಿಯುತ್ತಿದ್ದ ಹಾಗೇ ಸಭಾ ಮರ್ಯಾದೆ ಯನ್ನು ಗಾಳಿಗೆ ತೂರಿ ಎಲ್ಲರೂ ವೇದಿಕೆಯತ್ತ ನುಗ್ಗಿದರು. ಎಲ್ಲರಿಗೂ ಶಾಮಣ್ಣನ ಸಂಗೀತದ ಸುಶ್ರಾವ್ಯತೆಗಿಂತ ಹೆಚ್ಚಾಗಿ ಹಲ್ಲಿನಿಂದ ಸದ್ದು ಹೊರಡಿಸುತ್ತಾರಲ್ಲಾ ಎನ್ನುವ ಅಚ್ಚರಿ! ಎಲ್ಲರೂ ಇನ್ನೊಂದು ಬಾರಿಸಿ ಮತ್ತೊಂದು ಬಾರಿಸಿ ಎಂದು ಶಾಮಣ್ಣನಿಗೆ ದುಂಬಾಲು ಬಿದ್ದರು. ಸಭೆ ಮುಂದುವರಿಸಲು ಸೀಬಯ್ಯನವರಿಗೆ ಸಾಕುಬೇಕಾಗಿ ಹೋಯ್ತು. ಶಾಮಣ್ಣ ಮಾರನೇ ದಿನದಿಂದಲೇ ಇಡೀ ಯೂನಿವರ್ಸಿಟಿಯಲ್ಲಿ ಪ್ರಖ್ಯಾತ ವ್ಯಕ್ತಿಯಾಗಿ ಹೋದರು. ಎಲ್ಲಾ ಕಾಲೇಜಿನ ಎಲ್ಲಾ ಫಂಕ್ಷನ್ನುಗಳಿಗೂ ನೀವು ಬರಲೇ ಬೇಕು ಎಂದು, ಹುಡುಗರು ಶಾಮಣ್ಣನನ್ನು ನಿಲ್ಲಿಸಿಕೊಂಡು ಅದು ಹೇಗೆ ಬಾರಿಸುತ್ತೀರ ಚೂರು ತೋರಿಸಿ ಎಂದು ಪೀಡಿಸತೊಡಗಿದರು. ದುರ್ದೈವ ವೆಂಬಂತೆ ಶಾಮಣ್ಣ ಹಲ್ಲಿಗೆ ಕಟಕಟ ಹೊಡೆದೂ ಹೊಡೆದೂ ಹಲ್ಲು ನೋವು ಸಹ ಶುರುವಾಯ್ತು. 'ಹಲ್ಲಿಗೆ ತಣ್ಣೀರು ತಾಗಿಸಿದರೆ

ಕಣ್ಣಲ್ಲಿ ನೀರು ಬರುವಷ್ಟು' ನೋಯುತ್ತದೆ ಎಂದು ಶಾಮಣ್ಣ ಹೇಳುತ್ತಿದ್ದರು. ಈ ಅಭಿಮಾನಿಗಳಿಗೆಲ್ಲಾ ಇರುವುದು ಸಂಗೀತದ ಬಗ್ಗೆ ಆಸಕ್ತಿಯೂ ಅಲ್ಲ, ಅಭಿರುಚಿಯೂ ಅಲ್ಲ, ಹಲ್ಲಿನಿಂದ ಹಾಡು ಬಾರಿಸುತ್ತಾನಲ್ಲ ಎನ್ನುವ ಕುತೂಹಲ ಮಾತ್ರ ಎಂದು ಶಾಮಣ್ಣನಿಗೂ ಅರಿವಾಯ್ತೋ ಏನೋ! ದಂತವಾದ್ಯ ಬಾರಿಸುವುದನ್ನು ಇದ್ದಕ್ಕಿದ್ದ ಹಾಗೇ ಶಾಶ್ವತವಾಗಿ ನಿಲ್ಲಿಸಿಬಿಟ್ಟರು. ಇದರಿಂದಾಗಿ ಅಣ್ಣನಿಗೆ ಶಾಮಣ್ಣನ ದಂತವಾದ್ಯ ಕೇಳುವ ಅವಕಾಶವೇ ಸಿಕ್ಕಲಿಲ್ಲ. ಒಂದು ಸಾರಿ ಈ ಬಗ್ಗೆ ಅದೇನು ಎಂದು ಶಾಮಣ್ಣನನ್ನು ಕೇಳಿಯೂ ಕೇಳಿದ್ದರು. ಆದರೆ ಶಾಮಣ್ಣ ಸಂಕೋಚದಿಂದ ಹಲ್ಲುನೋವಿನ ನೆಪ ಹೇಳಿ ತಲೆ ತಪ್ಪಿಸಿಕೊಂಡರು.

ಶಾಮಣ್ಣನ ದಂತವಾದ್ಯದ ಬಗ್ಗೆ ಇಷ್ಟೊಂದು ಪ್ರೀತ್ಯಾದರಗಳನ್ನು ಪ್ರಕಟಿಸಿದ ಹಾಸ್ಟೆಲ್ ಹುಡುಗರೆಲ್ಲಾ ಮುಂದೆ ಕೆಲವೇ ದಿನಗಳಲ್ಲಿ ಶಾಮಣ್ಣ ಅವರ ರೂಮಿನಲ್ಲಿ ಶಾಸ್ತ್ರೀಯ ಸಂಗೀತಾಭ್ಯಾಸ ಶುರು ಮಾಡಿದ ಕೂಡಲೇ ನನ್ನನ್ನೂ ಶಾಮಣ್ಣನನ್ನೂ ಅಲ್ಲಿಂದ ಉಚ್ಚಾಟಿಸಬೇಕೆಂದು ವೈಸ್ ಛಾನ್ಸಲರ್‌ವರೆಗೂ ದೂರು ಒಯ್ಯಬೇಕಾಗಿ ಬಂದಿದ್ದು ಮಾತ್ರ ವಿಚಿತ್ರ ವಿರೋಧಾಭಾಸವೆಂದು ಹೇಳಬಹುದು.

"ಏ ತೇಜಸ್ವಿ"

"ಏನಣ್ಣಾ"

"ಇಲ್ಲಿ ಬಾ" ಎಂದು ಅಣ್ಣ ವರಾಂಡದ ಕುರ್ಚಿಯಲ್ಲಿ ಕುಳಿತು ಯೂನಿವರ್ಸಿಟಿ ಫೈಲುಗಳನ್ನು ನೋಡುತ್ತಾ ಇದ್ದವರು ಕರೆದರು. ನಾನು ಎದುರು ಹೋಗಿ ಏನು ಎನ್ನುವಂತೆ ಮುಖ ಮಾಡಿ ನಿಂತೆ.

"ನೀನು, ಶಾಮಣ್ಣ ಹಾಸ್ಟಲಿನಲ್ಲಿ ಸಂಗೀತ ಶುರುಮಾಡಿ ದೊಂಬಿ ಎಬ್ಬಿಸಿ ಹುಡುಗರೆಲ್ಲಾ ಹೋಗಿ ವಾರ್ಡನ್ನಿಗೆ ಕಂಪ್ಲೇಂಟು ಕೊಟ್ಟಿದ್ದಾರಂತಲ್ಲ. ಅದು ಯಾವ ತರದ ಸಂಗೀತಾಭ್ಯಾಸ ನಿಮ್ಮದು? ನೀನು ಏನು ಮಾಡುವುದಕ್ಕೆ ಹೋದರೂ ಅಲ್ಲಿ ಏನಾದರು ಒಂದು ರಾದ್ಧಾಂತ ಇರುತ್ತಲ್ಲ? ಕಲಾ, ತಾರಿಣಿ ಎಷ್ಟೋ ವರ್ಷದಿಂದ ಸಂಗೀತ ಕಲಿಯುತ್ತಿದ್ದಾರೆ. ಯಾರಿಗೂ ಯಾವ ತರದ ಕಿರುಕುಳ ಆಗಿದ್ದು ನೋಡಿಲ್ಲ. ನೀವು ಸಂಗೀತವಾದ್ಯ ಕೈಗೆ ತಗೊಳ್ಳುತ್ತಿದ್ದ ಹಾಗೇ ಊರೆಲ್ಲಾ ತಳಮಳ ಶುರುವಾಗಿದೆಯಲ್ಲ. ಮೊನ್ನೆ ಜಯಲಕ್ಷಮ್ಮಣ್ಣಿ ನಿಮ್ಮ ಮೇಲೆ ದೂರು ಹೇಳಿದರು. ಇವತ್ತು ಹಾಸ್ಟಲಿನಲ್ಲಿ ನಿಮ್ಮ ಗಲಾಟೆ ಅಂತ ದೂರು!"

"ಯಾರು ಹೇಳಿದರು ನಿಮಗೆ? ವಾರ್ಡನ್ ಹೇಳಿದರ?"

"ಯಾರಾದರೂ ಹೇಳಲಿ ನಿನಗ್ಯಾಕೆ? ವಾರ್ಡನ್ ನನಗೆ ಹೇಳಲಿಲ್ಲ, ನನಗೆ ಬಂದ ದೂರು ನಿಜವೋ ಸುಳ್ಳೋ ತಿಳಿಯಲು ನಾನೇ ಕೃಷ್ಣನ್‌ಗೆ ಪೋನು ಮಾಡಿ ವಿಚಾರಿಸಿದೆ".

"ಅಲ್ಲಣ್ಣ, ಗಲಾಟೆಯಾಗುತ್ತೆ, ಅದಕ್ಕೇ ಮೆಡಿಟೇಷನ್ ರೂಮಿಗೆ ಹೋಗಿ ಅಲ್ಲಿ ಸಂಗೀತಾಭ್ಯಾಸ ಮಾಡಿ ಅಂತ ಅವರೇ ಹೇಳಿದ್ದಾರೆ. ಮತ್ತೂ ನಮ್ಮ ಮೇಲೆ ದೂರು ಹೇಳಿದರೆ ನಾವೇನು ಮಾಡುವುದು?"

"ಅಲ್ಲಯ್ಯ ನೀವು ಸಂಗೀತ ಅಂತ ಹೇಳಿ ಡೋಲು ತಮಟೆ ನಗಾರಿ ಕೊಂಬು ಕಹಳೆ ಎಲ್ಲಾ ತಗೊಂಡು ಹೋಗಿ ಹಾಸ್ಟೆಲಿನಲ್ಲಿ ಬಾರಿಸಿದರೆ ಓದಬೇಕು ಅಂತ ಬಂದಿರೋ ಹುಡುಗರ ಕತೆ ಏನಾಗಬೇಕು? ನಿಮ್ಮ ಸಂಗೀತಾಭ್ಯಾಸ ನೀನು ಹೇಳುವಷ್ಟು ಸರಳವಾಗಿ ನನಗೆ ಕಾಣುತ್ತಿಲ್ಲ. ಇಲ್ಲಿ ಮನೆಯಲ್ಲಿ ನಿಮ್ಮ ಸಂಗೀತಾಭ್ಯಾಸ ನಾನೇ ನೋಡಿದೀನಲ್ಲ".

ಅಣ್ಣನಿಗೆ ಅವತ್ತು ನಮ್ಮ ಸಂಗೀತಾಭ್ಯಾಸದ ಕಿರಿಕಿರಿಗಳಿಂದ ಸಿಟ್ಟೇ ಬಂದಿತ್ತು. ಅಲ್ಲದೆ ಕೇವಲ ಎರಡು ದಿನಗಳ ಹಿಂದೆ ಜಯಲಕ್ಷ್ಮಮ್ಮಣ್ಣಿಯವರು ನಮ್ಮ ಸಂಗೀತದ ಅವಾಂತರಗಳಲ್ಲಿ ಒಂದನ್ನು ಅಣ್ಣನ ಗಮನಕ್ಕೆ ತಂದು ಕೊಂಚ ಕಿರಿಕಿರಿಯನ್ನುಂಟು ಮಾಡಿದ್ದರು.

ನಮ್ಮ ಸಂಗೀತಾಭ್ಯಾಸದ ರೋಮಾಂಚಕ ಸಾಧನೆಗಳಲ್ಲಿ ಒಂದೆಂದರೆ ಕೆಲವರು ಸ್ತ್ರೀ ಅಭಿಮಾನಿಗಳನ್ನು ಸಂಪಾದಿಸಿ ಹುಡುಗರಿಗೆಲ್ಲಾ ಹೊಟ್ಟೆಕಿಚ್ಚು ಉಂಟು ಮಾಡಿದ್ದು. ನಮ್ಮ ವಿರೋಧಿಗಳಿಗೆಲ್ಲಾ ಹೊಟ್ಟೆಗೆ ಬೆಂಕಿ ಬಿದ್ದ ಹಾಗಾಗಿತ್ತು. ನಮ್ಮ ಸಂಗೀತ ಪ್ರೇಮದ ಮೂಲ ಉದ್ದೇಶವೇ ಇದೆಂದು ಅವರು ದೃಢವಾಗಿ ನಂಬಿದ್ದರು. ಈ ನಡುವೆ ಒಂದು ಸಂಗೀತ ಕಛೇರಿಯ ಕೆಲವು ಟಿಕೆಟ್ಟುಗಳನ್ನು ಮಾರಿಕೊಡಿ ಎಂದು ಅದನ್ನು ಏರ್ಪಡಿಸಿದ್ದ ದೊರೆಸ್ವಾಮಿ ಎನ್ನುವವರು ಶಾಮಣ್ಣನಿಗೂ ಒಂದು ಟಿಕೆಟ್ ಬುಕ್ ಕೊಟ್ಟಿದ್ದರು. ಶಾಮಣ್ಣ ನಮ್ಮ ಸ್ತ್ರೀ ಅಭಿಮಾನಿಗಳಿಗೂ ಒಂದೊಂದು ಟಿಕೆಟ್ ಹಾಕಿದ್ದರು. ಆದರೆ ಅವರು ಕಛೇರಿ ಹಿಂದಿನ ದಿನ ಬಂದು, ಕಛೇರಿ ಮುಗಿಯುವುದು ರಾತ್ರಿ ತುಂಬಾ ಹೊತ್ತಾಗುವುದರಿಂದ ನಿಮ್ಮನ್ನು ಬಿಡುವುದಿಲ್ಲ ಎಂದು ಹಾಸ್ಟಲಿನ ವಾರ್ಡನ್ ಆಗಿದ್ದ ಜಯಲಕ್ಷ್ಮಮ್ಮಣ್ಣಿ ಹೇಳುತ್ತಿದ್ದಾರೆ. ನೀವು ಬಂದು ಹೇಳಿ ನಮಗೆ ಕಛೇರಿಗೆ ಬರಲು ಪರ್ಮಿಷನ್ ಕೊಡಿಸಬೇಕು ಎಂದು ಶಾಮಣ್ಣನಿಗೆ ಗಂಟುಬಿದ್ದರು. ಅವರಿಗೆ ಟಿಕೆಟ್ಟು ಮಾರಿದ್ದರಿಂದ ಶಾಮಣ್ಣ ಆ ಜವಾಬ್ದಾರಿ ತಗೊಳ್ಳಲೇಬೇಕಾಯ್ತು. ನಾನು ಶಾಮಣ್ಣ ಹೋಗಿ ಅವರ ವಾರ್ಡನ್ ಬಳಿ ಪರ್ಮಿಷನ್ ಕೇಳಿದೆವು. ಅವರು ಹುಡುಗಿಯರನ್ನು ಹಾಗೆಲ್ಲಾ ರಾತ್ರಿ ಹೊತ್ತಲ್ಲದ ಹೊತ್ತಿನಲ್ಲಿ ಹುಡುಗರ ಜೊತೆ ತಿರುಗಲು ಬಿಡುವುದು ಸಾಧ್ಯವೇ ಇಲ್ಲವೆಂದು ನಮಗೆ ಹೇಳಿದರು. ಅವರು ಅಷ್ಟೇ ಮಾಡಿದ್ದರೆ ನಮಗೇನೂ ಬೇಸರವಿರಲಿಲ್ಲ. ಆದರೆ ನಾವು ಹಿಂದಿರುಗುತ್ತಿದ್ದಂತೆಯೇ ಅಣ್ಣನಿಗೆ ಫೋನ್ ಮಾಡಿ ನಿಮ್ಮ ಮಗ ಹೀಗೆ ಕೇಳಿಕೊಂಡು ಬಂದಿದ್ದ ಎಂದು ಚಾಡಿ ಹೇಳಿದ್ದರು. ಇದು ಮಾತ್ರ ನನಗೆ

ತುಂಬಾ ಸಣ್ಣತನವೆಂದೆನ್ನಿಸುತ್ತದೆ. ಈ ಪುಕಾರಿನ ಬೆನ್ನಿಗೇ ನಮ್ಮ ಹಾಸ್ಟಲಿನ ಗಲಾಟೆಯೂ ಅಣ್ಣನ ಕಿವಿಗೆ ಬಿದ್ದಿದ್ದರಿಂದ ಅಣ್ಣನಿಗೆ ತುಂಬಾ ಸಿಟ್ಟು ಬಂದಿತ್ತು.

ನಾವು ಮೆಡಿಟೇಷನ್ ರೂಮಿಗೆ ಹೋದಮೇಲೆ ಎಲ್ಲರೂ ಸುಮ್ಮನಾಗಿದ್ದರು. ಆದರೆ ಶಾಮಣ್ಣನ ಶಹನಾಯ್ ದೆಸೆಯಿಂದ ಮತ್ತೆ ಹಾಸ್ಟಲಿನಲ್ಲಿ ಅಸಮಾಧಾನ ಹೊಗೆಯಾಡತೊಡಗಿತು. ಶಾಮಣ್ಣ ನರಸಿಂಹಯ್ಯನಿಂದ ಪೀಪಿ ತಗೊಂಡು ಹೋದ ಮೇಲೂ ಪರಿಸ್ಥಿತಿಯಲ್ಲಿ ಬದಲಾವಣೆಯಾಗದೆ ಶಹನಾಯ್‌ಯಿಂದ ನಿಟ್ಟುಸಿರು ಮಾತ್ರ ಬರುತ್ತಿತ್ತು. ನರಸಿಂಹಯ್ಯನ ಸಲಹೆಯಂತೆ ಶಾಮಣ್ಣ ಪೀಪಿಯನ್ನು ಎಂಜಲಿನಲ್ಲಿ ಒದ್ದೆ ಮಾಡಿ, ಬಿಸಿನೀರಿನಲ್ಲಿ ಕುದಿಸಿ, ಕೊಬ್ಬರಿ ಎಣ್ಣೆ ಹಚ್ಚಿ ತರತರದ ಸಂಸ್ಕಾರ ಮಾಡಿ ಪ್ರಯತ್ನಿಸುತ್ತಲೇ ಇದ್ದರು. ಹೀಗಿರಬೇಕಾದರೆ ಒಂದು ದಿನ ನಾವೆಲ್ಲಾ ಮೆಡಿಟೇಷನ್ ರೂಮಿನ ಹೊರಗೆ ಮಾತಾಡುತ್ತಾ ನಿಂತಿರುವಾಗ ಒಂದು ಅತ್ಯಂತ ಕರ್ಕಶವಾದ ಶಬ್ದ ಮೆಡಿಟೇಷನ್ ರೂಮಿನಿಂದ ಕೇಳಿಬಂತು. ಸಾವಿರಾರು ಕತ್ತೆಗಳು ಒಟ್ಟಿಗೇ ಕೂಗಿದಂಥ ಆ ಕಠೋರ ಶಬ್ದದ ಮೂಲ ಯಾವುದಿರಬಹುದೆಂದು ಊಹಿಸಲೂ ನಮಗೆ ಸಾಧ್ಯವಾಗಲಿಲ್ಲ. ಎಲ್ಲರೂ ಎದ್ದು ಬಿದ್ದು ಒಳಗೆ ಓಡಿದೆವು. "ಏನ್ರೀ ಅದು ಸದ್ದು?" ಎಂದು ಶಹನಾಯ್ ಹಿಡಿದುಕೊಂಡು ಹಸನ್ಮುಖರಾಗಿ ಕುಳಿತಿದ್ದ ಶಾಮಣ್ಣನನ್ನು ಕೇಳಿದೆವು. ಶಾಮಣ್ಣ ನಮ್ಮ ಪ್ರಶ್ನೆಗೆ ಉತ್ತರಿಸುವ ತೊಂದರೆ ತಗೊಳ್ಳಲಿಲ್ಲ. ಅದರ ಬದಲು ಶಹನಾಯ್ ಊದುವುದನ್ನು ಕಲಿತೆ ಎಂದು ಶಾಮಣ್ಣ ಮಂದಹಾಸ ಬೀರಿದರು. ಆದರೆ ಅದನ್ನು ಕೇಳಿದವರ ಕಿವಿ ಮಾತ್ರ ಕೊಂಚ ಹೊತ್ತು ಬೇರಾವ ಸದ್ದೂ ಕೇಳಿಸದಂತೆ ಕೆಪ್ಪಾಗಿಹೋಯ್ತು. ನನಗಂತೂ ಈ ರಣವಾದ್ಯವನ್ನು ಶಾಮಣ್ಣ ಅಭ್ಯಾಸ ಮಾಡಬಹುದಾದ ಜಾಗ ಭೂಮಂಡಲದ ಮೇಲೆ ಎಲ್ಲೂ ಇರುವಂತೆ ಕಾಣಲಿಲ್ಲ.

ಶಾಮಣ್ಣ ತಾವು ಕಲಿತಿದ್ದ ಕೊಳಲು ಬಾರಿಸುವ ಕ್ರಮ ಅನುಸರಿಸಿ ಶಹನಾಯಲ್ಲಿ ಸರಿಗಮ ಬಾರಿಸಲು ಪ್ರಾರಂಭಿಸಿದರು. ಸರಿಗಮವೂ ಇಲ್ಲ! ಪದನಿಸವೂ ಇಲ್ಲ! ಕಿವಿಗಡಚಿಕ್ಕುವ ಶಬ್ದ ಸದ್ದಿನ ಗರಗಸ ಎಳೆದ ಹಾಗೆ ಅದರಿಂದ ಹೊರಬರುತ್ತಿತ್ತು. ತಾಳ್ಮೆಗೆಟ್ಟ ಹಾಸ್ಟಲ್ ಹುಡುಗರೆಲ್ಲಾ ಒಟ್ಟಾಗಿ ವಾರ್ಡನ್ ಬಳಿ, ಶಾಮಣ್ಣನನ್ನು ಮೊದಲು ಹಾಸ್ಟಲಿಂದ ಹೊರಹಾಕಿ ಎಂದು ಮೊರೆಹೊಕ್ಕರು.

ಆಗ ವೈಸ್ ಛಾನ್ಸಲರ್ ಆಗಿದ್ದ ಅಣ್ಣನವರೆಗೂ ಪುಕಾರು ಬರುವುದಕ್ಕೆ ಶಾಮಣ್ಣನ ಗೂಂಜ್ ಉಠೀ ಶಹನಾಯೇ ಕಾರಣ. ಅಣ್ಣನಿಗೆ ನಾವು ಕೊಂಬು ಕಹಳೆ ಎಲ್ಲ ಒಯ್ದು ಹಾಸ್ಟಲಿನಲ್ಲಿ ಊದುತ್ತಿರುವುದು ಸುಳ್ಳು. ಶಾಮಣ್ಣ ಶಹನಾಯ್ ಕಲಿಯುತ್ತಿರುವುದನ್ನೇ ತಿರುಚಿ ನಿಮ್ಮ ಬಳಿ ಯಾರೋ ಚಾಡಿ ಹೇಳಿದ್ದಾರೆ ಎಂದು ಶಹನಾಯ್ ವಿಚಾರ ಹೇಳಿದೆ. ಆದರೆ ಅದರ ಶಬ್ದ ವೈಖರಿಯನ್ನು ಹೇಳಲಿಲ್ಲ.

ಅದನ್ನು ಹೇಳಿದ್ದರೆ ನೀವು ಊರಾಚೆ ಯಾವುದಾದರೂ ಶ್ಮಶಾನದಲ್ಲಿ ಅಭ್ಯಾಸ ಮಾಡಿ ಎಂದು ಅಣ್ಣ ಹೇಳುತ್ತಿದ್ದರೊ ಏನೋ.

ಆದರೂ ಶಹನಾಯ್ ಎಂದ ಕೂಡಲೇ ಅವರು ಚಿಂತಾಕ್ರಾಂತರಾಗಿ "ಅಲ್ಲಯ್ಯ ನಿಮಗೇನಾದರೂ ಬುದ್ಧಿಗಿದ್ದಿ ಇದಿಯ? ಶಹನಾಯಿ, ಓಲಗ, ತುತ್ತೂರಿ, ಕಹಳೆ ರೂಮೊಳಗೆ ಕುಳಿತುಕೊಂಡು ಊದೋ ವಾದ್ಯಗಳೇನೊ? ಅವೇನಿದ್ದರೂ ಮದುವೆ ಮನೆ, ಮೆರವಣಿಗೆ, ಡ್ರಿಲ್ಲು, ಕವಾತು, ಅಲ್ಲೆಲ್ಲಾ ಊದಬಹುದೇ ವಿನಃ ಹಾಸ್ಟಲಿನೊಳಗೆ ಊದುತ್ತಿದ್ದೀರಲ್ಲಾ, ಶುದ್ಧ ಅವಿವೇಕಿಗಳು. ನೀನು ಮೊದಲು ಅಲ್ಲಿ ಹೋಗಿ ಗಲಾಟೆ ಮಾಡುವುದನ್ನು ನಿಲ್ಲಿಸು" ಎಂದು ರೇಗಿದರು. ಆಮೇಲೆ ಕೊಂಚ ಹೊತ್ತು ಯೋಚಿಸಿ "ನೋಡ್ರೋ ನನಗೆ ಕೊಟ್ಟಿರೋ ವೈಸ್ ಛಾನ್ಸಲರ್ ಕ್ವಾರ್ಟರ್ಸ್ ಎಂತಿದ್ದರೂ ಖಾಲಿ ಬಿದ್ದಿದೆ. ಅಲ್ಲಿ ಬೇಕಾದರೆ ನಿಮಗೆ ಸಂಗೀತಾಭ್ಯಾಸಕ್ಕೆ ಒಂದು ರೂಮು ಕೊಡಲು ಹೇಳುತ್ತೇನೆ. ಆದರೆ ಅಲ್ಲಿ ನೀವು ಬರೇ ಸಂಗೀತಾಭ್ಯಾಸ ಮಾಡಬೇಕು. ಮತ್ತೆ ನೀನು ಹುಡುಗರ ಪಟಾಲಮ್ಮು ಕಟ್ಟಿಕೊಂಡು ಗಲಾಟೆ ಮಾಡಬಾರದು" ಎಂದರು.

ಮೈಸೂರು ಯೂನಿವರ್ಸಿಟಿಯ ವೈಸ್ ಛಾನ್ಸಲರ್ ಕ್ವಾರ್ಟರ್ಸ್ ಎಂದರೆ ಒಂದು ಮರಿ ಅರಮನೆ ಇದ್ದ ಹಾಗಿದೆ. ಬ್ರಿಟಿಷರ ಕಾಲದಲ್ಲಿ ಯೂರೋಪಿಯನ್ ದೊರೆಗಳು ಕಟ್ಟಿಸಿದ ಆ ಬಂಗಲೆ ಆಗಿನ ಕಾಲದ ವಾಸ್ತುಶಿಲ್ಪಕ್ಕೆ ಉದಾಹರಣೆಯಂತಿದೆ. ವೈಸ್ ಛಾನ್ಸಲರ್‌ಗಳಿಗೆ ಹುದ್ದೆಗಿಂತಲೂ ಅವರ ಅಧಿಕಾರಾವಧಿಯವರೆಗೆ ಅಲ್ಲಿ ವಾಸ್ತವ್ಯ ಹೂಡುವುದೇ ಹೆಚ್ಚಿನ ಸಂಭ್ರಮವಿರಬೇಕು. ಆದರೆ ಅಣ್ಣ ಅಧಿಕಾರ ವಹಿಸಿಕೊಂಡ ಅನಂತರ ಅಲ್ಲಿಗೆ ಹೋಗಲು ನಿರಾಕರಿಸಿದರು.

ಅಣ್ಣ ವೈಸ್ ಛಾನ್ಸಲರ್ ಬಂಗಲೆಗೆ ಹೋಗದುದನ್ನೇ ದೊಡ್ಡ ವಿವಾದ ಮಾಡಿ ಅನೇಕರು ಪತ್ರಿಕಾ ಹೇಳಿಕೆಗಳನ್ನೆಲ್ಲಾ ಕೊಟ್ಟರು. ಯೂನಿವರ್ಸಿಟಿ ಕಡತಗಳನ್ನೆಲ್ಲಾ ಹೊತ್ತುಕೊಂಡು ಸಿಬ್ಬಂದಿ ಇವರ ಮನೆಗೆ ತಿರುಗಬೇಕಾಗಿದೆ. ಯಾವ ವೈಸ್ ಛಾನ್ಸಲರೂ ಹೀಗೆ ಮಾಡಿರಲಿಲ್ಲ ಇತ್ಯಾದಿ ಇತ್ಯಾದಿ. ಅಣ್ಣ ಅಂಥ ದೊಡ್ಡ ಮಹಲುಗಳು ಕಛೇರಿಗಳಿಗೆ ಸರಿಯೇ ಹೊರತು ಮನುಷ್ಯವಾಸಕ್ಕೆ ಅದು ಯೋಗ್ಯವೆಂದು ನನಗೆ ಅನ್ನಿಸುತ್ತಿಲ್ಲ. ಸಂಸಾರ ಸಮೇತ ನಾನು ಅಲ್ಲಿಗೆ ಗುಳೆ ಹೋಗುವುದು ನನ್ನಿಂದ ಕಲ್ಪಿಸಿಕೊಳ್ಳಲೂ ಸಾಧ್ಯವಿಲ್ಲ ಎಂದು ತಿರಸ್ಕರಿಸಿಬಿಟ್ಟರು. ನಾವು ಸಂಗೀತಾಭ್ಯಾಸಕ್ಕೆ ಅಲ್ಲಿಗೆ ಹೋದಾಗ ಆ ಬೃಹದಾಕಾರದ ರೂಮುಗಳನ್ನೂ, ಭಾರಿ ಭಾರಿ ಕಂಬಗಳನ್ನೂ, ಬ್ರಿಟಿಷರ ಕಾಲದ ಚಿತ್ರ ವಿಚಿತ್ರ ಕುರ್ಚಿಗಳನ್ನು ನೋಡಿ ನನಗೂ ಅಣ್ಣ ಹೇಳಿದ್ದು ಸರಿಯೇ ಅನ್ನಿಸಿತ್ತು. ಆದರೆ ನಾವೇನೂ ಅಲ್ಲಿಗೆ ಸಂಸಾರ ಹೂಡಲು ಬಂದಿರಲಿಲ್ಲವಲ್ಲ. ಸಂಗೀತಾಭ್ಯಾಸಕ್ಕೆ ತಾನೆ! ಆ ದೊಡ್ಡ ದೊಡ್ಡ ರೂಮುಗಳೂ ಚಾವಡಿಗಳೂ ಸಂಗೀತ

ಕಛೇರಿ ನಡೆಸಲು ಹೇಳಿ ಮಾಡಿಸಿದಂತಿದ್ದುವು. ಆ ಬಂಗಲೆಯನ್ನು ಚೌರಿಯಪ್ಪ ಎನ್ನುವ ಒಬ್ಬ ಯೂನಿವರ್ಸಿಟಿ ಅಡಿಗೆಯವ ನೋಡಿಕೊಳ್ಳುತ್ತಿದ್ದ. ಅದು ವಾಸವಿಲ್ಲದೆ ಹಾಳು ಬಿದ್ದಿರುವುದನ್ನು ನೋಡಿ ಬೇಜಾರಾಗಿದ್ದ ಅವನಿಗೆ ನನ್ನನ್ನೂ ಶಾಮಣ್ಣನನ್ನೂ ನೋಡಿ ಪರಮಾನಂದವಾಯ್ತು. ನಾವು ಯಾವ ರೂಮನ್ನು ಉಪಯೋಗಿಸ ಬಹುದೆಂದು ಅವನನ್ನು ಕೇಳಿದ್ದಕ್ಕೆ ಆಶ್ಚರ್ಯಚಕಿತನಾಗಿ "ಇದೇನು ಹೀಗೆ ಕೇಳು ತ್ತಿದ್ದೀರಿ! ಇಡೀ ಬಂಗಲೆ ತಮ್ಮದೇ ಅಲ್ಲವೇ?" ಎಂದು ನಮ್ಮನ್ನು ಪ್ರಶ್ನಿಸಿದ. ಹಾಗಿದ್ದರೆ ಬಹಳ ಒಳ್ಳೆಯದೇ ಆಯ್ತು. ಸದ್ಯ ಇಲ್ಲಿ ಯಾರ ತಂಟೆ ತಕರಾರೂ ಇರುವುದಿಲ್ಲ ಎಂದು ನಮಗೆ ಬಹಳ ಖುಷಿಯಾಯ್ತು.

ಆದರೆ ಶಾಮಣ್ಣನ ಶಹನಾಯ್‌ಗೆ ಗ್ರಹಗತಿಯೇ ಸರಿಯಾಗಿರಲಿಲ್ಲ. ತೊಂದರೆಗಳು ಅಲ್ಲೂ ಶುರುವಾದುವು.

ಆಗ ಮಹಾರಾಜಾ ಕಾಲೇಜಿನ ವಜ್ರಮಹೋತ್ಸವಕ್ಕೋ ಏನೋ ಯೂನಿವರ್ಸಿಟಿ ಲೈಬ್ರರಿಯ ಹಿಂಭಾಗದಲ್ಲಿ ಸೆಂಟಿನರಿ ಹಾಲ್ ಕಟ್ಟುತ್ತಾ ಇದ್ದರು. ವೈಸ್ ಛಾನ್ಸಲರ್ ಬಂಗಲೆಯ ಬೇಲಿ ಆ ಕಡೆಯೇ ಅಲ್ಲಿ ಕೆಲಸ ಮಾಡುತ್ತಿದ್ದ ನೂರಾರು ಜನ ಗಾರೆ ಕೆಲಸಗಾರರು ತಾತ್ಕಾಲಿಕ ಗುಡಿಸಿಲುಗಳನ್ನು ರಚಿಸಿಕೊಂಡಿದ್ದರು. ಅದೊಂದು ಚಿಕ್ಕ ಸ್ಲಂ ಬಡಾವಣೆಯಂತೆಯೇ ಕಾಣುತ್ತಿತ್ತು. ಯಾವ ಕಾರಣಕ್ಕೋ ಏನೋ ಅಲ್ಲಿ ನಲವತ್ತು ಐವತ್ತು ಬೀದಿ ನಾಯಿಗಳು ಕೆಲಸಗಾರರ ಜೊತೆಯೇ ವಾಸ್ತವ್ಯ ಹೂಡಿದ್ದುವು. ಶಾಮಣ್ಣ ಮೊದಲ ದಿನ ಶಹನಾಯ್ ಅಭ್ಯಾಸ ಶುರು ಮಾಡಲು ಪೀಪಿ ಊದಿ ಶ್ರುತಿ ಮಾಡಿಕೊಳ್ಳುತ್ತಿದ್ದ ಹಾಗೇ ಅವೂ ಎದ್ದು ನಿಂತು ಕೆಮ್ಮಿ ಕ್ಯಾಕರಿಸಿ ಗಂಟಲು ಸರಿ ಮಾಡಿಕೊಂಡವು. ಮುಂದಿನ ನಮ್ಮ ಪಜೀತಿಯನ್ನು ಮಾತಿನಲ್ಲಿ ವಿವರಿಸುವುದು ಕಷ್ಟ ಏಕೆಂದರೆ ಶಾಮಣ್ಣ ಶಹನಾಯ್ ಅಭ್ಯಾಸ ಆರಂಭಿಸಿದ ಕೂಡಲೇ ಶಹನಾಯಿಯ ಗಾರ್ದಭ ಸ್ವರವನ್ನೂ ಮೀರಿಸಿ ಅಷ್ಟು ನಾಯಿಗಳೂ ಆಕಾಶದ ಕಡೆಗೆ ಮುಖ ಮಾಡಿಕೊಂಡು ಅಯ್ಯಯ್ಯೋ ಎಂದು ಊಳಿಡಲಾರಂಭಿಸಿದುವು. ಸಂಗೀತಕ್ಕೆ ತಂಬೂರಿ ಶ್ರುತಿ ಹಿಡಿದ ಹಾಗೆ ನಿರಂತರವಾಗಿ ಬರುತ್ತಿದ್ದ ಈ ನಾಯಿ ಊಳಿನ ಹಿಮ್ಮೇಳದಲ್ಲಿ ಸಂಗೀತ ಮುಂದುವರಿಸುವುದು ಸಾಧ್ಯವೇ ಇರಲಿಲ್ಲ. ಈ ಅನಿರೀಕ್ಷಿತ ಬೆಳವಣಿಗೆಯಿಂದ ಶಾಮಣ್ಣ ಕಂಗಾಲಾದರು. ಅವು ನಿಜಕ್ಕೂ ಶಹನಾಯ್ ಸದ್ದಿಗೆ ಪ್ರತಿಕ್ರಿಯಿಸುತ್ತಿವೆಯೋ ಅಥವಾ ಕಾಕತಾಳೀಯವೋ ಪರೀಕ್ಷಿಸಲು ಕೊಂಚ ಹೊತ್ತು ಬಿಟ್ಟು ಊದಿ ಪರೀಕ್ಷಿಸಿದರು. ಶಾಮಣ್ಣನ ಶಹನಾಯ್ 'ಪ್ಯಾ' ಅಂದರೆ ಸಾಕು ಅವು ನಿಷ್ಠೆಯಿಂದ ಕೂಗಲು ಶುರುಮಾಡುತ್ತಿದ್ದುವು. ಈ ಶನಿಕಾಟ ಇಷ್ಟಕ್ಕೇ ನಿಲ್ಲಲಿಲ್ಲ. ಅವುಗಳ ಅಪಶಕುನದ ದನಿ ತಾಳಲಾರದೆ ಗುಡಿಸಿಲಿನವರು ಅವಕ್ಕೆ ಕಲ್ಲು ತಗೊಂಡು ಹೊಡೆದು ಓಡಿಸಿದರು. ಅವು ವೈಸ್ ಛಾನ್ಸಲರ್ ಬಂಗಲೆಯ ಮುಳ್ಳುಬೇಲಿ

ದಾಟಿಕೊಂಡು ಬಂಗಲೆ ಹತ್ತಿರವೇ ಬಂದು ಶಾಮಣ್ಣ ಊದುವುದನ್ನೇ ಕಾಯುತ್ತಾ ಕುಳಿತುಕೊಳ್ಳಲು ಶುರುಮಾಡಿದವು. ಅವುಗಳನ್ನು ಓಡಿಸಲು ಚೌರಿಯಪ್ಪ ದೊಣ್ಣೆ ತಗೊಂಡು ಅಟ್ಟಾಡಿದ. ಐದಾರು ಎಕರೆ ವಿಸ್ತೀರ್ಣದ ಕಾಂಪೌಂಡಿನಲ್ಲಿ ಚೌರಿಯಪ್ಪ ಎಷ್ಟೆಂದು ತಾನೇ ಅವುಗಳನ್ನು ಓಡಿಸುತ್ತಾನೆ.

ಕೊಟ್ಟ ಕೊನೆಗೆ ನಮ್ಮ ಸಂಗೀತ ಶಿಕ್ಷಣಕ್ಕೆ ಬಂದೊದಗುತ್ತಿರುವ ತರತರದ ವಿಘ್ನಗಳನ್ನೆಲ್ಲಾ ನೋಡಿ ನೋಡಿ ಬೇಸತ್ತ ಶಾಮಣ್ಣ ಹತಾಶರಾಗಿ ಶಹನಾಯ್ ತೆಗೆದು ಮೂಲೆಗೆಸೆದರು. ಶಹನಾಯ್ ನವಾಜ್ ಆಗಬೇಕೆಂಬ ಅವರ ಕನಸು ನನಸಾಗಿಯೇ ಉಳಿದುಹೋಯ್ತು.

***

ಅಣ್ಣ ಯಂತ್ರಗಳನ್ನು ವ್ಯಕ್ತಿತ್ವ ಉಳ್ಳ ಸಜೀವ ವಸ್ತುಗಳಂತೆ ಪರಿಭಾವಿಸುವುದರ ಬಗ್ಗೆ ನಾನು ಟೀಕಿಸಿದ್ದೆ. ಆದರೆ ಶಾಮಣ್ಣ ತಂದ 'ಪ್ರಿನ್ಸ್' ಎನ್ನುವ ಒಂದು ವಾಹನ ತನ್ನ ಅಸಾಧಾರಣ ನಡವಳಿಕೆಗಳಿಂದ ಮೈಸೂರಿನ ವಾಹನ ಲೋಕದ ವಿಲನ್ ಎಂದು ಪ್ರಸಿದ್ಧವಾದ ಚಾರಿತ್ರಿಕ ಘಟನೆಯನ್ನು ಅವಲೋಕಿಸಿದರೆ ನಾವು ವಾಹನಗಳಿಗೆ ವ್ಯಕ್ತಿತ್ವವನ್ನು ಆರೋಪಿಸುವುದಕ್ಕಿಂತ ಹೆಚ್ಚಾಗಿ ಕೆಲವು ವಾಹನಗಳಿಗೇ ವ್ಯಕ್ತಿತ್ವವನ್ನು ರೂಪಿಸಿಳ್ಳುವ ಛಾತಿ ಇರುತ್ತೆ ಎಂದು ಕಾಣುತ್ತದೆ. ನನ್ನ ಯಮಳ ಪ್ರಶ್ನೆ ನಾಟಕದಲ್ಲಿ ಇಡೀ ಜೀವನದ ಅಸಂಬದ್ಧತೆಗೆ ಪ್ರತೀಕದಂತೆ ಪ್ರಧಾನ ಪಾತ್ರಧಾರಿಯಾಗಿ ಕಾಣಿಸಿ ಕೊಂಡ ತರಲೆ ಮೋಟರು ಸೈಕಲ್ಲೇ ಈ 'ಪ್ರಿನ್ಸ್'.

ನಾನು ಸ್ಕೂಟರ್ ಬಿಟ್ಟುಕೊಂಡು ಓಡಾಡುತ್ತಿದ್ದುದ್ದನ್ನು ನೋಡಿ ಶಾಮಣ್ಣ ಸ್ಕೂಟರ್ ತಗೊಳ್ಳಬೇಕೆಂದು ಯೋಚಿಸುತ್ತಿದ್ದರು. ಆ ಸಂದರ್ಭಕ್ಕೆ ಸರಿಯಾಗಿ ನಮ್ಮ ಮೇಷ್ಟರಾಗಿದ್ದ ಪ್ರಭುಶಂಕರ್ ಶಾಮಣ್ಣನಿಗೆ "ಒಂದು ಸ್ಕೂಟರ್ ಕೊಡಿಸು" ಎಂದು ಹೇಳಿದರು. ಪ್ರಭುಶಂಕರರಿಗೆ ಸ್ಕೂಟರ್ ಬಿಡುವುದು ಹೇಳಿಕೊಡುವ ಜವಾಬ್ದಾರಿಯೂ ಶಾಮಣ್ಣನಿಗೇ ಬಿತ್ತು. ಅವರು ಸ್ಕೂಟರ್ ಕಲಿಯುವವರೆಗೆ ಅದು ಶಾಮಣ್ಣನ ಬಳಿಯೇ ಇದ್ದುದರಿಂದ ಶಾಮಣ್ಣ ಅದನ್ನು ಸಾಕಷ್ಟು ಉಪಯೋಗಿಸಿದರು. ಪ್ರಭುಶಂಕರ್ ಸ್ಕೂಟರ್ ಕಲಿತನಂತರ ವಾಹನ ಅವರಿಗೆ ಹಿಂದಿರುಗಿಸಿದ ಮೇಲೆ ಶಾಮಣ್ಣನಿಗೆ ಒಂದು ವಾಹನ ಇಡಲೇಬೇಕೆಂಬ ಚಪಲ ಹತ್ತಿತ್ತು.

ಒಂದು ದಿನ ನನ್ನ ಹತ್ತಿರ ಬಂದು "ಒಂದು ಮೋಟರ್ ಸೈಕಲ್ಲು ನೋಡಿದ್ದೇನೆ ಕಣ್ರೀ! ಹ್ಯಾಗಿದೆ ಗೊತ್ತಾ! ಷೋರೂಂ ಕಂಡೀಷನ್ನಿನಲ್ಲಿದೆ" ಎಂದು ಹೇಳಿದರು.

"ಅಯ್ಯೋ ಅದರ ವಿಷ್ಯ ಹೇಳೋ ಹಾಗಿಲ್ಲ ಬಿಡಿ"

"ಯಾಕ್ರೀ? ಕಂಡಾಪಟ್ಟೆ ರೇಟು ಹೇಳ್ತಿದ್ದಾನೆ ತಾನೆ?" ಎಂದು ಕೇಳಿದೆ. ಏಕೆಂದರೆ ಅವರು ಹೇಳಿದ ಹಾಗೆ ಅದು ಷೋರೂಂ ಕಂಡೀಷನ್ನಿನಲ್ಲಿದ್ದರೆ ನಾನು ಹಾಗೆ ಅನುಮಾನಿಸಲೇ ಬೇಕಲ್ಲ.

"ಅದರ ರೇಟಿನ ದೆಸೆಯಿಂದಲೇ ಅದರ ವಿಷ್ಯ ಹೇಳೊ ಹಾಗಿಲ್ಲ" ಎಂದು ನನಗೆ ಕುತೂಹಲ ಕೆರಳಿಸಲು ನೋಡಿದರು. ನನಗೇಕೋ ಶಾಮಣ್ಣ ಹೇಳಿದ ಸಮಾಚಾರ ಅಷ್ಟೊಂದು ಆಸಕ್ತಿ ಹುಟ್ಟಿಸಲಿಲ್ಲ. ನಾನು ಸುಮ್ಮನೇ ಇದ್ದೆ. ಶಾಮಣ್ಣ ತಮ್ಮ ಎಂದಿನ ಧಾಟಿಯಲ್ಲೇ ಮಾತು ಮುಂದುವರೆಸಿದರು.

"ಇಲ್ಲಾ ಕಣ್ರಿ! ಒಂದು ಸಾವಿರ ಹೇಳ್ತಿದ್ದಾನೆ, ಚೌಕಾಸಿ ಮಾಡಿದರೆ ಎಂಟುನೂರಕ್ಕೆ ಕೈಬಿಡಬಹುದು ಅಂತ ಪಾಣಿ ಹೇಳಿದ. ಡ್ಯಾಮ್ ಚೀಪ್ ಅಲ್ಲವ?" ಎಂದು ಹೇಳಿ ನನ್ನ ಅನುಮೋದನೆಯನ್ನು ನಿರೀಕ್ಷಿಸಿದರು.

"ಏನ್ರೀ! ಎಂಟು ನೂರು ರೂಪಾಯಿಗೆ ಒಂದು ಮೋಟರು ಸೈಕಲ್ಲು! ಅವನ್ಯಾವನೋ ಮುಠ್ಠಾಳ ಇರಬೇಕು, ಇಲ್ಲಾ ಎಲ್ಲಿಂದಲೋ ಕದ್ದುಕೊಂಡು ಬಂದಿದ್ದಿರಬೇಕು. ಸ್ವಲ್ಪ ಹುಷಾರಾಗಿರಿ. ಮತ್ತೆ ಅದನ್ನು ಕೊಂಡಮೇಲೆ ನಿಮ್ ಕೈಗೆ ಕೋಳ ಬಿದ್ದರೆ ಕಷ್ಟ".

"ಕದ್ದಿದ್ದಲ್ಲಾ, ಏನೂ ಅಲ್ಲ. ಆದರೆ ಅವನು ಸ್ವಲ್ಪ ಮುಠ್ಠಾಳನ ತರಾನೇ ಕಾಣಿಸುತ್ತಾನೆ".

"ಅದು ಸರಿ! ಯಾರು ಅವನು? ಯಾವ ಬೈಕು ಅದು?"

"ಅವನು ಯಾರು? ಬೈಕು ಎಲ್ಲಿದೆ ಅಂತ ಯಾರಿಗೂ ಹೇಳಬೇಡಿ ಅಂದಿದ್ದಾನೆ ಕಣ್ರಿ ಪಾಣಿ. ಇಷ್ಟು ಚೀಪ್ ರೇಟಿಗೆ ಸಿಕ್ಕುತ್ತೆ ಅಂತ ಗೊತ್ತಾದರೆ ಯಾರಾದರು ಹೋಗಿ ಕೊಂಡುಬಿಡೋದಿಲ್ಲವ ಅದಕ್ಕೇ! ಅದು ರಾಯಲ್ ಎನ್‌ಫೀಲ್ಡ್ ಕಂಪೆನಿ ಬೈಕು" ಎಂದರು. ಅವರು "ರಾಯಲ್ ಎನ್‌ಫೀಲ್ಡ್ ಪ್ರಿನ್ಸ್ ಅಂತ. ಬುಲೆಟ್ ಮಹಾಶಯನ ತಮ್ಮ ಇವನು ಗೊತ್ತೋ! ನೋಡೋದಕ್ಕೆ ಎಲ್ಲಾ ಹಂಗೇ ಕಾಣ್ತದೆ. ಆದರೆ ಇದು ಚಿಕ್ಕದು ಅಷ್ಟೆ" ಎಂದು ನನ್ನ ಅನುಮಾನ ಪರಿಹಾರ ಮಾಡಿದರು.

ಶಾಮಣ್ಣನಿಗೆ ಇಷ್ಟು ಅಗ್ಗದ ರೇಟಿಗೆ ಬೈಕ್ ಮಾರಲಿರುವ ಮನುಷ್ಯ ಯಾರಿರ ಬಹುದು ಎಂದು ನಾನು ಮನಸ್ಸಿನಲ್ಲೇ ಯೋಚನೆ ಮಾಡಿದೆ. ನನಗೆ ಏನೂ ಹೊಳೆಯಲಿಲ್ಲ. ಏಕೆಂದರೆ ಶಾಮಣ್ಣ ಹೇಳುವ ಪ್ರಿನ್ಸ್ ಹೆಸರಿನ ಮೋಟರು ಸೈಕಲ್ಲನ್ನೇ ನಾನು ನೋಡಿರಲಿಲ್ಲ. ಕೊನೆಗೆ ಶಾಮಣ್ಣನನ್ನೇ ಕೇಳಿದೆ.

"ಯಾವನ್ರೀ ಅವನು ನಿಮಗೆ ಬೈಕ್ ಕೊಡುತ್ತೇನೆಂದವನು?"

"ನಿಮ್ಮ ಹತ್ತಿರ ಇದನ್ನು ಬಾಯಿ ಬಿಟ್ಟಿದ್ದೇ ತಪ್ಪಾಯ್ತು. ಆ ಆಲನಹಳ್ಳಿ ಕೃಷ್ಣನ ಹತ್ತಿರ, ನಿಮ್ಮ ಹತ್ತಿರ ಏನಾದರೂ ಗುಟ್ಟು ಹೇಳುವವನು ಮುಠ್ಠಾಳ ಅಷ್ಟೆ".

"ನಿಮ್ಮ ಹರಕು ಬಾಯಿ ಹಣೆಬರಹ ನನಗೆ ಗೊತ್ತಿದೆ! ಹಾಗಾದರೆ ಈಗ ಹೇಳಿದ್ದೀರಲ್ಲಾ, ನೀವೇ ಮುಠ್ಠಾಳ ಅಂತಾಯ್ತು".

"ಮತ್ತಿನ್ನೇನು?"

"ಅಲ್ರಿ, ಈಗ ತಾನೆ ಬೈಕ್ ಮಾರಬೇಕೆಂದಿರುವವನು ಮುಠ್ಠಾಳ ಅಂದ್ರಿ"

"ನಾನೆಲ್ಲಿ ಹಾಗಂದೆ? ಮುಠ್ಠಾಳನ ತರ ಕಾಣ್ತಾನೆ ಅಂದೆ ಅಷ್ಟೆ! ಯಾರು ಮುಠ್ಠಾಳರೋ ಯಾರು ಬುದ್ದಿವಂತರೋ ಯಾರಿಗ್ರಿ ಗೊತ್ತು" ಎಂದರು. ಆ ಮೋಟಾರು ಸೈಕಲನ್ನು ನನ್ನೆದುರು ಹೊಗಳಿದರೂ ಅವರಿಗೂ ತಮ್ಮ ಬುದ್ಧಿವಂತಿಕೆ ಬಗ್ಗೆ ಸಂಶಯಾತಂಕಗಳಿದ್ದುವು.

ಅವರಿಗೆ ಬೈಕ್ ತೋರಿಸಲು ಕರಕೊಂಡು ಹೋಗಿದ್ದ ಪಾಣಿ ಎನ್ನುವ ತಜ್ಞ, ವ್ಯಾಪಾರ ಆಗುವವರೆಗೂ ಈ ವಿಚಾರ ಯಾರಿಗೂ ಹೇಳಬೇಡಿ ಎಂದು ಕಟ್ಟಪ್ಪಣೆ ಮಾಡಿದ್ದರಿಂದಲೋ ಅಥವಾ ನಾನು ಬೈಕ್ ಕೊಳ್ಳಲು ಪ್ರೋತ್ಸಾಹಿಸುವುದಿಲ್ಲವೆಂದೋ ಏನೋ ಶಾಮಣ್ಣ ಆಮೇಲೆ ಆ ಬೈಕ್ ತರುವವರೆಗೂ ನಮ್ಮ ಮನೆ ಹತ್ತಿರ ಸುಳಿಯಲೂ ಇಲ್ಲ, ನನ್ನ ಹತ್ತಿರ ಮುಂದೇನಾಯ್ತೆಂದು ಹೇಳಲೂ ಇಲ್ಲ. ಒಂದು ದಿನ ಅದನ್ನು ನಮ್ಮ ಮನೆಯ ಹತ್ತಿರ ತಂದು ನಿಲ್ಲಿಸಿ ಅಣ್ಣನ ಹತ್ತಿರ ಅದರ ಗುಣಗಾನ ಮಾಡುತ್ತಿದ್ದಾಗಲೇ ನನಗೆ ಅವರು ಆ ಅದ್ಭುತ ವಾಹನದ ಮಾಲೀಕರಾಗೇ ಬಿಟ್ಟಿದ್ದು ಗೊತ್ತಾಗಿದ್ದು.

ಶಾಮಣ್ಣನ ಹತ್ತಿರವೂ ಒಂದು ವಾಹನ ಬಂದು ಇನ್ನಿಬ್ಬರನ್ನು ಜೊತೆಗೆ ಕೂರಿಸಿಕೊಂಡು ತಿರುಗುವ ಸೌಲಭ್ಯ ಒದಗಿದ್ದರಿಂದ ಸುಂದರೇಶನಿಗೂ, ಶ್ರೀರಾಮ್‌ಗೂ ಕೇವಲ ಮೈಸೂರು ಪೇಟೆಗೇ ಸೀಮಿತವಾಗಿದ್ದ ನಮ್ಮ ಅಲೆದಾಟವನ್ನು ದೂರದೂರಕ್ಕೂ ವಿಸ್ತರಿಸಬಹುದೆಂದು ಖುಷಿಯಾಯ್ತು. ಅವರ ವಾಹನ ಬಂದ ಒಂದೆರಡು ದಿನಕ್ಕೇ ನಾವು ಬಲಮುರಿ ಕ್ಷೇತ್ರಕ್ಕೆ ಒಂದು ಟ್ರಿಪ್ ಹಾಕಿದೆವು. ಕಾಲೇಜ್ ಹಾಸ್ಟೆಲ್‌ನಿಂದ ನಮ್ಮೆರಡು ವಾಹನಗಳಲ್ಲೂ ನಾಲ್ಕು ಜನ ಹತ್ತಿ ಹೊರಟೆವು. ನನ್ನ ಹಿಂದುಗಡೆ ಶ್ರೀರಾಮ್ ಕುಳಿತಿದ್ದರು. ಒಂಟಿಕೊಪ್ಪಲು ದಾರಿಯಲ್ಲಿ ಒಂದು ತಿರುಗಣೆ ತಿರುಗಿದ ಕೂಡಲೇ ಶ್ರೀರಾಮ್ ಹಿಂದುಗಡೆಯಿಂದ ನನ್ನ ಕಿವಿ ಹತ್ತಿರ "ಸ್ವಲ್ಪ ನಿಲ್ಲಿಸಿ. ಅವರ ವಾಹನ ಯಾಕೋ ಕಾಣ್ತಾ ಇಲ್ಲ" ಎಂದರು. ಇಬ್ಬರೂ ಕುಕ್ಕನಹಳ್ಳಿ ಕೆರೆ ಬಳಿಯ ದಾರಿ ಪಕ್ಕ ಸ್ಕೂಟರ್ ನಿಲ್ಲಿಸಿ ಅವರಿಬ್ಬರನ್ನೂ ನಿರೀಕ್ಷಿಸುತ್ತಾ ನಿಂತೆವು. ಈಗ ಬರಬಹುದು, ಇನ್ನೇನು ಬರಬಹುದು ಎಂದು ಎಷ್ಟು ಹೊತ್ತು ಕಾದರೂ ಶಾಮಣ್ಣನ ಬೈಕಿನ ಸುಳಿವೇ ಇಲ್ಲ. ನಾವು ಟ್ರಿಪ್ಪಿಗೆ ತಗೊಂಡಿದ್ದ ತಿಂಡಿ ತೀರ್ಥ ಎಲ್ಲ ಶಾಮಣ್ಣನ ಬೈಕಿಗೇ ನೇತುಹಾಕಿದ್ದರಿಂದ ಅವರನ್ನು ಬಿಟ್ಟು ಹೋಗುವ ಹಾಗೂ ಇರಲಿಲ್ಲ. ನಮಗೆ ಕಾದೂ ಕಾದು ಬೇಸರ ಬಂದು ಏನಾದರೂ ಅಪಘಾತ ಮಾಡಿಕೊಂಡರೋ

ಎಂದು ಶಂಕಿಸಿ ಮತ್ತೆ ಬಂದ ದಾರಿಯಲ್ಲೇ ಹಿಂದಕ್ಕೆ ಹೊರಟೆವು. ನೋಡಿದರೆ ಎಲ್ಲೂ ಇವರಿಬ್ಬರ ಸುಳಿವೇ ಇಲ್ಲ. ಸುಂದರೇಶನ ರೂಮಿಗೂ ಶಾಮಣ್ಣನ ರೂಮಿಗೂ ಹೋಗಿ ನೋಡಿದೆವು. ಅಲ್ಲೂ ಇವರಿಬ್ಬರ ಸುಳಿವಿಲ್ಲ. ನಮ್ಮ ಹಿಂದೆಯೇ ನಾಲ್ಕು ಮಾರು ದೂರದಲ್ಲಿ ಬರುತ್ತಿದ್ದ ಇವರು ಇದ್ದಕ್ಕಿದ್ದಂತೆ ಅಂತರ್ಧಾನವಾಗಿದ್ದಾದರೂ ಹೇಗೆ ಎಂದು ಆಶ್ಚರ್ಯವಾಯ್ತು. ಹಾಗಿದ್ದರೆ ಇವರು ಯಾವುದೋ ಬೇರೆ ದಾರಿಯಲ್ಲಿ ಬಲಮುರಿಗೇ ಹೋಗಿರಬಹುದು ಎಂದು ಊಹಿಸಿದೆವು. ಇವರನ್ನು ಮೈಸೂರಿನಲ್ಲೆಲ್ಲಾ ಹುಡುಕಾಡುವುದರಲ್ಲೇ ಕತ್ತಲಾಗತೊಡಗಿದ್ದರಿಂದ ಇನ್ನು ಇವರನ್ನು ಹುಡುಕಿ ಬಲಮುರಿವರೆಗೆ ಹೋಗುವುದಾದರೆ ನಾವು ಹೋಗುವುದರೊಳಗೇ ಕತ್ತಲಾಗುತ್ತದೆಂದು ನಾವಿಬ್ಬರೂ ನಮ್ಮ ಕಾರ್ಯಕ್ರಮವನ್ನೇ ರದ್ದು ಮಾಡಿದೆವು. ಇವರು ಬಂದಮೇಲೆ ಇವರ ಕಿಡಿಗೇಡಿತನಕ್ಕೆ ಚೆನ್ನಾಗಿ ಉಗಿಯಬೇಕೆಂದು ನಿರ್ಧರಿಸಿ ಪೇಟೆ ಕಡೆ ಹೋಗುತ್ತಿರಬೇಕಾದರೆ ಪಾಣಿ ಗ್ಯಾರೇಜ್ ಹತ್ತಿರ ಶಾಮಣ್ಣನ ಬೈಕ್ ನಿಂತಿರುವುದು ನಮ್ಮ ಕಣ್ಣಿಗೆ ಬಿತ್ತು. ಇವರನ್ನು ಹುಡುಕಿಕೊಂಡು ನಾವೇನಾದರೂ ಬಲಮುರಿಗೇ ಹೋಗಿದ್ದರೆ ಎಂಥ ಮೂರ್ಖರಾಗುತ್ತಿದ್ದೆವೆಂದು ನಮ್ ಅದೃಷ್ಟಕ್ಕೆ ನಾವೇ ಸಂತೋಷಪಡುತ್ತಾ ಪಾಣಿ ಗ್ಯಾರೇಜಿನ ಕಡೆ ಹೋದೆವು.

ಶಾಮಣ್ಣನ ಬೈಕಿನ ಎಂಜಿನ್ ಬಿಚ್ಚಿಹಾಕಿದ್ದರು. ಸುಂದರೇಶ್ ಒಬ್ಬನೇ ಮೂಲೆಯಲ್ಲಿದ್ದ ಒಂದೇ ಒಂದು ಕುರ್ಚಿಯಲ್ಲಿ ಕುಳಿತು ನಿದ್ದೆ ಮಾಡುತ್ತಾ ಇದ್ದ. ಶಾಮಣ್ಣನೂ ಇರಲಿಲ್ಲ. ಪಾಣಿಯೂ ಇರಲಿಲ್ಲ. ಸುಂದರೇಶನನ್ನು ಎಬ್ಬಿಸಿ "ಎಲ್ಲಯ್ಯಾ ಶಾಮಣ್ಣ? ನಮ್ಮನ್ನು ಬಲಮುರಿ ಕಡೆ ಕಳಿಸಿ ಇಲ್ಲಿಗ್ಯಾಕೆ ಬಂದ್ರೋ?" ಎಂದು ಕೇಳಿದೆ.

"ನನಗೆ ನಿದ್ದೆ ಬರುವ ಮೊದಲು ಇಬ್ಬರೂ ಇಲ್ಲೇ ಇದ್ದರಪ್ಪ. ಆಮೇಲೆ ಎಲ್ಲಿಗೆ ಹೋದರೋ ಯಾವಾಗ ಹೋದರೋ ಒಂದೂ ನನಗೆ ಗೊತ್ತಿಲ್ಲ" ಎಂದು ಬೇಸರದ ನಿಟ್ಟುಸಿರು ಬಿಟ್ಟ. ಅವನ ವರ್ತನೆ ನೋಡಿದರೆ ಕಾದು ಕಾದು ತಲೆ ಚಿಟ್ಟುಹಿಡಿದ ಹಾಗೆ ಕಾಣುತ್ತಿತ್ತು. ಅವರು ನಮ್ಮ ಹಿಂದೆ ಬರುತ್ತಿಬೇಕಾದರೆ ಅವರ ವಾಹನ ಆಗಾಗ ನಿಲ್ಲುವುದು ಮತ್ತೆ ಮುಂದುವರಿಯುವುದು ಮಾಡತೊಡಗಿತಂತೆ. ಈ ಸ್ಥಿತಿಯಲ್ಲಿ ಬಲಮುರಿಯಷ್ಟು ದೂರ ಹೋಗುವುದು ಅಪಾಯಕರ ಎಂದು ಇಬ್ಬರೂ ತೀರ್ಮಾನಿಸಿ ಪಾಣಿ ಹತ್ತಿರ ಕೊಂಚ ಪ್ಲಗ್ಗು, ಪಾಯಿಂಟ್‌ಸೆಟ್ಟು ಅಡ್ಜಸ್ಟ್ ಮಾಡಿಸಿಕೊಂಡು ಹೋಗೋಣ ಎಂದು ಬಂದರು. ಪಾಣಿಯ ಸಣ್ಣಪುಟ್ಟ ಅಡ್ಜಸ್ಟ್‌ಮೆಂಟುಗಳಿಂದ ಅದರ ಖಾಯಿಲೆ ವಾಸಿಯಾಗಲಿಲ್ಲ. ಪಾಣಿಯೇನೋ "ಸ್ವಲ್ಪ ಮಿಸ್ಸಿಂಗಿದೆ! ಅದೇನು ಪರ್ವಾಗಿಲ್ಲಾ ಸಾರ್, ನೀವು ಗಾಡಿ ಓಡಿಸಿ. ರನ್ನಿಂಗಿನಲ್ಲಿ ಎಲ್ಲಾ ಸರಿ ಹೋಗ್ತದೆ" ಎಂದು ಹೇಳಿ ಇವರನ್ನು ಅಲ್ಲಿಂದ ಹೇಗೋ ಸಾಗಹಾಕಲು

ನೋಡಿದ. ಇಬ್ಬರೂ ಮತ್ತೆ ಗಾಡಿ ಹತ್ತಿ ಬಲಮುರಿ ಕಡೆಗೆ ಹೊರಟರು. ಆದರೆ ನಾಲ್ಕೇ ಮಾರಿನೊಳಗೆ ಆ ವಾಹನ ಕೆಮ್ಮುತ್ತಾ ಸೀನುತ್ತಾ ಗಲಾಟೆ ಮಾಡಿ ರನ್ನಿಂಗಿನಲ್ಲಿ ಸರಿ ಹೋಗುವುದಿಲ್ಲೆಂದು ಇಬ್ಬರಿಗೂ ಸ್ಪಷ್ಟಪಡಿಸಿತು. ಇಬ್ಬರೂ ಮತ್ತೆ ಗ್ಯಾರೇಜಿಗೆ ಹಿಂದಿರುಗಿದರು. ಈ ಸಾರಿ ಪಾಣಿ ಅದನ್ನು ಥರೋ ಚೆಕಪ್ ಮಾಡಿಬಿಡುತ್ತೇನೆಂದು ಸಂಪೂರ್ಣ ಬಿಚ್ಚಿಹಾಕಿದನಂತೆ! ಅಷ್ಟು ಹೊತ್ತಿಗೆ ಗಾಢನಿದ್ದೆ ಬಂದಿದ್ದರಿಂದ ಮುಂದೇನಾಯ್ತೋ ನನಗೆ ಗೊತ್ತಿಲ್ಲ ಎಂದ ಸುಂದರೇಶ.

ನಾವು ಮೂರು ಜನರೂ ಅರ್ಧ ಮುಕ್ಕಾಲು ಗಂಟೆ ಕಾದರೂ ಶಾಮಣ್ಣನಾಗಲೀ ಪಾಣಿಯಾಗಲೀ ಬರಲಿಲ್ಲ. ಕಾದು ಕಾದು ಬೇಸತ್ತ ನಾವು ಸುಂದರೇಶನಿಗೆ ಶಾಮಣ್ಣ ಜೊತೆ ಬರಲು ಹೇಳಿ ಅಲ್ಲಿಂದ ಕಾಲು ಕಿತ್ತೆವು. ಕತ್ತಲಾಗುವ ಹೊತ್ತಿಗೆ ಸುಂದರೇಶ್ ಸುಸ್ತಾಗಿ ರೂಮಿಗೆ ಬಂದ. ಶಾಮಣ್ಣ ಎಲ್ಲಿ ಎಂದು ಕೇಳಿದ್ದಕ್ಕೆ ಶಾಮಣ್ಣನವರ ಬೈಕ್ ತಯಾರಿಸುವುದನ್ನು ಕಂಪೆನಿಯವರೇ ನಿಲ್ಲಿಸಿರುವುದರಿಂದ ಅದರ ಬಿಡಿ ಭಾಗಗಳು ಏನಿದ್ದರೂ ಗುಜರಿಯಲ್ಲಿ ಮಾತ್ರ ಸಿಕ್ಕುವುದಂತೆ. ಅದಕ್ಕೇ ಪಾಣಿ ಜೊತೆ ಶಾಮಣ್ಣ ಗುಜರಿಯತ್ತ ಹೋದರು. ಅವರ ಬೈಕು ಸಧ್ಯಕ್ಕೆ ಸರಿಯಾಗುವ ಹಾಗೆ ಕಾಣುತ್ತಿಲ್ಲ ಎಂಬ ದುರ್ವಾರ್ತೆ ಹೇಳಿ "ಇನ್ನು ಮೇಲೆ ಶಾಮಣ್ಣನ ಬೈಕಿನ ಮೇಲೆ ಮಾತ್ರ ನನ್ನನ್ನು ಕೂರಲು ಕರೆಯಬೇಡ" ಎಂದು ತನ್ನ ಅಂತಿಮ ನಿರ್ಧಾರ ಪ್ರಕಟಿಸಿದ. ಕಂಪೆನಿಯವನೇ ಈ ಬೈಕಿನ ದುರ್ಗುಣಗಳನ್ನು ನೋಡಿ ಅದರ ತಯ್ಯಾರಿ ನಿಲ್ಲಿಸಿದ್ದಾರೆ ಎಂದ ಮೇಲೆ ಅದನ್ನು ಗುಟ್ಟಲ್ಲಿ ಕೊಂಡವನು ಮೂರ್ಖನೋ? ಮಾರಿದವನು ಮೂರ್ಖನೋ? ಎಂದು ಶಾಮಣ್ಣನ ವ್ಯವಹಾರ ಚಾತುರ್ಯಕ್ಕೆ ಶಾಪ ಹಾಕುತ್ತಾ ನಾವು ಮನೆಗೆ ಹೋದೆವು.

ಆ ಬೈಕು ಶಾಮಣ್ಣನಿಗೆ ಕೊಟ್ಟ ತರತರದ ತೊಂದರೆಗಳನ್ನು ಯೋಚಿಸಿದರೆ ಶಾಮಣ್ಣನ ತಾಳ್ಮೆ ಅಸಾಧಾರಣವಾದದ್ದು ಎನ್ನಿಸುತ್ತದೆ. ಪ್ರತಿದಿನ ಎಲ್ಲಿಗಾದರೂ ಹೊರಡುವುದಿದ್ದರೆ ಕೊನೇಪಕ್ಷ ಅರ್ಧಗಂಟೆ ಮುಂಚೆನಿಂದಾದರೂ ಅವರು ಅದರ ಕಿಕ್ ಸ್ಟಾರ್ಟರ್ ಪೆಡಲನ್ನು ತುಳಿಯಬೇಕಾಗುತ್ತಿತ್ತು. ಅದು ತೊಂದರೆ ಕಾಟ ಕೊಟ್ಟ ಹಾಗೂ ಶಾಮಣ್ಣನಿಗೆ ಅದರ ಮೇಲೆ ಸಿಟ್ಟು ಬರುವುದಕ್ಕಿಂತ ಅಭಿಮಾನವೇ ಹೆಚ್ಚುತ್ತಾ ಹೋಯ್ತು. ಆ ಬೈಕ್ ಬುದ್ಧಿಪೂರ್ವಕವಾಗೇ ತಮ್ಮ ಡ್ರೈವಿಂಗ್ ಸಾಮರ್ಥ್ಯಕ್ಕೆ ಅಗ್ನಿಪರೀಕ್ಷೆ ಒಡ್ಡಿದೆ ಎಂದು ನಿರ್ಧರಿಸಿ ಹುಚ್ಚು ಕುದುರೆ ಪಳಗಿಸುವವರಂತೆ ಅದರ ಸವಾರಿಯನ್ನು ನಿಲ್ಲಿಸಲೇ ಇಲ್ಲ. ಏನು ಮಾಡಿದರೂ ಸ್ಟಾರ್ಟಾಗದೆ ತಳ್ಳಿ ಸ್ಟಾರ್ಟ್ ಮಾಡಬೇಕಾದ ಸಂದರ್ಭ ಆಗಾಗ ಒದಗುತ್ತಿದ್ದುದರಿಂದ ಯಾವಾಗಲೂ ಯಾರ ನ್ನಾದರೂ ಹಿಂದುಗಡೆ ಕೂರಿಸಿಕೊಂಡೇ ಇರುತ್ತಿದ್ದರು. ಶಾಮಣ್ಣನ ಆಪ್ತಮಿತ್ರರಲ್ಲೊಬ್ಬ ನಾದ ಆಲನಹಳ್ಳಿ ಕೃಷ್ಣನೇ ಅವರ ಹಿಂದೆ ಸಾಧಾರಣವಾಗಿ

ಕುಳಿತಿರುತ್ತಿದ್ದ. ಆಗಿನ್ನೂ ಆಲನಹಳ್ಳಿ ಲೇಖಕನಾಗಿ ಪ್ರಸಿದ್ಧನಾಗಿರಲಿಲ್ಲ. ಶ್ರೀರಾಮ್ ಕೃಷ್ಣನ ಗುರು. ಶಾಮಣ್ಣ ಕೃಷ್ಣನ ಕ್ರಿಟಿಕ್. ಶ್ರೀರಾಮ್ ಆಗ 'ಲಹರಿ' ಎನ್ನುವ ಸಾಹಿತ್ಯದ ಪತ್ರಿಕೆ ಹೊರಡಿಸು ತ್ತಿದ್ದುದರಿಂದ ಕೃಷ್ಣ ಶಾಮಣ್ಣನಿಗೆ, ಶ್ರೀರಾಮ್ ಮೇಲೆ ಪ್ರಭಾವ ಬೀರಿ ಅವನ ಪದ್ಯಗಳನ್ನು ಪ್ರಕಟಿಸಲು ಸಹಾಯ ಮಾಡಿ ಎಂದು ಪೀಡಿಸುತ್ತಿದ್ದ. ಶ್ರೀರಾಮ್ ಪ್ರಕಟಿಸಿದರೋ ಬಿಟ್ಟರೋ ಮರೆತುಹೋಗಿದೆ. ಶಾಮಣ್ಣನ ಮೋಟರುಸೈಕಲ್ಲಿನ ಕೈಂಕರ್ಯವನ್ನು ಮಾತ್ರ ಆಲನಹಳ್ಳಿ ಸಾಕಷ್ಟು ಮಾಡಿರಬಹುದು. ಅದೆಂಥ ಧೂರ್ತ ವಾಹನವಾಗಿತ್ತೆಂದರೆ ವಾಹನಗಳನ್ನು ನಡೆಸುವ ಚಪಲವಿದ್ದ ನಾನು ಸಹ ಅದನ್ನು ಒಂದು ದಿನವೂ ಬಿಡಲಿಲ್ಲ. ಶಾಮಣ್ಣ ಬಿಟ್ಟು ಇನ್ನು ಯಾರೂ ಅದರ ಲಗಾಮು ಹಿಡಿಯಲು ಸಾಧ್ಯವಿರಲಿಲ್ಲ. ಶಾಮಣ್ಣ ಸಹ ಇದು ಎಲ್ಲಿ ನಿಂತುಹೋಗುತ್ತದೋ ಎಂಬ ಕಳವಳದಿಂದಲೇ ಅದನ್ನು ಬಿಡಬೇಕಿತ್ತು. ಒಂದು ಸಾರಿ ಸ್ಟಾರ್ಟಾದರೆ ಅದನ್ನು ಎಲ್ಲೂ ಆಫ್ ಮಾಡದೆ ಕೆಲಸ ಮುಗಿಸಿಕೊಂಡು ಮನೆಗೆ ಬಂದೇ ಎಂಜಿನ್ ಆಫ್ ಮಾಡುತ್ತಿದ್ದರು. ಹೋದಹೋದಲ್ಲೆಲ್ಲಾ ಅವರ ಕುದುರೆ ಮುಂದುವರಿಯದೆ ಮುಷ್ಕರ ಹೂಡುವುದೂ, ದಾರಿಹೋಕರೆಲ್ಲಾ ಗುಂಪುಗೂಡಿ ಶಾಮಣ್ಣನಿಗೆ ಮುಂದುವರಿಯಲು ಸರದಿ ಪ್ರಕಾರ ಕಿಕ್‌ಸ್ಟಾರ್ಟರ್ ತುಳಿಯುತ್ತಾ ಸಹಾಯ ಮಾಡು ವುದೂ ಆಗಾಗ ಮೈಸೂರಿನಲ್ಲಿ ಕಣ್ಣಿಗೆ ಬೀಳುವ ದೃಶ್ಯವಾಗಿತ್ತು.

ಒಂದು ದಿನ ಪ್ರಭುಶಂಕರ್ "ಏನಯ್ಯಾ ಮೋಟಾರು ಸೈಕಲ್ಲಿನ ಮೇಲೆ ಕುಳಿತಿದ್ದೀನಂತ ನನ್ನನ್ನು ನೋಡಿಯೂ ನೋಡದವನ ಹಾಗೆ ಹೋಗ್ತಿದ್ದಿಯಲ್ಲಾ" ಎಂದು ತಮಾಷೆಯಾಗಿ ಕೇಳಿದರು.

"ಸಾರ್ ಮೋಟಾರು ಸೈಕಲ್ಲಿನ ಮೇಲೆ ಹೋಗುವಾಗ ಮಾತ್ರ ನಾನು ಶಿಷ್ಯನೂ ಅಲ್ಲ. ನೀವು ಗುರುಗಳೂ ಅಲ್ಲ. ನಮಸ್ಕಾರದ ಪ್ರಶ್ನೆಯೇ ಇಲ್ಲ" ಎಂದರು ಶಾಮಣ್ಣ.

ನಮಸ್ಕಾರ ಮಾಡಲು ಶಾಮಣ್ಣನಿಗಿದ್ದ ತಾಂತ್ರಿಕ ಸಮಸ್ಯೆ ಪ್ರಭುಶಂಕರರಿಗೆ ಗೊತ್ತಿರಲಿಲ್ಲ. "ಏನಯ್ಯಾ ಮೂರುಕಾಸಿನ ಮೊಟರು ಸೈಕಲ್ಲಿಗೇ ನಿನಗಿಷ್ಟು ಜಂಬ ಬಂದರೆ, ಇನ್ನು ಕಾರು ಕೊಂಡರೆ ಏನು ಕತೆ" ಎಂದರು.

"ಅಯ್ಯಯ್ಯೋ! ಜಂಬ ಅಲ್ಲಾ ಸಾರ್! ಸಲಾಮು ಹೊಡೆಯೋದಕ್ಕೇ ಅಂತ ಅದರ ಆಕ್ಸಿಲರೇಟರ್ ಮೇಲಿಂದ ಕೈ ತೆಗೆದರೆ ಸಾಕು, ಎಂಜಿನ್ ಆಫ್ ಆಗೋಗ್ತದೆ, ನೀವು ಮತ್ತೆ ಸ್ಟಾರ್ಟ್ ಮಾಡಿ ಕೊಡ್ತೀರೇನು ಹೇಳಿ. ನೀವು ಕಂಡಾಗಲೆಲ್ಲಾ ಬೈಕು ನಿಲ್ಲಿಸಿ ಸಾಷ್ಟಾಂಗ ಅಡ್ಡಬಿದ್ದು ಹೋಗ್ತೀನಿ. ಅದನ್ನು ಒಂದೇ ಒಂದು ಸಾರಿ ಸ್ಟಾರ್ಟ್ ಮಾಡಿ ನೀವು! ಆಮೇಲಿಂದ ನೀವೇ ನನ್ನ ಬೈಕು ಕಂಡಲ್ಲೆಲ್ಲಾ ಅಡ್ಡಬಿದ್ದು ಮುಂದೆ ಹೋಗು ಅನ್ನುತ್ತೀರಿ" ಎಂದು ತಮ್ಮ ಬೈಕಿನ ಪ್ರತಾಪವನ್ನೂ, ನಮಸ್ಕಾರ ಮಾಡದೆ ಮುಂದುವರಿಯುವುದರ ಕಾರಣವನ್ನೂ ವಿವರಿಸಿದರು.

ಪರಮೇಶ್ವರ ಭಟ್ಟರಿಗೆ ಪ್ರಾಣಕ್ಕೆ ಸಂಚಕಾರ ಒದಗಿದ್ದೂ ವಾಹನ ನಡೆಸುತ್ತಾ ನಮಸ್ಕಾರ ಮಾಡಬೇಕಾದ ಸಮಸ್ಯೆಯಿಂದಲೇ ಎಂದು ನನಗೆ ಆಲನಹಳ್ಳಿ ಕೃಷ್ಣ ಹೇಳಿದ. ಅಣ್ಣನ ಹತ್ತಿರ ಬಂದು ಶಾಮಣ್ಣನ ಮೇಲೆ ಯಾಕಯ್ಯಾ ಚಾಡಿ ಹೇಳಿದೆ ಎಂದು ಕೃಷ್ಣನಿಗೆ ನಾನು ಜೋರುಮಾಡಿದೆ. "ಶಾಮಣ್ಣ ಕೈಯ್ಯತ್ತದೆ ನಮಸ್ಕಾರ ಮಾಡಲು, ಬೈಕ್ ಬಿಡುವಾಗ ತಲೆಬಾಗಿ ಗೌರವ ಸೂಚಿಸುತ್ತಿದ್ದರಂತೆ. ಒಂದು ಸಾರಿ ಕಾಲೇಜಿನ ಹತ್ತಿರ ತಿರುಗಣೆಯಲ್ಲಿ ಗುರುಗಳಾದ ಪರಮೇಶ್ವರ ಭಟ್ಟರು ಶಾಮಣ್ಣನವರ ಕಣ್ಣೆದುರು ಹಠಾತ್ತಾಗಿ ಪ್ರತ್ಯಕ್ಷವಾದರು! ಪರಮೇಶ್ವರಭಟ್ಟರು ತುಂಬಾ ಹತ್ತಿರದಲ್ಲಿದ್ದುದರಿಂದ ಶಾಮಣ್ಣನ ಲೆಕ್ಕಾಚಾರ ತಪ್ಪಿಹೋಯಿತು. ಇವರು ತಲೆಬಾಗಿಸಿ ತಲೆ ಎತ್ತುವುದರೊಳಗೆ ಬೈಕ್ ಸ್ಪೀಡ್ ತಗೊಂಡು ಅವರ ಕಡೆ ನುಗ್ಗೇ ಬಿಟ್ಟಿತು. ಸಾಕಷ್ಟು ವಯಸ್ಸಾಗಿದ್ದ ಪರಮೇಶ್ವರಭಟ್ಟರು ಹೇಗೋ ಕೊನೇ ಗಳಿಗೆಯಲ್ಲಿ ಪುಟ್‌ಪಾತ್ ಮೇಲೆ ನೆಗೆದು ಶಿಷ್ಯನ ಅಂತಿಮ ಪ್ರಣಾಮದಿಂದ ಪಾರಾದರು ಎಂದು ಆಲನಹಳ್ಳಿ ನನಗೆ ವಿವರಿಸಿದ. ಕೃಷ್ಣನ ವಿವರಣೆ ಕೇಳಿ ಗಾಬರಿ ಬಿದ್ದ ನಾನು ಶಾಮಣ್ಣನವರನ್ನು ಇದು ನಿಜವೇ ಎಂದು ಕೇಳಿದ್ದಕ್ಕೆ ಅವರು ಸತ್ಯಾಸತ್ಯಗಳ ಬಗ್ಗೆ ಚಕಾರವೆತ್ತದೆ ಕೃಷ್ಣನ ಮೇಲೆ ಕೋಪಿಸಿಕೊಂಡು ಸಧ್ಯದಲ್ಲೇ ಅವನಿಗೆ ಸರಿಯಾಗಿ ಬುದ್ಧಿ ಕಲಿಸಲಿದ್ದೇನೆ ಎಂದು ಹೇಳಿದರು.

ಈ ಧೂರ್ತ ವಾಹನ ಶಾಮಣ್ಣನ ಮಿತ್ರವೃಂದಕ್ಕೆಲ್ಲಾ ಕೊಟ್ಟ ತರತರದ ತೊಂದರೆಗಳಿಂದ ಎಲ್ಲರೂ ರೋಸಿ ಹೋದರು. ಶಾಮಣ್ಣನವರ ಇಚ್ಛೆಗೇ ಬಿಟ್ಟರೆ ಇವರು ಅದಕ್ಕೆ ಗಿರಾಕಿ ಹುಡುಕುವುದಿಲ್ಲೆಂದು ತೀರ್ಮಾನಿಸಿ ಹಲವರು ಆ ಜವಾಬ್ದಾರಿ ತಗೊಂಡರು. ಈ ಸಂದರ್ಭಕ್ಕೆ ಸರಿಯಾಗಿ ನಮ್ಮ ಇಂಗ್ಲೀಷ್ ಮೇಷ್ಟರಾಗಿದ್ದ ಶ್ರೀ ರಾಮಮೂರ್ತಿಯವರು ಕೃಷ್ಣನಿಗೆ ಒಂದು ವಾಹನ ಕೊಳ್ಳಲಿದ್ದೇನೆ, ಯಾವುದಾದರೂ ಸೂಕ್ತ ವಾಹನ ಇದ್ದರೆ ಹೇಳು ಎಂದು ಹೇಳಿದರಂತೆ.

ರಾಮಮೂರ್ತಿ ಶಾಮಣ್ಣನನ್ನು ಹುಡುಕಿಕೊಂಡು ಮಂದಣ್ಣನ ಕೆಫಿಟೇರಿಯಾಗೆ ಬಂದರು. ನಾನು, ಶಾಮಣ್ಣ, ಸಾಗರದ ಹೆಗ್ಗಡೆ ಕಾಫಿ ಕುಡಿಯುತ್ತಾ ಕುಳಿತ್ತಿದ್ದೆವು. ರಾಮಮೂರ್ತಿ ಶಾಮಣ್ಣನ ಬೈಕ್ ಕೊಳ್ಳಬೇಕೆಂಬ ಉದ್ದೇಶ ಪ್ರಕಟಿಸಿದ ಕೂಡಲೇ ನಾನು ವಿಪರೀತ ಮುಜುಗರಕ್ಕೆ ಸಿಕ್ಕಿಕೊಂಡೆ. ಏಕೆಂದರೆ ಅದೊಂದು ಹೊಸ ದುರಂತ ನಾಟಕಕ್ಕೆ ನಾಂದಿಯಾಗುವುದರಲ್ಲಿ ಸಂದೇಹವೇ ಇರಲಿಲ್ಲ. ಆದರೆ ರಾಮಮೂರ್ತಿಗೆ ಬುದ್ಧಿ ಹೇಳಿದರೆ ಶಾಮಣ್ಣ ನಿಮ್ಮ ದೆಸೆಯಿಂದ ನನ್ನ ಮೋಟಾರು ಸೈಕಲ್ಲಿಗೆ ಗಿರಾಕಿ ಇಲ್ಲದ ಹಾಗಾಯ್ತು ಎಂದು ಬೇಸರಿಸಿದರೆ! ನಾನು ಯಾಕಾದರೂ ಇವರ ಮಧ್ಯೆ ಸಿಕ್ಕಿಕೊಂಡೆನಪ್ಪಾ ಎನ್ನಿಸಿತು. ರಾಮಮೂರ್ತಿ ನಾಲ್ಕಾರು ಮಾತಾಡುವುದರೊಳಗೇ ವಾಹನಗಳ ಬಗ್ಗೆ ಏನೇನೂ ಇವರಿಗೆ ಗೊತ್ತಿಲ್ಲ ಎಂಬುದನ್ನು ತೋರಿಸಿಕೊಂಡರು.

"ಶಾಮಣ್ಣಾ ಒಂದು ಸಮಾಚಾರ ಕೇಳಿದೆ!"

"ಏನ್ ಸಾರ್ ಸಮಾಚಾರ? ಹೇಳಿ ನಮಗೂ ಸ್ವಲ್ಪ, ನಾವೂ ಹತ್ತಾರು ಜನರಿಗೆ ಹೇಳುವಂಥಾ ಹತ್ತಾರು ಜನರಿಗೆ ಹೇಳೋಣ!".

"ನೀವು ಏನೂ ತಿಳಿದುಕೊಳ್ಳದಿದ್ದರೆ!"

"ಏನು ಮೇಷ್ಟರೆ ಹಿಂಗೇಳ್ತೀರ? ಸಮಾಚಾರ ಇರೋದೆ ತಿಳಿದುಕೊಳ್ಳೋದಕ್ಕಲ್ಲವ?"

"ನಿಮ್ಮ ಮೋಟರು ಸೈಕಲ್ಲು ಕೊಡಬೇಕಂತಿದ್ದೀರಂತೆ ಹೌದಾ?" ಎಂದು ಕೇಳಬಹುದೋ ಬೇಡವೋ ಎನ್ನುವ ದಾಕ್ಷಿಣ್ಯದಲ್ಲಿ ರಾಮಮೂರ್ತಿ ಕೇಳಿದರು.

"ಅದಕ್ಯಾಕೆ ಇಷ್ಟೊಂದು ಹಿಂದ್ಮುಂದೆ ನೋಡಿ ಹೆಣ್ಣು ಕೇಳೋರ್ತರ ಕೇಳ್ತಿದ್ದೀರ? ನೀವು ಕೇಳಿದ್ದು ಒಳ್ಳೇದೆ ಆಯ್ತು! ನಾನೂ ತಾಕತ್ತಿರುವ ಜನ ಸಿಕ್ಕರೆ ಕೊಡೋಣ ಅಂತ ಹುಡುಕ್ತಿದ್ದೆ".

"ನಾನು ಹಂಗೆಲ್ಲಾ ವ್ಯವಹಾರ ಮಾಡೋನಲ್ಲ ಶಾಮಣ್ಣ. ಕ್ಯಾಷ್ ಕೊಟ್ಟು ಕೊಂಡುಕೊಳ್ಳುತ್ತೇನೆ".

"ದುಡ್ಡಿನಲ್ಲಿ ತಾಕತ್ತಿರೋದಲ್ಲಾ ಸಾರ್ ನಾನು ಹೇಳಿದ್ದು. ಕೈಕಾಲು ಗಟ್ಟಿಮುಟ್ಟಾಗಿ ತಾಕತ್ತಿರೋರು. ಹತ್ತು ಸಾರಿ ಕಿಕ್ ಸ್ಟಾರ್ಟರ್ ಒದೆಯೋದಕ್ಕೆ ತಾಕತ್ತಿಲ್ಲದ ನರಪೇತಲ ನಾರಾಯಣರಿಗೆ ಕೊಟ್ಟರೆ ನಾನೇ ಪ್ರತಿ ದಿನ ಸ್ಟಾರ್ಟ್ ಮಾಡಿಕೊಡೋದಕ್ಕೆ ಹೋಗಬೇಕಾಗುತ್ತಲ್ಲಾ! ಅದಕ್ಕೇ ನೀವು ಕೇಳಿದ್ದು ಒಳ್ಳೇದೇ ಆಯ್ತು ಅಂದಿದ್ದು ನಾನು"

"ಯಾಕೆ ಸ್ಟಾರ್ಟಿಂಗ್ ಟ್ರಬಲ್?"

"ಸ್ಟಾರ್ಟಿಂಗ್! ಸ್ಟಾರ್ಟ್ಲಿಂಗ್!"

"ಹಂಗಂದರೆ!"

"ಏನ್ ಸಾರ್ ಎಲಿಯಟ್ಟಿನ ಪದ್ಯಗಳಿಗೆಲ್ಲಾ ಅರ್ಥ ಹೇಳ್ತೀರಾ? ನನ್ನ ಮಾತಿಗೆ ಹಂಗಂದರೆ ಅನ್ನುತ್ತೀರಲ್ಲಾ! ಅದು ಸ್ಟಾರ್ಟಾದರೆ ಅದರ ಯಜಮಾನನಿಗೆ ಆಶ್ಚರ್ಯಾಘಾತವಾಗುತ್ತೆ. ಯಾಕೆಂದರೆ ಅದರ ಸ್ಟಾರ್ಟಿಂಗ್ ದಿನಕ್ಕೊಂದು ತರ. ಒಂದೊಂದು ಸಾರಿ ಒಂದೇ ಕಿಕ್ಕಿಗೆ. ಒಂದೊಂದು ಸಾರಿ ಹಲವಾರು ಕಿಕ್ಕಿಗೆ. ಎಲ್ಲವನ್ನೂ ಕೂಡಿ ದಿನಕ್ಕಿಷ್ಟು ಅಂತ ಹಂಚಿದರೆ ಸರಾಸರಿ ಐವತ್ತು ಕಿಕ್ ಬರಬಹುದು"

"ನೀವು ಗಾಡಿ ಸರಿಯಾಗಿ ಮೇಂಟೇನ್ ಮಾಡಿಲ್ಲಾಂತ ಕಾಣ್ತದೆ. ನಮ್ಮ ಪೊನ್ನುಸ್ವಾಮಿಯವರ ಹತ್ತಿರ ತಗೊಂಡು ಹೋದರೆ ಎಲ್ಲಾ ಸರಿ ಮಾಡ್ತಾರೆ. ಅದೇನು ಅಂಥಾ ವಿಷ್ಯ ಅಲ್ಲ ಬಿಡಿ".

"ನೋಡಿ ಸಾರ್. ವಾಹನಗಳು ಒಂದೇತರ ತಕರಾರು ಮಾಡ್ತಿದ್ದರೆ ಸರಿ

ಮಾಡಿಸಬಹುದು. ಅದು ಬಿಟ್ಟು ಗಳಿಗೆಗೊಂದುತರ ತೊಂದರೆ ಕೊಟ್ಟರೆ! ಅದೂ ಅಲ್ಲದೆ ನನ್ನ ವಾಹನದ ದೊಡ್ಡ ತೊಂದರೆ ಎಂದರೆ ಮೆಕ್ಯಾನಿಕ್ಕುಗಳ ಹತ್ತಿರ ಒಯ್ದರೆ ತಾನಾಗೇ ಸರಿ ಹೋಗಿಬಿಡುತ್ತದೆ. ಅವರು ಏನನ್ನು ಅಂತ ರಿಪೇರಿ ಮಾಡ್ತಾರೆ ಹೇಳಿ".

"ನೀವು ಎಲ್ಲದನ್ನೂ ತಮಾಷೆ ಮಾಡ್ತೀರಾ ಬಿಡಿ. ಅದಿರಲಿ, ಅದರ ಪುಲ್ಲಿಂಗ್ ಹ್ಯಾಗಿದೆ"

"ಪುಲ್ಲಿಂಗ್!, ಪುಲ್ಲಿಂಗ್ ಥ್ರಿಲ್ಲಿಂಗ್!"

ಈ ಸಾರಿ ರಾಮಮೂರ್ತಿ 'ಹಂಗಂದರೆ' ಎಂದು ಕೇಳಲಿಲ್ಲ. ಅವರಿಗೆ ಶಾಮಣ್ಣ ತಮಾಷೆ ಮಾಡುತ್ತಿದ್ದಾರೆ ಎಂದೇ ಸಂದೇಹ. ವಾಹನ ಮಾರಬೇಕೆಂದಿರುವ ಯಾವನೂ ಗಿರಾಕಿಗಳ ಹತ್ತಿರ ಹೀಗೆ ತನ್ನ ವಾಹನವನ್ನೇ ಲೇವಡಿ ಮಾಡುತ್ತಾ ಮಾತಾಡುವುದು ಸಾಧ್ಯವಿರಲಿಲ್ಲ,

"ಪಿಕಪ್ಪು"

"ಅಯ್ಯಯ್ಯೋ! ಪಿಕಪ್!, ಬಕಪ್!"

"ಅಲ್ರೀ ಶಾಮಣ್ಣ; ನೀವು ಬೈಕ್ ಕೊಡಬೇಕು ಅಂತಿದೀರೋ ಇಲ್ಲವೋ? ಸರಿಯಾಗಿ ಹೇಳ್ರಿ"

ನಾವೆಲ್ಲಾ ಶಾಮಣ್ಣನವರ ವ್ಯವಹಾರದ ವೈಖರಿ ನೋಡಿ ನಗುತ್ತಿದ್ದುದನ್ನು ಕಂಡು ರಾಮಮೂರ್ತಿಯವರಿಗೆ ಅವರನ್ನೂ ಸೇರಿಸಿ ಶಾಮಣ್ಣ ತಮಾಷೆ ಮಾಡುತ್ತಿದಾರೇನೋ ಎಂದು ಅನುಮಾನ ಬಂದಿರಬೇಕು.

"ಯಾಕೆ ಸಾರ್, ಅನುಮಾನವ?"

"ಮತ್ತಿನ್ನೇನ್ರಿ, ವ್ಯವಹಾರಕ್ಕೆ ಅಂತ ಕುಳಿತುಕೊಂಡರೆ ಕವನ ಕಟ್ಟಿ ಹೇಳ್ತಿದ್ದೀರಲ್ಲಾ?

ಸ್ಟಾರ್ಟಿಂಗ್! ಸ್ಟಾರ್ಟ್ಲಿಂಗ್!

ಪುಲ್ಲಿಂಗ್! ಥ್ರಿಲ್ಲಿಂಗ್!

ಪಿಕಪ್! ಬಕಪ್!

ನಿಮ್ಮ ಬೈಕ್ ಲಿಮರಿಕ್ ರಚನೆ ಮಾಡುವಷ್ಟು ಇನ್‌ಸ್ಪೈರಿಂಗ್ ಅಂತಾಯ್ತು. ಕೊಡೋ ಹಾಗಿದ್ದರೆ ಹಂಗೆಲ್ಲಾ ತಮಾಷೆ ಮಾಡಬೇಡಿ. ಎಷ್ಟಕ್ಕೆ ಕೊಡ್ತೀರಾ? ಏನು? ಹೇಳಿ. ನಾನು ಸೀರಿಯಸ್ಸಾಗಿ ಕೇಳ್ತಿರೋದು".

"ನಿಮ್ಮ ಮನೆ ಎಲ್ಲಿದೆ ಸಾರ್"

"ಯಾಕ್ರೀ ಶಾಮಣ್ಣ? ಈಸ್ ದೇರ್ ಎನಿಥಿಂಗ್ ಪರ್ಸನಲ್ ಟು ಡಿಸ್ಕಸ್?"

"ನತ್ತಿಂಗ್ ಪರ್ಸನಲ್. ಅದೇ ಹಿಂದೆ ಇದ್ದಿರಲ್ಲಾ ಸರಸ್ವತಿಪುರಮ್‌ನಲ್ಲಿ, ಅಲ್ಲೇ ಈಗಲೂ ಇದ್ದೀರ?"

"ಹ್ಞೂನಪ್ಪಾ! ನಿಮಗೆ ಚೆನ್ನಾಗಿ ಗೊತ್ತಲ್ಲಾ. ಸೇಮ್ ಹೌಸ್"

"ಹಾಗಾದರೆ ನಿಮಗೆ ಕೊಡೋದಕ್ಕೆ ಆಗೋಲ್ಲವಲ್ಲ ಸಾರ್"

"ಓಹೋ! ಯಾಕೆ? ನನ್ ಅಡ್ರಸ್ ಕಟ್ಟಿಕೊಂಡೇನ್ಮಾಡ್ತೀರ?"

"ನಿಮಗೆ ನನ್ನ ಬೈಕಿನ ಯಜಮಾನನಾಗೋ ಎಲ್ಲಾ ಯೋಗ್ಯತೇನೂ ಇದೆ, ಇದೊಂದನ್ನು ಬಿಟ್ಟು. ನಿಮ್ಮ ಮನೆ ಎದುರು ದಾರಿ ಇಳಿಜಾರಾಗಿರಬೇಕು. ಇದೊಂದು ಕ್ವಾಲಿಫಿಕೇಶನ್ ನಿಮಗಿಲ್ವಲ್ಲಾ! ಏನು ಮಾಡೋದು? ಒಂದೊಂದು ಸಾರಿ ಇದು ಎಷ್ಟು ಕಿಕ್ ಹೊಡೆದರೂ ಜಗ್ಗುವುದಿಲ್ಲ. ಆಗ ತಳ್ಳಿ ಸ್ಟಾರ್ಟ್ ಮಾಡುವುದಕ್ಕೆ ಏನು ಮಾಡ್ತೀರ? ಕೊನೇ ಪಕ್ಷ ತೇಜಸ್ವಿ ಮನೆ ಹತ್ತಿರ ಇದೆಯಲ್ಲಾ ಸ್ಯಾನಿಟೋರಿಯಂ ಡೌನು, ಅಷ್ಟಾದರೂ ಇಳಿಜಾರಿಲ್ಲದಿದ್ದರೆ ಆಗುವುದೇ ಇಲ್ಲ. ಚಾಮುಂಡಿ ಬೆಟ್ಟದ ಮೇಲೆ ಮನೆ ಇದ್ದರಂತೂ ಬಹಳ ಒಳ್ಳೆಯದು".

"ನಿಮ್ಮ ಮನೆ ಏನು ಬೆಟ್ಟದ ಮೇಲೆ ಇದಿಯೇನ್ರೀ? ಸುಮ್ಮನೆ ತಮಾಷೆ ಮಾಡ್ತಿದ್ದೀರ ಅಷ್ಟೆ"

"ನಮ್ಮ ಮನೆ ಹತ್ತಿರ ಡೌನಿಲ್ಲ. ಆದರೆ ಆಲನಹಳ್ಳಿ ಕೃಷ್ಣ ಇದಾನಲ್ಲ! ನಿಮಗೆ ಯಾರಿದ್ದಾರೆ?"

ಶಾಮಣ್ಣ ಅವರ ಬೈಕಿನ ಬಗ್ಗೆ ಸತ್ಯಾಂಶವನ್ನೇ ತಮಾಷೆಯಾಗಿ ಹೇಳುತ್ತಿದ್ದಾರೆಂದು ಪಕ್ಕದಲ್ಲಿ ಕುಳಿತಿದ್ದ ನಮ್ಮಿಂದ ತಿಳಿದ ಮೇಲೆ ರಾಮಮೂರ್ತಿ ಶಾಮಣ್ಣನ ಡೈಲಾಗುಗಳನ್ನು ನೆನಸಿಕೊಂಡು ಮತ್ತಷ್ಟು ನಕ್ಕರು. "ನಾನೆಲ್ಲೋ ಶಾಮಣ್ಣನಿಗೆ ಬೈಕ್ ಕೊಡೋದಕ್ಕೆ ಇಷ್ಟವಿಲ್ಲಾಂತ ಹೀಗೆ ಮಾತಾಡುತ್ತಿದ್ದಾರೆ ಎಂದು ತಿಳಿದೆ" ಎಂದರು.

ಅದೂ ನಿಜವೋ ಏನೋ! ಬೋರು ಹೊಡೆಯುತ್ತಿದ್ದ ಮೈಸೂರಿನಲ್ಲಿ ಪ್ರತಿದಿನ ಧಾರಾಳವಾಗಿ ಮನರಂಜನೆಯನ್ನೊದಗಿಸುತ್ತಿದ್ದ ಈ ಹುಚ್ಚು ಕುದುರೆಯನ್ನು ಮಾರಲು ಶಾಮಣ್ಣ ಯಾವತ್ತೂ ಸೀರಿಯಸ್ಸಾಗಿ ಪ್ರಯತ್ನಿಸಲಿಲ್ಲ.

(ಕೆ.ಪಿ. ಪೂರ್ಣಚಂದ್ರ ತೇಜಸ್ವಿಯವರ
"ಅಣ್ಣನ ನೆನಪುಗಳು" ಪುಸ್ತಕದಿಂದ ಆಯ್ದ ಭಾಗಗಳು.)

ಗಡ್ಡದ ಶಾಮಣ್ಣ

ಪಿ. ಲಂಕೇಶ್

ತೀರ್ಥಹಳ್ಳಿಯ ಹಳ್ಳಿಗಳಿಗೆ ನೆರೆಬಂತು. ಹಳ್ಳಿಗಳು ಮುಳುಗಿದವು. ರೈತರು ಕೂಲಿಗಾರರು ಮನೆ ಮಠ ಜೋಪಡಿಗಳನ್ನೆಲ್ಲ, ಬಟ್ಟೆಬರೆಗಳನ್ನೆಲ್ಲ ಕಳೆದುಕೊಂಡರು. ಸರ್ಕಾರ ಜನರಿಗೆ ಪರಿಹಾರದ ಹಣ ಕೊಡುವುದಾಗಿ ಹೇಳಿ ಕೊಡಲಿಲ್ಲ. ಕಡಿದಾಳು ಶಾಮಣ್ಣ ಒತ್ತಾಯ ಮಾಡಿದರು. ಅಧಿಕಾರಿಗಳು ಹಣ ಕೊಡುವಂತೆ ನಟಿಸುತ್ತ ಸಾರ್ವಜನಿಕ ಹಣವನ್ನು ಕಬಳಿಸ ತೊಡಗಿದರು. ದಿಕ್ಕಿಲ್ಲದ ಜನ ಅಸಹಾಯಕರಾದರು. ಕಡಿದಾಳು ಶಾಮಣ್ಣ ಕೇಳಿ ನೋಡಿದರು; ಹೆದರಿಸಿ ನೋಡಿದರು. ಏನೂ ಆಗಲಿಲ್ಲ. ಬೇರೆ ಮಾರ್ಗವೇ ಇಲ್ಲದೇ ಉಪವಾಸ ಕೂತರು. ಅಧಿಕಾರಿಗಳು ಇದನ್ನೆಲ್ಲ ಆಲಕ್ಷಿಸಲು ನೋಡಿದರು. ಆಗಲಿಲ್ಲ. ಮೂರೇ ದಿನದಲ್ಲಿ ಶಾಮಣ್ಣನವರ ಆರೋಗ್ಯ ಕೆಡುತ್ತಾ ಬಂತು. ಆಗ ಜನ ಸೇರತೊಡಗಿದರು. ಸರ್ಕಾರದ ಜನ ನಡುಗ ತೊಡಗಿದರು. ತಾವು ನೆರೆ ಪರಿಹಾರದಲ್ಲಿ ಹೊಡೆದ ಲಂಚವನ್ನು ಹಿಂದಿರುಗಿಸುವುದಾಗಿ ಹೇಳಿದರು.

ತೀರ್ಥಹಳ್ಳಿಯ ಕಾಡಿನ ನಡುವೆ ಗಾಂಧೀಜಿ ಉಸಿರಾಡ ತೊಡಗಿದ್ದರು. ಕಡಿದಾಳು ಶಾಮಣ್ಣನವರಿಗೆ

ಮೊನ್ನೆ ಹೇಳಿ ಕಳಿಸಿದೆ. "ನಿಮಗೇನು ಹುಚ್ಚೇನ್ರಿ ಶಾಮಣ್ಣ? ಯಾಕೆ ನೀವು ಲೇಖನ ಬರೆಯುವಾಗ ಅತೀ ಗಾಂಭೀರ್ಯದಿಂದ ನಿಮ್ಮೆಲ್ಲ ತಮಾಷೆ, ಕಿತಾಪತಿ, ತೀವ್ರತೆಯನ್ನೆಲ್ಲ ಹೊರಗಿಟ್ಟು ಸೋಸಿದ ನೀರಿನಂತೆ ಬರೀತೀರಿ? ಪೂರ್ತಿ ಶಾಮಣ್ಣ ಬರವಣಿಗೆಯಲ್ಲಿ ಬರಬೇಕು".

ಶಾಮಣ್ಣ ತಮಾಷೆಯ ಮನುಷ್ಯ. ಹೋರಾಟದಲ್ಲಿ ಯಾರಿಗೂ ಕಡಿಮೆಯಿಲ್ಲದ ಶಾಮಣ್ಣ ತಮ್ಮ ತಮಾಷೆಯಿಂದಾಗಿಯೇ ಎಲ್ಲರಿಗಿಂತ ದಿಟ್ಟ ಹೋರಾಟಗಾರರಾಗಿದ್ದಾರೆ. ಯಾರೋ ಹೇಳಿದರು. "ತಮ್ಮ ಆಶೀರ್ವಾದ ನನಗೆ ಬೇಕು ಸ್ವಾಮಿ". ಅದಕ್ಕೆ ಶಾಮಣ್ಣ ಹೇಳಿದರು. "ನಾನು ಆಶೀರ್ವಾದ ಮಾಡಿದರೆ ಮುಗೀತು ನಿಮ್ಮ ಕತೆ. ನನ್ನ ಗತಿ ನೋಡಿಯಾದ್ರೂ ಸುಮ್ಮನಿರಿ". ಹೋದ ಹೋದಲ್ಲಿ ಎಲ್ಲರಂತೆ ಮಾತಾಡುತ್ತ ವಿಷಯಗಳನ್ನು ಸೂಚಿಸುತ್ತ ವಿವರಿಸುತ್ತ ಎಂದೂ ನಾಯಕನ ಗತ್ತಿಗೆ ಹೋಗದ ಶಾಮಣ್ಣನ ಇನ್ನೊಂದು ಗುಣ ಸ್ವವಿಮರ್ಶೆ. ಅವರೇ ಹೇಳಿದರು. "ರೈತರ ಚಳವಳಿ ಶುರುವಾದ ಮೇಲೆ ನನಗಂತೂ ಅನುಕೂಲವಾಗಿದೆ ಮಾರಾಯ್ರೆ. ನನ್ನ ಬದಲು ನನ್ನ ಹೆಂಡ್ತಿ ನನ್ನ ಗದ್ದೆ ನೋಡಿಕೊಳ್ತಿರೋದ್ರಿಂದ ಒಂಚೂರು ಬೆಳೆ ಬರ್ತಿದೆ. ನಾನೇ ಗದ್ದೆಗೆ ತಗುಲಿಕೊಂಡಿದ್ದರೆ ಆಗೇ ಹೋಗ್ತಿತ್ತು!".

ಕಾಲೇಜಿನಲ್ಲೂ ಇದೇ ರೀತಿ ಇದ್ದ ವ್ಯಕ್ತಿ ಈತ. ಓದುವುದನ್ನು ಬಿಟ್ಟು ತೇಜಸ್ವಿ ಜೊತೆಗೆ ಹಂದಿ, ಮೊಲದ ಬೇಟೆಯಾಡಲು ಆಗದಿದ್ದರೆ ಕೊನೇಪಕ್ಷ ಚಿಟ್ಟೆಗಳನ್ನಾದರೂ ಹುಡುಕಿಕೊಂಡು ಅಲೆಯುತ್ತಿದ್ದ ಶಾಮಣ್ಣ ಹೇಳ್ತಿದ್ದರು; "ಪುಸ್ತಕಗಳೂ ಅಂದರೆ ನನಗೆ ತುಂಬಾ ಇಷ್ಟ, ರಾತ್ರಿ ನಿದ್ರೆ ಬಾರದಿದ್ದಾಗ ಅವನ್ನು ಅಗಲಿಸಿ ಕೂತ ಕೂಡಲೇ ಸೊಂಯಂತ ನಿದ್ರೆ ಬಂದು ಬಿಡುತ್ತೆ". ಆಮೇಲೆ, ರೈತರ ಚಳುವಳಿ ಆರಂಭವಾಗುವುದಕ್ಕೆ ಅನೇಕ ವರ್ಷ ಮುಂಚೆಯೇ ಶಾಮಣ್ಣ ಡಾ||ರಾಜಕುಮಾರರ 'ಬಂಗಾರದ ಮನುಷ್ಯ' ಚಿತ್ರ ನೋಡಿ ಹೀಗೆ ಮೆಚ್ಚಿದರು. "ಚೆನ್ನಾಗಿದೆ ಆದರೆ ಒಂದು ತಪ್ಪಾಗಿದೆ. ಚಿತ್ರದ ಆರಂಭದಲ್ಲಿ ರೈತ ಬಡವನಾಗಿದ್ದು ಚಿತ್ರ ಮುಗಿಯುವಷ್ಟರಲ್ಲಿ ಶ್ರೀಮಂತನಾಗಿರ್ತಾನೆ. ನಾನು ರೈತಾಪಿ ಕೆಲಸ ಬಲ್ಲಂತೆ, ಚಿತ್ರವನ್ನು ಕೊನೆಯಿಂದ ತಿರುಗಾಮುರ್ಗಾ ಓಡಿಸಿದರೆ ರೈತನ ಗತಿ ಯಥಾವತ್ತಾಗಿ ಗೊತ್ತಾಗುತ್ತೆ".

ಶಾಮಣ್ಣನ ಬಗ್ಗೆ ಹೊಗಳಿ ಬರೆದರೆ ನಕ್ಕುಬಿಟ್ಟು ಸುಮ್ಮನಾಗುತ್ತಾರೆಂದು ನಾನು ಬಲ್ಲೆ. ಯಾಕೆಂದರೆ ಈ ಸ್ವವಿಮರ್ಶೆಯ ತಮಾಷೆ ಆಸಾಮಿ ಒಳಗೆ ತುಂಬಾ ಸಂಕೋಚದವರು. ಎಂದೂ ಭಾಷಣ ಮಾಡದವರು; ಎಂದೂ ಅಧಿಕಾರಕ್ಕಾಗಿ ಕೈಚಾಚದವರು. ಅಷ್ಟೇ ಅಲ್ಲ, ಅಧಿಕಾರ ಬರುವ ಅಪಾಯವನ್ನು ಕಂಡೊಡನೆ ಜಾಗ ಖಾಲಿ ಮಾಡುವ ಲಜ್ಜೆಯ ಮನುಷ್ಯ. ಆದರೆ ಈತ ಒಳಗೆ ತೀವ್ರವಾದ ವ್ಯಕ್ತಿ,

ಗಂಭೀರ ವ್ಯಕ್ತಿ, ಎಲ್ಲರಿಗಿಂತ ಧೈರ್ಯದ ವ್ಯಕ್ತಿ. ಊರೂರಿಗೆ ಹೋಗಿ ಬಡವರ ಗೋಳನ್ನು ಕೇಳುವ, ಸಮಾಧಾನ ಹೇಳುವ, ನಗಿಸುವ ವ್ಯಕ್ತಿ. ತಮ್ಮ ಅಹಂಕಾರವಿಲ್ಲದ ಗುಣದಿಂದಾಗಿ ಎಂದೂ ಜಾತಿ, ಬಣ್ಣ, ಗುಂಪನ್ನು ನೋಡಿ ಮಾತಾಡದ, ಸ್ವಾರ್ಥದಿಂದ ಸಂಪೂರ್ಣವಾಗಿ ಮುಕ್ತವಾದ ವ್ಯಕ್ತಿ.

ನಾಗಸಮುದ್ರದಲ್ಲಿ ಕೊಲೆಯಾದೊಡನೆ ಈ "ಗಡ್ಡದ ಶಾಮಣ್ಣ" ಜನರೇ ಇಲ್ಲದೆ ಬಣಗುಟ್ಟುತ್ತಿದ್ದ ಊರಿಗೆ ಹೋದರು. ಭಯಗೊಂಡ ಜನರೊಂದಿಗೆ ಕೂತು ಮಾತಾಡಿ ಧೈರ್ಯ ತಂದರು. ಮಕ್ಕಳನ್ನು ಕಳೆದುಕೊಂಡವರಿಗೆ ನೆರವಾದರು. ಇದ್ದ ಒಬ್ಬನೇ ಮಗನನ್ನು ಕಳೆದುಕೊಂಡ ಮುದುಕನಿಗೆ ಹೇಳಿದರು: "ಅಪ್ಪಾ ನಾನಿಲ್ಲವಾ ನಿಮ್ಮ ಮಗ? ಯಾಕೆ ಅಷ್ಟು ದುಃಖ ಪಡ್ತೀರಿ?".

ರೈತರ ಚಳವಳಿಗೆ ವ್ಯವಹಾರ ಜ್ಞಾನದ, ವಿನೋದದ, ನಿಸ್ವಾರ್ಥತೆಯ ಆಯಾಮ ಕೊಡುತ್ತಿರುವ ಶಾಮಣ್ಣ ಮೊನ್ನೆ ತೀರ್ಥಹಳ್ಳಿಯ ಹಳ್ಳಿಗಳಿಗೆ ಗಾಂಧೀಜಿಯವರನ್ನು ತಂದರು.

"ಶಾಮಣ್ಣ, ನನಗೆ ಸಂತೋಷವಾಗಿದೆ. ಸಮಾಜವಾದದ ನಮ್ಮ ಜಿಲ್ಲೆಗೆ ಗಾಂಧೀಜಿಯ ಸತ್ಯಾಗ್ರಹವನ್ನು ಸೇರಿಸಿದ್ದೀರಿ. ಇದೊಂದೇ ಈಗ ಉಳಿದಿರುವ ದಾರಿ" ಅಂದೆ, ಫೋನಿನಲ್ಲಿ.

ಶಾಮಣ್ಣ ಸಂಕೋಚದಿಂದ "ಹೌದು" ಅಂದರು.

(ಲಂಕೇಶರ 'ಟೀಕೆ ಟಿಪ್ಪಣಿ' ಕೃತಿಯಿಂದ)

ನಿಜವಾದ ಜಾತ್ಯಾತೀತ ವ್ಯಕ್ತಿ ಶಾಮಣ್ಣ

ಬಿಳುಮನೆ ರಾಮದಾಸ್

ಶ್ರೀಮಾನ್ ಕಡಿದಾಳು ಶಾಮಣ್ಣನವರನ್ನು ನಾನು ಬಾಲ್ಯದಿಂದಲೂ ಬಲ್ಲೆ. ಅವರ ತಂದೆಯವರನ್ನೂ ಅವರ ಸಹೋದರರನ್ನೂ ಚೆನ್ನಾಗಿ ಬಲ್ಲೆ. ಚಿಕ್ಕಂದಿನಲ್ಲಿ ಅವರು ನಮ್ಮೂರು ಮೇಗರವಳ್ಳಿಯಲ್ಲಿ ಅವರ ಬಂಧು ಮೂಡುವಳ್ಳಿ ಅಣ್ಣಯ್ಯ ಹೆಗಡೆಯವರ ಮನೆಯಲ್ಲಿದ್ದು ಮಾಧ್ಯಮಿಕ ಶಾಲೆಯನ್ನು ಓದಿದವರು. ನಾವು ಒಟ್ಟಿಗೆ ಗೋಲಿಯಾಡಿದ್ದು ನನಗೆ ನೆನಪಿದೆ. ಅವರು ಶ್ರೀಮಂತ ರಾಗಿದ್ದರೂ ಅವರಲ್ಲಿ ಶ್ರೀಮಂತಿಕೆಯ ಗತ್ತಾಗಲಿ ಮೇಲುಜಾತಿಯವರೆಂಬ ಅಹಂ ಆಗಲಿ ಇರಲಿಲ್ಲ. ಅತ್ಯಂತ ಸರಳ ಮನುಷ್ಯ ಅವರು. ತುಂಬ ಹಾಸ್ಯ ಪ್ರವೃತ್ತಿಯ ಮನುಷ್ಯ. ಕುವೆಂಪು ಅವರಿಂದ ಪ್ರಭಾವಿತ ರಾಗಿ ಶುಭ್ರವಾದ ಬಿಳಿಯ ಪೈಜಾಮು, ಜುಬ್ಬ ತೊಡುತ್ತಿದ್ದರು. ಅವರು ಮೈಸೂರಿಗೆ ಹೆಚ್ಚಿನ ವ್ಯಾಸಂಗ ಕ್ಕಾಗಿ ಹೋದರೂ ರಜಾದಿನಗಳಲ್ಲಿ ಮೇಗರವಳ್ಳಿಗೆ ಬಂದಾಗ ನನ್ನನ್ನು ಭೇಟಿಯಾದದ್ದು ಇದೆ. ೧೯೬೩ರಲ್ಲಿ ಶಾಂತವೇರಿ ಗೋಪಾಲ ಗೌಡರು ವಿಧಾನಸಭಾ ಚುನಾವಣೆಗೆ ನಿಂತಾಗ ಗೌಡರ ಪರವಾಗಿ ಪ್ರಚಾರಕ್ಕಾಗಿ

ಓಡಾಡಿದ್ದರು. ನಮ್ಮ ಮನೆಯವರು, ಕೆಳಪೇಟೆಯಲ್ಲಿ ಶೇಷಪ್ಪ ಹೆಗಡೆಯವರು ಗೋಪಾಲ ಗೌಡರ ಪರವಾಗಿ ಗುರುತಿಸಿಕೊಂಡಿದ್ದೆವು. ಶಾಮಣ್ಣನವರಿಗೆ ಅನಂತಮೂರ್ತಿಯವರು "ಇಲ್ಲೇನು ಮಾಡತಿಯೋ? ತೀರ್ಥಹಳ್ಳಿಗೆ ಹೋಗಿ ಗೋಪಾಲನ ಪರವಾಗಿ ಚುನಾವಣೆಲಿ ಕೆಲಸ ಮಾಡು. ಅವನಂತವರು ವಿಧಾನ ಸಭೇಲಿ ಇರಬೇಕು" ಎಂದರಂತೆ. ಹಾಗಾಗಿ ಶಾಮಣ್ಣನವರು ತಮ್ಮ ಎನ್‌ಫೀಲ್ಡ್ ಮೋಟರ್ ಬೈಕಿನಲ್ಲಿ ನಮ್ಮೂರಿಗೆ ಬಂದಿದ್ದರು. ಹೇಗಿದೆ ಟ್ರೆಂಡ್ ಎಂದು ನನ್ನನ್ನು ಕೇಳಿದರು. ಆ ವರ್ಷ ಗೌಡರು ಜಯಶೀಲರಾದರು. ಹಿಂದಿನ ಸಾರಿ ಗೌಡರ ವಿರುದ್ಧ ಸ್ಪರ್ಧಿಸಿ ಗೆದ್ದಿದ್ದ ಎ.ಆರ್.ಬದರಿನಾರಾಯಣರಾಗಲಿ, ಕಡಿದಾಳು ಮಂಜಪ್ಪನವರಾಗಲಿ ಗೌಡರ ವಿರುದ್ಧ ಸ್ಪರ್ಧಿಸುವ ಧೈರ್ಯ ಮಾಡಲಿಲ್ಲ.

ಶಾಮಣ್ಣನವರು ಸಾಹಿತ್ಯ ರಚಿಸುವ ಕೈಂಕರ್ಯಕ್ಕೆ ಕೈಹಾಕದಿದ್ದರೂ ಸಾಹಿತ್ಯದ ಅಭಿರುಚಿ ಅವರಿಗೆ ಇತ್ತು. ಉತ್ತಮ ಪುಸ್ತಕಗಳನ್ನು ಆಯ್ಕೆ ಮಾಡುವ ಸಾಮರ್ಥ್ಯ ಅವರಿಗಿತ್ತು. ಮಲೆನಾಡು ಪ್ರಕಾಶನ ಎಂಬ ಸಂಸ್ಥೆಯನ್ನು ತೆರೆದು ಚಂದ್ರಶೇಖರ ಕಂಬಾರರ 'ಹೇಳತೇನೆ ಕೇಳಾ' ಎಂಬ ಕೃತಿಯನ್ನು ಪ್ರಕಟಿಸಿ ಕಂಬಾರರನ್ನು ಕನ್ನಡ ಸಾಹಿತ್ಯ ಲೋಕಕ್ಕೆ ಪರಿಚಯಿಸಿದವರೆ ಅವರು. 'ಎಂಟು ಕತೆಗಳು' ಎಂಬ ಸಣ್ಣ ಕಥಾ ಸಂಕಲನವನ್ನು ಅವರು ಪ್ರಕಟಿಸಿದ್ದರು. ನನ್ನಿಂದಲೂ ಒಂದು ಸಣ್ಣ ಕತೆಯನ್ನು ಬರೆಸಿ ಅದರಲ್ಲಿ ಸೇರಿಸಿದ್ದರು. ಆ ಕೃತಿಯನ್ನು ತೀರ್ಥಹಳ್ಳಿಯಲ್ಲಿ ಹಾಮಾ ನಾಯಕರಿಂದ ಬಿಡುಗಡೆ ಮಾಡಿಸಿದ್ದರು. ಅದೇ ತಾನೆ ನಾಯಕರು ವಿದೇಶದಲ್ಲಿ ಹೆಚ್ಚಿನ ವ್ಯಾಸಂಗ ಮುಗಿಸಿ ಮರಳಿದ್ದರು. ತೇಜಸ್ವಿ ಅವರ ನಾಟಕವೊಂದನ್ನು ಕಡಿದಾಳಿನಲ್ಲಿ ಆಡಿಸಿದ್ದರು. ಸ್ವತಃ ತಾವು ಕೂಡ ನಾಟಕದಲ್ಲಿ ಒಂದು ಮುಖ್ಯ ಪಾತ್ರವೊಂದನ್ನು ಮಾಡಿದ್ದರು. ಆ ಎರಡೂ ಸಮಾರಂಭಗಳಲ್ಲಿ ನಾನು ಭಾಗವಹಿಸಿದ್ದೆ.

ಶಾಮಣ್ಣ ಎಂಬ ಹೆಸರಿನವರು ನಮ್ಮೂರಿನಲ್ಲಿ ಮೂರು ಜನರಿದ್ದರು. ಯಾವ ಶಾಮಣ್ಣ ಎಂಬ ಪ್ರಶ್ನೆ ಬಂದಾಗ ಕಡಿದಾಳು ಶಾಮಣ್ಣನವರನ್ನು ಗಡ್ಡದ ಶಾಮಣ್ಣ ಎಂದು ಹೇಳುತ್ತಿದ್ದರು. ಕಡಿದಾಳು ಶಾಮಣ್ಣನವರು ನನಗೆ ತಿಳಿದಂತೆ ತಾರುಣ್ಯದಿಂದ ಗಡ್ಡ ಬಿಟ್ಟುಕೊಂಡೆ ಇದ್ದಾರೆ. ಅವರಿಂದಾಗಿ ನಾನೂ ತಾರುಣ್ಯದಲ್ಲಿ ಗಡ್ಡಬಿಟ್ಟು ತಂದೆಯವರಿಂದ ಬೈಸಿಕೊಂಡಿದ್ದೆ. ಶಾಮಣ್ಣನವರು ಗಡ್ಡ ಬೋಳಿಸಿಕೊಂಡಿದ್ದನ್ನು ನೋಡಿಯೆ ಇಲ್ಲ. ತಾರುಣ್ಯದಲ್ಲಿ ಕಪ್ಪಾಗಿದ್ದ ಅವರ ಗಡ್ಡ ಅವರ ಬಿಳಿಯ ಮುಖಕ್ಕೆ ಒಪ್ಪುತ್ತಿತ್ತು. ಕೆಲಕಾಲ ಶಾಮಣ್ಣನವರು ಮಾಳೂರು ಪ್ರೌಢಶಾಲೆಯಲ್ಲಿ ನಮ್ಮಣ್ಣ ಕರ್ಣಾಕರರೊಂದಿಗೆ ಮೇಷ್ಟ್ರರಾಗಿದ್ದರು. ದನಕರುಗಳನ್ನು ಕೊಟ್ಟಿಗೆಯಲ್ಲಿ ಕಟ್ಟಬಹುದು. ಆನೆಯನ್ನು ಕೊಟ್ಟಿಗೆಯಲ್ಲಿ ಕಟ್ಟಲಾದೀತೆ? ಹಾಗೆ ಶಾಮಣ್ಣನವರಿಗೆ ಮಾಸ್ತರಿಕೆ ಒಗ್ಗಲಿಲ್ಲ. ಕೆಲಸಕ್ಕೆ ರಾಜೀನಾಮೆ ಕೊಟ್ಟರು. ಸ್ವತಂತ್ರವಾಗಿ ಜೀವನ ಮಾಡಲು

ಭದ್ರಾವತಿ ಸಮೀಪ ಜಮೀನು ಕೊಂಡು ವ್ಯವಸಾಯಕ್ಕೆ ಇಳಿದರು. ಪ್ರಾರಂಭದಲ್ಲಿ ಅವರು ಬಹಳ ಕಷ್ಟಪಟ್ಟರು. ಆ ಸಮಯದಲ್ಲಿ ಅವರ ಶ್ರೀಮತಿಯವರ ತಾಳ್ಮೆಯನ್ನು ನಾವು ಮೆಚ್ಚಲೇಬೇಕು. ಶಾಮಣ್ಣನವರಿಗೆ ಹಣ ಮಾಡಬೇಕೆಂದಾಗಲಿ, ಭಾರೀ ಜಮೀನುದಾರರಾಗಬೇಕೆಂದಾಗಲಿ ಆಸಕ್ತಿ ಇರಲಿಲ್ಲ. ಅವರು ದುಂದುಗಾರಿಕೆ ವ್ಯಕ್ತಿಯೂ ಅಲ್ಲ. ದುಶ್ಚಟವೂ ಅವರಲ್ಲಿ ನಾನು ಕಾಣಲಿಲ್ಲ. ಯಾವುದೇ ವ್ಯಕ್ತಿಯನ್ನು ಅವರು ಅಷ್ಟಾಗಿ ಹಚ್ಚಿಕೊಂಡವರೂ ಅಲ್ಲ. ಕುವೆಂಪು ಅವರ ಮಂತ್ರಮಾಂಗಲ್ಯ ವಿವಾಹವನ್ನು ಆಚರಣೆಗೆ ತರಲು ಅವರು ಬಹುವಾಗಿ ಶ್ರಮಿಸಿದ್ದಾರೆ. ನನ್ನ ಮದುವೆಯಲ್ಲಿ ಶಾಮಣ್ಣ ಮತ್ತು ಸುಂದರೇಶ್ ಅವರೇ ಪುರೋಹಿತರು. ಅದ್ದೂರಿ ಮದುವೆ ಮಾಡುವವರು ಈ ಇಬ್ಬರನ್ನು ಹಿಂದಿನಿಂದ ಟೀಕಿಸುತ್ತಿದ್ದರು. ಅವರ ಟೀಕೆಗೆ ಇವರು ನಗುತ್ತಿದ್ದರು.

ಶಾಮಣ್ಣನವರು ಮೈಸೂರಿನಲ್ಲಿ ನಡೆದ ಜಾತಿ ವಿನಾಶ ಸಮ್ಮೇಳನಲ್ಲಿ ಭಾಗವಹಿಸಿದ್ದರು. ಅವರ ಮಕ್ಕಳು ಅಂತರ್ಜಾತಿ ವಿವಾಹ ಮಾಡಿಕೊಳ್ಳುವುದನ್ನು ಅವರು ವಿರೋಧಿಸಿದವರಲ್ಲ. ಮಹಾಕವಿ ಪಂಪನ 'ಮನುಷ್ಯ ಜಾತಿ ತಾನೊಂದೇ ವಲಂ' ಎಂಬ ಸೂತ್ರಕ್ಕೆ ಬದ್ಧರಾದರು. ಬೇಸಾಯದಲ್ಲಿ ತನ್ನನ್ನು ತೊಡಗಿಸಿಕೊಂಡಿದ್ದರು. ರೈತ ಚಳುವಳಿಯಲ್ಲಿ ಪ್ರಾರಂಭ ದಿನಗಳಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದರು. ಆ ಮೇಲೆ ರೈತ ನಾಯಕರಲ್ಲಿ ಬಹುಶಃ ಭಿನ್ನಾಭಿಪ್ರಾಯ ಹೊಂದಿ ಸ್ವಲ್ಪ ದೂರ ಉಳಿದಂತೆ ಕಾಣುತ್ತದೆ. ಆದರೆ ಸಾರ್ವಜನಿಕ ಕ್ಷೇತ್ರದಲ್ಲಿ ಅವರು ಕಳೆದು ಹೋಗಲಿಲ್ಲ. ಆಗಾಗ ಕಾಣಿಸಿಕೊಂಡು ನಿಷ್ಠುರವಾಗಿ ಮಾತನಾಡುತ್ತಾರೆ. ದಲಿತರ ಬಗ್ಗೆ ಅನುಕಂಪ ಉಳ್ಳವರು ಬಸವಲಿಂಗಪ್ಪನವರ ಬೂಸಾ ಚಳುವಳಿ ಎಂಬ ಹೇಳಿಕೆಯನ್ನು ಸಮರ್ಥಿಸಿಕೊಂಡಿದ್ದನ್ನು ಶಾಮಣ್ಣ ಒಪ್ಪಿಕೊಂಡಿದ್ದರು. ಅವರು ಕಡಿದಾಳಿನಲ್ಲಿದ್ದಾಗ ಅವರ ಮನೆಯಲ್ಲಿ ದಲಿತರನ್ನು ಜಗುಲಿಯಲ್ಲಿ ಕೂರಿಸಿ ತಾನು ಕುಡಿಯುವ ಲೋಟದಲ್ಲಿ ಕಾಫಿ ಕೊಟ್ಟಿದ್ದಕ್ಕೆ ಮನೆಯವರು ಆಕ್ಷೇಪಿಸಿದ್ದನ್ನು ನನ್ನೊಂದಿಗೆ ಹೇಳಿಕೊಂಡಿದ್ದರು. ಇಂತಹ ಜಾತ್ಯಾತೀತ ವ್ಯಕ್ತಿ ಶಾಮಣ್ಣನವರನ್ನು ನೆನಪಿಸಿಕೊಂಡು ಅವರಿಗೆ ಗೌರವ ಗ್ರಂಥದ ಬಾಗಿನವನ್ನು ಅರ್ಪಿಸುವುದು ಸಮಯೋಚಿತವಾಗಿದೆ.

ಕಡಿದಾಳ್ ಶಾಮಣ್ಣ:
ಎಳವೆಯಲ್ಲಿ ಕಂಡ ಮುಖ

ಡಾ. ನಾ. ಡಿಸೋಜ

ತಮ್ಮ ವ್ಯಕ್ತಿತ್ವ, ವೇಷ ಭೂಷಣ, ಮಾತುಗಾರಿಕೆಯಿಂದಲೇ ನಮ್ಮೆಲ್ಲರ ಗಮನ ಸೆಳೆಯುವ ವ್ಯಕ್ತಿ ಕಡಿದಾಳ್ ಶಾಮಣ್ಣ. ಸಾಗರದ ಪ್ರತಿಭಾ ಅವರು ಪ್ರತಿ ವರ್ಷ ಒಂದು ಮಕ್ಕಳ ಶಿಬಿರ ನಡೆಸುತ್ತಾರೆ. ಈ ಶಿಬಿರದ ಸಂಪನ್ಮೂಲ ವ್ಯಕ್ತಿಯಾಗಿ ಬರುತ್ತಾರೆ ಕಡಿದಾಳ್ ಶಾಮಣ್ಣ. ಶಾಮಣ್ಣ ಈ ಶಿಬಿರದಲ್ಲಿ ಇದ್ದಾರೆ ಅಂದರೆ ಅದು ಮಕ್ಕಳಿಗೆ ಒಂದು ಆಕರ್ಷಣೆ, ಜೊತೆಯಲ್ಲಿ ಅವರು ಒಂದು ಕ್ಯಾಮರಾ ಒಂದು ಕೊಳಲು ತರುತ್ತಾರೆ. ಇವೆರಡು ಜೊತೆಯಲ್ಲಿ ಇದ್ದರಂತೂ ಅವರೊಬ್ಬ ಮಾಂತ್ರಿಕ. ಶಾಮಣ್ಣನವರಿಗೆ ಯಾವುದೇ ಬಿಗುಮಾನ, ಜಂಬ ಇಲ್ಲ. ಮಕ್ಕಳ ಜೊತೆಯಲ್ಲಿ ಅವರು ಮಕ್ಕಳಾಗುತ್ತಾರೆ. ಕತೆ ಹೇಳುತ್ತಾರೆ, ಹರಟುತ್ತಾರೆ, ನಗುತ್ತಾರೆ, ನಗಿಸುತ್ತಾರೆ, ತಮ್ಮದೇ ಆದ ಒಂದು ರೀತಿಯಲ್ಲಿ ತಮ್ಮ ನೆರೆತ ಕೂದಲನ್ನ ಹಿಂದೆ ತಳ್ಳಿ, ಹೆಗಲ ಮೇಲಿನ ಹಸಿರು ವಸ್ತ್ರವನ್ನ ಕೊಡಹಿ ಅವರು ಕತೆ ಹೇಳಲು ನಿಂತರೆ ಮಕ್ಕಳು ಗಪ್ ಚುಪ್. ಅಪಾರವಾದ ಜೀವನಾನುಭವ

ಇರುವ ಕಡಿದಾಳರು ಏನೇ ಹೇಳಲಿ, ಅಲ್ಲಿ ಆಲಿಸುವಂತಹದು ಇರುತ್ತದೆ. ಅವರ ದೈಹಿಕ ಆಕಾರವೇ ಅಂತಹದ್ದು. ಕುಳ್ಳು ವ್ಯಕ್ತಿ, ನೆರೆದ ಕೂದಲಿನ ಅಂಚಿನ ಬೊಕ್ಕ ತಲೆ. ಅವರು ನಕ್ಕರಂತೂ ಅದಕ್ಕೊಂದು ಸೊಬಗು, ಮಾತು ಕೂಡ ಹಾಗೆಯೇ. ಅವರ ಕೀರಲು ದನಿಗೆ ಮೆರಗನ್ನ ನೀಡುವ ಮಾತಿನ ಸರಪಳಿ.

ಕಡಿದಾಳ್ ಶಾಮಣ್ಣನವರನ್ನ ನೋಡಿದಾಗಲೆಲ್ಲ ನನಗೆ ಇವರನ್ನ ಎಲ್ಲೋ ನೋಡಿದ ನೆನಪು ಕಾಡುತ್ತಿತ್ತು. ಆದರೆ ಎಲ್ಲಿ ಅನ್ನುವುದು ನೆನಪಾಗುತ್ತಿರುಲಿಲ್ಲ. ಹೀಗೇ ಯೋಚಿಸಿದಾಗ ಆ ವಿಷಯ ನನೆಪಿಗೆ ಬಂದು ರೋಮಾಂಚನವಾಯಿತು ಕೂಡ. ನಾನು ೧೯೫೩-೫೪ರಲ್ಲಿ ಮೈಸೂರಿನಲ್ಲಿ ಇದ್ದೆ. ಅದು ನನ್ನ ನಿರುದ್ಯೋಗದ ಕಠಿಣ ಕಾಲ. ಸಂಜೆಯಾದಾಕ್ಷಣ ನಾನು ಮಹಾರಾಜ ಕಾಲೇಜು, ಹಾಸ್ಟಲು ಇತ್ಯಾದಿ ಬಳಸಿಕೊಂಡು ಕುಕ್ಕರ ಹಳ್ಳಿ ಕೆರೆಗೆ ಹೋಗುತ್ತಿದ್ದೆ. ಹೀಗೆ ಹೋಗುವಾಗ ಮಹಾರಾಜ ಕಾಲೇಜಿನ ಹಾಸ್ಟೆಲಿನಲ್ಲಿ ಒಂದಲ್ಲಾ ಒಂದು ಕಾರ್ಯಕ್ರಮ ನಡೆಯುತ್ತಲಿತ್ತು. ನಾನೂ ಓರ್ವ ವಿದ್ಯಾರ್ಥಿ ಆಗಿದ್ದರಿಂದ ಅಲ್ಲಿಯ ಕಾರ್ಯಕ್ರಮಗಳಲ್ಲಿ ಭಾಗವಹಿಸಲು ನನಗಂತೂ ಯಾವುದೇ ಅಡ್ಡಿ ಆತಂಕ ಇರಲಿಲ್ಲ. ನಾನು ನೇರವಾಗಿ ಹೋಗಿ ಪ್ರೇಕ್ಷಕಾಂಗಣದಲ್ಲಿ ಕುಳಿತುಬಿಡುತ್ತಿದ್ದೆ. ಅಷ್ಟೇ ಅಲ್ಲ, ಅಲ್ಲಿಯ ಕಾರ್ಯಕ್ರಮಗಳನ್ನ ಕೊನೆಯವರೆಗೆ ಕುಳಿತು ಆಸಕ್ತಿಯಿಂದ ಸವಿಯುತ್ತಿದ್ದೆ. ಆಗ ನನಗೆ ಪರಿಚಿತರಾದವರು ನಂಜುಂಡಸ್ವಾಮಿ, ಪೂರ್ಣಚಂದ್ರ ತೇಜಸ್ವಿ ಮತ್ತು ಕಡಿದಾಳ್ ಶಾಮಣ್ಣ. ಪರಿಚಯ ಅಂದರೆ ಕೈಕೈ ಮಿಲಾಯಿಸಿ ಮಾತನಾಡುತ್ತಿದ್ದೆ ಎಂದಲ್ಲ. ನಾನು ಇಲ್ಲಿ, ಅವರು ಅಲ್ಲಿ-ರಂಗದ ಮೇಲೆ. ಕುವೆಂಪು ಅವರನ್ನ ಕೂಡ ಹೀಗೆಯೇ ದೂರದಿಂದ ಕಂಡವನು ನಾನು. ಅವರ ಬಳಿ ಮಾತನಾಡುವ ಅವಕಾಶ ನನಗೆ ಒದಗಿ ಬಂದದ್ದು ೯೦ರ ದಶಕದಲ್ಲಿ ಅವರನ್ನ ಸಾಗರದಲ್ಲಿ ನಾವು ಸನ್ಮಾನ ಮಾಡಿದಾಗ. ರೈತ ಚಳುವಳಿ ಚುರುಕಾಗಿದ್ದಾಗ ನಂಜುಂಡಸ್ವಾಮಿಯವರು ನಮ್ಮ ಮನೆಗೂ ಒಮ್ಮೆ ಬಂದು ಹೋಗಿದ್ದರು. ತೇಜಸ್ವಿ ಅವರನ್ನ ಆನಂತರ ಕೆಲ ಬಾರಿ ಹೆಗ್ಗೋಡಿನಲ್ಲಿ ನೋಡಿದ್ದೆ, ಮಾತನಾಡಿದ್ದೆ. ಕಡಿದಾಳ್ ಶಾಮಣ್ಣನವರು ಇತ್ತೀಚೆಗೆ ಸಾಕಷ್ಟು ಸಾರಿ ಭೇಟಿಯಾಗಿದ್ದಾರೆ. ಮಾತಿಗೆ ಸಿಕ್ಕಿದ್ದಾರೆ. ಆದರೆ ಅಂದು ನಾನು ಇಪ್ಪತ್ತರ ಗಡಿ ದಾಟದಿದ್ದಾಗ ಮೈಸೂರಿನಲ್ಲಿ ಈ ಎಲ್ಲರ ಭೇಟಿ ನನಗೆ ಅಪ್ಯಾಯಮಾನವಾಗಿ ಇದ್ದುದು ಸುಳ್ಳಲ್ಲ. ಅಲ್ಲದೆ ಈ ಕೆಲವರ ಪ್ರತಿಭೆ ನನಗೆ ಪರಿಚಿತವಾದದ್ದು ಕೂಡ ಅಲ್ಲಿಯೇ.

ವಿಶೇಷವಾಗಿ ಅಂದು ಕಡಿದಾಳ್ ಶಾಮಣ್ಣ ಪ್ರಖ್ಯಾತರಾದದ್ದು ಅವರ ದಂತ ವಾದ್ಯದಿಂದಾಗಿ. ವಿದ್ಯಾರ್ಥಿ ಸಂಘದ ಸಮಾರಂಭಗಳಲ್ಲಿ, ಬೇರೆ ಸಂದರ್ಭದಲ್ಲಿ ಶಾಮಣ್ಣ ವೇದಿಕೆಯನ್ನ ಏರಿ ನಿಂತು ತಮ್ಮ ಬಾಯನ್ನ ಆದಷ್ಟು ಅಗಲವಾಗಿ

ತೆರೆದು (ತೇಜಸ್ವಿ ಹೇಳುವ ಹಾಗೆ, ಬಾಯಿಯ ಸುತ್ತಳತೆಯನ್ನ ಹೆಚ್ಚು ಕಡಿಮೆ ಮಾಡಿ) ಹಲ್ಲುಗಳನ್ನ ಕಟಕಟಿಸುತ್ತಿದ್ದರೆ ಮುಂದೆ ಕುಳಿತವರೆಲ್ಲ ಬೆಕ್ಕಸ ಬೆರಗಾಗುತ್ತಿದ್ದರು. ಜೊತೆಗೆ ಶಾಮಣ್ಣ ಬಾರಿಸುವ ಹಾಡಿಗೆ ಸರಿಯಾಗಿ ನಿಜವಾದ ಹಾಡನ್ನೇ ಹೇಳಿ ಅದಕ್ಕೊಂದು ಬೆರಗನ್ನ ತಂದು ಕೊಡುತ್ತಿದ್ದರು. ಶಾಮಣ್ಣನವರ ದಂತವಾದ್ಯದ ಪುರಾಣವನ್ನ ತೇಜಸ್ವಿಯವರು ತಮ್ಮ "ಅಣ್ಣನ ನೆನಪು" ಕೃತಿಯಲ್ಲಿ ಬಣ್ಣಿಸಿದ್ದಾರೆ. ಅಲ್ಲದೆ ಶಾಮಣ್ಣ ದಂತವಾದ್ಯದ ಮೂಲಕ ನುಡಿಸುತ್ತಿದ್ದ "ಮೇರಾ ಜೂತಾ ಹೈ ಜಪಾನಿ" ಅನ್ನುವ ಹಾಡನ್ನ ಕೇಳಿ ಸಹ-ವಿದ್ಯಾರ್ಥಿಗಳು ಶಾಮಣ್ಣನವರ ದಂತವಾದ್ಯಕ್ಕೆ ಸಾಥ್ ನೀಡುತ್ತಿದ್ದರು. ಈ ವಿದ್ಯಾರ್ಥಿಗಳ ಜೊತೆಯಲ್ಲಿ ನಾನೂ ದನಿಗೂಡಿಸುತ್ತಿದ್ದೆ. ಇಂತಹಾ ಒಂದು ಕಾರ್ಯಕ್ರಮವನ್ನ ನಾನು ಆವತ್ತಿನ ದಿನವೇ ಕೇಳಿದೆನೆಂಬುದು ನನಗೆ ಹೆಮ್ಮೆಯ ವಿಷಯ. ಶಾಮಣ್ಣ ಯಾವುದೇ ವಸ್ತು ಸಿಕ್ಕರೂ ಅದರಿಂದ ಸಂಗೀತವನ್ನ ಹೊರತರಲು ನೋಡುತ್ತಿದ್ದರು ಎಂಬ ತೇಜಸ್ವಿ ಮಾತು ನಿಜ.

ಕಾಲೇಜು ಹಾಸ್ಟೆಲಿನ ವಾರ್ಷಿಕೋತ್ಸವವೋ, ಯಾವುದೋ ದಿನಾಚರಣೆಯೋ, ಹಬ್ಬವೋ ಆದಾಗ ಈ ಮೂವರೂ ಪ್ರಮುಖವಾಗಿ ಇದರಲ್ಲಿ ಪಾಲ್ಗೊಳ್ಳುತ್ತಿದ್ದುದು ವಿಶೇಷ, ವೇದಿಕೆಯ ಮೇಲೆ, ಕಾರ್ಯಕ್ರಮ ಆಯೋಜಿಸುವಾಗ, ಸ್ವಾಗತ ವಂದನೆ ಸಲ್ಲಿಸುವಾಗ ಅಲ್ಲಿ ಪ್ರಧಾನವಾಗಿ ಕಾಣಿಸಿ ಕೊಳ್ಳುತ್ತಿದ್ದವರು ಈ ಮೂವರೇ. ಹೀಗಾಗಿ ಇವರನ್ನ ನಾನು ಮರೆಯದಾದೆ. ಜೊತೆಗೆ ಇವರ ಮಾತು ಮುಖಚಹರೆ, ಹಾವ ಭಾವ ನನ್ನ ಮನಸ್ಸಿನಲ್ಲಿ ಪಡಿಮೂಡಿದ್ದು ಸುಳ್ಳಲ್ಲ. ಇದೆಲ್ಲ ಶಾಶ್ವತವಾಗಿ ಅಲ್ಲಿಯೇ ಗಟ್ಟಿಗೊಂಡದ್ದು, ಅನಾವರಣ ಗೊಂಡದ್ದು ಮಾತ್ರ ಇತ್ತೀಚೆಗೆ. ಇದೆಲ್ಲ ಮನಸ್ಸಿನಲ್ಲಿ ಮೂಡಿದಾಗ ಸಂತಸವಾಗದಿರಲಿಲ್ಲ. ನನಗೆ ಆತ್ಮೀಯರಾದವರ ಪರಿಚಯ ನನಗೆ ಬಹಳ ಹಿಂದೆಯೇ ಆಗಿತ್ತಲ್ಲ ಅನ್ನುವುದೇ ಒಂದು ಸಂತಸವಲ್ಲವೆ?

ಇತ್ತೀಚಿನ ದಿನಗಳಲ್ಲಿ ನಾನು ಬಹಳಷ್ಟು ಸಾರಿ ಕಡಿದಾಳ್ ಶಾಮಣ್ಣನವರನ್ನ ಕಂಡಿದ್ದೇನೆ. ಅವರ ಜೊತೆಯಲ್ಲಿ ಒಡನಾಡಿದ್ದೇನೆ. ಕುಪ್ಪಳ್ಳಿಯ ಕುವೆಂಪು ಸ್ಮಾರಕ ಭವನ ಇರಬಹುದು, ಸಾಗರದ ಗಣಪತಿಯಪ್ಪನವರ ಮನೆ ಇರಬಹುದು, ಶಿವಮೊಗ್ಗೆಯ ಕುವೆಂಪು ರಂಗ ಮಂದಿರ, ವಿಶ್ವ ವಿದ್ಯಾಲಯದ ಕ್ಯಾಂಪಸ್, ಇಲ್ಲೆಲ್ಲ ಅದೇ ಸಹಜ ನಗು, ಮಾತು, ಸರಳ ನಡೆ, ನೇರ ಮಾತು ಇವುಗಳ ಮೂಲಕ ಕಡಿದಾಳ್ ಶಾಮಣ್ಣ ಕಾಣಿಸಿಕೊಳ್ಳುತ್ತಾರೆ. ಇತ್ತೀಚೆಗೆ ಎಂ. ಎಂ. ಕಲಬುರ್ಗಿಯವರ ಹತ್ಯೆಯನ್ನ ಖಂಡಿಸಿ ಶಿವಮೊಗ್ಗದ ಅಂಬೇಡ್ಕರ್ ಭವನದಲ್ಲಿ ಒಂದು ಪತ್ರಿಭಟನಾ ಸಭೆ. ವೇದಿಕೆಯ ಮೇಲೆ ನಾನೂ ಇದ್ದೆ, ಕಡಿದಾಳರೂ ಇದ್ದರು. ಆ ಸಭೆಯ ಉದ್ಘಾಟನೆ ಕಡಿದಾಳರಿಂದ. ಅವರು ಮಾತನಾಡಲಿಲ್ಲ, ಭಾಷಣ ಮಾಡಲಿಲ್ಲ, ತುಟಿ ಎರಡು ಮಾಡಲಿಲ್ಲ. ತಮ್ಮ ಹಸಿರು ಚೀಲದಿಂದ

ಒಂದು ಕೊಳಲು ತೆಗೆದರು; ಮೈಕಿಗೆ ಎದುರಾಗಿ ಕುಳಿತು, ಕೊಳಲಿಗೆ ತುಟಿ ಇರಿಸಿ ಕಣ್ಣು ಮುಚ್ಚಿಕೊಂಡು ಕೊಳಲನ್ನ ನುಡಿಸಿದರು. ಪ್ರೇಕ್ಷಕಾಂಗಣದಲ್ಲಿ ಕುಳಿತ ಎಲ್ಲರ ನೋವನ್ನು ಅಂದು ಕೊಳಲು ನುಡಿಸಿತು. ಅಲ್ಲಿ ನೆಲೆಸಿದ ಮೌನ ಈ ನೋವಿಗೆ ಸಹ ಸ್ಪಂದಿಸಿತು. ನಾವು ಯಾವುದೋ ನೀರವತೆಯಲ್ಲಿ, ಶೂನ್ಯದಲ್ಲಿ, ಮಾತೇ ಮರೆತ ಪರಿಸ್ಥಿತಿಯಲ್ಲಿ ಸಿಕ್ಕಿ ಬಿದ್ದಂತೆ ತೊಳಲಾಡಿದೆವು. ಕಲಬುರ್ಗಿಯವರ ಸಾವನ್ನ ಪ್ರತಿಭಟಿಸಲು ಇಂತಹಾ ಇನ್ನೊಂದು ಅವಕಾಶ ನಮಗೆ ಇರಲಿಲ್ಲ ಅನಿಸಿತು.

ಕಡಿದಾಳ್ ಶಾಮಣ್ಣ ಇಂತಹ ಕಾರಣಗಳಿಂದಾಗಿ ನಮಗೆ ಮುಖ್ಯರಾಗುತ್ತಾರೆ. ದಸರೆಯ ಉದ್ಘಾಟನೆಗೆ ಬನ್ನಿ ಎಂದು ಸ್ನೇಹಿತರಾದ ಮುಖ್ಯಮಂತ್ರಿಯೇ ಕರೆದಾಗ "ರೈತರು ಸಾಯುತ್ತಿದ್ದಾರೆ, ನಾನು ಈ ಕೆಲಸ ಮಾಡಲು ಬರುವುದಿಲ್ಲ" ಎಂದು ದಿಟ್ಟವಾಗಿ ಉತ್ತರಿಸಿದ ವ್ಯಕ್ತಿ ಶಾಮಣ್ಣ. ಶಾಮಣ್ಣ ನೋಡಲು ಬಹಳ ಎತ್ತರದ ವ್ಯಕ್ತಿಯಲ್ಲ. ಆದರೆ ತಮ್ಮ ನಡೆ ನುಡಿ ನಗೆಯಿಂದ ಬಹಳ ದೊಡ್ಡ ಎತ್ತರಕ್ಕೆ ಅವರು ಹೋಗಿ ತಲುಪಿದ್ದಾರೆ. ಅವರ 'ಸಂತಾನ' ಹಿಗ್ಗಲಿ ಅನ್ನುವುದೇ ನನ್ನ ಹಾರೈಕೆ.

ನಮ್ಮ ಶಾಮಣ್ಣ

ಪ್ರೊ. ಬಿ.ಎಸ್.ಶ್ರೀರಾಮ

ಮಹಾರಾಜ ಕಾಲೇಜಿಗೆ ನಾನು ವಿದ್ಯಾರ್ಥಿಯಾಗಿ ಸೇರಿದಾಗ(೧೯೬೦) ಮಲೆನಾಡಿನ ಶ್ರೀ ವಗಳೆ ಶ್ರೀನಿವಾಸ್, ಬೊಮ್ಮನ ಹಳ್ಳಿಯ ರಂಗಪ್ಪ ಹಾಗೂ ಶ್ರೀ ಕೋಣಂದೂರು ಲಿಂಗಪ್ಪ ಪರಿಚಿತರಾದರು. ಕಾಲೇಜಿನ ಒಂದು ವಿದ್ಯಾರ್ಥಿ ಸಂಘದ ಚುನಾವಣೆಯ ಸಮಯದಲ್ಲಿ ಅಭ್ಯರ್ಥಿಯಾಗಿದ್ದ ಸ್ವಾಮಿರಾವ್ ಎಂಬ ವಿದ್ಯಾರ್ಥಿ ಶೂದ್ರನೆಂದೂ, ಆತನನ್ನು ಬೆಂಬಲಿಸ ಬೇಕೆಂದೂ ಶ್ರೀ ಕೋಣಂದೂರು ಲಿಂಗಪ್ಪ ನಮ್ಮನ್ನೆಲ್ಲಾ ಪುಸಲಾಯಿಸಿ ಎಲ್ಲ ವಿದ್ಯಾರ್ಥಿನಿಲಯಗಳಿಗೂ ಚುನಾವಣಾ ಪ್ರಚಾರಕ್ಕೆ ಕರೆದೊಯ್ಯುತ್ತಿದ್ದರು. ಆಗಿನ ದಿನಗಳಲ್ಲಿ ಮಹಾರಾಜ ಕಾಲೇಜಿನ ವಿದ್ಯಾರ್ಥಿ ಸಂಘದ ಚುನಾವಣೆ ಎಂದರೆ ಪಾರ್ಲಿಮೆಂಟ್ ಚುನಾವಣಾ ರೀತಿ ನಡೆಯುತ್ತಿತ್ತು. ಅತ್ಯುತ್ತಮ ಉಮೇದುವಾರರೇ ಜಯಶೀಲರಾಗುತ್ತಿದ್ದರು. ಆಗೆಲ್ಲಾ ಮಹಾರಾಜ ಕಾಲೇಜೆಂದರೆ ಒಂದು ಸಾಂಸ್ಕೃತಿಕ ಕಹಳೆಯನ್ನೇ ಊದುತ್ತಿದ್ದ ಕಾಲ. ನಮ್ಮ ಕಾಲೇಜು ನಾಟಕ, ಸಂಗೀತ, ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳ ತವರಾಗಿತ್ತು. ಈ ಸಂದರ್ಭದಲ್ಲಿ ಶ್ರೀ ಎನ್.ಡಿ.ಸುಂದರೇಶ್ ಮಹಾರಾಜ

ಕಾಲೇಜಿನಲ್ಲಿ ಬಿ.ಎ. ತರಗತಿಗೆ ಸೇರಿದರು. ಸೇರಿದ ದಿನವೇ ನನಗೆ ಆಪ್ತರಾದರು. ಅದೇ ದಿನ ಸಂಜೆ ಸುಂದರೇಶ್ ಉಳಿದುಕೊಂಡಿದ್ದ ಗಾಯತ್ರಿ ಭವನ್ ಎಂಬ ಹೋಟೆಲ್‌ನ ಕೋಣೆಯೊಂದರಲ್ಲಿ ಕಡಿದಾಳ್ ಶಾಮಣ್ಣ ಹಾಗೂ ಪೂರ್ಣಚಂದ್ರ ತೇಜಸ್ವಿಯವರ ಪರಿಚಯವಾಯಿತು. ಇವರಿಬ್ಬರೂ ಸುಂದರೇಶ್‌ರವರನ್ನು ನೋಡಿ ಮಾತನಾಡಿಸಲು ಬಂದಿದ್ದರು.

ಅಲ್ಲಿಂದ ಮುಂದೆ ನಾವೆಲ್ಲರೂ ಪ್ರತಿ ಸಂಜೆ ಭೇಟಿಯಾಗತೊಡಗಿದವು. ಈ ಭೇಟಿಗಳಲ್ಲಿ ಸಾಹಿತ್ಯ, ರಾಜಕೀಯಗಳೇ ನಮ್ಮ ಚರ್ಚೆಗಳ ಮುಖ್ಯ ವಿಷಯಗಳಾಗಿದ್ದವು. ಮೈಸೂರಿನ ಪ್ರಮುಖ ರಸ್ತೆಗಳಾದ ನೂರಡಿ ರಸ್ತೆ, ಸಯ್ಯಾಜಿರಾವ್ ರಸ್ತೆಗಳಲೆಲ್ಲಾ ಸುತ್ತಿ ಯಾವುದಾದರೂ ಹೋಟೆಲ್‌ಗೆ ನುಗ್ಗಿ, ದೋಸೆ, ಕಾಫಿ ಮೇಯ್ದು ವಾಪಸ್ ಆಗುತ್ತಿದ್ದೆವು. ಪ್ರತಿದಿನ ನಮ್ಮ ಬೌದ್ಧಿಕ, ಮಾನಸಿಕ ಆಹಾರಗಳನ್ನು ಹೀಗೆ ಪೂರೈಸಿಕೊಳ್ಳುತ್ತಿದ್ದೆವು. ನಮ್ಮ ದೈನಂದಿನ ದಿನಚರಿ ಹೀಗೆ ಸಾಗುತ್ತಿರಬೇಕಾದರೆ ಸುಂದರೇಶ್‌ರವರು ಚರ್ಚಾಕೂಟ ಹಾಗೂ ನಾಟಕಗಳಲ್ಲಿ ಭಾಗವಹಿಸುತ್ತಾ ಮೈಸೂರಿನಲ್ಲಿ ಪ್ರಸಿದ್ಧರಾದರು. ಅದೇ ಸಮಯದಲ್ಲಿ ಶಾಮಣ್ಣ ಮತ್ತು ತೇಜಸ್ವಿ ಒಂದು ವಾರ ಪತ್ರಿಕೆ ತರಬೇಕೆಂಬ ಮಹತ್ವಾಕಾಂಕ್ಷೆಯಿಂದ 'ನೃಪತುಂಗ' ಎಂಬ ಮುದ್ರಣಾಲಯವನ್ನು ಪ್ರಾರಂಭಿಸಿದರು. ಮುದ್ರಣಾಲಯ ಪ್ರಾರಂಭವಾದ ನಂತರ ಅದು ನಮ್ಮ ಸಂಜೆಯ ಹರಟೆಯ ಕೇಂದ್ರವಾಯಿತು. ಇದೇ ಸಮಯದಲ್ಲಿ ಶಾಮಣ್ಣನವರು ತಮ್ಮ ಸಹೋದರಿ, ಸಹೋದರರನ್ನು ವಿದ್ಯಾಭ್ಯಾಸಕ್ಕಾಗಿ ಮೈಸೂರಿಗೆ ಕರೆತಂದು ಮುದ್ರಣಾಲಯಕ್ಕೆ ಸಮೀಪದಲ್ಲೇ ಒಂದು ಮನೆ ಮಾಡಿದ್ದರು.

ಹೀಗೆ ಮುದ್ರಣ ಕಾರ್ಯ ನಡೆಯುತ್ತಿರಬೇಕಾದರೆ ಒಂದು ದಿನ ತೇಜಸ್ವಿಯವರು, ಸುಂದರೇಶ್, ಕೋಣಂದೂರು ಲಿಂಗಪ್ಪ, ಶಾಮಣ್ಣ ಹಾಗೂ ನನ್ನನ್ನು ಒಂದು ಸ್ಟಾರ್ ಹೋಟೆಲ್‌ಗೆ ಕರೆದುಕೊಂಡು ಹೋಗಿ ಒಳ್ಳೆ ಊಟ ಹಾಕಿಸಿ, ಮುದ್ರಣ ಕಾರ್ಯವನ್ನು ಹೀಗೆ ಮುಂದುವರಿಸಿಕೊಂಡಿರಲು ಇಷ್ಟವಿಲ್ಲವೆಂದೂ, ಆದಷ್ಟು ಬೇಗ ವಾರಪತ್ರಿಕೆಯನ್ನು ಹೊರತರಬೇಕೆಂದೂ, ನಮ್ಮಲ್ಲಿ ಯಾರ್ಯಾರು ಏನೇನು ಜವಾಬ್ದಾರಿ ವಹಿಸಿಕೊಳ್ಳುವಿರಿ ತಿಳಿಸಬೇಕೆಂದು ಸೂಚಿಸಿ, ಇದು ಸಾಧ್ಯವೆ? ಆಲೋಚಿಸಿ ಎಂದು ಹೇಳಿದರು. ಆಗ ಯಾರಿಂದಲೂ ಪ್ರೋತ್ಸಾಹಕರವಾದ ಬೆಂಬಲ ವ್ಯಕ್ತವಾಗಲಿಲ್ಲ. ಶ್ರೀ ಕೋಣಂದೂರು ಲಿಂಗಪ್ಪ ತಮಗೆ ರಾಜಕೀಯದಲ್ಲಿ ಆಸಕ್ತಿ ಇದೆಯೆಂದೂ, ಸುಂದರೇಶ್‌ರವರು ತಾವು ವಿದ್ಯಾಭ್ಯಾಸ ಮುಗಿಸಿ ಲಾಯರ್ ಆಗಬೇಕೆಂದಿರುವುದಾಗಿಯೂ, ಶಾಮಣ್ಣನವರು ತಮ್ಮ ಸೋದರ, ಸೋದರಿಯರನ್ನು ಕರೆದುಕೊಂಡು ಬಂದಿರುವುದರಿಂದ ಪ್ರೆಸ್ ಕೆಲಸವನ್ನು ಮುಂದುವರಿಸಿಕೊಂಡು, ವಿದ್ಯಾಭ್ಯಾಸವನ್ನು ಮುಂದುವರಿಸುವುದಾಗಿಯೂ ಹೇಳಿದರು. ನಾನು ಮೌನವಾಗಿದ್ದೆ.

ಇದಾದ ನಂತರ ತೇಜಸ್ವಿಯವರು ತಮಗೆ ಪ್ರೆಸ್ ಸಹವಾಸ ಬೇಡವೆಂದೂ ತಾನು ವ್ಯವಸಾಯ ಮಾಡುವುದಾಗಿ ತೀರ್ಮಾನಿಸಿ ಪ್ರೆಸ್‌ನ ಸಂಬಂಧವನ್ನು ಕಳಚಿಕೊಂಡರು.

ಕೆಲವು ವರ್ಷಗಳ ನಂತರ ಶಾಮಣ್ಣ ಮೈಸೂರನ್ನು ಬಿಟ್ಟು ಅವರ ಸ್ವಂತ ಸ್ಥಳವಾದ ಕಡಿದಾಳಿಗೆ ಹಿಂತಿರುಗಿದರು. ಅಲ್ಲಿಂದ ಮುಂದೆ ಭಗವತಿಕೆರೆಯಲ್ಲಿ ವ್ಯವಸಾಯಗಾರರಾಗಿ ತಮ್ಮನ್ನು ತೊಡಗಿಸಿಕೊಂಡರು. ಈ ಹೊತ್ತಿಗೆ ಶ್ರೀದೇವಿಯವರೊಂದಿಗೆ ಶಾಮಣ್ಣನವರ ಮದುವೆಯೂ ಆಗಿತ್ತು. ಇವರ ಮದುವೆಯನ್ನು ಶ್ರೀ ಪ್ರಭುಶಂಕರ್, ಪೂರ್ಣಚಂದ್ರ ತೇಜಸ್ವಿ ಹಾಗೂ ನಾನು ಮಂತ್ರ ಮಾಂಗಲ್ಯವನ್ನು ಪಠಿಸುವುದರ ಮೂಲಕ ಅತ್ಯಂತ ಸರಳವಾಗಿ ನೆರವೇರಿಸಿದೆವು.

ಇದಾದ ನಂತರ ನಮ್ಮ ಗುಂಪಿನ ಗೆಳೆಯರೆಲ್ಲಾ ಒಬ್ಬೊಬ್ಬರೇ ವೈವಾಹಿಕ ಜೀವನಕ್ಕೆ ಕಾಲಿಡಲು ಪ್ರಾರಂಭಿಸಿದರು. ಆಗ ನನ್ನ ಮದುವೆಯ ಪ್ರಸ್ತಾಪಕ್ಕಾಗಿ ಶಾಮಣ್ಣ, ಶ್ರೀದೇವಿಯವರು ಹಾಸನಕ್ಕೆ ಭೇಟಿ ನೀಡಿ ಮದುವೆಯನ್ನು ಏರ್ಪಡಿಸಲು ಸಹಾಯ ಮಾಡಿದರು. ಅನೇಕ ದಿನಗಳವರೆಗೂ ನಮ್ಮ ತಂದೆಯವರು ಶಾಮಣ್ಣ, ಶ್ರೀದೇವಿಯವರನ್ನು ನಮ್ಮ ಬೀಗರು ಎಂದೇ ಕರೆಯುತ್ತಿದ್ದರು. ನಾವು ಭಾಗವಹಿಸಿದ್ದ ಸಮಾಜವಾದಿ ಚಳವಳಿಗಳು, ಜಾತಿ ವಿನಾಶ ಸಮ್ಮೇಳನ, ಕರ್ನಾಟಕ ಬರಹಗಾರರ ಒಕ್ಕೂಟ, ನವ ನಿರ್ಮಾಣ ಕ್ರಾಂತಿ ಇತ್ಯಾದಿ ಹೋರಾಟಗಳಲ್ಲಿ ನಾವು ಭಾಗವಹಿಸಿದ್ದು, ರೈತ ಸಂಘದ ಚಟುವಟಿಕೆಗಳು ಮತ್ತು ಶಾಮಣ್ಣನವರಲ್ಲಿ ಅಂತರ್ಗತವಾಗಿರುವ ಹಾಸ್ಯಪ್ರಜ್ಞೆ ಮುಂತಾದವುಗಳ ಬಗ್ಗೆ ಅನೇಕ ಗೆಳೆಯರು, ಸ್ವತಃ ಶಾಮಣ್ಣನವರೂ ಬರೆದಿದ್ದಾರೆ. ಇವುಗಳ ಪುನರುಕ್ತಿ ಚರ್ವಿತಚರ್ವಣವಾಗುವುದು ಸಹಜ.

ಈಗಿನ ದಿನಗಳಲ್ಲಿ ಸರ್ಕಾರಿ ಯೋಜನೆಗಳಾಗಿ ರೂಪುಗೊಂಡಿರುವ ಗ್ರಾಮ ನೈರ್ಮಲ್ಯ, ನಿರ್ಮಲ ಗ್ರಾಮ ಇತ್ಯಾದಿಗಳು ಇತ್ತೀಚಿನದು. ಇದಕ್ಕಿಂತ ಎಷ್ಟೋ ಮುಂಚೆ ಶ್ರೀ ಶಾಮಣ್ಣನವರು "ಮನೆಗೊಂದು ಕಕ್ಕಸ್ಸು" ಎನ್ನುವ ಕ್ರಾಂತಿಕಾರಿ ಯೋಜನೆಯನ್ನು ಕಾರ್ಯಗತಗೊಳಿಸಲು ಹೆಣಗಾಡಿದರು. ಬಹುಹಿಂದೆಯೇ ತಮ್ಮ ಗ್ರಾಮವನ್ನು ಸ್ವಚ್ಛವಾಗಿಡಲು ಪ್ರಯತ್ನಿಸಿ ಸೋತ ಶಾಮಣ್ಣನವರಿಂದ ಸ್ವಚ್ಛ ಭಾರತವನ್ನು ನಿರ್ಮಿಸಲು ಹೊರಟಿರುವ ಪ್ರಧಾನಿ ಮೋದಿಯವರು ಕಲಿಯಬೇಕಾದುದು ಬಹಳವಿದೆ. ಗ್ರಾಮಾಂತರ ಪ್ರದೇಶಕ್ಕೆ ಹಿಂತಿರುಗುವ ವಿದ್ಯಾವಂತ ಯುವಕರು ಶಾಮಣ್ಣನವರನ್ನು ಮಾದರಿಯಾಗಿಟ್ಟುಕೊಂಡು ಕಾರ್ಯೋನ್ಮುಖರಾದರೆ ಇಡೀ ದೇಶವೇ ಸ್ವಚ್ಛವಾಗುವುದೆಂದು ಆಶಿಸುತ್ತೇನೆ.

ತಮ್ಮ ಕೃಷಿ ಜೀವನವನ್ನು ಪ್ರಾರಂಭಿಸಿದಾಗ ಶಾಮಣ್ಣ, ಶ್ರೀದೇವಿಯವರು ಈಗ ವಾಸ ಮಾಡುತ್ತಿರುವ ಮನೆಯ ಎದುರಿಗೆ ಎರಡು ಹುಲ್ಲು ಗುಡಿಸಲುಗಳಲ್ಲಿ ವೈವಾಹಿಕ ಜೀವನ ಪ್ರಾರಂಭಿಸಿದರು. ನಾನು ತೇಜಸ್ವಿ, ಲಂಕೇಶ್ ಮತ್ತು ಗೆಳೆಯ

ರಾಮದಾಸ್ ಅನೇಕ ಸಾರಿ ಸಂಸಾರ ಸಮೇತರಾಗಿ ಹೋಗಿ ಅವರೊಡನೆ ಕಾಲ ಕಳೆದಿದ್ದೇವೆ. ಶ್ರೀ ದೇವರಾಜ ಅರಸ್‌ರವರು ಭೂ ಕಾಯ್ದೆಯನ್ನು ಜಾರಿಗೆ ತರಬೇಕೆಂದು ಹೊರಟಾಗ ಸಮಾಜವಾದಿ ಯುವಜನ ಸಭಾ ಗೆಳೆಯರೆಲ್ಲಾ ಶಾಮಣ್ಣನವರ ಮನೆಯಲ್ಲಿ ಸಭೆ ಸೇರಿ, ಒಬ್ಬ ವ್ಯಕ್ತಿಗೆ ತನ್ನ ಹೆಂಡತಿ ಮಕ್ಕಳೊಡನೆ ಸಂಸಾರ ನಡೆಸಲು ಎಷ್ಟು ಭೂಮಿ ಬೇಕಾಗಬಹುದೆಂದು ಜಿಜ್ಞಾಸೆ ನಡೆಸಿ, ಒಂದು ವರದಿಯನ್ನು ತಯಾರಿಸಿ ಆಗ ವಿಧಾನಸಭೆಯಲ್ಲಿದ್ದ ಶ್ರೀ.ಜೆ.ಎಚ್.ಪಟೇಲರಿಗೆ ಸಲ್ಲಿಸಿದೆವು. ನಮ್ಮ ವರದಿಯಲ್ಲಿ ಭೂ ಕಾಯ್ದೆ ಶಾಸನವನ್ನು ಸ್ವಾಗತಿಸುವಂತೆಯೂ ಹಾಗೂ ನಮ್ಮ ವರದಿಯ ಪ್ರಕಾರ ಒಂದು ಕುಟುಂಬಕ್ಕೆ ಇಷ್ಟು ಜಮೀನಿನ ಅವಶ್ಯಕತೆ ಇದೆಯೆಂದೂ ತಿಳಿಸಿ, ಅದನ್ನು ಸಮರ್ಥವಾಗಿ ವಾದಿಸುವಂತೆ ಪಟೇಲರನ್ನು ಮತ್ತು ಇತರ ಸಮಾಜವಾದಿ ಗೆಳೆಯರನ್ನೂ ನೆನಪಿಸಿದೆವು. ಈ ವರದಿಯನ್ನು ಗೆಳೆಯರಾದ ಎಸ್.ವೆಂಕಟರಾವ್ (ಸಮಾಜವಾದಿ ಪಕ್ಷದ ಕಾರ್ಯದರ್ಶಿ) ಹಾಗೂ ಯು.ಆರ್.ಅನಂತಮೂರ್ತಿಯವರು ವಿರೋಧಿಸಿ ನಮ್ಮ ವರದಿಯು ಜಮೀನ್ದಾರೀ ಪ್ರೇರಿತ– "ಕುಲಕ್ ಲಾಬಿಯ ಕೂಸು" ಎಂದು ನಮ್ಮನ್ನು ದೂಷಿಸಿ ಪತ್ರಿಕೆಗಳಲ್ಲಿ ದೋಷಾರೋಪಣೆ ಮಾಡಿದರು. ನಮಗೆಲ್ಲಾ ನೇಗಿಲು ಹಿಡಿಯದ ಈ ಬ್ರಾಹ್ಮಣವಾದವನ್ನು ಕೇಳಿ ತುಂಬಾ ಸಿಟ್ಟಾಯಿತು. ಆದರೂ ಮೌನವಾಗಿದ್ದೆವು. ಅಂತಿಮವಾಗಿ ಭೂ ಮಸೂದೆ ಕಾನೂನಾದಾಗ ನಾವು ನಮ್ಮ ವರದಿಯಲ್ಲಿ ಸೂಚಿಸಿದ್ದಕ್ಕಿಂತ ಹೆಚ್ಚು ಎಕರೆ ಭೂಮಿ ಒಂದು ರೈತ ಕುಟುಂಬಕ್ಕೆ ನಿಗದಿಯಾಯಿತು. ಈ ಕಾಯ್ದೆ ಬಂದ ನಂತರ ಶ್ರೀ. ಎಂ.ಡಿ.ನಂಜುಂಡಸ್ವಾಮಿ, ಪೂರ್ಣಚಂದ್ರ ತೇಜಸ್ವಿ ಹಾಗೂ ವೆಂಕಟರಾಮ್ ಮತ್ತು ಅನಂತಮೂರ್ತಿಯವರಿಗೆ ದೊಡ್ಡ ಜಗಳವೇ ಆಯ್ತು.

ಶಾಮಣ್ಣನವರ ಮನೆಗೆ ಕೆಲವು ಅಪರೂಪದ ಅತಿಥಿಗಳು ರಾತ್ರಿ ಹೊತ್ತು ಭೇಟಿ ನೀಡುತ್ತಿದ್ದರು. ಹೀಗೆ ಅಪರೂಪದ ಅತಿಥಿಗಳ ಭೇಟಿಯ ಸಂದರ್ಭದಲ್ಲಿ ನಮ್ಮ ಗೆಳೆಯರೊಬ್ಬರ ವಾಚು ಸಹ ಕಳವಾಯಿತು. ಸ್ವಲ್ಪ ದಿನಗಳಾದ ಮೇಲೆ ಈ ವಾಚನ್ನು ಕದ್ದವರು ಬೇರ್‍ಯಾರೂ ಅಲ್ಲ, ರಾತ್ರಿ ಭೇಟಿ ನೀಡುತ್ತಿದ್ದ ಅಪರೂಪದ ಅತಿಥಿಗಳೇ ಎಂದು ತಿಳಿದು ಬಂದಿತು. ನಾವೊಂದು ಸಲ ಶಾಮಣ್ಣನವರಲ್ಲಿ ಭೇಟಿ ನೀಡಿದಾಗ ಏನು ವಾಚು ಸಿಕ್ಕಿತೇ? ಎಂದು ಪ್ರಶ್ನಿಸಿದೆವು. ಆಗ ಶಾಮಣ್ಣನವರು ಇಲ್ಲ, ವಾಚು ಕಳವಾದ ಮೇಲೆ ಅದರಲ್ಲಿ 'ಟೈಂ' ನೋಡಿಕೊಂಡು ಸರಿ ರಾತ್ರಿಯಲ್ಲಿ ಈ ಅತಿಥಿಗಳ ಭೇಟಿ ಮತ್ತು ಉಪಟಳ ನಡೆಯುತ್ತಿದೆಯೆಂದು ಕೆಲವು ಉದಾಹರಣೆಗಳ ಮೂಲಕ ತಿಳಿಸಿದರು. ಈ ಅಪರೂಪದ ಅತಿಥಿಗಳೇ ಮನೆಯ ಒಳಗೂ ಹೊರಗೂ ಬಿಲಗಳನ್ನು ತೋಡಿಕೊಂಡಿದ್ದ ಇಲಿ, ಹೆಗ್ಗಣಗಳು.

ಇತ್ತೀಚೆಗೆ ದಸರಾ ಉದ್ಘಾಟನೆಯ ವಿಷಯವಾಗಿ ಶಾಮಣ್ಣನವರು ಸುದ್ದಿಯಲ್ಲಿದ್ದರು. ರೈತರ ಆತ್ಮಹತ್ಯೆ, ಅವರ ಬೆಳೆಗಳಿಗೆ ಸೂಕ್ತ ಬೆಲೆ, ಯಾವ ಕಾರ್ಖಾನೆಯೂ ಕಬ್ಬನ್ನು ಅರೆಯಲು ಪ್ರಾರಂಭಿಸದೆ ಇರುವುದು (ಇಂದಿಗೂ ಮಂಡ್ಯ, ಮೈಸೂರು ಮುಂತಾದ ಜಿಲ್ಲೆಗಳಲ್ಲಿ ಸಕ್ಕರೆ ಕಾರ್ಖಾನೆಗಳು ಕಬ್ಬನ್ನು ಅರೆಯಲು ಪ್ರಾರಂಭಿಸಿಲ್ಲ) ಕಾರಣಗಳನ್ನು ಕೊಟ್ಟು ದಸರಾ ಹಬ್ಬವನ್ನು ಉದ್ಘಾಟಿಸಲು ನಿರಾಕರಿಸಿದರು. ಹಾಗೇ ವಿಧಾನಸೌಧವನ್ನು ಬೇಕಾದರೆ ಸ್ವಚ್ಛಗೊಳಿಸುವುದಾಗಿ ತಿಳಿಸಿದರು. ಆದರೆ ಸಮಾಜವಾದಿಗಳಾದ ಇವರು ನಮ್ಮೆಲ್ಲ ಗೆಳೆಯರೊಡನೆ ಹಾಗೂ ಶಾಂತವೇರಿ ಗೋಪಾಲಗೌಡ, ಕೋಣಂದೂರು ಲಿಂಗಪ್ಪ ಇವರ ನೇತೃತ್ವದಲ್ಲಿ ಅರಸೊತ್ತಿಗೆಯ ದಸರಾ ಮಹೋತ್ಸವವನ್ನು ವಿರೋಧಿಸಿ ಪ್ರತಿವರ್ಷ ಪೊಲೀಸರ ಲಾಠಿ ರುಚಿಯನ್ನು ಸವಿದದ್ದು ನಮಗೆಲ್ಲಾ ನೆನಪಿದೆ. ಆದುದರಿಂದ ಶಾಮಣ್ಣವನರಿಗೆ ಈ ದಸರಾ ಉದ್ಘಾಟನೆ ಕರೆಬಂದಾಗ ಇವರು–"ಕೊನೆಗೊಂಡಿತೊ ಓರೋರ್ವರ ಗರ್ವದ ಕಾಲ, ಇದು ಸರ್ವರ ಕಾಲ, ಇದು ಸರ್ವದ ಕಾಲ" ಎಂದು ಹೇಳಿ ತಾತ್ವಿಕವಾಗಿ ನಿರಾಕರಿಸದೇ ಇದ್ದುದು ನಮಗೆಲ್ಲರಿಗೂ ನಿರಾಶೆಯನ್ನು ಉಂಟುಮಾಡಿದೆ.

ನಂದದ ಮಂದಹಾಸದ ಶಾಮಣ್ಣ

ಎಚ್.ಎಲ್.ಕೇಶವಮೂರ್ತಿ

ಶಾಮಣ್ಣ ಎಂದರೆ ಯಾವ ಶಾಮಣ್ಣ ಎನ್ನಬಹುದು. ಗಡ್ಡದ ಶಾಮಣ್ಣ ಎಂದರೆ ಕುರ್ತೇಟು ಅವರೇ ನಮ್ ಕಡಿದಾಳು ಶಾಮಣ್ಣನವರು. ಶಾಮಣ್ಣವರಿಗೂ ಗಡ್ಡಕ್ಕೂ ಅಂತ ಅವಿನಾಭಾವ ಸಂಬಂಧ. ಕ್ರಿಸ್‌ಮಸ್ ಹಿಂದಿನ ದಿವಸ ಬರುತ್ತಾನಂತಲ್ಲ ಸಂತಕ್ರೂಸ್ ಅವನಿಗಿರುವಂತಹ ಗಡ್ಡ. ಮಂಜಿನಂತೆ ಬಿಳಿಯದ್ದು. ನಾನು ಅವರನ್ನು ಮೊದಲ ಬಾರಿಗೆ ನೋಡಿದ್ದು ಸುಮಾರು ಮುವ್ವತ್ತೈದು ನಲವತ್ತು ವರ್ಷಗಳ ಕೆಳಗೆ. ಈಗಿನಂತೆಯೇ ಆಗಲೂ ಇವರದ್ದು ಬಿಳಿಯ ಗಡ್ಡ. ಅದು ಎಂದಾದರು ಕರಿಯ ಬಣ್ಣ ಹೊಂದಿತ್ತೆ ಅಥವಾ ನೆರೆಕೂದಲು ಇರುವವರು ಕಪ್ಪು ಬಣ್ಣ ಹಚ್ಚುತ್ತಾರೆ ಹಾಗೆ ಇವರು ಏನಾದರೂ ಬಿಳಿಯ ಬಣ್ಣ ಹಚ್ಚುತ್ತಿರುವರೇ ಎಂಬ ಅನುಮಾನ ನನ್ನದು. ಅದು ಮಾತ್ರ ಸದಾ ಬೆಳ್ಳಗೇ ಇದೆ. ನಾನು ಬೆಳ್ಳಗಿರುವ ಓರಿಜಿನಲ್ ಬಿಳಿ ಗಡ್ಡ ಎನ್ನುವಂತೆ! ಗಡ್ಡರಹಿತ ಶಾಮಣ್ಣ ಅವರ ಮುಖ ಹೇಗಿರಬಹುದು? ಅದನ್ನು ಕಲ್ಪಿಸಿಕೊಳ್ಳಲು ಸಾಧ್ಯವಾಗುತ್ತಲೇ ಇಲ್ಲ. ತಮ್ಮ ತಾಯಿಯ ಗರ್ಭದಿಂದ ಹೊರಬರುವಾಗಲೇ ಗಡ್ಡ ಭೂಷಣರಾಗಿ ಬಂದರೇನೋ!

ನನಗೆ ಶಾಮಣ್ಣ ಅವರ ಒಡನಾಟ ಬಹಳ ಇಲ್ಲ. ಇವರು ಏನು ಎಂಬುದರ ಕುರಿತು ಅನುಮಾನ ಇದೆ. ಇವರು ಸಂಗೀತ ಪ್ರಿಯರೆ? ಸಮಾಜವಾದಿಯೆ? ಪ್ರಗತಿಪರ ಚಿಂತಕರೆ? ರೈತರೆ? ಚಳುವಳಿಗಾರರೆ? ಫೋಟೋಗ್ರಾಫರ್ರೆ? ಸಮಾಜ ಸುಧಾರಕರೇ? ಇವಲ್ಲದೆ ಮತ್ತೇನೋ ಆಗಿದ್ದಾರೆಯೇ? ಇದನ್ನು ತಿಳಿಯುವುದು ಹೇಗೆ?

ಅಷ್ಟಾಗಿ ಪರಿಚಯವಿಲ್ಲದ ಯಾರಾದಾದರೂ ವ್ಯಕ್ತಿತ್ವವನ್ನು ಕಲ್ಪಿಸಿಕೊಳ್ಳುವುದು ಹೇಗೆ? ಅವರ ಒಡನಾಟ ಬಹಳವಾಗಿ ಇರುವವರಿಂದ ಅವರ ವಿಷಯ ಸಂಗ್ರಹಿಸಬಹುದು. ಅವರ ಮಾತುಗಳೂ ಅರ್ಧಸತ್ಯ ಮಾತ್ರ. ಆ ಇಬ್ಬರ ನಡುವಿನ ಸಂಬಂಧ ಹಾಗೂ ಅವರ ಮನೋಧರ್ಮಗಳ ಗಾಢವಾದ ಪರಿಣಾಮ, ಇದರ ಮೇಲೆ ಇರಬಹುದು. ಧರ್ಮರಾಯನಿಗೆ ವಿಶ್ವದ ಎಲ್ಲರೂ ಒಳ್ಳೆಯವರೇ ಆಗಿ ಕಾಣುತ್ತಿದ್ದರಂತೆ; ಆದರೆ ದುರ್ಯೋಧನನಿಗೆ ಎಲ್ಲರೂ ಕೆಟ್ಟವರಾಗಿ ಕಾಣುತ್ತಿದ್ದರಂತೆ. ಹೀಗೆ ಇಲ್ಲಿಯೂ ಆಗಿರಬಹುದಾದ ಸಾಧ್ಯತೆ ಇದೆ. ಇದು ಅವರನ್ನು ಕುರಿತ ಲೇಖನಗಳಿಗೂ ಅನ್ವಯಿಸಬಹುದು. ಉತ್ಪ್ರೇಕ್ಷೆ ಭಾರತೀಯ ಜಾಯಮಾನ. ಇಲಿ ಹೋಯಿತು ಎಂದರೆ ಹುಲಿ ಹೋಯಿತು ಎಂದಿರಬಹುದು. ಅವರು ಮಾಡಿರಬಹುದಾದ ಒಂದು ಒಳ್ಳೆಯ ಕೆಲಸಕ್ಕೆ ರೆಕ್ಕೆ ಪುಕ್ಕ ಬಂದು ಅವರು ಮಾಡಿದ್ದೆಲ್ಲ ಒಳ್ಳೆಯದೇ ಎಂದಾಗಿರಬಹುದು. ಅವರಿಂದ ಸಾಧ್ಯವಾಗದ ಬೇರೆಯವರು ಸಾಧಿಸಿದ ಕಾರ್ಯಗಳನ್ನು ಅವರ ಹೆಸರಿಗೇ ನೊಂದಾಯಿಸಿರಬಹುದು.

ಕೆಲವರು ಬರಹಗಾರರಿಬಹುದು. ಆ ಮಹನೀಯರ, ಮಹಿಳೆಯರ ಬರಹಗಳೇ ಅವರ ಮನೋಧರ್ಮದ ಡಿಎನ್ಎ ಎನ್ನುತ್ತಾರೆ. ಹಲವು ಬರಹಗಾರರ ಒಡನಾಟ ನನಗೆ ಇದೆ. ಬಹಳ ಜನರ ಬದುಕಿಗೂ ಬರಹಕ್ಕೂ ಬಾದರಾಯಣ ಸಂಬಂಧವೂ ಇಲ್ಲ. ಅವರ ಬದುಕೇ ಬೇರೆ, ಬರಹವೇ ಬೇರೆ. ಇದರಿಂದಲೂ ಪೂರ್ಣ ಸತ್ಯ ಹೊರ ಬರುವುದಿಲ್ಲ. ಉಳಿದಿರುವ ಒಂದೇ ಮಾರ್ಗ ಎಂದರೆ ಅವರ ಆತ್ಮಚರಿತ್ರೆಗಳಿಂದ ವ್ಯಕ್ತಿತ್ವವನ್ನು ಕಲ್ಪಿಸಿಕೊಳ್ಳುವುದು. ಸತ್ಯ ಏನು ಅಂದರೆ ಹಲವು ಆತ್ಮಚರಿತ್ರೆಗಳು ಉತ್ಪ್ರೇಕ್ಷಿತ ಸುಳ್ಳಿನ ಕಂತೆಗಳು, ಅಂದ ಮಾತ್ರಕ್ಕೆ ಇದೆಲ್ಲವನ್ನು ಸಾರಾಸಗಟಾಗಿ ತಳ್ಳಿ ಹಾಕುವಂತಿಲ್ಲ. ಯಾವುದನ್ನು ಸ್ವೀಕರಿಸಬೇಕು ಯಾವುದನ್ನು ನಿರಾಕರಿಸಬೇಕು ಎಂಬ ವಿವೇಚನೆ ನಮ್ಮಲ್ಲಿ ಇರಬೇಕಾಗುತ್ತದೆ. ನನ್ನದು ಸಂಶಯ ಪ್ರವೃತ್ತಿ. ವ್ಯಕ್ತಿಗಳ ಕುರಿತು ಬರೆಯುವಾಗ ಮೇಲಿನ ಚಿಂತನೆಗಳೆಲ್ಲ ನನ್ನನ್ನು ಕಾಡುತ್ತದೆ. ಶಾಮಣ್ಣನವರು ಇದಕ್ಕೆ ಹೊರತಲ್ಲ.

ನನ್ನ ಮತ್ತು ಶಾಮಣ್ಣ ಅವರ ಒಡನಾಟ ಪ್ರಾರಂಭ ಆಗಿದ್ದು ಎಂಭತ್ತರ ದಶಕದಲ್ಲಿ ಶಿವಮೊಗ್ಗದ ಡಾ॥ ಚಿಕ್ಕಸ್ವಾಮಿಯವರ ಹಿರಿಯ ಮಗ ಹಾಗೂ ನನ್ನ

ತಂಗಿಯ ಮಗಳ ವಿವಾಹದ ಸಂದರ್ಭ ಅದು. ಮದುವೆಯನ್ನು ಕುವೆಂಪು ರಚಿತ 'ಮಂತ್ರಮಾಂಗಲ್ಯ' ರೀತಿ ಮಾಡಲು ಎಲ್ಲರ ಒಪ್ಪಿಗೆಯೂ ಇತ್ತು. ಮದುವೆ ನೆರವೇರಿಸಬೇಕಾಗಿತ್ತು. ಅದು ಇದ್ದದ್ದು ಮಂಡ್ಯ ನಗರದಲ್ಲಿ. ರೈತ ಚಳುವಳಿ ಜಿಲ್ಲೆಯಾದ್ಯಂತ ಸುದ್ದಿ ಮಾಡಿತ್ತು. ಚಳುವಳಿಯ ಒಂದು ಕಾರ್ಯಕ್ರಮ 'ಮಂತ್ರಮಾಂಗಲ್ಯ' ಆಗಿತ್ತು. ಹಾಗಾಗಿ ವಿವಾಹ ಸಂಹಿತೆ ಬೋಧಿಸಲು ಹಲವು ನಿಪುಣರೇ ತಯಾರಾಗಿದ್ದರು. ಆದರೆ ಅವರೆಲ್ಲರೂ ಇದನ್ನು ಅನುಸರಿಸುತ್ತಿದ್ದ ವಿಧಾನಕ್ಕೆ ನನ್ನ ಒಪ್ಪಿಗೆ ಇರಲಿಲ್ಲ. ಕುವೆಂಪು ಅವರು 'ಕಾಲವು ನಿರ್ಗುಣ. ಇದರಲ್ಲಿ ಒಳ್ಳೆಯ ಕಾಲ ಕೆಟ್ಟ ಕಾಲ ಎಂಬುದಿಲ್ಲ. ಮನುಷ್ಯನ ಜೀವಿತವೇ ಒಳ್ಳೆಯ ಕಾಲ. ಇದರಲ್ಲಿ ರಾಹುಕಾಲ, ಗುಳಿಕಕಾಲ ಎಂದು ಹುಡುಕಬೇಕಿಲ್ಲ' ಎಂದೆಲ್ಲ ಸ್ಪಷ್ಟವಾಗಿ ವಿವಾಹ ಸಂಹಿತೆಯಲ್ಲಿ ಹೇಳಿದ್ದಾರೆ. ಇದೇ ವಿವಾಹ ಸಂಹಿತೆ ಬೋಧಿಸಿ ವಿವಾಹ ನೆರವೇರಿಸುತ್ತಾರೆ. ಆದರೂ ಇಂತಹ ಲಗ್ನದಲ್ಲಿ, ಇಂತಹ ಸಮಯದಲ್ಲಿ ಮಾತ್ರ ಮಾಂಗಲ್ಯಧಾರಣೆ ಆಗಬೇಕು ಎಂದು ಬಹಳ ಜನರು ನಂಬುತ್ತಾರೆ. ಹಾಗೆಯೇ ನಡೆದುಕೊಳ್ಳುತ್ತಾರೆ. ಕುವೆಂಪು ಆಶಯ, ವೈಚಾರಿಕತೆ ಎಲ್ಲಿಯೋ ಹಾರಿಹೋಗುತ್ತದೆ! ಇಂತಹ ವಿವಾಹ ನಮಗೆ ಬೇಡವಾಗಿತ್ತು. ವಿವಾಹ ಸಂಹಿತೆಗೆ ಹೆಚ್ಚು ಅಪಚಾರವಾಗದಂತೆ ಬಾಳುತ್ತಿರುವವರಿಂದ ಈ ಕಾರ್ಯ ನೆರವೇರಿಸುವ ಆಸೆ ನಮ್ಮದಾಗಿತ್ತು. ಆಗ ನೆನಪಾದವರು ಕಡಿದಾಳು ಶಾಮಣ್ಣ. ಡಾ॥ ಚಿಕ್ಕಸ್ವಾಮಿಯವರಿಗೆ ನಮ್ಮ ಆಶಯ ತಿಳಿಸಿ ಕಡಿದಾಳು ಶಾಮಣ್ಣನವರನ್ನು ಒಪ್ಪಿಸಿ ಕರೆತರಬೇಕೆಂದು ಕೇಳಿಕೊಂಡೆವು. ಶಾಮಣ್ಣ ಬಂದು ವಿವಾಹ ಸಂಹಿತೆ ಭೋಧಿಸಿದರು.

ಶಿವಮೊಗ್ಗದ ಅಂಬೇಡ್ಕರ್ ಭವನದಲ್ಲಿ ಲಂಕೇಶರ ಹುಟ್ಟುಹಬ್ಬದ ಸಮಾರಂಭ ಇತ್ತು. ಅದರ ಅಂಗವಾಗಿ ಒಂದು ಪುಸ್ತಕ ಬಿಡುಗಡೆ ಆಯಿತು. ಶಾಮಣ್ಣನವರೂ ವೇದಿಕೆಯಲ್ಲಿದ್ದರು. ಮಾಮೂಲಿನಂತೆ ಎಲ್ಲರದ್ದೂ ಗ್ರೂಪ್ ಫೋಟೋ. ವೇದಿಕೆಯಲ್ಲಿ ಎಲ್ಲರ ಕೈಯಲ್ಲೂ ಪುಸ್ತಕ ಇದ್ದರೆ ಶಾಮಣ್ಣನವರ ಹೆಗಲ ಮೇಲೆ ಮೆರೆಯಿತು ಅದು! ಹೆಗಲ ಮೇಲೆ ಪುಸ್ತಕ ಹೊತ್ತು ಶಾಮಣ್ಣ ಹೆಮ್ಮೆಯಿಂದಲೇ ಫೋಟೋಗೆ ಫೋಸ್ ಕೊಟ್ಟರು. ಅವರ ಆ ರೀತಿಯ ವರ್ತನೆ ಸಭಿಕರಲ್ಲಿ ನಗೆ ಮೂಡಿಸಿತು. ಆದರೆ ಅದು ನಗಿಸಲು ಮಾಡಿದ ತುಂಟಾಟ ಆಗಿರಲಿಲ್ಲ. ಅಕ್ಷರ ಕುರಿತ ಅವರ ಬದ್ಧತೆಯ ಕುರುಹು ಆಗಿತ್ತು. ಶಾಮಣ್ಣ ಓದಿನ ಮಹತ್ವ ಅರಿತಿದ್ದರು.

ಗ್ರಾಮಾಂತರ ಗ್ರಂಥಾಲಯಗಳ ಅವಶ್ಯಕತೆಯನ್ನು ಅವರು ತಿಳಿದಿದ್ದರು. ಕರ್ನಾಟಕ ಸರ್ಕಾರ ಇಂತಹ ಅನೇಕವುಗಳನ್ನು ತೆರೆದರೇನೊ ನಿಜ. ಆದರೆ ಗ್ರಾಮೀಣ ಗ್ರಂಥಪಾಲಕರ ಕನಿಷ್ಟ ಅವಶ್ಯಕತೆಗಳನ್ನು ಪೂರೈಸುತ್ತಿರಲಿಲ್ಲ. ಇದನ್ನು ಅರಿತ ಶಾಮಣ್ಣ ಗ್ರಂಥಪಾಲಕರ ಹೋರಾಟ ಸಮಿತಿ ರೂಪಿಸಿದರು. ನಾನೂ ಅದರ ಸದಸ್ಯನಾಗಿದ್ದೆ.

ಸರ್ಕಾರದ ಜೊತೆ ಹೋರಾಟ ನಡೆಸಿ ಗ್ರಂಥಪಾಲಕರ ಸಂಬಳ ಸಾರಿಗೆಯನ್ನು ಸುಧಾರಿಸುವಂತೆ ಮಾಡುವಲ್ಲಿ ಯಶಸ್ವಿಯಾದರು.

ಶಾಮಣ್ಣನವರನ್ನು ಹೊಗಳಿ, ತೆಗಳಿ, ಇಲ್ಲ ಅವರ ಮೇಲೆ ಕೋಪ ಮಾಡಿಕೊಳ್ಳಿ ಆದರೆ ಅವರ ಮುಖದ ಮೇಲಿನ ಮಂದಹಾಸ ಮಾಸುವುದೇ ಇಲ್ಲ. ಈ ವಿಚಾರದಲ್ಲಿ ಅವರು ಸ್ಥಿತಿಪ್ರಜ್ಞ! ಲಂಕೇಶ್ ಪತ್ರಿಕೆಯಲ್ಲಿ ಯಾವುದೋ ಲೇಖನ ಬರೆದರೆಂದು ಅವರನ್ನು ರೈತಸಂಘದ ಕಾರ್ಯಕಾರಿ ಸಮಿತಿಯಿಂದ ಉಚ್ಚಾಟನೆ ಮಾಡಲಾಯ್ತು. ಕೋಪೋದ್ರಿಕ್ತರಾಗಿದ್ದ ಎಂ.ಡಿ. ನಂಜುಂಡಸ್ವಾಮಿಯವರು ಇದನ್ನು ಘೋಷಿಸಿದಾಗಲೂ ಶಾಮಣ್ಣ ನಗುತ್ತಲೇ ಇದ್ದರಂತೆ! ಸಮಿತಿಯಿಂದ ಹೊರ ಹಾಕಿದರೇನಂತೆ ಅವರ ಒಳಗಿದ್ದ ರೈತನನ್ನು ಹೊರಹಾಕಲು ಸಾಧ್ಯವಿಲ್ಲ! ಅದಕ್ಕೆ ಆ ನಗು ಇರಬೇಕು!. ಈ ನಗು ಇದೆಯಲ್ಲ ಅದು ಅವರಿಗೆ ರಕ್ತಗತವಾಗಿರುವಂತಹದ್ದು. ಅವರ ಒಳಗಿರುವ ಕತೆಗಾರನ ಜೊತೆ ಒಬ್ಬ ನಗೆಗಾರ ಮಿಳಿತಗೊಂಡಿದ್ದಾನೆ. ಎಂತಹ ಘಟನೆಯನ್ನಾದರೂ ವಿನೋದಮಯವಾಗಿ ವರ್ಣಿಸಬಲ್ಲರು. ಅವರು ಅದನ್ನು ಸ್ವಾರಸ್ಯವಾಗಿಡಲು ಕೆಲವೊಮ್ಮೆ ಉತ್ಪ್ರೇಕ್ಷೆ ಮಾಡುವುದೂ ಉಂಟಂತೆ, ನನಗಂತೂ ಹಾಗೆ ಅನ್ನಿಸಿದ್ದಿಲ್ಲ.

ಈ ನಾಡಿನ ದಸರಾ ಉತ್ಸವದ ಉದ್ಘಾಟನೆಗೆ ಶಾಮಣ್ಣನವರನ್ನು ಕರ್ನಾಟಕ ಸರ್ಕಾರ ಆಹ್ವಾನಿಸಿತ್ತು. ಅವರು ಅದನ್ನು ನಿರಾಕರಿಸಿದರು. ಇದಕ್ಕೆ ಕೊಟ್ಟ ಕಾರಣ ಬರಗಾಲ ಇದೆ. ರೈತರು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ. ದಸರಾ ಉತ್ಸವ ನಡೆಸಬಾರದು. ಶಾಮಣ್ಣ ಮೊದಲಿನಿಂದಲೂ ರಾಜಪ್ರಭುತ್ವದ ವಿರೋಧಿ. ಪ್ರಜಾಪ್ರಭುತ್ವದಲ್ಲಿ ನಾಡಹಬ್ಬವನ್ನು ಆಚರಿಸುವುದು ಈ ರೀತಿಯಲ್ಲ. ಇಂತಹ ಆಚರಣೆಗಳ ವಿರುದ್ಧ ಅವರ ಹೋರಾಟ ಇತ್ತು. ಇದನ್ನೇ ಸ್ಪಷ್ಟವಾಗಿ ಹೇಳಬಹುದಿತ್ತು. ಹಾಗೆ ಮಾಡಲಿಲ್ಲ. ಬೇರೆ ಸಂದರ್ಭದಲ್ಲಿ ಇದನ್ನು ವ್ಯಕ್ತಪಡಿಸಿದ್ದಾರೆ ನಿಜ. ಆದರೆ ತಾವು ಯಾವುದರ ವಿರುದ್ಧ ಹೋರಾಟ ಮಾಡುತ್ತಾ ಬಂದಿರುವರೋ ಅದನ್ನು ವ್ಯಕ್ತ ಪಡಿಸುವ ಸಂದರ್ಭ ತಾನಾಗೇ ಒದಗಿ ಬಂದಾಗ ಬಾಯಿಗೆ ಬೀಗ ಹಾಕಿಕೊಂಡರು! ಇರುವ ವಿಷಯವನ್ನು ಹೇಳಿದರೆ ಬಹು ಜನರ ಮನಸ್ಸಿಗೆ ನೋವಾಗಬಹುದು ಎಂಬ ಅಂಜಿಕೆ ಇಂತಹ ನಡವಳಿಕೆಗೆ ಕಾರಣ ಇರಬಹುದು ಅನ್ನಿಸುತ್ತದೆ. ಇಂತಹ ದಾಕ್ಷಿಣ್ಯಪರತೆಯನ್ನು ನಾನು ಕೆಲವು ಬಾರಿ ಕಂಡಿದ್ದೇನೆ. ತುಂಬಾ ಒಳ್ಳೆಯತನ ತುಂಬ ಕೆಟ್ಟದು ಎಂಬುದು ಅವರ ಅರಿವಿಗೆ ಬಂದಿದ್ದರೆ...

ಪ್ರೊ॥ ರಾಮದಾಸ್ ತೀರಿಕೊಂಡ ನಂತರ ಅವರ ಗೆಳೆಯರ ಬಳಗ ಮೈಸೂರಿನಲ್ಲಿ 'ರಾಮದಾಸ್ ನೆನಪು' ಕಾರ್ಯಕ್ರಮ ಹಮ್ಮಿಕೊಂಡಿತ್ತು. ಅದನ್ನು ಉದ್ಘಾಟಿಸಿದ ಡಾ. ಪ್ರಭುಶಂಕರ್ ಹೇಳಿದ್ದು: 'ರಾಮದಾಸ್, ತೇಜಸ್ವಿ, ಸುಂದರೇಶ್, ಶಾಮಣ್ಣ

ಇವರೆಲ್ಲ ನನ್ನ ವಿದ್ಯಾರ್ಥಿಗಳು ಅಂತ ಹೇಳ್ತಾರೆ. ಆದರೆ ಅವರನ್ನು ನಾನು ತರಗತಿಯಲ್ಲಿ ನೋಡಿದ ನೆನಪೇ ಇಲ್ಲ. ಹೀಗೆ ಬಾರದಿದ್ದುದರಿಂದಲೇ ಅವರು ಏನನ್ನಾದರೂ ಸಾಧಿಸಲು ಸಾಧ್ಯವಾಯಿತು'. ಆ ಮಾತುಗಳನ್ನು ಅವರು ಲಘುಧಾಟಿಯಲ್ಲಿ ಹೇಳಿದರಾದರೂ ಅದರಲ್ಲಿ ಸತ್ಯ ಇತ್ತು. ಇವರೆಲ್ಲ ಪಾರಂಪರಿಕ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳಲ್ಲ. ಜನತಾ ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳು. ಅಲ್ಲಿ ಅವರು ಕಲಿತದ್ದೇ ಹೆಚ್ಚು.

ಕೊನೆಯಲ್ಲಿ ಇದನ್ನು ಹೇಳಲೇಬೇಕು. ಹಲವು ಕ್ಷೇತ್ರಗಳಲ್ಲಿ ಅಭಿರುಚಿ ಇರುವ ಶಾಮಣ್ಣ ರೈತರಾಗಿದ್ದೂ, ರೈತರಾಗಿರಲಿಲ್ಲ! ವ್ಯವಸಾಯದ ಸಂಪೂರ್ಣ ಜವಾಬ್ದಾರಿ ಶ್ರೀದೇವಿ ಅವರದ್ದು. ಶಾಮಣ್ಣನಿಗೆ ಶ್ರೀದೇವಿ ಬಾಳಸಂಗಾತಿಯಾಗಿರದಿದ್ದರೆ, ಈಗಿನ ಶಾಮಣ್ಣ ಆಗಿರುತ್ತಿರಲಿಲ್ಲ.

ನಮ್ಮೆಲ್ಲರ ಶಾಮಣ್ಣ

ವೈದೇಹಿ

ಅನೇಕ ವರ್ಷಗಳೇ ಆಗಿ ಹೋದವು, ಆ ದಿನಗಳೆಲ್ಲ ಕಳೆದು. ಅದುವರೆಗೆ ಶಾಮಣ್ಣನವರ ಬಗ್ಗೆ ಕೇಳಿದ್ದೆವು, ಕಂಡಿರಲಿಲ್ಲ. ಒಂದಿನ ಒಂದು ಸ್ಟಾಂಡರ್ಡ್ ಹೆರಾಲ್ಡ್ ಕಾರು ಬಂದು ಮನೆ ಮುಂದೆ ನಿಂತಿತು. ಅದರಿಂದ ಶಾಮಣ್ಣ, ಶ್ರೀದೇವಿ, ಉಲೂಪಿ ಮತ್ತು ಲಾಜವಂತಿ ಇಳಿದರು. ಆಗ ಇಳಿದವರು ಇವರು ಅಂತ ನಮಗೇನು ತಿಳಿದಿರಲಿಲ್ಲ(ಫೋನ್ ಮಾಡಿ ಬರುವವರು ಶಾಮಣ್ಣ ಅಲ್ಲ). ಯಾರಪ್ಪ ಇವರು ಅಂತ ನೋಡುತ್ತ ನಿಂತಿದ್ದೆವು. ಶಾಮಣ್ಣ ತಾನೇ ಪರಿಚಯ ಹೇಳಿಕೊಳ್ಳುತ್ತ ಒಳಗೆ ಬಂದರು. ಅವರು ಪರಿಚಯ ಹೇಳುತಿದ್ದಂತೆ, ಅಯ್ಯ, ಈತ ನಮಗೆಲ್ಲ ಗೊತ್ತು ಎಂಬ ಭಾವ ಬಂತು. ಮತ್ತು ಅಂದಿನಿಂದ ಇಂದಿಗೂ ಅವರು ಇರುವುದು ಹೀಗೆಯೆ. ಈತ ನಮಗೆಲ್ಲ ಗೊತ್ತು ಎಂಬಂತೆಯೇ. ನಡುವೆ ತಿಂಗಳುಗಳ ಕಾಲ ನೋಡದೆ ಮಾತಾಡದೆ ಇದ್ದರೂ. ಇದು ಒಂಚೂರೂ ಅತ್ತಿತ್ತಾಗಲಿಲ್ಲ. ಅಂಥವರು ಶಾಮಣ್ಣ. ಒಮ್ಮೆ ನೋಡಿದೆವೆಂದರೆ, ಮಾತಾಡಿದೆವೆಂದರೆ ಎದುರಿಗಿರುವವರ ಮನಸ್ಸಿನೊಳಗೆ ಇಳಿದು ಬಿಡುವ ತಿಳಿಗೊಳದಂಥ ವ್ಯಕ್ತಿ.

ಅವತ್ತು ಅವರು ಬಂದದ್ದು ಮಗಳು ಉಲೂಪಿಯನ್ನು ಉಡುಪಿ ಕಾಲೇಜಿಗೆ ಸೇರಿಸಲು, ಜೊತೆಗೆ ತಮ್ಮ ಗೋಪಾಲ ಅವರ ಮಗಳು ಶಬರಿಯೂ ಇದ್ದಳು. ಉಲೂಪಿಗೆ ಲೋಕಲ್ ಗಾರ್ಡಿಯನ್ ಆಗಿ ನಮ್ಮನ್ನು ಆರಿಸಿಕೊಂಡು ಮೊದಲು ಅಲ್ಲಿ ಬರೆಸಿ, ಆ ಮೇಲೆ ಇಲ್ಲಿ ಹೇಳಲು ಬಂದಿದ್ದರು. ಅವರದೇ ನಗೆ ವಿಧಾನದಲ್ಲಿ ಅವರು ಅದನ್ನು ತಿಳಿಸಿದರು, ನಾವೂ ಎಲ್ಲ ಅವರು ಹೇಳಿದ ರೀತಿಗೆ ನಕ್ಕೆವು. ನಗೆಯೇ ಒಪ್ಪಿಗೆಯಂತಾಯ್ತು. ಆಮೇಲಿಂದ ಉಲೂಪಿ ಭಾನುವಾರಗಳಂದು ನಮ್ಮ ಮನೆಗೆ ಬರುತ್ತಿದ್ದಳು. ನಯನಾ ಪಲ್ಲವಿಯರೊಡನೆ ಅವಳೂ ಒಬ್ಬಳಾದಳು. ಅವಳನ್ನು ನೋಡಲು ಅಪ್ಪ ಅಮ್ಮ ತಂಗಿ ಬರುವರು. ಬಂದರೆಂದರೆ, ಸುಮ್ಮನೆ ಬರುವರೆ? ಅವರ ತೋಟದ ಬಾಳೆ ಹಣ್ಣು, ಯಾವುದೋ ವಿಶೇಷ ಹೂವು, ಎಲ್ಲೋ ಕಂಡ ಒಂದು ಹೂಕುಂಡ ಇತ್ಯಾದಿ ತರುವರು. ಮತ್ತು ಒಳ ಬರುತ್ತಲೇ ಈಸಲ ಈ ಪದ್ಯ ಹಾಡುತ್ತೇನೆ, ನೋಡಿ, ಎಷ್ಟು ಚೆನ್ನಾಗಿದೆ! ಎನ್ನುತ್ತ ನಮ್ಮನ್ನು ಚೆನ್ನಾದ ಒಂದು ಪದ್ಯದ ನಿರೀಕ್ಷೆಗೆ ನಮಗೇ ತಿಳಿಯದಂತೆ ಒಡ್ಡುವರು. ಈಗ ಇವರ ಕೆಲಸದ ಹೊತ್ತೆ, ಕೇಳಲು ವ್ಯವಧಾನ ಇದೆಯೇ, ಮನಸ್ಥಿತಿ ಇದೆಯೇ? ಉಹುಂ, ಈ ಪ್ರಶ್ನೆಗಳೆಲ್ಲ ಶಾಮಣ್ಣನ ಬಳಿ ಸುತರಾಂ ಸುಳಿಯವು. ಹೋಗಲಿ, ನಮಗೆ? ಕೆಲಸಗಳೆಲ್ಲ ಆಮೇಲೆ ನಿಧಾನಕ್ಕೆ ಮಾಡಿದರಾಯಿತು, ಮನಸ್ಥಿತಿ ಮಾಡಿಕೊಳ್ಳಬೇಕಪ್ಪ, ವ್ಯವಧಾನವನ್ನೂ; ಇವತ್ತು ಯಾರು ಈ ಥರ ನೇರವಾಗಿ ಪದ್ಯ ಹೇಳುತ್ತೇನೆ ಕೇಳಿ ಎಂದು ಹಕ್ಕಿನಿಂದ ಹೇಳುವಂಥ ಮಹಾನುಭಾವರು ಇದ್ದಾರೆ ಎಂಬ ತರ್ಕ. ನಾವು ಅಲ್ಲಲ್ಲೇ ಕೂಡುವೆವು. ನಾವು ಎಂದರೆ ಅವರ ಕುಟುಂಬ ಮತ್ತು ನಮ್ಮ ಕುಟುಂಬ. ಅವರು ಹಾಡು ಸುರು ಮಾಡುವರು. ಹೇಳಿದ ಮೇಲೆ ಕವಿಯ ಹೆಸರು ಹೇಳುವರು. ಹೆಚ್ಚಾಗಿ ಆ ಕವಿ ಕುವೆಂಪು ಅವರೇ ಆಗಿರುವರು. ನಡುನಡುವೆ ಕುವೆಂಪು, ತೇಜಸ್ವಿ ಎಲ್ಲರ ನೆನಪುಗಳನ್ನೂ ಬಿಚ್ಚುವರು. ಆ ಮೇಲೆ ಮತ್ತೊಂದು ಹಾಡು. ಹೀಗೆ ಹಾಡು ಮಾತುಗಳಲ್ಲಿ ಹೇಳಕೇಳದೆ ಅವರಿರುವಷ್ಟು ಹೊತ್ತು ಕಳೆದೇ ಬಿಡುವುದು. ಊಟವೋ ತಿಂಡಿ ಕಾಫಿಯೋ ಈ ಎಲ್ಲದರ ಜೊತೆಗೇ ಅಥವಾ ಮಧ್ಯೆಯೇ ಹೊರತು ಅದಕ್ಕಾಗಿ ಬೇರೆ ಸಮಯ ಇರದು.

ಒಮ್ಮೆ ಬಂದವರು ಈ ಸಲ ಒಂದು ಹಾಡು ಹೇಳಿಕೊಡುತ್ತೇನೆ ಅಂತ. ಮಕ್ಕಳಂತೂ ಸರಿ. ಆದರೆ ಹಾಡು ಕಲಿಯುವ ಮರುಳು, ನಾನೂ ಅವರೊಡನೆ ಸೇರಿದೆ. ಶ್ರೀದೇವಿ ಮತ್ತು ನನ್ನ ಪತಿ ಶ್ರೀನಿವಾಸ ಮೂರ್ತಿ ನಮ್ಮ ಪ್ರ್ಯಾಕ್ಟೀಸಿನ ಪ್ರೇಕ್ಷಕರು ಮತ್ತು ಪರೀಕ್ಷಕರು. ಅವತ್ತು ಅವರು ಹೇಳಿಕೊಟ್ಟದ್ದು ಕುವೆಂಪು ಅವರ 'ನೋಡಲ್ಲಿ ಮೂಡಿಹುದು ಮುಗಿಲಿನಲಿ ಮಳೆಬಿಲ್ಲು, ಬಾಂದೇವಿಯಾಂತ

ಮಣಿಹಾರದಂತೆ'. ಇಂದಿಗೂ ನನ್ನ ಮತ್ತು ಮಕ್ಕಳ ಬಾಯಿಂದ ಮರೆಯಾಗಿಲ್ಲ. ಅಷ್ಟು ಭದ್ರವಾಗಿ ಅದನ್ನವರು ನಮ್ಮ ಕಂಠದಲ್ಲಿ ಕೂಡಿಸಿದ್ದರು. ಫೋಟೋಗ್ರಫಿ ಇಷ್ಟ ಅಂತ ನಮ್ಮ ಪಲ್ಲವಿಗೆ ತನ್ನ ಕೆಮೆರಾ ಕೊಟ್ಟು ಪ್ರಾಥಮಿಕ ಪಾಠವನ್ನೂ ಮಾಡಿದವರು ಅವರು. ಅವಳಿಗೆ ಅಭ್ಯಾಸ ಆಗಲಿ ಅಂತ ಅವರ ತಂದೆಯ ಆತ್ಮಕಥೆಯನ್ನು ಡಿ.ಟಿ.ಪಿ. ಮಾಡಿಸಿ ಖುಶಿ ಪಟ್ಟಿದ್ದರು. ಎಳೆಯರನ್ನು ಅರಿತು ಪ್ರೋತ್ಸಾಹಿಸುವುದರಲ್ಲಿ ಈಗಲೂ ಈ ವಯಸ್ಸಿನಲ್ಲಿಯೂ ಅವರು ದಣಿದಿಲ್ಲ ಎಂಬುದಕ್ಕೆ ಇತ್ತೀಚೆಗೆ ಉಡುಪಿಯಲ್ಲಿ ಸಿತಾರ್‌ವಾದಕ ವಿಜೇತ ಅಣತಿಯವರ ಕಾರ್ಯಕ್ರಮ ಗೊತ್ತು ಮಾಡಿಸಿ, ಸ್ವತಃ ತಾನೇ ಕರಕೊಂಡು ಬಂದು, ಅವನ ಜೊತೆಗೇ ಇದ್ದು, ಕಾರ್ಯಕ್ರಮ ನಡೆವಾಗ ಮೆತ್ತಗೆ ಎದ್ದು ಫೋಟೋ ತೆಗೆದು... ಬಗೆಬಗೆಯಲ್ಲಿ ಸಂಭ್ರಮ ಪಟ್ಟದ್ದೇ ಸಾಕ್ಷಿ. ನೋಡುತ್ತ ನಾವು ಮಕ್ಕಳ ಕಲಾಪ್ರೀತಿಗೆ ನೀರೆರೆವ ಸಂಭ್ರಮಿಸುವ ಶಾಮಣ್ಣನ ಈ ಅನನ್ಯ ಗುಣ, ಆ ಬಗ್ಗೆ ತೋರುವ ಕಳಕಳಿ ಒಂದಿಷ್ಟೂ ಮಸುಕಾಗಿಲ್ಲವಲ್ಲ ಎಂದು ಅಚ್ಚರಿ ಅಭಿಮಾನ ಪಡುತ್ತಲೇ ಅಂದಿನ ಸಿತಾರ್ ಕಾರ್ಯಕ್ರಮವನ್ನು ಆಲಿಸಿದೆವು. ಒಬ್ಬ ಕಲಾವಿದನನ್ನು ಆತ ಎಷ್ಟು ಬೆಳೆಯಬಹುದೋ ಅಷ್ಟು ದೂರಕೆ ಒಯ್ಯಲು ತನ್ನ ಭಾಗದಿಂದ ಏನು ಮಾಡಲು ಸಾಧ್ಯವೋ ಅಷ್ಟೆಲ್ಲವನ್ನೂ ಮಾಡಲು ಸದಾ ಸಿದ್ಧ ಇದ್ದವರು, ಅದರಲ್ಲಿಯೇ ಸಂತೋಷ ಕಾಣುವವರು ಶಾಮಣ್ಣ. ಈಗಲೂ ಈ ವಯಸ್ಸಿನಲ್ಲಿಯೂ ಒಂಚೂರೂ ಬದಲಾಗದೆ ಹಾಗೆಯೇ ಇದ್ದಾರೆ ಎಂಬುದೇನು ಸಾಮಾನ್ಯ ವಿಷಯವೆ! ತನ್ನ ಕೆಲ ಕನಸುಗಳನ್ನು ಈಡೇರಿಸಿಕೊಳ್ಳಲಾಗದ ವಿಷಾದವನ್ನು ಪ್ರಾಯಶಃ ಅವರು ಮೀರುವ ಒಂದು ವಿಧಾನವೂ ಇರಬಹುದು ಇದು ಎಂದೂ ಅನೇಕ ಬಾರಿ ಅನಿಸುವುದು.

ಹೇಳಿದೆನಲ್ಲ, ಅವರು ಸಾಮಾನ್ಯವಾಗಿ ತನ್ನ ಸಂತೋಷವನ್ನು ಹಂಚಿಕೊಳ್ಳುವ ಹೊತ್ತಿಗೆ ಇನ್ನೊಬ್ಬರಿಗೆ ಕರಕರೆಯಾದೀತು, ರಗಳೆಯಾದೀತು ಎಂದೆಲ್ಲ ಯೋಚಿಸುವವರಲ್ಲ, ಆ ಯೋಚನೆಗಳನ್ನೆಲ್ಲ ಶ್ರೀದೇವಿಯೇ ಮಾಡಬೇಕು ಹೊರತು ಅವರಲ್ಲ. ಅದಕ್ಕೆ ಒಂದು ಉದಾಹರಣೆ ಮಂಗಳೂರಿನಲ್ಲಿ ನಡೆದ ರಾಜ್ಯ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಬಂದವರು ವಾಪಾಸು ಹೋಗುವ ದಾರಿಯಲ್ಲಿ ತಮ್ಮ ಗ್ರಾಮದ ಸ್ನೇಹಿತರನ್ನೆಲ್ಲ ನಮ್ಮ ಮನೆಗೆ ಕರಕೊಂಡು ಬಂದದ್ದು. ಅದು ರಾತ್ರಿ ಹನ್ನೊಂದು ಮುಗಿದಿರಬೇಕು. ಗೇಟು ಶಬ್ದವಾಗಲು ಯಾರಪ್ಪ ಇಷ್ಟು ರಾತ್ರಿಯಲ್ಲಿ ಎಂದುಕೊಂಡು ನಾವು ಹೊರಬಂದರೆ ಅಲ್ಲಿ ಶಾಮಣ್ಣ! 'ಮಲಗಿಯಾಯಿತೆ? ನೋಡಿ ಯಾರನ್ನು ಕರಕೊಂಡು ಬಂದಿದೀನಿ!' ನೋಡಿದರೆ ಅವರೊಡನೆ ಹಲಮಂದಿ. 'ಎಲ್ಲ ಸಮ್ಮೇಳನಕ್ಕೆ ಬಂದವರು. ನಿಮ್ಮಲ್ಲಿದ್ದು ನಾಳೆ ಹೋಗುವವರು. ಹೇಗೆ ನನ್ನ ಪ್ಲಾನು! ಈ ಸಂದರ್ಭ ಬಿಟ್ಟರೆ ಅವರು ಇಲ್ಲಿಗೆ ಬರುವುದುಂಟೆ!' – ಕೇಳಿದ ನಮಗೆ

ಒಂಚೂರಾದರೂ ದುಗುಡವಾಗಿದ್ದರೆ ಹೇಳುತಿದ್ದೆ. ಇಲ್ಲ, ಹನಿಯೂ ಇಲ್ಲ. ಯಾಕೆಂದರೆ, ಶಾಮಣ್ಣನ ವ್ಯಕ್ತಿತ್ವವೇ ಹಾಗೆ, ಒಳಗೊಂಡುಬಿಡುವಂಥದು. ಅವರೆಲ್ಲ ನಮ್ಮವರೇ ಎಂಬಂಥ ಭಾವವನ್ನು ಬಿಂಬಿಸಿಬಿಡುವಂಥದು. ಬನ್ನಿಬನ್ನಿ ಎಂದು ಗೇಟು ತೆರೆದೆವು. ಎಲ್ಲ ಎಲ್ಲಿಗೋ ಹೋಗಿದ್ದವರು ತಿರುಗಾಟ ಮುಗಿಸಿ ಮತ್ತೆ ಮನೆಗೆ ಬಂದಂತೆ ಒಳ ಬಂದರು. ಶಾಮಣ್ಣ – "ಇವರೆಲ್ಲ 'ಇಷ್ಟು ರಾತ್ರಿಗೆ ಹೋಗುವುದು ಬೇಡ, ಅವರಿಗೆ ಕಷ್ಟ' ಅಂದರು. ಇದು ಬಿಟ್ಟರೆ ನಿಮಗಿನ್ನು ಇಲ್ಲಿಗೆ ಬರುವ ಛಾನ್ಸ್ ಇಲ್ಲ. ಬೇರೆಲ್ಲಿನ ವಿಚಾರ ಹೇಗೋ ಹೇಳೆ. ಆದರೆ ಇಲ್ಲಿ ಇವರ ಮಟ್ಟಿಗೆ ಕಷ್ಟದ ಮಾತೇ ಇಲ್ಲ. ನಿಮಗೇ ತಿಳೀತದೆ ಅಂತ ಕರಕೊಂಡು ಬಂದೇ ಬಿಟ್ಟೆ. ನೋಡಿ, ಇವರೆಲ್ಲ, ನಮ್ಮ ಹಳ್ಳೀಜನ. ಎಷ್ಟು ಒಳ್ಳೆಯವರಂತೀರಿ!" ಎಂದವರು ಅವರ ಮಲಗುವ ವ್ಯವಸ್ಥೆಯ ಬಗ್ಗೆ ತಾನೂ ವಿಚಾರ ಮಾಡಿದ್ದೇನೆ, ಚಿಂತೆ ಬೇಡ ಎಂಬಂತೆ 'ಮಲಗಲು ವಿಶೇಷ ಏನೂ ಬೇಡ್ರೀ. ಒಂದು ಜಮಖಾನ ಹಾಕಿ ಸಾಕು, ಉದ್ದಾನುದ್ದ ಮಲಗಿಬಿಡ್ತೀವಿ, ಹೆಂಗಂದರೆ ಹಂಗೆ ಇದ್ದು ಅಭ್ಯಾಸ ನಮಗೆ. ಇಂಥದ್ದೇ ಆಗಬೇಕು ಎಂಬುದು ನಮ್ಮ ಡಿಕ್ಶನರೀಲೇ ಇಲ್ಲ"

ನಮಗೆ ಸಂತೋಷ ಆಗುತ್ತದೆಂದು ಅಷ್ಟು ಜನರನ್ನು ಒಮ್ಮೆಗೇ ಕರಕೊಂಡು ಬಂದು ರಾತ್ರಿ ಕಳೆದು ಬೆಳಗೆದ್ದು ಹೋದ ಶಾಮಣ್ಣ, ನಮ್ಮಲ್ಲಿಟ್ಟ ಭರವಸೆ ನೆನೆದರೆ ಈಗಲೂ ಕಣ್ತುಂಬುತ್ತದೆ. ಶ್ರೀದೇವಿಗೆ ಇದೆಲ್ಲ ಇನ್ನೂ ತಿಳಿಯದು. ಆಕೆ ಬಲು ದಾಕ್ಷಿಣ್ಯದವರು. ಅವರಿಗೆ ತಿಳಿದಿದ್ದರೆ 'ಬೇಡ ಮಾರಾಯ್ರ. . .' ಅಂತೆಲ್ಲ ಹೇಳಿ ಶಾಮಣ್ಣನನ್ನು ತಡೆಯುತ್ತಿದ್ದರು. ಹಾಗೆ ತಡೆದದ್ದೇ ಆದಲ್ಲಿ ನಮಗೆ ಅಚಾನಕ್ ದೊರೆತ ಈ ಅಪರೂಪದ ಅತಿಥಿಗಳ ದರ್ಶನವೂ ಶಾಮಣ್ಣನಿಂದಾಗಿ ದೊರೆತ ಅವರ ಮಾತುಕತೆ ನಗೆಕುಶಾಲುಗಳೂ ಎಲ್ಲವೂ ತಪ್ಪಿ ಹೋಗುತಿದ್ದವು. ಇಷ್ಟಕ್ಕೂ ತೊಂದರೆಯಾಗಲು ಏನಿತ್ತಲ್ಲಿ? ರಾತ್ರಿ, ಊಟ ಮುಗಿಸಿ ಬಂದವರು ಅವರೆಲ್ಲ. ಬಾಯಾರಿಕೆ ಕುಡಿದು ಪಟ್ಟಾಂಗ ಹೊಡೆದು, 'ಮೂರ್ತಿಯವರೆ ಇಲ್ಲಿ ಕೇಳಿ, ಇದೊಂದು ಕೇಳಿ' ಅಂತ ಕತೆಕತೆಕಾರಣ ಹೇಳಿ ಮನೆಯಲ್ಲಿ ಕಲರವ ತುಂಬಿದರು. ಮಲಗಿದವರು ಬೆಳಗೆದ್ದು ಕಾಫಿ ಸ್ವೀಕರಿಸಿ ಹೊರಟರು. 'ಎಲ್ಲ ಇನ್ನೊಮ್ಮೆ ಬಿಡುವಾಗಿ ಬನ್ನಿ' ಎಂದು ನಾವು ಬೀಳ್ಕೊಟ್ಟೆವು. ಶಾಮಣ್ಣ ತನ್ನ ಖುಶಿಯಲ್ಲಿ ನಮ್ಮನ್ನೆಲ್ಲ ಒಳಗೊಳ್ಳುವ ಬಗೆಯೇ ಹೀಗೆ. ನಾವೂ ಯಾವ ಮೋಸಗೀಸ ಇಲ್ಲದೆ ತಂತಾನೇ ಟ್ಯೂನ್ ಆದಂತೆ ಒಳಗೊಳ್ಳುವ ಬಗೆಯೂ ಹೀಗೆಯೇ.

ಇದನ್ನೆಲ್ಲ ಹೇಳುವಾಗ – ಅಂದು ನಾವು ಶಿವಮೊಗ್ಗೆಯಿಂದ ಇಲ್ಲಿಗೆ ತರಲು ಸಾಧ್ಯವಾಗದೆ ಬಿಟ್ಟ ಕೆಲ ವಸ್ತುಗಳು ಇದ್ದವು. ಒಮ್ಮೆ ಮಾತಿನಂಶ ಮೂರ್ತಿಯವರು ಇದನ್ನು ಅವರೊಡನೆ ಹೇಳುತ್ತಲೂ ಶಾಮಣ್ಣ ಒಂದು ಕ್ಷಣದೊಳಗೆ 'ಅದು ಬಿಡಿ,

ನಾನು ತರಿಸಿಕೊಡುತ್ತೇನೆ' ಎಂದರು. 'ನಾನು ಹೇಳಿದ್ದು ಆ ಉದ್ದೇಶದಿಂದಲ್ಲ. ನಿಮಗೇಕೆ ತೊಂದರೆ' ಎಂದರೆ, 'ಅದು ತೊಂದರೆಯೇ ಅಲ್ಲ, ನನ್ನ ಸಂತೋಷ. ನಮ್ಮ ಹುಡುಗರೊಡನೆ ಹೇಳಿದರೆ ಸೈ ಬಂತು ಎಂದೇ ಲೆಕ್ಕ.' ಎಂದರು. ಒಂದು ವಾರದೊಳಗೆ ಅವನ್ನೆಲ್ಲ ತುಂಬಿದ ವಾಹನ ನಮ್ಮ ಮನೆಮುಂದೆ ನಿಂತಾಯಿತು. ನಮಗೆ ಬೇಕೆಂದಲ್ಲಿ ಅವುಗಳನ್ನು ಸೇರಿಸಿಕೊಟ್ಟು ವಾಪಾಸು ಹೊರಟಾಯಿತು. . . ಎಂಬ ನೆನಪೂ ಮರೆಯದೇ ಮರೆಯದು.

ಇನ್ನು, ತಮ್ಮ ಕೆಮೆರಾ ಮತ್ತು ಸ್ಟಾಂಡರ್ಡ್ ಹೆರಾಲ್ಡ್ ಕಾರಿನ ಕುರಿತು ಅವರು ಮಾಡುತ್ತಿದ್ದ ಪ್ರಶಂಸೆಯೆಂದರೆ! ಅವೇನು ತಮ್ಮ ಸಾಕು ಮಕ್ಕಳೋ ಎಂಬ ಹಾಗೆ ಕೊಂಡಾಡುತಿದ್ದರು ಶಾಮಣ್ಣ. ಈ ಪರಿಯಾಗಿ ಅವರು ಸ್ವಂತ ಮಕ್ಕಳನ್ನೂ ಕೊಂಡಾಡಿದ್ದು ಕಾಣೆ. ಆ ಸ್ಟಾಂಡರ್ಡ್ ಕಾರೋ, ಹಿಂದಿನ ಸೀಟಿಗೆ ಹೋಗಬೇಕಾದರೆ ಎದುರು ಸೀಟನ್ನು ಮಡಚಬೇಕಾದ ಅವಸ್ಥೆ–ವ್ಯವಸ್ಥೆಯ ಕಾರು. ಪಾಯಶಃ ಅದೀಗ ಕಾಣಸಿಗದು. ಎಲ್ಲಾದರೂ ಮ್ಯೂಸಿಯಂನಲ್ಲಿ ಪಳೆಯುಳಿಕೆ ರೂಪಿಯಾಗಿ ಗುಮ್ಮಗೆ ಪಿಳಿಪಿಳಿ ಕುಳಿತಿರಬಹುದು. ಅದನ್ನವರು ಎಂಟೇ ಸಾವಿರ ರುಪಾಯಿಗೆ ಕೊಂಡದ್ದು, ಅದು ತನ್ನನ್ನು ಬಿಟ್ಟು ಇನ್ನಾರಿಗೂ ಕವಡೆಕಾಸೂ ಬೆಲೆಕೊಡದೆ ಒಂದಿಂಚೂ ಸರಿಯದೆ ಧರಣಿ ಹೂಡುವುದು, ತಾನು ಓಡಿಸಿದರೆ ಮಾತ್ರ ಓಡುವುದು; ಎಂದರೆ ಅದರ ಮನಸ್ಸು ತನಗೆ ತನ್ನ ಮನಸ್ಸು ಅದಕ್ಕೆ ತಿಳಿದಿರುವ ಚೋದ್ಯ ಇತ್ಯಾದಿ ಕತೆ ಅವರಿಂದಲೇ ಕೇಳಬೇಕು. ಕೇಳುವವರಿದ್ದಾರೆ ಎಂದಾದರೆ ಹೇಳಲು ವಿಷಯಕ್ಕಾಗಲೀ ಸಮಯಕ್ಕಾಗಲೀ ಕೊರತೆಯೇ ಇಲ್ಲದವರು ಶಾಮಣ್ಣ. ಹೀಗೆ ಒಮ್ಮೆ ಎಂದಿನಂತೆ ಅದರೊಂದಿಗೆ ತಾನು ಓಡಾಡಿದ ಅನೇಕ ಸಾಹಸಗಳನ್ನು ಬಣ್ಣಿಸುತ್ತ, ಸವಾರನೊಬ್ಬ ತನ್ನ ಕುದುರೆಯ ಬೆನ್ನನ್ನು ಪ್ರೀತಿಯಿಂದ ಚಪ್ಪರಿಸುವಂತೆ ಅದರ ಬೆನ್ನು ಚಪ್ಪರಿಸುತ್ತ ಮೂರ್ತಿಯವರ ಕಡೆಗೆ ತಿರುಗಿ 'ಹಹಹ, ಎಷ್ಟು ಚೆನ್ನಾಗಿ ಸರ್‍ರ್‍ರಂತ ಆಗುಂಬೆ ಘಾಟಿ ಹತ್ತತ್ತೆ ಅಂದ್ಕಂಡ್ರಿ! ಥೋ ಇದರ! . . ಬೇಕೇನ್ರೀ? ಬಿಟ್ಟುಹೋಗ್ತೀನಿ. ನಾಕು ದಿನ ಓಡಿಸಿ, ನಿಮಗೇ ತಿಳಿಯುತ್ತೆ!'–ಮೂರ್ತಿಯವರು ನಗುತ್ತ 'ಬೇಡ ಸ್ವಾಮಿ!' ಎಂದರು. ಶಾಮಣ್ಣನೂ ಸೇರಿ ಎಲ್ಲರಿಗೂ ನಗೆ ಹರಡಲು ಇಷ್ಟು ಸಾಕಾಯಿತು.

ಒಮ್ಮೆ ಬಂದವರು ಬರ್‍ರೀ, ಇಲ್ಲೇ ಮಿಶನ್ ಕಂಪೌಂಡಿನಲ್ಲಿ ನಮ್ಮ ಅನಿಲ್‌ನ (ಅನಂತಮೂರ್ತಿಯವರ ತಮ್ಮ) ಹೆಂಡತಿ ವೈದೇಹಿ ಕ್ವಾರ್ಟರ್ಸ್ ಇದೆ. ಅವಳು ಡಾಕ್ಟರು, ಮಿಶನ್ ಆಸ್ಪತ್ರೆಯವರು ಕೊಟ್ಟ ಕ್ವಾರ್ಟರ್ಸ್ ಅದು. ಏನು ದೊಡ್ಡದಾಗಿದೆ ಅಂತ! ಹೋಗೋಣ, ಅಲ್ಲಿ ಸತ್ಯಮ್ಮ(ಅನಂತಮೂರ್ತಿಯವರ ತಾಯಿ) ಬಂದಿದ್ದಾರಂತೆ, ನೋಡಿ ಬರೋಣ ಎಂದರು. ನಮಗೋ, ಒಮ್ಮೆಯೂ ಭೇಟಿ ಯಾಗದೆ ಪರಿಚಯವೂ ಆಗದೆ ಸೀದ ಹೇಗೆ ಹೋಗುವುದು, ಚೆನ್ನಾಗಿರಲ್ಲ ಅಂತ.

ಎಲ್ಲವರೂ ನಮ್ಮವರೇ ಎಂಬ ಥಿಯರಿಯವರು ಶಾಮಣ್ಣ, ಬಿಡುವರೆ? ಕರಕೊಂಡೇ ಹೋದರು. ಹೋದ ಹೊತ್ತಿನಲ್ಲಿ ಅಲ್ಲಿ ಸೊಸೆ ಕರ್ತವ್ಯದ ಮೇಲೆ ಆಸ್ಪತ್ರೆಗೆ ಹೋಗಿದ್ದರು. ಸತ್ಯಮ್ಮ ಇದ್ದರು ನಿಜ, ಆದರೆ ಶಾಮಣ್ಣನ ಕಣ್ಣಿಗೆ ಬಿದ್ದದ್ದು ಮೂಲೆಯಲ್ಲಿ ಕುಳಿತಿದ್ದ ಸಿತಾರ್. ಸೈ, ಸತ್ಯಮ್ಮನವರೊಡನೆ ಮಾತು ಸುರುಮಾಡಿದ್ದಾರೆ, ಮಾತಾಡುತ್ತ ಮೆಲ್ಲಗೆ ಮಂತ್ರ ಹಾಕಿ ಎಳೆದಂತೆ ಅತ್ತ ಸರಿಯುತಿದ್ದಾರೆ, ಸಿತಾರನ್ನು ಸಮೀಪಿಸಿ ಕೂಸನೆತ್ತಿದಂತೆ ಮೃದುವಾಗಿ ಅದನ್ನೆತ್ತಿಕೊಂಡು ಕುಳಿತು ಎದೆಗಾನಿಸಿ ಕೊಂಡು ಬಾರಿಸಲು ತೊಡಗಿದ್ದಾರೆ. ಇಲ್ಲಿ ಕೇಳ್ರೀ ಈ ರಾಗ ಅಂತ ಹೇಳುತ್ತ ಕಣ್ಣುಮುಚ್ಚಿ ಕಣ್ಣುತೆರೆದು ಮುಗುಳು ನಗುತ್ತ ಸಂಗೀತದೊಳಗೆ ಪ್ರವೇಶಿಸಿಯೇ ಬಿಟ್ಟಿದ್ದಾರೆ. ಹಾಗೆ ಸುಮಾರು ಒಂದು ಗಂಟೆ ಹೊತ್ತೇ ಕಳೆದಿರಬಹುದು. ಹೊತ್ತಾಯಿತೆಂದು ಅವರನ್ನು ಎಚ್ಚರಿಸುವವರೆಗೂ ಸತ್ಯಮ್ಮನವರೊಂದಿಗೆ ಒಂದೂ ಮಾತಾಡದೆ ಸುಮ್ಮನೆ ಪರಸ್ಪರ ನೋಡುತ್ತ ಅಲ್ಲಲ್ಲಿ ಸಣ್ಣಗೆ ನಗೆ ವಿನಿಮಯ ಮಾಡಿಕೊಳ್ಳುತ್ತ ನಾವು ಇರಬೇಕಾಯಿತು. ಅದೇನೆ ಇರಲಿ, ಅಂದು ಶಾಮಣ್ಣನವರಿಂದಾಗಿ ನಾವು ಸತ್ಯಮ್ಮನವರನ್ನು ನೋಡಿದೆವು. ಅವರನ್ನು ನೋಡಿದ್ದು ಅದೇ ಪ್ರಥಮ, ಅದೇ ಕೊನೆ.

ಎರಡು ವರ್ಷಗಳ ಕೆಳಗೆ ಶಿವಮೊಗ್ಗೆಯಲ್ಲಿ ನಡೆದ ಕಮಲಾ ನೆಹರು ಕಾಲೇಜಿನ ಒಂದು ಕಾರ್ಯಕ್ರಮಕ್ಕೆ ಹೋದಾಗ ಅಲ್ಲಿಗೆ ಶಾಮಣ್ಣ ಶ್ರೀದೇವಿಯವರೂ ಬಂದಿದ್ದರು. ಬಲು ದಿನಗಳ ಮೇಲಿನ ಭೇಟಿಯಾಗಿತ್ತು ಅದು. ಕಾರ್ಯಕ್ರಮದ ನಂತರ ನಾನು ಬೆಂಗಳೂರಿಗೆ ಹೊರಡುವವಳು. ಕಳಿಸಿಕೊಡಲು ಬಂದ ಶಾಮಣ್ಣ ಬಸ್ಸಿನಲ್ಲಿ ತಾನೂ ಒಂದು ಸೀಟಿನಲ್ಲಿ ಕುಳಿತು 'ಇಕೊಳ್ಳಿ, ಒಂದು ಹೊಸರಾಗ ಬಾರಿಸುತ್ತೇನೆ, ಕೇಳಿ ಕೇಳಿ' ಅಂತ ಕೊಳಲು ಸುರುಮಾಡಿಯೇ ಬಿಟ್ಟರು. ಮೊನ್ನೆ ಅವರು ವಿಜೇತನ ಸರೋದ್ ಕಚೇರಿಗಾಗಿ ಉಡುಪಿಗೆ ಬಂದಿದ್ದರಲ್ಲ, ಆಗಲೂ ಅಷ್ಟೆಯೇ. ರಥಬೀದಿ ಸುತ್ತಲು ಹೋದಾಗ ಇದ್ದಕ್ಕಿದ್ದಂತೆ ಕಳೆದು ಹೋದರು. ಎಲ್ಲಿ ಅಂತ ಕಣ್ಣಲ್ಲೇ ಅರಸಿದರೆ ಒಂದು ಅಂಗಡಿಯಲ್ಲಿ ನೇತು ಹಾಕಿದ ಬಿದಿರಿನ ಕೊಳಲುಗಳಲ್ಲಿ ಆರಿಸುತ್ತ ಒಂದೊಂದನ್ನೂ ತೆಗೆದು ಪ್ಲೀಂ ಪ್ಲೀಂ ಊದುತ್ತ ಮೈಮರೆತಿದ್ದರು. ಈತ ಬಹುಶಃ ದ್ವಾಪರದಲ್ಲಿ ಗೋಪಾಲಕೃಷ್ಣನ ಒಡನಾಡಿಯಾಗಿರಲೇ ಬೇಕು. ಅಂತೂ ಈ ಶ್ರೀಕೃಷ್ಣನ ಒಡನಾಡಿ ಒಂದು ಕೊಳಲು ಹಿಡಕೊಂಡು ಬಂದು 'ಈಗೆಲ್ಲ ಬಿದಿರಿನ ಕೊಳಲೇ ಸಿಗಲ್ಲ ಮಾರಾಯ್ರ. ಇಲ್ಲಿ ಸಿಗತ್ತೇ ಅಂತ ಗೊತ್ತಿತ್ತು. ಹಾಗಾಗಿ ಹುಡುಕಿದೆ. ಇದು ಪರವಾಗಿಲ್ಲ, ಸದ್ಯಕ್ಕೆ ಸಾಕು' ಎನ್ನುತ್ತ ಇನ್ನೊಮ್ಮೆ ಪ್ಲೀಂ ಎಂದು ಊದಿ ಹೇಗಿದೆ ಎಂದು ಕಣ್ಣಲ್ಲೇ ಕೇಳುತ್ತ ನಕ್ಕರು. ಬದಲಾಗದ ಒಬ್ಬ ಸಕಾರಾತ್ಮಕ ವ್ಯಕ್ತಿತ್ವದಲ್ಲಿ ಶಾಮಣ್ಣ ಒಬ್ಬರು ಹೌದೋ ಅಲ್ಲವೋ ಎಂದು ಕೇಳಿದರೆ ಅಲ್ಲ ಎಂಬವರು ಇದ್ದಾರೆಯೆ? ಖಂಡಿತ ಇಲ್ಲ.

ಎಂದು ಬಂದರೂ ಅವರ ಬಳಿ ಒಂದಷ್ಟು ನೆನಪುಗಳ ಕಂತೆ ಇರುವುದು. ತೇಜಸ್ವಿ ಇಲ್ಲದೆ ಆ ನೆನಪುಗಳು ತೆರೆದುಕೊಳ್ಳಲೇ ಒಲ್ಲವು. ಸಂಗೀತ ಕಲಿತದ್ದು, ದಂತವಾದ್ಯ ನುಡಿಸಿದ್ದು, ಪ್ರೆಸ್ ತೆಗೆದದ್ದು, ರೈತಸಂಘ ಕಟ್ಟಿದ್ದು, ಅಲ್ಲಿಂದ ಹೊರಬಂದದ್ದು ಎಲ್ಲವನ್ನೂ ಅವರು ಹೇಳುವುದು ಒಂದು ಲಘು ಲಹರಿಯಲ್ಲಿ. ಹಾಸ್ಯದ ಟಿಂಟ್ ಇಲ್ಲದೆ ಏನನ್ನು ಹೇಳಲೂ ಬಾರದವರು ಶಾಮಣ್ಣ. ಹಾಗೆ ಹೇಳುತ್ತ ಹಾಸ್ಯದ ಮರೆಯಲ್ಲಿ ತನ್ನ ಸಂಕಟಗಳನ್ನು ಅಡಗಿಸಿಕೊಳ್ಳುವವರು. ಆದರೆ ಅವರು ಎಷ್ಟು ಅಡಗಿಸಿ ಹೇಳಿದರೂ ನಿಕಟವರ್ತಿಗಳಿಗೆ ಮಾತ್ರ ಆ ಸಂಕಟದ ಉಸಿರು ಕೇಳಿಸುವುದು. ರೈತ ಸಂಘದಿಂದ ಹೊರಬರಬೇಕಾಗಿ ಬಂದ ಸಂದರ್ಭವನ್ನು ಅವರು ವರ್ಣಿಸಿದ್ದೂ ಆ ರೀತಿಯಾಗಿಯೇ. ಆದರೆ ಅವರ ಒಡಲ ಸುಡು ನಮಗಂತೂ ಅವರ ಲಘುಧಾಟಿಯಲ್ಲೇ ಗೋಚರವಾಗಿ ಅವರು ನಕ್ಕರೂ ನಮಗೆ ಲೆಕ್ಕಕ್ಕಾದರೂ ಮುಗುಳುನಗಲು ಕೂಡ ಆಗಿರಲಿಲ್ಲ. ಅವರು ಮುಂಚೆಯೇ ಹೇಳಿದ್ದರಿಂದಲೋ ಏನೋ, ಅವರ ಆತ್ಮಕತೆ 'ಕಾಡ ತೊರೆಯ ಜಾಡು' (ವಾಸ್ತವವಾಗಿ ಅದೊಂದು ಕಾಡು ತೊರೆಯ ಹರಿವಿನ ದೀರ್ಘ ಆಲಾಪ) ಓದುವಾಗ ಅಲ್ಲಿದ್ದ ಹೆಚ್ಚಿನವೆಲ್ಲ ನಮಗೆ ಅವರಿಂದಲೆ ನೇರವಾಗಿ ಪರಿಚಿತವಾದ ಸಂಗತಿಗಳೇ ಆಗಿದ್ದವು. ಹಾಗಿದ್ದೂ ಹೇಳುವ ಧಾಟಿಯಿಂದಾಗಿ ಮತ್ತೆ ಸ್ವಾರಸ್ಯವಾಗಿ ಓದಿಸಿಕೊಂಡವು. ಅವನ್ನು ಸಂಗ್ರಹಿಸಿ ಅಕ್ಷರರೂಪದಲ್ಲಿ ಜೋಪಾನ ಮಾಡಿಟ್ಟ ಪ್ರೀತಿಯ ಅಕ್ಷತಾ ಮಾಡಿದ ಕೆಲಸ ಬಲು ದೊಡ್ಡದು.

ತಮಗೆ ಗುರುತು ಪರಿಚಯವೇ ಇಲ್ಲದೆಯೂ ಸ್ಪಂದಿಸುವ ಅವರ ಗುಣಕ್ಕೆ 'ರಾತ್ರಿಯಿಡೀ ಹೆಣ ಕಾದ' ಕತೆಯೇ ಸಾಕ್ಷಿ. ಎಂತಹ ಹೋರಾಟಗಾರರು ಶಾಮಣ್ಣ. ಹೋರಾಟವೆಂಬುದನ್ನು ವೈಭವೀಕರಿಸದೆ ಅದು ತನ್ನ ಜೀವನದ ಮಾರ್ಗ ಎಂದು ನಂಬಿ ನಡೆದುಬಂದವರು. ಸದಾಕಾಲ ಸಮಾಜದ ನಡತೆಯ ಕಡೆಗೆ ಒಂದು ಕಣ್ಣನ್ನು ನೆಟ್ಟುಕೊಂಡೇ ಇರುವವರು. ಅಹಂ ಅನ್ನು ಶಾಮಣ್ಣನಷ್ಟು ಚೆನ್ನಾಗಿ ಗೆದ್ದವರು ಇರುವರೆ? ನನಗಂತೂ ಕಾಣದು. ಕೊಚ್ಚಣಿಕೆ ತುಸುವೂ ಇಲ್ಲದೆ ತಮ್ಮ ಸಾಧನೆಗಳನ್ನು ಹೇಳಿಕೊಳ್ಳುವವರು ಅವರು. ಗೆಲುವನ್ನು ಸಾಮಾನ್ಯವೆಂಬಂತೆ ವಿವರಿಸುವರು. ಆದರೆ ಎಲ್ಲಾದರೂ ತನ್ನ ಸೋಲಿನ ಅನುಭವ ಹೇಳಲು ಹೊರಟರೋ ಅವರ ವಾಗ್ವೈಖರಿ ಗರಿಗೆದರುವುದು. ನಾನು ಕಂಡಂತೆ ಶಾಮಣ್ಣನಿಗೆ ಯಾರ ಮೇಲೆಯೂ ಶಾಶ್ವತವಾದ ಸಿಟ್ಟೇ ಇಲ್ಲ. ಒಂದು ಹುಂಡೂ ಮರ್ಮಸಾಧನೆ ಇಲ್ಲ. ಯಾರೊಬ್ಬರ ವರ್ತನೆಗೆ ತುಸು ನೊಂದಂತೆ ಕಂಡರೂ ತಕ್ಷಣ ಆ ನೋವನ್ನು ಅಳಿಸಿಕೊಳ್ಳುವ ಪ್ರಯತ್ನವಾಗಿ ಕಾರಣ ಹುಡುಕುವರು. ಕಾರಣ ಸಿಗದಿದ್ದರೂ ತಾನೇ ಒಂದು ಕಾರಣ ಸೃಷ್ಟಿಸಿ ಆ ಕಾರಣವಿಲ್ಲದೆ ಆತ ಹಾಗೆ ವರ್ತಿಸುವವರೇ

ಅಲ್ಲ, ಇತ್ಯಾದಿ ಸಮಜಾಯಿಶಿ ನೀಡುವರು. ಎಂತಹ ಕಹಿಘಟನೆಗಳು ಎದುರಾದರೂ ಮನಸ್ಸನ್ನು ಕಹಿ ಮಾಡಿಕೊಳ್ಳದೆ ಬದುಕಿ ಬಂದ ಅಪರೂಪದ ಜೀವ ಶಾಮಣ್ಣ.

ಸರಳತೆ, ನಿರುಮ್ಮಳತೆ ಮತ್ತು ಸಾವಧಾನತೆ ಅವರ ಸ್ಥಾಯೀ ಗುಣಗಳು. ಸರಳತೆ ಮತ್ತು ಹೋರಾಟದ ಬದುಕಿನೊಂದಿಗೆ ಸಂಸಾರ ತೂಗಿಸಿಕೊಂಡು ಹೋಗುವುದು ಅಂದರೇನು ಹುಡುಗಾಟವೆ? 'ಆಕೆ ಆಗಿದ್ದಕ್ಕಾಯಿತು' ಎಂಬೊಂದು ಶಹಭಾಸ್ ಸೂಸುವ ಪ್ರಮಾಣವಾಕ್ಯ ಇದೆಯಲ್ಲ, ಅದು ಶ್ರೀದೇವಿಗೆ ಇನ್ನಿಲ್ಲದಷ್ಟು ಒಪ್ಪುವಂಥದು. ಈ ಮಟ್ಟಿಗೆ ಶ್ರೀದೇವಿಗೆ ನಿಜಕ್ಕೂ ಎತ್ತರದ ಪಟ್ಟ ಕಟ್ಟಬೇಕು. ಶ್ರೀದೇವಿಯಾಗಿರೋ ಹೊತ್ತಿಗೆ ಶಾಮಣ್ಣನವರ ಬದುಕೂ ಆದರ್ಶಗಳೂ ಹೋರಾಟಗಳೂ ತಿರುಗಾಟಗಳೂ ಆದಷ್ಟೂ ಕಡಿಮೆ ಘರ್ಷಣೆಗಳಲ್ಲಿ ಅರ್ಥಪೂರ್ಣವಾಗಿ ನಡೆದು ಬಂದವು – ಅಂತ ಪರಸ್ಪರ ಮೆಚ್ಚಿ ಮದುವೆಯಾದ ಅವರಿಬ್ಬರನ್ನೂ ಕಂಡವರಿಗೆ ಅನಿಸಿಯೇ ಅನಿಸುವುದು. ಮೆಚ್ಚಿಗೆ ಸವೆಯದಂತೆ ಬದುಕಿನ ಹಾದಿಯುದ್ದಕ್ಕೂ ಕಾಪಾಡಿಕೊಂಡು ಬಂದ ಅನುರೂಪ ದಂಪತಿಗಳು ಶಾಮಣ್ಣ ಮತ್ತು ಶ್ರೀದೇವಿ.

ಮಗಳ ಉಡುಪಿಯಲ್ಲಿನ ಶಿಕ್ಷಣ ಮುಗಿಯುತ್ತಲೂ ಅವರು ಬಂದು ಹೋಗುತಿದ್ದ ದಿನಗಳು ನಿಧಾನವಾಗಿ ಕಡಿಮೆಯಾದವು. ಆಗೀಗ ಫೋನ್ ಅಥವಾ ಕಾರ್ಡಿನಲ್ಲಿ ಪತ್ರಗಳು ನಡೆಯುತ್ತ ಅವೂ ಕ್ರಮೇಣ ಕಡಿಮೆಯಾದವು. ಬದುಕು ಮುಂದರಿದಿತ್ತು. ಸಂಸಾರದ ಹೊಣೆಗಳ ದಾರಿಯಲ್ಲಿ ನಾವು ನಾವು ಸಾಗುತ್ತ ಒಳಮುಖಿಗಳಾಗಿದ್ದೆವು. ಹಾಗೆಂತ ಮರೆತೆವೆ? ಇಲ್ಲ. ಇವತ್ತಿಗೂ ಶ್ರೀದೇವಿ 'ಆ ದಿನಗಳೆಲ್ಲ ಎಷ್ಟು ಚೆನ್ನಾಗಿದ್ದು ಅಲ್ಲೇನ್ರೀ?' ಎಂದರೆ ಪ್ರತಿಯಾಗಿ ಹೊರಡುವ ನಮ್ಮ ಉತ್ತರವೂ ಅದುವೇ. ನಿಜ, ಆ ದಿನಗಳು ಉರುಳಿ ಹೋದವು, ಮರಳಿ ಬಾರವು. ಆದರೆ ಈಗಲೂ ಭೇಟಿಯಾದೆವೆಂದರೆ ನಾವು ದಿನನಿತ್ಯ ಭೇಟಿ ಮಾಡಿ ಮಾತುಕತೆ ಆಡುತಿರುವಂತೆಯೇ ಆ ದಿನಗಳಲ್ಲಿ ಇದ್ದಂತೆಯೇ ಆಪ್ತತೆಯಲ್ಲಿ ಬೆರೆಯುವೆವು.

ಶಾಮಣ್ಣನವರ ಮುಗ್ಧತೆ (ಅದು ಅಮಾಯಕತೆ ಅಲ್ಲ), ಸಾವಧಾನತೆ, ತಾಳ್ಮೆ, ಪ್ರಸನ್ನಚಿತ್ತತೆ, ಋಜುತ್ವ, ಈ ಯುಗದ್ದಲ್ಲ, ಯಾವುದೋ ಪುಣ್ಯ ಯುಗದಲ್ಲಿ ಕಾಣುವಂಥದು. ಅದು, ಈ ಯುಗದಲ್ಲಿ ನಮಗೆ ಶಾಮಣ್ಣ ಎಂಬ ವ್ಯಕ್ತಿತ್ವದಲ್ಲಿ ಒಂದು ಮಾದರಿಯಾಗಿ ದೊರೆತಿದೆ ಎಂದೇ ಯಾವತ್ತೂ ನನಗೆ ಖಡಾಖಂಡಿತವಾಗಿ ಅನಿಸುವುದು.

ರಸಿಕ ಗೆಳೆಯ ಕಡಿದಾಳ್ ಶಾಮಣ್ಣನವರು

ಸಿ. ಪ್ರೇಮಾನಂದ

ಶ್ರೀ ಕಡಿದಾಳ್ ಶಾಮಣ್ಣನವರು ನನ್ನ ಆತ್ಮೀಯ ಗೆಳೆಯರಲ್ಲೊಬ್ಬರು. ಅವರನ್ನು ೫೦ರ ದಶಕದಿಂದಲೂ ಬಲ್ಲೆ. ಆಗ ಉದ್ದನೆಯ ಕರಿಯ ಗಡ್ಡ, ಬಿಳಿ ಜುಬ್ಬ, ಬಿಳಿ ಪೈಜಾಮ. ಈಗ ಅದೇ ಪೋಷಾಕು ಹೆಗಲ ಮೇಲೆ ಹಸಿರು ಟವೆಲ್ ಆದರೆ ಬಿಳಿಯ ಗಡ್ಡ ವೈಚಾರಿಕತೆ, ಅನುಭವದ ಪ್ರತೀಕ. ಶಾಮಣ್ಣನವರದು ಸರಳ, ನಿಷ್ಕಪಟ ವ್ಯಕ್ತಿತ್ವ. ಯಾವಾಗಲೂ ಹಸನ್ಮುಖಿ ಜೀವನ ಪರ್ಯಂತ ತಮ್ಮ ತತ್ವ ನಿಲುವುಗಳಿಗೆ ಬದ್ಧರಾಗಿರುವ ಜನಾನುರಾಗಿ.

ವಿದ್ಯಾರ್ಥಿ ಜೀವನ ಅತ್ಯಂತ ಸರಳವಾದುದು. ಸಾಮಾನ್ಯ ಮೆಸ್ಸುಗಳಲ್ಲಿ ಊಟ ಅಧ್ಯಯನ. ಅವರ ಬಳಿ ಒಂದು ಹಳೆಯ ಮೋಟಾರ್ ಸೈಕಲ್ ಇತ್ತು. ಶಬ್ದ ಮಾಲಿನ್ಯಕ್ಕೆ ಪ್ರಸಿದ್ಧ. ದೂರದಿಂದಲೇ ಅವರ ಆಗಮನದ ಡಂಗುರ, ಕ್ಲಚ್ ಬ್ರೇಕ್ ಎಂದೂ ಸರಿ ಇರುತ್ತಿರಲಿಲ್ಲ. ಆ ವಾಹನದ ಮೇಲೆ ಅವರ ನಿಯಂತ್ರಣ ಅಪಾರ. ಸಾಕಿದ ಕುದುರೆಯಂತೆ ಅವರ ಒಡೆತನಕ್ಕೆ ಸ್ಮಾರ್ಟ್ ಆಗುತ್ತಿತ್ತು. ಆಗಿನ ಕಾಲಕ್ಕೆ ಒಬ್ಬ ನಿಷ್ಠಾವಂತ ಟ್ರಾಫಿಕ್ ಪೊಲೀಸ್ ಇನ್ಸ್‌ಪೆಕ್ಟರ್‌ರೊಬ್ಬರಿದ್ದರು, ಶ್ರೀ

ಕುಟ್ಟಪ್ಪನವರು. ಯಾರೂ ಆ ಅಧಿಕಾರಿಯ ಕಣ್ಣುತಪ್ಪಿಸಲಾಗುತ್ತಿರಲಿಲ್ಲ. ಆದೇನು ಪ್ರಭಾವ ಬೀರಿದ್ದರೋ ಶಾಮಣ್ಣನವರು ಅವರ ಮೇಲೆ ಭಯಾನಕ ಶಬ್ದದ ಅವರ ಮೋಟಾರ್ ಸೈಕಲ್ ತಪಾಸಣೆಯೇ ಮಾಡದೇ ಹೋಗಿ ಎನ್ನುತ್ತಿದ್ದರು ನಿರುಪದ್ರವಿ ಶಾಮಣ್ಣನವರಿಗೆ. ಅವರ ಹಾಸ್ಯಪ್ರಜ್ಞೆ ಅತಿ ವಿರಳ. ತಡವಾಗಿ ಬಂದಾಗ ಕಾರಣ ಕೇಳಿದ್ದಕ್ಕೆ ತಮ್ಮ ಮೋಟಾರ್ ಸೈಕಲ್ ಗೇರ್ ಬಾಕ್ಸ್ ಮೊಸರಾಗಿ ಬಿಟ್ಟಿದೆ ಶ್ರೀ ಎಂದರು. ನಾವೆಲ್ಲರೂ ಬಿದ್ದು ಬಿದ್ದು ನಕ್ಕೆವು, ಅವರ ಪದ ಪ್ರಯೋಗದ ನಾವೀನ್ಯತೆಗೆ. ದಿವಂಗತ ಕೆ.ಪಿ. ಪೂರ್ಣಚಂದ್ರ ತೇಜಸ್ವಿಯವರು ಶ್ರೀ ಶಾಮಣ್ಣನವರ ಹಾಸ್ಯಪ್ರಜ್ಞೆಯ ಬಗ್ಗೆ ಹೀಗೆ ವರ್ಣಿಸಿದ್ದಾರೆ. "ಶಾಮಣ್ಣನವರ ಪ್ರಭಾವದಿಂದ ತಮಾಷೆ, ವಿನೋದ ಹಾಸ್ಯಗಳು ನನ್ನ ವ್ಯಕ್ತಿತ್ವದ ಅವಿಭಾಜ್ಯ ಅಂಗಗಳಾಗಿ ಹೋದವು..... ಕತೆ ಕಾದಂಬರಿಗಳ ಪಾತ್ರಗಳೆಲ್ಲ ಪರಸ್ಪರ ಹಾಸ್ಯ ಮಾಡುವುದಲ್ಲದೆ ತಮ್ಮನ್ನು ತಾವೇ ವಿಡಂಬನೆ ಮಾಡುವುದರಿಂದ ಓದುಗರ ದೃಷ್ಟಿಯಲ್ಲಿ ಹಾಸ್ಯಾಸ್ಪದವಾಗುವ ಸಂಭವ ಕಡಿಮೆ ಯಾಯ್ತು.

ಶಾಮಣ್ಣನವರ ಆಪ್ತಮಿತ್ರರೆಲ್ಲರೂ ಪ್ರತಿಭಾವಂತರು ಹಾಗೂ ವಿಚಾರವಂತರು. ಮೌಢ್ಯ ಆಚರಣೆ ಅನುಕರಣೆಗಳ ವಿರೋಧಿಗಳು. ಅವರು ಜೀವನದುದ್ದಕ್ಕೂ ತಮ್ಮ ಮೆಚ್ಚಿನ ಗೆಳೆಯರ ಸಂಪರ್ಕವನ್ನು ಹೊಂದಿದ್ದು ಅವರ ಅಪಾರ ವಿಶ್ವಾಸವನ್ನು ಗೆದ್ದಿರುತ್ತಾರೆ. ಪೂರ್ಣ ಚಂದ್ರ ತೇಜಸ್ವಿ ಅವರೊಡನೆ ಒಡನಾಟ ಪ್ರಭಾವ ಅತ್ಯಂತ ಹಿರಿದಾದುದ್ದು. ಆಪ್ತಮಿತ್ರರುಗಳ, ಹಿರಿಯರ ಒಡನಾಟವೇ ಅವರ ಆತ್ಮಬಲ.

ಯೌವ್ವನದಲ್ಲಿ ಪೋಟೋಗ್ರಫಿ ಸಂಗೀತ ಇವುಗಳಲ್ಲಿ ಅಪಾರವಾದ ಆಸಕ್ತಿ ಹಾಗೂ ಆ ಕ್ಷೇತ್ರಗಳಲ್ಲಿ ಪ್ರೌಢಿಮೆ ಗಳಿಸಲು ಅನನ್ಯ ಪರಿಶ್ರಮ. ಚಿಕ್ಕಂದಿನಲ್ಲಿ ಉತ್ತರಾದಿ ದಕ್ಷಿಣಾದಿ ಸಂಗೀತವೆಂಬ ತಾರತಮ್ಯ ಮಾಡದೆ ಉತ್ತಮ ದರ್ಜೆಯ ಅನುಪಮ ಸಂಗೀತವನ್ನು ಮೆಚ್ಚುತ್ತಿದ್ದರು. ರಾಷ್ಟ್ರದ ಹಿರಿಯ ಸಂಗೀತಕಾರರಲ್ಲನೇಕರು ಶಾಮಣ್ಣನವರನ್ನು ಬಲ್ಲರು. ಅವರ ಮೆಚ್ಚಿನ ವಾದ್ಯ ಸರೋದ್. ಅದರ ಇಂಪಾದ, ಗಂಭೀರ ಸ್ವರವನ್ನು ಮೆಚ್ಚದವರಿಲ್ಲ. ರಾಷ್ಟ್ರದ ಅತಿ ಶ್ರೇಷ್ಠ ಸರೋದ್ ವಾದಕ ತಪಸ್ವಿಯವರಾದ ಆಲಿ ಅಕ್ಬರ್ ಖಾನ್‌ರ ಶಿಷ್ಯತ್ವ ಲಭಿಸಿದುದೇ ಅವರ ಸಂಗೀತ ಜ್ಞಾನಕ್ಕೆ ಸಾಕ್ಷಿ. ಕೆಲವು ಕಾಲ ಆಲಿ ಅಕ್ಬರ್ ಖಾನ್ ದಂಪತಿಗಳ ಮೆಚ್ಚಿನ ಶಿಷ್ಯನಾಗಿ ಬೊಂಬಾಯಿಯಲ್ಲಿ ಕಳೆದರು ಹಾಗೂ ಸಂಗೀತ ಜ್ಞಾನವನ್ನು ವೃದ್ಧಿಗಳಿಸಿಕೊಂಡರು. ಮೈಸೂರಿನಲ್ಲಿ ಅನೇಕ ಸಂಗೀತ ಸಭೆಗಳನ್ನು ಏರ್ಪಡಿಸಿ ಸಂಗೀತಾಭಿಮಾನಿಗಳಿಗೆ ಹಿರಿಯ ಸಂಗೀತಗಾರರ ವಾದ್ಯಕಾರರ ಸಂಗೀತ ರಸದೌತಣವನ್ನು ಉಣಿಸಿದರು.

ಶ್ರೀ ಶಾಮಣ್ಣನವರು ಸಮಾಜವಾದಿ ಹಿರಿಯ ನಾಯಕರುಗಳ ಒಡನಾಟ, ಪ್ರೇರಣೆಯಿಂದ ಪ್ರಭಾವಿತರಾಗಿ ರಾಷ್ಟ್ರದ ಬೆನ್ನೆಲುಬಾದ ರೈತರ ಸಂಘಟನೆ, ಅವರ

ಸಮಸ್ಯೆಗಳ ಪರಿಹಾರಕ್ಕೆ ತಮ್ಮನ್ನು ತೊಡಗಿಸಿಕೊಂಡದ್ದೇ ಒಂದು ಚರಿತ್ರೆ. ರೈತರ ಸಮಸ್ಯೆಗಳ ಪರಿಹಾರಕ್ಕೆ ಇಂದೂ ಅವಿರತವಾಗಿ ಶ್ರಮಿಸುತ್ತಿದ್ದಾರೆ. ಸುಮಾರು ೫೦ ವರ್ಷಗಳಿಗೂ ಮಿಗಿಲಾಗಿ ಆ ಕ್ಷೇತ್ರದಲ್ಲಿ ತೊಡಗಿಸಿಕೊಂಡಿದ್ದರೂ ಅವರ ಅಮೂಲ್ಯ ಅನುಭವ ಅನಿಸಿಕೆಗಳನ್ನು ದಾಖಲಿಸಬಾರದಿತ್ತೇ ಎಂದು ಜನತೆಗೆ ಅನಿಸಿದಾಗ ರೈತರ ಸಮಸ್ಯೆಗಳು, ರೈತರ ಸಂಘಟನೆ, ಹೋರಾಟದ ಬಗ್ಗೆ ಅವರು ಬರೆದಿರುವ ಎಂಬತ್ತರ ದಶಕದ ಬರಹ ಮತ್ತು ಪತ್ರಗಳ ಪ್ರಕಟಣೆ 'ಆ ದಶಕ' ಜನತೆಗೆ ತೃಪ್ತಿ ತಂದಿತು. ಆ ಸಂಗ್ರಹವು ಅವರ ನಿಲುವು ಅಭಿಪ್ರಾಯಗಳನ್ನು ಮಂಡಿಸುವಲ್ಲಿ ಅರ್ಥಪೂರ್ಣವಾಗಿ ಮೂಡಿಬಂದಿದೆ. ರೈತರ ಹೋರಾಟಕ್ಕೆ ಅವರ ಕೊಡುಗೆ ಅಪಾರ, ಅನನ್ಯ. ಕ್ರಾಂತಿಕಾರಿ ನಿರಂತರ ಪ್ರತಿಭಟನೆಗೆ ಅವರೇ ರೂವಾರಿ. ರೈತಸಂಘದ ಹಿರಿಯ ನಾಯಕರುಗಳನ್ನು ತಮ್ಮ ನಿಷ್ಠಾವಂತ ನಿಲುವುಗಳಿಂದ ಎದುರು ಹಾಕಿಕೊಂಡು ರೈತಸಂಘದ ರಾಜ್ಯಸಮಿತಿಯಿಂದ ಉಚ್ಚಾಟನೆಗೊಂಡಿದ್ದೂ ಒಂದು ವಿಪರ್ಯಾಸ. ರೈತರ ಪರವಾಗಿ ಹೋರಾಟ ಪ್ರತಿಭಟನೆಗಳಲ್ಲಿ ತೊಡಗಿಸಿಕೊಂಡು ಅವರಿಗೆ ಜೈಲುವಾಸವೂ ಅನಿವಾರ್ಯವಾಯಿತು.

ಬಹಳ ವರ್ಷಗಳ ನಂತರ ಅಂದರೆ ಜೂನ್ ೧೯೯೬ರಲ್ಲಿ ಶ್ರೀ ಜೆ.ಹೆಚ್.ಪಟೇಲ್ ಮುಖ್ಯಮಂತ್ರಿಗಳಾಗಿ ಅಧಿಕಾರ ಸ್ವೀಕಾರ ಮಾಡಿದ ಸಂದರ್ಭದಲ್ಲಿ ಶಾಮಣ್ಣನವರನ್ನು ನಾನು ಕಂಡೆ. ಅದೇ ಅವಧಿಯಲ್ಲಿ ರಾಜ್ಯಕ್ಕೆ ಸೇವೆ ಸಲ್ಲಿಸಿದ ಹಿರಿಯರನ್ನು ಸನ್ಮಾನಿಸಲು ತೀರ್ಮಾನಿಸಿ ಆಯ್ಕೆಯ ಪಟ್ಟಿಯನ್ನು ಸರ್ಕಾರ ಬಿಡುಗಡೆ ಮಾಡಿತ್ತು. ಆ ಪೈಕಿ ಸಮಾಜ ಸೇವೆಗೆ ಶ್ರೀ ಕಡಿದಾಳ್ ಶಾಮಣ್ಣನವರ ಹೆಸರು ಅತ್ಯಂತ ಯುಕ್ತವಾಗಿ ಪ್ರಕಟವಾಯ್ತು. ಬೆಂಗಳೂರಿನಲ್ಲಿ ತಮ್ಮ ಮೆಚ್ಚಿನ ಸಮಾಜವಾದಿ ಧುರೀಣರಾದ ಶ್ರೀ ಜೆ.ಹೆಚ್ ಪಟೇಲ್ ನೇತೃತ್ವದ ಸರ್ಕಾರದ ಅಭಿನಂದನೆಗೂ ಮಿಗಿಲಾಗಿ ತಮ್ಮ ಹೆಸರನ್ನು ಸನ್ಮಾನಿತರ ಪಟ್ಟಿಯಿಂದ ಕೈಬಿಡುವಂತೆ ಒತ್ತಾಯಿಸಿ ಯಶಸ್ವಿಯಾದರು! ತಮಗೆ ಅರ್ಹತೆ ಆಧಾರದ ಮೇಲೆ ಸಲ್ಲಬೇಕಿದ್ದ ಗೌರವವನ್ನೂ ತಿರಸ್ಕರಿಸಿದ ಗೌರವಾನ್ವಿತ ವ್ಯಕ್ತಿ ಶ್ರೀ ಶಾಮಣ್ಣ.

ಸುಮಾರು ಐದು ದಶಕಗಳ ಹಿಂದೆ ಅವರ ತಂದೆಯವರು ಅವರಿಗೆ ಭಗವತಿಕೆರೆಯಲ್ಲಿ ಕೊಂಡುಕೊಟ್ಟ ಜಮೀನಿನಲ್ಲಿಯೇ ಇಂದು ಕ್ರಿಯಾಶೀಲ ರೈತರಾಗಿ ಅಡಿಕೆ ಬೆಳೆ ಅಭಿವೃದ್ಧಿಗೊಳಿಸಿ ತಮ್ಮ ಧರ್ಮಪತ್ನಿ ಶ್ರೀಮತಿ ಶ್ರೀದೇವಿಯವರೊಡನೆ ಸಂತೃಪ್ತ ಜೀವನ ನಡೆಸುತ್ತಿದ್ದಾರೆ. ಅವರ ಧರ್ಮಪತ್ನಿಯವರಾದರೋ ರೈತ ಸಮಸ್ಯೆಗಳ ಹೋರಾಟದಲ್ಲಿ ಎಲ್ಲ ಕಾಲದಲ್ಲಿಯೂ ನಿರತರಾಗಿದ್ದು ಮನೆಯಲ್ಲಿ ಶಾಮಣ್ಣನವರು ಕಾಣಸಿಗದಿದ್ದಾಗ ಗೃಹಕೃತ್ಯದ ಕೃಷಿಕ ಹೊಣೆಗಾರಿಕೆಗಳನ್ನು ಸಮರ್ಥವಾಗಿ ನಿಭಾಯಿಸುತ್ತಿರುವ ಸದ್ಗೃಹಿಣಿಯಾಗಿದ್ದಾರೆ. ಶ್ರೀ ಶಾಮಣ್ಣ ದಂಪತಿಗಳಿಗೆ ರೈತಸಮುದಾಯದ ಅಭಿಮಾನಿಗಳ ನಮನ.

ಶಾಮಣ್ಣ, ತೇಜಸ್ವಿ ನನಗೆ ಒಳ್ಳೆ ಫ್ರೆಂಡ್ಸ್

ಸೈಯದ್ ಅಬ್ದುಲ್ ಖಾಜಿ

ನಮ್ಮದು ಪಂಪನ ಬನವಾಸಿಯ ನಾಡು, ನಮ್ಮ ತಂದೆ ಆಯುರ್ವೇದ ಪಂಡಿತರು. ಅವರಿಗೆ ನಾವು ಹತ್ತು ಜನ ಗಂಡು ಮಕ್ಕಳು ಮತ್ತು ನಾಲ್ಕು ಜನ ಹೆಣ್ಣು ಮಕ್ಕಳು. ನಮ್ಮ ಮನೆಯಲ್ಲಿ ಮೊದಲು ಕಾಲೇಜಿಗೆ ಹೋದವನು ನಾನೆ. ಸಿರ್ಸಿ ಮಾರಿಕಾಂಬ ಹೈಸ್ಕೂಲಲ್ಲಿ ಓದುವಾಗೆ, ಅಲ್ಲಿ ಗಿರೀಶ್ ಕಾರ್ನಾಡ್ ಕೂಡ ಓದುತ್ತಿದ್ದರು. ಅವರ ತಂದೆಯವರು ಒಳ್ಳೆ ವೈದ್ಯರಾಗಿ ಹೆಸರು ಮಾಡಿದ್ದರು. ಎಸ್.ಎಸ್.ಎಲ್.ಸಿ ಆದ ನಂತರ ಮುಂದೆ ಓದಲು ಕಾಲೇಜಿಗೆ ಹೋಗಬೇಕಿತ್ತು. ಕಾರವಾರಕ್ಕೆ ಹೋಗುವುದರ ಬದಲು ನಾನು ಶಿವಮೊಗ್ಗಕ್ಕೆ ಬಂದೆ. ಆಗ ಶಿವಮೊಗ್ಗದ ಸರ್ಕಾರಿ ಕಾಲೇಜಿನಲ್ಲಿ ತಿಂಗಳಿಗೆ ೯ ರೂಪಾಯಿ ಫೀಜು ತೆಗೆದುಕೊಳ್ಳುತ್ತಿದ್ದರು. ಶಿವಮೊಗ್ಗದಲ್ಲಿ ಮುಸ್ಲಿಂ ಹಾಸ್ಟಲಿಗೆ ಸೇರಿದೆ. ಊಟದ ಜೊತೆಗೆ ತಣ್ಣೀರಿನ ಸ್ನಾನದ ವ್ಯವಸ್ಥೆಯಿತ್ತು. ತಿಂಗಳಿಗೆ ನಾಲ್ಕು ರೂಪಾಯಿ ಫೀಜು. ಈ ಹಾಸ್ಟಲಿನ ಎದುರೆ ಪೂರ್ಣಚಂದ್ರ ತೇಜಸ್ವಿಯವರ ಸೋದರಮಾವ ರತ್ನಾಕರ್ ಮನೆಯಿತ್ತು. ನನಗೆ ತೇಜಸ್ವಿ

ಪರಿಚಯವಾದದ್ದು ಅಲ್ಲಿಯೇ. ಅವರ ಮುಖಾಂತರ ನನಗೆ ಶಾಮಣ್ಣನ ಪರಿಚಯ ವಾಯ್ತು. ಆಗ ಕಾಲೇಜಿನಲ್ಲಿ ಉರ್ದು ಮತ್ತು ಪರ್ಷಿಯನ್ ಭಾಷೆ ಇದ್ದರೂ, ಕನ್ನಡ ತಗೊಂಡೆ. ಈ ಕನ್ನಡ ತೆಗೆದುಕೊಂಡ ಕಾರಣಕ್ಕೆ, ನನಗೆ ತೇಜಸ್ವಿ, ಶಾಮಣ್ಣ ಸಿಕ್ಕರು. ಇವರಲ್ಲದೆ ಶಿವಮೊಗ್ಗ ಸುಬ್ಬಣ್ಣ, ಮೇಗರವಳ್ಳಿ ರಂಗಪ್ಪ ಗೆಳೆಯರಾದರು. ಈ ವಿದ್ಯಾರ್ಥಿಗಳೆಲ್ಲಾ ಬೇರೆ ವಿದ್ಯಾರ್ಥಿಗಳಂತಿರದೆ ವಿಶೇಷವಾಗಿದ್ದರು. ಇವರು ಪಾಠಪ್ರವಚನಗಳಿಗೆ ನೆಪಕ್ಕೆ ಹಾಜರಾಗುತ್ತಿದ್ದರು. ಉಳಿದ ಚೇಷ್ಟೆಗಳು ಹೇರಳ ವಾಗಿದ್ದವು. ತುಂಗಾ ನದಿಗೆ ಹೋಗಿ ಮೀನು ಹಿಡಿಯುತ್ತಿದ್ದೆವು. ಇವರ ಜೊತೆ ಸೇರಿ ನಾನೂ ಅವರಂತೆ ಆದೆ. ಜಿ.ಎಸ್. ಶಿವರುದ್ರಪ್ಪನವರು ನಮಗೆ ಕನ್ನಡ ತೆಗೆದುಕೊಳ್ಳುತ್ತಿದ್ದರೆ, ಅನಂತಮೂರ್ತಿಯವರು ಇಂಗ್ಲೀಷ್ ತೆಗೆದುಕೊಳ್ಳುತ್ತಿದ್ದರು. ಇಂಟರ್‌ಮೀಡಿಯೆಟ್ ನಂತರ ನಾನು ಊರಿಗೆ ಹೋಗ್ತೀನಿ ಅಂದೆ. ಅಷ್ಟರಲ್ಲಿ ನಾನು, ಶಾಮಣ್ಣ, ತೇಜಸ್ವಿ ಆತ್ಮೀಯ ಗೆಳೆಯರಾಗಿದ್ದೆವು. ನಾನು ಊರಿಗೆ ಹೋದರೆ ಮತ್ತೆ ಸಿಗುವುದಿಲ್ಲ ಎಂದು ಭಾವಿಸಿದ ತೇಜಸ್ವಿ, ಮೈಸೂರಿಗೆ ಬಂದು ಬಿಡು ಮಹಾರಾಜಾ ಕಾಲೇಜಿನಲ್ಲಿ ವ್ಯವಸ್ಥೆ ಮಾಡುತ್ತೇನೆ ಎಂದರು.

ಆಗ ಶಿವಮೊಗ್ಗದಿಂದ ಮೈಸೂರಿಗೆ ೦೫-೦೦ರೂಪಾಯಿ ಬಸ್ ಚಾರ್ಜ್. ನಾನು ಮೈಸೂರಿಗೆ ಹೋಗಿ ತೇಜಸ್ವಿ ಹೇಳಿದ್ದ ಜಾಗದಲ್ಲಿ ನಿಂತುಕೊಂಡೆ. ಆದರೆ ತೇಜಸ್ವಿಯ ಸುಳಿವಿಲ್ಲ. ಗುರುತು ಪರಿಚಯವಿಲ್ಲದ ಊರಿನಲ್ಲಿ ಹುಚ್ಚನಂತಾದೆ. ಆದರೂ ಕುವೆಂಪು ಮನೆಗೆ ಹೋಗಬೇಕೆಂದು ಅಲ್ಲಿ ಇಲ್ಲಿ ಕೇಳಿದೆ ಮತ್ತು ಫೋನ್ ನಂಬರ್ ಕೊಟ್ಟೆ. ಫೋನಿಗೆ ತೇಜಸ್ವಿ ಸಿಕ್ಕಿದರು. "ಖಾಜಿ ಅಲ್ಲೇ ಇರು ಬರ್ತಿನಿ ಎಂದವರು, ತಮ್ಮ ತಂದೆಯವರ ಹೊಸ ಕಾರನ್ನೇ ತಂದರು, ೯ ಗಂಟೆಗೆ ಚಾಮರಾಜಪೇಟೆಲಿದ್ದ ಶಾಮಣ್ಣನವರ ರೂಮಿಗೆ ಸೇರಿಸಿದ್ರು. ಆ ನಂತರ ಕುವೆಂಪುರವರಿಗೆ ಹೇಳಿ ಒಂದು ರೂಮಿನ ವ್ಯವಸ್ಥೆ ಮಾಡಿದರು. ನಾನು ಬಿ.ಎ ಸೇರಿದೆ. ಶಿವಮೊಗ್ಗದ ನಮ್ಮ ಎಲ್ಲಾ ಚಟುವಟಿಕೆ ಮೈಸೂರಿನಲ್ಲೂ ನಿರಾತಂಕವಾಗಿ ಮುಂದುವರಿದವು. ಆಗ ಸಿ.ಡಿ. ನರಸಿಂಹಯ್ಯನವರು ಪ್ರಿನ್ಸಿಪಾಲರಾಗಿದ್ದರು. ಹಾಸ್ಟಲಿನ ವಾರ್ಡ್‌ನ್ ಅವರೆ. ಹೆಲ್ತ್ ಕಿಚನ್ ಸೆಂಟರ್ ನೋಡಿಕೊಳ್ಳುತ್ತಿದ್ದವರು, ಶಾಮಣ್ಣನವರು. ತಿಂಗಳಿಗೆ ೧೮-೦೦ರೂಪಾಯಿ ಕೊಟ್ಟರೆ ಬೆಳಿಗ್ಗೆ ಮತ್ತು ಸಂಜೆ ಒಳ್ಳೆಯ ಊಟ ಸಿಗುತ್ತಿತ್ತು. ಶಾಮಣ್ಣ ಸೈಕಲ್ಲಿನ ಹಿಂಭಾಗದಲ್ಲಿ ನನ್ನನ್ನು ಕೂರಿಸಿಕೊಂಡು ತಿರುಗುತಿದ್ರು, ವಿದ್ಯಾರಣ್ಯಪುರದಲ್ಲಿ ಹೋಟೆಲಿನಲ್ಲಿ ಊಟಮಾಡಿಸಿ, ಬಿಲ್ಲನ್ನು ಅವರೇ ಕೊಡುತ್ತಿದ್ದರು. ಚಾಮುಂಡಿ ಬೆಟ್ಟವನ್ನು ಹತ್ತಿ ಇಳಿಯುತ್ತಿದ್ದೆವು. ಸಾವಿರ ಮೆಟ್ಟಲನ್ನು ಎಣಿಸಿಕೊಂಡು ಹತ್ತುತ್ತಿದ್ದೆವು. ಆಗಲೂ ತೇಜಸ್ವಿ ಬೇಟೆಗೆ ಕರೆದುಕೊಂಡು ಹೋಗುತ್ತಿದ್ದರು. ಆಗ ತೇಜಸ್ವಿ ಬಳಿ ೫.೩ ರೈಫೆಲ್ ಇತ್ತು. ಅವರ ಮನೆಯ ಪಕ್ಕ ಇದ್ದ ಹಳೆ ಮನೆಗೆ ಗುರಿ

ಇಟ್ಟು ಹೊಡೆದು ಗುರಿ ಕಲಿಯುತ್ತಿದ್ದರು. ಒಮ್ಮೆ ಶಿಕಾರಿಗೆ ಹೋದಾಗ ಯಾವ ಶಿಕಾರಿಯೂ ಸಿಗಲಿಲ್ಲ. ಕಡೆಗೆ ಊರ ಕೋಳಿಗೆ ಗುರಿಯಿಟ್ಟು ಹೊಡೆದರು, ಇದನ್ನು ನೋಡಿದ ಜನ ಓಡಿಬಂದರು ಕೂಡಲೇ ನಾವು ಪರಾರಿಯಾದೆವು. ಆಗ ನಾವು ಕಾಲೇಜಿನಲ್ಲಿ ಕಲಿತದ್ದಕ್ಕಿಂತ ಹೊರಗಡೆ ಕಲಿತದ್ದೇ ಹೆಚ್ಚು. ತೇಜಸ್ವಿ ಹಲೀಂ ಜಾಫರ್‌ರಿಂದ ಸಿತಾರ್ ಕಲಿಯುತ್ತಿದ್ದರೆ, ಶಾಮಣ್ಣ ಸರೋದ್ ಕಲಿಯುತ್ತಿದ್ದರು. ಅಷ್ಟೇ ಅಲ್ಲ, ಅವರ ದಂತ ವಾದ್ಯ ಆಗ ತುಂಬ ಹೆಸರು ಮಾಡಿತ್ತು. ಆಗಿನ ಯಾವುದೇ ಸಾಹಸದಲ್ಲಿ ನಾನು, ತೇಜಸ್ವಿ, ಶಾಮಣ್ಣ ಜೊತೆಯಿರುತ್ತಿದ್ದೆವು.

ಬಿ.ಎ. ಮುಗಿದ ನಂತರ, ಊರಿಗೆ ಹೋದೆ. ನಮ್ಮ ಮನೆಯವರು ಯಾವುದಾದರೂ ಕೆಲಸಕ್ಕೆ ಸೇರು ಅಂದರು. ನಾನು ಗುಮಾಸ್ತನಾಗಲು ತಯಾರಿಲ್ಲ. ಗೆಜೆಟೆಡ್ ಹುದ್ದೆಯೇ ಬೇಕೆಂದೆ. ನಾನು ಮೈಸೂರು ಬಿಟ್ಟ ನಂತರ ತೇಜಸ್ವಿ, ಶಾಮಣ್ಣನವರ ಸಂಬಂಧ ಫೋನಿನಲ್ಲಿ ಮಾತನಾಡುವ ಸಂಬಂಧವಾಗುಳಿಯಿತು. ಈ ಪೈಕಿ "ಏನೋ ಬೋಳಿಮಗನೆ" ಎಂದು ಮಾತನಾಡಿಸುವ ಸಲುಗೆ ಶಿವಮೊಗ್ಗ ಸುಬ್ಬಣ್ಣ ಮತ್ತು ನನ್ನಲ್ಲಿ ಮಾತ್ರ ಉಳಿಯಿತು. ತೇಜಸ್ವಿ, ಶಾಮಣ್ಣನ ಜೊತೆ ಆ ಸಲುಗೆ ಬರದಿದ್ದರೂ ಇವರು ಬಹಳ ಅಪರೂಪದ ಗೆಳೆಯರಾಗಿದ್ದರು. ಇವರಲ್ಲಿ ಜಾತಿಪಾತಿಗಳ ವಿಷಯವೇ ಇರಲಿಲ್ಲ. ಅಷ್ಟು ಸ್ವಚ್ಛ ಮನಸ್ಸಿನವರಾಗಿದ್ದರು. ನಾನು ಮದುವೆ, ಮನೆ ಸಂಸಾರದ ಕಡೆ ತಲೆಕೆಡಿಸಿಕೊಳ್ಳದೆ ಬದುಕುವಂತಾದದ್ದು ಈ ಗೆಳೆಯರ ಸಹವಾಸದಿಂದಲೆ. ಆದರೇನು ನನ್ನ ೩೩ನೇ ವಯಸ್ಸಿನಲ್ಲಿ ಮದುವೆಯಾಗುವಂತಹ ಅನಿವಾರ್ಯತೆ ಬಂದೊದಗಿತು. ಲೀಗಲ್ ಅಡ್ವೈಸರ್ ಆಗಿದ್ದ ನಾನು ೩೫ ರೂಪಾಯಿ ಮನೆ ಬಾಡಿಗೆ ಕೊಡುತ್ತ, ಶೇಷಾದ್ರಿ ಪುರಂನಲ್ಲಿದ್ದು, ನಾನು ಮದುವೆ ಯೋಚನೆ ಬಿಟ್ಟಿದ್ದೆ.

ನನ್ನ ಹೆಂಡತಿಯಾಗುವವಳ ತಂದೆಗೆ, ಮೂರು ಜನ ಗಂಡು ಮಕ್ಕಳು, ಒಬ್ಬಳೆ ಹೆಣ್ಣು ಮಗಳು, ಅವಳ ಮದುವೆಯಾಗದ ಹೊರತು ನಾನು ಸಾಯುವುದಿಲ್ಲ ಎಂದು ಹಟ ಹಿಡಿದಿದ್ದರು. ಈ ಸಂಗತಿ ನನ್ನ ಮನಸ್ಸನ್ನು ಬದಲಿಸಿತು. ಕನ್ನಡಿ ಮುಂದೆ ನಿಂತು ನನ್ನನ್ನೆ ನೋಡಿಕೊಂಡು, ಈ ವಯಸ್ಸಿನಲ್ಲಿ ನೀನು ಮದುವೆಯಾಗುತ್ತೀಯಾ ಎಂದು ಪ್ರಶ್ನಿಸಿಕೊಂಡೆ. ಮದುವೆಯಾದ ವರ್ಷಕ್ಕೆ ನನ್ನ ಮಗ ಹುಟ್ಟಿದ. ಆಗ ಸೀನಿಯರ್ ವಕೀಲರೆಲ್ಲಾ "ಏನೊ ಖಾಜಿ, ಜಪಾನ್ ಮಾದರಿ ಕೃಷಿ ಮಾಡಿ ಬೆಳೆ ತೆಗೆದಿದ್ದಿ ಬಿಡು" ಎಂದು ತಮಾಷೆ ಮಾಡಿದರು. ಆನಂತರ ಮಗಳು ಹುಟ್ಟಿದಳು. ನನ್ನ ಮಗ ಹುಟ್ಟಿದ ಸುದ್ದಿ ಕೇಳಿ ನನ್ನ ಹೆಂಡತಿಯ ತಂದೆ ತೀರಿಕೊಂಡರು. ಇದು ನನ್ನ ಖಾಸಗಿ ವಿಷಯವಾದರೆ, ನನ್ನ ಬದುಕಿನ ಬಹು ದೊಡ್ಡ ಸಂಪಾದನೆ ಎಂದರೆ ಶಾಮಣ್ಣ, ತೇಜಸ್ವಿ ಒಡನಾಟ. ಎಲ್ಲಾ ಬೇಸಿಗೆ ರಜೆಯಲ್ಲೂ ಮಲೆನಾಡಿನ

ಅವರ ಮನೆಗಳಿಗೆ ಹೋಗಿದ್ದೇನೆ. ಅವರ ನಂಟರುಗಳ ಮನೆಗೆ ಹೋಗಿದ್ದೇನೆ. ಕೊಣಂದೂರು ಲಿಂಗಪ್ಪನ ಜೊತೆಯೂ ತಿರುಗಿದ್ದೇನೆ. ಬಹಳ ಒಳ್ಳೆ ದಿನಗಳವು. ಶಾಮಣ್ಣ – ತೇಜಸ್ವಿ ಒಡನಾಟದಿಂದ ನಾನು ಬದುಕಿನಲ್ಲಿ ನೈತಿಕತೆ ಉಳಿಸಿಕೊಂಡು ಬಂದೆ, ಯಾವುದೇ ಸಂದರ್ಭದಲ್ಲಿ ಲಂಚ ರುಶುವತ್ತು ನನ್ನ ಬಳಿ ಸುಳಿಯದಂತೆ ನೋಡಿಕೊಂಡೆ. ಹಾಗಾಗಿ ಈಗಲೂ ಬಾಡಿಗೆ ಮನೆಯಲ್ಲಿದ್ದೇನೆ. ನನಗೊಂದು ಮೂರುವರೆ ಸಾವಿರ ಪಿಂಚಣಿ ಬರುತ್ತಿದೆ. ಮಕ್ಕಳು ಓದಿ ಅವರ ಕಾಲಮೇಲೆ ನಿಂತುಕೊಂಡಿದ್ದರಿಂದ ನೆಮ್ಮದಿಯಾಗಿದ್ದೇನೆ.

ಸರಳ–ಸಜ್ಜನಿಕೆಯ ಶಾಮಣ್ಣ

ಕೆ.ಟಿ.ಮೋಹನ

ಅನೇಕರು ಅನೇಕ ರೀತಿಯಲ್ಲಿ ಪ್ರಸಿದ್ಧರಾಗುತ್ತಾರೆ, ಮಾನ್ಯರೆನಿಸಿಕೊಳ್ಳುತ್ತಾರೆ. ಅಂತಹ ಕೆಲವು ಮಾನ್ಯರೆನಿಸಿಕೊಂಡವರಲ್ಲಿ ನಮ್ಮ ಶಾಮಣ್ಣನೂ ಒಬ್ಬ. ನಾನು, ಶಾಮಣ್ಣ ಒಂದೇ ಮನೆತನಕ್ಕೆ ಸೇರಿದವರು. ಶಾಮಣ್ಣನ ಮುತ್ತಜ್ಜ ಅಣ್ಣಯ್ಯಗೌಡರು, ನನ್ನ ಮುತ್ತಜ್ಜ ಮಂಜಣ್ಣಗೌಡರು ಅಣ್ಣ–ತಮ್ಮಂದಿರಂತೆ. ಆದರೆ ನಾವೆಂದೂ ದಾಯಾದಿಗಳಂತೆ ನಡೆದುಕೊಂಡಿಲ್ಲ. ಆ ರೀತಿ ಯೋಚಿಸುವ ಪರಿಸ್ಥಿತಿ ಜೀವನದಲ್ಲಿ ಒಮ್ಮೆಯೂ ಬಾರದಂತೆ ನಾವು ನಡೆದುಕೊಂಡಿರುತ್ತೇವೆ. ಈಚೆಗೆ ನಮ್ಮ ನಮ್ಮ ವೃತ್ತಿಯ ಸಲುವಾಗಿ, ನಮ್ಮ ಸಂಪರ್ಕ ಕಡಿಮೆಯಾಗಿದ್ದರೂ ಸಹ, ನಮ್ಮ ಶಾಮಣ್ಣ ನಮ್ಮೊಡನೆ ಇದ್ದಾನೆ ಎಂಬ ಹೆಮ್ಮೆ, ಸಂತೋಷವನ್ನು ನಾನು ಅನುಭವಿಸಿದ್ದೇನೆ.

ಈ ಶಾಮಣ್ಣ, ನಾನು ಚಿಕ್ಕವನಾಗಿದ್ದಾಗಿನಿಂದಲೂ ನನ್ನ ಕೆಲವೇ ಕೆಲವು ಅತ್ಯಂತ ಆತ್ಮೀಯರಲ್ಲಿ ಒಬ್ಬ. ಅವನು–ನಾನು ಬೇರೆ ಬೇರೆ ಮನೆಯವರೆಂದು ನನಗೆಂದೂ ಅನಿಸಿಲ್ಲ. ನಮ್ಮ ಮನೆಯಲ್ಲಿಯೇ ಒಬ್ಬನಾಗಿ

ಕಂಡವನು. ಜೀವನದಲ್ಲಿ ಒಮ್ಮೆಯೂ ನಮ್ಮ ನಡುವೆ ಜಗಳ-ಮನಸ್ತಾಪ ಇತ್ಯಾದಿಗಳಿಗೆ ಅವಕಾಶವೇ ಇಲ್ಲದಂತಹ ಸ್ನೇಹ. ಅಷ್ಟೇಕೆ ಈ ಶಾಮಣ್ಣ ಬಹುಷಃ ಅವನ ತುಂಬು ಜೀವನದಲ್ಲಿ ಒಮ್ಮೆಯೂ ಯಾರೊಂದಿಗೂ ಜಗಳ ಕಾಯದಂತಹ ಮನಸ್ಥಿತಿಯವನು. ಅವನ ಬದುಕು-ವರ್ತನೆ, ಚಿಂತನೆಗಳನ್ನೆಲ್ಲ ತುಂಬ ಹತ್ತಿರದಿಂದ ಕಂಡ ನನಗೆ, ಅವರೆಷ್ಟು ಸಭ್ಯ ಮತ್ತು ಸರಳ ವ್ಯಕ್ತಿ ಎನ್ನುವುದು ಗೊತ್ತು. ದ್ವೇಷ, ಅಸೂಯೆ ಅವನ ಹತ್ತಿರವೂ ಸುಳಿಯುವುದಿಲ್ಲ. ಅವನದ್ದು ಅನುಮಾನಕ್ಕೆ ಅವಕಾಶವೇ ಇಲ್ಲದಂತಹ ವ್ಯಕ್ತಿತ್ವ. ಕಾಯಾ-ವಾಚಾ-ಮನಸು ಅವನೆಷ್ಟು ಸರಳ ವ್ಯಕ್ತಿ ಎಂದರೆ, ಮೇಲು ನೋಟಕ್ಕೆ ಹಲವರಿಗೆ ಅವನೊಬ್ಬ ಜವಾಬ್ದಾರಿ ಇಲ್ಲದ ವ್ಯಕ್ತಿಯಾಗಿ ಕಂಡಿರಲೂ ಸಾಕು. ಆದರೆ ಅವನದ್ದು ಬೇಜವಾಬ್ದಾರಿಯ ವರ್ತನೆಯಲ್ಲ ಎಂಬುದು ಗೊತ್ತಿದ್ದವರಿಗೆ ಮಾತ್ರ ಗೊತ್ತು. ಅವನು ತನ್ನ ಬದುಕಿನ ಪ್ರತಿಕ್ಷಣಗಳನ್ನು, ಸಂಗತಿಗಳನ್ನು ತನ್ನದೇ ಆದ ರೀತಿಯಲ್ಲಿ ಅನುಭವಿಸುತ್ತಾ ಬದುಕಿದವನು. ಅವನು ತನ್ನ ಜೀವನವನ್ನು, ಯಾರಿಗೂ ಯಾವ ರೀತಿಯಲ್ಲೂ ತೊಂದರೆ ಕೊಡದೇ, ಸದಾ ಒಳ್ಳೆಯದನ್ನೆ ಚಿಂತಿಸುತ್ತಾ, ಬದುಕು ರೂಪಿಸಿಕೊಂಡ ಒಬ್ಬ ಸಜ್ಜನ ವ್ಯಕ್ತಿ.

ಈ ಶಾಮಣ್ಣನಿಗೆ, ತಿಂಡಿ, ಸಿಹಿತಿಂಡಿಗಳೆಂದರೆ ಪಂಚಪ್ರಾಣ. ಅಂತೆಯೇ ಅವನಿಗೆ ಸ್ನೇಹಿತರು, ಸಂಗೀತ, ಫೋಟೋಗ್ರಫಿ ಇತ್ಯಾದಿಗಳಲ್ಲಿ ಆತೀವ ಆಸಕ್ತಿ. ಈ ದೆಸೆಯಿಂದಲೇ ಅವನು ಜೀವನದಲ್ಲಿ ಬಹಳಷ್ಟು ಕಳೆದು ಕೊಂಡಿದ್ದಾನೆಂದೇ ನನಗನ್ನಿಸುತ್ತೆ. ಅವನು ಮೈಸೂರಿನಲ್ಲಿ ಓದುತ್ತಿದ್ದಾಗ, ಒಮ್ಮೆ ಅವನ ಸ್ನೇಹಿತರೊಂದಿಗೆ ಮೈಸೂರಿಂದ ಕಡಿದಾಳಿಗೆ ಸೈಕಲ್ ತುಳಿದುಕೊಂಡು ಬಂದಂತಹ ದುಸ್ಸಾಹಸದ ಕೆಲಸಗಳಲ್ಲೇ ಆಸಕ್ತಿ. ಅವನಿನ್ನೂ ಕಾಲೇಜಿನಲ್ಲಿ ಓದುತ್ತಿದ್ದಾಗಲೇ, ಓದು ಬಿಟ್ಟು ಸರೋದ್ ಕಲಿಯಲು ಬೊಂಬಾಯಿಗೆ ಹೋಗಿ, ಹಲವಾರು ತಿಂಗಳುಗಳ ನಂತರ ವಾಪಾಸು ಬಂದು ಓದು ಮುಂದುವರಿಸಿದ್ದ. ಒಮ್ಮೆ ಅವನು ಅವನ ಗುರು 'ರಾಜೀವ ತಾರಾನಾಥ'ರ ಸರೋದ್ ಕಾರ್ಯಕ್ರಮವನ್ನು ತೀರ್ಥಹಳ್ಳಿಯಲ್ಲಿ ಏರ್ಪಡಿಸಿದ್ದು, ಆ ಬಗ್ಗೆ ಚಂದಾ ವಸೂಲಿಗಾಗಿ, ನಾನು, ಅವನು ತಾಲ್ಲೂಕಿನ ಗಣ್ಯ ವ್ಯಕ್ತಿಗಳ ಮನೆಗಳಿಗೆ ಬೆಳಿಗ್ಗೆಯಿಂದ ರಾತ್ರಿವರೆಗೆ ಅಲೆದಾಡಿದ್ದು, ಕೆಲವೊಮ್ಮೆ ಸಮಯದ ಅಭಾವದಿಂದ ಬಸ್ಸಿನಲ್ಲಿ ಪ್ರಯಾಣ ಮಾಡುತ್ತಲೇ ಬೆಳಗಿನ ತಿಂಡಿ ತಿನ್ನುತ್ತಾ ಮನೆ-ಮನೆಗೆ ಅಲೆದಾಡಿ ಸಂಗೀತ ಕಾರ್ಯಕ್ರಮಕ್ಕೆ ಹಣ ಸಂಗ್ರಹಿಸಲು ಪಟ್ಟ ಪಾಡು ನನ್ನ ಮನಸ್ಸಿನಲ್ಲಿನ್ನೂ ಹಸಿರಾಗಿದೆ. ಮೊದಲೇ ಮಲೆನಾಡಿನಲ್ಲಿ ಮನೆ ಎಂದರೆ ಊರಿಗೊಂದೆ ಮನೆ. ಜೊತೆಗೆ ಯಾರಿಗೂ ಸಂಗೀತದಲ್ಲಿ ಅಂತಹ ಆಸಕ್ತಿಯಿಲ್ಲದವರೇ ಹೆಚ್ಚಾಗಿದ್ದರು. ಅಲ್ಲದೇ ಈ ಶಾಮಣ್ಣ ಸರೋದ್ ಹೆಸರು ಹೇಳುತ್ತಿದ್ದಂತೆಯೇ ಬೆಚ್ಚಿ ಬೀಳೋ ಜನ. ಬಹಳಷ್ಟು ಜನರಿಗೆ ಅಲ್ಲಿಯವರೆಗೆ ಸರೋದ್ ಹೆಸರನ್ನಾಗಲೀ,

ರಾಜೀವ್ ತಾರಾನಾಥರ ಹೆಸರನ್ನಾಗಲೀ ಕೇಳಿದವರೇ ಅಲ್ಲ. ನಾನಂತೂ ಎಷ್ಟೋ ಸಾರಿ ಹೊಟ್ಟೆ ಹಸಿದು ಪ್ರತಿ ಮನೆಗೆ ಹೋದಾಗಲೂ, ತಿನ್ನಲು ಏನಾದರೂ ಕೊಟ್ಟಾರು ಎಂದು ಅಡಿಗೆಮನೆ ಕಡೆಗೆ ನೋಡುತ್ತಾ ಕೂತಿರುತ್ತಿದ್ದೆ. ಎಷ್ಟೋ ಸಾರಿ ಈ ಶಾಮಣ್ಣನ ಸಹವಾಸ ಮಾಡಿದರೆ ಊಟಕ್ಕಿಂತ ಉಪವಾಸವೇ ಗತಿ ಎಂದು ಮನಸ್ಸಿನಲ್ಲೆ ಬೈದುಕೊಳ್ಳುತ್ತಿದ್ದೆ. ಇಂತಹ ಪರಿಸ್ಥಿತಿಯಲ್ಲಿ ನಾವು ಹಣ ಸಂಗ್ರಹ ಮಾಡಿ, ರಾಜೀವ ತಾರಾನಾಥರ ಸರೋದ್ ಕಾರ್ಯಕ್ರಮವನ್ನು ಯಶಸ್ವಿಯಾಗಿ ತೀರ್ಥಹಳ್ಳಿಯಲ್ಲಿ ಏರ್ಪಡಿಸಿದ್ದೆವು.

ನನಗೆ ತಿಳಿದಂತೆ ಈ ಶಾಮಣ್ಣ ವಿದ್ಯಾರ್ಥಿಯಾಗಿದ್ದಾಗಲಿಂದಲೂ ವೈಚಾರಿಕ, ವೈಜ್ಞಾನಿಕ ದೃಷ್ಟಿಕೋನಗಳನ್ನು ಬೆಳೆಸಿಕೊಂಡಿದ್ದ ಅಪರೂಪದ ವ್ಯಕ್ತಿ. ಆಗಲೇ ಅವನು ಸಮಾಜ ಸುಧಾರಣೆ, ಮೂಢನಂಬಿಕೆ, ಅಸ್ಪೃಶ್ಯತೆ ಇತ್ಯಾದಿಗಳ ಬಗ್ಗೆ ನನ್ನೊಡನೆ ತುಂಬ ಗಂಭೀರವಾಗಿ ಚರ್ಚಿಸುತ್ತಿದ್ದ. ಈ ಕಾರಣದಿಂದಾಗಿಯೇ ಅವನು ಹಬ್ಬ-ಹರಿದಿನಗಳಲ್ಲಿ ಸಮಾಜ-ಅಸ್ಪೃಶ್ಯರೆಂದು ತಿಳಿದವರನ್ನು ತನ್ನ ಮನೆಗೆ ಕರೆದು ಎಲ್ಲರೊಂದಿಗೆ ಕೂರಿಸಿ ಊಟ ಹಾಕಿಸುತ್ತಿದ್ದ. ನಮ್ಮೂರಿನ ದೇವಸ್ಥಾನದಲ್ಲಿ ಅವರಿಗೂ ಪ್ರವೇಶ ದೊರಕಿಸಿಕೊಡಬೇಕೆಂದು ಚರ್ಚಿಸುತ್ತಿದ್ದ. ನಮ್ಮ ಊರಿನಲ್ಲಿ ಆಗ ವರ್ಷಕ್ಕೊಮ್ಮೆ ದೇವರ ಹರಕೆ ಎಂಬ ಪದ್ಧತಿ ಇತ್ತು. ಆ ಸಂದರ್ಭದಲ್ಲಿ ಕಡಿಯಲು ತಂದ ಕುರಿಯನ್ನು ಹೇಗಾದರೂ, ಮಾಡಿ ಅದರ ಬಂಧನದಿಂದ ಬಿಡಿಸಬೇಕೆಂದು ನಾವಿಬ್ಬರೂ ಪ್ರಯತ್ನಿಸಿ, ಈ ವಿಚಾರ ಊರಿನವರಿಗೆ ಗೊತ್ತಾಗಿ ನಾವೇ ಸೋಲಬೇಕಾಯ್ತು. ಹಿಂದೊಮ್ಮೆ ನಮ್ಮೂರಿನ ದೇವಸ್ಥಾನದಲ್ಲಿ, ಪುನರ್ ಸ್ಥಾಪನೆಯ ವಿಶೇಷ ಕಾರ್ಯಕ್ರಮ ಏರ್ಪಡಿಸಿದ್ದರು. ನೂರಾರು ಜನರು ಸೇರಿದ್ದರು. ನನ್ನ ತಂದೆ, ಶಾಮಣ್ಣನ ತಂದೆ ಎಲ್ಲರೂ ಅಲ್ಲಿ ಹಾಜರಿದ್ದರು. ಪೂಜೆ, ಪುನಸ್ಕಾರ, ಅರ್ಥವಾಗದ ಮಂತ್ರ ಘೋಷ ಇತ್ಯಾದಿ ಮುಗಿಯುವ ಹೊತ್ತಿಗೆ ಮಧ್ಯಾಹ್ನ ಎರಡು ಘಂಟೆಯ ಮೇಲಾಗಿತ್ತು. ನಮಗೂ ವಿಪರೀತ ಹೊಟ್ಟೆ ಹಸಿದಿತ್ತು. ನಂತರ ಯಾವುದೋ ಪದ್ಧತಿಯಂತೆ, ಬ್ರಾಹ್ಮಣರು ಮೊದಲು ಊಟ ಮಾಡುವುದೆಂದು, ನಂತರ ಬೇರೆಯವರಿಗೆ ಊಟ ಎಂದು ಹೇಳಿದರು. ಆ ಸಂದರ್ಭದಲ್ಲಿ ನಾನು, ಶಾಮಣ್ಣ ಮಾಡಿದ ಕೆಲಸ, ಬಹುಷಃ ಆ ಊರಿನಲ್ಲಿ ಈಗ ಬದುಕಿರುವ ಯಾರಿಗೂ ಗೊತ್ತಿಲ್ಲ. ಗೊತ್ತಿದ್ದವರು ಈಗ ಬದುಕಿಲ್ಲ. ಆಗ ನಾವು ಮಾಡಿದ್ದ ಕೆಲಸ ಯೋಚಿಸಿದರೆ ಈಗಲೂ ತುಂಬ ಗಾಬರಿಯಾಗುತ್ತೆ. ಅಲ್ಲದೆ ಈ ವಿಚಾರ ತಿಳಿದೂ, ನನ್ನ ತಂದೆ, ಅವನ ತಂದೆ ಮತ್ತು ಊರಿನ ಪ್ರಮುಖರು, ಆ ಪರಿಸ್ಥಿತಿಯನ್ನು ನಿಭಾಯಿಸಿದ ರೀತಿ, ನನಗಿನ್ನೂ ಆಶ್ಚರ್ಯವನ್ನುಂಟು ಮಾಡುತ್ತಿದೆ. ಅಷ್ಟೇನೂ ವಿದ್ಯಾವಂತರಲ್ಲದ ನನ್ನ ತಂದೆ ಮತ್ತು ಶಾಮಣ್ಣನ ತಂದೆ ನಮ್ಮೆಲ್ಲ ಚಿಂತನೆಗಳನ್ನು ಮಾನಸಿಕವಾಗಿ

ಒಪ್ಪುತ್ತಿದ್ದರೂ, ಯಾವುದೋ ಇಕ್ಕಟ್ಟಿಗೆ ಸಿಕ್ಕು ಒದ್ದಾಡುತ್ತಿದ್ದುದು ಮೇಲು ನೋಟಕ್ಕೆ ಕಾಣುತ್ತಿತ್ತು. ಈಗಿನ ವಿದ್ಯಾವಂತರೆನ್ನಿಸಿಕೊಂಡ, ಪದವೀಧರರಿಗಿಂತ, ಅವರುಗಳು ಹೆಚ್ಚು. ವೈಚಾರಿಕ ಚಿಂತನೆಗಳ ಸೂಕ್ಷ್ಮಮತಿಗಳಾಗಿದ್ದರು.

ಈ ನಮ್ಮ ಶಾಮಣ್ಣನ ವಿದ್ಯಾರ್ಥಿ ಜೀವನ ಯಾವ ರೀತಿ ಇತ್ತು ಎನ್ನಲು ಹಲವಾರು ನಿದರ್ಶನಗಳಿವೆ. ಮೈಸೂರಲ್ಲಿ ಕಳೆದ ಅವನ ವಿದ್ಯಾರ್ಥಿ ಜೀವನವನ್ನು, ತುಂಬ ಸ್ವಾರಸ್ಯವಾಗಿ, ಸ್ನೇಹಿತರಾಗಿದ್ದ ದಿ. ತೇಜಸ್ವಿಯವರು, ಅವರ 'ಅಣ್ಣನ ನೆನಪು' ಪುಸ್ತಕದಲ್ಲಿ ವಿವರಿಸುತ್ತಾರೆ. ಅದು ಒಂದು ರೀತಿ ಶಾಮಣ್ಣನ ನೆನಪೇ ಆಗಿದೆ ಎನ್ನಬಹುದು. ಅಂತೂ ಪದವಿ ಪೂರೈಸಿದ ಶಾಮಣ್ಣ, ಅವನ ಇನ್ನೊಬ್ಬ ಸ್ನೇಹಿತ ಎನ್.ಡಿ. ಸುಂದರೇಶ್‌ರವರಂತೆ ಹೊಳೆಹೊನ್ನೂರು ಬಳಿ ವ್ಯವಸಾಯ ಗಾರನಾಗಿ ನೆಲೆ ಕಂಡುಕೊಂಡ. ಆದರೆ ವ್ಯವಸಾಯ ಎನ್ನುವುದು ಅವನ ಇತರೆ ಹವ್ಯಾಸಗಳಂತಲ್ಲ ಎನ್ನುವ ಸತ್ಯವನ್ನು ಬಹು ಬೇಗ ಕಂಡುಕೊಂಡ. ಸ್ನೇಹಿತರಾದ ಸುಂದರೇಶ್, ನಂಜುಂಡಸ್ವಾಮಿ, ಮುಂತಾದವರೊಂದಿಗೆ ಸೇರಿ, ಕರ್ನಾಟಕ ರಾಜ್ಯ ರೈತ ಸಂಘವನ್ನು ಕಟ್ಟಿ ಬೆಳೆಸುವಲ್ಲಿ ಶಾಮಣ್ಣನ ಪಾತ್ರ ಎಲ್ಲರಿಗೂ ತಿಳಿದಿದೆ. ಈ ಸಲುವಾಗಿ ತನ್ನ ಮತ್ತು ತನ್ನ ಕುಟುಂಬದ ಹಿತಾಸಕ್ತಿಯನ್ನೆ ಮರೆತು, ಇಂದಿಗೂ ಹೋರಾಡುತ್ತಿರುವುದು ನಿಜಕ್ಕೂ ಶ್ಲಾಘನೀಯ. ಈ ಮಧ್ಯೆ ರೈತರ ಸಂಕಷ್ಟಗಳ ಬಗ್ಗೆ ಸತ್ತಂತಿರುವ ಸರ್ಕಾರಕ್ಕೆ ಅರಿವು ಮೂಡಿಸಲು ೧೯೮೪ರಲ್ಲಿ ನಡೆದ ಲೋಕಸಭೆ ಚುನಾವಣೆಯಲ್ಲಿ, ರಾಜ್ಯ ರೈತ ಸಂಘದ ಅಭ್ಯರ್ಥಿಯಾಗಿ ನಾನು ಸ್ಪರ್ಧಿಸುವಂತೆ ಮಾಡಿ, ಆ ಚುನಾವಣಾ ಪ್ರಚಾರದಲ್ಲಿ ಶಾಮಣ್ಣನೊಡನೆ ಕಳೆದ ದಿನಗಳನ್ನು ಎಂದೂ ಮರೆಯುವಂತಿಲ್ಲ. ಆ ಸಂದರ್ಭದಲ್ಲಿ ನಾವಿಬ್ಬರೂ ಒಂದೇ ಮನೆತನಕ್ಕೆ ಸೇರಿದವರು ಎಂಬ ವಿಚಾರ ಯಾರಿಗೂ ತಿಳಿಯದಂತೆ, ಅವನು ನಡೆದುಕೊಂಡ ರೀತಿ ನಿಜಕ್ಕೂ ಹೆಮ್ಮೆ ಪಡುವಂತಹುದು. ರೈತ ಸಂಘಟನೆಯಲ್ಲಿ ನಂಜುಂಡಸ್ವಾಮಿ, ಸುಂದರೇಶ್‌ರವರ ಅಗಲಿಕೆಯ ನಂತರವೂ, ಈಗಲೂ ಗೌರವ ಘನತೆಯನ್ನುಳಿಸಿ ಕೊಂಡು, ಮಂಚೂಣಿಯಲ್ಲಿರುವ ಒಬ್ಬ ನಾಯಕನಾಗಿ ಗುರುತಿಸಿಕೊಂಡಿರುತ್ತಾನೆ.

ಈ ಶಾಮಣ್ಣ, ಈಗಲೂ ಕುವೆಂಪುರವರ ಅಭಿಲಾಷೆಯಂತೆ ಸರಳ ವಿವಾಹಕ್ಕೆ ಕೊಡುವ ಪ್ರೋತ್ಸಾಹ ಮತ್ತು ಅಂತಹ ವಿವಾಹಗಳನ್ನು ಮಾಡಿಸಲು ಪಡುತ್ತಿರುವ ಶ್ರಮ ಮೆಚ್ಚುವಂತಹುದು. ಈಗಲೂ ಅವನು ಕುವೆಂಪುರವರ ಮಂತ್ರ ಮಾಂಗಲ್ಯವಲ್ಲದೇ ಬೇರೆ ರೀತಿಯ ಅದ್ದೂರಿ ಮದುವೆ ಇತ್ಯಾದಿ ಕಾರ್ಯಕ್ರಮಗಳಿಗೆ ಹಾಜರಾಗುವುದಿಲ್ಲ. ಇಂದಿಗೂ ಸಮಾಜ ಸುಧಾರಣೆಗಾಗಿಯೇ ತನ್ನ ಸಮಯ ಕಳೆಯುತ್ತಿದ್ದಾನೆ. ಅವನು ಬದುಕಿದ ರೀತಿ ಮತ್ತು ಅವನ ನಡವಳಿಕೆ ಬಗ್ಗೆ ಯಾರೂ ಗಂಭೀರವಾಗಿ ಚಿಂತಿಸಿಲ್ಲ. ಅವನು ತನಗೆ ಬಂದ ಕರ್ನಾಟಕ ರಾಜ್ಯೋತ್ಸವ

ಪ್ರಶಸ್ತಿಯನ್ನು ತಿರಸ್ಕಾರಿಸಿದ್ದಾಗಲೀ, ಇತ್ತೀಚೆಗೆ ಮೈಸೂರು ದಸರಾ ಉದ್ಘಾಟನೆಗೆ ಮುಖ್ಯಮಂತ್ರಿಯಿಂದಲೇ ಬಂದ ಆಹ್ವಾನವನ್ನು ನಿರಾಕರಿಸಿದ್ದಾಗಲೀ ಸಾಮಾನ್ಯ ವಿಚಾರಗಳಲ್ಲ. ಇವೆಲ್ಲದರ ಹಿಂದೆ ಅವನ ವೈಚಾರಿಕ ದೃಷ್ಟಿ, ಸಮಾಜ ಸುಧಾರಣೆಯ ಕಾಳಜಿ ಎದ್ದು ಕಾಣುತ್ತೆ.

ಶಾಮಣ್ಣ, ಒಬ್ಬ ಅಪರೂಪದ ವ್ಯಕ್ತಿತ್ವದವನು. ಎಂತಹ ಸಂದರ್ಭದಲ್ಲೂ ಬೇರೆಯವರ ಮನಸ್ಸನ್ನು ನೋಯಿಸದಂತಹ, ಸದಾ ಒಳ್ಳೆಯದನ್ನೇ ಬಯಸುವ, ಯಾರಿಗೂ ತೊಂದರೆ ಕೊಡದಂತಹ ವ್ಯಕ್ತಿತ್ವದವನು. ಈಗ ಹೆಚ್ಚಿನವರಲ್ಲಿ ಅಪರೂಪ ಎಂದೇ ಹೇಳಬಹುದಾದ, ಸದ್ಭಾವನೆ, ಸದ್ಗುಣಗಳನ್ನು ಮೈಗೂಡಿಸಿಕೊಂಡು ಬಾಳಿದವನು. ಅವನೆಂದೂ ತನ್ನ ಬಗ್ಗೆ ಇತರರೇನೆನ್ನುತ್ತಾರೆ ಎಂದು ಚಿಂತಿಸಿದವನೇ ಅಲ್ಲ. ಅವನು ಮಾಡಿರುವುದು, ಮಾಡುತ್ತಿರುವುದು ನಿಜವಾದ ಸಮಾಜಸೇವೆ. ಇಂತಹ ಸಂದರ್ಭದಲ್ಲಿ, ಆ ಶಾಮಣ್ಣನಿಗೊಂದು 'ಗೌರವ ಗ್ರಂಥ' ಸಮರ್ಪಿಸುತ್ತಿರುವುದು ನಿಜಕ್ಕೂ ಶ್ಲಾಘನೀಯ ಕ್ರಮ.

ಸಾರ್ಥಕ ಬದುಕಿನ ಶಾಮಣ್ಣ

ಶಿವಮೊಗ್ಗ ಸುಬ್ಬಣ್ಣ

ನಮ್ಮ ಕಡಿದಾಳು ಶಾಮಣ್ಣ ಸರಳತೆ ಮತ್ತು ಸಜ್ಜನಿಕೆಯ ಸಾಕಾರಮೂರ್ತಿ. ೧೯೫೭-೫೮ರಲ್ಲಿ ನಾನು, ಶಾಮಣ್ಣ ಮತ್ತು ಕೆ.ಪಿ. ತೇಜಸ್ವಿ ಶಿವಮೊಗ್ಗ ಇಂಟರ್ ಮೀಡಿಯೇಟ್ ಕಾಲೇಜಿನಲ್ಲಿ ಸಹಪಾಠಿ ಗಳಾಗಿದ್ದೆವು. ಶಾಮಣ್ಣ ಮತ್ತು ತೇಜಸ್ವಿ ಬುದ್ಧಿವಂತರ ಗುಂಪಿಗೆ ಸೇರಿದವರು. ನಾನು ಅತ್ಯಂತ ಸಾಮಾನ್ಯ ವಿದ್ಯಾರ್ಥಿಗಳ ಗುಂಪಿಗೆ ಸೇರಿದವನು. ಆದರೆ ಈ ವ್ಯತ್ಯಾಸ ನಮ್ಮ ಸ್ನೇಹಕ್ಕೆ ಏನೂ ಅಡ್ಡಿಯಾಗಲಿಲ್ಲ. ಶಾಮಣ್ಣನಿಗೆ ಹಿಂದುಸ್ಥಾನಿ ಶಾಸ್ತ್ರೀಯ ಸಂಗೀತದಲ್ಲಿ ಬಹಳ ಆಸಕ್ತಿಯಿತ್ತು. ಹಿಂದೂಸ್ಥಾನೀ ಸಂಗೀತದ ರಾಗ ಕೇದಾರ್‌ನಲ್ಲಿ ನಾನು ಹಾಡಿದ ರಾಷ್ಟ್ರಕವಿ ಕುವೆಂಪುರವರ ಗೀತೆ "ದೂರಕೆ ದೂರಕೆ ಬಹು ಬಹು ದೂರಕೆ ಹಾರುವೆ ಗಾನ ವಿಮಾನದಲಿ, ಮುಗಿಲಿನ ದೂರಕೆ ಗಗನದ ದೂರಕೆ ಶಶಿ ರವಿ ತಾರೆಗಳಾಚೆಯ ತೀರಕೆ" ಈ ಗೀತೆಯನ್ನು ನನ್ನ ಹತ್ತಿರ ಹಲವಾರು ಬಾರಿ ಹಾಡಿಸಿ ಕೇಳಿ ಆನಂದ ಪಡುತ್ತಿದ್ದರು.

ನಮ್ಮ ಶಾಮಣ್ಣ ಸಾರ್ಥಕ ೭೫ ವಸಂತಗಳನ್ನು ಕಳೆದಿದ್ದಾರೆ. ಅತ್ಯಂತ ಸಾಮಾಜಿಕ ಕಾಳಜಿಯನ್ನು ಹೊಂದಿದ್ದ ಶಾಮಣ್ಣ ರೈತ ಚಳುವಳಿಯಲ್ಲಿ ಎಂ.ಡಿ. ನಂಜುಂಡಸ್ವಾಮಿ, ಎನ್.ಡಿ. ಸುಂದರೇಶ್ ಮುಂತಾದವರೊಂದಿಗೆ ಸಕ್ರಿಯವಾಗಿ ಭಾಗವಹಿಸಿದ್ದರು.

ಅವರಿಗೆ ಎಲ್ಲ ರೀತಿಯ ಶುಭವನ್ನು ಕೋರುತ್ತೇನೆ.

ಸಹನೆ, ತಾಳ್ಮೆಯ ಸಾಕಾರಮೂರ್ತಿ ಶಾಮಣ್ಣ

ಕಿಮ್ಮನೆ ರತ್ನಾಕರ

ಬಂದಂತಹ ಸಮಸ್ಯೆಗಳನ್ನು, ಕಷ್ಟಗಳನ್ನು ಅತ್ಯಂತ ಸಮಾಧಾನ ಚಿತ್ತದಿಂದ ಸ್ವೀಕರಿಸುವ ಸ್ವಭಾವ ಬಹಳ ಅಪರೂಪ. ಪ್ರಗತಿಪರ ಚಿಂತನೆಗಳನ್ನು, ಕ್ರಾಂತಿಕಾರಿ ಚಿಂತನೆ, ನಿಲುವುಗಳನ್ನು ಹೊಂದಿರುವವರು ಯಾವಾಗಲೂ ಸದಾ ಉಗ್ರ ಸ್ವಭಾವಿಗಳೇ ಆಗಿರುತ್ತಾರೆ. ಆದರೆ ನಮ್ಮ ಕಡಿದಾಳ್ ಶಾಮಣ್ಣ ಅದಕ್ಕೆ ಪೂರ್ಣ ತದ್ವಿರುದ್ಧ.

ಕಡಿದಾಳ್ ಶಾಮಣ್ಣನವರನ್ನು ನಾನು ಪ್ರಥಮವಾಗಿ ನೋಡಿದ್ದು ಶಾಂತವೇರಿ ಗೋಪಾಲಗೌಡರ ಶಾಸನ ಸಭೆಯ ಕೊನೆಯ ಚುನಾವಣೆಯಲ್ಲಿ. ಆಗ ನಾನು ತೀರ್ಥಹಳ್ಳಿ ಹಿರಿಯ ಪ್ರಾಥಮಿಕ ಶಾಲೆಯ ವಿದ್ಯಾರ್ಥಿ ಎಂದು ನೆನಪು. ನಂತರ ಅವರು ಕಿಮ್ಮನೆಗೆ ಮೋಟಾರ್ ಬೈಕ್‌ನಲ್ಲಿ ಬಂದಿದ್ದರು. ಆ ಮೋಟಾರ್ ಬೈಕ್‌ಗೆ ಮುಂಭಾಗದ ಬಂಪರ್ ಬದಲಿಗೆ ಅಡಿಕೆ ಮರದ ಹಾಳೆಯನ್ನು ಕಟ್ಟಿದ್ದರು. ಅದು ಅವರ ಶೈಲಿ! ಆ ನಂತರ ಈವರೆಗೆ ಸದಾ ಅವರ ಸಂಪರ್ಕದಲ್ಲಿ ಇದ್ದೇನೆ. ೧೯೮೦ರಲ್ಲಿ ಎನ್.ಡಿ. ಸುಂದರೇಶ್, ಕಡಿದಾಳ್

ಶಾಮಣ್ಣ, ಕಡಿದಾಳ್ ದಯಾನಂದ ಮತ್ತು ಇತರೆ ಮುಖಂಡರ ನೇತೃತ್ವದ ರೈತ ಸಂಘಟನೆಯಲ್ಲಿ ನಾನು ಕೂಡಾ ತೊಡಗಿಸಿಕೊಂಡಿದ್ದೆ. ತೀರ್ಥಹಳ್ಳಿಯಲ್ಲಿ ನಡೆದ ರೈತರ ೩೪ ಗಂಟೆಯ ಉಪವಾಸ ಸತ್ಯಾಗ್ರಹದಲ್ಲಿ ನಾನು ಕೂಡಾ ಭಾಗವಹಿಸಿದ್ದೆ. ೧೯೮೦ರಲ್ಲಿ ಗಾಂಧಿಜಯಂತಿಯಂದು ಶಿವಮೊಗ್ಗ ಡಿ.ಸಿ. ಕಛೇರಿಯಲ್ಲಿ ಪೂರ್ಣ ದಿನದ ಸತ್ಯಾಗ್ರಹದಲ್ಲಿ ಕೂಡಾ ಭಾಗವಹಿಸಿದ್ದೆ. ಆ ಸಂದರ್ಭದಲ್ಲಿ ಪ್ರೊ. ಎಂ.ಡಿ. ನಂಜುಂಡಸ್ವಾಮಿ ಮತ್ತು ಪಿ. ಲಂಕೇಶ್ ಕೂಡಾ ಭಾಗವಹಿಸಿ, ಜನರನ್ನು ಉದ್ದೇಶಿಸಿ ಭಾಷಣ ಮಾಡಿದ್ದರು.

ಶಿವಮೊಗ್ಗ ಜಿಲ್ಲೆಯ ಹೊಳೆಹೊನ್ನೂರಿನ ಸಿದ್ಲಿಪುರದಲ್ಲಿ ನಮ್ಮ ಕುಟುಂಬಕ್ಕೆ ಸೇರಿದ ಜಮೀನಿತ್ತು. ಕಡಿದಾಳ್ ಶಾಮಣ್ಣನವರ ಜಮೀನಿಗೆ ಅಲ್ಲಿಂದ ಮೂರು ಕಿ.ಮೀ. ದೂರ. ಸಂಜೆ ೭.೦೦ ಘಂಟೆಗೆ ಒಂದು ದಿನ ಕಡಿದಾಳ್ ಶಾಮಣ್ಣರವರ ಜಮೀನಿಗೆ ಮಾತನಾಡಲು ಹೋಗಿದ್ದೆ. ಆಗ ಕಡಿದಾಳ್ ಶಾಮಣ್ಣ ಮತ್ತು ಅವರ ಶ್ರೀಮತಿ ಶ್ರೀದೇವಿಯವರು ಮನೆಯಲ್ಲಿ ಇದ್ದರು. ಮನೆಯ ವರಾಂಡ ಹೊರತುಪಡಿಸಿ ಮನೆಯ ಎಲ್ಲಾ ರೂಂನಲ್ಲಿ ಭತ್ತದ ಪೈರು ರಾಶಿ ಹಾಕಿದ್ದರು. ನೀವು ಮಲಗುವುದು ಎಲ್ಲಿ ಎಂದೆ. ಭತ್ತದ ಮೇಲೆ ಎಂದರು. ಸ್ನಾನದ ಮನೆ? ಎಂದು ಕೇಳಿದೆ. ಆ ಸಮಸ್ಯೆ ನಮಗಿಲ್ಲ ಎಂದು ಹೇಳಿದರು. ಏನು ಎಂದರೆ, ಸಂಜೆ ಕತ್ತಲಾಗುತ್ತೆ ಜಗತ್ತೇ ಬಾತ್‌ರೂಂ ಆಗುತ್ತೆ ಎಂದರು! ಎಂತಹ ಪರಿಸ್ಥಿತಿಗೂ ಹೊಂದಿಕೊಳ್ಳುವ ಮನಃಸ್ಥಿತಿ ಮತ್ತು ಸ್ವಭಾವ ಹೊಂದಿದವರು ಅವರು. ಅವರ ಈ ಮನೋಭಾವಕ್ಕೆ ಹೊಂದಿಕೊಳ್ಳುವ ಮಡದಿ ಪಡೆದಿದ್ದು ಅವರ ಅದೃಷ್ಟ.

ತೀರ್ಥಹಳ್ಳಿ ನ್ಯಾಯಾಲಯದಲ್ಲಿ ರೈತ ಸಂಘದವರ ಕಾನೂನು ಭಂಗ ಚಳುವಳಿಯ ಮೊಕದ್ದಮೆಗಳು ೧೦–೧೫ ವರ್ಷ ನಡೆದಿದ್ದವು. ಪೊಲೀಸ್ ಇಲಾಖೆ ಸಿಬ್ಬಂದಿ, ಅರಣ್ಯ ಇಲಾಖಾ ಸಿಬ್ಬಂದಿ, ಕಂದಾಯ ಇಲಾಖೆಯ ಸಿಬ್ಬಂದಿ ನಡುವೆ ಪ್ರತಿಭಟನೆ, ಹೊಡೆದಾಟ, ಸತ್ಯಾಗ್ರಹ ನಿತ್ಯ ನಡೆದಿತ್ತು. ಸಾವಿರಾರು ಕೇಸುಗಳು ರೈತ ಸಂಘಟನೆಯ ಮುಖಂಡರು, ಕಾರ್ಯಕರ್ತರ ಮೇಲೆ ನಡೆಯುತ್ತಿತ್ತು. ಒಂದು ರೈತರ ಕೇಸಿನಲ್ಲಿ ೩೩ ಜನ ಆರೋಪಿಗಳನ್ನು ತೀರ್ಥಹಳ್ಳಿ ನ್ಯಾಯಾಧೀಶರು ಜೈಲಿಗೆ ಕಳುಹಿಸಿದರು. ಅದರಲ್ಲಿ ಆರೋಪಿ ಮಹಿಳೆಯೊಬ್ಬಳು ತನ್ನ ಎರಡು ವರ್ಷದ ಮಗುವಿನೊಂದಿಗೆ ಜೈಲಿಗೆ ಬಂದಿದ್ದರು. ನ್ಯಾಯಾಧೀಶರು ಮಗುವನ್ನು ಆರೋಪಿಯೊಂದಿಗೆ ಜೈಲಿಗೆ ಕಳುಹಿಸಲು ನಿರಾಕರಿಸಿದರು. ಕಡಿದಾಳ್ ಶಾಮಣ್ಣ, ರೈತ ಆರೋಪಿಗಳನ್ನು ನ್ಯಾಯಾಲಯಕ್ಕೆ ಕರೆದುಕೊಂಡು ಬಂದಿದ್ದರು. ನ್ಯಾಯಾಧೀಶರು ಮಗುವನ್ನು ಜೈಲಿಗೆ ಕಳುಹಿಸಲು ನಿರಾಕರಿಸಿದ್ದರಿಂದ ಮಗುವಿನ ಜವಾಬ್ದಾರಿ ಕಡಿದಾಳ್ ಶಾಮಣ್ಣನವರ ಮೇಲೆ ಬಿತ್ತು. ಆಗ ಕಡಿದಾಳ್ ಶಾಮಣ್ಣನವರು ಮಗುವನ್ನು

ನೋಡಿಕೊಂಡ ರೀತಿ, ರಾತ್ರಿಯೆಲ್ಲಾ ಮಗುವಿನ ಅರಚಾಟ, ಮಗುವಿನ ಶೌಚ ಕಾರ್ಯಗಳ ನಿರ್ವಹಣೆ, ಆ ಕೇಸಿನಲ್ಲಿ ಸದರಿ ಆರೋಪಿಯನ್ನು ಜೈಲಿನಿಂದ ಹೊರ ತರಲು ಪಟ್ಟ ಶ್ರಮದ್ದೇ ಒಂದು ಕಥೆ.

ಶಾಮಣ್ಣನವರ ಮೇಲೂ ೬–೭ ಕ್ರಿಮಿನಲ್ ಮೊಕದ್ದಮೆಗಳು ಬಿದ್ದಿದ್ದವು. ಯಾವ ಕೇಸಿಗೂ ಅವರು ಸರಿಯಾಗಿ ಬರುತ್ತಿರಲಿಲ್ಲ. ಅವರ ಮೇಲಿನ ಎಲ್ಲಾ ಕೇಸುಗಳಲ್ಲಿ ವಾರೆಂಟ್ ಇರುತ್ತಿದ್ದವು. ಅವರಿಗೆ ಅವರ ಭಾವ ವಕೀಲರಾದ ದಿವಂಗತ ಪುಟ್ಟಯ್ಯ ಹೆಗ್ಡೆ ಜಾಮೀನು ನೀಡಿದ್ದರು. ಅವರಿಗೂ ಬಹಳಷ್ಟು ತೊಂದರೆ ಆಯ್ತು. ರೈತರ ಕೇಸಿನಲ್ಲಿ ಬಹಳಷ್ಟು ಜನ ನ್ಯಾಯಾಲಯಕ್ಕೆ ಸರಿಯಾಗಿ ಬರುತ್ತಿರಲಿಲ್ಲ. ರೈತರ ಕೇಸುಗಳಲ್ಲಿ ನಾನು ನ್ಯಾಯವಾದಿಯಾಗಿ ಹಾಜರಾಗಿದ್ದು, ನನ್ನ ಬದುಕಿನ ಅದೃಷ್ಟ.

ಒಟ್ಟಿನಲ್ಲಿ ಕಡಿದಾಳ್ ಶಾಮಣ್ಣನವರು ನಾನು ಕಂಡಂತೆ ತಮಾಷೆಗಳು, ಸಹನೆ, ತಾಳ್ಮೆ, ಸಂಯಮ, ಎದುರಾಗುವ ಸಮಸ್ಯೆಗಳನ್ನು, ಕಷ್ಟಗಳನ್ನು ಅತ್ಯಂತ ಸಮಾಧಾನಚಿತ್ತದಿಂದ ಸ್ವೀಕರಿಸುವ ಅವರ ಮನೋಭಾವ ಅದ್ಭುತ. ಅವರ ಬಗೆಗೆ ಅಭಿನಂದನಾ ಗ್ರಂಥವನ್ನು ಹೊರತರುವುದು ತುಂಬಾ ಅಭಿನಂದನಾರ್ಹ ಕಾರ್ಯ ಮತ್ತು ಸ್ವಾಗತಾರ್ಹ.

ಸಹ್ಯಾದ್ರಿ ಬನಸಿರಿಯ ಸಿಂಫೊನಿ

ಸತ್ಯನಾರಾಯಣರಾವ್ ಅಣತಿ

ಬಿಳಿಗಡ್ಡ ಹೊಳಪುಕಣ್ಣು, ಮಗುನಗುವಿನ ಸಂತನಂತಿರುವ ಸರಳ ಸಜ್ಜನ ವರ್ಣಮಯ ವ್ಯಕ್ತಿತ್ವ ಶಾಮಣ್ಣನವರದು. ಬಿಳಿ ದೊಗಲೆ ಪೈಜಾಮ, ಬಣ್ಣದ ಜುಬ್ಬ, ಹೆಗಲ ಮೇಲೆ ರೈತ ಸಂಘದ ನಿಶಾನೆ ಹಸಿರು ಟವೆಲ್, ಇತ್ತೀಚಿನ ವರ್ಷಗಳಲ್ಲಿ ಹಾಕಿಕೊಳ್ಳುವ ಹೈದರಬಾದ್‌ನ ಬಣ್ಣದ ಜರಿ ಟೋಪಿ ಧರಿಸಿ ಹೊರಟರೆಂದರೆ ಸಂಚಾರಿ ವಾದ್ಯವೃಂದದಂತೆ. ಬಯಲು ರಂಗದ ಏಕವ್ಯಕ್ತಿ ಪ್ರದರ್ಶನಕಾರರಂತೆ. ನಾಡಿನ ಉದ್ದಗಲ ಯಾವ ಊರಿನಲ್ಲಾದರೂ ಅವರನ್ನು 'ಓ ನಮ್ಮ ಕಡಿದಾಳು ಶಾಮಣ್ಣನವರು' ಎಂದು ಸುತ್ತುವರಿಯುವ ರೈತರು, ದಲಿತರು, ಸಾಹಿತಿಗಳು, ಕಲಾವಿದರು ಸಾಮಾಜಿಕರ ಬಳಗವೇ ಅವರ ಸುತ್ತ ನೆರೆಯುವುದನ್ನು ಕಾಣಬಹುದು. ಸ್ಟೇಜು ಹತ್ತಿದರೆಂದರೆ ಕೊಳಲು ನುಡಿಸಿಯೋ, ಹಾಡಿಯೋ ಸಮಾರಂಭವನ್ನು ಉದ್ಘಾಟಿಸುವುದು. ಆಡುಮಾತಿನ ಧಾಟಿಯಲ್ಲಿ ಚಾಟಿಯೇಟಿನಂತೆ ಚಿಕ್ಕ ಚಿಕ್ಕ ಭಾಷಣ ಮಾಡುವುದು. ರೈತರ ಬವಣೆಗೆ ಸ್ಪಂದಿಸುವುದು. ಒಂದೆರಡು ಪರಿಹಾರದ ನುಡಿಗಳು.

ಭ್ರಷ್ಟ ರಾಜಕಾರಣಿಗಳನ್ನು ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಳ್ಳದೇ ಬಿಡುವುದಿಲ್ಲ. ಸಮಸ್ಯೆಗಳಿಗೆಲ್ಲ ಅವರದೇ ಆದ ಸರಳ ಪರಿಹಾರಗಳು. ಇಲ್ಲಾ ಕ್ಯಾಮರಾ ಹಿಡಿದು ಕ್ಲಿಕ್ಕಿಸುತ್ತಾ ಸುತ್ತಾಡುವ ಶಾಮಣ್ಣನನ್ನು ನೋಡುವುದೆಂದರೆ ಮಲೆನಾಡಿನ ಗಿರಿ ಶಿಖರಗಳು, ಮರ ಗಿಡ ಬಳ್ಳಿ ಹೂವು ಪ್ರಾಣಿ ಪಕ್ಷಿ, ಹರಿಯುವ ನದಿ ನದದ 'ಕಾಡ ತೊರೆಯ ಜಾಡು' (ಆತ್ಮ ಕಥೆ) 'ಕಲ್ಲುಸಾರ' ದ ಜಲತರಂಗ ಸಂಗೀತದಂತೆ ಭಾಸವಾಗುತ್ತದೆ. ಅಪ್ಪಟ ಮಲೆನಾಡಿನ ನಡೆ ನುಡಿ ಮನಸ್ಸು, ಗ್ರಾಮ ಸೀಮೆಯ ದೇಸಿ ಪ್ರತಿಭೆಯ ಕಲಾವಿದ, ಪ್ರೀತಿ ಅಂತಃಕರಣದ ಸಮಾಜದ ಕಾರ್ಯಕರ್ತ, ಹೋರಾಟಗಾರ, ಸಭ್ಯ ಸಮಾಜವಾದಿ ಚಿಂತಕ ಶಾಮಣ್ಣನ ಒಡನಾಟದಲ್ಲಿ ನಾಲ್ಕು ದಶಕಗಳನ್ನು ಕಳೆದಿದ್ದೇನೆ.

ಹೀಗೆಲ್ಲಾ ಇರುವ ಶಾಮಣ್ಣನವರನ್ನು ನಾನು ಮೊದಲು ಭೇಟಿಯಾದದ್ದು ೧೯೭೦ಳರಲ್ಲಿ. ನಮ್ಮ ಕಾಲೇಜಿನಲ್ಲಿ ಬಿ.ಎ. ಓದುತ್ತಿದ್ದ ಅವರ ತಮ್ಮ ಕಡಿದಾಳು ಪ್ರಕಾಶನ ಮೂಲಕ. ಶಾಮಣ್ಣ ಎಂ.ಎ. ಮುಗಿಸಿ ಮೇಷ್ಟ್ರಾಗಿ ಕೆಲಸ ಮಾಡುತ್ತಿದ್ದ ಬಸವಾನಿ ಹೈಸ್ಕೂಲಿನ ವಿದ್ಯಾರ್ಥಿ ಸಂಘದ ವಾರ್ಷಿಕೋತ್ಸವಕ್ಕೆ ನನ್ನನ್ನು ಅತಿಥಿಯಾಗಿ ಕರೆದುಕೊಂಡು ಹೋಗಿದ್ದರು. ಕಡಿದಾಳಿನಲ್ಲಿ ಅವರ ಮನೆಯಲ್ಲಿಯೇ ಉಳಿದುಕೊಂಡು ಸಾವಿರದಷ್ಟು ಪ್ರೇಕ್ಷಕರಿಗೆ ಭಾಷಣಮಾಡಿ ಬಂದೆ. ಮೂರು ನಾಲ್ಕು ದಿನ ತೀರ್ಥಹಳ್ಳಿಯ ಅನೇಕ ಮನೆಗಳಿಗೆ ಕರೆದುಕೊಂಡು ಹೋಗಿದ್ದರು. ಆಗಲೇ ನಾನು ಮಲೆನಾಡಿನ ಇಬ್ಬನಿ ಹಿಟ್ಟು, ಕೊಟ್ಟೆ ಕಡುಬು ಇತ್ಯಾದಿ ತಿನಿಸುಗಳ ರುಚಿಯನ್ನು ಸವಿದದ್ದು. ಮಲೆನಾಡಿಗರ ಪ್ರೀತಿ ಸ್ನೇಹದ ಆತಿಥ್ಯವನ್ನು ಉಂಡದ್ದು. ವಾಪಸ್ ಬಂದು ಕಾಲೇಜಿಗೆ ಹೋದ ದಿನವೇ ಪ್ರಿನ್ಸಿಪಾಲ್ ಅವರು ನನ್ನನು ಕರೆಸಿ 'ಏನು ತೀರ್ಥಹಳ್ಳಿಯಲ್ಲಿ ಸಮಾಜವಾದಿ ಭಾಷಣ ಮಾಡಿದರಂತೆ. ಒಳ್ಳೆಯದೇ ನಮ್ಮ ಕಾಲೇಜಿಗು ಹೆಸರು ಬರುತ್ತೆ. ಆದರೆ ಸ್ವಲ್ಪ ಎಚ್ಚರವಾಗಿರಿಯಪ್ಪ' ಎಂದು ಓರಲ್ ವಾರ್ನಿಂಗ್ ಅನ್ನು ಕೊಟ್ಟಿದ್ದರು.

ಆಗ ಶಾಮಣ್ಣನ ಹತ್ತಿರ ಒಂದು ಎಜ್‌ಡಿ ಮೋಟಾರ್ ಬೈಕ್ ಇತ್ತು. ಅದರಲ್ಲೇ ನನ್ನನ್ನು ತೀರ್ಥಹಳ್ಳಿ ಸುತ್ತಿಸಿದ್ದು. ಅದರಲ್ಲಿ ಕೂತು ಅಂದಿನ ತೀರ್ಥಹಳ್ಳಿ ತಾಲೂಕಿನ ಹಳ್ಳಿ ರಸ್ತೆಗಳಲ್ಲಿ ಹೋಗುತ್ತಿದ್ದರೆ ಅಂಡು ಸೀಟಿನ ಮೇಲೆ ಇರಲು ಸಾಧ್ಯವೇ ಇರಲಿಲ್ಲ. ಗಾಳಿಯಲ್ಲಿ ಹಾರುತ್ತಾ ಚಲಿಸುತ್ತಿದ್ದಂತೆ ಭಾಸವಾಗುತ್ತಿತ್ತು. ಗೇರು ಕ್ಲಚ್ಚು ಇದ್ದಂತೆ ಕಾಣುತ್ತಿದ್ದಿಲ್ಲ. ಪುಣ್ಯಕ್ಕೆ ಬೇಕೆಂದಾಗ ನಿಲ್ಲಿಸಲು ಬ್ರೇಕೊಂದಿತ್ತು. ಅದೂ ಮೂರು ನಾಲ್ಕು ಮಾರು ಮುಂದೆ ಹೋಗಿಯೇ ನಿಲ್ಲುತ್ತಿತ್ತು. ಇದು ಅವರ ವಾಹನ ಚಾಲನೆಯ ವೈಖರಿ. ಇನ್ನು ಅದನ್ನು ಡ್ರೈವ್ ಮಾಡುವ ಶಾಮಣ್ಣನವರಿಗೆ ಡ್ರೈವಿಂಗ್ ಲೈಸೆನ್ಸೂ ಇತ್ತಿಲ್ಲ. ಯಾಕೆಂದರೆ ಆರ್.ಟಿ.ಓ ಆಫೀಸಿನಲ್ಲಿ ಲಂಚ ಕೊಡದೆ

ಲೈಸೆನ್ಸ್ ಸಿಗುದಿಲ್ಲ ಎಂದು ತಿಳಿದಿದ್ದ ಶಾಮಣ್ಣ ಸ್ವತಂತ್ರ ಭಾರತದ ಕಾನೂನು ಭಂಗ ಮಾಡಿ ಭ್ರಷ್ಟಾಚಾರದ ವಿರುದ್ಧ ಪ್ರತಿಭಟಿಸುತ್ತಲೇ ಮೊದಲು ಮೋಟಾರ್ ಬೈಕ್‌ನಲ್ಲೂ ನಂತರದ ದಿನಮಾನಗಳಲ್ಲಿ ಕಾರಿನಲ್ಲೂ ಸಂಚರಿಸುತ್ತಿದ್ದರು. ಕೇಳಿದರೆ ಲಂಚವಿಲ್ಲದೇ ಲೈಸೆನ್ಸ್ ಕೊಟ್ಟರೆ ಮಾತ್ರ ತೆಗೆದುಕೊಳ್ಳುತ್ತೇನೆ ಎಂದು ಹೇಳುತ್ತಿದ್ದರು. ಯಾವ ಪೋಲೀಸರಿಗು ಅವರನ್ನು ಲೈಸೆನ್ಸ್ ಇಲ್ಲವೆಂದು ತಡೆದು ನಿಲ್ಲಿಸುವ ಧೈರ್ಯವೂ ಇರಲಿಲ್ಲವೆಂಬುದು ಅವರ ನೀತಿವಂತ ವ್ಯಕ್ತಿತ್ವಕ್ಕೆ ಹಿಡಿದ ಕನ್ನಡಿಯಾಗಿದೆ.

ಭದ್ರಾವತಿ ಹತ್ತಿರದ ಭಗವತಿಕೆರೆಯಲ್ಲಿ ತೋಟ ತುಡಿಕೆ ಮಾಡಿಕೊಂಡು ಬದುಕು ಮಾಡುತ್ತಿರುವ ಶಾಮಣ್ಣ ಅಪ್ಪಟ ಸಮಾಜ ಜೀವಿ. ಗಾಂಧೀಜೀಯ ಗ್ರಾಮ ಸ್ವರಾಜ್ಯದ ಕನಸನ್ನು ನನಸು ಮಾಡುವ ಕಾರ್ಯದಲ್ಲಿ ತೊಡಗಿರುವವರು. ಅವರ ಕಾರ್ಯಕ್ಷೇತ್ರ ಒಂದೆ ಎರಡೇ? ಅವುಗಳನ್ನು ಈ ಹಿಂದೆ ನಾನು ಬರೆದಿರುವ 'ಸಿಂಫೊನಿ ಶಾಮಣ್ಣ' ಎಂಬ ಕವಿತೆಯಲ್ಲಿ:

ಸರಳ ವಿವಾಹ, ಹಳ್ಳಿಯಲ್ಲೊಂದು ಲೈಬ್ರರಿ
ಕುಡಿತದ ವಿರುದ್ಧ ಪ್ರತಿಭಟನೆ
ಅರಿವು ಬರಹ ಪ್ರಚಾರ, ಲೋಹಿಯಾ ವಿಚಾರ
ಸ್ವಚ್ಛ ಗ್ರಾಮಾಚಾರದ ಶಿವಮೊಗ್ಗೆ ಸೀಮೆಯ ಭಂಗಿ

ತಮ್ಮ ಗ್ರಾಮದ ಸುತ್ತ ಮುತ್ತ ಮಡದಿ ಶ್ರೀದೇವಿ ಮತ್ತು ಹೆಣ್ಣುಮಕ್ಕಳನ್ನೂ, ಗ್ರಾಮೀಣ ಪ್ರದೇಶದ ನಾಗರೀಕರನ್ನೂ ಕೂಡಿಕೊಂಡು ಮೇಲೆ ಹೇಳಿದ ಚಳುವಳಿಗಳನ್ನು ನಡೆಸುತ್ತಾ ಇರುವ ಶಾಮಣ್ಣ ಇಂದು ಬೊಬ್ಬೆ ಹಾಕುತ್ತಿರುವ 'ಸ್ವಚ್ಚ ಭಾರತ' ಅಭಿಯಾನವನ್ನು ಹತ್ತಾರು ವರ್ಷಗಳ ಹಿಂದೆಯೇ ನಡೆಸಿ, ಕರ್ನಾಟಕ ಬ್ಯಾಂಕ್‌ನ ಸಹಯೋಗದೊಂದಿಗೆ ಗ್ರಾಮೀಣ ಪ್ರದೇಶದಲ್ಲಿ ಮನೆ ಮನೆಯಲ್ಲೂ ಕಕ್ಕಸ್ಸುಗಳನ್ನು ಕಟ್ಟಿಸಿಕೊಳ್ಳಲು ಪ್ರೇರೇಪಿಸುತ್ತಾ ಬಂದಿದ್ದಾರೆ. (ಅವರ ಮಡದಿ ಶ್ರೀದೇವಿ ಹಳ್ಳಿಗಳಲ್ಲಿ ಹೆಂಡದಂಗಡಿಗಳ ವಿರುದ್ಧ ಪ್ರತಿಭಟಿಸಿ ಕುಡಿತದ ಚಟದಿಂದ ಎಷ್ಟೋ ಕುಟುಂಬಗಳನ್ನು ಪಾರುಮಾಡಿದ್ದಾರೆ. ಮಗಳೂ ಜೊತೆ ಸೇರಿ ಒಂದು ಮರವನ್ನು ಉಳಿಸಲು ನಡೆಸಿದ ಹೋರಾಟದ ಗಾಥೆ ಗಮನಾರ್ಹವಾದುದು) ಹಳ್ಳಿಯ ಶಾಲೆಯ ಮಕ್ಕಳಿಗೆ ಪಾಠ ಮಾಡುತ್ತಾರೆ, ಭಾವಗೀತೆಯನ್ನು ಹಾಡುವುದನ್ನು ಕಲಿಸುತ್ತಾರೆ, ಶಿಕ್ಷಣದ ಮಹತ್ವವನ್ನು ತಿಳಿಯ ಪಡಿಸುತ್ತಾರೆ. ಅದರಲ್ಲೂ ಹೆಣ್ಣುಮಕ್ಕಳಿಗೆ, ಕೂಲಿ ಕೆಲಸದಲ್ಲಿ ತೊಡಗಿರುವವರ ಮಕ್ಕಳ ವಿದ್ಯಾಭ್ಯಾಸದ ಬಗ್ಗೆ ಮುತುವರ್ಜಿ ವಹಿಸುತ್ತಾ ಬಂದಿದ್ದಾರೆ. ಅವರು ಸ್ವತಃ ತಾಳಿಯನ್ನೋ, ಮದುವೆಯ ಉಡಿಗೆಯನ್ನೋ ನೀಡಿ ಮಂತ್ರಮಾಂಗಲ್ಯದ ಸರಳ ವಿವಾಹಗಳನ್ನು ನಾಡಿನಾದ್ಯಂತ ನಡೆಸುತ್ತಾ ಬಂದಿದ್ದಾರೆ. ಬಡ ಕುಟುಂಬದ ನೂರಾರು ಯುವಕರ ಬದುಕನ್ನು ನೇರ್ಪುಗೊಳಿಸುತ್ತಾ ಬಂದಿರುವುದನ್ನು ಕಾಣುತ್ತಲಿದ್ದೇವೆ.

ಹೀಗಿರುವ ಶಾಮಣ್ಣನ ರುಚಿ ಅಭಿರುಚಿ ಈಗಾಗಲೇ ಜನಜನಿತವಾದುದು: ಸಿಹಿಯೆಂದರೆ ಮೈಯೆಲ್ಲಾ ಬಾಯಾಗಿರುವ ಶಾಮಣ್ಣನಿಗೆ ಯಾರ ಮನೆಗೆ ಹೋದರೂ ಒಂದಿಷ್ಟು ಸಿಹಿತಿಂಡಿ ಕೊಟ್ಟರಾಯ್ತು ಮನೆಯನ್ನು ಮರೆತು ಸುತ್ತುವವರು. ಬಿಸಿ ಹೋಳಿಗೆಗೆ ಒಂದಿಸ್ಟು ತುಪ್ಪ ಹಾಕಿ ಕೊಟ್ಟರೆ ಸಾಕು ಅವರಮ್ಮ ಮಾಡಿಕೊಡುತ್ತಿದ್ದ ಹೋಳಿಗೆ ತುಪ್ಪವನ್ನು ನೆನಪಿಸಿಕೊಂಡು ಬಂದ ಕೆಲಸವನ್ನು ಮರೆತು ಹೋಗಿ ಬಿಡುತ್ತಾರೆ. ಇನ್ನು ಅವರ ಅಭಿರುಚಿ:

ಹಳೆ ಕಾರು ಸ್ಕೂಟರ್ ಪುರಾತನ ವಸ್ತುಗಳು
ಕಂಡರೆ ಅರಳುವ ಕಣ್ಣುಗಳು, ಹೇಳುವ ಕಥೆ
ತುಂಬು ಶಾಮಲೆಯ ಬಹುವರ್ಣ
ಹಳ್ಳಿ ರಸ್ತೆ, ರೈತರ ಸರಕು ರೀತಿ ರಿವಾಜು
ಹಕ್ಕಿಯಾದರೂ ಸರಿ ಹಂದಿಯಾದರೂ ಸರಿ
ನಮ್ಮ ಶಾಮಣ್ಣನ ಕ್ಯಾಮರದ ಕಣ್ಣಿನಲಿ ಚಿತ್ರಗಳ ಚಿಲುಮೆ
ಮನೆಮನೆಗೂ ಹೊಸ ವರ್ಷದ ಶುಭ ಸಂದೇಶ

ಸರೋದ್ ಕಲಿಯಲು ಪಂ. ಅಲಿಅಕ್ಬರ್ ಖಾನ್ ಅವರಲ್ಲಿ ಹೋಗಿ ಕೆಲವು ದಿನ ಕಲಿತುಬಂದದ್ದನ್ನು ಮೈದುಂಬಿ ಹೇಳುತ್ತಾರೆ. ಪಂ. ರಾಜೀವ್ ತಾರಾನಾಥ್ ಅವರಿಂದಲೂ ಕಲಿತಿದ್ದಾರೆ. ತಬಲ, ಹಾರ್ಮೋನಿಯಮ್ ಹಿಡಿದು ಕುಳಿತರೆ ತಮ್ಮದೆ ರಾಗ ಸಂಯೋಜನೆಯ ಭಾವಗೀತೆಗಳನ್ನ ಹಾಡಿ ನಲಿಯುತ್ತಾರೆ ನಲಿಸುತ್ತಾರೆ. ಒಂದು ಅನುಭವ ಹೇಳುವುದಾದರೆ: ಒಮ್ಮೆ ಕುಂದಾಪುರಕ್ಕೆ ಪಂ. ರಾಜೀವ್ ತಾರಾನಾಥ್ ಅವರ ಸರೋದ್ ವಾದನ ಕೇಳಲು ಹೊರಟೆವು, ಸುಮಾರು ಎರಡುನೂರು ಕಿ.ಮಿ. ಪ್ರಯಾಣ. ಕಾರಿನ ಸ್ಟೇರಿಂಗ್ ಹಿಡಿದಿದ್ದರು. ಶಿವಮೊಗ್ಗ ಬಿಟ್ಟು ಒಂದು ಹತ್ತು ಕಿ.ಮಿ. ಪ್ರಯಾಣದ ನಂತರ ಆಕಾಶದಲ್ಲಿ ತುಂಡು ಮೋಡಗಳನ್ನು ನೋಡಿ 'ನೋಡ್ರಿ ಅಲ್ಲಿ' ಎಂದವರೇ ಕವಿ ನರಸಿಂಹಸ್ವಾಮಿಯವರ 'ಶ್ರೀಕೃಷ್ಣನಂತೊಂದು ಮುಗಿಲು/ ರಾಧೆಯಂತಿನ್ನೊಂದು ಮುಗಿಲು/ ಮುಗಿಲೇ ಮುಗಿಲು.....' ಎಂಬ ಭಾವಗೀತೆಯನ್ನು ಒಂದರ್ಧ ಗಂಟೆಯ ಕಾಲ ಹಾಡಿ ತೋರಿಸಿದರು. ದಾರಿ ಸವೆದದ್ದೇ ತಿಳಿಯಲಿಲ್ಲ. ಕುವೆಂಪು ಬೇಂದ್ರೆಯವರ ಮುಗಿಲ ಕವಿತೆಗಳನ್ನು ಒಂದರ ನಂತರ ಒಂದು ಮತ್ತೊಂದು ಹೀಗೆ ಕುಂದಾಪುರ ಸೇರುವವರೆಗೂ ಅವರ ಸಂಗೀತದಲ್ಲಿ ಮಿಂದು ಹೋಗಿದ್ದೆವು. ಶಾಮಣ್ಣನವರ ಲಹರಿಯೇ ಹೀಗೆ.

ಮೈಸೂರಿನಲ್ಲಿ ವಿದ್ಯಾರ್ಥಿಯಾಗಿದ್ದಾಗ ಪೂರ್ಣಚಂದ್ರ ತೇಜಸ್ವಿ ಅವರೊಡನೆ ಸೇರಿ ಕಲಿತ ಸಂಗೀತವಾದ್ಯಗಳದ್ದೇ ಒಂದು ದೊಡ್ಡಕಥೆ. ಹಾಸ್ಟೆಲ್‌ಗಳಲ್ಲಿ ಸಂಗೀತ ಕಲಿಯುವ ಅವಾಂತರ ಒಂದೆ ಎರಡೇ? ಅವರಿಂದಲೇ ಕೇಳಿಸಿಕೊಂಡು ಅನುಭವಿಸಿದ ವನು ನಾನು. ತೇಜಸ್ವಿಯವರ 'ಅಣ್ಣನ ನೆನಪಿನಲ್ಲಿ' ಆ ಸಂದರ್ಭಗಳೆಲ್ಲ ರಸವತ್ತಾಗಿ

ವರ್ಣಿತವಾಗಿದೆ. ದಂತವಾದ್ಯ ಪ್ರವೀಣರೆಂದೇ ಹೆಸರಾಗಿದ್ದರು. ಸದ್ಯ ಹಲ್ಲು ಮುರಿದುಕೊಳ್ಳಲಿಲ್ಲವಷ್ಟೆ! ಶ್ರೀದೇವಿಯವರ ಭಾಗ್ಯ. ಮೀನು ಹಿಡಿಯುವುದು, ಫೋಟೋಗ್ರಫಿ, ಅವರ ಕುಶಲ ಅಭಿರುಚಿಗಳು. ಸಮಾಜವಾದಿ ಚಳುವಳಿ, ಕನ್ನಡ ಚಳುವಳಿ, ಯುವಜನಸಭಾದ ಸಭೆ ಸಮಾರಂಭಗಳು. ರೈತ ಸಂಘಟನೆ ಚಳುವಳಿ, ಬಾರುಕೋಲು ಬಾರಿಸುತ್ತಾ ನಡೆಸಿದ ರ್‍ಯಾಲಿಗಳು. ಈ ಹಿಂದಿನ ಗೋಪಾಲಗೌಡರನ್ನು ನಂತರ ಕೋಣಂದೂರು ಲಿಂಗಪ್ಪನವರನ್ನೂ ಎಲಕ್ಷನ್‌ನಲ್ಲಿ ಗೆಲ್ಲಿಸಿದ ಪರಿಶ್ರಮದ ವೈಖರಿ ಎಲ್ಲವೂ ಶಾಮಣ್ಣನವರ ಜೀವನ ಚರಿತ್ರೆಯ ಬಹು ಮುಖ್ಯ ಘಟ್ಟಗಳು. ಇತ್ತೀಚೆಗಷ್ಟೆ ದಸರಾ ಉದ್ಘಾಟನೆಗೆ ಆಹ್ವಾನಿಸಿದಾಗ "ವಿಧಾನಸೌಧದಲ್ಲಿ ಕಸ ಗುಡಿಸೇನು ಆದರೆ ಅದ್ದೂರಿಯ ದಸರಾ ಉತ್ಸವವನ್ನು ಉದ್ಘಾಟಿಸುವುದಿಲ್ಲ" ವೆಂದು ಹೇಳಿದರು: "ರೈತರು ತೀವ್ರ ಸಂಕಷ್ಟದಲ್ಲಿರುವ ಸಂದರ್ಭದಲ್ಲಿ ದಸರಾ ಉದ್ಘಾಟಿಸಲು ಮನಸ್ಸಾಕ್ಷಿ ಒಪ್ಪಲಾರದು. ಅಲ್ಲದೆ ಅರಮನೆಯೊಳಗೆ ನಡೆಯುವ ರಾಜ ಸಂಪ್ರದಾಯದ ಚಟುವಟಿಕೆಗಳು ಸಂವಿಧಾನದ ಆಶಯಕ್ಕೆ ವಿರುದ್ಧವಾಗಿದ್ದು, ಈ ಕಾರಣದಿಂದ ದಸರಾ ಉಧ್ಘಾಟಿಸಲು ನಿರಾಕರಿಸಿದೆ" ಎಂಬ ನಿಲುವು ಪ್ರಜಾಪ್ರಭುತ್ವಕ್ಕೆ ಬದ್ಧವಾದ, ರೈತರ ಸಂಕಷ್ಟಕ್ಕೆ ಸದಾ ಸ್ಪಂದಿಸುವ ವ್ಯಕ್ತಿತ್ವದ ಕುರುಹಾಗಿದೆ. ಹೀಗಿರುವ ನಮ್ಮ ಶಾಮಣ್ಣ ಯಾವ ಸಾಂಸ್ಥಿಕವಾದ ಧರ್ಮ- ತತ್ವ -ಸಿದ್ಧಾಂತ ಆದರ್ಶಗಳನ್ನೂ ಹೇಳುವುದಿಲ್ಲ. ಪ್ರಕೃತಿ ಸಹಜವಾದ ಜೀವತತ್ವದ ಕಾರುಣ್ಯದ 'ತಥಾಗತ' ಮಾರ್ಗದಲ್ಲಿ:

ರೈತರ ಬವಣೆಗೆ, ದಲಿತರ ನೋವಿಗೆ
ವಿಚಾರಕ್ಕೆ ಸದಾ ಎತ್ತಿದ ದನಿ
ಸಂಗೀತ ಸಾಹಿತ್ಯದ ಬನಿ
ಸಹ್ಯಾದ್ರಿ ಬನಸಿರಿಯ
ಮುಂಜಾನೆ ಸೊಬಗಿನ ಸಿಂಫೋನಿ

ಉತ್ತರವಿಲ್ಲದ ಪ್ರಶ್ನೆ ಶಾಮಣ್ಣ

ಎಂ.ಬಿ.ನಟರಾಜ್

ಪ್ರಶ್ನೆಗಳಲ್ಲಿ ವಿವಿಧ ಜಾತಿಗಳಿವೆ. ಉತ್ತರವನ್ನು ಹೇಗಾದರೂ ಮಾಡಿ ಹೊರಡಿಸಬೇಕೆಂದು ಏನು ಮಾಡಿದರೂ ಹೊರಡಬಾರದೆಂದು, ಅಲ್ಪಸ್ವಲ್ಪ ತೊಡಕಿನ ಉತ್ತರ ಹೊರಡಬೇಕೆಂದು, ಚಕ್ಕನೆ ಸ್ಪಷ್ಟವಾಗಿ ಹೊರಡಬೇಕೆಂದು, ಉತ್ತರವೇ ರಕ್ತಬೀಜಾಸುರನಂತೆ ಪ್ರಶ್ನೆಗಳಾಗಿ ಮೇಲೇಳಬೇಕೆಂದು–ಹೀಗೆ ಪ್ರಶ್ನಾಸ್ತ್ರ ಪ್ರಯೋಗವಾಗುತ್ತದೆ. ಹಿಂದೆ, ನಾವು ಕೆಲವು ಮಬ್ಬು ವಿದ್ಯಾರ್ಥಿಗಳ ಮೇಲೆ ಈ ಅಸ್ತ್ರ ಪ್ರಯೋಗವಾಗುತ್ತಿತ್ತು. ನಾವು ಎರಡು ಮೂರು ರೀತಿಯ ವಿಧಾನವನ್ನು ಪರೀಕ್ಷಾ ಯುದ್ಧದಲ್ಲಿ ಮರು ಪ್ರಯೋಗ ಮಾಡಿ ಬರುತ್ತಿದ್ದೆವು. ನಮ್ಮ ಉತ್ತರಗಳು ಗುರುಗಳಿಗೇ ಗೊಂದಲವನ್ನು ಉಂಟು ಮಾಡಬೇಕು; ಉತ್ತರ ನಮಗೆ ತಿಳಿದಿದೆ, ಆದರೆ ಪ್ರಶ್ನೆಯೇ ಸರಿಯಿಲ್ಲ–ಎಂದು ಸಾಧಿಸಬೇಕು; ಅಥವಾ ಯಾವ ಉತ್ತರವೂ ಪರಿ ಪೂರ್ಣವಲ್ಲ, ತಿಳಿಯಿರಿ–ಎನ್ನುವಂತೆ ಖಾಲಿ ಉತ್ತರ ಪತ್ರಿಕೆಯನ್ನು (ನೀವೇ ಏನನ್ನಾದರೂ ಬರೆದು ಕೊಳ್ಳಿ ಎನ್ನುವಂತೆ) ಪ್ರಾಮಾಣಿಕವಾಗಿ ಹಿಂದಿರುಗಿಸುವುದು.

ಹೀಗೆ ನಾವು ವಿದ್ಯಾರ್ಥಿ ದೆಸೆಯಲ್ಲಿ 'ಉತ್ತರ'ದ ವಿರುದ್ಧ ದಕ್ಷಿಣದವರು ಎಂಬಂತೆ, ಪ್ರಶ್ನೆಯ ವಿರುದ್ಧ ಮೌನ ಕ್ರಾಂತಿಯನ್ನು ಮಾಡುತ್ತಿದ್ದೆವು. ಆ ಕ್ರಾಂತಿ ಈಗಲೂ ಅಲ್ಲಿಲ್ಲಿ ನಡೆಯುತ್ತಿದ್ದರೂ ಅದಕ್ಕೆ ಸರಿಯಾದ ಬೆಲೆ ಬಂದಿಲ್ಲ. ಜನಪರವಾಗಿದ್ದರೂ ಜನಪ್ರಿಯವಾಗಿಲ್ಲ! ಜನಕ್ಕೆ ಯಾವ ಕಾಲದಲ್ಲಿ ಏನು ಬೇಕೋ ಬೇಡವೋ, ಯಾವುದು ಖುಷಿಯೊ ಗೋಳೋ? ಒಟ್ಟಿನಲ್ಲಿ, ನಮ್ಮ ಆಗಿನ ಸಹಪಾಠಿ ಗೆಳೆಯರು– ಸಿದ್ಧ ಉತ್ತರದ ಭೂಪರು–ನಮ್ಮನ್ನು ಅಸ್ಪೃಶ್ಯರಂತೆ ಕಾಣುತ್ತಿದ್ದರು! ಆದರೆ ನಾವು ಹೆದರಲಿಲ್ಲ.

ಬಹಳ ದಿವಸಗಳಾದ ಮೇಲೆ, ನನ್ನ ಈ ಹಳೆಯ ಆತ್ಮಾನಂದದ ಕಾಲ ಮರುಕಳಿಸಿತು. – ಹಿರಿಯ ಗೆಳೆಯರಾದ ಕಡಿದಾಳು ಶಾಮಣ್ಣನವರನ್ನು ನೋಡಿದ ಮೇಲೆ! ಮೊದಲಿನಿಂದಲು ಅವರನ್ನು ನಾನು ಪ್ರಶ್ನೆಯಂತೆಯೇ ನೋಡಿದುದೇನು ಅವರು ಹಾಗೆಯೇ ಕಂಡರು. ಆ ಆತ್ಮಾನಂದದ ಮರುಕಳಿಕೆಯಾದರೂ ಎಂಥದು! ಶಾಮಣ್ಣನವರ ಸ್ವತಂತ್ರ ವಿಹಾರ, ಚಳವಳಿ, ಪ್ರತಿಭಟನೆ, ಮೆರವಣಿಗೆ, ಉಪವಾಸ ಸತ್ಯಾಗ್ರಹ.... ಇವೆಲ್ಲವೂ ಏರಿಳಿತ ಕ್ರಮಗಳಲ್ಲಿ ಬಂದು ಹೋಗುತ್ತಿದ್ದವು.

ನಾವೋ ಚಳವಳಿಯ ಸ್ವರೂಪ, ಕಾಲ, ಶ್ರಮವನ್ನು ಲೆಕ್ಕ ಹಾಕಿ ಅದು ಮನೆಯ ಹತ್ತಿರವೇ ಆಗಿದ್ದರೆ ಧರಣಿ ಕೂರುವುದು – ಹೀಗೆ ಅರೆಬರೆ ಚಳವಳಿಗಾರರಾಗಿದ್ದೆವು. ಆದರೆ ಶಾಮಣ್ಣ ನಮಗೆ ಪ್ರಶ್ನೆಯಾಗಿ ಕಾಣುತ್ತಿದ್ದರು– ಕಾಣುತ್ತಿದ್ದಾರೆ. ಈ 'ಪ್ರಶ್ನೆ' ಎಂಬ 'ಸೆಟ್'ಗೆ ನಾಲ್ಕು ಚಕ್ರಗಳಿವೆ. ಖಾದಿ ಜುಬ್ಬ–ಪಾಯಿಜಾಮ, ಹಸಿರು ಶಾಲು, ಬಿಳಿ ದಾಡಿ, ಮೆಲು ನಗೆ. ಈ ಸೆಟ್ಟು ಎಲ್ಲಿಗೆ ಬೇಕಾದರೂ ಸುಲಭವಾಗಿ ತೆರಳುತ್ತದೆ. ಚಳವಳಿಗಳು ಪ್ರಜಾಪ್ರಭುತ್ವದ ಮುಖ್ಯ ಅಂಗ ತಾನೆ? ಅವು ಹವ್ಯಾಸಿ ಚಳವಳಿಗಾರರಿದ್ದಿರಬಹುದು, ವೃತ್ತಿ ಚಳವಳಿಗಾರರಿದ್ದಿರಬಹುದು; ಅದರ ಮೇಲ್ನೋಟದ ಲಕ್ಷಣ ಕಂಡ ಕೂಡಲೇ ಈ 'ಸೆಟ್ಟು' ಪ್ರಾಮಾಣಿಕವಾಗಿ ಹಾಜರಾಗುತ್ತದೆ.

ನಮಗೆ, ಚಂದ್ರಗುತ್ತಿಯ ಬೆತ್ತಲೆ ಸೇವೆಯ ವಿರುದ್ಧದ ಚಳವಳಿ(೩೦.೦೩. ೧೯೮೬)ಯ ಸಂದರ್ಭದಲ್ಲಿ ಅಪಾಯದ ವಾಸನೆಗಳು ಅಲ್ಪಸ್ವಲ್ಪ ಮುಂಚಿತವಾಗಿ ತಿಳಿದಿತ್ತು. ಆದರೆ ಬೆತ್ತಲೆ ಸೇವೆಯ ಪರವಾದ ದುಷ್ಟ ಶಕ್ತಿಗಳ, ವಿಧ್ವಂಸಕರ ಕೃತ್ಯಗಳು, ಪೋಲಿಸರ ನಿಷ್ಕ್ರಿಯತೆ– ಆ ಪ್ರಮಾಣದಲ್ಲಿ ಮೇಳವಿಸುತ್ತದೆಂದು ತಿಳಿದಿರಲಿಲ್ಲ. ರೈತ ಚಳವಳಿಯ ತೀವ್ರತೆಯ ಸಂದರ್ಭದಲ್ಲಿ ಶಾಮಣ್ಣ ನಮ್ಮೊಂದಿಗೆ ಬರಲಾರರೆಂದು ತಿಳಿದಿದ್ದೆವು. ಆದರೆ ಅವರು ಹಾಜರ್! ದಿವಾಕರ ಹೆಗ್ಗಡೆ, ಕೋಡ್ಲು ವೆಂಕಟೇಶ್, ಕೆ.ಎಸ್. ಗೋಪಿನಾಥ್ ಮುಂತಾದ ಹತ್ತು–ಹನ್ನೆರಡು ಮಂದಿ ಕುಳಿತಿದ್ದ ಮೆಟಡಾರನ್ನು ವರದಾ ನದಿ ಸೇತುವೆಯ ಹತ್ತಿರವೇ ಬೆತ್ತಲೆ ಪೂಜಕರ ಒಂದು ತಂಡ ತಡೆಹಿಡಿಯಿತು. ಸೊಂಟದ ಸುತ್ತ ಕಟ್ಟಿದ್ದ ಬೇವಿನ ಸೊಪ್ಪು, ಅಡ್ಡಾದಿಡ್ಡಿ ಬಳಿದುಕೊಂಡಿದ್ದ ಅರಿಶಿನ

ಕುಂಕುಮ, ಕೆಂಪು ಕಣ್ಣುಗಳು–ಹಲ್ಲುಗಳು, ಕೈಯಲ್ಲಿ ತ್ರಿಶೂಲ... ಶಾಮಣ್ಣ ಮೆಟಡಾರಿನ ಕಿಟಕಿ ಗಾಜಿನಲ್ಲಿ ನೋಡುತ್ತ "ರೀ ಮೇಸ್ತ್ರೇ. .. ನೋಡ್ರಿ ಅವನನ್ನ" ಎನ್ನುತ್ತ ಒಬ್ಬ ಭಕ್ತನನ್ನು ತೋರಿಸಿದರು. ಅವನ ಪುರುಷಾಂಗದ ಸುತ್ತ ಯಾವುದೊ ಖಾಯಿಲೆಯ ಹೆಗ್ಗುರುತುಗಳು! ಅವನ ತೀಕ್ಷ್ಣ ಕಣ್ಣುಗಳು ಶಾಮಣ್ಣ ಮತ್ತು ಹೆಗ್ಗಡೆಯ ಮೇಲೆ, ಅವರ ದಾಡಿಯ ಮೇಲೆ! ನಾವೆಲ್ಲರೂ ಸಾವಧಾನವಾಗಿ ವಾಹನದಿಂದ ಕೆಳಗಿಳಿದವು. ಕೂಡಲೆ, ತ್ರಿಶೂಲ ಪಾಣಿ ಪುರುಷಾಮೃಗ ಶಾಮಣ್ಣನನ್ನು ಹಿಡಿದುಕೊಂಡು, ಅವನು ಆಯುಧವನ್ನು ವಿಜೃಂಭಿಸುತ್ತ "ಕೊಡು ನಿನ್ನ ಕ್ಯಾಮರಾ . . . ಬೆತ್ತಲೆ ಪೋಟೊ ಹಿಡಯಾಕೆ ಬಂದಿದಿಯಾ" ಎಂದು ಅಬ್ಬರಿಸಿದ. ಶಾಮಣ್ಣ ಕೆಮರಾವನ್ನು ಕೊರಳಿನಿಂದ ತೆಗೆಯುವಂತೆ ಮಾಡುತ್ತ, ಕ್ಷಣಮಾತ್ರದಲ್ಲಿ ಪಕ್ಕದ ಹೊಲದ ಕಡೆಗೆ ಓಡಿದರು. ದಿಕ್ಕು ತೋಚದಂತಾದ ಪುರುಷಾಮೃಗ ಅವರನ್ನು ಬೆನ್ನಟ್ಟುವಷ್ಟರಲ್ಲಿ ಅವರು ತುಂಬ ಮುಂದಿದ್ದರು. ಹೊಲದ ಕೂಳೆಯ ನಡುವೆ ದಾಪುಗಾಲು ಹಾಕುತ್ತ ಓಡುತ್ತಿದ್ದ ಶಾಮಣ್ಣನ ಗುರಿ ದೂರದಲ್ಲಿದ್ದ ಒಂದು ಗುಡಿಸಲು. ಓಟದ ಸ್ಪರ್ಧೆಯಲ್ಲಿ ಹಿಂದಿದ್ದ ಈ ಬೆತ್ತಲೆ ಭಕ್ತನ ಗುರಿ ಕ್ಯಾಮರ!.

ನಮ್ಮನ್ನು ಆವರಿಸಿದ್ದ ಬೆತ್ತಲು–ಅರೆಬೆತ್ತಲು ಭಕ್ತರ ಪಡೆಗೆ ನಮ್ಮೊಂದಿಗೆ ಹೆಚ್ಚು ಹೊತ್ತು ತಗಾದೆ ಮಾಡಲು ತಾಳ್ಮೆ ಇರಲಿಲ್ಲ. ಆದಷ್ಟು ಬೇಗ ತಮ್ಮ ಸೇವೆ ಪೂರೈಸಬೇಕಾಗಿತ್ತು. ಜಾತ್ರೆಯ ವಿವಿಧ ಕಡೆಗಳಲ್ಲಿ ನಡೆಯುತ್ತಿರುವ ಪ್ರತಿಭಟನೆಯನ್ನು ತಡೆಯಬೇಕಾಗಿತ್ತು. ಈ ಗೊಂದಲದಲ್ಲಿ ನಾವೆಲ್ಲ ದಿಕ್ಕಾಪಾಲಾಗಿ ಫೇರಿ ಕಿತ್ತೆವು.

ಆ ದಿನ ಚಂದ್ರಗುತ್ತಿಯಲ್ಲಿ ನಡೆದುದು ಬೆತ್ತಲೆ ಸೇವೆ ಪರ–ವಿರೋಧದ ಜನಯುದ್ಧ! ಅಲ್ಪಸಂಖ್ಯೆಯಲ್ಲಿದ್ದ ವಿಚಾರವಾದಿ ಸಂಘ ಸಂಸ್ಥೆಗಳು, ದಲಿತ ಸಂಘರ್ಷ ಸಮಿತಿ, ಪೋಲಿಸರು, ಪ್ರಗತಿ ಪರ ಸಂಘಟನೆಗಳು – ಇವರ ಮೇಲೆ ಬೆತ್ತಲೆ ಪಡೆಯವರ – ಬೆಂಬಲಿಗರ ಅಮಾನುಷ ಹಲ್ಲೆ. ವರದಾ ನದಿ ಸೇತುವೆಯಿಂದ ಸುಮಾರು ನಾಲ್ಕು ಕಿ.ಮೀ ದೂರದ ಚಂದ್ರಗುತ್ತಿಯವರೆಗು ಈ ರಣಾಂಗಣ ಹಬ್ಬಿತ್ತು. ಶತ್ರುಗಳು ಯಾರೊ ಮಿತ್ರರು ಯಾರೊ ಎಂದು ತಿಳಿಯದ ಕೆಟ್ಟ ಪರಿಸ್ಥಿತಿ. ಲಕ್ಷಾಂತರ ಜನ...ಜನ 'ಉಧೋ...ಉಧೋ ಗುತ್ಯವ್ವ ಉಧೋ ಉಧೋ ...' ಎಂಬ ಆವೇಶದ ಕೂಗುಗಳು.

ನಾನು, ಈ ಜನ ಪ್ರವಾಹದಲ್ಲಿ, ಹಿಂದೆಯೇ ಏಕಾಂಗಿಯಾಗಿ ಹೋಗುತ್ತಿದ್ದೆ. ನನ್ನ ಹಿಂದೆ ಯಾರೋ ಬರುತ್ತಿದ್ದಾನೆಂದು ನೋಡಿದರೆ–ಶಾಮಣ್ಣನ ಕ್ಯಾಮರಾದ 'ಗುರಿಕಾರ'! ನಾನು, ಅವನು ನಡೆಯುತ್ತಿದ್ದಂತೆಯೇ "ಯಾವ ಊರಿನವನಪ್ಪ ನೀನು?" ಕೇಳಿದೆ. "ಹಾವೇರಿ ... ರ್ರೀ ..." ಎಂದ. ಕೂಡಲೇ "ಅವನವ್ವನ..." ಎಂದು ಶಪಿಸಿದ. "ಯಾಕಪ್ಪ?" ಕೇಳಿದೆ. "ಏ ಮ್ಯಟಾಡಾರ್ನಿಲ್ಲಿ ತುಂಬ್ಕಂಡು ಬಂದಾರ

ಸಾಬ್ರುಗೀಬ್ರು ದಾಡಿ ನನ್ಮಕ್ಳು... ಅವ್ವನ ಪೂಜೆ ಬ್ಯಾಡಂತೆ ಸೂ... ಮಕ್ಳಿಗೆ! ಅವನವ್ವನ. ಕ್ಯಾಮರಾ ಕಿತ್ತು ಹುಡಿ ಮಾಡ್ತಿದ್ದೆ. ನಮ್ಮದ್ಯ ಹೆಣ್ಮಕ್ಳದ್ಯ ಬೆತ್ತಲೆ ಪೋಟೋ ಹಿಡ್ಯಾಕ ಬಂದಾನ ಮಗ" ಎನ್ನುತ್ತ ಬೇಗ ಬೇಗ ಕಾಲು ಹಾಕಿದ. ಈ ವಿಷಯವನ್ನು ಆದಷ್ಟು ಬೇಗ ಶಾಮಣ್ಣ, ಹೆಗ್ಗಡೆಗೆ ತಲುಪಿಸೋಣವೆಂದರೆ ಅವರು ದಿಕ್ಕುಪಾಲಾಗಿ ಎಲ್ಲೆಲ್ಲಿ ಓಡಾಡುತ್ತಿದ್ದರೊ... ಏನೊ!

ಸಂಜೆ ಎಲ್ಲರೂ ಸುರಕ್ಷಿತವಾಗಿ ಮೆಟಡಾರ್ ಬಳಿ ಸೇರಿದೆವು. ಒಂದು ವಿಚಾರಣಾ ಆಯೋಗವನ್ನೇ ನೇಮಿಸುವಷ್ಟರ ಮಟ್ಟಿಗೆ ನಡೆದ ಒಂದು ಕೆಟ್ಟ ಜಾತ್ರೆಯ ಅನುಭವ ಎಲ್ಲರನ್ನು ಮಂಕು ಬಡಿಸಿತ್ತು. ಆದರೆ, ಮೊದಲು ಮಾತಿನ ಗಾಳಿ ಬೀಸಿದವರೆಂದರೆ, ಶಾಮಣ್ಣ: 'ನನ್ನ ಸಾವಿರಾರು ರೂಪಾಯಿ ಕ್ಯಾಮರಾ ಉಳೀತು ನೋಡ್ರೀ...' ಎಂದರು ಸಮಾಧಾನದಿಂದ. "ನಾನು ಅವನಿಂದ ತಪ್ಪಿಸಿಕೊಳ್ಳಲು ಜೋರಾಗಿ ಓಡಿದೆ ನಿಜ. ಆದರೆ ಅವನು ಹಿಂದೆ ಬಿದ್ದುದು ಯಾಕೆ ಗೊತ್ತೇನ್ರಿ... ಮಾರಾಯ್ರೆ?" ಎಂದರು ಚೇಷ್ಟೆಯ ಧ್ವನಿಯಲ್ಲಿ, ನಗುತ್ತ. ನಾನು, ಬೆಳಿಗ್ಗೆ ಆ ದೃಶ್ಯವನ್ನು ನೋಡುತ್ತಿದ್ದರೂ ಅದರ ರಹಸ್ಯ ತಿಳಿದಿರಲಿಲ್ಲ. ಶಾಮಣ್ಣನ ಹಾಸ್ಯ ಹೇಳಿತು. "ರೀ ಮೇಸ್ಟ್ರೆ... ಆಗಾಗ್ಗೆ ಅವನನ್ನು ಹಿಂದಿರುಗಿ ನೋಡುತ್ತಿದ್ದೆ. ಒಂದು ಸತ್ಯವನ್ನು ಕಂಡುಹಿಡಿದೆ... ಪುರುಷನಾಗಲಿ, ಸ್ತ್ರೀಯಾಗಲಿ ಅವರವರ ಪ್ರಧಾನ ಅಂಗಗಳೇ ಓಟದ ಸಂದರ್ಭದಲ್ಲಿ, ಅದರಲ್ಲೂ ಬೆತ್ತಲೆಯಾಗಿ ಓಡುವ ಸಂದರ್ಭದಲ್ಲಿ, ಕೈ ಕೊಡುತ್ತವೆ... ಕಂಡ್ರೀ. ಅವು ಓಡದಂತೆ ತಡೆ ಮಾಡುತ್ತವೆ! ಅದೇ ನೊಡಿ ನನ್ನ ಕ್ಯಾಮರಾ ಉಳಿಸಿದ್ದು, ನಾನೂ ಉಳಿದಿದ್ದು" ಎಂದರು.

ಅನಂತರ ಶಾಮಣ್ಣ ಎಷ್ಟೋ ದಿನ ನಮ್ಮ ಕಣ್ಣಿಗೆ ಕಾಣಲಿಲ್ಲ. ಚೆನ್ನವೀರಪ್ಪ ಆಯೋಗದ ವಿಚಾರಣಾ ಸಂದರ್ಭದಲ್ಲೂ ಅವರು ನಮಗೆ ಕಾಣದೆ ಪ್ರಶ್ನೆಯಾದರು.

ಚಂದ್ರಗುತ್ತಿಯ ಹೋರಾಟಗಳು ನಡೆದ ಕೆಲವು ವರ್ಷಗಳ ಮುಂಚೆ (೧೯೮೧) ನಡೆದ ಒಂದು ಘಟನೆ ನೆನಪಿಗೆ ಬರುತ್ತದೆ. ಶಿವಮೊಗ್ಗದ ಶಂಕರಮಠದಲ್ಲಿ ಅತಿರುದ್ರ ಮಹಾಯಾಗದ ಸಂದರ್ಭ. ಅವೈಜ್ಞಾನಿಕವಾದ ಯಾಗಯಜ್ಞದ ಆಚರಣೆಗಳನ್ನು ಕೈ ಬಿಡಬೇಕು; ಇದರೊಂದಿಗೆ ಹಣ, ಪ್ರತಿಷ್ಠೆ, ಪಾಳೆಗಾರಿಕೆಗಳೆಲ್ಲವೂ ಒಂದು ಜಾತಿ–ಮತದೊಂದಿಗೆ ತಳುಕು ಹಾಕಿಕೊಂಡು ಕುಣಿಯುತ್ತಿವೆ; ಆದ್ದರಿಂದ ಇದನ್ನು ವಿರೋಧಿಸಬೇಕೆಂದು ಕೆಲವು ಗೆಳೆಯರೆಲ್ಲ ಸೇರಿ ಪೂರ್ವ ತಯಾರಿ ಸಭೆ ನಡೆಸಿದರು.

ಮಾರನೆಯ ದಿನ, ಮಹಾವೀರ ವೃತ್ತದಿಂದ ಹೊರಟ ಪ್ರತಿಭಟನಾ ಮೆರವಣಿಗೆ ಯಲ್ಲಿ ಇದ್ದವರು ಇಪ್ಪತ್ತು ಮಂದಿ. ಆ ದಿನವೂ ಶಾಮಣ್ಣ, ಯಾವ ಕಾರಣದಿಂದಲೋ ಈ ಮೆರವಣಿಗೆಗ ಬಂದಿರಲಿಲ್ಲ. ಯಾಗ–ಯಜ್ಞದ ವಿರುದ್ಧ ಘೋಷಣೆ ಹಾಕುತ್ತ ಹತ್ತಿಪ್ಪತ್ತು ಹೆಜ್ಜೆ ಹೊರಟಿರಬಹುದು ಅಷ್ಟೆ... ಶಿವಮೊಗ್ಗದ ಒಂದು ಪ್ರತಿಷ್ಠಿತ ಫೌಂಡ್ರಿ

ಕಾರ್ಮಿಕರನ್ನು, ಸ್ಥಳೀಯ ಬೀಡಾಡಿ ರೌಡಿಗಳನ್ನು ಪ್ರೇರೇಪಿಸಿ ನಮ್ಮ ಮೇಲೆ ಛೂ ಬಿಡಲು ತಯಾರು ಮಾಡಿದ್ದುದು ನಮಗೆ ತಿಳಿದಿರಲಿಲ್ಲ. ಮತ್ತದೇ ಹಲ್ಲೆ, ಹೊಡೆದಾಟಗಳು, ಅನಾಗರಿಕ ವರ್ತನೆಗಳು, ಇದೆಲ್ಲ ರಾಜ್ಯಾದ್ಯಂತ ಪತ್ರಿಕೆಗಳಲ್ಲಿ ಸುದ್ದಿಯಾದುದು; ಸಾರ್ವಜನಿಕರಲ್ಲಿ ಯಾಗದ ಪರ-ವಿರೋಧದ ಚರ್ಚೆಯಾದುದು; ಒಂದು ರೀತಿಯಲ್ಲಿ ಒಳ್ಳೆಯದೆ ಆಯಿತು. ಯಾಜಕರಿಗೆ (ಯಜ್ಞ ಮಾಡುವವರಿಗೆ) ತಮ್ಮ ಆಚರಣೆಯ ಮಿತಿ ಏನೆಂಬುದು ತಿಳಿಯಿತು.

ಈ ಸಂದರ್ಭದಲ್ಲಿ ಶಾಮಣ್ಣ ನಮ್ಮೊಂದಿಗೆ ಇದ್ದಿದ್ದರೆ ಚೆನ್ನಾಗಿತ್ತೆಂದು ನಾವೆಲ್ಲ ಗೊಣಗುಟ್ಟಿರಬಹುದು. ಆದರೆ ಒಬ್ಬ ವ್ಯಕ್ತಿಯ ಹಾಜರಾತಿಗಿಂತ ಒಟ್ಟು ಸಂಘಟನೆಯ ಶಕ್ತಿಯೇನೆಂಬುದನ್ನು ನಾವು ಯೋಚಿಸುವುದಿಲ್ಲ. ರಾಜ್ಯವ್ಯಾಪಿ ದೊರೆತ ಬೆಂಬಲದಿಂದ ಈ ಬಗೆಗೆ, ಒಂದು ದಿನದ ವಿಚಾರ ಸಂಕಿರಣವನ್ನು (ಆಗಿನ ನಗರ ಸಭಾಧ್ಯಕ್ಷ, ಸಮಾಜವಾದಿ ಎಂ. ನಾಗೇಂದ್ರರಾವ್ ಸಹಕಾರದಿಂದ) ನಗರ ಸಭಾ ಭವನದ ಸಭಾಂಗಣದಲ್ಲಿ ನಡೆಸಲಾಯಿತು. ಡಾ. ಜಿ.ರಾಮಕೃಷ್ಣ, ಪ್ರೊ. ಧರ್ಮಲಿಂಗಂ, ಪ್ರೊ. ಮೀರಾ ಚಕ್ರವರ್ತಿ, ಪ್ರೊ. ಬಿ. ಕೃಷ್ಣಪ್ಪ, ಪ್ರೊ. ಎನ್ ನರಸಿಂಹಯ್ಯ ಮುಂತಾದವರು ಮಾತನಾಡಿದರು. ಯಾಗ-ಯಜ್ಞದೊಂದಿಗೆ ತಳುಕು ಹಾಕಿಕೊಂಡಿರುವ ಮೌಢ್ಯ, ಶೋಷಣೆ, ಹಳೆಯ ಕಾಲದ ರಾಜನಿಷ್ಠೆಯ ಅಟ್ಟಹಾಸ, ಪುರೋಹಿತಶಾಹಿಯ ಅಟ್ಟಹಾಸ, ಭಕ್ತಿ ಪಂಥದ ನಿರಾಕರಣೆ- ಈ ಎಲ್ಲ ವಿಚಾರಗಳನ್ನು ವಿವಿಧ ಮಗ್ಗುಲುಗಳಲ್ಲಿ ಅದ್ಭುತವಾಗಿ ವಿಶ್ಲೇಷಿಸಿದರು. ಸಭೆಯಲ್ಲಿ ತುಂಬಿದ ಜನ.

ಶಾಮಣ್ಣ ಬರಲಿಲ್ಲವಲ್ಲ, ಯಾಕೆ? ಎಂದು ನಾವೆಲ್ಲ ಪರಿತಪಿಸುತ್ತಿದ್ದೆವು. ಅಷ್ಟರಲ್ಲೇ ಆ ಸಭಾ ಭವನದ ಅನೇಕ ಮೆಟ್ಟಿಲುಗಳನ್ನು ಹತ್ತಿ ಬರುತ್ತಿದ್ದಾರೆ, ಕೆಮರಾಧಾರಿ ಶಾಮಣ್ಣ! ಅನೇಕ ಫೋಟೋಗಳನ್ನು ಕ್ಲಿಕ್ಕಿಸಿದರು. ಎಲ್ಲರಿಗೂ ಅವರು ಬಂದುದು ಖುಷಿಯಾಯಿತು. ಆದರೆ, ಅವರು 'ಇನ್ನಾವುದೊ ಕಾರ್ಯಕ್ರಮದಲ್ಲಿ ಫೋಟೊ ತೆಗೆಯುವುದಿದೆ' ಎನ್ನುವಂತೆ ಕೂಡಲೆ ಹೊರಟು ಬಿಟ್ಟರು.

ಇರಲಿ. ಇದಾಗಿ ಅನೇಕ ವರ್ಷಗಳು ಉರುಳಿದವು. ಆ ಯಾಗದ ಪ್ರತಿಭಟನಾ ಕಾರರ ಮೇಲಿನ ಹಲ್ಲೆಗೆ ಮುಖ್ಯ ಕಾರಣಕರ್ತನಾದ ಒಬ್ಬ ಶ್ರೀಮಂತನ ಭವ್ಯಭವನಕ್ಕೆ ಹೋಗಿ, ಒಂದು ಸಾಂಸ್ಕೃತಿಕ ಕಾರ್ಯಕ್ರಮಕ್ಕಾಗಿ ವಂತಿಗೆಯನ್ನು ಕೇಳಲು ಹೋಗುತ್ತಾರೆ ಶಾಮಣ್ಣ! ಅವರು ಸಾಕಷ್ಟು ವಂತಿಗೆಯನ್ನು ನೀಡಿರಬಹುದು. ಆ ಸಂಗೀತ ಕಾರ್ಯಕ್ರಮ ನಡೆಯಲು ಅದರಿಂದ ಸಹಾಯವೂ ಆಗಿರಬಹುದು. ಆದರೆ ಹಿಂದೊಂದು ಕಾಲದಲ್ಲಿ ನಮ್ಮ ಮೇಲಿನ ಆಕ್ರಮಣಕ್ಕೆ ಕಾರಣಕರ್ತನಾಗಿದ್ದ ವ್ಯಕ್ತಿಯ ಮನೆಗೆ ಯಾವ ಸಂಕೋಚದಲ್ಲಿ ಮುಜುಗರವೂ ಇಲ್ಲದೆ ಹಣ ಕೇಳಲು ಹೋದುದು ಸರಿಯೆ? ಅಥವಾ ತಮ್ಮ ವಿರೋಧಿಗಳಲ್ಲು ಔದಾರ್ಯದ ಗುಣವನ್ನು

ನೋಡುವ ವಿಶ್ವಾಸವೆ? ಅಥವಾ ಇಂತಹ ವಿಷಯಗಳಲ್ಲಿ ಯಾರೂ ಶತ್ರುಗಳಲ್ಲ, ಎಲ್ಲರನ್ನು ವಿಶಾಲ ಮನಸ್ಸಿನಿಂದ ನೋಡಬೇಕೆಂಬುದೆ? ಕಾರ್ಯಕ್ರಮ ಯಶಸ್ವಿಯಾಗಿ ನಡೆಯಬೇಕು, ಅದಕ್ಕೆ ಸಾಕಷ್ಟು ಹಣ ಹೊಂದಿಸಬೇಕು – ಎಂಬ ಚೌಕಟ್ಟಿನಲ್ಲಿ ನಿಭಾಯಿಸುವ ಒಂದು ತಂತ್ರವೆ?

ಈ ಬಗ್ಗೆ ನಾವು ಗೆಳೆಯರು ಅಲ್ಪಸ್ವಲ್ಪ ಚರ್ಚಿಸಿ 'ಏ... ಶಾಮಣ್ಣನ ಸ್ವಭಾವವೇ ಹಾಗೆ' ಎಂದು ಸುಮ್ಮನಾದೆವು.

ಆದರೆ ಶಾಮಣ್ಣನವರ ಬಗೆಗೆ ಕುತೂಹಲವೂ, ಪ್ರಶ್ನೆಯೂ ಉಂಟಾಗುವುದು ಸಹಜ. ಎಲ್ಲರೊಂದಿಗೆ ಸರಳವಾಗಿ ಬೆರೆಯುವುದು, ಕಾರ್ಯಕ್ರಮಗಳಲ್ಲಿ ಭಾಗಿಯಾಗುವುದು, ಚಳುವಳಿಗಳಲ್ಲಿ ಕೆಮರಾದ ಛಾಯಾಚಿತ್ರದ ಛಾಪು ಮೂಡಿಸುವುದು, ಇತ್ತೀಚೆಗೆ – ಕೊಳಲು ನುಡಿಸುವುದೊ ಅಥವಾ ಹಾಡುವುದೊ... ಹಳ್ಳಿಯ ಹುಡುಗರೊ ಅಥವಾ ಸಂಕಷ್ಟದಲ್ಲಿ ಇರುವವರಿಗೆ ಧೈರ್ಯ ತುಂಬಿ ನೆರವಾಗುವುದೊ – ಹೀಗೆಲ್ಲ ಅವರು ಸಂಚರಿಸುತ್ತಲೇ ಇರುತ್ತಾರೆ. ಅವರದು '೧೦೮' ಅಂಬುಲೆನ್ಸ್ ರೀತಿ!

ಅವರ ಸ್ವಭಾವದ ವೈಪರೀತ್ಯವನ್ನು ಅನೇಕರು 'ಏ... ಅವರದು ರಾಜಿಯಾಗುವ ಮನೋಭಾವ' ಎಂದು ವಿಶ್ಲೇಷಿಸುತ್ತಾರೆ. ಒಂದು ದಿನ, ನಾವು ಗೆಳೆಯರೆಲ್ಲ ಮಾತನಾಡುತ್ತಿರುವಾಗ, ಆರ್.ಎಸ್.ಎಸ್.ನವರ ಉಪಟಳದ ಬಗ್ಗೆ 'ಕೆರಳಿದ' ಶಾಮಣ್ಣ "ರೀ... ನಮ್ಮ ಮೇಲೆ ಕೈಹಾಕಿದ ಆ ಕಿಡಿಗೇಡಿಗಳ ವಿರುದ್ಧ ನಾವು ಯಾವಾಗ ರೀ ಸೇಡು ತೀರಿಸಿಕೊಳ್ಳೋದು...?" ಎನ್ನುತ್ತ ಬೇಸರದಿಂದ, ಅಸಹಾಯಕತೆಯಿಂದ ಹೊರಟರು. ಮತ್ತೆ ಎಷ್ಟೋ ದಿನ ಅವರು ಭೇಟಿಯಾಗಲಿಲ್ಲ.

ಶಾಮಣ್ಣನವರಿಗೆ ಗುರಿ ಯಾವುದೋ...? ಅವರಿಗೆ ಅವರದೇ ಆದ ದಾರಿ, ಅವರದೇ ಆದ ನಡಿಗೆ!

ಶಾಮಣ್ಣನೆಂಬ ನೇಗಿಲಯೋಗಿ

ಇಂದಿರಾ ಕೃಷ್ಣಪ್ಪ

ನನ್ನ ವಿವಾಹಪೂರ್ವದಲ್ಲಿ ಕೃಷ್ಣಪ್ಪ ನನಗೆ ಬರೆದ ಪತ್ರದಲ್ಲಿ, ಸಮಾಜವಾದಿ ಯುವಜನಸಭಾದ ವಿಚಾರಗಳನ್ನು ಬರೆಯುತ್ತಾ, ತೇಜಸ್ವಿ, ನಂಜುಂಡಸ್ವಾಮಿ, ರಾಮದಾಸ್ ಮತ್ತು ಕಡಿದಾಳ್ ಶಾಮಣ್ಣನವರನ್ನು ಪ್ರಸ್ತಾಪಿಸಿದ್ದರು. ಸಾಮಾಜಿಕ ವ್ಯವಸ್ಥೆಯ ಬದಲಾವಣೆಗಾಗಿ ಕ್ರಿಯಾಶೀಲರಾಗಿರುವ ಇವರನ್ನೆಲ್ಲಾ ನೋಡಬೇಕು–ಮಾತನಾಡಿಸಬೇಕೆಂಬ ಹಂಬಲ ನನ್ನಲ್ಲಿ ಆಗಲೇ ಹುಟ್ಟಿತ್ತು. ಆ ಅವಕಾಶ ನಮ್ಮ ವಿವಾಹದ ನಂತರ, ಮೂಡಿಗೆರೆಯಲ್ಲಿ ಭದ್ರಾವತಿಯ ಶಾರದಾ–ಶಿವಪ್ರಸಾದ್‌ರವರ ಅಂತರ್ಜಾತೀಯ ವಿವಾಹದ–ವಿವಾದದ ಸಂದರ್ಭದಲ್ಲಿ ಬಂದಿತ್ತು. ನಂತರದಲ್ಲಿ ೧೯೭೭–೭೮ರ ಸಾಲು ಇರಬಹುದು. ನಾನು–ಕೃಷ್ಣಪ್ಪ ಇಬ್ಬರು ಪುಟ್ಟ ಮಕ್ಕಳೊಂದಿಗೆ, ಭಗವತಿಕೆರೆಗೆ ಹೋಗಿದ್ದೆವು. ಹೊಸದಾಗಿ ಕಟ್ಟಿಸಿದ ಮನೆ, ಮನೆ ಸುತ್ತಲಿನ ಹಸಿರು ವನ, ಶ್ರೀದೇವಿಯವರ ಹೊಸರುಚಿ, ಅಕ್ಕರೆ–ಸಕ್ಕರೆ ಬೆರೆತ ಶಾಮಣ್ಣನವರ ಸರೋದ್ ಸ್ವರನಿನಾದ, ಕೃಷ್ಣಪ್ಪನವರ ಸುಮಧುರಗಾನ ಸ್ವರ್ಗಕ್ಕೆ ಕಿಚ್ಚು ಹಚ್ಚೆಂದಿತ್ತು. ಮನೆಗೆ

ಆತುಕೊಂಡಿರುವ ಗೋಶಾಲೆಯಲ್ಲಿನ ದನಕರುಗಳ – 'ಅಂಬಾ' ಎಂಬ ಆಲಾಪನೆ, ಹೊರಗೆ ಗಸ್ತು ತಿರುಗುವ ಘಟ್ವಾನಿ ನಾಯಿ ಮತ್ತು ಅದರ ನಾಲ್ಕಾರು ಬಳಗದ ತಾಳಮದ್ದಲೆ, 'ಕುಹೂಕುಹೂ' ಎಂಬ ಧ್ವನಿಗೆ ಮಾರ್ಧ್ವನಿಯನ್ನು ಕೂಡಿಸುವ ಕೋಗಿಲೆಗಳ ನಡುವೆ ಶ್ರೀದೇವಿ ದಂಪತಿಗಳು ಬಲು ಖುಷ್ ಅಂದುಕೊಂಡೆ. ಮನೆ ಮುಂದಿನ ಹೂ–ತರಕಾರಿ ತೋಟ– ಕಬ್ಬಿನ ಗದ್ದೆ ಬೇಲಿಗಳಿಲ್ಲದ ಜಮೀನನ್ನು ಸುತ್ತುವಾಗ, ಶಾಮಣ್ಣ ಅನೇಕ ಸ್ವಾರಸ್ಯಕರವಾದ ಘಟನೆಗಳನ್ನು ಹೇಳಿದ್ದರು. ಭಗವತಿಕೆರೆಯಲ್ಲಿ ಜಮೀನು ಕೊಳ್ಳಲು ಒದಗಿದ ಸಂದರ್ಭ, ಅಲ್ಲೊಂದು ಪುಟ್ಟ ಗುಡಿಸಲು ಹಾಕಿದ್ದು, ಮಳೆಗಾಲದಲ್ಲಿ ಅದು ನೆರಿಕೆ ಮುರುಕೊಂಡು ಬಿದ್ದು ಹೋಗಿದ್ದು, ಕಾರ್ಯನಿಮಿತ್ತ ತೇಜಸ್ವಿ ರಾಜೇಶ್ವರಿ ಸಮೇತ ಮನೆಗೆ ಬಂದಾಗ, "ಶಾಮಣ್ಣ, ನೀವು ಕಾಡುಮನುಷ್ಯರೇ ಕಂಡ್ರಿ ಇಂಥ ವ್ಯವಸ್ಥೆಲೀ ಹೆಂಗ್ರಿ ಬದುಕ್ತೀರಾ?" ಎಂದು ಬಯ್ದದ್ದು, ಭತ್ತ–ಆಲೂಗೆಡ್ಡೆ ಬೆಳೆದದ್ದು, ಸಾಲದಿಂದ ಟಿಲ್ಲರ್ ಕೊಂಡದ್ದು, ಬೆಳೆ ಸಾಲ, ನಿರಂತರ ಸಾಲದ ರೈತರ ಬದುಕನ್ನು ಶಾಮಣ್ಣ ಹೇಳುತ್ತಾ ಸಾಗಿದ್ದರು. ಕೃಷಿ ಕಾರ್ಮಿಕರ ಮನೆ ಹತ್ತಿರ ಬರುತ್ತಿದ್ದಂತೆ, "ಅಯ್ಯಾವರೇ"– ಎಂದು ಬಂದ ಅವರೆಲ್ಲರೊಂದಿಗೆ, ಶಾಮಣ್ಣ ನಮ್ಮ ಪರಿಚಯ ಹೇಳಿದ್ದರು. ಕತ್ತಲಾವರಿಸುವ ಮುನ್ನ ಮನೆ ಸೇರಿಕೊಳ್ಳಬೇಕೆಂದು 'ಬೇಗ ಬೇಗ ಹೆಜ್ಜೆ ಹಾಕಿ' ಎಂದು ಆತುರಾತುರದಿಂದ ಮನೆಗೆ ವಾಪಸ್ ಕರೆತಂದಿದ್ದರು. "ಇಲ್ಲಿ ಕತ್ತಲಾವರಿಸುತ್ತಿದ್ದಂತೆ, ಚಿರತೆ, ಕರಡಿ, ಕಾಡೆಮ್ಮೆ ಕಾಟ, ಜೀರುಂಡೆಗಳು – ಮುಖಕ್ಕೆ ಮುತ್ತಿಕೊಳ್ಳುತ್ತವೆ. ರಾತ್ರಿ ಸರಿಹೊತ್ತಲ್ಲಿ ನರಿ ಊಳಿಡುವ ಸದ್ದೂ ಕೇಳಿಸಬಹುದು. ನೀವೇನು ಗಾಬರಿಯಾಗುವುದೂ ಬೇಡ" ಎಂದು ಅತಿ ಸಾಮಾನ್ಯ ವಿಚಾರವೆಂಬಂತೆ ಹೇಳಿದ್ದರೂ, ನಮ್ಮ ಆತಂಕ ಕಡಿಮೆಯಾಗಲಿಲ್ಲ. ಶ್ರೀದೇವಿಯವರಿಗೆ 'ನೀವ್ಹೇಗೆ ಇಲ್ಲಿದ್ದೀರಿ? ಭಯವಾಗಲ್ವೆ?' ಎಂಬ ಪ್ರಶ್ನೆಗಳನ್ನು ಮುಂದಿಟ್ಟಿದ್ದೆ. 'ಜಮೀನು–ಮನೆ ಕೆಲಸದೊಳಗೆ, ಭಯ ಪಡಲು ವೇಳೆಯಲ್ಲಿದೆ? ರಾತ್ರಿ ಹೊತ್ತಲ್ಲಿ ಮಾತ್ರ ಕರಡಿ, ಕಾಡೆಮ್ಮೆಗಳ ಕೂಗಾಟ, ನಾಯಿ ಹಿಡಿದೋಡುವ ಚಿರತೆಯ ನಾಗಾಲೋಟ, ಬೆಕ್ಕಸಬೆರಗಾಗಿಸಿದ್ದು, ಅದಕ್ಕೆ ತಕ್ಕಂತ ಬಂದೋಬಸ್ತು ಮಾಡಿದ್ದು, ಬೋನು ತರಿಸಿ, ಚಿರತೆ ಹಿಡಿಸಿದ ಸತ್ಯಕಥೆಗಳನ್ನು ಬಿಚ್ಚಿಟ್ಟಿದ್ದರು. ಆಗ ನನಗೆ ಶಿವರಾಮ ಕಾರಂತರ "ಚಿಗುರಿದ ಕನಸು" ಕಾದಂಬರಿಯ ಅನೇಕ ಘಟನೆಗಳು ನೆನಪಿಗೆ ಬಂದವು.

ರಾತ್ರಿ ಊಟದ ಬಳಿಕ ಮನೆಯ ಮುಂಭಾಗದಲ್ಲಿ ವಾಚಾನಾಲಯವೂ, ಅತಿಥಿ ಕೊಠಡಿಯೂ, ಸಂಗೀತ ಆಲಯವೂ ಎಲ್ಲವೂ ಆಗಿದ್ದ ಕೊಠಡಿಯಲ್ಲಿ ಸೇರಿದ್ದೆವು. ಕಳೆದ ದಿನಗಳ ಮೆಲುಕು, ವರ್ತಮಾನದ ಸವಾಲುಗಳನ್ನು ಮಾತನಾಡುತ್ತಾ ಶಾಮಣ್ಣ ಸರೋದ್ ಕೈಗೆ ತೆಗೆದುಕೊಂಡರು. ಇವರ ಸಂಗೀತ ಕಲಿಕೆಯ ವಿಚಾರವೇ

ತಿಳಿಯದ ನಾನು ಆಶ್ಚರ್ಯಚಕಿತಳಾದೆ. ಸರೋದ್ ನಾದ ಮನಸ್ಸನ್ನು ಸುಪ್ತ ಸಾಗರಕ್ಕೆ ಕೊಂಡೊಯ್ಯುವ ಮಾಧುರ್ಯ ಹೊಂದಿದೆ. ಒಂದೆರಡು ಹಾಡುಗಳನ್ನು ಶಾಮಣ್ಣ ನುಡಿಸಿದರು. ನಂತರದಲ್ಲಿ, ಕೃಷ್ಣಪ್ಪನವರು "ಓ ನನ್ನ ಚೇತನ" ಹಾಗೂ ಬೇಂದ್ರೆಯವರ "ಇಳಿದು ಬಾ ತಾಯೆ ಇಳಿದು ಬಾ" ಗೀತೆಗಳನ್ನು ಹಾಡಿದರು. ಮುಂದಿನ ಮಾತುಕತೆಯಲ್ಲಿ, ಅವರ ವಿಶಿಷ್ಟ ದಂತವಾದ್ಯ ಪ್ರದರ್ಶನ. ಕಾಲೇಜಿನ ಆರ್ಕೆಸ್ಟ್ರಾ ತಂಡ, ಸರೋದ್ ಕಲಿಕೆಗಾಗಿ ಮುಂಬಯಿನ ಪಂ.ಅಲಿ ಅಕ್ಬರ್ ಖಾನ್‌ರವರ ಶಿಷ್ಯತ್ವ, ಮರಳಿ ಮೈಸೂರಿನ ರಾಜೀವ್ ತಾರಾನಾಥ್‌ನವರ ಶಿಷ್ಯತ್ವ, ಸ್ವಾರಸ್ಯಕರ ಸಂಗೀತ ಪಯಣ ಕೇಳುತ್ತಾ, ರಾತ್ರಿ ಕಳೆದು ಹೋಗುತ್ತಿದ್ದುದರ ಪರಿವೆ ಆಗಲಿಲ್ಲ. ಇವರ ಸಂಗೀತದ ಖಯಾಲಿ, ಮೃದಂಗ, ಖಂಜರದಿಂದ ಆರಂಭವಾಗಿ, ತಬಲ, ಡೋಲಕ್, ಶಹನಾಯ್, ಕೊಳಲುಗಳಲ್ಲಿ ಸುತ್ತಿ ಸುಳಿದಾಡಿ, ಸರೋದ್‌ನಲ್ಲಿ ಸಪ್ತಸ್ವರಗಳಾಗಿ ಮಿಡಿಯುತ್ತಿರುವುದನ್ನು ಇಂದಿಗೂ ಕಾಣಬಹುದು. ಶ್ರೀದೇವಿ – "ಈ ಮಾತುಕತೆ, ಹಾಡು, ಸಿತಾರ್‌ಗಳಲ್ಲಿ ಮುಳುಗಿದರೆ, ಬೆಳಕು ಹರಿಯುವುದೇ ತಿಳಿಯುವುದಿಲ್ಲ, ಬನ್ನಿ ಬನ್ನಿ ಮಲಗಿ" ಎಂದು ಗೋಷ್ಠಿಯನ್ನು ಬರಕಾಸ್ತ್ ಮಾಡಿದ್ದರು.

ಮರುದಿನ ಮತ್ತೊಂದು ಸುತ್ತು ಜಮೀನು, ಊರ ಕಡೆ ಹೊರಟೆವು. ನಮ್ಮೊಂದಿಗೆ ಘಟ್ವಾನಿ ನಾಯಿಯೂ, ಅದರ ಸಂಗಾತಿಗಳೂ ಹೊರಟವು. ಇವರ ಮನೆಯಿಂದ ಮುಖ್ಯ ಹೆದ್ದಾರಿ ತಲುಪಲು ಸರಿಯಾದ ರಸ್ತೆ ಇರಲಿಲ್ಲ. ಕಾಲುದಾರಿಯಲ್ಲಿ ನಡೆದು ಶಾಲೆಯ ಬಳಿ ಬಂದೆವು. ಮಾಸ್ತರು ನಮ್ಮನ್ನು ಆದರದಿಂದ ಬರಮಾಡಿಕೊಂಡರು. ಮಾಸ್ತರು ಶಾಮಣ್ಣನವರು ಈ ಶಾಲೆಯನ್ನು ತರಲು ಅಲೆದಾಡಿದ್ದನ್ನು ಹೇಳುತ್ತಿದ್ದಂತೆ, ಶಾಮಣ್ಣ–"ಅದು ನಮ್ಮ ಕೆಲಸ ಅಲ್ವೇನ್ರಿ, ಕೃಷ್ಣಪ್ಪ ಅವರಿಗೆ ಗೊತ್ತು ಶಾಲೆ ಮಾಡಲಿಕ್ಕೆ ಎಷ್ಟು ಕಷ್ಟ ಅಂತ" ಎಂದು ತಮ್ಮ ಶ್ರಮವನ್ನು ಉದಾತ್ತಗೊಳಿಸುವುದನ್ನು ನಯವಾಗಿ ತಳ್ಳಿಹಾಕಿದರು. ಅವರಿಂದ ಬೀಳ್ಕೊಂಡು ವಾಪಾಸಾಗುತ್ತಾ, ಶಾಮಣ್ಣ, "ಮೊದ್ಲು, ಇಲ್ಲಿ ಯಾರೂ ಜನಾನೇ ಇರಲಿಲ್ಲ, ಕೃಷಿ ಕೆಲಸಕ್ಕೆ ಬಂದೋರನ್ನ ಇಲ್ಲಿ ಉಳಿಸಿಕೊಂಡಿದ್ದಕ್ಕೆ.. ಇದೊಂದು ಗ್ರಾಮ ಅಂತ ಆಯ್ತು ನೋಡಿ" ಎಂದು ಮಾತು ಮುಂದುವರಿಸುತ್ತಿದ್ದುದನ್ನು ತಡೆದು, ಕೃಷ್ಣಪ್ಪ– "ಅದೇ ಒಳ್ಳೇದಾಯ್ತು ಅಂತ, ನೀವು – "ನಾ ನಿನಗೆ, ನೀ ನನಗೆ ಜೇನಾಗುವಾ, ರಸದೇವಗಂಗೆಯೊಳು ಮೀನಾಗುವಾ" ಅಂತ ಹಾಡ್ಕೊಂಡು ಸ್ವತಂತ್ರ ಹಕ್ಕಿಗಳಾಗಿ ಹಾರಾಡ್ತಾ ಇದ್ರಿ" – ಅಂತ ಹಾಸ್ಯ ಮಾಡಿದ್ರು. ಆದಾಗ್ಯೂ ದಂಪತಿಗಳಿಬ್ಬರೂ ಬೇಸಾಯದೊಂದಿಗೆ ಬದುಕು ಬೆಸೆದುಕೊಂಡು, ನಿಸರ್ಗದೊಡನಾಟದಲ್ಲಿ ಜೀವನ ಚಿತ್ತಾರವನ್ನು ಚಿತ್ರಿಸಿಕೊಂಡದ್ದು ಅನನ್ಯ ಜೀವನಗಾಥೆಯಾಗಿ ಕಂಡು ಬಂದಿತ್ತು.

ಶಾಮಣ್ಣನವರು ಒಮ್ಮೆ ನಾನಿದ್ದ ಶಿವಮೊಗ್ಗ ನಗರಾಭಿವೃದ್ಧಿ ಪ್ರಾಧಿಕಾರದ ಕಛೇರಿಗೆ ಬಂದಿದ್ದರು. ಕಛೇರಿ ಕೆಲಸ, ಸಂಘಟನೆ, ಇತ್ಯಾದಿ ವಿಷಯಗಳನ್ನು

ಮಾತನಾಡುತ್ತಿರುವಂತೆ, ಅವರ ಕೈಲಿದ್ದ ಕ್ಯಾಮರ ನನ್ನನ್ನು ಕ್ಲಿಕಿಸಿದ್ದು, ಅರಿವಿಗೆ ಬರಲೇ ಇಲ್ಲ. ಮತ್ತೊಂದು ದಿನ ಬಂದು ಮೂರ್ನಾಲ್ಕು ಫೋಟೋಗಳನ್ನು ಕೊಟ್ಟಾಗಲೇ ಅವರು ನನ್ನ ಫೋಟೋ ತೆಗೆದಿದ್ದಾರೆಂದು ತಿಳಿಯಿತು. ಕಛೇರಿ ಕೆಲಸದಲ್ಲಿ ನಿರತಳಾಗಿರುವುದು, ನಗುತ್ತಾ ಮಾತನಾಡುತ್ತಿರುವುದು –ಎಲ್ಲ ನೈಜ ಫೋಟೋಗಳಾಗಿದ್ದುವು. ರೈತ ಸಂಘದ ಮಂಚೂಣಿನಾಯಕರಾಗಿದ್ದಾಗ್ಯೂ ಶಾಮಣ್ಣನವರ ಬಹು ಸಹಜ ನಡವಳಿಕೆಗಳು ಅವರನ್ನು ಆತ್ಮೀಯರನ್ನಾಗಿಸುತ್ತಿತ್ತು. ಆ ಫೋಟೋಗಳು ಇಂದಿಗೂ ನನ್ನ ಬಳಿ ಇವೆ.

ಶ್ರೀ ಹೆಚ್. ಎಸ್. ರುದ್ರಪ್ಪ, ಎನ್.ಡಿ ಸುಂದರೇಶ್ ಮತ್ತು ಕಡಿದಾಳ್ ಶಾಮಣ್ಣ ನವರು ರೈತ ಸಮುದಾಯವನ್ನು ಕಳ್ಳುಬಳ್ಳಿಯ ಭಾವ ಬಂಧದಿಂದ ಬೆಸೆದಿದ್ದುದರಿಂದ ಶಿವಮೊಗ್ಗಾ ಜಿಲ್ಲೆಯಲ್ಲಿ ರೈತ ಚಳುವಳಿ ಆರಂಭದಿಂದಲೂ ಸಶಕ್ತವಾಗಿ ಬೆಳೆದಿತ್ತು. ಹೀಗಿದ್ದೂ, ನಾಗಸಮುದ್ರ ಗೋಲಿಬಾರ್ ಪ್ರಕರಣವು ಚಳುವಳಿಯ ನಡೆಯಲ್ಲಿ ದುರಂತ ಅಧ್ಯಾಯವಾಗಿಯೂ, ನಿರ್ಣಾಯಕ ಘಟ್ಟವಾಗಿಯೂ ಪರಿಣಮಿಸಿತ್ತು. ಇದೊಂದು "ತಪ್ಪಿಸಬಹುದಾಗಿದ್ದ ಹತ್ಯಾಕಾಂಡ" ಎಂಬ ಕೊರಗು ಶಾಮಣ್ಣನವರ ಮನದಲ್ಲಿ ಈಗಲೂ ತುಂಬಿದೆ. ದಸಂಸದ ಮುಖವಾಣಿಯಾದ ಪಂಚಮ ಪತ್ರಿಕೆಯವರು ಈ ಗೋಲಿಬಾರ್ ಪ್ರಕರಣದ ವರದಿಗಾಗಿ ಪ್ರೊ. ಕೃಷ್ಣಪ್ಪನವರನ್ನು ಕೇಳಿಕೊಂಡಿತ್ತು. ಬಿ.ಕೆ.ಯವರು, ನಾಗಸಮುದ್ರ, ಸಂನ್ಯಾಸಿಕೋಡುಮಗ್ಗೆ, ಮಂಗೋಟೆ, ಹನುಮಂತಾಪುರಗಳಲ್ಲಿ ಪೋಲೀಸ್ ದೌರ್ಜನ್ಯದ ಪಳಿಯುಳಿಕೆಗಳು- ಸುಟ್ಟು ಕರಕಲಾದ ಜೀಪು-ವ್ಯಾನುಗಳು, ಕಲ್ಲು-ಇಟ್ಟಿಗೆ –ಜಲ್ಲಿಗಳ ತೂರಾಟಗಳು, ಪೋಲಿಸರ ಗುಂಡೇಟಿಗೆ ಬಲಿಯಾದ ರೈತ ಮಲ್ಲಪ್ಪ, ಬಸವನಗೌಡ ಹಾಗೂ ಬಾಲಕ ನಟರಾಜನ ವೀರಗಲ್ಲು ಸಮಾಧಿ ವೀಕ್ಷಣೆ, ಗುಂಡೇಟಿನಿಂದ ಗಾಯಾಳುಗಳಾದವರು, ಸ್ಥಳೀಯರು ಹಾಗೂ ಸಂಘಟನೆಗಳ ಮುಖಂಡರುಗಳೊಂದಿಗೆ ಮಾತುಕತೆ ನಡೆಸಿ, 'ಪಂಚಮ' ಪತ್ರಿಕೆಯಲ್ಲಿ "ನಾಗಸಮುದ್ರ ಗೋಲಿಬಾರ್ ಪ್ರಕರಣದ ಸತ್ಯವಿಚಾರಗಳು"- ಎಂದು ಲೇಖನವನ್ನು ಬರೆದಿದ್ದರು,

ಶಿವಮೊಗ್ಗ ಜಿಲ್ಲೆಯಲ್ಲಿ ದಸಂಸ ನೇತೃತ್ವದಲ್ಲಿ ನಡೆದ ಚಂದ್ರಗುತ್ತಿ ಬೆತ್ತಲೆ ಸೇವೆ ವಿರೋಧಿ ಹೋರಾಟದಲ್ಲಿ ಪಾಲ್ಗೊಂಡಿದ್ದ ಶಾಮಣ್ಣನವರು ತ್ರಿಶೂಲಧಾರಿಗಳಿಂದ ಪಾರಾಗಿ ಬಂದ ಕಟು ಅನುಭವವನ್ನು ಅವರ ಬಾಯಲ್ಲೇ ಕೇಳಬೇಕು. ಬೆತ್ತಲೆ ಭಕ್ತಿ ಹೆಸರಲ್ಲಿ ತ್ರಿಶೂಲಧಾರಿಗಳು ನಡೆಸಿದ ದೌರ್ಜನ್ಯ- ಹಲ್ಲೆಯಿಂದ ಕಾಡುಮೇಡು ಅಲೆದು, ತಪ್ಪಿಸಿಕೊಂಡು, ಚಿಂದಿಯಾದ ಹಸಿರುಶಾಲು, ಚೂರಾದ ಕ್ಯಾಮಾರವನ್ನು ಜೋಡಿಸಿಕೊಂಡು ಓಡಿ ಬಂದ ಶಾಮಣ್ಣನವರ ಘೋರ ಅನುಭವವನ್ನು ಪ್ರೊ. ಬಿ.ಕೃಷ್ಣಪ್ಪ ಟ್ರಸ್ಟ್ ಮತ್ತು ಗೆಳೆಯರ ಬಳಗ ಜಂಟಿಯಾಗಿ ಆಯೋಜಿಸಿದ್ದ 'ಚಂದ್ರಗುತ್ತಿ

ಹೋರಾಟದ ೩೦ ವರ್ಷಗಳು" ಕಾರ್ಯಕ್ರಮದಲ್ಲಿ ಬಹು ಹಾಸ್ಯಭರಿತವಾಗಿ, ಸಾದರ ಪಡಿಸಿದ್ದರು. "ಇಂಥ ಘನಘೋರ ಆಚರಣೆ ಅಂತ್ಯಗೊಳಿಸುವ ಹೋರಾಟದಲ್ಲಿ ಭಾಗಿಯಾದ ಸಂತೃಪ್ತಿ ನನಗಿದೆ" ಎಂದು ಅಲ್ಲಿ ಹೇಳಿಕೊಂಡಿದ್ದರು.

ಕಡಿದಾಳು ಶಾಮಣ್ಣ-ಶ್ರೀದೇವಿಯವರು, ಪ್ರೊ. ರವಿವರ್ಮಕುಮಾರ್ ಅವರ ಮಗಳ ಮದುವೆ ಸಮಾರಂಭದಲ್ಲಿ, ಡಿ.ಎಸ್. ನಾಗಭೂಷಣ್‌ರವರ 'ಹೊಸಮನುಷ್ಯ' ಪತ್ರಿಕೆಯ ವಿಶೇಷ ಸಂಚಿಕೆ ಬಿಡುಗಡೆ ಸಮಾರಂಭದಲ್ಲಿ, ಚುಕ್ಕಿ ನಂಜುಂಡ ಸ್ವಾಮಿಯವರ ಮದುವೆ ವೇಳೆಯಲ್ಲಿ, ಇನ್ನು ಮುಂತಾದ ಸಭೆ ಸಮಾರಂಭಗಳಲ್ಲಿ ಭೇಟಿಯಾದಾಗ ಯೋಗಕ್ಷೇಮಕ್ಕಷ್ಟೇ ಮಾತುಕತೆಗಳು ಸೀಮೀತವಾಗುತ್ತಿದ್ದವು. ಆದರೆ ತುಮಕೂರಿನಲ್ಲಿ ಕೆ.ಪಿ. ನಟರಾಜ್‌ರವರು ಮಾನವ ಮಂಟಪ ಮತ್ತು ಸ್ಥಳೀಯರೊಡಗೂಡಿ ನಡೆಸಿದ ಒಂದು ಸರಳ ವಿವಾಹ ಸಂದರ್ಭದಲ್ಲಿ ನಮ್ಮ ಒಡಲಾಳದ ನೋವು ನಲಿವುಗಳನ್ನು ಹಂಚಿಕೊಳ್ಳುವ ದೀರ್ಘಸಮಯಾವಕಾಶ ಒದಗಿ ಬಂದಿತ್ತು. ಈ ಸರಳ ವಿವಾಹದಲ್ಲಿ, ಶಾಮಣ್ಣನವರು ವಿವಾಹ ಸಂಹಿತೆ ಬೋಧಿಸಿದ್ದರು. ನಾನು ಮಾನವ ಮಂಟಪ, ಸರಳವಿವಾಹ ಇತ್ಯಾದಿ ವಿಷಯಗಳೊಂದಿಗೆ, ನವವಿವಾಹಿತರಿಗೆ ಶುಭ ಕೋರಿದ್ದೆ. ನಂತರ ಬೆಂಗಳೂರಿಗೆ, ಶಾಮಣ್ಣ ದಂಪತಿಗಳು, ನಾನು ಒಟ್ಟಾಗಿ ಪ್ರಯಾಣಿಸಿದಾಗ, ನಮ್ಮ ಬದುಕು-ಸಂಘಟನೆಯ ಪಯಣದ ಹಾದಿಯ ಕಷ್ಟಸುಖಗಳು, ಕಲ್ಲುಮುಳ್ಳುಗಳು, ಎಡರು-ತೊಡರುಗಳನ್ನು ಹಂಚಿಕೊಂಡಿದ್ದೆವು.

ಶಾಮಣ್ಣನವರು ನನಗೆ ರೈತಯೋಗಿಯಂತೆ ಕಂಡರು ರೈತರ ಬಾಳಿನ ಸಂಕಷ್ಟಗಳು, ಕಬ್ಬುಬೆಳೆಗಾರರ ನೀಗಲಾಗದ ಬವಣೆಗಳು ಮತ್ತು ರೈತರ ಸರಣಿ ಆತ್ಮಹತ್ಯೆಗಳನ್ನು ಪರಿಹರಿಸಲಾಗದ ಸರ್ಕಾರ ಪ್ರದಾನ ಮಾಡುವ ರಾಜ್ಯೋತ್ಸವ ಪ್ರಶಸ್ತಿಯನ್ನು (೧೯೯೫) ದಸರಾ ಮಹೋತ್ಸವ ಉದ್ಘಾಟಿಸುವ ಗೌರವವನ್ನು (೩೦೧೫) ವಿನೀತವಾಗಿ ತಿರಸ್ಕರಿಸುತ್ತಾ ನೇಗಿಲಕುಳದೊಳಡಗಿದ ರಾಜಧರ್ಮವನ್ನು ಪ್ರಭುತ್ವಕ್ಕೆ ಮನವರಿಕೆ ಮಾಡಿಕೊಟ್ಟ ಕಡಿದಾಳು ಶಾಮಣ್ಣನವರು ಹೊಲದಲಿ ಹಾಡುತ ಉಳುವ ಯೋಗಿಯಾಗಿದ್ದಾರೆ.

ಹಸಿರೇ ಉಸಿರಾಗಿರುವ ಶ್ಯಾಮಣ್ಣ–ಶ್ರೀದೇವಿ

ವಿಜಯಾ ಶ್ರೀಧರ್

ಮೂರು ದಶಕಗಳ ಹಿಂದೆ ನಾವು ಶಿವಮೊಗ್ಗಾಕ್ಕೆ ಬಂದು ನೆಲೆಸಿದೆವು. ಆಗ ನಮ್ಮ ಕುಟುಂಬಕ್ಕೆ ಪರಿಚಿತರಾದವರು ಕಡಿದಾಳ್ ಗೋಪಾಲ–ಶೋಭಾ ದಂಪತಿ. ಅವರೇ ಶ್ಯಾಮಣ್ಣ–ಶ್ರೀದೇವಿಯವರನ್ನು ನಮಗೆ ಪರಿಚಯ ಮಾಡಿಕೊಟ್ಟರು. ಹಾಗೆ ಈ ಕುಟುಂಬದ ಎಲ್ಲ ಸದಸ್ಯರು ನಮಗೆ ಆತ್ಮೀಯರಾದರು.

ಸಹಜವಾಗಿಯೇ ಸಮಾನ ಅಭಿರುಚಿಯವರಲ್ಲಿ ಸ್ನೇಹ ಬೆಳೆಯುತ್ತದೆ ತಾನೆ?. ನಾವು ಕೃಷಿ ಪ್ರಧಾನ ಕುಟುಂಬದಿಂದ ಬಂದವರು. ಕಾಡು, ಮಲೆನಾಡು ನಮಗೆ ಪ್ರಿಯ. ಶಿರ್ಶಿ–ಸಾಗರದ ನಮ್ಮ ಬಾಲ್ಯ-ವಿದ್ಯಾಭ್ಯಾಸ ಹಳ್ಳಿ, ಸಣ್ಣ ಊರುಗಳಲ್ಲಿ ನಡೆದಿತ್ತು. ಹಾಗಾಗಿ ಶ್ಯಾಮಣ್ಣ –ಶ್ರೀದೇವಿಯವರ "ಹಳ್ಳಿತನ" ನಮಗೆ ಪ್ರಿಯವಾಗಿತ್ತು. ಜೊತೆಗೆ ಸಂಗೀತ–ನೃತ್ಯದ ನಮ್ಮ ಹುಚ್ಚಿಗೆ ಶ್ಯಾಮಣ್ಣ ಸರಿಯಾದ ಸಾಥಿಯಾದರು. ನನ್ನ ಸಾಹಿತ್ಯದ ಪ್ರೇಮಕ್ಕೆ ಶ್ರೀದೇವಿ, ಹಾಮಾನಾರವರ ತಂಗಿ ಎಂಬ ಅಂಶ ಹೆಚ್ಚಿನ ಆಕರ್ಷಣೆ ಉಂಟು ಮಾಡಿತ್ತು. ಮೊದಲ ಬಾರಿಗೆ ಶ್ಯಾಮಣ್ಣನವರನ್ನು ನೋಡಿ

ದಾಗ ಅಪರಿಚಿತರು ಅಂತ ಅನಿಸದೇ ಇರಲು ಕಾರಣ ಪೂರ್ಣಚಂದ್ರ ತೇಜಸ್ವಿಯವರ ಬರೆಹಗಳಲ್ಲಿ ಶ್ಯಾಮಣ್ಣ ಸದಾ ಇದ್ದುದರಿಂದ!

ಶ್ಯಾಮಣ್ಣನವರ ಮಕ್ಕಳು ಊಲೂಪಿ, ಲಾಜವಂತಿ. ತಮ್ಮ ವಿಶಿಷ್ಟ ಹೆಸರು, ಸರಳ ಸೌಂದರ್ಯ, ಸೌಜನ್ಯದಿಂದ ನಮ್ಮ ಗಮನ ಸೆಳೆದವರು. ನಮ್ಮ ಮಕ್ಕಳ ಸ್ನೇಹಿತರಾದರು. ಇಂದಿಗೂ ಅವರ ಸ್ನೇಹ ಬಿಗಿಯಾಗಿಯೇ ಅಂಟಿಕೊಂಡಿದೆ. ಬಾಲ್ಯದಲ್ಲಿ ನಮ್ಮ ಮಕ್ಕಳು ಚೈತ್ರ-ಪವಿತ್ರರಿಗೆ ಊಲೂಪಿ ಜೊತೆಗಾತಿ!

ಒಂದು ಬಾರಿ ಶ್ಯಾಮಣ್ಣ-ಶ್ರೀದೇವಿ ಮನೆಗೆ ಬಂದರು. ಶ್ಯಾಮಣ್ಣನದು ಎಂದಿನ ಉಡುಪು. ಜುಬ್ಬಾ, ಪಾಯಿಜಾಮಾ, ಉದ್ದ ಗಡ್ಡ, ನೀಳ ತಲೆಗೂದಲು, ಅದರ ಮೇಲೊಂದು ಟೋಪಿ, ಕೊರಳಲ್ಲಿ ಹಸಿರು ಟವೆಲ್! ನಮಗಾಗಿ ತೋಟದಿಂದ ಬೇರು ಹಲಸು (ದಿವಿ ಹಲಸು!) ತಂದಿದ್ದರು. ಕುಶಲ ಸಂಭಾಷಣೆ ನಡೆಯಿತು. ಹಾಗೆ "ನನಗೆ ಕೃಷಿ, ಕೃಷಿಕರು, ಹಳ್ಳಿಗಳು, ರೈತರ ಹೋರಾಟ ಎಲ್ಲಾ ಇಷ್ಟ. ಆದರೆ ಈ ಹಸಿರು ನಿಶಾನೆ ಮಾತ್ರ ಇಷ್ಟವಿಲ್ಲ" ಅಂದು ಬಿಟ್ಟೆ. ಶ್ಯಾಮಣ್ಣ -ಶ್ರೀದೇವಿ ಗಾಬರಿಯಾದರು. "ನೀವು ಮಲೆನಾಡಿನವರಾಗಿ ಹಾಗೆ ಹೇಳಬಾರದು. ಹಸಿರೇ ಉಸಿರು" ಎಂದು ಉದ್ಗರಿಸಿದರು. "ಪ್ರಕೃತಿಯ ಹಸಿರು ಇಷ್ಟ, ಹಸಿರು ಬಣ್ಣದ ಬಟ್ಟೆ ಇಷ್ಟವಿಲ್ಲ" ಅಂದೆ. ಆದರೆ ಅಂತರಂಗದಲ್ಲಿ ತಕ್ಷಣ ನನ್ನ ಮನಸ್ಸು ಹಸಿರೇ ತುಂಬ ಚೆಂದದ ಬಣ್ಣ, ನನಗೂ ಇನ್ನು ಮುಂದೆ ಹಸಿರು ಬಟ್ಟೆಯೇ ಪ್ರಿಯ" ಅಂತ ಅನಿಸಿಬಿಟ್ಟಿತ್ತು. ಮುಂದೆ ತುಷಾರದಲ್ಲಿ ಪ್ರಕಟವಾದ ನನ್ನದೊಂದು ಕಥೆ "ಒಲವಿನ ಬಣ್ಣ"ದಲ್ಲಿ ಈ ಪ್ರಸಂಗ ಯಥಾವತ್ ಆಗಿ ಮೂಡಿ ಬಂದಿದೆ.

ಶ್ಯಾಮಣ್ಣನವರಿಗೆ ರೈತರ ಹೋರಾಟದಲ್ಲಿರುವ ಆಸಕ್ತಿ, ಸಂಗೀತ, ನೃತ್ಯ, ಸಾಹಿತ್ಯ, ಫೋಟೋಗ್ರಾಫಿಯಲ್ಲೂ ಇದೆ. ಹಾಗಾಗಿ ಹಲವು ಕಾರಣಗಳಿಂದ ನಮ್ಮ ಅವರ ಭೇಟಿಯಾಗುತ್ತಿತ್ತು. ಅವರ ಕೊರಳಲ್ಲಿ ಹಸಿರು ಶಾಲಿನ ಜೊತೆ ಕ್ಯಾಮರಾ ಕೂಡ ಇರುತ್ತಿತ್ತು. ನಮ್ಮ ಕೊನೇ ಮಗಳು ಶುಭ್ರತಾ ಮಗುವಾಗಿದ್ದಾಗ ಯಾವಾಗಲೂ ನೆರೆಹೊರೆಯವರ ಎಲ್ಲ ವರ್ಗದ ಮಕ್ಕಳೊಡನೆ, ಅಂಗಳದಲ್ಲಿ, ಬೀದಿಯಲ್ಲಿ, ಬಯಲಲ್ಲಿ ಆಡುತ್ತಿದ್ದಳು. ಹಾಗೆ ಒಂದು ಬಾರಿ ನಮ್ಮ ಮಕ್ಕಳಿಗಾಗಿ ಬೆಣ್ಣೆ ಹಣ್ಣು ಹಿಡಿದು ಬಂದ ದಂಪತಿಗಳು ನಮ್ಮ ಕಿರಿ ಮಗಳು ಕೆಸರಿನಲ್ಲಿ ಆಡುತ್ತಿರುವ ಕಮಲ ಎಂದು ಮೆಚ್ಚುತ್ತಿದ್ದರು. ಕೆದರಿದ ಕೂದಲಿನ, ಮಲಿನ ಬಟ್ಟೆಯ ಮುಗ್ಧ ನಗುವಿನ ನಮ್ಮ ಮಗುವಿನ ಭಾವ ಚಿತ್ರವನ್ನು ಶ್ಯಾಮಣ್ಣ ಕ್ಲಿಕ್ಕಿಸಿದ್ದರು. ಮುಂದೆ ಅದು ಲಂಕೇಶ್ ಪತ್ರಿಕೆಯಲ್ಲಿ ಪ್ರಕಟವಾಗಿ ಅಪಾರ ಮೆಚ್ಚುಗೆ ಗಳಿಸಿತ್ತು.

ನಮ್ಮ ಮಕ್ಕಳ, ತಮ್ಮ ಮಗಳ ಮತ್ತು ಅವರ ಜೊತೆ ನೃತ್ಯ ಕಲಿಯುವ ಮಕ್ಕಳ "ಭಾವ" ಚಿತ್ರ ತೆಗೆಯುವ ಹುಚ್ಚು ಅವರಿಗೆ! ಆದರೆ ನಮ್ಮ ಮಕ್ಕಳ ರಂಗಪ್ರವೇಶದ

ಎಲ್ಲ ಫೋಟೋಗಳನ್ನು ನೀವೇ ಸೆರೆಹಿಡಿಯಬೇಕೆಂದಾಗ ಅವರು ನಗುತ್ತಲೇ ನಿರಾಕರಿಸಿದರು. "ನನ್ನ ಎಳೆಯ ಗೆಳೆಯರಿದ್ದಾರೆ, ಅವರಿಗೆ ಹೇಳುತ್ತೇನೆ. ಅವರು ನನಗಿಂತ ಚೆನ್ನಾಗಿ ಫೋಟೋ ತೆಗೆಯುತ್ತಾರೆ" ಎಂದುಬಿಟ್ಟರು. ಆಮೇಲೆ ನಮಗರ್ಥವಾದದ್ದು, ಶ್ಯಾಮಣ್ಣನವರಿಗೆ ಫೋಟೋಗ್ರಾಫಿ ಒಂದು ಹುಚ್ಚು, ಹವ್ಯಾಸ: ವೃತ್ತಿ ಅಲ್ಲ! ತಮ್ಮ ಎಳೆಯ ಗೆಳೆಯರ ಅವಕಾಶ ತಪ್ಪಬಾರದೆಂಬ ಉದಾರ, ದೂರ ದೃಷ್ಟಿಯೂ ಅವರ ನಿರಾಕರಣೆಯಲ್ಲಿ ಇತ್ತು.

ಎರಡು ದಶಕಗಳ ಹಿಂದೆ ಯಲ್ಲಾಪುರದ ದಟ್ಟ ಕಾಡಿನಲ್ಲಿ ಅಡಗಿರುವ 'ಕಳಚೆ' ಗ್ರಾಮದ ನಮ್ಮ ಹಿತೈಷಿಗಳು ನಮ್ಮ ಮಕ್ಕಳ ನೃತ್ಯ ಕಾರ್ಯಕ್ರಮ ಏರ್ಪಾಡು ಮಾಡಿದ್ದರು. ನಮ್ಮ ಮಕ್ಕಳ ಜೊತೆ ಊಲೂಪಿ ಮತ್ತು ನೀತಾ ಎನ್ನುವ ಹುಡುಗಿಯೂ ಈ ಪ್ರದರ್ಶನದಲ್ಲಿ ಸೇರಿದ್ದರು. ಎಲ್ಲರೂ ಕೂಡಿ ಅಲ್ಲಿ ಹೋದೆವು. ಅಲ್ಲಿಯ ದಟ್ಟ ಕಾಡು, ಹೊಳೆ, ಬೆಟ್ಟಗಳು, ಅಂಕು-ಡೊಂಕಿನ ರಸ್ತೆ ಎಲ್ಲ ಶ್ಯಾಮಣ್ಣ-ಶ್ರೀದೇವಿಯರಿಗೆ ಪ್ರಿಯವಾಯ್ತು.

ರಾತ್ರಿ ೯ ಗಂಟೆಯ ವೇಳೆ ಕಲಾವಿದರು ತಯಾರಾದರೂ ಪ್ರೇಕ್ಷಕರು ಹತ್ತಾರು ಜನ ಮಾತ್ರ. ನನಗೆ ತುಂಬಾ ನಿರಾಶೆಯಾಯ್ತು. "ಇಷ್ಟು ಜನರೆದುರು ನರ್ತಿಸಲು ಮಕ್ಕಳಿಗೆ ಹೇಗೆ ಉತ್ಸಾಹ ಬರುತ್ತದೆ" ಎಂದು ಬೇಸರ ವ್ಯಕ್ತಪಡಿಸಿದೆ. ಆಗ ಶ್ಯಾಮಣ್ಣ "ಪ್ರೇಕ್ಷಕರು ಸಾವಿರ ಇರಲಿ, ಹತ್ತಾರು ಇರಲಿ, ಕಲಾವಿದರು ಪ್ರಾಮಾಣಿಕರಾಗಿ ಒಂದೇ ಉತ್ಸಾಹ, ತನ್ಮಯತೆಯಿಂದ ಪ್ರದರ್ಶನ ನೀಡಬೇಕು" ಎಂದರು. ಆ ಮೇಲೆ ಹಳ್ಳಿಯ ಜನ ಯಕ್ಷಗಾನಕ್ಕೆ ಬರುವ ರೂಢಿಯಂತೆ ತಂಡ-ತಂಡವಾಗಿ ಬಂದರು, ಸಾವಿರ ಸಂಖ್ಯೆಯಲ್ಲೇ ಸೇರಿದರು. ಕಾರ್ಯಕ್ರಮ ಅದ್ಭುತವಾಗಿ ನಡೆಯಿತು.

ಆದರೆ ಅಂದಿನಿಂದ ನಾವು, ನಮ್ಮ ಮಕ್ಕಳು ಯಾವುದೇ ಕಾರ್ಯಕ್ರಮದಲ್ಲಿ ಪ್ರೇಕ್ಷಕರ ಸಂಖ್ಯೆಗೆ ಗಮನ ನೀಡದೇ, ನಮ್ಮ ಅತ್ಯುತ್ತಮ ಪ್ರದರ್ಶನ ನೀಡಲು ಈ ಮಾತು ಪ್ರೇರಣೆಯಾಯ್ತು!. ನಮ್ಮ ಮಕ್ಕಳು ರಂಗಪ್ರವೇಶ ಮಾಡಿ ೩೫ ವರ್ಷಗಳ ನಂತರವೂ ಶ್ಯಾಮಣ್ಣ ನೃತ್ಯ ಕಾರ್ಯಕ್ರಮಗಳಿಗೆ ಬರುತ್ತಾರೆ. ಕುವೆಂಪು ರಂಗಮಂದಿರದ ಮೂಲೆಯಲ್ಲಿ ಕುಳಿತು ನೃತ್ಯ ಸವಿಯುತ್ತಾರೆ. ಮನೆಗೆ ಮರಳಿದ ಮೇಲೆ ಒಂದು ಪುಟ್ಟ ಅಭಿನಂದನೆ ಪತ್ರ, ಕೈ ಬರಹದ ಕಾರ್ಡಿನಲ್ಲಿ ಬರುತ್ತದೆ. ನಮ್ಮ ಮಗಳು ಪವಿತ್ರ "ರಸಋಷಿ ನಮನ" ಮಾಡಿದಾಗ ಅದರ ಪ್ರತಿಯೊಂದು ವಿವರ, ಯಾವ ರಾಗ, ತಾಳ, ಕುವೆಂಪುರವರ ಯಾವ ಸಂಕಲನದಿಂದ ಆಯ್ಕೆ ಮಾಡಿದ ಕವನ ಎಲ್ಲವನ್ನೂ ಬರೆದುಕೊಂಡು ಕುವೆಂಪುರವರ ಮಗಳು ತಾರಿಣಿಯವರಿಗೆ ದೂರವಾಣಿಯ ಮೂಲಕ ತಿಳಿಸುವುದು ಶ್ಯಾಮಣ್ಣನವರಿಗೆ ಪ್ರಿಯವಾದ ಕೆಲಸ. ಪವಿತ್ರ "ಔದುಂಬರ ಗಾಥಾ" ಮಾಡಿದಾಗ ಅದನ್ನು ವೀಕ್ಷಿಸಿದ ಶ್ಯಾಮಣ್ಣ, ಕೆಲವೇ

ದಿನಗಳಲ್ಲಿ ಪವಿತ್ರಳಿಗೆ ಕೊಟ್ಟ ಉಡುಗೊರೆ ಕುಪ್ಪಳ್ಳಿಯಲ್ಲಿ ಹಣ್ಣುಗಳಿಂದ ತುಂಬಿದ ಅತ್ತಿ ಮರದ ಭಾವಚಿತ್ರ, ಮುಂದಿನ ಪ್ರಯೋಗದಲ್ಲಿ ಅದನ್ನು ಬಳಸಿಕೊಳ್ಳಬೇಕೆಂಬ ಸೂಚನೆ. ಈಗಿನ ಯುವ ಜನತೆ ಹಾಗಾದರೂ ಔದುಂಬರ ವೃಕ್ಷವನ್ನು ನೋಡು ವಂತಾಗಲಿ ಎಂದು ಸಣ್ಣ ನಗುವಿನೊಂದಿಗೆ ಶ್ಯಾಮಣ್ಣ ಹೇಳುತ್ತಾರೆ.

ಮಕ್ಕಳು ಸಣ್ಣವರಿದ್ದಾಗ ಒಮ್ಮೆ ಶ್ಯಾಮಣ್ಣನವರ ಮನೆಗೆ ಊಟಕ್ಕೆ ಹೋಗಿದ್ದೆವು. ಶ್ಯಾಮಣ್ಣ ಅಂದು ಒಳ್ಳೆಯ ಲಹರಿಯಲ್ಲಿದ್ದರು. ಕುವೆಂಪು ವಿರಚಿತ "ಉಡುಗಣ ವೇಷ್ಟಿತ ಚಂದ್ರ ಸುಶೋಭಿತ" ಹಾಡಿದರು. "ಉಳುತಿಹ ರೈತನ ನೇಗಿಲ ಸಾಲಿನ ಮಣ್ಣಿನ ರೇಖಾ ಪಥಗಾಮಿ" ಎಂದು ಶ್ಯಾಮಣ್ಣ ಹಾಡುತ್ತಿದ್ದರೆ ನಮ್ಮ ದೇವರ ಕಲ್ಪನೆಗೇ ಹೊಸ ಆಯಾಮವನ್ನೇ ಸೃಷ್ಟಿಸಿತ್ತು.

ಶಿರ್ಶಿ-ಸಾಗರದಲ್ಲಿ ಅಡಿಕೆ ಕೊನೆಗಳಿಗೆ ಕಟ್ಟುವ ಹಾಳೆಯ ಕೊಟ್ಟೆಯ ಬಗ್ಗೆ ಶ್ಯಾಮಣ್ಣ ತುಂಬ ಮೆಚ್ಚುಗೆ ವ್ಯಕ್ತಪಡಿಸಿದ್ದರು. ಹೀಗೇ ಶ್ಯಾಮಣ್ಣ-ಶ್ರೀದೇವಿ ನಮ್ಮ ಮನೆಗೇ ಬರಲಿ, ನಾವೇ ಅವರಲ್ಲಿಗೆ ಹೋಗಲಿ, ಅಥವಾ ಎಲ್ಲೇ ಭೇಟಿಯಾಗಲಿ, ನಮ್ಮ ಮಾತುಕತೆ ಸಂಗೀತ, ನೃತ್ಯ, ಸಾಹಿತ್ಯ, ಕೃಷಿ, ಹೂ-ಗಿಡಗಳು ಇವುಗಳ ಸುತ್ತಲೂ ಸುತ್ತುತ್ತಿರುತ್ತವೆ. ಅದರ ಜೊತೆಗೆ ಸಾಹಿತಿಗಳ ನೆನಪು, ಘಟನೆಗಳು. ಈ ಬಾರಿ ದಂಪತಿಗಳು ಬಂದಾಗ ಬಾಳೆಯಲ್ಲಿ ಇತ್ತೀಚೆಗೆ ಕಣ್ಮರೆಯಾಗುತ್ತಿರುವ ಕರಿಬಾಳೆ ಹಣ್ಣನ್ನು ಅವರಿಗೆ ನೀಡಿದೆ. ಅದನ್ನು ತಿನ್ನುವ ಮೊದಲು "ನಿಮ್ಮ ತೋಟದ್ದಾ, ನಮಗೆ ಅದರ ಕಂದು (ಮರಿ) ಬೇಕು. ನಿಮ್ಮ ತೋಟಕ್ಕೆ ಹೋದರೆ ಸಿಗುತ್ತದಾ?" ಎಂದು ಕೇಳಿದರು. "ಯಾವಾಗ ಬೇಕಾದರೂ ಹೋಗಿ ಅದರ ಸಸಿ ಪಡೆದುಕೊಳ್ಳಿ" ಎಂದೆ. ಅದರ ಜೊತೆಗೆ ರಸವತ್ತಾದ ಒಂದು ಕತೆಯನ್ನೂ ಹೇಳಿದರು. ಶ್ಯಾಮಣ್ಣ ಮೈಸೂರಿನಲ್ಲಿ ಓದುತ್ತಿರುವಾಗ ಒಮ್ಮೆ ಕುವೆಂಪುರವರು ಕರಿಬಾಳೆಯ ಒಂದು ಕೊನೆ ಇನ್ನೂ ಹಣ್ಣಾಗದ್ದು ಮಾರ್ಕೆಟ್‌ನಿಂದ ಒಯ್ಯುತ್ತಿದ್ದರಂತೆ. ಶ್ಯಾಮಣ್ಣ "ಇದೇನು?" ಅಂತ ಪ್ರಶ್ನೆ ಮಾಡಿದ್ದಕ್ಕೆ ತಮ್ಮ ಗ್ರಂಥಾಲಯಕ್ಕೆ ಕರೆದೊಯ್ದು, ಒಂದು ಪುಸ್ತಕ ತೋರಿಸಿ ಅದರಲ್ಲಿ ಕರಿಬಾಳೆ ಹಣ್ಣಿನ ಮಹತ್ವ-ಮಾಹಿತಿ ಇರುವಂತದ್ದನ್ನು ಓದಲು ಹೇಳಿದ್ದರಂತೆ!

ಶ್ರೀದೇವಿ ಬಳಿ ಅವರಣ್ಣ-ಅತ್ತಿಗೆ, ಅವರ ಸಾಹಿತ್ಯದ ವಿಚಾರ ಮಾತನಾಡುವುದು ನನಗೆ ಪ್ರಿಯ. ಶ್ಯಾಮಣ್ಣನವರ ಎಲ್ಲ ಹುಚ್ಚುಗಳಿಗೆ ಬೆಂಬಲವಾಗಿ ನಿಂತವರು ಶ್ರೀದೇವಿ. ಕೃಷಿ, ಮಕ್ಕಳ ಲಾಲನೆ-ಪಾಲನೆ ಎಲ್ಲ ಜವಾಬ್ದಾರಿ ಶ್ರೀದೇವಿ ಹೊತ್ತಿದ್ದಾರೆ. "ಶ್ಯಾಮಣ್ಣನವರನ್ನು ನೀವು ತುಸು ಹೆಚ್ಚೇ ಪ್ರೀತಿ-ರಕ್ಷಣೆ ಮಾಡುತ್ತೀರಿ" ಎಂದು ನಾನು ಹೇಳಿದಾಗ ಶ್ರೀದೇವಿ ನಗುತ್ತಾರೆ, ಶ್ಯಾಮಣ್ಣನೂ ಸಹಾ! ಎಲ್ಲೇ ಇರಲಿ, ಬೆಣ್ಣೆ

ಹಣ್ಣು ನೋಡಿದಾಗ, ಹಸಿರು ಬಣ್ಣ ಕಂಡರೆ ಶ್ಯಾಮಣ್ಣ ಮಾಮಾ-ಆಂಟಿ ನೆನಪಾಗುತ್ತಾರೆ ಎಂದು ನಮ್ಮ ಮಕ್ಕಳು ಆಗಾಗ ಹೇಳುತ್ತಿರುತ್ತಾರೆ.

ರಾಜ್ಯೋತ್ಸವ ಪ್ರಶಸ್ತಿ ನಿರಾಕರಿಸಿದ, ದಸರಾ ಉದ್ಘಾಟನಾ ಸಮಾರಂಭ ಒಲ್ಲೆ ಎಂದ, ಡಾ॥ ಕಲುಬುರ್ಗಿ ಹತ್ಯಾ ವಿರೋಧಿ ಕಾರ್ಯಕ್ರಮವನ್ನು ಮಧುರ ಕೊಳಲಗಾನದಿಂದ ಉದ್ಘಾಟಿಸಿದ ವಿಶಿಷ್ಟ ವ್ಯಕ್ತಿ ಶ್ಯಾಮಣ್ಣ. ಅವರ ಮತ್ತು ಶ್ರೀದೇವಿಯವರ ಅಪಾರ ಸ್ನೇಹ ಬಳಗದಲ್ಲಿ ನಾವೂ ಇದ್ದೇವೆ ಎಂಬುದೇ ನಮಗೆ ಸಂತಸ ನೀಡುವ ವಿಷಯ.

ಸರಳ ಸಜ್ಜನಿಕೆಯ ಶಾಮಣ್ಣ

ಪ್ರಸನ್ನ

ಶಾಮಣ್ಣ, ತನ್ನನ್ನು ತಾನು ಒಬ್ಬ ಸಾಮಾನ್ಯ ಕಾರ್ಯಕರ್ತ ಎಂದು ತಿಳಿಯುತ್ತಾರೆ. ಎಲ್ಲರೊಟ್ಟಿಗೂ ಹಾಗೆಯೇ ವ್ಯವಹರಿಸುತ್ತಾರೆ. ಸಭೆಗಳಿಗೆ ಬಂದಾಗ ವೇದಿಕೆ ಅಲಂಕರಿ ಸದೆ ದೂರ ಉಳಿಯುತ್ತಾರೆ. ಫೋಟೋ ಗ್ರಾಫರನಂತೆ ಬಗಲಿಗೆ ಕ್ಯಾಮೆರಾ ತಗಲಿಸಿಕೊಂಡು ಇತರರ ಚಿತ್ರ ತೆಗೆಯುತ್ತ ಓಡಾಡುತ್ತಾರೆ. ಭಾಷಣ ಮಾಡಿರೆಂದು ಬಲವಂತ ಹೇರಿದರೆ, ಹರಟೆ ಹೊಡೆ ಯುವವನ ರೀತಿಯನ್ನು ಮಾತಿಗೆ ತಂದುಕೊಂಡು, ಚಳುವಳಿಗಳ ಅನುಭವ ಹಂಚಿಕೊಳ್ಳುತ್ತಾರೆ.

ಶಾಮಣ್ಣನವರ ಭಾಷಣಗಳೆಂದರೆ ಕೊಂಚ ರಿಸ್ಕ್. ಕೆಲವೊಮ್ಮೆ, ಹೊಟ್ಟೆ ಹುಣ್ಣಾಗುವಷ್ಟು ನಗಿಸಬಲ್ಲ ಶಾಮಣ್ಣ, ಕೆಲವೊಮ್ಮೆ ಸಭಿಕರನ್ನು ಎತ್ತೆತ್ತಲೋ ಒಯ್ದು ದಾರಿ ತಪ್ಪಿಸಿಬಿಡುತ್ತಾರೆ. ಅಥವಾ, ಒಮ್ಮೆಗೇ ಕೊಳಲು ನುಡಿಸಲು ತೊಡಗಿ ಬಿಡುತ್ತಾರೆ.

ನಾಯಕಮಣಿಗಳು ಒಬ್ಬೊಬ್ಬರಾಗಿಯೇ ನೆಲಕ್ಕು ರುಳುತ್ತಿರುವ ಸಂದರ್ಭವಿದು. ಶಾಮಣ್ಣ ಇನ್ನೂ ನಿಂತೇ ಇದ್ದಾರೆ, ನಡೆಯುತ್ತಿದ್ದಾರೆ. ಅದಕ್ಕೆ ಕಾರಣವಿದೆ.

ಅಹಂಕಾರ ರಹಿತತೆ ಶಾಮಣ್ಣನವರ ದೊಡ್ಡ ಗುಣ. ಶಾಮಣ್ಣನವರಿಗೆ ರೈತರ ಬಗ್ಗೆ, ಬಡವರ ಬಗ್ಗೆ, ಅಪಾರವಾದ ಕಾಳಜಿಯಿದೆ. ತನ್ನ ಕೈಲಾದಷ್ಟು ಸಹಾಯಮಾಡುತ್ತಾರೆ, ತನ್ನ ಕೈಲಾದಷ್ಟು ವಿವಿಧ ಚಳುವಳಿಗಳಲ್ಲಿ ಭಾಗವಹಿಸುತ್ತಾರೆ. ಆದರೆ ಬದುಕಿನ ಸಂತೋಷ ಕಳೆದುಕೊಂಡು, ಪ್ರಪಂಚವನ್ನು ತಲೆಯಮೇಲೆ ಹೊತ್ತವನ ತರಹ, ನರಳುವುದು ಶಾಮಣ್ಣನವರ ರೀತಿಯಲ್ಲ. ಶಾಮಣ್ಣನವರ ಈ ಗುಣ ನನಗೆ ಇಷ್ಟವಾಗುತ್ತದೆ. ಶಾಮಣ್ಣನವರಿಗೆ ಗೌರವವಿರುವುದೇ ಅವರ ಈ ಸರಳ ಸಜ್ಜನಿಕೆಯ ಕಾರಣದಿಂದಾಗಿ.

ಶಾಮಣ್ಣ ಭಾಗ್ಯಶಾಲಿ, ಒಳ್ಳೆಯ ಮಡದಿ ಒಳ್ಳೆಯ ಮಕ್ಕಳನ್ನು ಪಡೆದವರು ಅವರು. ಮಡದಿ ಮಕ್ಕಳು ಗಂಡನಿಗೆ ಒಳ್ಳೆಯವರಾಗಿ ಪರಿಗಣಿಸುವುದು ಕೇವಲ ಭಾಗ್ಯದಿಂದ ಮಾತ್ರವಲ್ಲ, ಅದರಲ್ಲಿ ಗಂಡನ ಪ್ರಯತ್ನವೂ ಇದೆ ಎಂದು ನಂಬುವವನು ನಾನು. ಶಾಮಣ್ಣ ಸುಸಂಸ್ಕೃತರು. ಶಾಮಣ್ಣನವರ ಮನೆ, ಮನೆಯ ಸುತ್ತಲ ತೋಟ, ಅಲ್ಲಿನ ಗಿಡಗಳ ವೈವಿಧ್ಯ ಎಲ್ಲದರಲ್ಲೂ ಸುಸಂಸ್ಕೃತಿ ಎದ್ದು ಕಾಣುತ್ತದೆ. ರೈತ ಚಳುವಳಿಗಾರರು ಶಾಮಣ್ಣನಿಂದ ಕಲಿಯಬೇಕಾದ್ದು ಬಹಳವಿದೆ, ಜೀವನ ಶೈಲಿಯ ದೃಷ್ಟಿಯಿಂದಲಂತೂ ಬಹಳವಿದೆ. ಶಾಮಣ್ಣನವರಿಗೆ, ಮನೆಯವರಿಗೆ ಮಕ್ಕಳಿಗೆ ಒಳಿತನ್ನು ಹಾರೈಸುತ್ತೇನೆ.

ಕನವರಿಸುವ ವ್ಯಕ್ತಿತ್ವ: ಕಡಿದಾಳು ಶಾಮಣ್ಣ

ಡಾ. ಶ್ರೀಕಂಠ ಕೂಡಿಗೆ

ಐದಾರು ದಶಮಾನಗಳ ನೆನಪನ್ನು ಮುಂದಿಟ್ಟುಕೊಂಡು ನೋಡುವಾಗ ಕನವರಿಸುವ ವ್ಯಕ್ತಿತ್ವದವರಾಗಿಯೆ ಕೆಲವರು ನಮ್ಮನ್ನು ಕಾಡುತ್ತಾರೆ. ನಾವು ಎಳವೆಯಲ್ಲಿದ್ದಾಗ ಗೇಣಿ ರೈತರಾದ ನಮ್ಮ ತಂದೆ ಹೇಳುತ್ತಿದ್ದ ಮಾತುಗಳು ನೆನಪಿಗೆ ಬರುತ್ತವೆ. ನಮಗೇನೊ ಉಂಡು ಉಡಲು ಅಷ್ಟಿಷ್ಟು ಇದೆ. ಆದರೆ ಅದಾವುದೂ ಇಲ್ಲದ ನಮ್ಮ ಊರಿನ ಕೆಲವರು ತಮ್ಮ ಮಕ್ಕಳ ಜೊತೆಗೆ ತಬ್ಬಲಿಗಳಾದ ಸಂಬಂಧಿಕರ ಮಕ್ಕಳನ್ನು ಸಲಹಿ ದೊಡ್ಡವರನ್ನಾಗಿ ಮಾಡುತ್ತಾರೆ. ನಾನು ಏನಕ್ಕೂ ಪ್ರಯೋಜನವಿಲ್ಲ. ರಾಜ ಕಳೆ ಇರುವ ಶಾಂತವೇರಿ ಗೋಪಾಲನನ್ನೆ ನೋಡು, ಇರಲು ಸರಿಯಾದ ಒಂದು ಮನೆಯಿಲ್ಲದ ಆತ, ಭೂಮಿ ಇಲ್ಲದವರ ಪರವಾಗಿ ಹೋರಾಡ್ತಾನಂತೆ ಮನುಷ್ಯ. ಮಂಡಗದ್ದೆ, ಮುಂಡೇಕಾರು ಸೀಮೆಯಲ್ಲಿ ಎಷ್ಟೋ ಶ್ರೀಮಂತ ಭೂಮಾಲಿಕರಿದ್ದರೂ ತಾವಾಯಿತು, ತಮ್ಮ ಆಸ್ತಿ ಭೂಮಿ ಆಯಿತು ಅನ್ನುವವರೇ ಜಾಸ್ತಿ. ಎರಡು ಮೂರು ತಲೆಮಾರುಗಳು ಒಡೆಯರ ಮನೆಯಲ್ಲಿ ದುಡಿಯುತ್ತಿದ್ದರೂ ಅವರಿಗೆ ಒಂದು ಗುಂಟೆ ಜಮೀನೂ

ಇಲ್ಲ. ಹೋಗಲಿ ಇಷ್ಟು ವರ್ಷ ನಮ್ಮ ಗದ್ದೆಗಳಲ್ಲಿ ದುಡಿದಿದ್ದೀರಿ, ಒಂದು ಎಕರೆ ಇಟ್ಟುಕೊಂಡು ಸಾಗುವಳಿ ಮಾಡಿ ಎಂದಿದ್ದರೂ ಕೆಲವರು ಭೂ ಒಡೆಯರಾಗುತ್ತಿದ್ದರು. ಒಡೆಯರ ಬಗ್ಗೆ ಪ್ರೀತಿಯೂ ಮೂಡುತ್ತಿತ್ತು. ನಾನೂ ಏನಾದರೊಂದು ಇಂಥದನ್ನು ಮಾಡಬಹುದಿತ್ತು. ಆದರೆ ಕೊಡಲು ನನ್ನ ಹತ್ರ ಜಮೀನು ಇರಬೇಕಲ್ಲಾ? ಎಂದು ಆಗಾಗ ಗೊಣಗುತ್ತಾ ಇರುತ್ತಿದ್ದರು. ನನಗೆ ಆ ವಯಸ್ಸಿನಲ್ಲಿ ಅಪ್ಪನ ಮಾತು ಸ್ವಗತದಂತೆ ಕೇಳಿಸುತ್ತಿತ್ತು.

ನಾನು ತೀರ್ಥಹಳ್ಳಿ ಸರ್ಕಾರಿ ಪ್ರೌಢಶಾಲೆಗೆ ಸೇರುವ ಹೊತ್ತಿಗೆ ಪೇಟೆಯ ವೈಭವ, ಶ್ರೀಮಂತ ಜಮೀನುದಾರರ ಮಕ್ಕಳ ಒಡನಾಟದಲ್ಲಿ ನನ್ನ ತಂದೆ ಹೇಳುತ್ತಿದ್ದಂತೆ ಬಡವರಿಗೆ ವಿರುದ್ಧವಾದ ಜಗತ್ತೊಂದು ಇದೆ ಎನ್ನುವ ಭಾವ ಬೆಳೆಯುತ್ತಾ ಬಂತು. ಕಡಿದಾಳು ದಯಾನಂದನೆನ್ನುವ ಅನುಕೂಲಸ್ಥ ಕುಟುಂಬದಿಂದ ಬಂದ ಗೆಳೆಯ ನನ್ನ ಹೈಸ್ಕೂಲು ಸಹಪಾಠಿಯಾಗಿದ್ದರು. ತೀರ್ಥಹಳ್ಳಿ ಸಮೀಪದ ಬೊಬ್ಬಿ ಊರಿನ ಸೋಮಶೇಖರ ಎನ್ನುವವರು ಸಹ ನನ್ನ ಸಹಪಾಠಿ. ಆತ ತೀರ್ಥಹಳ್ಳಿ ಸುತ್ತಿನ ಶ್ರೀಮಂತರ, ಅವರ ಮಕ್ಕಳ ಇತಿವೃತ್ತವನ್ನು ತರಗತಿಯ ಬಿಡುವಿನ ವೇಳೆ ಹೇಳುತ್ತಿದ್ದ. ನಿನ್ನ ಸ್ನೇಹಿತ ದಯಾನಂದ ಇದ್ದಾನಲ್ಲ! ಅವನ ಅಣ್ಣ ಒಬ್ಬರು ಇದ್ದಾರೆ. ಶಾಮಣ್ಣ ಅಂತ ಮೈಸೂರಿನಲ್ಲಿ ಎಂ.ಎ ಮಾಡಿ ಈಗ ಹೈಸ್ಕೂಲು ಮೇಷ್ಟ್ರ ಆಗಿದ್ದಾರೆ. ಅದು ಇಲ್ಲಿಗೆ ಹತ್ತಿರದ ಬಸವಾನಿ ಎಂಬ ಊರಿನಲ್ಲಿ ಖಾದಿ ಜುಬ್ಬಾ, ಪೈಜಾಮ ಗಾಂಧಿಯವರಂತೆ ಸರಳ ಜೀವನ. ಹಳ್ಳಿಯ ಅಭಿವೃದ್ಧಿಯ ಕನಸಂತೆ ಅವರಿಗೆ. ಶಾಲೆಯಲ್ಲಿ ಹುಡುಗರಿಂದ ಕೈತೋಟ ಮಾಡಿಸುವುದು. ಮಕ್ಕಳ ಉಡುಪು, ಆರೋಗ್ಯದಲ್ಲಿ ಶುಚಿತ್ವ ಕಾಪಾಡಿಕೊಳ್ಳುವುದು. ಆದರ್ಶ ವ್ಯಕ್ತಿಗಳ ಜೀವನ ಕುರಿತು ಮಕ್ಕಳಿಗೆ ಕಥೆ ಹೇಳಿ ಅವರ ಬೌದ್ಧಿಕ ಲೋಕವನ್ನು ಬೆಳೆಸುವುದು ಇತ್ಯಾದಿ ಮಾಡುತ್ತಾರಂತೆ ಎಂದು ಸೋಮಶೇಖರನಿಂದ ಕೇಳುತ್ತಿದ್ದೆ. ಇಂಥ ಶಾಮಣ್ಣನವರನ್ನು ನೋಡುವ ಕುತೂಹಲ ಇತ್ತು. ಒಂದು ದಿನ ಅಚಾನಕ್ಕಾಗಿ ಅವರನ್ನು ನೋಡುವ ಅವಕಾಶ ಒದಗಿ ಬಂತು. ತೀರ್ಥಹಳ್ಳಿಯ ಅಜಾದ್ ರಸ್ತೆಯಲ್ಲಿದ್ದ ಡಾ. ಬಿ.ಎನ್. ರಂಗಪ್ಪನವರ ಕ್ಲಿನಿಕ್‌ಗೆ ಕಾರ್ಯ ನಿಮಿತ್ತ ಶಾಮಣ್ಣ ಬಂದಿದ್ದರು. ದಯಾನಂದ ಡಾ. ರಂಗಪ್ಪನವರ ಪಕ್ಕದಲ್ಲೆ ಇದ್ದ ಅವರ ತಮ್ಮ ಬಿ.ಎಸ್. ಕೃಷ್ಣಮೂರ್ತಿಯವರ ಬಟ್ಟೆ ಅಂಗಡಿಗೆ ಹೋಗಿದ್ದೆವು. ದಯಾನಂದ ಇವರು ನಮ್ಮ ಅಣ್ಣ ಶಾಮಣ್ಣ ಅಂತ ಪರಿಚಯ ಮಾಡಿಕೊಟ್ಟರು. ನನ್ನ ಊರು 'ಕೂಡಿಗೆ' ಎಂದು ತಿಳಿದುಕೊಂಡು ನೀವು ಪ್ರತಿಷ್ಠಿತ ಮಣೆಗಾರ ಕುಟುಂಬದವರಪ್ಪ ಅಂದರು. ನಮ್ಮದು ಒಂದು ಪ್ರತಿಷ್ಠಿತ ಕುಟುಂಬವೇ ಇರಬೇಕು ಎಂದು ಮಾತ್ರ ಅರ್ಥಮಾಡಿಕೊಂಡು ಸುಮ್ಮನಾದೆ.

ಆ ಕಾಲಕ್ಕೆ ಶಾಮಣ್ಣ ಮೈಸೂರಿನಲ್ಲಿ ಓದಿ ಎಂ.ಎ ಮಾಡಿದ್ದು, ಸರ್ಕಾರಿ ಸ್ಕೂಲಿನಲ್ಲಿ ಶಿಕ್ಷಕರಾಗಿ ಕೆಲಸದಲ್ಲಿದ್ದುದು, ತಮ್ಮ ಸರಳತೆ ಮತ್ತು ನಂಬಿಕೆಗೆ ತಕ್ಕ

ಹಾಗೆ ಜೀವನ ಮಾಡುತ್ತಿದ್ದುದು ಮೊದಲ ಆಕರ್ಷಣೆಯಾಗಿ ನನ್ನ ಅಂತರಂಗದೊಳಗೆ ಪ್ರವೇಶ ಪಡೆಯುವಂತೆ ಆಯಿತು. ಸರಳವಾಗಿದ್ದು, ಹಳ್ಳಿಗರ ವಿಶ್ವಾಸಕ್ಕೆ ಪಾತ್ರವಾದುದ್ದು ಕೇಳಿ ನನ್ನೊಳಗೂ ಶಾಮಣ್ಣನವರ ವ್ಯಕ್ತಿತ್ವವನ್ನು ಆವಾಹನೆ ಮಾಡಿಕೊಳ್ಳಬೇಕೆಂಬ ಮನಸ್ಥಿತಿ ಬೆಳೆಯತೊಡಗಿತು. ಅದರಲ್ಲೂ ತಾನು ನಂಬಿದ್ದಕ್ಕೆ ಬದ್ಧನಾಗಿರಬೇಕೆಂಬ ಆದರ್ಶ ಅವರಿಂದ ಪಡೆದುಕೊಂಡದ್ದೇ ಆಗಿದೆಯೆಂಬ ನಂಬಿಕೆ ಈಗಲೂ ನನ್ನದು. ಶಾಮಣ್ಣನವರನ್ನು ಲಾಗಾಯ್ತಿನಿಂದ ಅನುಸರಿಸಿದವರ ಮನಸ್ಥಿತಿಯೂ ಪ್ರಾಯಶಃ ನನ್ನಂತೆಯೇ ಇರಬಹುದೆಂದು ಅಂದುಕೊಂಡಿದ್ದೇನೆ.

ಎಪ್ಪತ್ತು ಎಂಬತ್ತನೆಯ ದಶಕದಲ್ಲಿ ಕುವೆಂಪು ವಿಶ್ವವಿದ್ಯಾನಿಲಯದ ಅಧ್ಯಾಪಕರಾದ ನಾವು ನಮ್ಮ ವೃತ್ತಿಯ ನಡುವೆ ಮಾಡುತ್ತಿದ್ದ ಜನಪರ ಚಟುವಟಿಕೆಗಳಲ್ಲಿ ಶಾಮಣ್ಣ ಭಾಗವಹಿಸುತ್ತಿದ್ದರು. ಅದರಲ್ಲೂ ಲಂಕೇಶ್ ಪತ್ರಿಕೆ ಸಕ್ರಿಯವಾಗಿದ್ದ ಕಾಲದಲ್ಲಿ ಅನೇಕ ಚಳುವಳಿಗಳಲ್ಲಿ ಭಾಗವಹಿಸುತ್ತಿದ್ದರು, ಬರೆಯುತ್ತಿದ್ದರು. ಅದರಲ್ಲೂ ಅವರು ವ್ಯವಸಾಯ ಮಾಡಲು ಆಯ್ಕೆ ಮಾಡಿಕೊಂಡ ಅಶೋಕನಗರದ ಹತ್ತಿರದ ಮೈದೊಳಲು, ಹಲವು ಸಾಮಾಜಿಕ ಪರಿವರ್ತನೆಯ ಪ್ರಯೋಗಶೀಲ ನೆಲವಾಗಿ ಪರಿಣಮಿಸಿತು. ಪತ್ರಿಕೆ ಓದು, ಸಮಕಾಲೀನ ಸಾಮಾಜಿಕ ರಾಜಕೀಯ ಬಿಕ್ಕಟ್ಟುಗಳ ಅರಿವು, ತಮ್ಮ ಊರಿನಲ್ಲೆ ಆಗಬೇಕಾದ ಹತ್ತಾರು ಕೆಲಸಗಳಲ್ಲಿ ತೊಡಗಿಸಿಕೊಂಡು ಜನರ ಅರಿವನ್ನು ವಿಸ್ತರಿಸಿದರು. ರೈತರ ಆರ್ಥಿಕ ಸ್ವಾವಲಂಬನೆ, ಧರ್ಮ ದೇವರುಗಳ ಹೆಸರಿನಲ್ಲಿ ಖರ್ಚುಮಾಡುವ ಹಣ, ಸಾಲ ಮಾಡಿಕೊಳ್ಳಲು ಆಸ್ಪದವಿಲ್ಲದ 'ಮಂತ್ರಮಾಂಗಲ್ಯ'ದಂಥ ಸರಳ ವಿವಾಹಗಳ ಅನುಷ್ಠಾನಕ್ಕೆ ಶಾಮಣ್ಣ ಪುರೋಹಿತರಾಗಿ ನಿಲ್ಲುತ್ತಿದ್ದರು.

ಶಾಮಣ್ಣ ಸಾಮಾಜಿಕ ಪರಿವರ್ತನೆಯ ದಾರಿಯಲ್ಲಿ ಮಾಡಿದ ಮತ್ತೊಂದು ಮುಖ್ಯ ಕೆಲಸವೆಂದರೆ 'ಶೌಚಾಲಯ ಚಳುವಳಿ'. ಜನರು ಮನೆಯಲ್ಲಿ ಕಕ್ಕಸು ಕೋಣೆ ಕಟ್ಟಿಕೊಂಡು ಅದನ್ನು ಬಳಸುವಂತೆ ಮಾಡುವ ಕೆಲಸದಲ್ಲಿ ಅವರ ಪಾತ್ರ ಮುಂಚೂಣಿಯದು. ಶಾಮಣ್ಣ ತಮ್ಮ ಹಳ್ಳಿಯ ಸುತ್ತ ಮುತ್ತ ಇರುವ ಜನರಿಗೆ ಇದನ್ನು ಗ್ರಾಮ ನೈರ್ಮಲ್ಯದ ದೀಕ್ಷೆಯಾಗಿ ಪರಿವರ್ತಿಸಿದರು.

ಒಮ್ಮೆ ಶಾಮಣ್ಣ ನಮ್ಮ ಕುವೆಂಪು ವಿಶ್ವವಿದ್ಯಾನಿಲಯದ ಕಾರ್ಯಕ್ರಮವೊಂದಕ್ಕೆ ಅತಿಥಿಯಾಗಿ ಬಂದಿದ್ದರು. ವಿದ್ಯಾರ್ಥಿಗಳೊಂದಿಗೆ ಸಂವಾದದಲ್ಲಿ ತೊಡಗಿದ್ದಾಗ ಒಬ್ಬರು "ಶಾಮಣ್ಣನವರೆ ನೀವು ಶೌಚಾಲಯ ಚಳುವಳಿ ಆರಂಭಿಸಿದ್ದೀರಿ. ಆ ಮೂಲಕ ಗ್ರಾಮ ನೈರ್ಮಲ್ಯಕ್ಕಾಗಿ ಶ್ರಮಿಸುತ್ತೀರೆಂದು ಕೇಳಿದ್ದೇನೆ. ಆ ಕುರಿತು ಹಳ್ಳಿಗರ ಪ್ರತಿಕ್ರಿಯೆ ಹೇಗಿದೆ?" ಎಂದು ಕೇಳಿದರು. ಅದಕ್ಕೆ ಶಾಮಣ್ಣ "ಹಳ್ಳಿಗರಿಗೆ ಬಯಲಿಗೆ ಹೋಗುವುದು ಅಭ್ಯಾಸವಾಗಿ ಬಿಟ್ಟಿದೆ. ತಕ್ಷಣ ಫಲಿತಾಂಶ ಕಷ್ಟ, ನಿಧಾನವಾಗಿ

ರೂಢಿಸಿಕೊಳ್ಳುತ್ತಾರೆ" ಎಂದು ಅಂದರು. ಯಾವುದೇ ಗಂಭೀರ ವಿಷಯಕ್ಕೂ ಹಾಸ್ಯಲೇಪನ ನೀಡುವ ಅವರು "ನಮ್ಮ ಹಳ್ಳಿಗರಿಗೆ ಹುಲ್ಲಿನ ಮೊನೆ ಪೃಷ್ಠಕ್ಕೆ ತಾಗಿದರೆ ಮಾತ್ರ ಮಲ ವಿಸರ್ಜನೆ ಆಗುತ್ತದೆ" ಅಂತ ಚಟಾಕಿ ಹಾರಿಸಿದರು.

ಶಾಮಣ್ಣನವರ 'ಕಕ್ಕಸು ಕ್ರಾಂತಿ' ನನ್ನನ್ನು ಅನಂತರದ ದಿನಗಳಲ್ಲಿ ತೀವ್ರವಾಗಿ ಯೋಚಿಸುವಂತೆ ಮಾಡಿತು. ರಾಮ ಮನೋಹರ ಲೋಹಿಯಾ ಅವರು ಒಮ್ಮೆ ಲೋಕಸಭೆಯಲ್ಲಿ ಮಾತನಾಡುತ್ತಾ 'ದೇವಾಲಯಗಳಿಗಿಂತ ಶೌಚಾಲಯಗಳೇ ಕೋಮು ಸೌಹಾರ್ದದ ತಾಣಗಳೆಂದು ಅಭಿಪ್ರಾಯಪಟ್ಟು ಹಲವರ ಅಚ್ಚರಿಗೆ ಕಾರಣರಾಗಿದ್ದರು. ಅವರು ಮುಂದುವರಿದು ದೇವಾಲಯ, ಮಸೀದಿ, ಚರ್ಚ್ ಕಟ್ಟಿದರೆ ಆಯಾ ಧರ್ಮದವರು ಮಾತ್ರ ಹೋಗುತ್ತಾರೆ. ಶೌಚಾಲಯ ಯಾವ ಧರ್ಮದ್ದೆಂದು ವಿಚಾರಿಸುವುದಿಲ್ಲ. ಆದ್ದರಿಂದ ಭಾವೈಕ್ಯತೆ ದೇವಾಲಯಗಳಿಗಿಂತ ಹೆಚ್ಚಾಗಿ ಶೌಚಾಲಯಗಳಲ್ಲಿ ಆಗುತ್ತದೆ ಅನ್ನುವ ಅವರ ಮಾತು ಇಂದಿಗೂ ನನ್ನನ್ನು ಗಾಢವಾಗಿ ಪ್ರಭಾವಿಸುತ್ತಾ ಬಂದಿದೆ.

ಶಾಮಣ್ಣ ನನ್ನ ಅರಿವಿನ ಲೋಕಕ್ಕೆ ಬಿತ್ತಿದ ಶೌಚಾಲಯದ ಮಹತ್ವ ನಾನು ಹೈದ್ರಾಬಾದ್ ಕರ್ನಾಟಕದಲ್ಲಿ ಪ್ರವಾಸ ಮಾಡುವಾಗ ಇನ್ನಷ್ಟು ಮನದಟ್ಟಾಯಿತು. ಅಲ್ಲಿ ನಾನು ಕಂಡ ದೃಶ್ಯಗಳು ನನ್ನನ್ನು ಇನ್ನಷ್ಟು ಮಾನವೀಯಗೊಳಿಸಲು ಕಾರಣವಾದವು. ಒಮ್ಮೆ ಸಂಶೋಧನೆ ನಿಮಿತ್ತ ಗುಲಬರ್ಗಾ ಕಡೆ ಹೋಗಬೇಕಾಯ್ತು. ಒಬ್ಬ ಗೃಹಸ್ಥರ ಮನೆಯಲ್ಲಿ ವಸತಿ ಏರ್ಪಾಟಾಗಿತ್ತು. ಮಲೆನಾಡಿಗನಾದ ನನಗೆ ಶೌಚಾಲಯದ ತೀವ್ರತೆ ಅಷ್ಟಾಗಿ ಅನುಭವಕ್ಕೆ ಬಂದಿರಲಿಲ್ಲ. ನನ್ನ ವಿಚಾರವಂತ ಗೆಳೆಯರೊಬ್ಬರು ಹೇಳುತ್ತಿದ್ದ ಮಾತು ನೆನಪಿಗೆ ಬರುತ್ತಿತ್ತು. 'ಈ ಭಾಗದ ಮಕ್ಕಳು ನೈಸರ್ಗಿಕ ಕರೆ ಬಂದರೆ ಸೂರ್ಯ ಹುಟ್ಟುವ ಮೊದಲೆ ಅದನ್ನು ಪೂರೈಸಿಕೊಳ್ಳಬೇಕು. ಇಲ್ಲವಾದರೆ ಕತ್ತಲೆಯಾಗುವವರೆಗೂ ಮತ್ತೆ ಕಾಯಬೇಕು'. ಅಷ್ಟರಲ್ಲೆ ಬೆಳಕಾಯ್ತು. ನಾನು ಉಳಿದುಕೊಂಡ ಮನೆಯ ಯಜಮಾನ 'ಸಾಹೇಬ್ರ, ಸಂಡಾಸಿಗೆ ಹೋಗ್ತಿರೇನ್ರಿ? ಅಂದ ನನಗೆ ಸಂಡಾಸ್ ಪದವೇ ಅಪರಿಚಿತವಾದ್ದರಿಂದ ಉತ್ತರಿಸಲಿಲ್ಲ. ಸ್ವಲ್ಪ ಹೊತ್ತು ಬಿಟ್ಟು ಆತ ಒಂದು ಛತ್ರಿ, ಒಂದು ಕೋಲು, ಒಂದು ಚೊಂಬು ನೀರು ತಂದಿಟ್ಟ, ನನಗೆ ನೈಸರ್ಗಿಕ ಕರೆ ಬಂದಿದ್ದರಿಂದ ಮಾಲೀಕನಿಗೆ ಸಂಜ್ಞೆಯ ಮೂಲಕ ಸೂಚನೆ ನೀಡಿದೆ. ಆತ ಎದಿರು ಇಟ್ಟ ವಸ್ತುಗಳ ಕಡೆ ಕೈ ತೋರಿದ. ಇವೆಲ್ಲಾ ಯಾತಕ್ಕೆ ಎನ್ನುವಂತೆ ಅವನ ಕಡೆ ನೋಡಿದೆ. ಆತ 'ಮುಂದೆ ಹೋಗ್ರಿ ನಿಮ್ಗೇ ಗೊತ್ತಾಗ್ತೈತೆ, ಅಂದ ಸಾಮಾಗ್ರಿ ಹಿಡಿದು ಹೊರಟೆ. ಮುಂದೆ ಸಾಗುತ್ತಾ ದೃಶ್ಯ ಭೀಕರವಾಗಿತ್ತು. ಲಿಂಗ ಭೇದವಿಲ್ಲದೆ ಎದಿರು ಬದಿರು ಕುಳಿತವರನ್ನು ನೋಡಿದೆ. ಅವರೆಲ್ಲಾ ನಿರ್ಲಿಪ್ತವಾಗಿ ತಮ್ಮ ತಮ್ಮ ಚಟುವಟಿಕೆಯಲ್ಲಿ ಮಗ್ನರಾಗಿದ್ದರು. ಎಷ್ಟು

ದಾರಿ ಸವೆಸಿದರೂ ದೃಶ್ಯ ಕೊನೆಗಾಣುವಂತಿರಲಿಲ್ಲ. ಮನೆ ಯಜಮಾನ ಕೊಟ್ಟ ಸಾಮಾಗ್ರಿಗಳ ಉದ್ದೇಶ ಆಗ ಹೊಳೆಯಿತು. ಮುಜಗರವಾಗದಂತೆ ಕಾರ್ಯನಿರ್ವಹಿಸಲು ಛತ್ರಿ, ಮುತ್ತುವ ಹಂದಿಗಳನ್ನು ದೂರ ಸರಿಸಲು ದೊಣ್ಣೆ ಉಪಯೋಗಕ್ಕೆ ಬಂತು. ಇನ್ನು ನೀರು ತುಂಬಿದ ಚೊಂಬಿನ ಉಪಯೋಗ ಗೊತ್ತಿದ್ದದ್ದೆ ಆಗಿತ್ತು.

ಇನ್ನೆರಡು ಸ್ವಾರಸ್ಯಕರ ಘಟನೆಗಳನ್ನು ನಿರೂಪಿಸಿ ನನ್ನ ಬರಹವನ್ನು ಮುಗಿಸುತ್ತೇನೆ. ಒಂದು: ಶಾಮಣ್ಣನವರ ಊರಿನ ಹತ್ತಿರದ ಹಳ್ಳಿ ಹನುಮಂತಾಪುರಕ್ಕೆ ಒಮ್ಮೆ ರಾಜ್ಯೋತ್ಸವಕ್ಕಾಗಿ ಆಹ್ವಾನಿಸಿದ್ದರು. ಹಳ್ಳಿಯ ವಾತಾವರಣ, ಜಗಮಗಿಸುವ ಮಂಟಪ. ಕುಡುಕರ ಗಲಾಟೆ. ಪ್ರೇಕ್ಷಕರು ಕುಳಿತ ಜಾಗದಲ್ಲಿ ಲೈಟ್ ಇರದಿದ್ದರಿಂದ ಗಲಾಟೆ ಮಾಡುವವರ ಮುಖ ಕಾಣಿಸುತ್ತಿರಲಿಲ್ಲ. ವೇದಿಕೆಯಲ್ಲಿದ್ದವರು ಮಾತನಾಡಲು ಆರಂಭಿಸಿದಾಗಲೆಲ್ಲಾ 'ಕೂತ್ಕೊಳಲೆ ಗೊತ್ತು! ಭಾಷಣ ಮಾಡ್ತಾನಂತೆ ಭಾಷಣ' ಎಂಬ ಕೂಗು, ಕಿರಿಕಿರಿ. ಇಂಥ ಸನ್ನಿವೇಶದಲ್ಲಿ ಶಾಮಣ್ಣ ದಢಾರನೆ ವೇದಿಕೆಯಿಂದು ಇಳಿದು ಹೋದರು. ಸ್ವಲ್ಪ ಹೊತ್ತಿನಲ್ಲೆ ಒಬ್ಬನನ್ನು ವೇದಿಕೆಗೆ ಕರೆದುಕೊಂಡು ಬಂದರು. ಆತನನ್ನು ತಮ್ಮ ಖುರ್ಚಿಯಲ್ಲಿ ಕೂರಿಸಿ ಹಿಂದೆ ನಿಂತರು. ಕತ್ತಲೆಯಲ್ಲಿ ಗಲಾಟೆ ಮಾಡುತ್ತಿದ್ದ ಆತ ವೇದಿಕೆಯ ಬೆಳಕಿನಲ್ಲಿ ತಲೆತಗ್ಗಿಸಿ ಮೌನವಾಗಿ ಕುಳಿತುಕೊಂಡ. ಹೀಗೆ ಕೂಗುತ್ತಿದ್ದ ಒಬ್ಬೊಬ್ಬರನ್ನೆ ಕರೆದುಕೊಂಡು ಬಂದು ಖುರ್ಚಿ ಹಾಕಿಸಿ ಕೂರಿಸಿದರು. ಅವರ ಸಂಖ್ಯೆ ಮೂರು–ನಾಲ್ಕು ಆಯಿತು. ಸಭೆ ನಿಶ್ಯಬ್ದವಾಯ್ತು. ನಾನು ಶಾಮಣ್ಣನವರಿಗೆ ಕಿವಿಯಲ್ಲಿ ಹೇಳಿದೆ. ನೀವು ಸಭೆ ನಿಯಂತ್ರಿಸಲು ಹೀಗೇನೊ ಮಾಡಿದಿರಿ, ಸರಿ. ಹೀಗೆ ಮಾಡಿದರೆ ಇದು ಕುಡುಕರ ವೇದಿಕೆ ಆಗುತ್ತದೆ. ಎಲ್ಲರೂ ಜಾಗ ಖಾಲಿ ಮಾಡಬೇಕಾಗುತ್ತದೆ ಎಂದೆ ಅವರು ನಗುತ್ತಾ 'ನೋಡಿ ಈಗ ಹೀಗೆ ಬೆಳಕು ಬಿದ್ದೊಡನೆ ತಲೆಕೆಳಗ್ಹಾಕಿ ಕುಗುರುತ್ತಾ ಕೂತಿದ್ದಾರೆ' ಅಂದರು. ಜನರ ನಾಡಿಯನ್ನು ಶಾಮಣ್ಣ ಹೇಗೆ ಹಿಡಿಯಬಲ್ಲವರಾಗಿದ್ದರೆಂಬುದಕ್ಕೆ ಈ ಘಟನೆ ನಿದರ್ಶನ.

ಎರಡು : ಶಾಮಣ್ಣನವರು ಮತ್ತು ನಾನು ಅನೇಕ 'ಮಂತ್ರಮಾಂಗಲ್ಯ' ವಿವಾಹಗಳಿಗೆ ನೇತೃತ್ವ ವಹಿಸಿದ್ದಿದೆ. ಒಮ್ಮೆ ನಮ್ಮಿಬ್ಬರಿಗೂ ಬೇಕಾದ ಯುವಕನೊಬ್ಬ ವಿವಾಹ ನೆರವೇರಿಸಿಕೊಡಬೇಕೆಂದು ಕೋರಿಕೊಂಡ. ನಾವು ಒಪ್ಪಿಕೊಂಡು ಹೋದೆವು. ವಿವಾಹ ನಡೆಸಿಕೊಟ್ಟೆವು. ಮದುವೆ ಮುಗಿಸಿ ಹೊರಬರುತ್ತಿದ್ದಾಗ ಒಂದಿಬ್ಬರು "ನೀವೇನೊ ವರದಕ್ಷಿಣೆ ಇಲ್ಲ; ಅದ್ದೂರಿ ಬಟ್ಟೆ ಬಂಗಾರವಿಲ್ಲ. ಇದೊಂದು ಸರಳ ವಿವಾಹ ಅಂಥ ಏನೊ ಹೇಳಿದಿರಿ. ಆದರೆ ಹುಡುಗ ಒಳಗೊಳಗೆ ಮೂರು ಲಕ್ಷ ವರದಕ್ಷಿಣೆ ತೊಗೊಂಡಿದಾನೆ. ನಿಮಗೆ ಇದು ಗೊತ್ತಾ?" ಅಂದರು. ಶಾಮಣ್ಣನವರಿಗೆ

ಏನೆನ್ನಿಸಿತೊ. "ಶ್ರೀಕಂಠ ಇವನ ಊಟಾನೂ ಬೇಡ ಎಂಥದೂ ಬೇಡ. ಬೇರೆ ಎಲ್ಲಾದ್ರೂ ಹೋಟ್ಲಲ್ಲಿ ಮಾಡೋಣ ಬನ್ನಿ" ಅಂತ ಬಾಯಲ್ಲಿದ್ದ ಎಲೆಅಡಿಕೆಯನ್ನು ಚರಂಡಿಗೆ ಉಗಿದರು. ಅಲ್ಲಿಂದ ತಪ್ಪಿಸಿಕೊಂಡೆವು.

ಶ್ರೀಯುತ ಶಾಮಣ್ಣನವರ ಜನಪರ ಕಾಳಜಿ, ಇಕ್ಕಟ್ಟು, ಪೇಚಾಟ, ಹಾಸ್ಯ, ಬದ್ಧತೆ ದಸರಾ ಉದ್ಘಾಟನೆಯ ನಿರಾಕರಣೆಯವರೆಗೆ ಮುಂದುವರಿದಿದೆ. ನಮ್ಮ ಮುಂದಿನ ತಲೆಮಾರಿಗೆ ಇವು ಸ್ಫೂರ್ತಿಯಾಗಲೆಂದು ಆಶಿಸುತ್ತೇನೆ.

ದಿನಮಣಿ

ಕೆಚ್ಚೆದೆಯ ಬೇರಿನಾಳ
ಅಣ್ಣ ಕಡಿದಾಳರಂತರಾಳ
ನಿರ್ಭಯದೊಡಲೆಲ್ಲ
ಗತಿಪ್ರಗತಿಯಂತರಂಗ...

ಹರಕೆಯಲು ಮೊರಕೆಯಾರೈಕೆ
ಮಡಿಯೆಲ್ಲ ಶುಚಿಯಲ್ಲೆ
ಜೀತಭೀತರಿಗನುಕಂಪಕಂಠ
ಅಧ್ಯಾತ್ಮದಲೆಯಿದನನವರತ...

ಮೌಢ್ಯತೆಯ ಬಡಿದಟ್ಟಿ
ಸಾಧ್ಯತೆಯ ಬೆನ್ನಟ್ಟಿ
ಚಿಂತನೆಯ ಮಂಥೈಸಿ
ಶಾಂತ ಶ್ರೀಮಂತದೇಕಾಂಗಿ...

ಚಳವಳಿಯ ಹಾದಿಯಲಿ
ಗೆಲುವಿರಲಿ ಸೋಲಿರಲಿ
ಬಿತ್ತುವರು ಒಲವ ಬೀಜವನೆ
ಅನ್ನದಾತರ ಜೀವ ಹೊಲದಲ್ಲೆ...

ಸಾಲಶೂಲೆಯೀ ರೈತಕಂಬನಿಗೆ
ಮಿಂದು ಒಂದಾಗಿ ದನಿಯಾಗೆ
ಸಂತೈಸಿ ಮಿಗಿಲಾದ ಸಂತರು
ಮುಂದಾಗಿ ಸನ್ಮಾನ ನೂಕಿದರು...

ವೇದಿ ಬೀದಿಯ ನಡಿಗೆಯಲು
ಕಾರದಾ ಖಂಡತುಂಡರು
ಕೆಣಕದೆ ತಂಪ ಸಿಂಪಡಿಸಿ
ಕಾಯುವರು ಕಾರುಣ್ಯ ಕಾಂತಿ...

ಒಡನಾಡಿ ಸಾಹಿತ್ಯ ದಿಗ್ಗಜರ
ಕ್ಷಣಬಿಂಬ ಸೆರೆಯ ಸರದಾರ
ಅಪ್ಪುಗೆಯ ಬಯಲಕಲೆ
ವಾಣಿ ವಾತ್ಸಲ್ಯ ವೇಣುವಲೆ...

೩

ಅರ್ಥೈಸಿ ಮಾಂಗಲ್ಯಮಂತ್ರಾರ್ಥ
ದಾಂಪತ್ಯ ಸರಳತೆಯ ತಾನುಂಡು
ಉಣಿಸುವರು ಉಳಿಸುವರು
ಮಾನವತೆ ಪೋಣಿಸಿದ ಮಾನಸರು...

ತೇಲುತ್ತ ಕುಪ್ಪಳಿಯ ಸೆಳವಲ್ಲಿ
ನೆಲೆಯಿಂದು ಭಗವತಿಯ ನೆಲದಲ್ಲಿ
ಬೀಗುವರು ಬಳಗದಾ ಬಲದಲ್ಲಿ
ದಿನಮಣಿಯು ದೀನದುರ್ಬಲರ...

–ಎ.ವಿ.ಶೇಷಾಚಲ

ಶಾಮಣ್ಣನವರ ಗ್ರಂಥಾಲಯ ಪ್ರೀತಿ

ಕೆ.ಜಿ. ವೆಂಕಟೇಶ್

ನನ್ನ ಹುಟ್ಟೂರು ತೀರ್ಥಹಳ್ಳಿ ಸಮೀಪದ ಒಂದು ಪುಟ್ಟ ಹಳ್ಳಿ ಕೂಡಿಗೆ. ನಮ್ಮ ಹೈಸ್ಕೂಲ್ ವಿದ್ಯಾರ್ಥಿ ಜೀವನದ ಸಂದರ್ಭಕ್ಕೆ ತೀರ್ಥಹಳ್ಳಿ ಕರ್ನಾಟಕದ ಸುದ್ದಿಯಾಗಿತ್ತು. ಕಡಿದಾಳು ಶಾಮಣ್ಣನವರ ಟೀಮ್ ಗೋಪಾಲಗೌಡರ ಪ್ರತಿನಿಧಿಯಾಗಿ ಕೋಣಂದೂರು ಲಿಂಗಪ್ಪನವರನ್ನು ಚುನಾವಣೆಗೆ ನಿಲ್ಲಿಸಿ ಹೋರಾಡುತ್ತಿದ್ದ ಸಂದರ್ಭ ಅದು. ಲಿಂಗಪ್ಪನವರ ಚುನಾವಣೆ ಖಜಾಂಚಿಯಾಗಿ ಶಾಮಣ್ಣ ಕಾರ್ಯ ನಿರ್ವಹಿಸಿದ್ದರು. ಪೂರ್ಣಚಂದ್ರ ತೇಜಸ್ವಿ, ಎನ್.ಡಿ. ಸುಂದರೇಶ್, ರಾಮದಾಸ್ ಇವರೆಲ್ಲಾ ತೀರ್ಥಹಳ್ಳಿಗೆ ಒಂದು ಚುನಾವಣಾ ಪ್ರಚಾರ ಕಾರ್ಯದಲ್ಲಿ ತೊಡಗಿದ್ದರು. ಗೋಪಾಲಗೌಡರು ಇಡೀ ತೀರ್ಥಹಳ್ಳಿ ಕ್ಷೇತ್ರವನ್ನ ಕಾಲುನಡಿಗೆಯಲ್ಲಿ ಸುತ್ತಿ ಬಡವರ ಮನೆಗೆ ಸಮಾಜವಾದಿ ಸಿದ್ಧಾಂತವನ್ನು ತಲುಪಿಸಿದ್ದರು. ನಿಜಕ್ಕೂ ಅದೊಂದು ಐತಿಹಾಸಿಕ ಚುನಾವಣೆ. ಗೋಪಾಲಗೌಡರ ಸಮಾಜವಾದಿ ಸಿದ್ಧಾಂತ ಗೆದ್ದ ಸಂದರ್ಭ. ಬದಲಾದ ಕಾಲಮಾನದಲ್ಲಿ ಅಂತಹ ಘಟನೆ ಮರುಕಳಿಸಲಾರದು. ಅಂದು ನಮ್ಮೆಲ್ಲರ ಕುತೂಹಲ ಕೆರಳಿಸಿ ಪ್ರಭಾವಿಸಿದ್ದ

ರಾಜಕಾರಣಿಗಳಾರೂ ನಮ್ಮ ನಡುವೆ ಇಲ್ಲ. ಇದ್ದರೂ ಮನೆ ಸೇರಿಕೊಂಡಿರಬಹುದು. ಆದರೆ ಒಬ್ಬ ವ್ಯಕ್ತಿ ಮಾತ್ರ ಇಂದೂ ಕೂಡ ದಣಿವರಿಯದೆ ಕ್ರಿಯಾಶೀಲರಾಗಿದ್ದಾರೆ. ಅವರೇ ನಮ್ಮ ಕಡಿದಾಳು ಶಾಮಣ್ಣನವರು.

ನಾನು ಗ್ರಂಥಾಲಯ ಇಲಾಖೆಯಲ್ಲಿ ಅಧಿಕಾರಿಯಾಗಿದ್ದಾಗ ಒಂದು ಐತಿಹಾಸಿಕ ಘಟನೆ ಸಂಭವಿಸಿತು. ಅದೇನೆಂದರೆ, ನಜೀರ್ ಸಾಹೇಬರು ದಲಿತ ಅಧಿಕಾರ ವಿಕೇಂದ್ರೀಕರಣದ ಕಾರಣಕ್ಕೆ, ಕರ್ನಾಟಕದಲ್ಲಿ ಮೂರುವರೆ ಸಾವಿರದಷ್ಟು ಮಂಡಲಪಂಚಾಯ್ತಿ ರಚನೆಗೊಂಡವು. ನಂತರ ಬಂದ ಎಂ.ವೈ ಘೋರ್ಪಡೆಯವರು ಈ ಮಂಡಲವನ್ನು ಒಡೆದು ಸುಮಾರು ಆರು ಸಾವಿರ ಗ್ರಾಮಪಂಚಾಯ್ತಿಗಳನ್ನಾಗಿ ವಿಂಗಡಿಸಿದರು. ಮುಂದೆ ಬಂದ ಸರಕಾರ ಪಂಚಾಯ್ತಿಗೊಂದು ಲೈಬ್ರರಿ ಎಂದು ಘೋಷಣೆ ಮಾಡಿ ಅದರಂತೆ ಗ್ರಾಮ ಪಂಚಾಯ್ತಿಗೊಂದು ಗ್ರಂಥಾಲಯ ಆರಂಭಗೊಳ್ಳತೊಡಗಿದವು. ಪಂಚಾಯ್ತಿರುವ ಗ್ರಾಮದಲ್ಲೇ ಒಬ್ಬ ಸಿಬ್ಬಂದಿಯನ್ನು ನೇಮಕ ಮಾಡಿಕೊಂಡು ಆತನಿಗೆ ತಿಂಗಳಿಗೆ ೩೫೦ರೂ. ಗೌರವ ಧನ ನಿಗದಿ ಮಾಡಿ ಮೇಲ್ವಿಚಾರಕ ಎಂಬ ಹೆಸರಿನೊಂದಿಗೆ ಕರ್ತವ್ಯ ನಿರ್ವಹಿಸುವಾಗ್ಗೆ, ಈ ಗೌರವ ಧನ ಯಾತಕ್ಕೂ ಸಾಲದೆಂದು ಅವರೆಲ್ಲಾ ಚಳುವಳಿ ನೇತೃತ್ವ ವಹಿಸಿರುವುದು ಗೊತ್ತಾಯಿತು. ಶಾಮಣ್ಣನವರ ಇತಿಹಾಸ ನೋಡಿದರೆ, ಅವರೊಬ್ಬ ಗ್ರಂಥಪ್ರಿಯ, ಬಹಳ ಹಿಂದೆ ಪ್ರಕಾಶನ ತೆಗೆದಿದ್ದವರು ಮತ್ತು ಪುಸ್ತಕ ಮಾರಿದ್ದವರು. ಗ್ರಾಮ ಪಂಚಾಯ್ತಿಗೊಂದು ಗ್ರಂಥಾಲಯು ತೆರೆದುಕೊಂಡಿದ್ದುದ್ದು, ಅವರಿಗೆ ಸಂತೋಷವುಂಟು ಮಾಡಿತ್ತು. ಅದರ ಜೊತೆಗೆ ಮೇಲ್ವಿಚಾರಕರಿಗೆ ಕೊಡುತ್ತಿರುವ ಗೌರವಧನ ಯಾತಕ್ಕೂ ಸಾಲದೆಂದು ಮರುಗಿ, ಸರಕಾರದ ಮಟ್ಟದಲ್ಲಿ ಹೋರಾಡಲು ಆ ಚಳುವಳಿಯ ಮುಂಚೂಣಿಗೆ ಬಂದಿದ್ದರು. ಸರಕಾರವೇನಾದರೂ ಈ ಗ್ರಾಮಪಂಚಾಯ್ತಿ ಗ್ರಂಥಾಲಯಗಳನ್ನು ಅಭಿವೃದ್ಧಿಪಡಿಸುವುದಿದ್ದರೆ, ಪ್ರತಿ ಗ್ರಂಥಾಲಯಕ್ಕೊಂದು ಪುಸ್ತಕದಂತೆ ಆರು ಸಾವಿರ ಪ್ರತಿ ಪ್ರಿಂಟಾಗಬೇಕಾಗುತ್ತದೆ. ಹಾಗೆಯೇ ದಿನ, ವಾರ, ಮಾಸ ಪತ್ರಿಕೆಗಳು, ಆರು ಸಾವಿರದ ನಂತರ ತಮ್ಮ ಉಳಿದ ಸರ್ಕ್ಯುಲೇಷನ್ ಬಗ್ಗೆ ತಲೆಕೆಡಿಸಿಕೊಳ್ಳಬೇಕಾಗುತ್ತದೆ. ನಿಜಕ್ಕೂ ಇದೊಂದು ಅಕ್ಷರ ಕ್ರಾಂತಿಯಾಗುತ್ತದೆ. ಆದರೆ ಶಾಮಣ್ಣನ ವೇಗಕ್ಕೆ ಸರಕಾರವಿರಲಿಲ್ಲ. ಇಡೀ ಕರ್ನಾಟಕದಲ್ಲಿ ಇಷ್ಟೆಲ್ಲಾ ಹೋರಾಟಗಾರರು, ಪ್ರಜ್ಞಾವಂತರು ಮತ್ತು ಸಾಹಿತಿಗಳಿದ್ದರೂ ಕೂಡ, ಗ್ರಂಥಾಲಯ ಚಳುವಳಿಗೆ ತಲೆ ಕೆಡಿಸಿಕೊಂಡು ಓಡಾಡಿದವರು, ಶಾಮಣ್ಣನವರೊಬ್ಬರೆ. ಆ ಸಮಯದಲ್ಲಿ ನನಗೆ ಅವರ ಹೆಚ್ಚಿನ ಪರಿಚಯವಾಯ್ತು.

ಲೈಬ್ರರಿಗಳ ಬಗ್ಗೆ ಅವರಿಗಿರುವ ಕಾಳಜಿ, ಪುಸ್ತಕ ಪ್ರೀತಿ ಸಾಮಾಜಿಕ ಜವಾಬ್ದಾರಿ ಮತ್ತು ಗೌರವ ಧನ ಪಡೆಯುತ್ತಿದ್ದ ಬಡ ಸಿಬ್ಬಂದಿಗಳ ಬಗ್ಗೆ ಅವರು ತೋರುತ್ತಿದ್ದ

ಮರುಕ ಸರಕಾರದ ಕಣ್ಣು ತೆರೆಸಬೇಕಿತ್ತು. ಗ್ರಾಮ ಪಂಚಾಯ್ತಿ ಗ್ರಂಥಾಲಯ ತೆರೆದಾಗ, ಅದರ ಸಿಬ್ಬಂದಿಗೆ ತಿಂಗಳಿಗೆ ೩೫೦.೦೦ರೂ. ಕೊಡುತ್ತಿದ್ದರು. ಈಗ ೬೦೦೦ರೂ.ಗಳಿಗೆ ತಲುಪಿದೆ. ಆದರೇನು, ಈ ಸಿಬ್ಬಂದಿಗಳು ನಿವೃತ್ತಿ ವಯಸ್ಸು ತಲುಪಿದ್ದಾರೆ. ಶಾಮಣ್ಣನವರ ಹೋರಾಟದಿಂದ ಸರಕಾರ ಅಲ್ಪಸ್ವಲ್ಪ ಗೌರವಧನ ಹೆಚ್ಚಿಸಿತು. ಆದರೆ ಇದರಿಂದೇನು ಅವರ ಜೀವನ ಮಟ್ಟವಾಗಲಿ. ಗ್ರಾಮೀಣ ಭಾಗದ ಗ್ರಂಥಾಲಯಗ ಳಾಗಲಿ ಸುಧಾರಿಸಲಿಲ್ಲ. ಶಾಮಣ್ಣನವರ ಆತ್ಮೀಯರಾಗಿದ್ದ ಎಂ.ಪಿ. ಪ್ರಕಾಶರೇ ಗ್ರಂಥಾಲಯ ಇಲಾಖೆ ಮಂತ್ರಿಗಳಾಗಿದ್ದಾಗಲೂ ಗೌರವಧನದ ವಿಷಯದಲ್ಲಿ ವ್ಯತ್ಯಾಸ ಕಾಣಲಿಲ್ಲ. ಆದರೆ ಶಾಮಣ್ಣನವರ ಶೌಚಾಲಯದ ಕಾರ್ಯಕ್ರಮವನ್ನು ಗಂಭೀರವಾಗಿ ಪರಿಗಣಿಸಿದ ಎಂ.ಪಿ. ಪ್ರಕಾಶ್ ಅದನ್ನು ಪಂಚಾಯ್ತಿ ಕಾರ್ಯಕ್ರಮವಾಗಿ ಅಳವಡಿಸಿ ಕೊಂಡರು. ಒಂದು ಊರಿಗೆ ಪ್ರೈಮರಿ ಶಾಲೆಯ ಅಗತ್ಯವಿರುವಂತೆಯೇ ಗ್ರಂಥಾಲಯದ ಅಗತ್ಯವಿದೆ. ಪ್ರೈಮರಿ ಶಾಲಾ ಮಾಸ್ತರನಷ್ಟೇ ಮುಖ್ಯನಾದ ಗ್ರಂಥಪಾಲಕನಿಗೂ ಸಂಬಳಕೊಟ್ಟು ಗ್ರಂಥಾಲಯಗಳನ್ನು ಅಭಿವೃದ್ಧಿಪಡಿಸುವುದು ಸರಕಾರದ ಕರ್ತವ್ಯ. ಈ ಆಲೋಚನೆಯನ್ನಿಟ್ಟುಕೊಂಡು ಶಾಮಣ್ಣನವರು ತಮ್ಮ ಗೆಳೆಯರಾದ ಜೆ. ಹೆಚ್. ಪಟೇಲರು ಮುಖ್ಯಮಂತ್ರಿಗಳಾಗಿದ್ದಾಗಲೂ ಹೋರಾಡಿದರು. ಆದರೆ ಪಟೇಲರು. "ನೀನೇ ಬಂದು ಆ ಇಲಾಖೆಯ ಮಂತ್ರಿಯಾಗಿ ಎಲ್ಲವನ್ನು ಸರಿಮಾಡು" ಎಂಬ ಸಲಹೆ ಕೊಟ್ಟರು. ಶಾಮಣ್ಣ "ಅದು ಸಾಧ್ಯವಿಲ್ಲ. ನೀವೇ ಬಗೆಹರಿಸಿ" ಎಂದರು. ಹೀಗೆ ಈ ನಾಡಿನ ನೊಂದ ಜೀವಿಗಳ ಪರವಾಗಿ, ಹೋರಾಡುವ ಶಾಮಣ್ಣನವರ ಉತ್ಸಾಹ ಇನ್ನೂ ಬತ್ತಿಲ್ಲ. ಅವರ ಗ್ರಾಮೀಣ ಗ್ರಂಥಾಲಯಗಳ ಅಭಿವೃದ್ಧಿ ಕನಸು ಮಾತ್ರ ಸಧ್ಯಕ್ಕೆ ನನಸಾಗುವಂತೆ ಕಾಣುತ್ತಿಲ್ಲ. ಇದೊಂದು ರೀತಿ ದಿಕ್ಕು ತೋಚದ ಸ್ಥಿತಿ. ಆದರೆ ಶಾಮಣ್ಣನವರು ಮಾತ್ರ ನಿರಾಶರಾಗಿಲ್ಲ. ಈಗಲೂ ಗ್ರಂಥಾಲಯ ಮೇಲ್ವಿಚಾರಕರು ಕರೆದ ಸಭೆ ಮತ್ತು ಚಳುವಳಿಯಲ್ಲಿ ಸಕ್ರಿಯರಾಗಿ ಭಾಗವಹಿಸುತ್ತಲೇ ಇದ್ದಾರೆ.

ಸಕ್ರಿಯ ರಾಜಕೀಯಕ್ಕೆ ಪ್ರವೇಶಿಸಿದ ವ್ಯಕ್ತಿಗಳು ಶಾಮಣ್ಣನವರ ರೀತಿ ನೀತಿಗಳನ್ನು ತಮ್ಮ ಬದುಕಿನಲ್ಲಿ ಅಳವಡಿಸಿಕೊಂಡಿದ್ದರೆ ಎಷ್ಟು ಚೆನ್ನಾಗಿತ್ತು ಅನ್ನಿಸುತ್ತದೆ. ಜನಸಾಮಾನ್ಯರ ಆಶಯಗಳಿಗೆ ಪೂರಕವಾಗಿ ತಮ್ಮ ಕಾರ್ಯಕ್ರಮಗಳನ್ನು ರೂಪಿಸಿಗೊಂಡು ಸೋಲು ಗೆಲುವಿನ ಬಗ್ಗೆ ಚಿಂತಿಸದೆ ಸದಾ ಕ್ರಿಯಾಶೀಲರಾಗಿರುವ ಕಡಿದಾಳು ಶಾಮಣ್ಣನವರು ಗಾಂಧಿ ಕನಸುಗಳಿಗೆ ತುಂಬಾ ಹತ್ತಿರದವರು.

ಶಾಮಣ್ಣನವರಿಗೊಂದು ಪ್ರೀತಿಪೂರ್ವಕ ಪತ್ರ

ಜಿ.ಕೆ. ಗೋವಿಂದರಾವ್

ಪ್ರಿಯ ಶಾಮಣ್ಣ ಅವರಿಗೆ ನಮಸ್ಕಾರ,

ನಿಮ್ಮ ಬಿಳಿಗಡ್ಡ ನೋಡಿದರೆ ಮಾತ್ರ ಸ್ವಲ್ಪ ನಿಮಗೆ ವಯಸ್ಸಾಗಿರಬಹುದು ಎಂಬ ಭಾವನೆ ಹುಟ್ಟುತ್ತದೆ. ಅಷ್ಟೆ – ಆದರೆ ೭೫ ಆಯಿತು ಎಂದರೆ ನಂಬುವುದು ಸ್ವಲ್ಪ ಕಷ್ಟವೆ. ಅಷ್ಟಕ್ಕೂ, ಶಾಮಣ್ಣ, ನಿಮಗೇ ಅನುಭವಕ್ಕೆ ಬಂದಿರಬಹುದಾದ ಸತ್ಯವೆಂದರೆ ವಯಸ್ಸು ದೇಹಕ್ಕೆ ಮಾತ್ರ ತಾನೆ? ನಮ್ಮ ಮನಸ್ಸಿಗಲ್ಲವಲ್ಲ? ಮನಸ್ಸೆಂಬುದು ನಮ್ಮ ವೈಯಕ್ತಿಕ ಸುಪರ್ದಿನಲ್ಲಿರುತ್ತದೆ. ನಾವು ಬೆಳಿಸಿದ ಹಾಗೆ, ಅರಳಿಸಿದ ಹಾಗೆ ಅದು ಬೆಳೆಯುತ್ತದೆ. ಮತ್ತೆ ಮನಸ್ಸು ಕೂಡ ನಮ್ಮನ್ನು, ತನ್ನ ಸರದಿಯಲ್ಲಿ, ಬೆಳೆಸಿ ಅರಳಿಸುತ್ತದೆ. ಹಾಗಾಗಿ ನಮ್ಮ ಕೇರ್‌ನಲ್ಲಿರುವ ಮನಸ್ಸಿಗೆ ಎಂದಿಗೂ ಚಿರಯೌವ್ವನವೆ. ನೀವು ಕೂಡ ಆ ರೀತಿಯ ಯುವಕರು. ನಿಮ್ಮ ಜೀವನೋತ್ಸಾಹ, ಸುತ್ತಲಿನವರ ಕುರಿತಾದ ನೈಜ ಪ್ರೀತಿ, ಕಳಕಳಿ, ಹಾಗೂ ಭೂಮಿ ತಾಯಿಯೊಡನೆ ಚಿರನಂಟು ಎಂದಿಗೂ ನಿಮ್ಮನ್ನು ವಯಸ್ಸಾದವರು ಎಂದು ಹೇಳಲಿಕ್ಕಾಗದಂಥವರ ಸಾಂಗತ್ಯದಲ್ಲೇ ಇರುತ್ತೀರಿ. ಕೃತಕತೆಯೇ ಇಲ್ಲದ ನಿಮ್ಮ

ಮುಗಳ್ನಗೆಯಾಗಲೀ, ದೊಡ್ಡ ನಗುವೇ ಆಗಲಿ, ಸರಳ, ಸ್ಪಷ್ಟ ಮೆದು ಮಾತಾಗಲೀ, ಯಾವ ಸಂದರ್ಭದಲ್ಲಿಯೂ ಜಾಣತನ ಪ್ರದರ್ಶಿಸದ ನಿಮ್ಮ ನಡವಳಿಕೆಯಾಗಲೀ ಯಾರನ್ನೇ ಆಗಲೀ ಆಕರ್ಷಿಸದೇ ಇರದು. ಈ ಗುಣಗಳೇ ನಿಮ್ಮೊಡನೆ ವ್ಯವಹರಿಸುವ ಯಾರಲ್ಲೇ ಆಗಲಿ ಪರಿಣಾಮ ಬೀರದೇ ಇರದು. ಅಂದರೆ ಯಾರು ನಿಮ್ಮೊಡನೆ ಮಾತಾಗಲೀ, ಚರ್ಚೆಯಾಗಲಿ ಅಥವಾ ಮುಖ್ಯ ವಿಷಯಗಳ ಕುರಿತಾದ ವಿನಿಮಯವಾಗಲೀ ಮಾಡ ಬಯಸುವವರು ತಾವು ಕೂಡ ಆದಷ್ಟು ವಿನಯ, ಸಹಜತೆಗಳನ್ನು ಕಾಪಾಡಿಕೊಂಡೇ ಮುಂದು ವರೆಯುವರು ಎಂದು ಕೂಡ ನನಗೆ ಅನ್ನಿಸುತ್ತದೆ. ನಿಮ್ಮ ನನ್ನ ಭೇಟಿ ಬಹಳಷ್ಟು ಏನೂ ಆಗಿಲ್ಲ. ಹೇಳಿ ಕೇಳಿ ನಾನು ಆಜನ್ಮ ಪಟ್ಟಣಿಗ ಮತ್ತು ನಿಮ್ಮ ಲೋಕದೊಡನೆ ನನಗೆ ಸಂಪರ್ಕವಿರಲಿ, ಅದರ ಕುರಿತಾದ ಸಾಮಾನ್ಯ ಜ್ಞಾನವೂ ಕೂಡ ಕನಿಷ್ಟಕ್ಕಿಂತ ಕಡಿಮೆ. ಆದರೆ ಭೇಟಿಯಾದದ್ದು, ಮಾತುಕತೆ ನಡೆದದ್ದು ಕೈಬೆರಳೆಣಿಕೆಯಷ್ಟಿದ್ದರೂ ಆ ಕ್ಷಣಗಳೇ ಸಾಕಷ್ಟು ನನ್ನನ್ನು ಪ್ರಭಾವಿಸಿವೆ.

ಈಗ ನಿಮಗೆ ಎಪ್ಪತ್ತೈದು ತುಂಬಿರುವ ಸಂದರ್ಭದಲ್ಲಿ ನಿಮಗೆ ಗೌರವ ಗ್ರಂಥ ಸಮರ್ಪಣೆ ಮಾಡಿ ನಿಮ್ಮ ಸ್ನೇಹಿತರು, ಒಡನಾಡಿಗಳು, ಅಪಾರ ರೈತ ಬಳಗ ನಿಮಗೆ ತಮ್ಮ ಕೃತಜ್ಞತೆ, ಪ್ರೀತಿ ಮತ್ತು ಗೌರವಗಳನ್ನು ಅರ್ಪಿಸಲು ನಿರ್ಧರಿಸಿದ್ದಾರೆ. ಇದು ಖಂಡಿತ ಸೂಕ್ತ. ಇಂಥ ಅಪಾರ ಅಭಿಮಾನಿಗಳಲ್ಲಿ ನಾನೂ ಒಬ್ಬನಾಗಿರಲು ನನಗೆ ತುಂಬ ಹೆಮ್ಮೆ ಎನಿಸುತ್ತದೆ. ನಿಮ್ಮ ಎರಡು ಪ್ರಕಟಿತ ಪುಸ್ತಕಗಳನ್ನೂ ಕೂಡ ಓದಿದೆ. 'ಆ ದಶಕ' ಎಂಬ ನಿಮ್ಮ 'ಎಂಭತ್ತರ ದಶಕದ ಬರಹ ಮತ್ತು ಪತ್ರಗಳು' ಪುಸ್ತಕವನ್ನು ಹೆಚ್ಚು ಕಡಿಮೆ ಕವರ್ ಟು ಕವರ್ ಓದಿದೆ. 'ಕಾಡ ತೊರೆಯ ಜಾಡು' ಎಂಬ ನಿಮ್ಮ 'ಬದುಕು ಹೋರಾಟಗಳ ಕಥನ' ವನ್ನು ಸದ್ಯಕ್ಕೆ ಮೂರನೆ ಎರಡಷ್ಟು ಓದಿದ್ದೇನೆ. ನಿಮ್ಮ ಎಂಭತ್ತರ 'ಆ ದಶಕ'ದ ಪುಸ್ತಕ ನನ್ನನ್ನು ಒಂದು ಬಗೆಯ ತಲ್ಲಣಕ್ಕೆ ಒಳಗು ಮಾಡಿತು. ಗ್ರಾಮ ಜೀವನ, ರೈತರ ಹಲವು ಹತ್ತು ಬಗೆಯ ಸಂಕಷ್ಟಗಳು, ರೈತರ ಹೆಂಡಿರು, ಹೆಣ್ಣು ಮಕ್ಕಳ ದಿಕ್ಕೆಟ್ಟ ಪರಿಸ್ಥಿತಿ ಎಲ್ಲವನ್ನೂ ಓದುತ್ತಿದ್ದಂತೆ ನನಗೆ ಇದುವರೆವಿಗೆ ತೃಣವೂ ಪರಿಚಯವೇ ಇಲ್ಲದಿದ್ದ ಒಂದು, ಭಯಂಕರವೇ ಅನ್ನಿಸುವಂಥ, ಲೋಕಕ್ಕೆ ದಿಢೀರನೆ ಎತ್ತಿ ಕುಕ್ಕಿತು. ರೈತರ ಬವಣೆಯಾದರೆ ಆರಣ್ಯರೋದನವೇ ಆಗಿದ್ದ ಕಾಲ ಮೊನ್ನೆ ಮೊನ್ನೆಯವರೆವಿಗೆ– ಅಂದರೆ ೮೦ರ ದಶಕದವರೆವಿಗೆ ಈ ಸ್ವತಂತ್ರನಾಡಿನಲ್ಲಿ ಮೆರೆದಾಡಿತು. ನಮ್ಮ ಅಧಿಕಾರವರ್ಗ, ಪೊಲೀಸ್ ಇಲಾಖೆ–ಅವರ ಬಾಯಲ್ಲಿ ಹೊರಡುವ ಭಾಷೆ– ರೈತರನ್ನು ಕೂಲಿಯಾಳಾಗಿ ಬಳಸಿಕೊಳ್ಳುವ ಭೂಮಾಲೀಕರು ಇವೆಲ್ಲ ಮೌನದಲ್ಲಿಯೇ, ತುಟಿ ಬಿಚ್ಚದೆ ಸಹಿಸಿದ ರೈತರ ಕುರಿತಾದ ಗಂಭೀರ ಕಳಕಳಿ, ಬದ್ಧತೆಯನ್ನು

ಪ್ರದರ್ಶಿಸಿದ ರೈತನಾಯಕರುಗಳಲ್ಲಿ ನೀವೂ ಪ್ರಧಾನರು. ನಿಮ್ಮ ಕೃತಿಯಲ್ಲಿ ನೀವೇ ಹೇಳಿರುವ ಹಾಗೆ ಈಗ ರೈತರು ಅಧಿಕಾರ ವರ್ಗಕ್ಕೆ, ಪೊಲೀಸ್ ಅಧಿಕಾರಿಗಳಿಗೆ ಮುಖಕ್ಕೆ ಮುಖ ಕೊಟ್ಟು, ದಿಟ್ಟವಾಗಿ ಮಾತನಾಡುವ, ಹಕ್ಕಿಗಾಗಿ ಹೋರಾಡುವ ಸ್ಥೈರ್ಯವನ್ನು, ಆತ್ಮವಿಶ್ವಾಸವನ್ನು ಮೂಡಿಸುತ್ತಿದ್ದೀರಿ. ಇಂಥ ಹೋರಾಟಗಳು, ಇಂಥ ಚಳುವಳಿಗೆ ಆರಂಭವಿರುತ್ತದೆ, ಅಂತ್ಯವೆಂಬುದಿಲ್ಲ. ಸ್ವಾತಂತ್ರ್ಯ, ಸಮಾನತೆಗಳೆಂಬ ಮೌಲ್ಯಗಳನ್ನು ಸಾಧಿಸುವುದರಲ್ಲಿಯೂ ಹೀಗೇ ಅಲ್ಲವೆ? ನಾಗ ಸಮುದ್ರದಲ್ಲಿ ರೈತರನ್ನು ಕೊಂದದ್ದು, ಬೆತ್ತಲೆಸೇವೆ ವಿರುದ್ಧದ ಚಳುವಳಿಯಲ್ಲಿ ಅಮ್ಮನ ಭಕ್ತರು ಮತ್ತು ಅಧಿಕಾರವರ್ಗ ನಡೆದುಕೊಂಡ ರೀತಿ, ಈ ಮಧ್ಯೆ ದಲಿತ ಮಹಿಳೆ ಮಾರಮ್ಮನಿಗೆ ನೀರು ಕೊಡದೆ ಕೊನೆಗೆ ಈ ಹಿಂಸೆ ತಾಳಲಾರದೆ ಆಕೆ ಊರೇ ಬಿಟ್ಟು ಹೋಗುವಂತೆ ಮಾಡಿದ ಹನುಮಂತಾಪುರದ ರೆಡ್ಡಿ ಕ್ಯಾಂಪು, ಇವುಗಳೆಲ್ಲ ನಮ್ಮ ಜನ, ನಮ್ಮ ನಾಡು ಕಿಂಚಿತ್ತಾದರೂ ನಾಗರಿಕತೆ, ಮಾನವೀಯತೆ ರೂಢಿಸಿಕೊಳ್ಳಲು ಮತ್ತೆಷ್ಟು ದಶಕಗಳು ಕಾಯಬೇಕು, ನಿಮ್ಮಂತ ವ್ಯಕ್ತಿಗಳು ಮತ್ತೆಷ್ಟು ಚಳವಳಿಗಳು ನಡೆಸಬೇಕು ಎಂದು ಕಲ್ಪಿಸಿಕೊಳ್ಳಹೋದರೇ ಕಣ್ಣು ಕಪ್ಪಿಡುತ್ತದೆ. ಆದರೆ ಹತಾಶೆಗೆ ಅವಕಾಶವೇ ಇಲ್ಲ – ಅದು ನಿಮ್ಮ ನಿರಂತರ ಹೋರಾಟಗಳ ರೀತಿಯಲ್ಲಿಯೇ, ವೈಚಾರಿಕ ಮುಖಾಮುಖಿಗಳಲ್ಲಿಯೇ ಸ್ಪಷ್ಟವಾಗುತ್ತದೆ. ನೀವು 'ಲಂಕೇಶ್ ಪತ್ರಿಕೆ'ಯಲ್ಲಿ ನಿಮ್ಮ ಲೇಖನಗಳ ಮೂಲಕ ಸಾವಿರಾರು ಜನಗಳನ್ನು ತಲುಪಿದ್ದೀರಿ. ಕಣ್ಣು ತೆರೆಸಿದ್ದೀರಿ, ಎಚ್ಚರಿಸಿದ್ದೀರಿ – ರೈತರನ್ನೂ ಮತ್ತು ಅಧಿಕಾರವರ್ಗವನ್ನೂ ಕೂಡ. ರೈತರನ್ನು ಅಸಡ್ಡೆ, ಉದಾಸೀನ ಅಥವಾ ಅದಕ್ಕಿಂತ ಅಪಾಯಕಾರಿಯಾದ ವ್ಯವಸ್ಥೆಯೊಡನೆ ಹೊಂದಾಣಿಕೆ ಇವುಗಳ ಬಗ್ಗೆ ಎಚ್ಚರಿಸಿದ್ದೀರಿ. ಪ್ರತಿಶಬ್ದದಲ್ಲಿಯೂ ನಿಮ್ಮ ಜೀವನ ಪ್ರೇಮ ಮಿಡಿಯುತ್ತದೆ. ವ್ಯವಸ್ಥೆಗೆ ನೀಡಿರುವ ಎಚ್ಚರಿಕೆ ಹೆಚ್ಚು ಗಹನವಾದದ್ದು. ಪ್ರಜಾತಂತ್ರದಲ್ಲಿ ಜನಗಳಿಂದಲೇ ಹೊಮ್ಮಿದ ನಾಳಿನ ಕುರಿತಾದ ಕಾಳಜಿ ಅಧಿಕಾರ ವರ್ಗ ಈ ಕಾಳಜಿಗೆ ಕ್ರೀಯಾಶೀಲವಾಗಿ ಸ್ಪಂದಿಸುವುದಷ್ಟೇ ಅಲ್ಲ, ಅದಕ್ಕೆ ವ್ಯವಸ್ಥಿತ ರೂಪು ಕೂಡ ನೀಡುವುದು ಕರ್ತವ್ಯವೆನಿಸಬೇಕು. ಹಾಗೆ ನಿರ್ವಹಿಸದೇ ಹೋದರೆ ಸಮಾಜದ ಅತ್ಯಂತ ಕೆಳ ಸ್ತರದಲ್ಲಿಯೇ ಇಡಲ್ಪಟ್ಟ ರೈತರು, ದಲಿತರು, ಮಹಿಳೆಯರು ಈ ಸ್ವತಂತ್ರ ನಾಡಿನಲ್ಲಿ ತಮ್ಮ ಪೂರ್ಣ ಪ್ರಮಾಣದ ಅಸ್ತಿತ್ವವನ್ನು ಕಂಡುಕೊಳ್ಳಲಾರನು ಎಂಬ ಪ್ರಜ್ಞೆಯಲ್ಲಿ ತೀವ್ರ ಸ್ವರೂಪದ ಹೋರಾಟದ ಮಾರ್ಗವನ್ನು ಕಂಡುಕೊಳ್ಳುತ್ತಾರೆ ಎಂಬ ಸತ್ಯವು ಗೋಚರವಾಗಬೇಕು, ಆಗುತ್ತದೆ. ಹಾಗಾಗಿಯೇ ನಿಮ್ಮಂಥ ನಾಯಕರುಗಳು ಮಾನಸಿಕ, ಬೌದ್ಧಿಕ ಯೌವನವನ್ನು ಕಾಪಾಡಿಕೊಳ್ಳಬೇಕು. ಇವೆಲ್ಲ ನಿಮಗೇ ಗೊತ್ತಿರುವ ಸತ್ಯಗಳು.

'ಕಾಡ ತೊರೆಯ ಜಾಡು' ಮತ್ತೊಂದು ರೀತಿಯ ಕೃತಿ. 'ಆ ದಶಕ' ಹೋರಾಟದ ಕೃತಿಯಾದರೆ ನಿಮ್ಮ ಆತ್ಮಚರಿತ್ರೆಯೇ ಅನ್ನಬಹುದಾದ 'ಕಾಡು ತೊರೆ ...' ಸಾಹಸಮಯ,

ವರ್ಣರಂಜಿತ ಕೃತಿ. ಯಾವ ಪುಟವೇ ತೆರೆದರೂ ಸರಿ ಅಲ್ಲೊಂದು ಕೂತೂಹಲದ, ಸ್ವಾರಸ್ಯಕರ ಮತ್ತು ಕಾಡಿನಲ್ಲಿ ಸಣ್ಣದಾಗಿ ಅಲ್ಲಿ ಇಲ್ಲಿ ಹರಿಯುವ ತೊರೆಗಳಂತೆ ಹಾಸ್ಯಪ್ರಜ್ಞೆ ಹರಿಯುತ್ತಿರುತ್ತದೆ. ನನಗೆ ಅತ್ಯಂತ ಮುಖ್ಯವೆನಿಸುವ ವಿಷಯವೆಂದರೆ, ನೀವು ಇಲ್ಲಿಯೂ ಕೂಡ ಮನಸ್ಸನ್ನು ಹುಳಿ ಮಾಡಿಕೊಳ್ಳುವುದಿಲ್ಲ. ನಿಮ್ಮ ವ್ಯಕ್ತಿವಿಚಾರದಲ್ಲಿ ಆಗಲಿ, ಸಂದರ್ಭ ನಿರೂಪಣೆಯಲ್ಲಿ ಆಗಲಿ ಭಾಷೆ ಒಗರಾಗುವುದಿಲ್ಲ. ಸಿನಿಕತನದ ಎಳೆಯೂ ಇರುವುದಿಲ್ಲ. ಯಾರನ್ನೂ ಅಪರಾಧಿಸ್ಥಾನ ದಲ್ಲಿಟ್ಟು ನಿಮ್ಮ ತೀರ್ಪುಗಳನ್ನು ನೀಡುವುದಿಲ್ಲ. ಸಮಾಧಾನ ಚಿತ್ತದಿಂದ ನಡೆದದ್ದನ್ನು ಹೇಳುತ್ತೀರಿ– ಸಹಜವಾಗಿ, ಸರಳವಾಗಿ, ಸ್ಪಷ್ಟವಾಗಿ.

ಇಂಥ ಗುಣ ಸಾಧಿಸುವುದು ಸುಲಭವಲ್ಲ – ಖಂಡಿತ ಅಲ್ಲ. ಬಹುಶಃ ಇಂಥ ಗುಣ ಸಾಧಿಸುವುದೇ ಮನುಷ್ಯನ ಮೂಲ ಆಶಯವಾಗಿರಬೇಕು ಎಂದು ನಂಬಿರುವ ವನು ನಾನು. ಈ ಗುಣ ಸಾಧಿಸಿರುವುದರಿಂದಲೇ ನಿಮ್ಮ ಮುಖದಲ್ಲಿ ಎಂದಿಗೂ ಮುಗ್ಧ ಮುಗುಳ್ನಗೆ ಇರುತ್ತದೆ, ಮುಖದಲ್ಲಿ ಉಲ್ಲಾಸವಿರುತ್ತದೆ. ಮಾತು ಜೇನಹನಿಯಷ್ಟು ಮಧುರವಾಗಿರುತ್ತದೆ. ಅಚಾನಕ್ ನೀವು ಆರಿಸಿಕೊಂಡ ಸಣ್ಣ ಗ್ರಾಮದ ಹೆಸರೇ ನೋಡಿ – ಭಗವತಿ ಕೆರೆ. ಯಾರಾದರೂ ಕೇಳಿದರೆ – ನಾನು ಕೂಡ – ಈ ಹೆಸರು ಕೊಟ್ಟವರು ನೀವೇ ಎಂಬ ಅನುಮಾನ ಬರಬೇಕು, ಹಾಗಿದೆ ಹೆಸರು. ಇಂಥ ಪರಿಸರದಲ್ಲಿರುವ, ಸಂಪೂರ್ಣ ಮನಸ್ಸು, ವ್ಯಕ್ತಿತ್ವವನ್ನೇ ಅರ್ಪಿಸಿಕೊಟ್ಟವರಿಗೆ ಮನಸ್ಸು ಹುಳಿಯಾಗುವುದು ತಾನೆ ಹೇಗೆ ಸಾಧ್ಯ?

ಜೊತೆಗೆ ನಿಮ್ಮ ಸಂಗೀತವಿದೆ. ಪ್ರಕೃತಿಯ ರಮಣೀಯತೆಗೆ, ದಿನನಿತ್ಯದ ನೂರು ಬಗೆಯ ಪ್ರಾಕೃತಿಕ ಸಿಂಫನಿಗಳಿಗೆ ನಮ್ಮ ಸಂಗೀತ ಒಂದು ಬಗೆಯ ಶೃತಿಯೂ ಹೌದು, ಆ ಅಮೂರ್ತ ಸಂಗೀತವನ್ನು ಮುಟ್ಟ ಹೊರಡುವ ನಮ್ಮ ಆತ್ಮದ ಹಂಬಲದ ಅಭಿವ್ಯಕ್ತಿಯೂ ಹೌದು.

ನನಗೆ ಅತ್ಯಂತವಾಗಿ ಮನಸ್ಸನ್ನು ಮಿಡಿಸಿದ ವಿವರವೆಂದರೆ– ಇದು 'ಆ ದಶಕ'ದಲ್ಲಿರುವ 'ಒಂದು ಹಕ್ಕಿ ಕುಟುಂಬ'ದೊಂದಿಗೆ ಎಂಬ ಲೇಖನ – ನೀವು ಕ್ಯಾಮರಾದಲ್ಲಿ ಚಿತ್ರ ಹಿಡಿಯಲೆತ್ನಿಸಿದ ಒಂದು ಹಕ್ಕಿಯ ಗೂಡಿನ, ಒಳಗಿನ ಮರಿಗಳ, ಅದರ ಅಪ್ಪ ಅಮ್ಮ ಹಕ್ಕಿಗಳ ವಿವರ; ಕಾವ್ಯಮಯ ವರ್ಣನೆ ಅದು. ನೀವು ಆ ಹಕ್ಕಿ ಮರಿಯನ್ನು ಪಂಜರದಲ್ಲಿಟ್ಟು ತ್ರಾಸವೇ ಇಲ್ಲದೆ ನಿಮ್ಮ ಚಿತ್ರಗಳನ್ನು ತೆಗೆಯಬಹುದಿತ್ತು. ಆದರೆ ನೀವೇ ತ್ರಾಸಪಟ್ಟುಕೊಂಡು ಆ ಮರಿ, ಅದರ ನೂರು ಚಟುವಟಿಕೆಗಳು, ಅಮ್ಮ ತಂದು ಗುಟುಕು ಕೊಟ್ಟಿದ್ದು ಇವೆಲ್ಲವನ್ನ ಅದ್ಭುತವಾಗಿ ವಿವರಿಸಿದ್ದೀರಿ. ಮೂಲಭೂತದ ನಿಮ್ಮ ಸ್ವತಂತ್ರ ಪ್ರಿಯ ಸ್ವಚ್ಛಂದ ಮನೋವೃತ್ತಿಗೆ ಇದು ಒಂದು ಅದ್ಭುತ ನಿದರ್ಶನ.

ಹಾಗೇ ಕಣ್ಣು ಹಾಯಿಸುತ್ತಿದ್ದಾಗ ಕಂಡ ಮತ್ತೊಂದು ಬಹು ವಿನೋದದ - ಆದರೆ ತೇಜಸ್ವಿಗೆ ಹಾಗೆ ಅನ್ನಿಸಲಾರದು, ಖಂಡಿತ - ಪ್ರಸಂಗವೆಂದರೆ, ತೇಜಸ್ವಿಗೆ ನಾಯಿ ಕಚ್ಚಿದ್ದು. ಚುಚ್ಚುಮದ್ದಿಗೆ ಹೆದರುತ್ತಿದ್ದ ತೇಜಸ್ವಿ ಹೇಗಾದರೂ ಚುಚ್ಚಿಸಿಕೊಳ್ಳು ವುದನ್ನು ತಪ್ಪಿಸಿಕೊಳ್ಳಬೇಕೆಂದು, ಕಚ್ಚಿದ ನಾಯಿ ಬದುಕಿದೆಯೇ, ಸತ್ತು ಹೋಗಿ ತನ್ನ ಪ್ರಾಣ ಹಿಂಡುತ್ತದೆಯೇ ಎಂಬ ಮೈನಡುಕದಲ್ಲಿ, ನಿಮ್ಮ ಜೊತೆಗೂಡಿ ರಸ್ತೆರಸ್ತೆ ಅಲೆದು ಆ ನಾಯಿಗಾಗಿ ಹುಡುಕಾಡಿ, 'ಹಾಳಾದ್ದು' ಸಿಗದೇ ಹೋಗಿ ಅನಿವಾರ್ಯವಾಗಿ ಹೊಟ್ಟೆಯ ಹೊಕ್ಕಳ ಬಳಿ ದಿನವೂ ಚುಚ್ಚಿಸಿಕೊಂಡು, ಹಿಂಸೆ ಪಟ್ಟುಕೊಂಡು ನಾಯಿ ವಂಶವನ್ನೇ ಶಪಿಸುತ್ತಿರುವಾಗ ಇದ್ದಕ್ಕಿದ್ದಂತೆ ಈ ತನ್ನ ಸ್ಥಿತಿಯನ್ನು ನೋಡಿ ಖುಷಿಪಡಲೋ ಎಂಬಂತೆ ಎದುರಿಗೆ ಬಾಲವಾಡಿಸುತ್ತ ಅವತರಿಸಿದ ಆ ನಾಯಿಯ ಕಂಡು ಕೆಂಡಾಮಂಡಲವಾಗಿ, 'ಆ ಬಡ್ಡಿಮಗಂದನ್ನ' ಕೈಗೆ ಸಿಕ್ಕಿದ್ದರಿಂದ ಬಡಿದು ಓಡಿಸಿ ಸಿಡಿಮಿಡಿದ ತೇಜಸ್ವಿ ಚಿತ್ರಣ.

ನೀವು, ತೇಜಸ್ವಿ ಸೇರಿ ಮುದ್ರಣಾಲಯವೊಂದನ್ನು ತೆರೆದದ್ದೂ ಕೂಡ ಕುತೂಹಲ ಕಾರಿ ವಿವರ.

ದೇ.ಜ.ಗೌ ಅವರು ಬಹುಗುಟ್ಟಾಗಿ ರಸೀತಿ ಪುಸ್ತಕಗಳನ್ನು ಅಚ್ಚಿಗೆ ನಿಮಗೆ ಆರ್ಡರ್ ಕೊಟ್ಟು ರಸೀತಿ ಪುಸ್ತಕಗಳನ್ನೂ ಕೊಡ ಹೋದಾಗ, ನಿಮ್ಮ ಮೇಲೆ ರೇಗಾಡಿ ಗುಟ್ಟಿನ ಮುದ್ರಣವನ್ನು, ರಸ್ತೆಯಲ್ಲಿ ಬಿಡುಬೀಸಾಗಿ ಹಾರಾಡುವ ಹಾಗೆ ಮಾಡಿದ್ದಕ್ಕೆ ನಿಮಗೆ ನಿಮ್ಮ ಬಿಲ್ ಹಣ ಪಾವತಿಯೂ ಮಾಡದೆ ನಿಮ್ಮನ್ನು ಅಟ್ಟಿದ್ದುದೂ ಕೂಡ ಒಂದು ರೋಚಕ ಸಂಗತಿ. ಆದರೆ ಇಲ್ಲಿಯೂ ಅಷ್ಟೇ ನೀವು ಅವರ ಉದ್ದೇಶವನ್ನಾಗಲಿ, ಅವರ ನಡವಳಿಕೆಯನ್ನಾಗಲೀ, ಟೀಕಿಸುವುದೂ ಇಲ್ಲ, ಅದರ ಕುರಿತು ತೀರ್ಪೂ ನೀಡುವುದಿಲ್ಲ. ಈ ಇಡೀ ಪ್ರಸಂಗದ ಫಲಶೃತಿ ಎಂದರೆ ನೀವು ಕನ್ನಡ ಎಂ.ಎ. ಆಸೆ ಬಿಡಬೇಕಾಗಿ ಬಂದದ್ದು.

ಕೊನೆಗೆ ನಾನು ಬಹು ಮುಖ್ಯವಾಗಿ ಕಾಣುವ ವಿವರವೆಂದರೆ ಗೋಪಾಲ ಗೌಡರು ನಿಮಗೆ ನೀಡಿದ ಸಲಹೆ. ನೀವು ಕಾಲೇಜು ಅಧ್ಯಾಪಕವೃತ್ತಿ ಬಯಸಿ, ಅವರೂ ಸದಸ್ಯರಾಗಿರುವ ಸಮಿತಿಯಲ್ಲಿ ನಿಮ್ಮ ಬಗ್ಗೆ ಒಂದು ಮಾತು ಹೇಳಲಿ ಎಂಬ ಅಭಿಪ್ರಾಯದಲ್ಲಿ ಅವರ ಬಳಿ ಹೇಳಿದಾಗ ಅವರು ಹೇಳಿದ ಮಾತು: "ಒಬ್ಬ ಮನುಷ್ಯನಿಗೆ ಒಂದು ಉದ್ಯೋಗವಿರಬೇಕು. ನೀನು ರೈತನಾಗಬೇಕೆಂಬ ಆಸೆಯಲ್ಲಿ 'ಭಗವತಿ'ಯಲ್ಲಿ ಜಾಗ ನೋಡಿದ್ದಿ. ಈಗ ಕಾಲೇಜು ಮೇಷ್ಟ್ರರಾಗಬೇಕೆನ್ನುತ್ತಿ. ಹೀಗಾದರೆ ಮತ್ತೊಬ್ಬ ಯಾರಿಗೊ - ಕೆಲಸವೇ ಇಲ್ಲದವನಿಗೆ - ಕೆಲಸವನ್ನು ನಷ್ಟ ಮಾಡಿದಹಾಗೆ; ಇಲ್ಲಾ ರೈತನಾಗು ಅಥವಾ ಮೇಷ್ಟ್ರರಾಗು" ಎಂದು ಗೋಪಾಲ ಗೌಡರಿಗೇ ವಿಶಿಷ್ಟವಾದ ದನಿಯಲ್ಲಿ, ಶೈಲಿಯಲ್ಲಿ ಹೇಳಿ ನಿಮ್ಮನ್ನು ಮೇಷ್ಟರ ಆಸೆ ಕೈ

ಬಿಡುವಂತೆ ಮಾಡಿದ್ದು ಬಹು ಮನೋಜ್ಞವಾದ ಮಾತು ಮತ್ತು ನಿಮ್ಮದು ಅಷ್ಟೇ ಅನುಕರಣೀಯ ನಡವಳಿಕೆ.

ಇಂಥ ಹಲವು ಪ್ರಸಂಗಗಳು, ಘಟನೆಗಳು ಈ ಕೃತಿಯಲ್ಲಿ ಇದೆ. ಸಾವಧಾನವಾಗಿ ಕೂತು ಓದುತ್ತೇನೆ.

ನಿಮಗೆ ಈ ಸಂದರ್ಭದಲ್ಲಿ ಹೃತ್ಪೂರ್ವಕವಾಗಿ ನನ್ನ ಶುಭಾಶಯಗಳನ್ನು ಸಲ್ಲಿಸುತ್ತೇನೆ.

ಇತಿ ತಮ್ಮ ವಿಶ್ವಾಸಿ

ಜಿ.ಕೆ. ಗೋವಿಂದರಾವ್

ರೈತ ಸಂಗಾತಿಗಳಿಂದ...

ರೈತ ಸಂಘದ ಪರಿಪೂರ್ಣ ವ್ಯಕ್ತಿ

ಹೆಚ್.ಆರ್.ಬಸವರಾಜಪ್ಪ

ಕಡಿದಾಳು ಶಾಮಣ್ಣನವರು ನಾನು ವಿದ್ಯಾರ್ಥಿಯಾಗಿದ್ದಾಗಲೇ ಪರಿಚಯವಾದವರು. ನಮ್ಮೂರಿನ ಗಡಿಗೆ ಹೊಂದಿಕೊಂಡಿರುವ ಭಗವತಿಕೆರೆಗೆ ಬಂದು ಜಮೀನು ಹಿಡಿದು ಸಾಗುವಳಿ ಮಾಡತೊಡಗಿದ್ದರು, ಆಗ ಆ ಪ್ರದೇಶವನ್ನು ಕರಡಿ ಕ್ಯಾಂಪು ಎಂದು ಕರೆಯುತ್ತಿದ್ದರು. ಕರಡಿಗಳು ಹೆಚ್ಚಾಗಿದ್ದ ಕುರುಚಲು ಕಾಡಿನ ಪ್ರದೇಶ ಅದು, ಶಾಮಣ್ಣನವರು ಬಂದು ತೋಟ ಮಾಡಿದ ಮೇಲೆ ಭಗವತೀಕೆರೆ ಎಂದು ನಾಮಕರಣ ಮಾಡಿದರು. ನಮ್ಮ ಪರಿಚಯ ಕಬ್ಬಿನ ಬೆಳೆ ಮುಖಾಂತರ ಆಯಿತು. ಆ ಸಮಯದಲ್ಲಿ ನಾವೂ ಕಬ್ಬು ಬೆಳೆದಿದ್ದೆವು, ಶಾಮಣ್ಣನವರೂ ಕಬ್ಬು ಬೆಳೆದಿದ್ದರು.

ಕಬ್ಬು ಬೆಳೆಗಾರರದ್ದೇ ಒಂದು ಸಂಘ ಮಾಡಬೇಕೆಂದು ಶಾಮಣ್ಣ ಸುಂದರೇಶ್ ತೀರ್ಮಾನಿಸಿದ ಫಲವಾಗಿ, ರುದ್ರಪ್ಪನವರ ಅಧ್ಯಕ್ಷತೆಯಲ್ಲಿ ಸಂಘ ಅಸ್ತಿತ್ವಕ್ಕೆ ಬಂತು. ಸುಂದರೇಶ್ ಪ್ರಧಾನ ಕಾರ್ಯದರ್ಶಿಯಾದರು. ಶಾಮಣ್ಣ ಮತ್ತು ನಾನು ಸಕ್ರಿಯವಾಗಿ ಸಂಘದಲ್ಲಿ ತೊಡಗಿಸಿಕೊಂಡೆವು. ನನಗಾಗ ಇಪ್ಪತ್ತು ವರ್ಷ. ಕಬ್ಬು ಬೆಳೆಗಾರರ ಸಂಘ ಕೇವಲ ಸಂಘವಾಗಿರದೆ, ಹೋರಾಟದ

ಸಂಘವಾಗಿ ಪರಿವರ್ತನೆಗೊಂಡಿತು. ಶಾಮಣ್ಣ ಒಂದು ರಾಜ್‌ದೂತ್ ಮೋಟಾರ್ ಬೈಕಿನಲ್ಲಿ ನನ್ನನ್ನು ಕುಳ್ಳಿರಿಸಿಕೊಂಡು ರೈತ ಸಂಘಟನೆಗೆ ತೊಡಗಿದರೆ, ಸುಂದರೇಶ್ ತಮ್ಮ ಹೆಚ್‌ಡಿ ಬೈಕಿನಲ್ಲಿ ತಿರುಗುತ್ತ ರೈತರು ಸಂಘಟನೆಯಾಗಬೇಕಾದ ಅನಿವಾರ್ಯತೆಯ ಬಗ್ಗೆ ಹೇಳುತ್ತ ಓಡಾಡುತ್ತಿದ್ದರು. ಆ ದಿನಗಳಲ್ಲಿ ನಾನು, ಶಾಮಣ್ಣ ಅಥವಾ ಸುಂದರೇಶ್ ಬೈಕಿನ ಹಿಂಭಾಗದಲ್ಲಿ ಕಡ್ಡಾಯವಾಗಿ ಕುಳಿತಿರುತ್ತಿದ್ದೆ. ಈ ಮಹನೀಯರು ಸಂಘದ ಹೋರಾಟವನ್ನು ವ್ಯಾಪ್ತಿಗೊಳಿಸಲು ಹೋರಾಡುತ್ತಿರುವಾಗ ೧೯೭೩ರಲ್ಲಿ ಶಾಮಣ್ಣ, ಸುಂದರೇಶ್ ಮತ್ತು ಹುಗಲವಳ್ಳಿ ಸುರೇಂದ್ರ ಅವರೆಲ್ಲಾ ಸೇರಿ, ಮೂಡಿಗೆರೆಯಲ್ಲಿ ನಡೆಯುವ ಸಭೆಯೊಂದಕ್ಕೆ ಕರೆದುಕೊಂಡು ಹೋದರು. ಅಲ್ಲಿ ನಂಜುಂಡಸ್ವಾಮಿಯವರು ಪೂರ್ಣಚಂದ್ರ ತೇಜಸ್ವಿಯವರ ಮುಂದಾಳತ್ವದಲ್ಲಿ, ಸಣ್ಣ ಬೆಳೆಗಾರರ ಒಕ್ಕೂಟದ ಸಭೆ ಕರೆದಿದ್ರು. ತೇಜಸ್ವಿಯವರನ್ನು, ಅವರ ಮನೆಯನ್ನು ನಾನು ನೋಡಿದ್ದು ಅದೇ ಮೊದಲು ಮತ್ತು ವೇದಿಕೆ ಹತ್ತಿ ಭಾಷಣ ಮಾಡಿದ್ದು ಅದೇ ಮೊದಲು. ಶಾಮಣ್ಣನವರ ಒತ್ತಾಯದಿಂದ ಭಾಷಣ ಮಾಡಿದ ನಾನು, ರೈತರಿಗಾಗುತ್ತಿರುವ ಅನ್ಯಾಯ, ಲೆವಿ ನೀತಿ ಮತ್ತು ಸಾಲವಸೂಲಾತಿಯಲ್ಲಿ ನಡೆಯುವ ದೌರ್ಜನ್ಯವನ್ನು ವಿವರಿಸಿದೆ. ಇದರಿಂದ ಅವೈಜ್ಞಾನಿಕ ಲೆವಿ ನೀತಿ ವಿರುದ್ಧ ಹೋರಾಡುವ ಸಂಕಲ್ಪ ಆ ಸಭೆಯಲ್ಲೇ ಚರ್ಚೆಯಾಯ್ತು. ಅಲ್ಲದೆ ಕೆಲವು ಜಿಲ್ಲೆಗಳಿಗೆ ಪದಾಧಿಕಾರಿಗಳನ್ನು ನೇಮಿಸಿದರು. ಶಿವಮೊಗ್ಗ ಜಿಲ್ಲೆಗೆ ಕಡಿದಾಳು ಶಾಮಣ್ಣನವರನ್ನು ಸಂಚಾಲಕರನ್ನಾಗಿ ಮಾಡಿದರು. ಆಗ ಕಾರ್ಯಪ್ರವೃತ್ತರಾದ ಶಾಮಣ್ಣ ರೈತರ ಶೋಷಣೆ, ಲೆವಿ ದೌರ್ಜನ್ಯ ಕುರಿತು, ಕರಪತ್ರ ಮಾಡಿಸಿದರು. ಹೊಳೆಹೊನ್ನೂರು ಸಂತೆಯಲ್ಲಿ ಪ್ರತಿಭಟನೆ ಸಭೆಯನ್ನು ಹಮ್ಮಿಕೊಂಡೆವು. ಸರಕಾರದ ವಿರುದ್ಧದ ಈ ಪ್ರತಿಭಟನೆಗೆ ಹೆದರಿ ಜನ ಬರಲಿಲ್ಲ. ಆ ಸಭೆಗೆ ನಂಜುಂಡಸ್ವಾಮಿ, ತೇಜಸ್ವಿಯವರೂ ಬಂದಿದ್ದರು. ಆ ಕಾರ್ಯಕ್ರಮದ ಪ್ರಧಾನ ಉದ್ದೇಶ ಲೆವಿ ಚೀಟಿಯನ್ನು ಸುಡುವುದಾಗಿತ್ತು. ಇದು ಸರಕಾರವನ್ನು ಕೆಣಕಿ ಅರೆಸ್ಟಾಗುವ ಕೆಲಸವೆಂದು ಹೆದರಿದ ಜನ, ನಮ್ಮ ಸಭೆಗೆ ಬರದಿದ್ದರೂ, ಬಂದ ಕೆಲವರನ್ನೇ ಕೂಡಿಕೊಂಡು ಲೆವಿ ಚೀಟಿ ಸುಟ್ಟೆವು.

ಶಾಮಣ್ಣನವರು ರೈತರನ್ನು ಸದಸ್ಯರನ್ನಾಗಿ ಮಾಡಲು ೧೦-೧೫ ರೂ. ಫೀಜು ಮಾಡಿ, ಬಂದ ಹಣದಿಂದ ಸಭೆ ಸಮಾರಂಭ ಮಾಡುತ್ತಿದ್ದರು. ಈ ಖರ್ಚನ್ನು ನಾವಿಬ್ಬರು ಅರ್ಧರ್ಧ ಹಂಚಿಕೊಳ್ಳುತ್ತಿದ್ದೆವು. ನಂತರ ಮಲ್ಲಾಪುರದಲ್ಲಿ ಲೆವಿ ಚೀಟಿ ಸುಟ್ಟ ನಂತರ, ಕಾರ್ಯಕ್ರಮ ಸ್ಥಗಿತಗೊಂಡಂತೆ ಕಂಡಿತು. ಒಕ್ಕೂಟದ ಸಭೆ ಮತ್ತೆ ನಡೆಯಲಿಲ್ಲ.

ಮುಂದೆ ಶಾಮಣ್ಣ ಓಡಾಡುತ್ತ, ಸುಂದರೇಶ್, ತೇಜಸ್ವಿ, ನಂಜುಂಡಸ್ವಾಮಿಯವರನ್ನ ಗೆಸ್ಟಾಗಿ ಕರೆದು ಕೆಲವು ಸಭೆ ಮಾಡುತ್ತಿದ್ದರು. ಆ ಸಭೆಗೆ ಜನ ಸೇರಿಸಲು ೪೦-೫೦ ಹಳ್ಳಿ ತಿರುಗಿದರೆ ಕೇವಲ ಹತ್ತು ಜನ ಬರುತ್ತಿದ್ದರು. ಆದರೂ ಶಾಮಣ್ಣ ತಲೆಕೆಡಿಸಿಕೊಳ್ಳದೆ, ತಮ್ಮ ಅವಿರತ ಪ್ರಯತ್ನ ಬಿಡಲಿಲ್ಲ. ಸಕ್ಕರೆ ಕಾರ್ಖಾನೆಯ ಕಾರ್ಯ ವೈಖರಿ ವಿರುದ್ಧ ಪ್ರತಿಭಟನೆ ನಡೆಯುತ್ತಲೇಯಿತ್ತು.

೧೯೮೦ರ ಜುಲೈ ೩೧ರಂದು, ನರಗುಂದದಲ್ಲಿ ಗೋಲಿಬಾರಾಗಿ ರೈತರು ಮಡಿದರು. ಇದು ನಿಜಕ್ಕೂ ಮಲಗಿದ್ದ ರೈತರನ್ನು ಭುಗಿಲೇಳಿಸಿದ ಸಂದರ್ಭ. ಶಾಮಣ್ಣ, ಸುಂದರೇಶ್ ಹೆಚ್.ಎಸ್. ರುದ್ರಪ್ಪನವರ ನೇತೃತ್ವದಲ್ಲಿ ಜ್ಯೋತಿರಾವ್, ಬಳ್ಳಾರಿ ಈಶ್ವರಪ್ಪ, ಪುಟ್ಟಪ್ಪ ಇವರೆಲ್ಲಾ ಎರಡು ಕಾರಿನಲ್ಲಿ ನರಗುಂದಕ್ಕೆ ಹೋದೆವು. ಗೋಲಿಬಾರಿನಲ್ಲಿ ಸತ್ತವರ ಮನೆಗಳಿಗೆ ಹೋಗಿ ಭೇಟಿ ಮಾಡಿದೆವು. ನಂತರ ಹುಬ್ಬಳ್ಳಿಯಲ್ಲಿ ಸಭೆ ಮಾಡಿ, ರೈತ ಸಂಘದ ಲಾಂಛನ ತಯಾರಿಸಿದೆವು. ಜೋಡೆತ್ತಿನ ಬೇಸಾಯದ ಗುರುತಿನ ಲಾಂಛನ ಮಾಡಿದ್ದಲ್ಲದೆ ೧೯ ಬೇಡಿಕೆ ಇಟ್ಟು, ಆಗಸ್ಟ್ ೧೫ರವರೆಗೆ ನಿರಂತರ ಚಳುವಳಿ ಮಾಡಲು ತೀರ್ಮಾನಿಸಿದೆವು.

ಅತ್ತ ನರಗುಂದದ ಜನರಿಗೆ ಧೈರ್ಯ ತುಂಬಲು ಶಾಮಣ್ಣ ಮತ್ತು ಕೆ.ಟಿ. ಗಂಗಾಧರ್ ಅಲ್ಲೇ ಉಳಿದರು. ಏಕೆಂದರೆ ಆ ಪ್ರಾಂತ್ಯದ ಊರುಗಳಲ್ಲಿ ಹೆದರಿದ ಗಂಡಸರು ಊರನ್ನೇ ಬಿಟ್ಟು ಹೋಗಿದ್ದರು. ಅವರೆಲ್ಲರ ಮನೆಗಳಿಗೆ ಹೋಗಿ ಧೈರ್ಯ ತುಂಬಲು ಶಾಮಣ್ಣನವರಿಗೆ ಮಾತ್ರ ಸಾಧ್ಯವೆಂದು ತೀರ್ಮಾನಿಸಿ ನರಗುಂದ ನವಲುಗುಂದ ಪ್ರಾಂತ್ಯದಲ್ಲಿ ಜನರಿಗೆ ವಿಶ್ವಾಸ ತುಂಬುವ ಜವಾಬ್ದಾರಿಯನ್ನ ಶಾಮಣ್ಣನವರಿಗೆ ವಹಿಸಿ ಬಂದೆವು. ಇತ್ತ ಆಗಸ್ಟ್ ೧೫ರವರೆಗೂ ನಿರಂತರ ಚಳುವಳಿ ನಡೆಯಿತು. ಮೊದಲು ಹತ್ತು ಇಪ್ಪತ್ತು ಜನರಿಂದ ಪ್ರಾರಂಭಗೊಂಡು, ನಿರಂತರವಾಗಿ ನಡೆದ ಚಳುವಳಿ ಆಗಸ್ಟ್ ೧೬ರಂದು ಶಿವಮೊಗ್ಗ ಡಿ.ಸಿ ಆಫೀಸಿನೆದುರು ನಡೆಯತೊಡಗಿತು. ಅದು ಅಕ್ಟೋಬರ್ ೨ರ ಗಾಂಧೀ ಜಯಂತಿವರೆಗೂ ನಡೆಯಿತು. ಆ ಸಭೆಗೆ ಶಾಮಣ್ಣನವರು ನಂಜುಂಡಸ್ವಾಮಿ, ಲಂಕೇಶ್‌ರನ್ನು ಕರೆತಂದರು. ಅದೊಂದು ಐತಿಹಾಸಿಕ ಸಭೆ.

ಈ ಎಲ್ಲಾ ಬೇಡಿಕೆ ಜಾರಿಗೆ ಬಂದದ್ದು ಗುಂಡೂರಾಯರ ಕಾಲದಲ್ಲಿ. ಈ ನಡುವೆ ಶಾಮಣ್ಣ ನರಗುಂದ ನವಲುಗುಂದದಲ್ಲಿ ಹುತಾತ್ಮರಾದ ರೈತರನ್ನು ಮರೆತಿರಲಿಲ್ಲ. ಅವರಿಗಾಗಿ ವೀರಗಲ್ಲು ಸ್ಥಾಪಿಸಲು ಓಡಾಡುತ್ತಲೇಯಿದ್ದರು. ಕಡೆಗೂ ವೀರಗಲ್ಲು ನಿರ್ಮಾಣ ಮಾಡಿ ತೆಗೆದುಕೊಂಡು ಹೋಗಿ ಸ್ಥಾಪಿಸಿ ಬಂದರು. ಕನಿಷ್ಠ ೩೦ ದಿವಸ ಅಲ್ಲೇ ಇದ್ದು, ತಮಗೆ ಬರುತ್ತಿದ್ದ ಸಂಗೀತ ವಿದ್ಯೆಗಳನ್ನೆಲ್ಲಾ ಅಲ್ಲಿ ಪ್ರದರ್ಶಿಸಿ ಜನರ ವಿಶ್ವಾಸ ಗಳಿಸಿದ್ದರು. ಶಾಮಣ್ಣನವರ ಆಶಯದಂತೆ ನರಗುಂದ,

ನವಲುಗುಂದದಲ್ಲಿ ರೈತರ ವೀರಗಲ್ಲು ಸ್ಥಾಪನೆಯಿಂದ ಪ್ರತಿವರ್ಷ ರೈತರನ್ನು ನೆನೆದು ಚಳುವಳಿಗೆ ಹೊಸ ಸ್ಫೂರ್ತಿ ಪಡೆಯುವಂತಾಯಿತು. ರೈತ ಸಂಘದ ಹಸಿರು ಟವೆಲ್ ಲಾಂಛನವೂ ಶಾಮಣ್ಣನವರದ್ದೆ. ಹಾಗೂ ಜೋಡೆತ್ತಿನ ಗುರುತು ಬ್ಯಾಡ್ಜು ಇವೆಲ್ಲಾ ಅವರ ಕೊಡುಗೆ. ರೈತ ಸಂಘದ ಓಡಾಟಗಳಿಗೆ ಹಣದ ಕೊರತೆಯಿದ್ದಾಗ, ಹಣವಿದ್ದ ಕುಬೇರರ ಬಳಿ ಹೋಗುತ್ತಿದ್ದರು. ಆ ಪೈಕಿ ರತ್ನಾಕರ ಗೌಡ್ರು ಸಹಾಯ ಮಾಡುತಿದ್ರು. ಆಗಾಗ್ಗೆ ಅವರ ಬಳಿ ಹೋಗಿ "ಸ್ವಲ್ಪ ಸಾಲಾಗ್ಯದೆ ಬೀದಿಮ್ಯಾಲೆ ಓಡಾಡಂಗಿಲ್ಯ" ಎಂದು ಗೋಗರಿತಿದ್ರು. ಅವರು "ಹಣ ಇಲ್ಲ ಅಂದ್ರೆ ಹೋರಾಟ ಯಾಕೆ ಮಾಡ್ತಿ? ಮಾಡಬ್ಯಾಡ" ಎಂದು ನಗುತ್ತಲೆ ಸಹಾಯ ಮಾಡತಿದ್ರು. ಇನ್ನ ರುದ್ರಪ್ಪನವರ ಬಳಿಹೋಗಿ "ಸಂಘದ ಓಡಾಟಕ್ಕೆ ಅಂತ ಸಾಲ ಮಾಡಿಕೊಂಡಿದ್ದಿನಿ. ಇನ್ನ ಮೇಲೆ ಇಲ್ಲಿ ಬರಲ್ಲ" ಅಂತ ಹೇಳಿದ್ರೆ, ರುದ್ರಪ್ಪನವರು "ಶಾಮಣ್ಣ ಅಂಗೆ ಮಾಡಬ್ಯಾಡ ನಿನ್ನನ್ನ ನಾನು ನೋಡ್ಬೇಕು ಬರದೆ ಇರಬ್ಯಾಡ" ಅನ್ನತಿದ್ರು.

ಗಾಂಧಿವಾರ್ಗದ ರುದ್ರಪ್ಪನವರನ್ನು ಲೋಹಿಯಾ ವಾರ್ಗದ ನಂಜುಂಡಸ್ವಾಮಿಯವರನ್ನ ಜೊತೆಗೂಡಿಸಿ ತಗಂಡೋಗೊ ಶಕ್ತಿ ಇದ್ದದ್ದೇ ಶಾಮಣ್ಣನವರಿಗೆ. ರುದ್ರಪ್ಪನವರ ಗುಂಪಿನಲ್ಲಿ ಸಮಾಧಾನದ ಸಾತ್ವಿಕವಿದ್ರೆ, ನಂಜುಂಡಸ್ವಾಮಿ ಗುಂಪಿನಲ್ಲಿ ಕ್ರಾಂತಿಕಾರಿಗಳಿದ್ರು, ಆದ್ದರಿಂದ ರೈತಸಂಘದ ಕಾರ್ಯಕ್ರಮಗಳ ಬಗ್ಗೆ ಆಗಾಗ್ಗೆ ಘರ್ಷಣೆಗಳಾಗತಾಯಿದ್ದೂ. ೧೯೮೩ರಲ್ಲಿ ಭ್ರಷ್ಟ ಅಧಿಕಾರಿಗಳ ಮನೆ ಜಪ್ತಿ ಕಾರ್ಯವನ್ನು ರುದ್ರಪ್ಪ ಒಪ್ಪಲಿಲ್ಲ. ಸಿಟ್ಟಾದ ನಂಜುಂಡಸ್ವಾಮಿ ಈ ಕಾಂಗ್ರೆಸ್‌ನವರ ಕಟ್ಟಿಕೊಂಡು ನಾವು ಚಳುವಳಿ ಮಾಡಕ್ಕಾಗಲ್ಲ ಎಂದು ರೇಗತಿದ್ರು. ಆಗ ಸಮನ್ವಯದ ರೂವಾರಿ ಶಾಮಣ್ಣ ಯಾರ ಕಡೆ ಮಾತಾಡದು ಕಷ್ಟ ಅನ್ನುವಂತೆ ನಡೆದುಕೊಳ್ತಿದ್ರು. ರುದ್ರಪ್ಪ ಬಾಯಿಬಿಟ್ಟು ಕೇಳಿದ್ರು, ಸ್ಪಷ್ಟ ಉತ್ತರ ಕೊಡದೆ ನುಣುಚಿಕೊಳ್ತಿದ್ರು. ಅವರಿಗೆ ರುದ್ರಪ್ಪನವರೂ ಬೇಕು, ನಂಜುಂಡಸ್ವಾಮಿನೂ ಬೇಕು. ಸಂಘದ ಸದಸ್ಯರೆಲ್ಲಾ ಸೇರಿ ಬಹುಮತದ ಅಭಿಪ್ರಾಯ ಕೇಳನಾ ಅಂದ್ರೆ ಎಲ್ಲಾ ಹುಚ್ಚರು ಬಹುಮತ ಕೊಟ್ಟು ಬಿಡ್ತರೆ ಅನ್ನೊ ಆತಂಕ ರುದ್ರಪ್ಪನವರಿಗಿತ್ತು. ಅಂತು ಮರುಜಪ್ತಿ ಹುಡುಗರಿಗೆ ಟ್ರೈನಿಂಗ್ ಕೊಟ್ಟರು; ಆ ಟ್ರೈನಿಂಗ್‌ನಲ್ಲಿ ಹಿಂಸೆ ಇರಕೊಡದು. ಅಧಿಕಾರಿಯ ಸಂಬಳದ ದುಡ್ಡಿಗೆ ಮೀರಿದ ವಸ್ತುಗಳಿದ್ರೆ ಜಪ್ತಿ ಮಾಡಬಹುದಷ್ಟೆ. ಇಂತಹ ಕ್ಲಿಷ್ಟಕರ ಸನ್ನಿವೇಶದಲ್ಲಿ, ಶಾಮಣ್ಣ ಮುಖ್ಯ ಪಾತ್ರ ನಿರ್ವಹಿಸುತ್ತಿದ್ರು. ಯಾವುದೇ ಸಭೆ ಸಮಾರಂಭದ ನಂತರ ಅದರ ಪರಿಣಾಮದ ಚಿಂತಿಸಿ ಮಾತನಾಡತಿದ್ರು.

ನಾಗಸಮುದ್ರದಲ್ಲಿ ಗೋಲಿಬಾರಾಯ್ತು. ನಾನು ಶಾಮಣ್ಣ ಹೋಗಿ ಅರೆಸ್ಟಾದೆವು. ನಾಗಸಮುದ್ರದ ಸುತ್ತಮುತ್ತಲ ಊರಿನವರೆಲ್ಲಾ ಹೆದರಿ ಊರನ್ನೆ ಬಿಟ್ಟು ಹೋಗಿದ್ರು.

ಹಾಸನದ ಮಂಜುನಾಥ ದತ್ತ, ವೆಂಕಟೇಶಮೂರ್ತಿ ಎಲ್ಲಾ ಬಂದು ನಾಗಸಮುದ್ರದಲ್ಲಿ ಬೀಡುಬಿಟ್ಟು, ಊರಿಗೆ ಜನಗಳು ಮತ್ತೆ ಬರಂಗೆ ಮಾಡಿದ್ರೂ. ಕೆ.ಟಿ. ಶಿವಪ್ರಸಾದ್ ಕೂಡ ಆಗೆ ಬಂದಿದ್ರು. ಶಾಮಣ್ಣ ತೀರಿಕೊಂಡವರ ಮನೆಗೆ ಹೋಗಿ ನಾನೇ ನಿಮ್ಮ ಮಗ ಅಂತ ಧೈರ್ಯ ತುಂಬಿದ್ರು. ಪ್ರತಿ ಕುಟುಂಬಕ್ಕು ಹೋಗಿ ಸಾಂತ್ವನ ಹೇಳಿ ಬರತಿದ್ರು.

೧೯೮೦ರಲ್ಲಿ ಶಾಮಣ್ಣ ಲಂಕೇಶ್ ಪತ್ರಿಕೆಗೆ ಬರಿತಿದ್ರು. ಆಗ ರೈತಸಂಘದ ವರದಿಗಳು ಆ ಪತ್ರಿಕೆಲಿ ತುಂಬಾ ಬರ್ತಿದ್ದೊ. ಅವ್ರಿಂದ ಇಡೀ ರೈತ ಸಂಘದೊರು ಲಂಕೇಶ್ ಪತ್ರಿಕೆ ತಗೊಳ್ತಿದ್ರು. ಆದ್ರೆ ಮುಂದೆ ಲಂಕೇಶ್ ಪತ್ರಿಕೆ ರೈತಸಂಘದ ವಿರುದ್ಧ ಬರವಣಿಗೆ ಶುರುಮಾಡಿದಾಗ, ಅದನ್ನು ನಿಲ್ಲಿಸಿಬಿಟ್ರು. ಆದ್ರೆ ಶಾಮಣ್ಣಾರು ಲಂಕೇಶ್ ಜೊತೆ ಕೂಡ ಚೆನ್ನಾಗಿದ್ರು. ಲಂಕೇಶ್ ನಂಜುಂಡಸ್ವಾಮಿ ಜಗಳದಲ್ಲಿ ಬಾಳ ನೊಂದುಕೊಂಡೋರು ಅಂದ್ರೆ ಶಾಮಣ್ಣನವರೆ,

ಕರ್ನಾಟಕದಲ್ಲಿ ಆಗ ರೈತ ಸಂಘ ಕನ್ನಡ ದೇಶ ಪಾರ್ಟಿ ಸ್ಥಾಪಿಸಿತ್ತು. ಅದರ ರೂವಾರಿಲಿ ಶಾಮಣ್ಣನವರೂ ಒಬ್ಬರು. ಶಾಮಣ್ಣನವರಾಗ ದಲಿತ ಸಂಘ, ರೈತಸಂಘ ಮತ್ತು ಭಾಷಾ ಚಳುವಳಿ ಒಟ್ಟಾದ್ರೆ ಕರ್ನಾಟಕದಲ್ಲಿ ಒಳ್ಳೆ ಪ್ರಾದೇಶಿಕ ಪಾರ್ಟಿ ಆಗುತ್ತೆ ಅನ್ನೊ ಕನಸಿನಲ್ಲಿ ಓಡಾಡತಿದ್ರು. ಅದೇ ಟೈಮಿಗೆ 'ಸುದ್ದಿ ಸಂಗಾತಿ' ಪತ್ರಿಕೆ, ಅವರನ್ನ ಸಂದರ್ಶನ ಮಾಡಿ ಎಲ್ಲರನ್ನು ಒಟ್ಟಿಗೆ ತಗಂಡೋಗೋ ಲೀಡರ್ರು ಬೇಕಲ್ಲವೇ ಎಂದು ಕೇಳಿತ್ತು. ಅದಕ್ಕೆ ಶಾಮಣ್ಣ, ಎಲ್ಲರನ್ನು ನಿಭಾಯಿಸಿಕೊಂಡು ಹೋಗುವಂತೆ ತಾಳ್ಮೆ, ಸೈರಣೆ ಮತ್ತು ವಿಶಾಲ ಮನೋಭಾವ ಇರೊ ನಾಯಕ ಬೇಕು ಅನ್ನೊ ಅರ್ಥದಲ್ಲಿ ಉತ್ತರ ಕೊಟ್ಟಿದ್ರು. ಇದನ್ನ ಓದಿ ಸಿಟ್ಟಾಗಿದ್ದ ನಂಜುಂಡಸ್ವಾಮಿಯವರು, ಒಂದು ಸಭೆಲಿ ಹಸಿರು ಟವೆಲ್ ತೆಗೆದಿಟ್ಟು ಹೋಗಿ ಅಂದ್ರು. ಆಗ ಸುಂದರೇಶ್, ರುದ್ರಪ್ಪ ನಾವೆಲ್ಲಾ ಹಸಿರು ಟವೆಲ್ ತೆಗಿಬೇಡಿ ಹಾಕ್ಕೊಂಡಿರಿ" ಎಂದೆವು. ಅದರಂತೆ ನಡಕೊಂಡ್ರು, ಅಲ್ಲದೆ ರಾಜ್ಯ ಸಮಿತಿ ಸಭೆಗೂ ಹಾಜರಾದ್ರು. ಮುಂದೆ ಅದೇ ನಂಜುಂಡಸ್ವಾಮಿಯವರು ತೀರ್ಥಹಳ್ಳಿಗೆ ಕ್ಯಾಂಡಿಡೇಟಾಗಿ ಅಂದಾಗ, ಶಾಮಣ್ಣ ಸುತರಾಂ ಒಪ್ಪಲಿಲ್ಲ.

ಶಾಮಣ್ಣನವರ ಹೋರಾಟದಲ್ಲಿ ಶ್ರೀದೇವಕ್ಕನವರ ಪಾತ್ರ ಭಾಳ ದೊಡ್ಡದು. ಶಾಮಣ್ಣನವರ ಚಳುವಳಿಗೆ ಸಹಕಾರ ಕೊಟ್ಟಿದ್ದಲ್ದೆ, ಜಮೀನು, ಮನೆ ವ್ಯವಹಾರವನ್ನು ನಿಭಾಯಿಸಿದಾರೆ. ಇತ್ತೀಚೆಗಂತೂ ಪೂರ್ಣ ಶ್ರೀದೇವಕ್ಕನವರೆ ಶಾಮಣ್ಣನವರನ್ನು ಜೋಪಾನ ಮಾಡ್ತಯಿದಾರೆ. ಅವರನ್ನ ಈ ವಿಷಯದಲ್ಲಿ ಪ್ರಶಂಸೆ ಮಾಡಕ್ಕೆ ಪದಗಳೇಯಿಲ್ಲ. ಅಂಥಾ ಸೇವಾ ಮನೋಭಾವದವರು.

ಹಾಗೆ ನೋಡಿದ್ರೆ ಶಾಮಣ್ಣ ರೈತ ಸಂಘಕ್ಕೆ ಬೇಕಾದಷ್ಟು ಕೊಟ್ಟಿದ್ದಾರೆ. ಆದ್ರೆ ರೈತಸಂಘ ಅವರಿಗೆ ಬರೀ ನೋವು ಕೊಟ್ಟಂಗೆ ಕಾಣತ್ತೆ. ಈ ಸಂಘ ಒಡದೋಗದಂಗೆ ತಡಿಯಕ್ಕೆ ಅವರಷ್ಟು ಯಾರೂ ಕಷ್ಟಪಟ್ಟಿಲ್ಲ. ಆದ್ರೂ ರಾಜ್ಯಾಧ್ಯಕ್ಷರಾಗಕ್ಕೆ ಅವರೆಂದೂ ಒಪ್ಪಲಿಲ್ಲ. ರೈತಸಂಘದ ಒಬ್ಬ ಪರಿಪೂರ್ಣ ವ್ಯಕ್ತಿ ಅವರೆ. ಸರಳ ಮದುವೆ ರೂವಾರಿ. ಹಾಗೆಯೇ ಅಂತರ್ಜಾತಿ ವಿವಾಹ ಮಾಡುಸ್ತರೆ; ನಮ್ಮ ನಾಡಿನ ಎಲ್ಲಾ ಪ್ರಗತಿಪರ ಚಳುವಳಿಯಲಿ ಭಾಗವಹಿಸ್ತರೆ. ಸಾಹಿತ್ಯದ ಎಲ್ಲಾ ಸಭೆಗಳಲ್ಲೂ ಇರತರೆ. ಸಂಗೀತ ಕಛೇರಿಗಳಲ್ಲಂತೂ ಅವರು ಇದ್ದೇ ಇರತರೆ. ಶಾಮಣ್ಣನವರನ್ನ ನಾವು ಇನ್ನಾದ್ರು ಚೆನ್ನಾಗಿ ನೋಡಿಕೋಬೇಕು.

(ನಿರೂಪಣೆ: ಬಿ. ಚಂದ್ರೇಗೌಡ)

ಚಳುವಳಿಯ ಸಖ ಕಡಿದಾಳು ಶಾಮಣ್ಣ

ಬಿ. ಅನಸೂಯಮ್ಮ

೧೯೭೬ರ ತುರ್ತು ಪರಿಸ್ಥಿತಿಯ ವೇಳೆಗೆ ನಮ್ಮ ಊರು ಪಟೇಲನ ಹಿಡಿತದಲ್ಲಿತ್ತು. ಪಟೇಲನು ದಾರಿಯಲ್ಲಿ ನಡೆದುಬರುತ್ತಿದ್ದರೆ ನೀರಿಗೆ ಹೋಗುತ್ತಿದ್ದ ಹೆಂಗಸರು ತಲೆ ತುಂಬಾ ಸೆರಗೊದ್ದುಕೊಂಡು ಮನೆಗೆ ಓಡಿ ಬಿಡುತ್ತಿದ್ದರು. ಗಂಡಸರು ತಲೆಮೇಲೆ ಟವೆಲ್ ಹಾಕಿಕೊಂಡು ಕೈಕಟ್ಟಿ ಕತ್ತು ಬಗ್ಗಿಸಿ ನಿಲ್ಲುತ್ತಿದ್ದರು. ಇಂತಹ ಘಟನೆಗಳನ್ನು ಸಿನಿಮಾಗಳಲ್ಲಿ ನೋಡಿದ್ದೆ ಮತ್ತು ಸ್ವಾತಂತ್ರ್ಯ ಹೋರಾಟ ಕಾಲದಲ್ಲಿ ಇತ್ತು ಎಂಬುದನ್ನು ಕೇಳಿದ್ದೆ. ಆದರೆ ಪಟೇಲನ ದೌರ್ಜನ್ಯ ಎಷ್ಟು ಅತಿರೇಕದ್ದು ಎಂದರೆ ತನಗೆ ಇಷ್ಟವಾಗುವ ಸುಂದರ ಮಹಿಳೆಯರನ್ನು ಆಕೆಯ ಗಂಡನ ಎದುರೇ ಕರೆದುಕೊಂಡು ಹೋಗುತ್ತಿದ್ದ. ಬಡಬಗ್ಗರು ಕಾಡು ಕಡಿದು ಅರ್ಧ ಎಕರೆ, ಮುಕ್ಕಾಲು ಎಕರೆ ಭೂಮಿಯನ್ನು ವಿಂಗಡಿಸಿಕೊಂಡು ಉತ್ತು ಹೊಟ್ಟೆ ಹೊರೆಯುತ್ತಿದ್ದರು. ಆ ಸಂದರ್ಭದಲ್ಲಿ ಅಲ್ಲೊಂದು ರಾಯರ ಕೆರೆ ನಿರ್ಮಾಣವಾಯಿತು. ಇದರಿಂದ ದುರಾಸೆಗೆ ಬಿದ್ದ ಪಟೇಲ ಬಡವರನ್ನೆಲ್ಲ ಹೆದರಿಸಿ ಅವರ ಭೂಮಿಯನ್ನೆಲ್ಲ ತನ್ನ ವಶಕ್ಕೆ ತೆಗೆದುಕೊಂಡಿದ್ದ. ಇಷ್ಟಲ್ಲದೆ ಗೇಣಿದಾರರನ್ನೆಲ್ಲ ಓಡಿಸಿ ಅದನ್ನೆಲ್ಲ

ವಶಪಡಿಸಿಕೊಂಡಿದ್ದ. ೧೯೭೪ರಲ್ಲಿ ದೇವರಾಜ ಅರಸರು ತಂದ ಭೂಸುಧಾರಣೆ ಯಿಂದಾಗಿ ನಾವೆಲ್ಲ ನಮ್ಮೂರಿನಲ್ಲಿ ಗೇಣಿದಾರರ ಪರವಾಗಿ ಹೋರಾಟವನ್ನು ರೂಪಿಸಿದೆವು. ಆ ಹೋರಾಟದಲ್ಲಿ ಪಟೇಲನಿಗೂ ನಮಗೂ ಘರ್ಷಣೆಗಳಾಗಿ ಪ್ರಾಣಹಾನಿಯೂ ನಡೆದು ಕೇಸು ಕೋರ್ಟಿಗೂ ಹೋಯಿತು. ಈ ಕೇಸಿನ ಸಂದರ್ಭದಲ್ಲಿಯೇ ನನ್ನ ಗಂಡ ಸೋಮಲಿಂಗಯ್ಯನವರಿಗೆ ಸಹೃದಯಿ ಶಾಮಣ್ಣ ನವರು ಪರಿಚಯವಾದರು.

ಗೇಣಿದಾರರ ಹೋರಾಟದಲ್ಲಿ ನಾವು ಯಶಸ್ವಿಯಾಗಿದ್ದೆವು. ಇದರೊಂದಿಗೆ ಪಟೇಲನ ದೌರ್ಜನ್ಯಗಳೂ ತಹಬಂದಿಗೆ ಬಂದಿದ್ದವು. ಆದರೆ ಈ ನಡುವೆ ಹೊಸದೊಂದು ಸಮಸ್ಯೆ ಶುರುವಾಯಿತು. ಹಸಿರುಕ್ರಾಂತಿಯನ್ನು ಜಾರಿಗೊಳಿಸಲು ಸರ್ಕಾರಗಳು ರೈತರನ್ನ ಸಾಲಗಾರರನ್ನಾಗಿ ಮಾಡಿದ್ದವು. ಹಸಿರುಕ್ರಾಂತಿಯ ಅಡ್ಡಪರಿಣಾಮಗಳಿಂದ ರೈತ ಸಾಲ ತೀರಿಸಲಾಗದೆ ದಿವಾಳಿಯೇಳುವ ಸ್ಥಿತಿಗೆ ತಲುಪಿದ್ದ. ಬ್ಯಾಂಕುಗಳು ಸಾಲ ತೀರಿಸಲಾಗದ ರೈತರ ಮನೆಗಳನ್ನು ಜಪ್ತಿ ಮಾಡುವುದಕ್ಕೆ ಶುರುಮಾಡಿದರು. ಮನೆ ಜಪ್ತಿಯೆಂದರೆ ಆ ದೃಶ್ಯಗಳು ಕರುಳು ಕಿತ್ತು ಬರುವಷ್ಟು ಅಮಾನವೀಯವಾಗಿರುತ್ತಿದ್ದವು. ಬ್ಯಾಂಕಿನವರು ಮನೆ ಜಪ್ತಿಗೆಂದು ಊರಿಗೆ ಬಂದರೆ ಊರಿನಲ್ಲಿ ಗಂಡಸರೆಲ್ಲ ತಪ್ಪಿಸಿಕೊಂಡು ಮನೆ ಬಿಟ್ಟು ಹೋಗಿ ಬಿಡುತ್ತಿದ್ದರು. ಮನೆಗಳಲ್ಲಿ ಹೆಂಗಸರು ಹಾಗೂ ಮಕ್ಕಳು ಮಾತ್ರವಿರುತ್ತಿದ್ದರು. ಜಪ್ತಿ ಮಾಡುವಾಗ ಹೆಂಗಸರು ಆ ಅಪಮಾನವನ್ನು ಸಹಿಸಿಕೊಂಡು ಆರ್ತನಾದ ಮಾಡುತ್ತಾ ಅಸಹಾಯಕರಾಗಿ ನೋಡುತ್ತಾ ನಿಲ್ಲಬೇಕಾಗಿತ್ತು. ಇದನ್ನು ನೋಡಿ ಸಹಿಸಲಾರದೆ ಜಪ್ತಿಯ ವಿರುದ್ಧ ಊರಿನ ಮಹಿಳೆಯರನ್ನು ಸಂಘಟಿಸಿ ಹೋರಾಟ ರೂಪಿಸಿ ಬ್ಯಾಂಕಿನವರ ಹಾವಳಿ ಸ್ವಲ್ಪ ಕಡಿಮೆಯಾಗುವಂತೆ ಮಹಿಳೆಯರೆಲ್ಲ ಸೇರಿ ಮಾಡಿದ್ದೆವು.

ಇದೇ ಸಂದರ್ಭಕ್ಕೆ ೧೯೮೦ರಲ್ಲಿ ನವಿಲುಗುಂದ ಹಾಗೂ ನರಗುಂದದಲ್ಲಿ ಆದ ರೈತ ಹೋರಾಟದಿಂದ ಸ್ಫೂರ್ತಿ ಪಡೆದು "ಕರ್ನಾಟಕ ರಾಜ್ಯ ರೈತಸಂಘ" ಉದಯವಾದ ಸುದ್ದಿಯನ್ನು ಪತ್ರಿಕೆಗಳಲ್ಲಿ ಓದುತ್ತಿದ್ದೆವು. ಆಗ ಬಂತು ಶಾಮಣ್ಣನವರ ಕಾಗದ. ಶಿವಮೊಗ್ಗ ಜಿಲ್ಲೆಯ ಭದ್ರಾವತಿ ತಾಲ್ಲೂಕಿನ ಹನುಮಂತಾಪುರದಲ್ಲಿ ರೈತಸಂಘದ ಸಭೆ ನಡೆಯುತ್ತಿದೆ. ಆ ಸಭೆಗೆ ಬಂದು ಭಾಗವಹಿಸಿ ಎಂದು ಶಾಮಣ್ಣನವರು ಪತ್ರ ಬರೆದಿದ್ದರು. ಶಾಮಣ್ಣನವರು ಗೇಣಿದಾರರ ಹೋರಾಟದಲ್ಲಿ ಪರಿಚಯವಾದಾಗಲೇ ಅವರು ಕುವೆಂಪು ಅವರ ಮಗ ತೇಜಸ್ವಿಯವರ ಒಡನಾಡಿ ಎಂದು ತಿಳಿದು ಇವರ ಬಗ್ಗೆ ಒಂದು ಬಗೆಯ ಕುತೂಹಲ ಗೌರವಗಳು ಮೂಡಿದ್ದವು. ಈಗ ಇವರಿಂದ ಬಂದ ಪತ್ರ ಇನ್ನಷ್ಟು ಸಂತೋಷವನ್ನು ಉಂಟುಮಾಡಿತ್ತು. ಶಾಮಣ್ಣನವರ ಪತ್ರ ತಲುಪಿದ ಕೂಡಲೇ ನಾನು, ಸೋಮಲಿಂಗಯ್ಯನವರು

ಹಾಗೂ ಇನ್ನಿತರ ಕೆಲವರು ಹಣ ಹೊಂದಿಸಿಕೊಂಡು ರೈತಸಂಘದ ಸಭೆಗೆ ಹೊರಟೆವು. ನಾವು ಹೋಗುವ ವೇಳೆಗಾಗಲೇ ಸಭೆ ಶುರುವಾಗಿತ್ತು. ಸಭೆಯಲ್ಲಿ ಎಂ.ಡಿ. ನಂಜುಂಡಸ್ವಾಮಿಯವರು, ಎಚ್.ಎಸ್.ರುದ್ರಪ್ಪನವರು, ಎನ್.ಡಿ. ಸುಂದರೇಶ್, ಚನ್ನರಾಯಪಟ್ಟಣದ ಚನ್ನೇಗೌಡರು, ಹಾಸನದ ದತ್ತ, ವೆಂಕಟೇಶಮೂರ್ತಿ, ರವಿವರ್ಮಕುಮಾರ್ ಅವರೆಲ್ಲ ಇದ್ದರು. ರೈತರ ಸಮಸ್ಯೆ ಹಾಗೂ ಸಂಘಟನೆಯ ಅಗತ್ಯದ ಬಗ್ಗೆ ಬಿಸಿ ಬಿಸಿ ಚರ್ಚೆಗಳು ನಡೆಯುತ್ತಿದ್ದವು. ಶಾಮಣ್ಣನವರು ನಮ್ಮನ್ನು ಎಲ್ಲರಿಗೂ ಪರಿಚಯಿಸಿದರು. ನಾನು ಅಂದಿನ ಚರ್ಚೆಗಳನ್ನು ಮುಗ್ಧತೆ ಹಾಗೂ ಕುತೂಹಲಗಳಿಂದ ಆಲಿಸಿದ್ದೆ. ಅದುವರೆಗೂ ರೈತರ ಅನೇಕ ನೋವುಗಳನ್ನು ಕಂಡು ಬೇಸರವಾಗಿದ್ದ ನನಗೆ ರೈತರಿಗೂ ಒಂದು ಅಸ್ತಿತ್ವವಿದೆ ಎಂಬ ಚರ್ಚೆಗಳನ್ನು ಕೇಳಿ ಒಂದು ರೀತಿಯ ವೈಚಾರಿಕ ಆಸರೆ ಸಿಕ್ಕಂತಾಗಿತ್ತು. ಸಂಘಟನೆಯೆಂದರೆ ಸ್ವಾಭಿಮಾನದಿಂದ ಕೂಡಿದ್ದು ಎಂಬುದು ಮನಕ್ಕೆ ಇಳಿದಿತ್ತು. ಅಲ್ಲಿಂದ ಶುರುವಾದ ಶಾಮಣ್ಣನವರೊಂದಿಗಿನ ಸಂಘಟನಾ ಪಯಣ ಇಂದಿಗೂ ಮುಂದುವರಿಯುತ್ತಿದೆ. ಆ ಪಯಣವನ್ನು ಹಿಂತಿರುಗಿ ನೋಡಿದರೆ ಸಾರ್ಥಕವಾದದ್ದು ಎನಿಸುತ್ತದೆ.

ರೈತಸಂಘದಲ್ಲಿ ಲೋಹಿಯಾರವರ ವೈಚಾರಿಕತೆಯನ್ನು ಪ್ರಚುರಪಡಿಸಬೇಕು. ಅವರ ಚಿಂತನೆಗಳ ಬೆಳಕಲ್ಲಿ ಚಳುವಳಿಯನ್ನು ಕೊಂಡೊಯ್ಯಬೇಕು ಎಂಬ ಆಲೋಚನೆಯಲ್ಲಿ ಒಂದು ಅಧ್ಯಯನ ಕೇಂದ್ರವನ್ನು ರೂಪಿಸಬೇಕೆಂದು ತೀರ್ಮಾನಿಸಲಾಯಿತು. ಆಗ ಇದನ್ನು ಎಲ್ಲಿ ಸ್ಥಾಪಿಸಬೇಕೆಂಬ ಚರ್ಚೆಗಳು ನಡೆದು ನಮ್ಮ ಊರಾದ ಅರಳಾಳುಸಂದ್ರದಲ್ಲಿ ಲೋಹಿಯಾ ಅಧ್ಯಯನ ಕೇಂದ್ರವನ್ನು ಸ್ಥಾಪಿಸಲು ತೀರ್ಮಾನಿಸಲಾಯಿತು. ಇದಕ್ಕೆ ಇದ್ದ ಕಾರಣಗಳೆಂದರೆ ಇಲ್ಲಿ ನಡೆದಿದ್ದ ಗೇಣಿ ಹೋರಾಟ ಮತ್ತು ಮಹಿಳೆಯರೆಲ್ಲ ಸೇರಿ ಮನೆ ಜಪ್ತಿ ಮಾಡಲು ಬಂದ ಬ್ಯಾಂಕಿನವರ ವಿರುದ್ಧ ನಡೆಸಿದ ಹೋರಾಟಗಳು. ೧೯೮೦ರ ಸಂದರ್ಭದಲ್ಲಿ ರೂಪುಗೊಂಡ ಸಮತಾ ವಿದ್ಯಾಲಯ ಅನೇಕ ಅಧ್ಯಯನ ಶಿಬಿರಗಳನ್ನು ನಡೆಸಿತು. ಚಳುವಳಿಗೆ ಒಂದು ಪ್ರಬುದ್ಧ ತಾತ್ವಿಕತೆಯನ್ನು, ಕೇವಲ ರೈತರ ಸಮಸ್ಯೆಗಳನ್ನಷ್ಟೆ ಅಲ್ಲದೆ ಸಮಾಜದ ಎಲ್ಲ ತಾರತಮ್ಯಗಳನ್ನು ಹೇಗೆ ಎದುರಿಸಬೇಕು ಎಂಬ ತಾತ್ವಿಕ ಚರ್ಚೆಗಳು ಈ ಅಧ್ಯಯನ ಶಿಬಿರಗಳಲ್ಲಿ ನಡೆಯುತ್ತಿದ್ದವು. ಈ ವಿದ್ಯಾಲಯದಲ್ಲಿ ಜನರ ಬದುಕಿನ ಕುಶಲ ಕಸುಬುಗಳನ್ನು ತರಬೇತಿ ನೀಡುವ ಯೋಜನೆಗಳನ್ನು ರೂಪಿಸಲಾಗಿತ್ತು. ಇದರ ಧರ್ಮದರ್ಶಿಗಳಲ್ಲಿ ಶಾಮಣ್ಣನವರೂ ಒಬ್ಬರು. ಸಮತಾ ವಿದ್ಯಾಲಯದ ಜೊತೆಗೆ ಅತ್ಯಂತ ಕ್ರಿಯಾಶೀಲವಾಗಿ ತೊಡಗಿಸಿಕೊಂಡಿದ್ದ ಶಾಮಣ್ಣನವರು ರೈತಸಂಘಕ್ಕೆ ಒಂದು ತಾತ್ವಿಕತೆಯನ್ನು ಮಾತ್ರ ನೀಡುವ ಕೇಂದ್ರ ಇದಾಗಬಾರದು; ಇಲ್ಲಿ ಜನರ ದೈನಂದಿನ ಬದುಕಿಗೆ ಅನುಕೂಲವಾಗುವ

ಚಟುವಟಿಕೆಗಳೂ ಶುರುವಾಗಬೇಕು ಎಂದು ಪ್ರತಿಪಾದಿಸುತ್ತಿದ್ದರು. ಅದರಂತೆ ಸಮತಾ ವಿದ್ಯಾಲಯದಲ್ಲಿ ಕೆಲವು ಚಟುವಟಿಕೆಗಳೂ ನಡೆದವು. ಸ್ವಲ್ಪ ದಿನಗಳ ಕಾಲ ತುಂಬಾ ಕ್ರಿಯಾಶೀಲವಾಗಿದ್ದ ಸಮತಾ ವಿದ್ಯಾಲಯವು ಆನಂತರದಲ್ಲಿ ಸುಮ್ಮನಾಯಿತು. ಇಂದಿಗೂ ಶಾಮಣ್ಣನವರು ಸಿಕ್ಕಿದಾಗ ಸಮತಾ ವಿದ್ಯಾಲಯವನ್ನು ಮತ್ತೆ ಆರಂಭಿಸುವ ಮಾತುಗಳನ್ನಾಡುತ್ತಾರೆ. ಅಂತಹ ಅರಿವಿನ ಕೇಂದ್ರಗಳು ಚಳುವಳಿಗಳಿಗೆ ಬೆಳಕು ನೀಡಬಲ್ಲವು; ಚಳುವಳಿಗಳ ಬಿಕ್ಕಟ್ಟುಗಳನ್ನು ಸಮರ್ಥವಾಗಿ ಪರಿಹರಿಸಬಲ್ಲವು; ನಾವು ಮಾಡುವ ಪ್ರತಿಭಟನೆಗಳೊಂದಿಗೆ ಇಂತಹ ಅಧ್ಯಯನ ಕೇಂದ್ರಗಳು ತುಂಬಾ ಮುಖ್ಯ. ಇಂದು ಗಾಂಧಿ, ಅಂಬೇಡ್ಕರ್, ಲೋಹಿಯಾರಂತಹ ಚಿಂತಕರನ್ನು ಅಪ್ರಸ್ತುತಗೊಳಿಸುವ ಬಲಪಂಥೀಯ ರಾಜಕಾರಣ ಪ್ರಬಲವಾಗುತ್ತಿರುವ ಹಾಗೂ ನಮ್ಮ ಯುವ ಸಮೂಹವನ್ನು ತನ್ನತ್ತ ಸಮ್ಮೋಹಿಸುತ್ತಿರುವ ಸಂದರ್ಭದಲ್ಲಿ ನಾವು ಇಂತಹ ಪರ್ಯಾಯಗಳನ್ನು ಗೊಟ್ಟಿಗೊಳಿಸಬೇಕಾದ ಮಹತ್ವ ಶಾಮಣ್ಣನವ ರಂತಹವರಿಗೆ ಮಾತ್ರ ಅರ್ಥವಾಗಬಲ್ಲದು.

ಸಮತಾ ವಿದ್ಯಾಲಯದಲ್ಲಿ ಶಾಮಣ್ಣನವರು, ಕಿಷನ್ ಪಟ್ನಾಯಕ್, ಕೃಷ್ಣರಾಜಲು, ರವಿವರ್ಮಕುಮಾರ, ದೇವನೂರು ಮಹಾದೇವರವರು ಇನ್ನು ಮುಂತಾದವರು ಕುಳಿತು ಅಧ್ಯಯನ ಶಿಬಿರದಲ್ಲಿ ಶಿಬಿರಾರ್ಥಿಗಳೊಂದಿಗೆ, ಹೋರಾಟಗಾರರೊಂದಿಗೆ (ರೈತ ದಲಿತ ಹೋರಾಟಗಾರರೂ) ಚರ್ಚೆ ಮಾಡುತ್ತಿದ್ದರೆ ಒಂದು ಅನುಭವ ಮಂಟಪದ ನೆನಪು ಬರುತ್ತಿತ್ತು.

ಶ್ಯಾಮಣ್ಣನವರದು ಸರಳತೆ, ಸೂಕ್ಷ್ಮತೆ ಹಾಗೂ ಮುಗ್ಧತೆಗಳಿಂದ ಕೂಡಿದ ವ್ಯಕ್ತಿತ್ವ. ಅವರು ಯಾವಾಗಲೂ ರೈತಸಂಘದ ಸಭೆ ಸಮಾರಂಭಗಳಲ್ಲಿ ತಮ್ಮ ಕ್ಯಾಮರಾ ಹಿಡಿದು ಫೋಟೋ ತೆಗೆಯುತ್ತಾ ಜನರ ನಡುವೆ ಇರುತ್ತಿದ್ದರು. ಸಮಾರಂಭಗಳಲ್ಲಿ ವೇದಿಕೆಯೇರುವ ಮುಜುಗರದಿಂದ ತಪ್ಪಿಸಿಕೊಳ್ಳುವವರಂತೆ ಕಂಡರೂ ಅವರು ಅದರೊಂದಿಗೆ ಜನರ ನಡುವೆ ಅಡ್ಡಾಡುತ್ತಾ, ಫೋಟೋ ತೆಗೆಯುತ್ತಾ ರೈತರ ಸಮಸ್ಯೆಗಳನ್ನು ಬೇರು ಮಟ್ಟದಲ್ಲಿ ಅರ್ಥಮಾಡಿಕೊಂಡು ಅದಕ್ಕೆ ತಕ್ಕಂತೆ ಸಂಘಟನೆಯನ್ನು ರೂಪಿಸಲು ಯತ್ನಿಸುತ್ತಿದ್ದರು. ವೇದಿಕೆಗಳಲ್ಲಿ ಮಾತನಾಡುವುದಕ್ಕಿಂತ ಇದು ತುಂಬಾ ಮುಖ್ಯ ಎಂದು ಅವರು ಚಳುವಳಿಗಾರರಿಗೆ ಅರ್ಥ ಮಾಡಿಸುವಂತಿದ್ದರು. ಇಂದಿಗೂ ಇದು ನಮ್ಮ ಚಳುವಳಿಗಳಿಗೆ ಒಂದು ತಾತ್ವಿಕ ರೂಪಕದಂತೆ ಇದು ಕಾಣುತ್ತಿದೆ. ಅವರ ಕ್ಯಾಮರಾದಿಂದ ಕೇವಲ ಫೋಟೋ ಮಾತ್ರ ತೆಗೆಯುತ್ತಿದ್ದರು ಎಂದು ನನಗೆ ಅನ್ನಿಸುವುದಿಲ್ಲ. ಅದರ ಮೂಲಕ ಸಮಾಜದ ಓರೆಕೋರೆಗಳನ್ನು ಅರ್ಥ ಮಾಡಿಕೊಂಡು ಅವುಗಳನ್ನು ತಿದ್ದುವ ಪ್ರಯತ್ನದಂತೆ ಕಾಣುತ್ತದೆ. ಅವರು ಮಾಡಿಸುತ್ತಿದ್ದ ಸರಳ ಮದುವೆಗಳು, ಅಂತರ್ಜಾತಿಯ

ಮದುವೆಗಳು, ಇಂದಿಗೂ ರೈತ ಚಳುವಳಿಯಲ್ಲಿ ಅವರು ನಿರ್ವಹಿಸುತ್ತಿರುವ ಪಾತ್ರವನ್ನು ಗಮನಿಸುವವರಿಗೆ ಇದು ಸ್ಪಷ್ಟವಾಗುತ್ತದೆ. ಇದಕ್ಕೆ ಇನ್ನೂ ಕೆಲವು ನಿದರ್ಶನಗಳನ್ನು ನೋಡಬಹುದು. ರೈತಸಂಘದ ಸಭೆಗಳಿಗೆ ದೂರದಿಂದ ಬರುವ ಮಹಿಳೆಯರ ಕಷ್ಟ-ಸುಖಗಳನ್ನು ಶಾಮಣ್ಣ ಮತ್ತು ಸುಂದರೇಶ್ ಪ್ರೀತಿಯಿಂದ ಹಾಗೂ ಆತ್ಮೀಯವಾಗಿ ವಿಚಾರಿಸುತ್ತಿದ್ದರು. ಇದು ಚಳುವಳಿಯನ್ನು ಮಾನವೀಯವಾಗಿ ಕಟ್ಟುವ ಮಾದರಿ ಎಂದು ಇಂದಿಗೂ ನಮಗೆ ಅರ್ಥವಾಗಿಲ್ಲ. ವೈಚಾರಿಕವಾಗಿ ಮಾತನಾಡುತ್ತಾ ಜನರನ್ನು ನಿರ್ಲಕ್ಷಿಸುತ್ತೇವೆ. ಚಳುವಳಿಗಳು ಜನ ಸಮೂಹಗಳನ್ನು ಕಳೆದುಕೊಳ್ಳುತ್ತಿರುವ ಈ ಹೊತ್ತಿನಲ್ಲಿ ಇಂತಹ ಸೂಕ್ಷ್ಮ ಕಾರಣಗಳನ್ನು ಕಂಡುಕೊಳ್ಳುವಲ್ಲಿ ನಾವು ಸೋತಿದ್ದೇವೆ ಎನಿಸುತ್ತದೆ. ಚಳುವಳಿಗಳನ್ನು ಕಟ್ಟುವ ಪ್ರಕ್ರಿಯೆಯಲ್ಲಿ ಶಾಮಣ್ಣನವರಂತಹ ಮಾದರಿಗಳನ್ನು ನಿರ್ಲಕ್ಷಿಸಿದ ಪರಿಣಾಮ ವರ್ತಮಾನದ ಚಳುವಳಿಗಳ ಬಿಕ್ಕಟ್ಟುಗಳಿಗೆ ಮಹತ್ವದ ಕಾರಣ ಎನಿಸುತ್ತದೆ.

ರೈತಸಂಘದಲ್ಲಿ ಮಹಿಳೆಯರ ಪ್ರಾತಿನಿಧ್ಯದ ಬಗ್ಗೆ ಶ್ಯಾಮಣ್ಣನವರು ಯಾವಾಗಲೂ ಪ್ರತಿಪಾದಿಸುತ್ತಿದ್ದರು. ಯಾವುದೇ ಚಳುವಳಿಯಲ್ಲಿ ಮಹಿಳೆಯರಿಲ್ಲದಿದ್ದರೆ ಆ ಚಳುವಳಿ ಪೂರ್ಣವಾಗುವುದಿಲ್ಲ ಹಾಗೂ ದೀರ್ಘಕಾಲ ಮುಂದುವರೆಯಲಾರದು ಎಂದು ತಿಳಿದಿದ್ದವರು ಶಾಮಣ್ಣನವರು. ಇದಕ್ಕೆ ಪೂರಕವಾಗಿ ನಡೆದ ಒಂದು ಸಂದರ್ಭ ವೊಂದಿದೆ. ಅದು ೧೯೮೭ರಲ್ಲಿ ಮಹಾರಾಷ್ಟ್ರದಲ್ಲಿ ಶರತ್ ಜೋಶಿ ನೇತೃತ್ವದಲ್ಲಿ ಅಲ್ಲಿನ ಮಹಿಳೆಯರನ್ನೆಲ್ಲಾ ಸಂಘಟಿಸಿ "ಶೇತ್ಕರಿ" ಸಂಘಟನೆಯನ್ನು ಮಾಡಿ ಅಲ್ಲಿ ಮಹಿಳಾ ಸಮಾವೇಶ ಮಾಡಿದರು. ಆ ಸಮಾವೇಶಕ್ಕೆ ಕರ್ನಾಟಕದಿಂದ ಪ್ರತಿನಿಧಿಗಳಾಗಿ ಹೋಗಿಬಂದವರು ಇಲ್ಲಿ ಅದರ ಚರ್ಚೆಯನ್ನು ಮಾಡಿದ್ದರು. ಆ ಸಂದರ್ಭದಲ್ಲಿ ಕರ್ನಾಟಕದಲ್ಲಿ ರೈತಸಂಘ ಮಹಿಳಾ ಸಮಾವೇಶ ಮಾಡಬೇಕೆಂದು ಚರ್ಚಿಸುತ್ತಿದ್ದರು. ಆಗ ನಾನು ರೈತಸಂಘದಲ್ಲಿ ಮಹಿಳೆಯರನ್ನು ನಗಣ್ಯ ಮಾಡಿರುವುದರ ಬಗ್ಗೆ ಪ್ರಸ್ತಾಪ ಮಾಡಿ ಕೊನೆಗೆ ಏನೇನೋ ಚರ್ಚೆಗಳು ನಡೆದು ಮಹಿಳಾ ಸಮಾವೇಶ ಮಾಡಬೇಕೆಂದು ತೀರ್ಮಾನವಾಯಿತು. ಈ ಸಮಾವೇಶವನ್ನು ಎಲ್ಲಿ ಮಾಡಬೇಕು ಎಂದು ಚರ್ಚೆಯಾದಾಗ ಹಳಿಯಾಳದಲ್ಲಿ ಮಾಡಲು ತೀರ್ಮಾನವಾಯಿತು. ಅದನ್ನು ಸಂಘಟಿಸುವ ಹೊಣೆಗಾರಿಕೆಯನ್ನು ನನಗೆ ನೀಡಲಾಯಿತು. ನಾವು ಮೂರ್‍ನಾಲ್ಕು ಜನ ಅಲ್ಲಿಗೆ ಹೋಗಿ ಮಹಿಳೆಯರನ್ನು ಸಂಘಟಿಸಿ ಮಹಿಳಾ ಸಮಾವೇಶವನ್ನು ಮಾಡಿದೆವು. ಈ ಸಮಾವೇಶದಲ್ಲಿ ಸುಮಾರು ಅರವತ್ತು ಸಾವಿರ ಮಹಿಳೆಯರು ಭಾಗವಹಿಸಿದ್ದರು.

ಶಾಮಣ್ಣನವರು ರೈತಸಂಘದ ಕಾರ್ಯಕರ್ತರಾದರೂ ಲಂಕೇಶ್ ಪತ್ರಿಕೆಯಲ್ಲಿ ಕೆಲಸ ಮಾಡುತ್ತಿದ್ದರು. ಅವರು ಹಳಿಯಾಳದಲ್ಲಿ ನಡೆದ ಮಹಿಳಾ ಸಮಾವೇಶವನ್ನು ಕುರಿತು ಲಂಕೇಶ್ ಪತ್ರಿಕೆಯಲ್ಲಿ ವಿಮರ್ಶಿಸಿ ಬರೆದರು. ಆ ವರದಿಯಲ್ಲಿ ಶಾಮಣ್ಣನವರು

ಮಹಿಳಾ ಸಮಾವೇಶದ ಕಾರ್ಯಕ್ರಮದ ವೇದಿಕೆಯಲ್ಲಿ ಬರೀ ಗಂಡಸರೇ ತುಂಬಿದ್ದರು. ಮಹಿಳಾ ಪ್ರತಿನಿಧಿಯಾಗಿ ವೇದಿಕೆಯಲ್ಲಿದ್ದದ್ದು ಅನಸೂಯಮ್ಮನವರೊಬ್ಬರೆ ಎಂದು ಬರೆದಿದ್ದರು. ಈ ಲೇಖನವನ್ನು ಶಾಮಣ್ಣನವರು ಲಂಕೇಶ್ ಪತ್ರಿಕೆಯಲ್ಲಿ ಬರೆದ ನಂತರ ರೈತಸಂಘದ ರಾಜ್ಯಸಮಿತಿ ಸಭೆಯಲ್ಲಿ ಶಾಮಣ್ಣನವರ ಲೇಖನವನ್ನು ಎಲ್ಲರೂ ಖಂಡಿಸಿ ಮಾತನಾಡಿದರು. ಎಂ.ಡಿ.ಎನ್ ಶಾಮಣ್ಣನವರಿಗೆ ಹಸಿರು ಟವೆಲ್ ತೆಗೆದಿಟ್ಟು ಹೊರಗೆ ಹೋಗುವಂತೆ ಸೂಚಿಸಿದರು. ಆದರೆ ಶಾಮಣ್ಣನವರು ತಾವು ಬರೆದ ಲೇಖನವನ್ನು ಸಮರ್ಥಿಸುತ್ತಾ ಸಂಘಟನೆಯೊಳಗಿನ ತಪ್ಪುಗಳನ್ನು ತಿಳಿಸಿ ತಾನು ಹೊರಗೆ ಹೋಗುವುದಿಲ್ಲ; ನಾನು ಬರೆದಿರುವುದರಲ್ಲಿ ತಪ್ಪಿಲ್ಲ ಎಂದು ಹಟ ಮಾಡಿ ಹೊರಗೆ ಹೋಗಲಿಲ್ಲ. ವ್ಯಕ್ತಿಗಿಂತ ಹೋರಾಟ ದೊಡ್ಡದು ಎಂಬುದನ್ನು ಇಂದಿಗೂ ಶಾಮಣ್ಣನವರು ಪ್ರತಿಪಾದಿಸಿಕೊಂಡು ಬರುತ್ತಿದ್ದಾರೆ.

ಇದೇ ಸಂದರ್ಭದಲ್ಲಿ ರಾಜಕೀಯದಲ್ಲಿ ಮೂರನೇ ಶಕ್ತಿಯ ಚರ್ಚೆಗಳು ನಡೆಯುತ್ತಿದ್ದವು. 'ಸುದ್ದಿ ಸಂಗಾತಿ' ಪತ್ರಿಕೆ ಈ ಚರ್ಚೆಗಳನ್ನು ತೀವ್ರವಾಗಿ ಹುಟ್ಟುಹಾಕಿತ್ತು. ಇದರ ಬಗ್ಗೆ ಚಳುವಳಿಗಳಲ್ಲಿದ್ದವರ ಹಾಗೂ ಬೇರೆ ಬೇರೆ ವಲಯಗಳ ಚಿಂತಕರ ಅಭಿಪ್ರಾಯಗಳನ್ನು ಸಂಗ್ರಹಿಸುತ್ತಿತ್ತು. ಮೂರನೇ ಶಕ್ತಿಯ ಪರವಾದ ಹೇಳಿಕೆಯನ್ನು ನೀಡಿದ ಕಾರಣವಾಗಿ ರೈತಸಂಘದಿಂದ ನನ್ನನ್ನು ಉಚ್ಚಾಟಿಸಲಾಯಿತು. ಈ ಉಚ್ಚಾಟನೆಯನ್ನು ಸಭೆಯಲ್ಲಿ ಶಾಮಣ್ಣನವರು ಪ್ರತಿಭಟಿಸಿದ್ದರಂತೆ. ರೈತಸಂಘದಿಂದ ಉಚ್ಚಾಟನೆಗೊಂಡ ನಂತರ ಸುಮಾರು ಇಪ್ಪತ್ತು ವರ್ಷಗಳ ಕಾಲ ಶಾಮಣ್ಣನವರೊಂದಿಗೆ ನನ್ನ ಒಡನಾಟವಿರಲಿಲ್ಲ.


ಇದಾದ ನಂತರ ೨೦೦೯ರಲ್ಲಿ ರೈತಸಂಘದ ಎರಡೂ ಬಣಗಳನ್ನು ಒಗ್ಗೂಡಿಸಬೇಕು ಎಂಬ ಆಲೋಚನೆಯನ್ನು ಮಾಡಿದರು. ಈ ಆಲೋಚನೆಯ ಭಾಗವಾಗಿದ್ದವರು ಕಡಿದಾಳು ಶಾಮಣ್ಣ, ರವಿವರ್ಮ ಕುಮಾರ್, ಡಾ. ವೆಂಕಟರೆಡ್ಡಿ, ವೆಂಕಟೇಶಮೂರ್ತಿ, ರಾಜೂಗೌಡ ಮತ್ತು ನಾನು. ಇದು ರೈತರ ಆತ್ಮಹತ್ಯೆಗಳು ಹೆಚ್ಚಾಗಿದ್ದ ಸಂದರ್ಭ. ನಾವು ಇಂತಹ ಬಿಕ್ಕಟ್ಟಿನ ಸಂದರ್ಭದಲ್ಲಿ ರೈತ ಚಳುವಳಿ ಒಂದು ಶಕ್ತಿಯಾಗಿ ಕೆಲಸ ಮಾಡಬೇಕು ಎಂದು ಆಲೋಚಿಸಿ ಬೆಂಗಳೂರಿನ ಗಾಂಧಿಭವನದಲ್ಲಿ ಸಭೆ ಸೇರಿ ಎರಡೂ ಬಣಗಳನ್ನೂ ಒಗ್ಗೂಡಿಸಲಾಯಿತು. ರೈತ ಚಳುವಳಿಯಲ್ಲಿ ನೈಜವಾಗಿ ಎಲ್ಲರೂ ಪಾಲ್ಗೊಳ್ಳಬೇಕು ಎಂದು ಶ್ರಮಿಸಿದವರಲ್ಲಿ ಶಾಮಣ್ಣನವರದು ದೊಡ್ಡ ಪಾತ್ರವಿದೆ. ಗಾಂಧಿಭವನದಲ್ಲಿ ರೈತಸಂಘದ ಎರಡೂ ಬಣಗಳು ಒಂದಾದ ಮೇಲೆ ಹಲವು ಕಾರ್ಯಕ್ರಮಗಳನ್ನು ನಡೆಸಿದೆವು. ಈ ನಡುವೆ ಪದವಿಗಳ ಕಾರಣಕ್ಕಾಗಿ ಕೆಲವು ನಾಯಕರಲ್ಲಿ ಮುಸುಕಿನ ಗುದ್ದಾಟಗಳು ನಡೆದವು. ಈ ಕಾರಣದಿಂದ ಮತ್ತೆ

ರೈತಸಂಘದಲ್ಲಿ ಭಿನ್ನಾಭಿಪ್ರಾಯಗಳು ಶುರುವಾದವು. ನಂಜುಂಡಸ್ವಾಮಿಯವರ ಎಪ್ಪತ್ತನಾಲ್ಕನೇ ವಾರ್ಷಿಕೋತ್ಸವ ಕಾರ್ಯಕ್ರಮಕ್ಕೆ ಚಿತ್ರದುರ್ಗದ ಮುರುಘಾ ಮಠದ ಸ್ವಾಮಿಗಳು ಬಂದಿದ್ದರು. ಅವರು ರೈತಸಂಘ ಬಲಗೊಳ್ಳಬೇಕಾದ ಅನಿವಾರ್ಯತೆಯನ್ನು ಕುರಿತು ಮಾತನಾಡಿ ಇದರೊಳಗೆ ಉಂಟಾಗಿರುವ ಭಿನ್ನಾಭಿಪ್ರಾಯಗಳನ್ನು ಸರಿಪಡಿಸುವಲ್ಲಿ ನಾನೂ ನಿಮ್ಮ ಜೊತೆಗಿರುತ್ತೇನೆ ಎಂದು ಅಭಿಪ್ರಾಯಿಸಿದರು. ಅದಾದ ನಂತರ ಮಠಕ್ಕೆ ಕೋರ್‌ಕಮಿಟಿಯ ಸದಸ್ಯರು, ಪುಟ್ಟಣ್ಣಯ್ಯ ಮತ್ತು ಕೋಡಿಹಳ್ಳಿ ಚಂದ್ರು ಎಲ್ಲರೂ ಹೋಗಿದ್ದೆವು. ಅಲ್ಲಿ ರೈತಸಂಘಟನೆಯನ್ನು ಮತ್ತೆ ಒಟ್ಟಾಗಿ ಸಂಘಟಿಸುವ ಮಾತುಕತೆಗಳು ನಡೆದು ಎಲ್ಲರೂ ಒಪ್ಪಿಕೊಂಡರು. ಆದಾದ ಎರಡು ಮೂರು ದಿನಕ್ಕೆ ಮತ್ತೆ ರೈತಸಂಘಟನೆ ಇಬ್ಭಾಗವಾಯಿತು. ಇದು ಶಾಮಣ್ಣನವರಂತಹ ಚಳುವಳಿಯನ್ನೇ ಜೀವಿಸುವವರ ಕನಸುಗಾರಿಕೆಯನ್ನು ನಾಶ ಮಾಡುವ ಕೆಲಸ ಎಂದು ರೈತ ಚಳುವಳಿ ಅರ್ಥ ಮಾಡಿಕೊಳ್ಳಬೇಕಾಗಿದೆ. ನಮ್ಮ ಚಳುವಳಿಗಳನ್ನು ಕಟ್ಟಲು ಮತ್ತು ಮುಂದುವರೆಸಲು ಕೆಲವು ಚಿಂತಕರನ್ನು ಮಾದರಿಗಳಾಗಿ ಸ್ವೀಕರಿಸುತ್ತೇವೆ. ಇಂದು ಕಡಿದಾಳು ಶಾಮಣ್ಣನವರು ನಮ್ಮ ಚಳುವಳಿಗಳು ಅನುಸರಿಸಬೇಕಾದ ಅಗತ್ಯ ಮಾದರಿ ಎಂಬುದನ್ನು ನಾವು ಅರ್ಥ ಮಾಡಿಕೊಳ್ಳಬೇಕಾಗಿದೆ.

ಇನ್ನು ಶಾಮಣ್ಣನವರ ಸಾಂಸ್ಕೃತಿಕ ಹವ್ಯಾಸಗಳ ಬಗ್ಗೆ ನನಗೆ ತಿಳಿದಿರುವ ಮಾತುಗಳು. ಶಾಮಣ್ಣನವರು ನಿರುದ್ಯೋಗಿ ಮತ್ತು ಆರ್ಥಿಕ ತೊಂದರೆಯಿದ್ದ ಯುವಕ ಯುವತಿಯರನ್ನು ಸೇರಿಸಿಕೊಂಡು ಒಂದು ಹಾಡುಗಾರರ ತಂಡವನ್ನು ರಚಿಸಿ ಸಭೆ ಸಮಾರಂಭಗಳಲ್ಲಿ ಭಾಗವಹಿಸಿ ಕರೆಸಿಕೊಂಡವರು ಅವರಿಗೆ ಆರ್ಥಿಕ ಸಹಾಯದ ಜೊತೆಗೆ ಹಾಡುಗಾರರನ್ನು ಪ್ರೋತ್ಸಾಹಿಸಿದಂತೆ ಮತ್ತು ಹೋರಾಟದ ಹಾಡುಗಳು ಆ ಸಭೆಗೆ ಮುಖ್ಯವೂ ಆಗಿರುತ್ತದೆಂದು ಅವರ ಎಲ್ಲರ ಕಾಳಜಿಗಳನ್ನು ಅರ್ಥಮಾಡಿಕೊಂಡು ಎಲ್ಲರ ಸಮಸ್ಯೆಗಳಿಗೆ ಸ್ಪಂದಿಸುವ ಮನೋಭಾವ ಅವರಷ್ಟೆ ಹಿರಿತನದಿಂದ ಕೂಡಿರುತ್ತಿತ್ತು.


ಮತ್ತೆ ಇನ್ನೊಂದು ಪ್ರಸಂಗ ಹಂಚಿಕೊಂಡಿದ್ದರು. ಉತ್ತರ ಕರ್ನಾಟಕದಲ್ಲಿ ಒಬ್ಬ ಕ್ಷೌರಿಕನಿಗೆ ಫೋಟೋ ತೆಗೆಯುವುದನ್ನು ಅವನ ಕಾಯಕದೊಂದಿಗೆ ಒಂದು ಹವ್ಯಾಸ ಮಾಡಿಕೊಳ್ಳುವ ರೀತಿಯಲ್ಲಿ ತರಬೇತಿ ಕೊಟ್ಟು ಅವರ ಆರ್ಥಿಕ ಪರಿಸ್ಥಿತಿ ಇನ್ನೂ ಹೆಚ್ಚುವಂತೆ ಮಾಡುವುದರ ಜೊತೆಗೆ ಅವನೊಬ್ಬ ಹವ್ಯಾಸಿ ಫೋಟೋಗ್ರಾಫರ್ ಆಗಿ ಸಮಾಜದಲ್ಲಿ ಗುರುತಿಸಿಕೊಳ್ಳುವಂತೆ ಮಾಡಿದ್ದರ ಅವರ ಮನೋಭಾವ ಗುರುತಿಸುವಂತಾಗುತ್ತೆ. ಆ ಮನುಷ್ಯ ಈಗಲೂ ಶಾಮಣ್ಣನವರನ್ನು ಜ್ಞಾಪಿಸುತ್ತಾ ಪತ್ರ ಬರೆಯುತ್ತಾನೆಂದು ಶಾಮಣ್ಣನವರು ಹೇಳುತ್ತಿದ್ದರು.

ಶಾಮಣ್ಣನವರು ಸಮತಾ ವಿದ್ಯಾಲಯದಲ್ಲಿ ಧರ್ಮದರ್ಶಿಯಾಗಿದ್ದು ಅಲ್ಲಿನ ಕಾರ್ಯಕ್ರಮಗಳಲ್ಲಿ ಹಾಡುವುದು, ಫೋಟೋ ತೆಗೆಯುವುದರ ಜೊತೆಗೆ ಚರ್ಚೆಗಳಲ್ಲಿ ತಮಾಶೆ ಪ್ರಸಂಗಗಳನ್ನು ಹೇಳುತ್ತಾ ನಗಿಸುವುದರ ಮೂಲಕ ಆ ಚರ್ಚೆಗಳಿಗೆ ಹೊಸ ವಸ್ತುಗಳನ್ನು ಒದಗಿಸುತ್ತಿದ್ದರು.






ಹರೆಯದಲ್ಲಿ ಶ್ರೀದೇವಿ–ಶಾಮಣ್ಣ



ಶಾಮಣ್ಣ–ಶ್ರೀದೇವಿ ಹಾಗೂ ಚಂದ್ರಾವತಿ–ರಮೇಶ್ ಮದುವೆ ಸಂದರ್ಭ



ಕಾಲೇಜು ದಿನಗಳಲ್ಲಿ...



ಭಗವತಿಕೆರೆಯಲ್ಲಿ ಆರಂಭದ ದಿನಗಳ ಶಾಮಣ್ಣನ ಆವಾಸ



ತಾಯಿ ನಾಗವೇಣಮ್ಮನ ಜೊತೆ ಉಭಯ ಕುಶಲೋಪರಿ...



ಶಾಮಣ್ಣನವರ ತಂದೆ-ತಾಯಿ ಕಡಿದಾಳು ರಾಮಪ್ಪ ಗೌಡ-ನಾಗವೇಣಮ್ಮನವರ
ಜೊತೆ ಕಡಿದಾಳು ಕುಟುಂಬದ ಮೂರು ತಲೆಮಾರು




ಚುಕ್ಕಿ ನಂಜುಂಡಸ್ವಾಮಿ ದಂಪತಿಗಳೊಂದಿಗೆ
ಶಾಮಣ್ಣ ಕುಟುಂಬ.



...ದೇವಿ, ಮಕ್ಕಳು ಲಾಜವಂತಿ, ಉಲೂಪಿ,
ಅಳಿಯಂದಿರು ಸತೀಶ್, ವಿನಯ್,
ಮೊಮ್ಮಕ್ಕಳು ತಾನ, ಮಂದ್ರ, ಊರ್ವಿ
ಜೊತೆಯಲ್ಲಿ....



ಹೆಗ್ಗೋಡಿನ ಪ್ರಸನ್ನ ಅವರ ಮನೆಯಲ್ಲಿ ವಿನುತಾ, ಅಕ್ಷತಾ, ರಾಜೇಶ್ವರಿ, ಶ್ರೀದೇವಿ, ಹೆಚ್.ಎಸ್.ದೊರೆಸ್ವಾಮಿ, ಪ್ರಸನ್ನ, ಬಾಬಣ್ಣ ಅವರೊಂದಿಗೆ...



ಶಾಮಣ್ಣನವರ ಮನೆಯಲ್ಲಿ.
ಗುರು, ರಾಷ್ಟ್ರಕವಿ
ಜಿ.ಎಸ್.ಎಸ್. ಜೊತೆ



ಗೆಳೆಯ ತೇಜಸ್ವಿ ಜೊತೆ ಭಗವತಿಕೆರೆಯಲ್ಲಿ...



ಅನಂತಮೂರ್ತಿ ದಂಪತಿಗಳೊಡನೆ...



ಗುರು ಪ್ರಭುಶಂಕರರಿಗೆ ಆತಿಥ್ಯ...



ಗೆಳೆಯ ಪ್ರೇಮಾನಂದ್ ಜೊತೆ...



ಬೆಳಗಾವಿಯಲ್ಲಿ ನಡೆದ ರೈತ ಸತ್ಯಾಗ್ರಹದ
ಹಸಿರು ಸೇನೆ ಮತ್ತು ರೈತಸಂಘದ ಒಡನಾಡಿಗಳೊಂದಿಗೆ.




ಕವಿಶೈಲದಲ್ಲಿ ಕೊಳಲೂದುತ್ತಾ...
ಪಕ್ಕದಲ್ಲಿ ದಿವಾಕರ್ ಹೆಗ್ಗಡೆ



ಶಿವಮೊಗ್ಗೆಗೆ
ಮೇಧಾಪಾಟ್ಕರ್
ಆಗಮಿಸಿದ್ದ
ಸಂದರ್ಭದಲ್ಲಿ...




ಶಿವಮೊಗ್ಗೆಯಲ್ಲಿ ನಡೆದ ಅಂತರ್ಜಾತಿ ವಿವಾಹಿತರ ಸಮಾವೇಶ (2011)
ಎಸ್.ನಾಗಭೂಷಣ್, ರವಿವರ್ಮಕುಮಾರ್, ಎಂ.ಬಿ.ನಟರಾಜ್ ಅವರೊಂದಿಗೆ ವೇದಿಕೆಯಲ್ಲಿ...



'ನಮ್ಮ ಶಾಮಣ್ಣ'ದ ಸಂಪಾದಕರಾದ
ಬಿ. ಚಂದ್ರೇಗೌಡ, ಎಂ.ಬಿ. ನಟರಾಜ್, ಡಿ.ಎಸ್. ನಾಗಭೂಷಣ
ಅವರೊಂದಿಗೆ ಶಾಮಣ್ಣ ದಂಪತಿ



ಸಿರಾ ಸೀಮೆಯ 2016ರ ಶಿವೋತ್ಸವದಲ್ಲಿ ಗಣೇ ಗೌರವ ಸ್ವೀಕರಿಸಿ..



ಹಾಡಿನಲ್ಲಿ ತಲ್ಲೀ

ಶಾಮಣ್ಣ, ರೈತ ಸಂಘದ ಹೃದಯ

ಕೆ.ಟಿ. ಗಂಗಾಧರ್

ರೈತ ಸಂಘ ಹುಟ್ಟುವುದಕ್ಕೆ ಮೊದಲು, ನಾನು ಶಿವಮೊಗ್ಗದಲ್ಲಿ ಸಮಾಜವಾದಿಗಳ ಜೊತೆ ಇದ್ದವನು. ಜೆ.ಹೆಚ್ ಪಟೇಲರು, ಕಾಗೋಡು ತಿಮ್ಮಪ್ಪ, ಪರಮೇಶ್ವರಪ್ಪ, ಎಂ.ಬಿ.ಶಿವಣ್ಣ ಇವರುಗಳ ಜೊತೆ ನನ್ನ ಒಡನಾಟವಿತ್ತು. ಶಿವಮೊಗ್ಗದಲ್ಲಿ ಕಬ್ಬು ಬೆಳೆಗಾರರ ಸಂಘ ಉದ್ಭವವಾದಾಗ, ಕೃಷಿಕ ಸಮಾಜದ ನಾನು ಸಹಜವಾಗಿ ಕಬ್ಬು ಬೆಳೆಗಾರರ ಸಂಘದಲ್ಲಿ ಗುರುತಿಸಿಕೊಂಡೆ. ಈ ಸಂಘದ ಪ್ರಬಲ ಹೋರಾಟಗಾರರಾದ, ಸುಂದರೇಶ್ ಮತ್ತು ಶಾಮಣ್ಣ ತುಂಬ ಆಲೋಚನೆ ಮಾಡಿ, ರುದ್ರಪ್ಪನವರನ್ನು ಅಧ್ಯಕ್ಷರನ್ನಾಗಿ ಮಾಡಿಕೊಂಡರು. ಇದರಲ್ಲಿ ಶಾಮಣ್ಣನವರ ಒತ್ತಾಸೆ ಬಲವಾಗಿತ್ತು.

ಕಬ್ಬು ಬೆಳೆಗಾರರ ಸಂಘವಾಗಿ ಹುಟ್ಟಿದ್ದು ನರಗುಂದ ನವಲುಗುಂದ ಗೋಲೀಬಾರಿನಿಂದ, ಯಾವ ಅಂಜಿಕೆಯೂ ಇಲ್ಲವೆ ರೈತರನ್ನು ಉಡಾಯಿಸಿದ ಗುಂಡೂರಾಯರ ಸರಕಾರದ ವಿರುದ್ಧ ಸಿಡಿದೆದ್ದು ರೈತಸಂಘವಾಯ್ತು. ರೈತ ನಾಯಕರಾದ ರುದ್ರಪ್ಪ, ಸುಂದರೇಶ್, ಶಾಮಣ್ಣ ನಾವೆಲ್ಲಾ ನರಗುಂದಕ್ಕೆ ಹೋದಾಗ, ಊರಿನ ಗಂಡಸರೆಲ್ಲಾ ಊರನ್ನೇ ತೊರೆದು ಹೋಗಿದ್ದರು. ಆವರಲ್ಲಿನ್ನೂ ಭಯ ಆವರಿಸಿತ್ತು.

ಆ ಜನಗಳಿಗೆ ಧೈರ್ಯ ಹೇಳಿ, ನಂಬಿಕೆ ಬರುವಂತೆ ಮಾಡಲು, ಸುಂದರೇಶ್‌ರವರು, ಶಾಮಣ್ಣ ಮತ್ತು ನನ್ನನ್ನು ಅಲ್ಲಿ ಬಿಟ್ಟು ಬಂದರು. "ಹೆದರಬೇಡಿ ನಾವಿದ್ದೇವೆ" ಎಂಬ ಆತ್ಮವಿಶ್ವಾಸವನ್ನು ತುಂಬುವುದು ನಮ್ಮ ಜವಾಬ್ದಾರಿಯಾಗಿತ್ತು. ಶಾಮಣ್ಣನವರ ಬಳಿ ಜನಗಳನ್ನು ಮಾತನಾಡಿಸುವ ಪರಿಕರಗಳಿದ್ದವು. ಹಾರ್ಮೋನಿಯಂ ತರಿಸಿ ನುಡಿಸುತ್ತ ಕೊಳಲು ನುಡಿಸುತ್ತ ಜನರು ಹತ್ತಿರ ಬರುವಂತೆ ಮಾಡತೊಡಗಿದರು.

ಶಾಮಣ್ಣನವರ ಬದುಕಿನಲ್ಲಿ ಅವರೆಂದೂ ವೇದಿಕೆ ಮೇಲೆ ಭಾಷಣ ಮಾಡಲು ಮತ್ತು ವೇದಿಕೆ ಮೇಲೆ ಕೂರಲು ಇಷ್ಟಪಟ್ಟವರಲ್ಲ ರೈತ ಸಂಘದ ಏಳಿಗೆಗಾಗಿ ಒಂದು ರೀತಿಯ ಆರೋಗ್ಯಕರ ಅಂತರದಲ್ಲೇ ದುಡಿದರು. ನರಗುಂದ ನವಲುಗುಂದದಲ್ಲಿ ಮಾಡಿದ ರೈತರ ಸಮಾಧಿಕಲ್ಲುಗಳನ್ನು ನೆಡುವ ಯೋಚನೆಯೂ ಅವರದೆ. ಇವನ್ನ ಕೂಡ ತಡೆಯಲು ಸರಕಾರ ತಯಾರಾಗಿತ್ತು. ಗೋಲೀಬಾರ್ ನಂತರ ಶಿವಮೊಗ್ಗದಲ್ಲಿ ನಡೆದ ಐತಿಹಾಸಿಕ ಸಮಾವೇಶಕ್ಕೆ, ಪ್ರೊ. ನಂಜುಂಡಸ್ವಾಮಿ ಯವರು ಬಂದು ಸೇರಿದರು. ಅವರ ಆಗಮನವೇ ನಮಗೆ ಸ್ಫೂರ್ತಿ ನೀಡಿತು. ಅವರೊಟ್ಟಿಗೆ ನರಗುಂದಕ್ಕೆ ಹುತಾತ್ಮ ರೈತರ ಶಿಲೆಗಳನ್ನು ತೆಗೆದುಕೊಂಡು ಹೋದಾಗ, ಐ.ಬಿ.ಯಲ್ಲಿ, ಅಲ್ಲಿನ ಪೋಲಿಸ್ ಅಧಿಕಾರಿ ಉಳಿದುಕೊಂಡಿದ್ದರು. ಐ.ಬಿ. ಗೆ ಬೀಗ ಹಾಕಿತ್ತು. ನಂಜುಂಡಸ್ವಾಮಿಯವರು ಬೀಗ ಒಡೆಯಲು ನನಗೆ ಆಜ್ಞೆಯಿತ್ತರು. ಕೂಡಲೇ ನಾನು ಕಲ್ಲು ತೆಗೆದುಕೊಂಡು ಬೀಗ ಜಜ್ಜಿ ಬಿಸಾಡಿದೆ. ಇದರಿಂದ ಹೆದರಿದ ಪೋಲೀಸ್ ಅಧಿಕಾರಿ ನಮ್ಮತ್ತ ಸುಳಿಯಲೇ ಇಲ್ಲ. ಅಲ್ಲಿಂದ ನಮ್ಮ ದಿಗ್ವಿಜಯಗಳು ಆರಂಭಗೊಂಡವು.

ಗುಂಡೂರಾಯರ ಗೋಲಿಬಾರ್ ಸರಕಾರವನ್ನು ಕಿತ್ತೊಗೆದು, ಜನತಾದಳದ ಸರಕಾರ ಸ್ಥಾಪನೆಯಲ್ಲಿ ರೈತ ಸಂಘದ ಪಾತ್ರ ಪ್ರಧಾನವಾಗಿತ್ತು. ಎಲ್ಲಿಂದಲೋ ಬಂದು ಮುಖ್ಯಮಂತ್ರಿಯಾದ ರಾಮಕೃಷ್ಣ ಹೆಗಡೆ, ರೈತಸಂಘವನ್ನು ನಯ ನಾಜೂಕಿನಿಂದ ನಿಭಾಯಿಸುತ್ತ, ಕೆರಳಿಸತೊಡಗಿದರು. ಇದರಿಂದ ರೊಚ್ಚಿಗೆದ್ದ ರೈತ ಸಂಘ, ಮತ್ತೆ ತನ್ನ ಚಳುವಳಿಯನ್ನು ಆರಂಭಿಸಿತು. ಅದಕ್ಕೆ ಮುಖ್ಯ ಕಾರಣ ರೈತ ಸರಕಾರದಿಂದ ಪಡೆದ ಸಾಲಕ್ಕೆ ಬಡ್ಡಿ ಅಥವಾ ಅಸಲು ಕಟ್ಟದಿದ್ದರೆ, ಆತನ ಇಡೀ ಜಮೀನನ್ನು ಮುಟ್ಟುಗೋಲು ಹಾಕಿಕೊಳ್ಳುವ ಕಾನೂನೊಂದನ್ನು ಹೆಗಡೆ ತಂದಿದ್ದರು. ಇದು ಅಸಹಾಯಕ ರೈತರ ಭೂಮಿಯನ್ನ ರೈತರಿಂದ ಲಪಟಾಯಿಸಲು ಸರಕಾರ ಮಾಡಿದ ಸಂಚಾಗಿತ್ತು. ಇದರ ವಿರುದ್ಧ ನಮ್ಮ ನಾಯಕರುಗಳಾದ ನಂಜುಂಡಸ್ವಾಮಿ, ರುದ್ರಪ್ಪ, ಸುಂದರೇಶ್ ಮತ್ತು ಶಾಮಣ್ಣನವರು ತಿರುಗಿ ಬಿದ್ದು, ಈ ಶಾಸನದ ವಿರುದ್ಧ ಬೆಂಗಳೂರಿಗೆ ನಡೆಯಲು ತಯಾರಾದರು. ಆಗ ಶಾಮಣ್ಣನವರಿಗೆ ಲೋ ಬಿ.ಪಿ. ಇತ್ತು. ಚಳುವಳಿಗಾಗಿ ಅವರೆಂದೂ ತಮ್ಮ ಆರೋಗ್ಯದ ಕಡೆ ಕಾಳಜಿ

ವಹಿಸಿದವರಲ್ಲ. ಆದ್ದರಿಂದ ಶ್ರೀದೇವಕ್ಕ ಬಂದು "ಗಂಗಾಧರ್, ಶಾಮಣ್ಣನವರ ಪಾದಯಾತ್ರೆ ಸಮಯದಲ್ಲಿ, ನೀವು ಅವರ ಜೊತೆಯಲ್ಲೇ ಇರಬೇಕೆಂದು" ಕೇಳಿದರು. ನಾನು ಆಯ್ತು ಎಂದೆ. ಆದರೆ ಶಾಮಣ್ಣನವರು ತಮ್ಮ ಬಾಡಿಗಾರ್ಡ್‌ಗೆ ಬೋರಾಗಬಾರದೆಂದು ನಿರ್ಧರಿಸಿ, "ನೀನೊಬ್ಬ ಒಳ್ಳೆ ಪೋಟೋಗ್ರಾಫರ್ ಆಗಬೇಕು. ಇಲ್ಲಿಂದ ಬೆಂಗಳೂರಿಗೆ ಹೋಗುವಷ್ಟರಲ್ಲಿ ಕ್ಯಾಮರ ಬಗೆಗಿನ ಎಲ್ಲಾ ವಿವರವನ್ನು ಹೇಳಿಕೊಡುತ್ತೇನೆಂದರು. ಅಲ್ಲದೆ ಈ ಕ್ಯಾಮರ ಸಾಮಾನ್ಯವಾದುದಲ್ಲ. ತೇಜಸ್ವಿಯವರು ಕೊಟ್ಟಿದ್ದು" ಎಂದು ಅದರ ಮಹತ್ವ ವಿವರಿಸಿದರು.

ಶಿವಮೊಗ್ಗದಿಂದ ಹೊರಟ ಪಾದಯಾತ್ರೆ ಜೊತೆಗೆ, ನನ್ನ ಕ್ಯಾಮರಾ ಕ್ಲಾಸುಗಳೂ ಆರಂಭವಾದವು. ಫೋಟೋ ತೆಗೆಯುವ ಮುನ್ನ ಬೆಳಕು, ಅಂತರ ಮತ್ತು ಚೌಕಟ್ಟನ್ನು ಗ್ರಹಿಸಿ ಕ್ಲಿಕ್ ಮಾಡುವುದನ್ನೆಲ್ಲಾ ಹೇಳಿಕೊಡುತ್ತಾ ಹೊರಟರು.

ಅರಸೀಕೆರೆಯಲ್ಲಿ ಸ್ಟುಡಿಯೋವೊಂದಕ್ಕೆ ನುಗ್ಗಿ "ಇದು ತೇಜಸ್ವಿಯವರ ಕ್ಯಾಮರಾದಲ್ಲಿ ಹಿಡಿದ ಫೋಟೋಗಳು, ಪ್ರಿಂಟಾಕಬೇಕು. ನಿಮ್ಮ ಡಾರ್ಕ್‌ರೂಂ ಬಿಟ್ಟುಕೊಡಿ" ಎಂದು ಪ್ರಭಾವಯುತವಾಗಿ ಮಾತನಾಡುತ್ತಿದ್ದರು. ಸ್ಟುಡಿಯೋದವರು ನಮ್ಮ ಹಸಿರುಶಾಲು ಮತ್ತು ಸಾಹಸವನ್ನು ಮೆಚ್ಚಿ ಅವಕಾಶ ಮಾಡಿಕೊಡುತ್ತಿದ್ದರು. ಪ್ರತಿ ದಿನ ಇಪ್ಪತ್ತು ಕಿ.ಮೀ ನಡೆಯುತ್ತಿದ್ದೆವು. ನಿಗದಿಯಾದ ಜಾಗದಲ್ಲಿ ವಸತಿ ಮಾಡಿ, ಮುಂದೆ ಹೋಗುತ್ತಿದ್ದೆವು. ಈ ಕಾರ್ಯಕ್ಕೆ ಸುಂದರೇಶ್ ನಿರ್ದೇಶನದಂತೆ, ಬೈಕ್ ತೆಗೆದುಕೊಂಡು ಹೋಗಿ ಉಳಿಯುವ ವ್ಯವಸ್ಥೆ ಮತ್ತು ಊಟದ ವ್ಯವಸ್ಥೆಗೆ ಏರ್ಪಾಡು ಮಾಡಿ ಮತ್ತೆ ಬಂದು ಪಾದಯಾತ್ರೆ ಸೇರುತ್ತಿದ್ದೆವು. ನಮ್ಮ ರೈತರು ಯಾವತ್ತಿಗೂ ಉದಾರಿಗಳು, ಭೂಮಿಯಲ್ಲಿ ಬದುಕುವವರಲ್ಲೇ ಅಂತದೊಂದು ವಿಶಾಲ ಗುಣವಿದೆ. ಆದ್ದರಿಂದ ಎಷ್ಟು ಜನಗಳಾದರೂ ಊಟಕ್ಕೆ ಬನ್ನಿ ಎಂದವರು, ಎರಡು ಮೂರು ನಾಲ್ಕು ಜನ ಹೀಗೆ ತಮಗೆ ಶಕ್ತಿಯಿದ್ದಷ್ಟು ಜನರನ್ನು ಆಯ್ಕೆ ಮಾಡಿಕೊಂಡು ಕರೆದುಕೊಂಡು ಹೋಗುತ್ತಿದ್ದರು. ಆಗ ಅರಸೀಕೆರೆಯ ಬಳಿಯಲ್ಲಿನ ಬೆಂಡೇಕೆರೆಯಲ್ಲಿ ಎಲ್ಲರೂ ಖಾಲಿಯಾದ ನಂತರ, ನಾನು ಸುಂದರೇಶ್ ಶಾಮಣ್ಣ ಉಳಿದೆವು. ಒಬ್ಬ ಗಾಢವಾಗಿ ಯೋಚಿಸುತ್ತಿದ್ದ ರೈತ. "ಬನ್ರಿ ಅತ್ತಗೆ" ಎಂದ. ನಾವು ಹೊರಟಾಗ ಕೆಲಸಕ್ಕೆ ಹೋಗಿರುವ ಗಂಡನಿಗೆ ಬುತ್ತಿ ಕಟ್ಟಿಕೊಂಡು ಬರುತ್ತಿದ್ದ ಹೆಂಡತಿ ಎದುರಾದಳು. ಆದರೆ ಈ ರೈತ, ಕೆಲಸಕ್ಕೆ ಹೋಗದೆ ದೊಡ್ಡ ಆತಿಥ್ಯದ ಜವಾಬ್ದಾರಿಗೆ ಸಿಕ್ಕಿ ಬಿದ್ದಿದ್ದ. ಹೆಂಡತಿಗೆ ಏನೋ ಸನ್ನೆ ಮಾತಿನಲ್ಲೇ ಹೇಳುತ್ತ ವಾಪಾಸು ಮನೆಗೆ ಕರೆದುಕೊಂಡು ಹೊರಟ. ಆದರೆ ಮನೆಯಲ್ಲಿ ಏನೂ ಇಲ್ಲ! ಜಂತಿ ನೋಡಿದ ಶಾಮಣ್ಣನವರಿಗೆ ತೆಂಗಿನಕಾಯಿ ಕಾಣಿಸಿದವು. "ನೀವು ಅದೇನಾರ ಮಾಡಿ. ನಾವು ಕಾಯಿ ಸುಲಕೊಂಡು ತಿಂತಿವಿ" ಎಂದು ಕಾಯಿ ಸುಲಿಯತೊಡಗಿದರು. ಅಷ್ಟರಲ್ಲಿ ಮನೆಯೊಡತಿ ಅಂಗಡಿಗೆ

ಹೋಗಿ ಪುರಿ ತಂದು ನಮ್ಮ ಎದುರು ಸುರಿದು ತಿಂತಾಯಿರಿ ಎಂದು ಹೇಳಿ ಅಡಿಗೆ ಮಾಡತೊಡಗಿದಳು. ಅವಳ ಅಡಿಗೆ ಮುಗಿಯುವಷ್ಟರಲ್ಲಿ ಹಸಿದು ಸುಸ್ತಾಗಿದ್ದೆವು. ಆದ್ದರಿಂದ ಆ ಊಟದ ರುಚಿ ಮತ್ತು ಆ ಹೆಣ್ಣುಮಗಳ ಆತಿಥ್ಯವನ್ನು ಇನ್ನೂ ಮರೆಯಲಾಗಿಲ್ಲ. ಶಾಮಣ್ಣ ಆಕೆಯ ಸಂಸಾರದ ಫೋಟೋ ತೆಗೆದರು.

ತುಮಕೂರಿನ ಮುಂದೆ ಶಿವಗಂಗೆ ಕ್ರಾಸಿದೆ. ಅಲ್ಲಿ ಒಬ್ಬ ಮುದುಕಿ ನಿಂತಿದ್ದಳು. ಆ ಮುಗ್ದೆಗೆ ಈ ಸರಕಾರ, ಪಾದಯಾತ್ರೆ, ರೈತಸಂಘ, ಯಾವುದೂ ಗೊತ್ತಿಲ್ಲ. ಆದರೆ ಯಾರೊ ಯಾತ್ರೆ ಹೊರಟ್ಟಿದ್ದಾರೆಂದು ಗ್ರಹಿಸಿ, ಅಕ್ಕಿ, ಬೆಲ್ಲ, ಮೆಣಸಿನಕಾಯಿ, ಹಸಿಟ್ಟು ಇದರ ಜೊತೆಗೆ ಹತ್ತು ರೂಪಾಯಿ ಕಾಣಿಕೆಯನ್ನು ತಂದು ಕೊಟ್ಟು ಧಾನ್ಯವನ್ನು ಶಾಮಣ್ಣನವರ ಜೋಳಿಗೆಗೆ ಸುರಿದು ನಿಮ್ಮ ಪ್ರಯಾಣಕ್ಕೆ ಒಳ್ಳೆದಾಗ್ಲಿ ಕಣ್ಣಪ್ಪ" ಎಂದು ಹರಸಿದಳು. ಈಕೆಯೂ ಶಾಮಣ್ಣನವರ ಕ್ಯಾಮರಾಕ್ಕೆ ಸಿಕ್ಕಿದಳು. ಭೂದೇವಿಯಂತೆ ನಮಗಾಗಿ ಕಾದಿದ್ದ ಆ ಮುದುಕಿಯನ್ನು ಮರೆಯಲಾಗಿಲ್ಲ.

ಶಿವಮೊಗ್ಗದಿಂದ ಬೆಂಗಳೂರಿಗೆ ೧೩ ದಿನ ನಡೆದೆವು. ಆದರೆ, ಶಾಮಣ್ಣ ಜೊತೆಯಿದ್ದುದರಿಂದ ನಡಿಗೆಯ ಶ್ರಮವಾಗಲಿ, ದಣಿವಾಗಲಿ ನಮ್ಮ ಅರಿವಿಗೇ ಬರಲಿಲ್ಲ. ಬೆಂಗಳೂರು ತಲುಪಿದ ನಂತರ, ನಮ್ಮ ಬೃಹತ್ ಸಭೆಯನ್ನುದ್ದೇಶಿಸಿ ತೇಜಸ್ವಿಯವರು, ಬಂಗಾರಪ್ಪ, ಮೊಯ್ಲಿ ಮಾತನಾಡಿದರು. ರುದ್ರಪ್ಪನವರ ಅಧ್ಯಕ್ಷತೆಯಲ್ಲಿ ನಡೆದ ಆ ಸಭೆ ಉತ್ತರ ಕರ್ನಾಟಕ ಮತ್ತು ದಕ್ಷಿಣ ಕರ್ನಾಟಕದ ನಾಯಕರುಗಳಿಂದ ತುಂಬಿಹೋಗಿತ್ತು. ಶಾಮಣ್ಣನವರು ಆ ಸಭೆಯ ಎಲ್ಲಾ ಫೋಟೋಗಳನ್ನು ತೆಗೆದರು.

ಶಾಮಣ್ಣನವರ ಇನ್ನೊಂದು ಗುಣವೆಂದರೆ, ಸಭೆ ಸಮಾರಂಭದಲ್ಲಿ ಮಾತನಾಡದಿದ್ದರೂ, ಭಾಷಣಕಾರರ ಮಾತುಗಳನ್ನು ಆಲಿಸಿ, ಗಂಭೀರವಾಗಿ ಚಿಂತಿಸಿ, ನಂತರ ಖಾಸಗಿ ಮಾತುಕತೆಯಲ್ಲಿ ಹೇಳುತ್ತಿದ್ದರು. ರುದ್ರಪ್ಪನವರು, ನಂಜುಂಡಸ್ವಾಮಿ ಹಾಗೂ ಸುಂದರೇಶ್ ನಡುವೆ ಭಿನ್ನಾಭಿಪ್ರಾಯಗಳು ಬಂದಾಗ, ಸಮನ್ವಯಕಾರರಾಗಿ ಶಾಮಣ್ಣ ವರ್ತಿಸುತ್ತಿದ್ದರು. ಆದರೆ ಯಾರ ತಪ್ಪುಗಳನ್ನು ನೇರವಾಗಿ ಹೇಳಿದವರಲ್ಲ. ತೊಂದರೆ ಕೊಡುವ ಜನಗಳ ಜೊತೆಯಿದ್ದರೂ, ಅವರಿಗೆ ಬುದ್ಧಿ ಹೇಳಿದವರಲ್ಲ. ಕೆಟ್ಟ ಜನಗಳ ಜೊತೆ ಕೂಡ ಇರಬಲ್ಲರು. ಅದು ಮಾತ್ರ ಅವರಿಗೇ ಸಾಧ್ಯ. ಅಕಸ್ಮಾತ್ ಅವರ ತಪ್ಪು ತೋರಿಸಿ "ತಿದ್ದಬಹುದಲ್ಲ" ಎಂದರೆ, ಅದನ್ನ ಅವರೇ ತಿಳಕೊಬೇಕು ನಾವು ಹೇಳೋದೇನು" ಅಂದು ಬಿಡುತ್ತಾರೆ. ಹಾಗಾಗಿ, ರೈತಸಂಘದಲ್ಲಿ ತಪ್ಪು ಮಾಡಿದವರೂ ಕೂಡ ಶಾಮಣ್ಣನವರಿಂದ ಬೈಸಿಕೊಂಡೇಯಿಲ್ಲ. ನಂಜುಂಡ ಸ್ವಾಮಿಯವರೂ ಕೂಡ, ಕಟುವಾಗಿ ನಿಂದಿಸಿ ಸಂಘದಿಂದಲೇ ತೆಗೆದುಹಾಕಿದರೂ ತಣ್ಣಗೆ ಎದ್ದು ಹೋದರು. ಆದರೆ ನಂಜುಂಡಸ್ವಾಮಿಯವರಿಗೆ ತಮ್ಮ ತಪ್ಪಿನ ಅರಿವಾಗಿ, ನೀವು ಎಂದಿನಂತೆ ನಮ್ಮ ಸಭೆಗೆ ಬಂದು ಭಾಗವಹಿಸಬಹುದು ಎಂದಾಗ, ಅದನ್ನು ಕೂಡ ಮರು ಮಾತಿಲ್ಲದೆ ಒಪ್ಪಿಕೊಂಡರು.

ನನ್ನ, ಶಾಮಣ್ಣನ ಭೇಟಿ ಸುಂದರೇಶ್ ಮುಖಾಂತರ ಆದದ್ದು. ಅವರು ಯಮಧೈರ್ಯದ ನಾಯಕ. ಆದರೂ ಅವರ ಜೊತೆ ಶಾಮಣ್ಣ ಇರಲೇಬೇಕು. ಸುಂದರೇಶ್‌ರ ಆವೇಶದ ವ್ಯಕ್ತಿತ್ವದ ಕಡಿವಾಣಕ್ಕೆ, ಶಾಮಣ್ಣನವರ ಇರುವಿಕೆ ಬಹಳ ಅಗತ್ಯವಾಗಿತ್ತು. ತುಂಗ ಬಲದಂಡೆ ಒಡೆದು ಹೋದಾಗ, ರೈತರ ಬೆಳೆ ಒಣಗಿ ಹೋಗುವುದನ್ನು ನೆನಸಿಕೊಂಡ ಸುಂದರೇಶ್, ಬೀಳಗಿ ಎಂಬ ಇಂಜಿನಿಯರ್ ಮೇಲೆ ಜಗಳಕ್ಕೆ ಬಿದ್ದರು. ಆ ಸಮಯದಲ್ಲಿ ಶಾಮಣ್ಣನವರು ಇಲ್ಲದಿದ್ದರೆ ಸುಂದರೇಶ್ ಮೇಲೆ ಬೀಳಗಿ ಕಡೆಯವರು, ಸರಿಯಾದ ಕೇಸಾಕಲು ರೆಡಿಯಾಗುತ್ತಿದ್ದರು. ದಲಿತ ಸಂಘದಲ್ಲಿದ್ದ ಬ್ರಾಹ್ಮಣನೊಬ್ಬ ಬೀಳಗಿ ದಲಿತರವನು ಎಂಬ ಕಾರಣಕ್ಕೆ ಸುಂದರೇಶ್ ಜಗಳ ತೆಗೆದಿದ್ದಾರೆ ಎಂಬ ವಿಕೃತ ಕಾರಣ ಹಿಡಿದುಕೊಂಡಿದ್ದ. ಶಾಮಣ್ಣನವರ ಉಪಸ್ಥಿತಿ ಎಲ್ಲವನ್ನು ಶಮನಗೊಳಿಸಿತು. ಸುಂದರೇಶ್, ಶಾಮಣ್ಣನವರಿಲ್ಲದೆ ಯಾವ ಕೆಲಸಕ್ಕೂ ಕೈ ಹಾಕುತ್ತಿರಲಿಲ್ಲ. ಆದ್ದರಿಂದ ಶಾಮಣ್ಣನವರನ್ನ ರೈತ ಸಂಘದಿಂದ ತೆಗೆದಾಗ ಸುಂದರೇಶ್ ಒಳಗೊಳಗೇ ಕೊರಗಿದ್ದರು. ಇಬ್ಬರೂ ಕೂಡ ತಮಗಿಂತಲೂ ರೈತ ಸಂಘವೇ ಮುಖ್ಯವೆಂದು ಭಾವಿಸಿದ್ದರು. ಅದಕ್ಕಾಗಿ ಯಾವ ತ್ಯಾಗಕ್ಕಾದರೂ ಸಿದ್ಧರಿದ್ದರು. ನಂಜುಂಡಸ್ವಾಮಿಯವರ ಮಾತನ್ನು ಪಾಲಿಸದಿದ್ದರೆ, ಸಂಘವೇ ಹಾಳಾಗುತ್ತದೆಂದು ಭಾವಿಸಿದ್ದ ಅವರು, ಗೊಂದಲದ ಸಂದರ್ಭವನ್ನು ಕಾಲಕ್ಕೆ ಬಿಟ್ಟು, ತಿಳಿಯಾದ ನಂತರ ಸಕ್ರಿಯರಾಗುತ್ತಿದ್ದರು. ಅವರ ಹವ್ಯಾಸ ದಶದಿಕ್ಕಿಗೂ ಚಾಚಿಕೊಂಡಿದ್ದವು. ಹಕ್ಕಿಪಕ್ಷಿ, ಹಾರ್ಮೋನಿಯಂ ತಬಲ, ಮತ್ತು ಸಂಗೀತವೆಲ್ಲಾ ಅವರನ್ನು ಆವರಿಸಿಕೊಂಡಿದ್ದರಿಂದ, ಉಚ್ಚಾಟನೆಗಳು, ಕಟು ಮಾತುಗಳು, ಅವಮಾನಗಳು ಅವರನ್ನು ಏನೂ ಮಾಡಲಾಗುತ್ತಿರಲಿಲ್ಲ. ಎಂತಹ ಜನರಿಗೂ ಗುರುವಾಗುವ ಶಕ್ತಿ ಅವರಿಗಿದೆ. ಮುರಿದು ಬಿದ್ದ ಕುಟುಂಬಗಳನ್ನು ಜೋಡಿಸುವುದು, ಮಂತ್ರ ಮಾಂಗಲ್ಯ ಮದುವೆ ಮಾಡಿಸುವುದು, ಅನಕ್ಷರಸ್ಥರಿಗೆ ಅಕ್ಷರ ಕಲಿಸುವುದು, ಹೀಗೆ ಅವರ ಕಾರ್ಯಕ್ರಮಗಳು ಅಸಂಖ್ಯ. ಅವರ ಗುಣಾವಗುಣಗಳು ನಮಗೆ ಪ್ರಸಂಗದಿಂದಲೇ ತಿಳಿಯುತ್ತಾ ಹೋದುವೆ ಹೊರತು, ಅವರಂತೂ ಬಾಯಿ ಬಿಟ್ಟವರಲ್ಲ

ಪಾರ್ಟಿ ಆಫೀಸಿನಲ್ಲಿ ಅಧಿಕಾರಿಗಳ ಮನೆ ಜಪ್ತಿ ಕಾರ್ಯಕ್ರಮಕ್ಕೆ ಮರುಜಪ್ತಿಯೆಂದು ಹೆಸರಿಡಲಾಯ್ತು. ಈ ಕಾರ್ಯಕ್ರಮ ಜಾರಿಯಾಗಲು ಕಾಂಗ್ರೆಸ್ ಮತ್ತು ಗಾಂಧಿ ಸಂಸ್ಕೃತಿಯಿಂದ ಬಂದ ರುದ್ರಪ್ಪನವರು, ಅಡ್ಡ ಮಾತನ್ನಾಡಿದರು. ನಮಗೆ ನಂಜುಂಡಸ್ವಾಮಿಗಳ ಕಾರ್ಯಕ್ರಮ ಜಾರಿಯಾಗುವುದು ಬೇಕಿತ್ತು. ಈ ಕಾರ್ಯಕ್ರಮದ ಪರವೊ ವಿರೋಧವೋ ಎಂಬ ಗುಟ್ಟು ಬಿಡದ ಶಾಮಣ್ಣ, ಭದ್ರಾವತಿ ತಾಲೂಕ್ ತಹಸೀಲ್ದಾರನ ಮನೆ ಜಪ್ತಿ ವೇಳೆ ಹಾಜರಾದರು. ಜಪ್ತಿಗೂ ಮೊದಲೆ ನೋಟೀಸ್ ಕೊಡಲಾಗಿತ್ತು. ಈ ಎಲ್ಲ ಸಂಗತಿಗಳು, ಜನಪ್ರಿಯ ಉದ್ದೇಶ, ಇದರಲ್ಲಿನ ಕಾನೂನು

ಏನು ಹೇಳುತ್ತೆ ಎಂಬುದನ್ನೆಲ್ಲಾ ಪತ್ರಕರ್ತರಿಗೆ ಮತ್ತು ಸಾರ್ವಜನಿಕರಿಗೆ ಹಾಗೂ ಪೋಲಿಸರಿಗೆ ಶಾಮಣ್ಣ ಮನದಟ್ಟು ಮಾಡಿದ ರೀತಿ ಅದ್ಭುತವಾಗಿತ್ತು. ಕಾನೂನನ್ನ ಮುರಿದರೂ ಅದೂ ಸಂವಿಧಾನದ ಅಡಿಯಲ್ಲಿರಬೇಕು. ಮತ್ತು ಅಹಿಂಸಾತ್ಮಕವಾಗಿರಬೇಕು. ಆ ರೂಪದಲ್ಲೇ ರೈತಸಂಘದ ಚಳುವಳಿಗಳು ನಡೆಯುವುದು ಎಂದು ವಾದಿಸುತ್ತಿದ್ದರು. ರೈತ ಸಂಘದ ಹಲವಾರು ಕಾರ್ಯಕ್ರಮಗಳು, ಶಾಮಣ್ಣನವರ ನಿಯಂತ್ರಣ ಮತ್ತು ವಿವೇಕ ಮಾರ್ಗದಿಂದಲೇ ನಡೆದು, ಶಿವಮೊಗ್ಗ ಜಿಲ್ಲೆಯಲ್ಲಿ ಯಶಸ್ಸು ಕಂಡಿವೆ. ಅದೇ ಬೇರೆ ಜಿಲ್ಲೆಯಲ್ಲಿ ಅನಾಹುತಗಳು ಸಂಭವಿಸಿ, ರೈತ ಸಂಘದ ಹೋರಾಟಗಾರರು ಮತ್ತು ಪೋಲೀಸರ ನಡುವೆ ಸಂಘರ್ಷಗಳೇ ನಡೆದು ಚಳುವಳಿ ಹಿನ್ನಡೆ ಅನುಭವಿಸಿದೆ. ನಂಜುಂಡಸ್ವಾಮಿಯವರು ಹೇಳಿದುದನ್ನು ನಯವಾಗಿ, ಒಳ್ಳೆಯ ಭಾಷೆಯಲ್ಲಿ ಶಾಮಣ್ಣ ವಿವರಿಸುತ್ತಿದ್ದರು. ನಮ್ಮ ಇಂದಿನ ರೈತಸಂಘ ನಂಜುಂಡಸ್ವಾಮಿಯವರು ಮತ್ತು ಶಾಮಣ್ಣ, ಸುಂದರೇಶ್‌ರನ್ನು ತಮ್ಮ ಹೋರಾಟದಲ್ಲಿ ಅಳವಡಿಸಿಕೊಂಡರೆ ಮಾತ್ರ ಯಶಸ್ಸು ಕಾಣಬಲ್ಲರು. ನಾನು ಆ ದಾರಿಯಲ್ಲೇ ಹೋಗಿ ಹಲವಾರು ಪ್ರಸಂಗವನ್ನು ಪರಿಹರಿಸಿದ್ದೇನೆ.

ಶಾಮಣ್ಣ, ಸುಂದರೇಶ್, ನಂಜುಂಡಸ್ವಾಮಿ, ತೇಜಸ್ವಿ, ಇವರಿಗೆಲ್ಲಾ ಮೈಸೂರೇ ಒಂದು ಕಾರ್ಯಾಗಾರದಂತಾಗಿ, ಅಲ್ಲಿಂದಲೇ ರೂಪುಗೊಂಡು ಬಂದವರು. ಕುವೆಂಪು, ಲೋಹಿಯಾ, ಜೆ.ಪಿ., ಗೋಪಾಲಗೌಡರ ಹೋರಾಟ ಇವೆಲ್ಲಾ ಅವರನ್ನು ರೂಪಿಸಿದ್ದವು. ಬರಹಗಾರರ ವೇದಿಕೆ, ಸಮಾಜವಾದಿ ಯುವಜನ ಸಭಾ, ಜೆ.ಪಿ. ಚಳುವಳಿ, ಇಂತಹ ಕುಲುಮೆಗಳಿಂದ ಅವರೆಲ್ಲಾ ಬಂದ ಕಾರಣಕ್ಕೆ, ರೈತ ಸಂಘ ಒಂದು ವಿರಾಟ್ ರೂಪ ಪಡೆಯಲು ಸಾಧ್ಯವಾಯಿತು. ಶಿವಮೊಗ್ಗ ಜಿಲ್ಲೆಯಲ್ಲಿ ಗ್ರಾಮ ಬಂದ್ ಚಳುವಳಿ ನೂರು ಪರ್ಸೆಂಟ್ ಯಶಸ್ವಿಯಾಗಿ ನಡೆಯಲು, ಸಂಘದ ಲೀಡರುಗಳ ಆಳವಾದ ತಿಳುವಳಿಕೆ ಕಾರಣ. ಇದೊಂದು ಗಾಂಧಿ ಮಾರ್ಗದ ಚಳುವಳಿ, ಇದನ್ನು ನಾವು ಯಶಸ್ವಿಗೊಳಿಸಿದೆವು. ಶಿವಮೊಗ್ಗದಲ್ಲಿ ನಾವು ಚಳುವಳಿ ಮಾಡುವಾಗ್ಗೆ ಸಂಘಕ್ಕೆ ಹಣದ ಅಗತ್ಯವಿದೆ ಎಂದು ಗೊತ್ತಾಗಿ, ಈ ಬಗ್ಗೆ ಚರ್ಚೆಯಾಯ್ತು. ಶಾಮಣ್ಣನವರು, ಅಡಿಕೆ, ಕಬ್ಬು, ಭತ್ತದ ಬೆಳೆಗಾರರಲ್ಲಿ ಕೇಳೋಣ. ಹಣದ ರೂಪದಲ್ಲಾಗಲಿ, ಅಡಿಕೆ, ದವಸದ ರೂಪದಲ್ಲಾಗಲಿ ಹೊತ್ತು ತರುತ್ತೇನೆಂದು ತೀರ್ಥಹಳ್ಳಿಯ ಯಾವುದೊ ಅಡಿಕೆ ಕುಬೇರನ ಮನೆಗೆ ಹೋಗಿ ಕೇಳಿದರು. "ನಮ್ಮನ್ನು ನಾವು ರಕ್ಷಣೆ ಮಾಡಿಕೊಳ್ಳುವ ಶಕ್ತಿ ನಮಗಿದೆ. ಅದಕ್ಕೊಂದು ಸಂಘದ ಅಗತ್ಯವಿಲ್ಲ ಶಾಮಣ್ಣ. ಹೋಗಿ ಬನ್ನಿ" ಎಂದರು.

ಶಾಮಣ್ಣನವರು, ರೈತ ಸಂಘಕ್ಕಿಂತ ಮೊದಲೇ ಹುಟ್ಟಿ ಅದಾಗಲೇ ಒಂಭತ್ತು ವರ್ಷ ತುಂಬಿದ್ದ ದಲಿತ ಸಂಘರ್ಷ ಸಮಿತಿಯಲ್ಲೂ ಇದ್ದರು., ರೈತ ಸಂಘದಷ್ಟೇ

ದೊಡ್ಡ ಸಂಘಟನೆಯಾಗಿದ್ದ ದಲಿತ ಸಂಘದ ಲೀಡರಾಗಿದ್ದ ಪ್ರೊ.ಬಿ.ಕೃಷ್ಣಪ್ಪನವರು, ಬಹಳ ದೊಡ್ಡ ಹೋರಾಟಗಾರರು. ಕೆಲವೊಂದು ಚಳುವಳಿಯನ್ನು ಜೊತೆಯಲ್ಲೇ ಮಾಡಿದ್ದೇವೆ. ಆ ಪೈಕಿ ಚಂದ್ರಗುತ್ತಿಯ ಬೆತ್ತಲೆ ಸೇವೆಯ ತಡೆಯೂ ಒಂದು. ಯಾವುದೇ ಮೂಢಾಚರಣೆ, ಮನವೊಲಿಕೆಯಿಂದ ಸಾಧ್ಯವಿಲ್ಲ. ಸಂವಿಧಾನಾತ್ಮಕವಾದ ಕಾನೂನಿಂದಲೇ ಸಾಧ್ಯ ಎಂಬುದನ್ನು ಚಂದ್ರಗುತ್ತಿ ಬೆತ್ತಲೆ ಸೇವೆ ನಿಲುಗಡೆ ನಮಗೆ ತೋರಿದೆ. ದಲಿತ ಸಂಘ, ರೈತ ಸಂಘ ಮತ್ತು ಭಾಷಾ ಚಳುವಳಿ ಒಂದಾದರೆ, ಕರ್ನಾಟಕದಲ್ಲಿ ಒಳ್ಳೆಯ ಪಾರ್ಟಿ ಕಟ್ಟಬಹುದೆಂಬುದು ಶಾಮಣ್ಣನವರ ಕನಸು. ಸದಾ ರೈತ ಸಂಘದ ಆತ್ಮವಾಗಿ ನಡೆದುಕೊಂಡು ಬಂದ ಶಾಮಣ್ಣನವರಿಗೆ, ಅವರ ಒಡನಾಟದ ಹೋರಾಟದ ಗೆಳೆಯರಾದ ಸುಂದರೇಶ್, ನಂಜುಂಡಸ್ವಾಮಿ, ತೇಜಸ್ವಿ, ರಾಮದಾಸ್ ಇವರೆಲ್ಲಾ ಒಬ್ಬೊಬ್ಬರೇ ಖಾಲಿಯಾದರೂ, ಬದುಕಿನ ಚೈತನ್ಯವನ್ನು ಕಳೆದುಕೊಂಡವರಲ್ಲ. ಈಗಲೂ ಕರ್ನಾಟಕದ ಯಾವುದೇ ಮೂಲೆಗೂ ಪ್ರತಿಭಟನೆಗಾಗಿ ಹೋಗಿ ಬರಬಲ್ಲರು. ಅವರನ್ನ ಸಂಪೂರ್ಣವಾಗಿ ಚಳುವಳಿಗೆ ಬಿಟ್ಟುಕೊಟ್ಟು ಜಮೀನಿನ ಕೆಲಸವನ್ನು ನಿರ್ವಹಿಸುತ್ತಿರುವ ಶ್ರೀದೇವಕ್ಕನವರು, ಧೈರ್ಯಶಾಲಿ ಮಹಿಳೆ. ಶಾಮಣ್ಣನವರು ಏನಾದರೂ ಮಾಡಿದರೆ ಏನೂ ತಿಳಿದುಕೊಳ್ಳಬೇಡಿ ಎಂಬುದು ಅವರ ವಿನಂತಿ. ಸುಂದರೇಶ್ ಕೂಡ, “ನಾವು ಹೇಗೆ ನಡೆದುಕೊಂಡರೂ, ಶಾಮಣ್ಣ ಮಾತ್ರ ಅಪಾರ್ಥ ಮಾಡಿಕೊಳ್ಳುವವರಲ್ಲ” ಎನ್ನುತ್ತಿದ್ದರು.

ನಾವೆಲ್ಲಾ ಶಾಮಣ್ಣನವರ ಹಿಂಬಾಲಕರು. ಆ ನಂತರ ಪ್ರೊ. ನಂಜುಂಡಸ್ವಾಮಿಯವರ ಹಿಂಬಾಲಕರಾದೆವು. ಆದರೆ ಈಗ ನಮ್ಮೆದುರು ಯಾರೂ ಇಲ್ಲ. ಶಾಮಣ್ಣನವರೇ ಹೇಳುವಂತೆ ನಮಗೆ ನಾವೇ ದಿಕ್ಕಾಗಿ ಮುಂದುವರಿಯಬೇಕಿದೆ. ನಮ್ಮ ಉಗ್ರ ಹೋರಾಟದ ಸಮಯದಲ್ಲಿ ಈ ಸಮಾಜ ಇಷ್ಟೊಂದು ಕೆಟ್ಟಿರಲಿಲ್ಲ. ನಮ್ಮ ಹೋರಾಟ ಬೇಕಿದ್ದುದು ಈಗ. ಆದರೇನು ಕಾಲವೇ ಹೋರಾಟ ರೂಪಿಸಬಹುದು. ಜನ ಸಮೂಹದಿಂದಲೇ ಒಬ್ಬ ಎದ್ದು ಬರಬಹುದು. ಹಾಗೆಂದು ನಾವ್ಯಾರೂ ಕಾಯುತ್ತ ಕುಳಿತಿಲ್ಲ. ನನಗನ್ನಿಸಿದಂತೆ, ಭೂಮಿ ಇರುವವರೆಗೆ ಈ ರೈತನ ಸಮಸ್ಯೆ ಇದ್ದೇ ಇರುತ್ತವೆ. ಹಾಗಾಗಿ ನಮ್ಮ ಹೋರಾಟ ನಿರಂತರ. ಆದ್ದರಿಂದ ನಮ್ಮ ಶಾಮಣ್ಣನವರು ಎಂದಾದರೂ ಕುಳಿತು ವಿಶ್ರಾಂತಿ ಪಡೆದುದನ್ನು ನಾನು ನೋಡಿಲ್ಲ. ಇಂದಿಗೂ ಅವರೇ ನಮಗೆ ಸ್ಫೂರ್ತಿ.

ಸಮಾಜವಾದಿ ಚಳುವಳಿಯ ಕೊಂಡಿ: ಶಾಮಣ್ಣ

ಕೋಡಿಹಳ್ಳಿ ಚಂದ್ರಶೇಖರ್

ಚಳುವಳಿಯ ಪ್ರಾರಂಭದ ದಿನಗಳು, ಬಹಳ ಉದ್ವೇಗದ ಕಾಲ ಅದು ರೈತರಿಗೆ. ಆ ಒಂದು ಸಂದರ್ಭದಲ್ಲಿ, ಅಭಿವೃದ್ಧಿ ಶುಲ್ಕ ಇರಬಹುದು... ಇದೆಲ್ಲವೂ ಅವತ್ತು ರೈತರಿಗೆ ಬಹಳ ಸಂಕಷ್ಟದ ದೊಡ್ಡ ಒಂದು ಹೊರೆ ಆಗಿತ್ತು. ಇದರ ವಿರುದ್ಧ ನಮ್ಮ ಎಲ್ಲ ಚಳುವಳಿಗಾರರು, ಆ ಚಳುವಳಿಯ ಭಾಗವಾಗಿ ಕೆಲಸ ಮಾಡುವಾಗ, ಶಾಮಣ್ಣ ಕೂಡ ವಿಶೇಷವಾದ ವ್ಯಕ್ತಿತ್ವದ ಮನುಷ್ಯ ಆಗಿರೋ ಕಾರಣಕ್ಕೆ, ಅವರು ಕೂಡ ಚಳುವಳಿಯಲ್ಲಿ ಬಹಳ ವಿಭಿನ್ನವಾಗಿ ಅಲ್ಲಲ್ಲಿ, ಅಲ್ಲಲ್ಲಿ ಕಾಣ್ತಾರೆ. ಅವರು ತೆಗೀತಾ ಇದ್ದಂಥಾ ವಿಶೇಷವಾದ ಫೋಟೋಗಳು ಅವತ್ತಿನ ಪತ್ರಿಕೆಗಳಲ್ಲಿ ಬರ್ತಾ ಇದ್ದದ್ದು ಬಹಳ ವಿಶೇಷ ವಾದ್ದು. ಹಾಗೇ ರಸ್ತೆ ತಡೆ ಚಳುವಳಿ ಇರ್ಲಿ, ಜೈಲಿಗೆ ಹೋಗುವಂಥಾ ಚಳುವಳಿ ಇರ್ಲಿ, ರೈತರ ಯಾವ ಚಳುವಳಿನಾದ್ರೂ ಇರ್ಲಿ, ಶಾಮಣ್ಣ ಅಲ್ಲಿರ್ತಿದ್ರು. ಆಮೇಲೆ ಅವರು ಬುದ್ಧಿವಂತ್ರು. ಬೌದ್ಧಿಕವಾದಂತಾ ಜನ ಏನಿದ್ರು, ಅವರ ಆ ಚಿಂತನಾಶೀಲತೆ... ಅದು ಎಲ್ಲದನ್ನು ನಾವು ಶಾಮಣ್ಣನಲ್ಲಿ ಕಂಡ್ವಿ, ಏಕೆಂದ್ರೆ ನಾವು ನಮ್ಮ ಕಾಲೇಜಿನ ದಿನಗಳಲ್ಲಿ ಚಳುವಳಿಗೆ ಬಂದವ್ರು. ಶಾಮಣ್ಣನಂತವ್ರು

ಒಂದು ವಿದ್ವತ್ತನ್ನ ಪಡಕೊಂಡಂತವ್ರು. ಸುಂದರೇಶ್, ತೇಜಸ್ವಿ, ನಂಜುಂಡಸ್ವಾಮಿ.... ಇವರೆಲ್ಲ ಒಂದು ಹಂತದ ವಿದ್ವತ್ತುಳ್ಳವರು. ಹಾಗಾಗಿ ಇವ್ರಿಂದ ಕಲಿತಕ್ಕಂತದು ಬಹಳ ಇದ್ವು, ಅಂಥಾ ಬಹಳ ಉದಾಹರಣೆಗಳು ನಮಗೆ ಅವತ್ತು ಆದರ್ಶವಾಗಿ ಕಂಡ್ವು. ಆ ಕಾರಣಕ್ಕೆ ಶಾಮಣ್ಣ ಇವತ್ತೂ ಕೂಡ ಇವತ್ತಿನ ಯುವಕರಿಗೆ ಆದರ್ಶ ಆಗ್ತರೆ ಅನ್ನೋದು ನಾವು ಮರೆಯಂಗೇ ಇಲ್ಲ.

ಶಾಮಣ್ಣ, ಕುವೆಂಪು ಅವರಂತಾ ಒಂದು ಎತ್ತರದ ವಕ್ತಿತ್ವದ ಜೊತೆ ಸಂಪರ್ಕ ಇದ್ದಂತ, ಒಂದು ಕೊಂಡಿಯಾಗಿ ಚಳುವಳಿಯಲ್ಲಿ ನಂಜೊತೆ ಗುರುತಿಸಿಕೊಂಡ್ರು ಅವರು. ಕರ್ನಾಟಕದಲ್ಲಿ ಸಮಾಜವಾದಿ ಚಳುವಳಿಯ ಒಂದು ಕೊಂಡಿಯಾಗಿ ಅವರು ನಮ್ಮ ಮುಂದೆ ಇದಾರೆ. ಈ ಪ್ರಗತಿಪರ ಆಲೋಚನೆ ಮತ್ತು ಮಾಧ್ಯಮ ಹಾಗೂ ಪ್ರಗತಿಪರ ಚಿಂತಕರ ಒಂದು ಕೊಂಡಿಯಾಗಿಯೂ ಕೂಡ ಶಾಮಣ್ಣ ಕೆಲ್ಸ ಮಾಡಿದಾರೆ. ಶಾಮಣ್ಣ ವಿಶಿಷ್ಟ ವ್ಯಕ್ತಿ. ಯಾಕಂದ್ರೆ ಅವರಿರಬಹುದು, ಅವರ ಪತ್ನಿ ಶ್ರೀದೇವಕ್ಕ ಇರಬಹುದು, ಅವರ ಆದರ್ಶದ ಸರಳ ಮದುವೆಯ concept ಇರಬಹುದು.... ಹೀಗೆ ಒಂದು ಹೊಸ ತಲೆಮಾರಿಗೆನೇ ಶಾಮಣ್ಣ ಒಂದು ವಿಶೇಷವಾದ ವ್ಯಕ್ತಿಯಾಗಿ ನಾವು, ಸಮಾಜ ಸ್ವೀಕಾರ ಮಾಡ್ಬೇಕಾಗತ್ತೆ. ಶಾಮಣ್ಣ ಸಮಾಜಕ್ಕೆ ಅತ್ಯಂತ ಅವಶ್ಯಕ. ಸಮಾಜ ಶಾಮಣ್ಣನಂತವ್ರನ್ನ ಗುರುತಿಸಬೇಕು. ಅವರ ಅನೇಕ ಆದರ್ಶಗಳನ್ನು ನಾವು ತಗೋಬಹುದು.......

(ಕಡಿದಾಳು ಶಾಮಣ್ಣನವರನ್ನು ಕುರಿತು ವಾರ್ತಾ ಇಲಾಖೆ ತಯಾರಿಸಿರುವ ಸಾಕ್ಷ್ಯಚಿತ್ರದಿಂದ) (ಧ್ವನಿಯಿಂದ ಲಿಪಿಗೆ: **ಟಿ.ಎಲ್ ರೇಖಾಂಬ**)

ಹೋರಾಟದ ಪಾಠ ಕಲಿಸಿದ ಶಾಮಣ್ಣ

ಕೋಡ್ಲು ವೆಂಕಟೇಶ್

ನಾನು ಪ್ರೈಮರಿ ಶಾಲೆ ಓದುತ್ತಿದ್ದ ದಿನಗಳವು. ನನ್ನ ದೊಡ್ಡ ಅಕ್ಕನ ಮನೆ ಕಡೂರುನಲ್ಲಿ ನಾನು ಪ್ರೈಮರಿ ಓದು ಮುಗಿಸಿದ್ದು. ನಾವು ಇರುವ ಮನೆಯಿಂದ ಕೆಲವಷ್ಟು ದೂರದಲ್ಲಿ 'ಹೊಲುಗುಡಿ' ಎಂಬ ದಲಿತರ ಕೇರಿ ಇತ್ತು. ಅಲ್ಲಿ ಸಿದ್ಧ ಮಾದಾರನ ಗುಡಿಯು ಒಂದು. ಸಿದ್ಧಮಾದರ ಮತ್ತು ನಾಗಿಗೆ (ಅವನ ಹೆಂಡತಿ) ಬಿಸಾಡಿ, ಎಲ್ಲ, ಚುಂಡಾರಮ ಗುರುವ ಮುಂತಾದ ಮಕ್ಕಳು. ಗುರುವ ನಮ್ಮ ಮನೆಗೆ ಎಮ್ಮೆ ದನಕರು ಮೇಯಿಸಲು ಕೊಟ್ಟಿಗೆ ಕೆಲಸಕ್ಕೆ ಬರುತ್ತಿದ್ದ. ಈ ಗುರುವ ನಾನು ಓರಿಗೆಯವರು, ದನ ಮೇಯಿಸಲು ಗುಡ್ಡಕ್ಕೆ ಹೋದಾಗ ಪೇಟ್ಲೆಕಾಳು, ಪೀಪಿ, ಅವನ ಅಣ್ಣಂದಿರು ಮಾಡಿದ ಕೊಳಲು ತಂದು ನನಗೂ ಕೊಡುತ್ತಿದ್ದ. ನನ್ನ ಅವನ ಒಡನಾಟ ಹೀಗಿರುವಾಗ ಒಂದು ದಿನ ಪೈಜಾಮ ಜುಬ್ಬ ಕರಿಗಡ್ಡ ಬಿಟ್ಟವರೊಬ್ಬರು ಅವರ ಗುಡಿಸಲೊಳಗೆ ಹೋಗಿ ಬಂದದ್ದು ನಾನು ನೋಡಿದೆ. ದನಕರುಗಳನ್ನು ಮೇಯಿಸಲು ಬಿಡಲು ಕೊಟ್ಟಿಗೆಗೆ ಬಂದ ಗುರುವನ ಹತ್ತಿರ ನಿಮ್ ಗುಡಿಗೆ ಯಾರು ಬಂದಿದ್ದು ಎಂದು

ಕೇಳಿದೆ. "ಅಯ್ಯೋ ಅವರ, ಅವರು ಸ್ವಾಮಯ್ಯ ಅಂತ. ಸಾವುಕಾರ್ರ ಮಗಳು ನಾಗೆಣ್ಣಮ್ಮನ ಮಗ ಅವ್ರು", (ಶಾಮಣ್ಣನ ಅಜ್ಜನ ಮನೆಗೆ ಸುತ್ತುಮುತ್ತಲವರೆಲ್ಲ ಸಾವಕಾರ್ರ ಮನೆ ಎಂತಲೇ ಕರೆಯುವುದು) "ಮತ್ತೇ ನಿಮ್ ಗುಡಿ ಒಳ್ಗೆ ಹೋಗಿದ್ರಲ್ಲೊ!" (ಆ ಕಾಲದಲ್ಲಿ ಅವರನ್ನ ಯಾರೂ ಮುಟ್ಟಿಸಿಕೊಳ್ಳುತ್ತಿರಲಿಲ್ಲ. ಉಳಿದ ಜನಾಂಗದ ಯಾರೂ ಅವರುಗಳ ಅಂಗಳಕ್ಕೆ ಕಾಲು ಇಡುತ್ತಿರಲಿಲ್ಲ) "ಅಯ್ಯೊ ಅವ್ರು ಹಂಗೆಯೇ. ಗುಡಿ ಒಳಗೆ ಬಂದು ಗಡಿಗೆ ಮಡಿಕೆ ಎಲ್ಲ ಎತ್ತಿ ಮುಚ್ಚಿ ನೋಡೋದು. ನಂಗೂ ಸ್ವಲ್ಪ ಕೊಡ್ರೋ ಅಂತ ಕೇಳೊದೆಯಾ. ನಮ್ಗೆ ಹೆದ್ರಿಕಾಗಿ ಅಯ್ಯೋ ಒಡೆಯಾ ನಿಮ್ಮ ದಮ್ಮಯ್ಯ ನಮ್ಮ ಗುಡಿಗೆಲ್ಲಾ ನೀವು ಬರಬಾರದು ತಿನ್ನಬಾರದು ಅಂದ್ರೆ, ನಮ್ಗೆ ಅದೆಲ್ಲ ಏನ್ ಇಲ್ಲ ಅಚ್ಚುಕಟ್ಟಾಗಿ ಅಡಿಗೆ ಮಾಡಿ ತಿನ್ನಬೇಕು. ಜಾತಿ–ಗೀತಿ ಎಲ್ಲ ಸುಳ್ಳು ಅಂತ ಏನೇನೋ ಹೇಳ್ತಾರೆ. ಅಪ್ಪ ಅವ್ವಗೆ ಅವರಿಗೆ ಕಾಲಿಗೆ ಬಿದ್ದು ಹೊರಗೆ ಕಳ್ಸುವತ್ತಿಗೆ ಸಾಕಾತ್ತದೆ" ಅಂತ ಅಂದ.

ಆಮೇಲೆ ನಾವು ಅವರನ್ನ ನೋಡಿದ್ದು ತೀರ್ಥಹಳ್ಳಿಲಿ ಕೋಣಂದೂರು ಲಿಂಗಪ್ಪನವರ ಚುನಾವಣೆಯಲ್ಲಿ. ನಾನು ಆಗ ಕಾಲೇಜು ಓದುತ್ತಿದ್ದ ದಿನಗಳು. ಸೋಷಿಯಲಿಸ್ಟ್ ಪಾರ್ಟಿ ಆಫೀಸ್‌ನಲ್ಲಿ ಶಾಮಣ್ಣನ ಬಗ್ಗೆ ಬಹಳಷ್ಟು ತಿಳಿದುಕೊಂಡಿದ್ದು ಆಗ ಮಾತ್ರ. ಆವರೆಗೂ ದೂರದಿಂದ ಅವರ ಬಗ್ಗೆ ತಿಳಿದುಕೊಂಡಿದ್ದು ಬಿಟ್ಟರೆ ಅವರ ಸಂಪರ್ಕ ಸಹವಾಸ ಏನೂ ಇರಲಿಲ್ಲ.

೧೯೮೧–೮೩ರ ರೈತ ಚಳುವಳಿ ದಿನಗಳು. ಸಹಕಾರಿ ಸಂಘ ಬ್ಯಾಂಕ್‌ಗಳಿಂದ ರೈತರ ವಸೂಲಾತಿಗಾಗಿ ಜಪ್ತಿ ಹರಾಜು ನಡೆಯುತ್ತಿದ್ದ ದಿನಗಳು. ರೈತಾಪಿ ವಲಯ ಬಿಕ್ಕಟ್ಟಿನಿಂದ ನರಳುತ್ತಿದ್ದ ದಿನಗಳು. ಸರ್ಕಾರದ ಅವಿವೇಕಿ ಸಾಲದ ನೀತಿ, ಲೆವಿ ನೀತಿ, ಬೆಲೆ ನೀತಿ ಮತ್ತು ತೆರಿಗೆ ಕಂದಾಯದ ಕೆಟ್ಟ ನೀತಿಯಿಂದ ರೈತರು ಬಸವಳಿದಿದ್ದರು. ಹಣಕಾಸು ಸಂಸ್ಥೆಗಳಿಂದ ಮಾಡಿದ ಸಾಲದ ಅಸಲು ಬಡ್ಡಿ ಬೆಳೆದು ಬೆಟ್ಟದಷ್ಟಾಗಿತ್ತು. ಅಳಿದುಳಿದು ಬೆಳೆದ ಬೆಳೆ, ಸಾಲದ ಬಾಕಿಗಂಜಿ ಅಡ್ಡಾದಿಡ್ಡಿಗೆ ದಲ್ಲಾಳಿ ಪಾಲಾಗುತ್ತಿತ್ತು. ಸಾಲದ್ದಕ್ಕೆ ಬ್ಯಾಂಕು ಸಹಕಾರ ಸಂಘಗಳ ಅಧಿಕಾರಿಗಳು ರೈತರ 'ಮನೆ ಜಪ್ತಿ' ಅನ್ನೋ ಹೆಸರಿನಲ್ಲಿ ಬರಿದಾದ ರೈತರ ಮನೆಯ ಪಾತ್ರೆ ಪರಡಿ ಮಹಿಳೆಯರ ಮೈಮೇಲಿದ್ದ ಒಡವೆ ವಸ್ತ್ರಗಳನ್ನು ಕಿತ್ತುಕೊಂಡು, ರೈತರ ಮಾನ ಕಳೆಯುವ ಹಾಗೂ ಹಿಡುವಳಿ ಜಮೀನನ್ನು ಹರಾಜು ಹಾಕುವ ಲಜ್ಜೆಗೆಟ್ಟ ಕೆಲಸಕ್ಕೆ ಇಳಿದಿದ್ದವು.

ಇಂತಹ ಸಮಯದಲ್ಲಿ ಮರ್ಯಾದೆಗಂಜಿ ಜೀವ ಕಳೆದುಕೊಳ್ಳುವ ಹಂತ ತಲುಪಿದ್ದ ರೈತಾಪಿ ವರ್ಗಕ್ಕೆ ಆಸರೆಯಾಗಿ ಬಂದದ್ದು ಹೆಚ್.ಎಸ್. ರುದ್ರಪ್ಪ, ಎನ್.ಡಿ. ಸುಂದ್ರೇಶ್, ನಂಜುಂಡಸ್ವಾಮಿ ನಾಯಕತ್ವದ ರೈತಸಂಘ. ನಾವು ಕೂಡ ತೀರ್ಥಹಳ್ಳಿಗೆ ಹೆಚ್.ಎಸ್.

ರುದ್ರಪ್ಪ, ಸುಂದ್ರೇಶ್ ಅವರನ್ನ ಕರೆಸಿ ಒಂದು ಸಭೆಯನ್ನು ಏರ್ಪಡಿಸಿದೆವು. ಆ ಸಭೆಯಲ್ಲಿ ನಮ್ಮನ್ನ ಉದ್ದೇಶಿಸಿ ರೈತರ ನೆರವಿಗೆ ಧಾವಿಸುವಂತೆ, ಜಪ್ತಿ ಹರಾಜು ತಡೆಯುವಂತೆ ಕರೆಕೊಟ್ಟರು. ಹುಮ್ಮಸ್ಸಿನಿಂದ ಕಾರ್ಯ ಸನ್ನದ್ದರಾದ ನಾವು ಕೆಲವರು ಸೇರಿಕೊಂಡು ಪಕ್ಕದ ತೀರ್ಥಮುತ್ತೂರು ಸಹಕಾರ ಸಂಘದವರು ಸ್ಥಳೀಯ ರೈತನ ಬಾಕಿಗಾಗಿ ಮನೆಯಲ್ಲಿ ಊಟಕಿಟ್ಟುಕೊಂಡಿದ್ದ ದವಸವನ್ನು ತೆಗೆದುಕೊಂಡು ಹೋಗಿರುವ ಬಗ್ಗೆ ದೂರನ್ನು ಆಲಿಸಿ ತೀರ್ಥಮುತ್ತೂರು ಸಹಕಾರ ಸಂಘದ ಗೋದಾಮಿಗೆ ಲಗ್ಗೆ ಇಟ್ಟು ಬೀಗ ಒಡೆದು ಬಾಗಿಲು ತೆಗೆದು ರೈತನಿಗೆ ಭತ್ತವನ್ನು ಕೊಡಿಸಿ ಬಂದೆವು.

ಆದರೆ ಮರುದಿನ ಪೋಲಿಸರು ನಮ್ಮನ್ನು ಹುಡುಕಾಡುವಾಗಲೇ ಅದರ ಅಪಾಯ ನಮಗೆ ಅರಿವಾಗಿದ್ದು. ಸಹಕಾರ ಸಂಘದ ದೂರಿನ ಅನ್ವಯ ನಮ್ಮ ಮೇಲೆ ಡಕಾಯಿತಿ ಕೇಸನ್ನು ದಾಖಲಿಸಿಕೊಂಡು ನಮ್ಮನ್ನ ಬಂಧಿಸಲು ಪೋಲಿಸರು ಹೊರಟರೆಂದು ತಿಳಿಯಿತು. ಮುಂದೇನು ಮಾಡಬೇಕು ಎನ್ನುವ–ಅರಿವಿಲ್ಲದೆ ತಲೆ ತಪ್ಪಿಸಿಕೊಂಡು ಸುಂದ್ರೇಶ್ ಅವರನ್ನು ಹುಡುಕಿಕೊಂಡು ಹೊಳೆಹೊನ್ನೂರು ಸಮೀಪದ ಅವರ ಮನೆಗೆ ಹೋಗಿ ವಿಷಯ ತಿಳಿಸಿದೆ. ಸುಂದ್ರೇಶ್ ಕೂಡಲೇ ಪೋಲಿಸ್ ಅಧಿಕಾರಿಗಳಿಗೆ ಪೋನಿನಲ್ಲಿ ಅವಾಜ್ ಹಾಕಿ ಅನ್ಯಾಯದ ದಾರಿಯಲ್ಲಿ ಹೇಗೆಲ್ಲಾ ಕಾನೂನು ಮೀರಿ ಜಪ್ತಿ ಮಾಡುತ್ತಿದ್ದಾರೆ ಎಂಬುದನ್ನು ಪೋಲಿಸರಿಗೆ ತಿಳಿಹೇಳಿದ್ದಲ್ಲದೆ ನನ್ನನ್ನು ಅಲ್ಲೇ ಉಳಿಸಿಕೊಂಡು ನ್ಯಾಯಾಲಯದಲ್ಲಿ ಜಾಮೀನಿಗೆ ಪ್ರಯತ್ನಿಸಲು ಕಾರ್ಯಕರ್ತರಿಗೆ ತಿಳಿಸಿದರು. ನಾನು ಜಾಮೀನಿಗಾಗಿ ಕೋರ್ಟ್ ಆವರಣದಲ್ಲಿದ್ದಾಗಲೇ ತೀರ್ಥಹಳ್ಳಿ ಪೋಲಿಸರು ನನ್ನನ್ನು ಅರೆಸ್ಟ್ ಮಾಡಿಕೊಂಡು ಠಾಣೆಗೆ ಕರೆದುಕೊಂಡು ಹೋದರು. ಆನಂತರ ಜಾಮೀನಾಗಿ ಹೊರಬಂದದ್ದು ಆಯಿತು.

ಸುಂದ್ರೇಶ್ ಇದ್ದವರು ಶಾಮಣ್ಣನವರಿಗೆ ತೀರ್ಥಹಳ್ಳಿಯ ರೈತ ಸಂಘಟನೆಯ ಜವಾಬ್ದಾರಿ ವಹಿಸಿಕೊಂಡು ನಮಗೆಲ್ಲ ಧೈರ್ಯ ತುಂಬಬೇಕು ಎಂದು ತೀರ್ಥಹಳ್ಳಿಯಿಂದಲೇ ನಿಮ್ಮ ಕಾರ್ಯ ವ್ಯಾಪ್ತಿ ವಿಸ್ತರಿಸಿ ಎಂದು ಕಳಿಸಿಕೊಟ್ಟರು. ಶಾಮಣ್ಣ ನಮಗೆ ಜೊತೆಯಾದ ಮೇಲೆ ಆನೆ ಬಲ ಬಂದಂತಾಯಿತು. ಇಡೀ ತೀರ್ಥಹಳ್ಳಿ ತಾಲೂಕನ್ನು ನಾನು, ಶಾಮಣ್ಣ ಅವರದ್ದೊಂದು ಹಳೆಯ ಸ್ಕೂಟರಿನಲ್ಲಿ ಪ್ರತಿ ಹಳ್ಳಿ ಸುತ್ತಿ ಸಂಘಟನೆ ಮಾಡಿದೆವು. ಪ್ರತಿಯೊಂದು ಗ್ರಾಮದಲ್ಲಿ ರೈತ ಸಂಘದ ಸಮಿತಿಗಳನ್ನು ಮಾಡಿ ತಾಲೂಕು ಮಟ್ಟದಲ್ಲಿ ಸಭೆ ಸೇರಿಸಿ ತಾಲೂಕು ಸಮಿತಿಯನ್ನು ಅತ್ಯಂತ ಪ್ರಜಾಸತ್ತಾತ್ಮಕವಾಗಿ ಆಯ್ಕೆ ಮಾಡಲಾಯಿತು. ಶಾಮಣ್ಣ ತಾಲೂಕು ಅಧ್ಯಕ್ಷರಾಗಿಯೂ ನಾನು ಕಾರ್ಯದರ್ಶಿಯಾಗಿಯೂ ಅನೇಕ ಹೋರಾಟ ಕಾರ್ಯಕ್ರಮ ಗಳನ್ನು ನಡೆಸಿ ರಾಜ್ಯಾದ್ಯಂತ ಕೆಲ ಕೆಟ್ಟ ಕಾನೂನುಗಳ ಬದಲಾವಣೆ ಮಾಡುವಲ್ಲಿ

ರೈತ ಚಳುವಳಿ ಯಶಸ್ವಿಯಾಯಿತು. ಅಂತಹ ಕೆಲವು ಉದಾಹರಣೆ 'ಲೆವಿ ವಿರೋಧಿ ಚಳುವಳಿ' ರೈತರಿಗೆ ಮಾರಕವಾದ ಈ ಅನಿಷ್ಟ ಲೆವಿ ಪದ್ಧತಿ ವಿರುದ್ಧ ಶಾಮಣ್ಣನವರಿಗೆ ಬಹಳ ದೀರ್ಘ ಅಧ್ಯಯನವಿತ್ತು. ದೇಶದ ಯಾವುದೇ ಉತ್ಪಾದಕ ಕ್ಷೇತ್ರದ ಮೇಲಿಲ್ಲದ ಲೆವಿ ಪದ್ಧತಿ ಬರಿ ಕೃಷಿ ಕ್ಷೇತ್ರಕ್ಕೆ ಅದರಲ್ಲೂ ಆಹಾರ ಬೆಳೆಗಳ ಮೇಲೆ ಮಾತ್ರ ಅನ್ವಯಿಸುತ್ತಿತ್ತು. ನಗರ ವಾಸಿ, ದುಡಿಯದೇ ಕೂತುಣ್ಣುವ ಜನರಿಗೆ ಅತಿ ಕಡಿಮೆ ಬೆಲೆಯಲ್ಲಿ ಆಹಾರ ಸಾಮಗ್ರಿಗಳನ್ನು ಒದಗಿಸುವ ಹುನ್ನಾರದೊಂದಿಗಿನ ಈ ಲೆವಿಯ ಆಳಅಗಲಗಳ ಅರಿವಿದ್ದ ಶಾಮಣ್ಣ, ಲೆವಿ ಪದ್ಧತಿ ವಿರುದ್ಧ ವಿನೂತನ ಚಳುವಳಿ ಸಂಘಟಿಸಲು ನಮ್ಮನ್ನೆಲ್ಲ ಹುರಿದುಂಬಿಸಿದರು. ಅದರಂತೆ ಜಿಲ್ಲೆಯಿಂದ ಹೊರಗೆ ಹೋಗುವ ಆಯಕಟ್ಟಿನ ಗಡಿಭಾಗದಲ್ಲಿ 'ಫುಡ್‌ಗೇಟ್'ಗಳನ್ನು ಅಳವಡಿಸಿ ಆಹಾರ ಧಾನ್ಯವನ್ನು ರೈತರು ಲೆವಿ ನೀಡದೆ ಹೊರಗೆ ಸಾಗಿಸದಂತೆ ನಿರ್ಬಂಧಿಸುತ್ತಿದ್ದರು. ಈ ಆಯಕಟ್ಟಿನ ಗಡಿ ಗೇಟ್‌ಗಳಲ್ಲಿ ಬಹುಮುಖ್ಯವಾದ ಆಗುಂಬೆಯಲ್ಲಿ ಒಂದು ಗೇಟ್ ಇತ್ತು. ಇದನ್ನು ಗುರಿಯಾಗಿಸಿಕೊಂಡು ಎತ್ತಿನಗಾಡಿ, ಟ್ರ್ಯಾಕ್ಟರ್, ಟಿಲ್ಲರ್‌ಗಳನ್ನು ಒಟ್ಟುಗೂಡಿಸಿ ರೈತರ ಧಾನ್ಯಗಳನ್ನು ತುಂಬಿಸಿಕೊಂಡು ಒಂದು ದಿನ ಸಜ್ಜಾಗಿ ಆಗುಂಬೆ ಘಾಟಿಯ ಗೇಟನ್ನು ಉಡಾಯಿಸಲು ತಯಾರಾದೆವು. ಇದನ್ನು ಅರಿತ ಸರ್ಕಾರ ಪೋಲಿಸ್ ಬಿಗಿ ಬಂದೋಬಸ್ತನ್ನು ಆ ದಿನ ಇಟ್ಟಿತು. ಜಿಲ್ಲಾಧಿಕಾರಿಗಳೇ ಖುದ್ದು ನೇತೃತ್ವ ವಹಿಸಿ ನಮ್ಮ ಚಳುವಳಿಯನ್ನು ತಡೆಯಲು ಸಜ್ಜಾಗಿದ್ದರು.

ಇವರ ಯಾವ ಬಂದೋಬಸ್ತಿಗೂ ಜಗ್ಗದೇ ಸೇರಿದ್ದ ಸಾವಿರಾರು ಮಂದಿ ನೂರಾರು ಸಂಖ್ಯೆಯ, ಟ್ರ್ಯಾಕ್ಟರ್, ಟಿಲ್ಲರ್ ಎತ್ತಿನಗಾಡಿಗಳ ಮುಖಾಂತರ 'ಕಾನೂನಂತೆ ಕಾನೂನು, ಇವ್ರ ಅಪ್ಪಂದಂತೆ ಕಾನೂನು' ಎಂದು ಘೋಷಣೆ ಕೂಗುತ್ತಾ ಗೇಟನ್ನು ಮುರಿದು ಘಾಟಿ ರಸ್ತೆಯಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಹೆಬ್ರಿವರೆಗೆ ಹೋಗಿ ಮಾರಿ ಬಂದೆವು. ಒಂದು ಸುಳ್ಳು ಕಾನೂನಿಗೆ ನೈತಿಕ ಬಲವಿಲ್ಲದಿರುವುದು, ಮೂಕಪ್ರೇಕ್ಷಕರಾಗಿ ಜಿಲ್ಲಾಧಿಕಾರಿ ಮತ್ತು ಅವರ ದಂಡು ನೋಡುತ್ತಾ ಸುಮ್ಮನುಳಿದರು. ಮರುದಿನವೇ ಈ ಸುಳ್ಳು ಕಾನೂನು ರಾಜ್ಯದಾದ್ಯಂತ ರದ್ದಾದ ಘೋಷಣೆಯಾಯಿತು.

ಸಾಲ ಜಪ್ತಿಗಾಗಿ ಹಣಕಾಸು ಸಂಸ್ಥೆಗಳು ರೈತರ ಸಾಲ ವಸೂಲಿಗಾಗಿ ಪೋಲಿಸು ಬಲದೊಂದಿಗೆ ಹಳ್ಳಿಗಳಿಗೆ ಆಗಮಿಸಿದಾಗ ನಡುರಸ್ತೆಯಲ್ಲಿ ಕುಳಿತು ಪ್ರತಿಭಟನೆ ಮಾಡಿ ರೈತರ ಮನೆಯ ಪಾತ್ರೆ ಪರಡಿ, ಒಡವೆ ವಸ್ತ್ರ, ಊಟಕ್ಕೆ ಇಟ್ಟುಕೊಂಡ ದವಸಧಾನ್ಯವನ್ನು ಜಪ್ತಿ ಹೆಸರಿನಲ್ಲಿ ಹೊತ್ತುಯ್ಯುವುದರ ವಿರುದ್ಧ ಶಾಮಣ್ಣ ದಿಟ್ಟತನದಲ್ಲಿ, ಸಾಲಕ್ಕೆ ನಮ್ಮ ಜಮೀನಿನ ದಾಖಲೆಗಳನ್ನು ಅಡವಿಟ್ಟಿದ್ದೀವಿ. ನಮ್ಮ ಜಮೀನನ್ನ ಚಾಪೆ ಸುತ್ತಿದಂಗೆ ಸುತ್ತಿಕೊಂಡು ಹೋಗಿ. ರೈತರ ಮನೆ ಪಾತ್ರೆ ಪರಡಿ, ಊಟಕ್ಕೆ ಇಟ್ಟುಕೊಂಡ ಧಾನ್ಯ, ಹೆಣ್ಣು ಮಕ್ಕಳ ಮೈಮೇಲಿನ ಒಡವೆ ಆಭರಣ ತಗೊಂಡು

ಹೋಗಲಿಕ್ಕೆ ಯಾರು ಅಧಿಕಾರ ಕೊಟ್ಟವರು? ಎಲ್ಲಿದೆ ಕಾನೂನು? ಎಂದು ಘರ್ಜಿಸುತ್ತಿದ್ದಂತೆ ಅಧಿಕಾರಿಗಳು ಮುಖಮುಖ ನೋಡಿಕೊಂಡು ವಾಪಸ್ ಓಡುತ್ತಿದ್ದರು.

ಸರ್ಕಾರಿ ಕಛೇರಿಗಳಲ್ಲಿ ಭ್ರಷ್ಟಾಚಾರ ಎಷ್ಟು ಮೇರೆ ಮೀರಿತೆಂದರೆ ಲಂಚವಿಲ್ಲದೆ ಒಂದು ಕಡತವೂ ಮೇಜಿನಿಂದ ಮೇಜಿಗೆ ದಾಟುತ್ತಿರಲಿಲ್ಲ. ಈ ಬಗ್ಗೆ ಶಾಮಣ್ಣ ನಮ್ಮೊಂದಿಗೆಲ್ಲ ಮಾತನಾಡಿ ಲಂಚದ ವಿರುದ್ಧ ಹೊಸ ರೀತಿಯ ಚಳುವಳಿ ಶುರು ಮಾಡಿದರು. ತೀರ್ಥಹಳ್ಳಿ ತಾಲೂಕು ಕಛೇರಿಯ ಮುಖ್ಯದ್ವಾರದಲ್ಲಿ ಒಂದು ನಾಮಫಲಕವನ್ನು ಬರೆಸಿ ಹಾಕಿದೆವು. ಅದರಲ್ಲಿ "ಇನ್ನು ಮುಂದೆ ಈ ಕಛೇರಿಯಲ್ಲಿ ಲಂಚವಿಲ್ಲದೆ ಕೆಲಸ ಮಾಡಿ ಕೊಡುತ್ತಾರೆ" ಎಂದು ಜೊತೆಗೆ ಕಛೇರಿಯ ಮುಂಭಾಗದಲ್ಲಿ ಟೇಬಲ್ ಖುರ್ಚಿ ಹಾಕಿಕೊಂಡು ನಾವು ಕುಳಿತುಕೊಂಡೆವು. ಸಾರ್ವಜನಿಕರ ದೂರುಗಳನ್ನು ಸ್ವೀಕರಿಸಿ ಅವರೊಂದಿಗೆ ಸಂಬಂಧಿಸಿದ ಅಧಿಕಾರಿ ನೌಕರರನ್ನು ಎದರಾಎದುರು ಕೆಲಸ ಮಾಡಿಕೊಡುವಂತೆ ನೋಡಿಕೊಂಡೆವು. ನಖರಾ ಮಾಡಿದ ಅಧಿಕಾರಿ ನೌಕರರಿಗೆ "ಸಂಬಳ ಬೇಕಾದರೆ ಲಂಚ ಇಲ್ಲ" ಎಂದು ಹೇಳಿ ಅವರ ನೈತಿಕತೆಯನ್ನೇ ಬಡಿದೆಬ್ಬಿಸಿದೆವು.

ಸಾರ್ವಜನಿಕ ಕಾಮಗಾರಿಗಳಲ್ಲಿ ನಡೆಯುವ ಕಳಪೆ ಕೆಲಸ, ಭ್ರಷ್ಟಾಚಾರಗಳನ್ನು ಪ್ರಶ್ನಿಸುವ ಒಂದು ಹೊಸ ಆಲೋಚನೆಯನ್ನು ಸಾರ್ವಜನಿಕ ಕಾಮಗಾರಿಗಳು ನಡೆಯುವ ಸ್ಥಳಗಳಲ್ಲಿ ನಾಮ ಫಲಕ ಹಾಕಿಸುವ ಮುಖಾಂತರ ಜಾಗೃತಿ ಮೂಡಿಸಿದೆವು. ಅದರಂತೆ ಕಾಮಗಾರಿಯ ಸ್ವರೂಪ, ಕಾಮಗಾರಿಯ ಒಟ್ಟು ವೆಚ್ಚ, ಕಾಮಗಾರಿಯ ಗುತ್ತಿಗೆಗಾರನ ಹೆಸರು, ಕಾಮಗಾರಿ ಪೂರ್ಣಗೊಳ್ಳುವ ಅವಧಿ, ಇವುಗಳನ್ನು ಕಡ್ಡಾಯವಾಗಿ ಕಾಮಗಾರಿ ನಡೆಯುವ ಸ್ಥಳಗಳಲ್ಲಿ ಕಾಮಗಾರಿ ಮುಗಿಯುವವರೆಗೂ ಪ್ರದರ್ಶಿಸಬೇಕೆಂದು ಒತ್ತಾಯಿಸಿ ಯಶಸ್ವಿಯಾದೆವು. ಇದರಿಂದ ಆ ಕಾಮಗಾರಿಗೆ ಸಂಬಂಧ ಪಟ್ಟ ಸ್ಥಳೀಯ ಜನರ ಗಮನ ಸೆಳೆಯುವುದರ ಮುಖಾಂತರ ಸಾರ್ವಜನಿಕರಲ್ಲಿ ಎಚ್ಚರ ಜಾಗೃತ ಮಾಡುವಂತಾಗಿದ್ದಲ್ಲದೆ ಕಳಪೆ ಕಾಮಗಾರಿ, ಭ್ರಷ್ಟಚಾರ ನಡೆಯದಂತೆ ಉತ್ತರದಾಯಿತ್ವ, ಪಾರದರ್ಶಕತೆಗೆ ಅವಕಾಶವಾಯಿತು.

ತೀರ್ಥಹಳ್ಳಿಯಂತ ದಟ್ಟ ನಿತ್ಯಹರಿದ್ವರ್ಣದ ಪಶ್ಚಿಮ ಘಟ್ಟದ ಕಾಡುಗಳ ಮೇಲೆ ಕಾಡುಗಳ್ಳರ ಪ್ಲೇವುಡ್ ಹಾಗೂ ಟಿಂಬರ್ ಲಾಬಿಗಳ ಅರಣ್ಯ ಉತ್ಪನ್ನಗಳ ಸಾಗಣೆದಾರರು ಹಾಗೂ ಪರವಾನಗಿ ಪಡೆದು ದೋಚುವುದರಿಂದಾಗಿ ಇಲ್ಲಿನ ಅರಣ್ಯ ನಾಶ ನಡೆಯುತ್ತಿತ್ತು. ಇದನ್ನು ಗಮನಿಸಿ ನಾವುಗಳು ತಾಲೂಕಿನ ಆಯಕಟ್ಟಿನ ಗಡಿಗಳಲ್ಲಿ ರೈತ ಸಂಘದಿಂದ ಪರ್ಯಾಯವಾಗಿ ಅರಣ್ಯ ಕಳ್ಳತನ ತಡೆಗೇಟುಗಳನ್ನು ಹಾಕಿ ನಮ್ಮ ಕಾರ್ಯಕರ್ತರನ್ನು ಕಾವಲಿಗೆ ಕೂರಿಸುತ್ತಿದ್ದೆವು. ಇದರಿಂದ ಅರಣ್ಯ

ವಾಟೆಕೋರರು ಮತ್ತು ಅರಣ್ಯ ಇಲಾಖೆಯ ನೌಕರರ ಶಾಮೀಲಿನಿಂದ ನಡೆಯುತ್ತಿದ್ದ ಕಳ್ಳತನಕ್ಕೆ ಕಂಟಕವಾಗಿ ಅರಣ್ಯ ಇಲಾಖೆಯ ಭ್ರಷ್ಟನೌಕರರ ಗುತ್ತಿಗೆದಾರರ ಬಾಡಿಗೆ ಗುಂಡಾಗಳಿಗೂ, ರೈತ ಸಂಘದ ಕಾರ್ಯಕರ್ತರಿಗೂ ಕೆಲವು ಸಲ ಘರ್ಷಣೆ ಗಲಾಟೆ ನಡೆದು ಬಹಳಷ್ಟು ನಮ್ಮ ಮೇಲೆ ಸುಳ್ಳು ಕೇಸುಗಳನ್ನು ಹಾಕಿದ್ದು ಉಂಟು. ಇದಾವುದಕ್ಕು ಬಗ್ಗದೇ ರೈತರ ಸಂಘ ಅಚಲವಾಗಿ ನಿಂತಿದ್ದರ ಪರಿಣಾಮ ಶಿವಮೊಗ್ಗ ವಲಯದಲ್ಲಿ ಪ್ಲೇವುಡ್ ಕಂಪನಿಗೆ ಕವಡೇ ಕಿಮ್ಮತ್ತಿಗೆ ಒಪ್ಪಂದವಾದ ಗುತ್ತಿಗೆ ರದ್ದಾಯಿತು. ದಟ್ಟ ಅರಣ್ಯದಲ್ಲಿ ಡೆಡ್ ಮತ್ತು ಫಾಲ್ ಅಂದರೆ ಒಣಗಿದ ಬಿದ್ದ ಮರಗಳನ್ನು ಎತ್ತುವ ಹೆಸರಿನಲ್ಲಿ ಅರಣ್ಯ ವಾಟೆ ಮಾಡುತ್ತಿದ್ದ ಕೆಲಸ ರದ್ದಾಯಿತು. ನೆಡುತೋಪು ಮಾಡುವ ನೆಪದಲ್ಲಿ ಪರಿಸರಕ್ಕೆ ಮಾರಕವಾದ ಫಲವತ್ತಾದ ಪಶ್ಚಿಮ ಘಟ್ಟಕ್ಕೆ ವಿರುದ್ಧವಾದ ನೀಲಗಿರಿ ನೆಡುತೋಪು ಮಾಡುವುದು ರದ್ದಾಯಿತು. ನೆಡುತೋಪು ಹೆಸರಿನಲ್ಲಿ ಹಳ್ಳಿಗಳ ರೈತರ ಮನೆ ಅಂಗಳ ಹಿತ್ತಲುಗಳಿಗೆಲ್ಲಾ ಅರಣ್ಯ ಇಲಾಖೆ ಗಿಡ ನೆಟ್ಟು ಬೇಲಿ ಹಾಕುವುದು ಬಂದಾಯಿತು. ಸಾಗುವಳಿಗೆ ಯೋಗ್ಯವಾದ ಭೂಮಿಯಲ್ಲಿ ಸಣ್ಣ ಪುಟ್ಟ ರೈತರು ಅರ್ಧ-ಒಂದು ಎಕರೆ ಗದ್ದೆ, ತೋಟ ಕೊಡುಗೆ ಮಾಡಿಕೊಂಡ ರೈತರ ವಿರುದ್ಧ ಕೇಸು ದಾಖಲಿಸುವುದು ತೆರವು ಗೊಳಿಸುವುದು ರದ್ದಾಯಿತು. ಖುದ್ದು ರೈತ ಸಂಘದ ಹೆಸರಿನಲ್ಲಿ ಪರ್ಯಾಯವಾಗಿ ಪಟ್ಟ ಹಂಚುವ ಕೆಲಸ ನಡೆಯಿತು. ಈ ನಾಡಿನಲ್ಲಿ ಬಗರ್ ಹುಕುಂ ಸಾಗುವಳಿ ತೆರವುಗೊಳಿಸದಂತೆ ಚಳುವಳಿ ಪ್ರಾರಂಭಿಸಿದ್ದೇ ತೀರ್ಥಹಳ್ಳಿ ತಾಲೂಕಿನಿಂದ. ಈ ವಿಚಾರವಾಗಿ ಹತ್ತಾರು ಕೇಸುಗಳಲ್ಲಿ ಶಾಮಣ್ಣ ನಾವೆ ಕೋರ್ಟಿಗೆ ಅಲೆದಿದ್ದೆವು.

ಇನ್ನು ಸೇತುವೆ ಕಟ್ಟಡ ಕಾಮಗಾರಿಗಳ ಉದ್ಘಾಟನೆ, ಶಂಕು ಸ್ಥಾಪನೆ ಹೆಸರಿನಲ್ಲಿ ಭ್ರಷ್ಟರಾಜಕಾರಣಿಗಳ ಮಂತ್ರಿಮಹೋದಯರಿಂದ ಉದ್ಘಾಟನೆ ಶಂಕು ಸ್ಥಾಪನೆ ಸ್ಥಾಪಿಸುವುದನ್ನು ವಿರೋಧಿಸಿ ಅರ್ಥಪೂರ್ಣ ರೀತಿಯಲ್ಲಿ ಆಯಾ ಕಾಮಾಗಾರಿಯಲ್ಲಿ ಶ್ರಮ ವಹಿಸಿ ಕಾರ್ಯ ನಿರ್ವಹಿಸುವ ಒಬ್ಬ ಕಾರ್ಮಿಕನಿಂದ ಉದ್ಘಾಟನೆ ಮಾಡಿಸುವ ಪರಿಪಾಠಕ್ಕೆ ಚಾಲನೆ ನೀಡಿದೆವು. ಉದಾ: ಆಗಿನ ಮುಖ್ಯಮಂತ್ರಿ ಗುಂಡುರಾವ್‌ನಿಂದ ತುಂಗಾ ನದಿಗೆ 'ಮುಡುಬಾ'ದಲ್ಲಿ ಕಟ್ಟಿದ ಸೇತುವೆ ಉದ್ಘಾಟನೆಗೆಂದು ಲಕ್ಷಾಂತರ ರೂಪಾಯಿ ಖರ್ಚು ಮಾಡಿಸಿ ಉದ್ಘಾಟನಾ ಸಮಾರಂಭ ಇಟ್ಟುಕೊಂಡಿದ್ದನ್ನು ತಡೆದು ಸೇತುವೆಗಾಗಿ ದುಡಿದ ಕಾರ್ಮಿಕನೊಬ್ಬನಿಂದ ಒಂದು ದಿನ ಮುಂಚೆ ಸಾವಿರಾರು ಜನ ಸೇರಿಸಿ ನಾವೇ ಉದ್ಘಾಟನೆ ಮಾಡಿ ಸೇತುವೆ ಓಡಾಟಕ್ಕೆ ಚಾಲನೆ ನೀಡಿರುವುದು ಒಂದು ಐತಿಹಾಸಿಕ ಸಾಕ್ಷಿ.

ಶಾಮಣ್ಣರೊಂದಿಗಿನ ನಮ್ಮ ಈ ಒಡನಾಟದ ಮೂಲಕ ನಮ್ಮ ಆಚಾರ ವಿಚಾರ, ನಡೆ ನುಡಿ-ನಿಲುವುಗಳಲ್ಲೆಲ್ಲ ಶಾಮಣ್ಣ ಪರಿಣಾಮಕಾರಿಯಾಗಿ ನಮ್ಮನ್ನು

ಆಕ್ರಮಿಸಿಕೊಂಡರು. ಪುರೋಹಿತರು ನಡೆಸಿಕೊಡುವ ಮದುವೆ ಮುಂತಾದ ಸಮಾರಂಭಗಳನ್ನು ವಿರೋಧಿಸಬೇಕು. ಸರಳ ಮದುವೆಗಳಲ್ಲದ ಮದುವೆಗಳಿಗೆ ಹೋಗಲೇ ಕೂಡದು. ಪಂಚಾಂಗ ಬದಲಾಗಬೇಕು. ಈಗಿರುವ ಪಂಚಾಂಗ ಶೂದ್ರ ವಿರೋಧಿಯಾದುದು ವೈದಿಕರು ಸುಖವಾಗಿ ಬದುಕಲು ಶೂದ್ರರ ಶೋಷಣೆಗಾಗಿ ಬರೆದುಕೊಂಡ ಪಂಚಾಂಗ. ಉದಾ: ಹಬ್ಬ ಹರಿದಿನಗಳು ರೈತರ ಸುಗ್ಗಿಕಾಲದಲ್ಲಿ ಬರಬೇಕಾದವು. ಆದರೆ ಸುಗ್ಗಿ ಕಳೆದು ರೈತರ ಮನೆಗಳು ಬರಿದಾದಾಗ ಬರುವ ಈ ಗೌರಿ, ಗಣೇಶ, ನವರಾತ್ರಿ, ದೀಪಾವಳಿ ಹಬ್ಬಗಳು ವೈದಿಕರ ಹಬ್ಬಗಳು ಏಕೆಂದರೆ ಮೈಮುರಿಯದೇ ಗಳಿಸುವ ವೈದಿಕ ವರ್ಗ ಮಳೆಗಾಲದಲ್ಲಿ ಆರಾಮವಾಗಿ ಉಂಡು ತಿಂದು ಮೋಜು ಮಸ್ತಿಗಾಗಿ ಪುರುಸೊತ್ತಾಗಿ ಮಾಡುವ ಹಬ್ಬಗಳು. ಹಾಗಾಗಿ ಈ ಹಬ್ಬಗಳು ಶೂದ್ರರ ಹಬ್ಬಗಳಲ್ಲ.

ಮಹಿಳಾ ಸಮಾನತೆ ಬಗೆಗಿನ ಶಾಮಣ್ಣ ಅವರ ವಿಚಾರಗಳು. ಉದಾ: ಮಹಿಳೆಯರು ಮನೆಯಲ್ಲಿ ಶುಚಿರುಚಿಯಾಗಿ ಅಡಿಗೆ ಮಾಡಿ ಬಡಿಸಿದ ಮೇಲೂ ಪುರುಷರು ಮಾಡಿ ಹಾಕಿದ್ದನ್ನು ಪಟ್ಟಾಗಿ ಉಂಡು ಎಂಜಲು ತಟ್ಟೆಗೆ ಕೈಯ ತೊಳೆದು ಬಿಟ್ಟು ಹೋಗುವವರು. ನಮ್ದಲ್ಲ ಬಹುತೇಕರು. ಎಂಜಲು ಕನಿಷ್ಟ ಎಂಜಲನ್ನು ಶುಚಿ ಮಾಡುವುದು ಮಹಿಳೆ ಪಾಲಿನ ಕೆಲಸ ಎಂದು ರೂಢಿಸಿಕೊಂಡು ಬಂದಿರುವ ಈ ರೂಢಿ ಸಂಪ್ರದಾಯಗಳನ್ನು ಸ್ವಲ್ಪ ಕುಳಿತು ಯೋಚಿಸಿದರೆ ಎಂತಹ ಕಾರ್ಯ ಎನ್ನುವುದು ಶಾಮಣ್ಣನವರ ಆಚಾರಗಳಲ್ಲಿ ನಾನು ಕಂಡುಕೊಂಡ ಸತ್ಯ ಹಾಗೂ ನನ್ನ ಜೀವನದಲ್ಲಿ ಅಳವಡಿಸಿಕೊಂಡ ವಿಚಾರಗಳು.

ಶಾಮಣ್ಣ ಅವರ ಜೀವನಾನುಭಗಳನ್ನು ಅವರ ವಿನೋದಭರಿತ ಶೈಲಿಯಲ್ಲಿ ಕೇಳುವುದೇ ಒಂದು ಖುಷಿ. ಅವರು ಹೊಸದಾಗಿ ಹೊಳೆಹೊನ್ನೂರು ಹತ್ತಿರ ಜಮೀನು ಕೊಂಡುಕೊಂಡು ಭತ್ತ ಬೆಳೆಯಲು ಆರಂಭಿಸುತ್ತಾರೆ. ನೀರಾವರಿ ಜಮೀನು ಸೀಮೆ ಗೊಬ್ಬರದ ಬೇಸಾಯದಲ್ಲೂ ಕಳೆಗಳದ್ದೆ ಒಂದು ದೊಡ್ಡ ಸಮಸ್ಯೆ. ಅಂತದ್ರಲ್ಲಿ ಶಾಮಣ್ಣನ ಗದ್ದೆ ಬೇಸಾಯದಲ್ಲಿ ಬೆಳೆಗಿಂತ ಕಳೆಯೇ ಹೆಚ್ಚು ಕಂಡ ಅವರ ಹಿತೈಷಿಯೊಬ್ಬರು 'ಶಾಮಣ್ಣ, ಕಳೆಯೇ ಕೀಳಿಸಿಲ್ಲವಲ್ಲೊ ಹಿಂಗಾದ್ರೆ ನೀನ್ ಭತ್ರ ಬೆಳೆದಂಗೆ' ಅಂದಾಗ ಶಾಮಣ್ಣ ಇದ್ದವರು "ಕಳೆನೋ ಬೆಳೆನೋ ಅವು ಅದೇ (ಕಚ್ಚಿ) ಮರ್‍ಕೊಂಡು ಯಾವ್ದು ಗಟ್ಟಿ ಆಗ್ತವೋ ನೋಡೋಣ ಅಂತ ಇದೀನೀ" ಅಂದ್ರು.

ಇನ್ನೊಂದು ಪ್ರಸಂಗ ಶಾಮಣ್ಣ ಜಮೀನಿನ ಬೇಸಾಯಕ್ಕಾಗಿ ಒಂದು ಜೊತೆ ಎತ್ತು ಸಾಕಿಕೊಂಡಿದ್ದರು. ಗದ್ದೆ ಬೇಸಾಯ ನಿಲ್ಲಿಸಿ ಜಮೀನಿಗೆ ಅಡಿಕೆ ತೆಂಗು

ಹಚ್ಚಿದ ಮೇಲೆ ಎತ್ತುಗಳಿಗೆ ವಿರಾಮವಿತ್ತು. ಇವರ ಜಮೀನಿನ ಕೆಲಸಕ್ಕೆ ಬರುವ ಕೆಲವರು ಸ್ವಲ್ಪ ಹೊಲ ಹೊಂದಿದವರು ಇದ್ದರು. ಅವರಲ್ಲಿ ಒಬ್ಬ ಒಂದು ದಿನ ಎತ್ತು ಹೊಡ್ಕಂಡು ಹೋಗಿ ಹೊಲ ಉತ್ತು ತಂದಿಡ್ತೀನಿ ಎಂದು ಹೊಡ್ಕಂಡು ಹೋಗೋರು. ಇದ್ದಕ್ಕಿದ್ದಂತೆ ಒಂದು ದಿನ ಶಾಮಣ್ಣ ಎತ್ತುಗಳನ್ನು ನೋಡುತ್ತಾರೆ. ಎತ್ತುಗಳ ಕಿವಿ ಹರಿದು ಉದುರಿ ಹೋಗುವ ಸ್ಥಿತಿಯಲ್ಲಿದೆ. ಆಳೊಬ್ಬನನ್ನು ಕರೆದು "ಎನೋ ಇದು ಎತ್ತಿನ ಕಿವಿಯಲ್ಲಿ? 'ಸಣ್ಣ ಕಂಡಿ'ಯಾಗಿದವಲ್ಲೋ (ಸಾರಣಿ). ಎನ್ ಮಾಡ್ದ್ರೋ" ಅಂತ ಬಾಯಿ ಬಿಡಿಸಿದಾಗ ತಿಳಿದಿದ್ದು ಸರ್ಕಾರದ ಸಬ್ಸಿಡಿ ಎತ್ತಿನ ಸಾಲಕ್ಕಾಗಿ ಇವರ ಎತ್ತುಗಳನ್ನು ತೋರಿಸಿ ಸಾಲ ಸಬ್ಸಿಡಿ ಪಡೆದಿರುವುದು ಹೊರ ಬಿತ್ತು. ಕಿವಿ ತೂತಾಗಿರುವುದು (ಸಾಲದ ಇನ್ಸುರೆನ್ಸ್ ಗುರುತಿಗಾಗಿ ಪದೇ ಪದೇ ಟ್ಯಾಗ್ ಹಾಕಿರುವುದು).

ಇನ್ನೊಂದು ಪ್ರಸಂಗ. ಜಮೀನಿನಲ್ಲಿ ಕೆಲಸ ಮುಗಿಸಿ ಹೋಗುವಾಗ ಆಳುಗಳು ಒಂದು–ಎರಡು ತೆಂಗಿನಕಾಯಿ, ಸಿಕ್ಕಿದ ವಸ್ತು ಮುಲಾಜಿಲ್ಲದೆ ಹಿಡಿದುಕೊಂಡು ಹೋಗುವುದು. ಶಾಮಣ್ಣ, ಕಂಡ್ರು ಕಾಣದಂಗೆ ಇರುತ್ತಿದ್ರು. ಇದನ್ನು ನೋಡಿದವರು "ಶಾಮಣ್ಣ, ಆಳಿಗೊಂದು ಕೈಯಲ್ಲಿ ಹೀಗೆ ಹಿಡಕೊಂಡು ಹೋದ್ರೆ ಹೆಂಗೆ" ಎಂದರೆ, ಆಗ "ಏನು ಮಾಡದು ಅದು ಅವರ ಪಾಲು. ನನ್ನ ಜಮೀನಿನಲ್ಲಿ ಪ್ರಾಣಿ–ಪಕ್ಷಿಗಳಿಗೆ ಒಂದು ಪಾಲು, ರೋಗ–ರುಜಿನಕ್ಕೊಂದು ಪಾಲು, ಆಳು–ಕಾಳಿಗೆ ಒಂದು ಪಾಲು, ಉಳಿದದ್ದು ನನ್ನ ಪಾಲು" ಅನ್ನೋರು.

ಚಳುವಳಿ ಆರಂಭ ಕಾಲದಲ್ಲಿ ಶಿವಮೊಗ್ಗದಲ್ಲಿ ರಾಜ್ಯ ರೈತ ಸಂಘದ ಕಾರ್ಯಕ್ರಮ ಒಂದರ ಪೋಸ್ಟರ್ ಸಿಟಿಯಲ್ಲಿ ಅಂಟಿಸಬೇಕಿತ್ತು. ರಾತ್ರಿ ೧೧ ಗಂಟೆ ನಂತರ ಶಾಮಣ್ಣನ ನೇತೃತ್ವದಲ್ಲಿ ನಾವೆಲ್ಲ ಬಂದು ಏಳೆಂಟು ಜನ ಕಾರ್ಯಕರ್ತರು ಪೋಸ್ಟರ್‌ಗಳನ್ನೆಲ್ಲ ಆಯಕಟ್ಟಿನ ಜಾಗದಲ್ಲಿ ಗೋಡೆಗಳಿಗೆಲ್ಲಾ ಅಂಟಿಸುತ್ತಾ ಹೊರಟೆವು. ಶಾಮಣ್ಣ ಜೊತೆಯಲ್ಲಿ ಬರುತ್ತಿದ್ದವರು ಒಂದಷ್ಟು ದೂರ ಹೋದ ಮೇಲೆ ತಿರುಗಿ ನೋಡಿದರೆ ಶಾಮಣ್ಣ ಕಾಣ್ತಯಿಲ್ಲ. ಶಾಮಣ್ಣ ಎಲ್ಲಿ, ಶಾಮಣ್ಣ ಎಲ್ಲಿ ಅಂತ ಹಿಂದಕ್ಕೆ ಹುಡುಕ್ತ ಹೋದ್ರು. ನೋಡಿದ್ರೆ ದುರ್ಗಿಗುಡಿ ರಸ್ತೇಲಿ ಎಲೆಕ್ಟ್ರಿಕ್ ಪೋಲ್‌ಗೆ ಭುಜ ಆನಿಸಿ ನಿಂತಿದ್ದು ಕಾಣಿಸಿತು. ಒಂದು ಸಾರಿ ನಮಗೆಲ್ಲಾ ಭಯ ಆಯಿತು. ಕರೆಂಟ್ ಶಾಕ್ ಎಲ್ಲಾದರೂ ಆಗಿದೆಯಾ ಎಂದು ಹೆದರಿ 'ಶಾಮಣ್ಣ' ಅಂತ ಕೂಗಿದರೆ ನಿಧಾನಕ್ಕೆ ನಿದ್ರೆಯಿಂದ ಎಚ್ಚೆತ್ತು, ಆ! ಎಂದು ಗಡಬಡಿಸಿದ್ದು ಕಂಡು ನಮಗೆಲ್ಲಾ ನಗು ತಡೆಯಲಾಗಲಿಲ್ಲ. ನಡೆದದ್ದು ಏನೆಂದರೆ, ಶಾಮಣ್ಣನಿಗೆ ತೂಗಡಿಸುತ್ತಾ ನಡೆಯೋ ಅಭ್ಯಾಸ, ನಮ್ಮ ಹಿಂದಿನಿಂದ ತೂಗಡಿಸುತ್ತಾ ಬರುತ್ತಿದ್ದವರಿಗೆ ಕರೆಂಟ್ ಕಂಬ ಅಡ್ಡ ಸಿಕ್ಕಿದ್ದರಿಂದ ಮುಂದೆ ಬರಲು ತಡೆಯಾಗಿ ಅಲ್ಲೇ ನಿದ್ರೆಗೆ ಜಾರಿದ್ದಾರೆ!

ಎಷ್ಟೋ ಸಾರಿ ನಾನು, ಅವರು ತೀರ್ಥಹಳ್ಳಿಯಲ್ಲಿ ಸ್ಕೂಟರ್‌ನಲ್ಲಿ ಒಟ್ಟಿಗೆ ಓಡಾಡುವಾಗ ಹೊತ್ತು ಗೊತ್ತಿಲ್ಲದೆ ತಿರುಗಾಡಿದ್ದುಂಟು. ಆಗೆಲ್ಲಾ ಕೆಲವೊಂದು ಬಾರಿ ಸ್ಕೂಟರ್ ಬಿಡುತ್ತಿರುವಾಗಲೇ ನಿದ್ರೆಗೆ ಜಾರಿ ಪಕ್ಕನೇ ಚಡಪಡಿಸಿ ಎಚ್ಚೆತ್ತುಗೊಂಡಿದ್ದುಂಟು. ಡ್ರೈವಿಂಗ್‌ನಲ್ಲಿ ನಾನು ಕಂಡಂತೆ ಶಾಮಣ್ಣ ಪರ್‌ಫೆಕ್ಟ್, ಯಾವ ಮಾದರಿ ಗಾಡಿಯಾಗಲಿ ಒಂದು ಚೂರು ತಡ ಬಡಾಯಿಸದೆ ಚಲಾಯಿಸುತ್ತಿದ್ದರು. ಮತ್ತು ಅವುಗಳ ಗತ್ತು ಗಮ್ಮತ್ತುಗಳನ್ನೆಲ್ಲಾ ವಿವರಿಸಿ ಹೇಳುತ್ತಿದ್ದೇ ಒಂದು ಸೋಜಿಗ.

ಇಷ್ಟೆಲ್ಲಾ ಡ್ರೈವಿಂಗ್ ಪರ್‌ಫೆಕ್ಟ್ ಇದ್ದರೂ ಅವರ ಬಳಿ ಯಾವುದೇ ಡ್ರೈವಿಂಗ್ ಲೈಸೆನ್ಸ್ ಇಲ್ಲ. ಯಾಕೆ ಶಾಮಣ್ಣ ಮಾಡಿಸಿಲ್ಲ ಅಂದ್ರೆ, ನಾನೇನು ಮಾಡೋದು ಎಷ್ಟೋ ಸಾರಿ ಲೈಸೆನ್ಸ್‌ಗೆ ಅಪ್ಲೈ ಮಾಡಿ ಪ್ರಯತ್ನಿಸಿಲ್ಲ! ಹೋದಾಗೆಲ್ಲ ಅದೇನೋ ಒಂದು ಚಾರ್ಟ್ ಕೊಡುತ್ತಾರೆ. ಇದನ್ನು ಕಲಿತುಕೊಂಡು ಬನ್ನಿ ಹೇಳಿ ಅಂತಾರೆ. ನನ್ನ ಡ್ರೈವಿಂಗ್‌ಗೂ ಆ ಚಾರ್ಟ್‌ನಲ್ಲಿರೋದಕ್ಕೂ ಸಂಬಂಧವೇ ಇಲ್ಲದನ್ನೇ ಕೇಳಿದರೆ ನಾನೇನು ಹೇಳಲಿ ಹಂಗಾಗಿ ಅದರಲ್ಲಿ ನಾನು ಪಾಸ್ ಆಗುವಂಗಿಲ್ಲ. ಅವರಿಗೆ ನಾನು ಲಂಚ ಕೊಡುವುದಿಲ್ಲ. ನಂಗೆ ಲೈಸೆನ್ಸ್ ಸಿಗಂಗೆ ಇಲ್ಲ ಅಷ್ಟೇ.

೧೯೮೭ರಲ್ಲಿ ಅಂತ ಕಾಣುತ್ತೆ ಬೆಂಗಳೂರು ಪಾದಯಾತ್ರೆ ಶಿವಮೊಗ್ಗದಿಂದ ಹೊರಟು ೧೭ ದಿನಗಳಲ್ಲಿ ಬೆಂಗಳೂರು ತಲುಪುವ ನಡುವೆ ತುಮಕೂರು ಹತ್ರ ಅಂತ ಕಾಣುತ್ತೆ, ಶಾಮಣ್ಣನ ಕಾಲುಗಳಲ್ಲಿ ಬೊಬ್ಬೆ ಬಂದಿತ್ತು. ನಾವೆಲ್ಲ ಶಾಮಣ್ಣನ ಸುತ್ತ ಸುತ್ಕೊಂಡು ಅನುಕಂಪ ಸೂಚಿಸುತ್ತಿರಬೇಕಾದ್ರೆ, ಅಷ್ಟೇ ವಿನೋದವಾಗಿ ಶಾಮಣ್ಣ, "ಏನಿಲ್ಲ ಬಿಡಿ ಬೆಂಗಳೂರು ತಲುಪುವ ಹೊತ್ತಿಗೆ ನಮ್ಮ ಕಾಲುಗಳೆಲ್ಲ ಸವೆದು ಮುಂಗಾಲುವರೆಗೆ ತಲುಪಬಹುದು. ಮಂಡಿಚಿಪ್ಪಲ್ಲಿ ಬೆಂಗಳೂರು ಪೇಟೆಯಲ್ಲಿ ಯಾತ್ರೆ ಸಾಗ್ಬೇಕಾಗಬಹುದು! ಇನ್ನೊಂದು ಸಮಸ್ಯೆ ಏನೆಂದ್ರೆ, ನಂಜುಂಡಸ್ವಾಮಿಯವರು ಇದೇ ಹುಮ್ಮಸ್ಸಿನಿಂದ ಇಲ್ಲಿಂದ ಡೆಲ್ಲಿಗೆ ಮುಂದುವರಿಸೋಣವೆಂದು ಹೇಳಬಹುದು. ಹಾಂಗಾದ್ರೆ ಬಹುಶಃ ಡೆಲ್ಲಿ ತಲುಪುವ ಹೊತ್ತಿಗೆ ನಮ್ಮ ದೇಹವೆಲ್ಲ ಸವೆದು ರುಂಡ ಮಾತ್ರ ಉಳಿಯಬಹುದು. ಕಲ್ಪನೆ ಮಾಡಿಕೊಳ್ಳಿ. ಬರೀ ರುಂಡಗಳ ಸಾಲು ಪಾರ್ಲಿಮೆಂಟ್ ಭವನದ ಎದುರು ರಸ್ತೆಯಲ್ಲಿ ಹೋಗ್ತಾಯಿದ್ದರೆ ಹೇಗೆ ಕಾಣಬಹ್ದು" ಎಂದು ನಗೆ ಚಟಾಕಿ ಹಾರಿಸಿದರು.

ನಾನು ಕಂಡಂತೆ ಶಾಮಣ್ಣನವರ ತಾಳ್ಮೆ, ವಿನಯ, ಸರಳತೆ, ಹಾಸ್ಯ ಪ್ರವೃತ್ತಿ, ಪ್ರತಿಯೊಬ್ಬರನ್ನು ಅತ್ಯಂತ ಗೌರವದಿಂದ, ಸಹಿಷ್ಣುತೆಯಿಂದ, ಆದರದಿಂದ ನೋಡುವ ಅವರ ಸ್ವಭಾವ ಅದ್ಭುತವಾದುದು.

ಶಾಮಣ್ಣನವರ ಹಿಡನ್ ಅಜೆಂಡಾ

ಜಿ.ಎಸ್. ರಾಜೇಂದ್ರ

ಶತ್ರುಗಳಿಗೆ ನಿರುಪದ್ರವಿಯಂತೆ ಕಾಣುವ, ಕ್ಯಾಮರಾ ಹಿಡಿದಾಗ ತಂತ್ರಜ್ಞಾನಿಯಂತೆ, ಪೋಷಾಕಿನಲ್ಲಿ ತತ್ವಜ್ಞಾನಿಯಂತೆ ಕಂಡರೂ ನಮಗೆಲ್ಲಾ ಅವರ ಸ್ನೇಹಪರ, ಜನಪರ ವೈಚಾರಿಕ ನಿಲುವುಗಳು ಇಷ್ಟ. ಅದಕ್ಕಿಂತ ಹಮ್ಮು-ಬಿಮ್ಮುಗಳಿಲ್ಲದೇ ಎಲ್ಲರೊಂದಿಗೆ ತಮಾಷೆ, ಚೇಷ್ಟೆ, ನಗು ಮತ್ತದರಲ್ಲೂ ಪ್ರಜಾತಂತ್ರದ ನಡವಳಿಕೆ- ಚಿಕ್ಕವರೊಂದಿಗೂ ಸಹ, ಬಹಳ ಇಷ್ಟ.

ಚಿಕ್ಕ ಪುಟ್ಟ ವ್ಯಾಪಾರಿಗಳನ್ನು ನೋಡಿದಾಗ ಒಮ್ಮೊಮ್ಮೆ ಆಯನೂರು ಸಮೀಪ ನೆಲೆಸಿರುವ ಗೆಳೆಯ ಕೋಣಂದೂರಿನ ಸುರೇಶ ಶೆಟ್ಟಿ ಹೇಳಿದ ಪ್ರಸಂಗವೊಂದು ನೆನಪಾಗಿ ಖುಷಿ ನೀಡುತ್ತದೆ. ಒಮ್ಮೆ ಚನ್ನಗಿರಿ ಕಡೆಗೆ ಬಸ್‌ನಲ್ಲಿ ಪ್ರಯಾಣಿಸುತ್ತಿದ್ದಾಗ ಸುರೇಶನ ಪಕ್ಕದಲ್ಲಿ ಶಾಮಣ್ಣ ಕುಳಿತುಕೊಳ್ಳುತ್ತಾರೆ. ಬಸ್‌ಸ್ಟಾಪ್ ಒಂದರಲ್ಲಿ ಕಡಲೆಕಾಯಿ ತಂದ ಹುಡುಗನಿಂದ ಎರಡು ಪೊಟ್ಟಣ ಕೊಂಡು ಒಂದನ್ನು ಪರಿಚಯವೇ ಇಲ್ಲದ ಸುರೇಶನ ಕೈಗಿಡುತ್ತಾರೆ. ಈತ ಏನೋ ಹೇಳಲು ಯತ್ನಿಸುತ್ತಿದ್ದಾಗಲೇ ಶಾಮಣ್ಣ ಇನ್ನೊಂದು ಪೊಟ್ಟಣವನ್ನು ಕ್ಯಾಮರಾ ಏಮ್ ಮಾಡುವ ಹಾಗೆ ದಿಟ್ಟಿಸಿ ನೋಡುತ್ತಾ

"ಆ ಹುಡುಗ ಕೇಳಿದಷ್ಟು ದುಡ್ಡು ನಾನು ಕೊಟ್ಟಿದ್ದಕ್ಕೆ ನಿಮ್ಮ ಆಕ್ಷೇಪಣೆನಾ? ಹೊಟ್ಟೆಪಾಡಿಗೆ ಅವನು ಇದನ್ನು ಮಾಡ್ತಾ ಇದಾನೆ ಅಂತ ಅಲ್ಲ. ಒಂದು ಅಡಿ ಎತ್ತರದ ಶಂಕಾಕೃತಿ ಕಾಗದದ ಪೊಟ್ಟಣದಲ್ಲಿ ಅರ್ಧದಿಂದ ಕೆಳಗೆ ಟೊಳ್ಳಾಗಿದ್ದರೂ ಒಂದೇ ಒಂದು ಕಡಲೆಕಾಯಿ ಕೆಳಗಿಳಿಯದಂತೆ ಅರ್ಧ ಪ್ಯಾಕೆಟ್ ಖಾಲಿ ಇರುವಂತೆ ನೋಡಿಕೊಳ್ಳೊ ಇವರ ಪ್ಯಾಕಿಂಗ್ ತಂತ್ರಜ್ಞಾನ ನೋಡಿದ್ರೆ ಒಂಥರಾ ಆಶ್ಚರ್ಯ ಮತ್ತು ಖುಷಿ ಕಂಡ್ರೀ" ಎಂದು ನಗುತ್ತಾ ಅದರಲ್ಲಿದ್ದ ಮೂರು ಮತ್ತೊಂದು ನೆಲಗಡಲೆ ಬಿಡಿಸುತ್ತಾ ಭರ್ಜರಿ ಭೋಜನದಂತೆ ಮೆಲ್ಲುತ್ತಿದ್ದರು. ಶಾಮಣ್ಣ ತಮಾಷೆಯೊಂದಿಗೆ ಹೀಗಾದರೂ ರೈತರು ಬೆಳೆದಿದ್ದನ್ನು ಆಕರ್ಷಕವಾಗಿ ಮಾರುಕಟ್ಟೆ ಮಾಡಿಕೊಡುವವರ ಬಗೆಗೂ ಪ್ರೀತಿಯಿಂದ ಮಾತನಾಡಿ ಬಸ್‌ನ ಸಹ ಪ್ರಯಾಣಿಕರೆಲ್ಲರಿಗೂ ಮುದ ನೀಡಿದ್ದನ್ನು ಆಗಾಗ ಸ್ನೇಹಿತರೊಂದಿಗೆ ಸುರೇಶ ಹಂಚಿಕೊಳ್ಳುತ್ತಿರುತ್ತಾನೆ.

ಇಂತಹ ಶಾಮಣ್ಣನವರು ತಮ್ಮ ನಂಬಿಕೆಯ ವಿಚಾರಗಳಿಗೆ ಚ್ಯುತಿಯಾಗದಂತೆ ಸದಾ ಜಾಗರೂಕರಾಗಿಯೇ ಇರುತ್ತಾರೆ. ೧೯೯೬ರಲ್ಲಿ ರೈತ ಸಂಘದ ಶಿವಮೊಗ್ಗ ಜಿಲ್ಲಾ ಘಟಕದ ಪುನರ್‌ರಚನೆ ಸಂದರ್ಭ ಭಿನ್ನಾಭಿಪ್ರಾಯಗಳಿಂದಾಗಿ ರಾಜ್ಯ ಸಮಿತಿಯವರೇ ಜಿಲ್ಲಾ ಪದಾಧಿಕಾರಿಗಳ ಪಟ್ಟಿ ಘೋಷಿಸುವ ಏರ್ಪಾಟು ಮಾಡಲಾಯಿತು. ಆಗ ತೀರ್ಥಹಳ್ಳಿ ತಾಲ್ಲೂಕು ರೈತಸಂಘದ ಅಧ್ಯಕ್ಷನಾಗಿದ್ದ ನನ್ನನ್ನು ಶಿವಮೊಗ್ಗ ಜಿಲ್ಲಾ ಅಧ್ಯಕ್ಷನನ್ನಾಗಿಯೂ, ಹೊಳಲೂರು ಎಂ.ಎಸ್. ಮಹೇಂದ್ರನಾಥ್ ಪ್ರಧಾನ ಕಾರ್ಯದರ್ಶಿ ಹಾಗೂ ಉಳಿದ ಪದಾಧಿಕಾರಿಗಳ ಹೆಸರು ಘೋಷಣೆ ಆಯ್ತು. ನಾನು ಜಿಲ್ಲಾ ಅಧ್ಯಕ್ಷನಾಗಿ ಕೆಲಸ ಮಾಡಿದ ಮೂರ್‍ನಾಲ್ಕು ವರ್ಷಗಳಲ್ಲಿ ಶಾಮಣ್ಣನವರು ಅವರ ಒಡನಾಡಿಗೆ ನನ್ನನ್ನು ಪರಿಚಯಿಸುವಾಗ ಇವನು ರಾಜೇಂದ್ರ. ರೈತ ಸಂಘದ ತೀರ್ಥಹಳ್ಳಿ ತಾಲ್ಲೂಕು ಅಧ್ಯಕ್ಷ – ಗೊತ್ತಲ್ವಾ? ಹೀಗೆ ಪರಿಚಯಿಸುವಾಗ ಒಂದೆರಡು ಬಾರಿ ಶಾಮಣ್ಣನವರಿಗೆ ಎಲ್ಲೋ ಮರೆವು ಅಂದುಕೊಂಡಿದ್ದೆ. ಬರುಬರುತ್ತಾ ಖಚಿತವಾಯಿತು. ಜನತಂತ್ರದಲ್ಲಿ ಅಪಾರವಾಗಿ ನಂಬಿಕೆಯಿರುವ ಶಾಮಣ್ಣ ನಮ್ಮ ಆಯ್ಕೆಯನ್ನು ಮಾನ್ಯ ಮಾಡಿರಲಿಲ್ಲ. ರಾಜ್ಯ ಸಮಿತಿಯಿಂದ ನೇಮಕಗೊಂಡಿದ್ದ ನಮ್ಮನ್ನು ಕೊನೆಗೂ ಒಪ್ಪಿಕೊಳ್ಳದೆ ಪ್ರತಿಭಟಿಸಲು ಅವರು ಆಯ್ಕೆ ಮಾಡಿಕೊಂಡಿದ್ದು ಪರಿಚಿತರಿಗೆ ಪರಿಚಯಿಸುವ (ಕಿಚಾಯಿಸುವ ಅಲ್ಲ) ರಾಜಮಾರ್ಗ. ಶಾಮಣ್ಣನವರಂತಹ ಪ್ರಜಾತಂತ್ರವಾದಿಗಳು ಇಂತಹ ಸಂದರ್ಭದಲ್ಲಿ ವ್ಯಕ್ತಪಡಿಸುವ ಹಿಡನ್ ಪ್ರತಿಭಟನೆಗಳನ್ನು ಸಮಾಧಾನದಿಂದಲೇ ನೋಡುವ ಮನೋಭಾವನೆ ಅವರಂತಹವರಿಂದಲೇ ನಾವು ಅನೇಕ ಕಿರಿಯರು ಅಲ್ಪಸ್ವಲ್ಪವಾದರೂ ಕಲಿತಿದ್ದು ನಿಜ. ಹೀಗೆ ಭಿನ್ನಾಭಿಪ್ರಾಯಗಳನ್ನು ಸಹಿಸಿಕೊಳ್ಳುವಾಗ ಸಹಿಷ್ಣುತೆಗೂ ಒಂದು ಗತ್ತು–ಗಮ್ಮತ್ತು ಇರುತ್ತದೆ. ಇರಲೇಬೇಕು.

ಒಮ್ಮೆ ಬೆಳಗಾವಿಯ ಲಾಡ್ಜೊಂದರಲ್ಲಿ ತಂಗಿದ್ದೆವು. ನಾವು ಕೆಲವರು ರಾತ್ರಿ ತಡವಾಗಿ ರೂಂ ಸೇರಿಕೊಳ್ಳುವಾಗ ಕೆಲವರು ನಿದ್ರಿಸುತ್ತಿದ್ದರು. ಎಚ್ಚರವಿದ್ದ ಶಾಮಣ್ಣ ದಡಕ್ಕನೆದ್ದು ಏನದು ಕೈಯಲ್ಲಿ ಎಂದು ಪಿಸುಮಾತಿನಲ್ಲಿ ಕೇಳಿದರು. ಗೆಳೆಯನೊಬ್ಬ ಧಾರವಾಡದಿಂದ ಕೊಂಡು ತಂದಿದ್ದ ಧಾರವಾಡದ ಪೇಡದ ಎರಡು ಪ್ಯಾಕ್‌ಗಳನ್ನು ತೋರಿಸುತ್ತಾ ಒಂದು ನಾಳೆ ಕಾರ್‌ನಲ್ಲಿ ಹೋಗುವಾಗ ತಿನ್ನಲು, ಮತ್ತೊಂದು ಊರಿಗೆ ತಗೊಂಡು ಹೋಗ್ತೀನಿ ಎಂದನು. ಕೂಡಲೇ ಶಾಮಣ್ಣ ಪೇಡಾ ಚೆನ್ನಾಗಿಲ್ಲದಿದ್ದರೆ ಊರಲ್ಲಿ ನಿನ್ನ ಮರ್ಯಾದೆ ಹೋಗುತ್ತದೆಂದು ಎಚ್ಚರಿಸಿದರು. ಆತ ಹಾಗಾದರೆ ಸ್ಯಾಂಪಲ್ ನೋಡಿ ಎಂದು ಪೇಡಾ ಗಂಟು ಬಿಚ್ಚಿದ. ಕೆಲವೇ ನಿಮಿಷಗಳಲ್ಲಿ ಎಲ್ಲಾ ಮಾಯ. ಸಿಹಿ ತಿಂಡಿಯೆಂದರೆ ಶಾಮಣ್ಣಗೆ ಮಕ್ಕಳಿಗಿಂತ ಸ್ವಲ್ಪ ಜಾಸ್ತಿ ತಂಟೆ. ಖಾಲಿ ಮಾಡಿದ್ದರಲ್ಲಿ ಶಾಮಣ್ಣಗೆ ಸಿಂಹಪಾಲು. ಇಷ್ಟೆಲ್ಲಾ ಆದ ಮೇಲೆ ಶಾಮಣ್ಣ "ಶ್! ತಿಂಡಿ ಖಾಲಿಯಾದ ಪೇಪರ್ ಬಾಕ್ಸ್ ಎಲ್ಲಾ ಟಿಪಾಯಿ ಮೇಲೇ ಇರಲಿ. ಈಗ ಗೊರಕೆ ಹೋಡೀತಿರೋರೆಲ್ಲ ಬೆಳಿಗ್ಗೆ ಎದ್ದು ನೋಡಲಿ. ನಾವು ಲಾಡ್ಜ್ ಸೇರೋದ್ರೊಳಗೆ ನಮಗೆ ಕೊಡ್ದೇನೆ ತಿಂದಿದ್ದೀರಿ ಅಂತ ಎಲ್ರೂ ದಬಾಯಿಸಿ ನೀನ್ ಕಳ್ಳ – ನೀನ್ ಕಳ್ಳ ಅಂತ ಅವ್ರೆಲ್ಲ ಜಗಳಮಾಡೋ ಹೊತ್ತಿಗೆ ನಾವೆಲ್ಲಾ ಸ್ನಾನ ಮಾಡಿ ಪ್ಯಾಕ್ ಅಪ್ ಮಾಡಿ ಎಸ್ಕೇಪ್" ಅಂತ ಮುಸುಕು ಎಳೆದರು. ಒಟ್ಟಿನಲ್ಲಿ ಶಾಮಣ್ಣನ ಜೊತೆಗೆ ಸೇರಿದಾಗಲೆಲ್ಲಾ ಎಂತಹ ಗಂಭೀರ ಪರಿಸ್ಥಿತಿಯಲ್ಲೂ ನಮಗೆಲ್ಲಾ ಇಂತಹದ್ದೇ ಸಿಹಿ ಸಿಹಿ ಆಟ, ರಂಜನೆ, ಮನರಂಜನೆ.

ಕಿರಿಯ ಗೆಳೆಯರಿಂದ...

ರಚನಾತ್ಮಕ ಸಮಾಜವಾದಿ ಕಡಿದಾಳ್ ಶಾಮಣ್ಣ

ರವಿವರ್ಮಕುಮಾರ್

ಪ್ರೇಮ ಸೇನೆಯ ನಾಯಕ

ಇಸವಿ ೧೯೭೩, ಆಗ ತಾನೇ ಕಾನೂನು ಕಾಲೇಜು ಸೇರಿ ಪ್ರೊ|| ಎಂ.ಡಿ. ನಂಜುಂಡಸ್ವಾಮಿರವರ (ಎಂ.ಡಿ. ಎನ್) ಪಾಠ ಪ್ರವಚನಗಳನ್ನು ಕೇಳುತ್ತಿದ್ದೆ. ಅವರು ಹೇಳುತ್ತಿದ್ದ ವಿಚಾರಗಳು ಹಳ್ಳಿಗಾಡಿನಿಂದ ಬಂದ ನನಗೆ ಹೊಸತು. ಕಾಲೇಜಿನಲ್ಲಿಯೂ ಸಹ ಆಡಳಿತ ಮಂಡಳಿಯ ವಿರೋಧಿಯಾಗಿಯೇ ಎಂ.ಡಿ.ಎನ್. ರವರು ಗುರುತಿಸಿಕೊಂಡಿದ್ದ ಸನ್ನಿವೇಶದಲ್ಲಿ ಅವಕಾಶ ಸಿಕ್ಕಾಗಲೆಲ್ಲಾ ಅವರ ವ್ಯಕ್ತಿತ್ವಕ್ಕೆ ಕಪ್ಪು ಮಸಿ ಬಳಿಯುವ ಪ್ರಯತ್ನಗಳು ನಿರಂತರವಾಗಿ ನಡೆಯುತ್ತಿದ್ದವು. ಆದರೆ ಎಂ.ಡಿ.ಎನ್‌ರವರ ವ್ಯಕ್ತಿತ್ವ ನನಗೆ ವಿಶಿಷ್ಟವಾಗಿ ಕಂಡು ಕುತೂಹಲದಿಂದಲೋ, ರೋಮಾಂಚನ ವಿಚಾರ ದಿಂದಲೋ ತುಂಬಾ ಆಕರ್ಷಕನಾಗಿದ್ದೆ. ಎಂ.ಡಿ.ಎನ್. ರವರ ಕ್ಲಾಸ್ ರೂಂ ಒಳಗೂ ಹಾಗೂ ಹೊರಗೂ ಸಹ ತುಂಬಾ ಬಲವಾಗಿ ಪ್ರತಿಪಾದಿಸುತ್ತಿದ್ದ ಜಾತಿ ವಿನಾಶದ ಗುರಿ, ಅಂತರ್ಜಾತಿ ಮತ್ತು ಪ್ರೇಮ ವಿವಾಹದ ಹಾದಿ ಎಲ್ಲಾ ಯುವಕರಿಗೂ ಸಹ ರೋಮಾಂಚನ

ಹುಟ್ಟಿಸುತ್ತಿತ್ತು. ಅಂತರ್ಜಾತಿ ವಿವಾಹಗಳು ತೀವ್ರ ಪ್ರತಿರೋಧ ಎದುರಿಸುತ್ತಿದ್ದ ಕಾಲವದು. ತಮ್ಮ ಕಣ್ಣೆದುರಿಗೇ ದುರಂತಕ್ಕೀಡಾಗಿದ್ದ ಪ್ರೇಮಿಗಳ ಚಿತ್ರಣ ಎಂದೂ ಮರೆಯಲು ಸಾಧ್ಯವಿಲ್ಲ. ಅದರಲ್ಲೂ ಹಿಂದೂ–ಮುಸ್ಲಿಂ ವಿವಾಹವಾದರೋ ಅತ್ಯುಗ್ರ ಪ್ರತಿರೋಧವನ್ನು ನವದಂಪತಿಗಳು ಎದುರಿಸಬೇಕಾಗಿತ್ತು. ಅಂತಹ ದಂಪತಿಗಳಿಗೆ ರಕ್ಷಣೆ ನೀಡಿ ಅವರ ಮದುವೆ ಸಫಲವಾಗಲು ಹೊಸದೊಂದು ಬುದ್ಧಿಜೀವಿಗಳ ಪಡೆಯು ತಯಾರಾಗುತ್ತಿತ್ತು. ಅದೆಲ್ಲಕ್ಕಿಂತ ಭಿನ್ನವಾದ ಪ್ರಯೋಗ ಕಡಿದಾಳು ಶಾಮಣ್ಣನವರದು ಎಂದು ಎಂ.ಡಿ.ಎನ್‌ರವರು ಹೇಳುತ್ತಿದ್ದರು. ಪ್ರೇಮಸೇನೆ ಎಂಬ ಕಾರ್ಯಪಡೆ ರಚಿಸಿ ಅದರ ಮೂಲಕ ಅಂತರ್ಜಾತಿ ವಿವಾಹಿತ ಗಂಡು–ಹೆಣ್ಣುಗಳಿಗೆ ಕೆಲಕಾಲ ರಕ್ಷಣೆ ನೀಡಿ ಆ ಮದುವೆ ಸಫಲವಾಗಲು ಪ್ರೇಮಸೇನೆ ನೆರವು ಕೊಡುತ್ತಿತ್ತು. ಇಂತಹ ವಿಶಿಷ್ಟ ಸೇನೆಯನ್ನು ಕಟ್ಟಿದ ವ್ಯಕ್ತಿಯೊಬ್ಬ ಅಜಾನುಬಾಹು ಕಟ್ಟಾಳು ಎಂತಹವರನ್ನೂ ಮಣಿಸಬಲ್ಲ ವ್ಯಕ್ತಿತ್ವ ಎಂದು ನನ್ನ ಅನಿಸಿಕೆ. ಕಡಿದಾಳ್ ಎನ್ನುವ ಹೆಸರೂ ಸಹ ನನ್ನ ಕಲ್ಪನೆಯಲ್ಲಿ ಒಬ್ಬ ಉಗ್ರ ಸ್ವರೂಪಿಯ ಮನುಷ್ಯನನ್ನು ಕಲ್ಪಿಸಿತ್ತು.

ತೀರ್ಥಹಳ್ಳಿಯ ಅಧ್ಯಯನ ಶಿಬಿರ

ಈ ಸನ್ನಿವೇಶದಲ್ಲಿ ತೀರ್ಥಹಳ್ಳಿಯಲ್ಲಿ ದಿಢೀರ್ ಅಧ್ಯಯನ ಶಿಬಿರವಿದೆ ಎಂದು ತಾರು ಬಂದಿತ್ತು. ಆ ಅಧ್ಯಯನ ಶಿಬಿರದಲ್ಲಿ ಹೈಕೋರ್ಟಿನ ಮುಖ್ಯ ನ್ಯಾಯಮೂರ್ತಿಯೊಬ್ಬರು ಜಾತಿವಾದ ಮಾಡಿದರೆಂದು ತೆರೆದ ನ್ಯಾಯಾಲಯದಲ್ಲಿ ಕರಪತ್ರ ಎಸೆದ ೭ ಜನ ಸಮಾಜವಾದಿ ಯುವಜನ ಸಭಾ ಸದಸ್ಯರನ್ನು ಸನ್ಮಾನಿಸಲಾಗುವುದು ಎಂದು ಸಹ ತಿಳಿಸಲಾಗಿತ್ತು. ೩ ದಿನದ ಅಧ್ಯಯನ ಶಿಬಿರ ಅಚ್ಚುಕಟ್ಟಾಗಿ ವ್ಯವಸ್ಥೆ ಮಾಡಲಾಗಿತ್ತು. ಆ ಅಧ್ಯಯನ ಶಿಬಿರದಲ್ಲಿ ಲೋಹಿಯಾ ಸಮಾಜವಾದದ ಎಲ್ಲಾ ವೈಶಿಷ್ಟ್ಯಗಳನ್ನೂ ಸಹ ಗಂಭೀರವಾಗಿ ಚರ್ಚಿಸಲಾಯಿತು. ಆ ಸನ್ನಿವೇಶದಲ್ಲಿ ಮುಖತಃ ಭೇಟಿಯಾದ ವ್ಯಕ್ತಿಯೇ ಉಗ್ರಸ್ವರೂಪಿ ಬದಲು ಶಾಂತಸ್ವರೂಪವೇ ಮೈವೆತ್ತಂತಿದ್ದ ಕಡಿದಾಳ್ ಶಾಮಣ್ಣ. ಆ ಶಿಬಿರದಲ್ಲಿ ಚರ್ಚೆ ಮಾಡಿದ ವಿಚಾರಗಳಿಗಿಂತಲೂ ಹೆಚ್ಚು ಜ್ಞಾಪಕವಿರುವ ಸಂಗತಿಯೆಂದರೆ ಶಿಬಿರದ ಪ್ರಾರಂಭದ ತಿಂಡಿಯಿಂದ ಹಿಡಿದು ಕೊನೆಯ ಊಟದವರೆವಿಗೂ ಎಲ್ಲಾ ತಿನಿಸುಗಳೂ ಸಹ ಬೂದುಗುಂಬಳಕಾಯಿ ತಿನಿಸುಗಳಾಗಿದ್ದುದು. ಎಂ.ಡಿ.ಎನ್ ಬೆಂಗಳೂರಿಗೆ ಹಿಂತಿರುಗಿದ ನಂತರ ತಿಳಿಸಿದ ವಿಚಾರವೇನೆಂದರೆ ಶಾಮಣ್ಣನವರು ಬೆಳೆದಿದ್ದ ಬೆಳೆಗೆ ಸೂಕ್ತ ಬೆಲೆ ಇಲ್ಲದ್ದರಿಂದ ಲಾರಿ ಬಾಡಿಗೆಯೂ ಹುಟ್ಟದ ಸನ್ನಿವೇಶದಲ್ಲಿ ಶಿಬಿರವನ್ನೇ ತೀರ್ಥಹಳ್ಳಿಯುಲ್ಲಿ ಆಯೋಜಿಸಿ ತಾನು ಬೆಳೆದಿದ್ದ ಎಲ್ಲಾ ಕುಂಬಳಕಾಯಿಯನ್ನು ಸಮಾಜವಾದ ಶಿಬಿರಕ್ಕೆ ವ್ಯಯ ಮಾಡಿದ್ದರು. ಹೀಗೆ

ಪರಿಚಯವಾದ ಶಾಮಣ್ಣನವರ ವ್ಯಕ್ತಿತ್ವ ಕಳೆದ ೪೪ ವರ್ಷಗಳು ನಿರಂತರವಾಗಿ ನನ್ನ ಒಡನಾಡಿಯಾಗಿದೆ.

ನವ ನಿರ್ಮಾಣ ಕ್ರಾಂತಿ

ಸಮಾಜವಾದಿಗಳು ಸಮಾಜವಾದಕ್ಕಿಂತಲೂ ಹೆಚ್ಚು ಪ್ರಸಿದ್ಧಿಯಾದ ಸಂಗತಿಯೆಂದರೆ ಪಾರದರ್ಶಕತೆ ಮತ್ತು ಪ್ರಜಾತಂತ್ರಕ್ಕೆ. ಸಮಾಜವಾದಿ ಯುವಜನ ಸಭಾದಲ್ಲಿ ಅಂತಹ ಪ್ರಜಾತಾಂತ್ರಿಕತೆ ಬೆಳವಣಿಗೆ ಕೈಮೀರಿ ಬೆಳೆದು ಅಂದಿನ ಅತ್ಯಂತ ಕ್ರಿಯಾಶೀಲ ನಾಯಕರಾದ ಎಂ.ಡಿ.ಎನ್‌ರವರನ್ನು ಸಮಾಜವಾದಿ ಯುವಜನ ಸಭಾದಿಂದ ಉಚ್ಚಾಟಿಸಲಾಯಿತು. ಈ ಸಮಾಜವಾದಿ ಯುವಜನಸಭಾ 'ಇಂಗ್ಲೀಷ್ ತೊಲಗಿಸಿ' ಚಳುವಳಿಯ ಮೂಲಕ ಇಂಗ್ಲೀಷ್‌ನಲ್ಲಿ ಬರೆದ ಫಲಕಗಳಿಗೆ ಮಸಿ ಬಳಿಯುವುದು; ಜಾತಿ ವಿನಾಶದ ಎಲ್ಲಾ ಜಾತಿ ಸಮ್ಮೇಳನಗಳ ವಿರುದ್ಧ ಪ್ರತಿಭಟನೆ, ಅನ್ಯಾಯದ ಎಲ್ಲಾ ಸಂಕೇತಗಳ ವಿರುದ್ಧ ಕಪ್ಪು ಬಾವುಟ ಪ್ರದರ್ಶನ; ಜಾತಿ ಸೂಚಕ ಸಾರ್ವಜನಿಕ ಹೋಟೆಲ್‌ಗಳಿಗೆ ಮಸಿ ಬಳಿಯುವುದು; ವಿಶ್ವವಿದ್ಯಾಲಯದ ಘಟಿಕೋತ್ಸವಗಳಲ್ಲಿ ಬ್ರಿಟಿಷ್ ಸಾಮ್ರಾಜ್ಯದ ಪಳೆಯುಳಿಕೆಯಾದ ಹುಡ್ ಮತ್ತು ಗ್ಲೌಸ್ ಧರಿಸುವುದರ ವಿರುದ್ಧ ಪ್ರತಿಭಟನೆ; ಹೋಟೆಲ್ ತಿಂಡಿ ದರಗಳ ವಿರುದ್ಧ ಹೋರಾಟ; ಕೋಮುವಾದವನ್ನು ಪ್ರಚೋದಿಸುತ್ತಿದ್ದ ಮಠಾಧೀಶರ ವಿರುದ್ಧ ಹೋರಾಟ; ಶಿಕ್ಷಣ ಕ್ಷೇತ್ರದ ಸುಧಾರಣೆಗೆ ಹೋರಾಟ ಮುಂತಾದ ಚಳುವಳಿಗಳನ್ನು ಸಂಘಟಿಸಿತ್ತು. ಇದಕ್ಕೆಲ್ಲ ಬೆನ್ನೆಲುಬಾಗಿ ನಿಂತವರು ಕಡಿದಾಳ್ ಶಾಮಣ್ಣ. ಯಾವಾಗ ಎಂಡಿಎನ್‌ರನ್ನು ಈ ಸಂಘಟನೆಯಿಂದ ಉಚ್ಚಾಟಿಸಲಾಯಿತೋ ಆಗ ಪರ್ಯಾಯ ಸಂಘಟನೆ ರಚಿಸುವ ಮುಂಚೂಣಿಯಲ್ಲಿದ್ದವರು ಮತ್ತೆ ಕಡಿದಾಳ್ ಶಾಮಣ್ಣ. ಕೇವಲ ಹೊಸ ಸಂಘಟನೆ ಮಾಡುವುದು ಅಷ್ಟೇ ಅಲ್ಲ, ಆ ಸಂಘಟನೆಯ ನೇತೃತ್ವವನ್ನು ಪ್ರಾಮಾಣಿಕ ರಾಜಕಾರಣಕ್ಕೆ ಇನ್ನೊಂದು ಹೆಸರಾಗಿದ್ದ ಮಾಜಿ ಮುಖ್ಯಮಂತ್ರಿ ಶ್ರೀ ಕಡಿದಾಳ್ ಮಂಜಪ್ಪನವರನ್ನು ಅಧ್ಯಕ್ಷರನ್ನಾಗಿ ಮಾಡುವುದರಲ್ಲಿ ಶಾಮಣ್ಣನವರ ಪಾತ್ರ ಪ್ರಮುಖವಾಗಿತ್ತು. ನವನಿರ್ಮಾಣ ಕ್ರಾಂತಿ ಜಯಪ್ರಕಾಶ್ ನಾರಾಯಣ್‌ರ ಸಂಪೂರ್ಣ ಕ್ರಾಂತಿ ಚಳುವಳಿಯಲ್ಲಿ ಸಕ್ರಿಯವಾಗಿ ಪಾತ್ರವಹಿಸಿ ಈ ರಾಜ್ಯದಲ್ಲಿ ಯುವಕರನ್ನು ಸಂಘಟಿಸುವ ಅತ್ಯದ್ಭುತ ಕೆಲಸ ಮಾಡಿ ಬಹಳ ದೊಡ್ಡ ಹೋರಾಟ ವನ್ನೇ ಮಾಡಿತು

ಮೂಢನಂಬಿಕೆ ವಿರುದ್ಧ ಆಂದೋಲನ ಮತ್ತು ಲೆಫ್ಟಿಸ್ಟ್ ಕಾರು

೧೯೭೫ರ ಜೂನ್ ೨೫ರಂದು ತುರ್ತು ಪರಿಸ್ಥಿತಿ ಘೋಷಣೆಯಾದ ನಂತರ ನಮ್ಮ ಹೋರಾಟದಲ್ಲಿ ರಾಜಕೀಯಕ್ಕೆ ಅವಕಾಶವಿಲ್ಲದಾಯಿತು. ಹಾಗಾಗಿ ಚಳುವಳಿ ಹೊಸ ಆಯಾಮಗಳಲ್ಲಿ ವ್ಯಕ್ತವಾಗತೊಡಗಿತು. ಧಾರ್ಮಿಕ ಸಹಿಷ್ಣುತೆ ಸಲುವಾಗಿ

ಕಬ್ಬನ್ ಪಾರ್ಕಿನಲ್ಲಿ ಬೀಫ್ ಮತ್ತು ಪೋರ್ಕ್ ಪಾರ್ಟಿಯನ್ನು ಪ್ರಸಿದ್ಧ ಸ್ವಾತಂತ್ರ ಸೇನಾನಿ ಮತ್ತು ವಿಚಾರವಾದಿ ಆಂದ್ರಪ್ರದೇಶದ ಶ್ರೀ ಗೋ.ಪ. ರಾಮಚಂದ್ರರಾಜು (ಗೋ.ರಾ) ಅವರ ನೇತೃತ್ವದಲ್ಲಿ ನಡೆಸಲಾಯಿತು. ತದನಂತರ ಶ್ರೀಲಂಕದ ಪ್ರಸಿದ್ಧ ವಿಚಾರವಾದಿ ವಿಜ್ಞಾನಿ ಶ್ರೀ ಅಬ್ರಾಹಂ ಕೋವೂರ್‌ರವರನ್ನು ಕರ್ನಾಟಕಕ್ಕೆ ಆಹ್ವಾನಿಸಲಾಯಿತು. ಕೋವೂರ್‌ರವರು ಮಂತ್ರವಾದಿಗಳ ಒಂದು ತಂಡವನ್ನೇ ಕರೆದುಕೊಂಡು ಬಂದು ದೇವಮಾನವರ ಪವಾಡಗಳನ್ನು ಬಯಲಿಗೆಳೆಯುವುದರಲ್ಲಿ ಪ್ರಮುಖ ಪಾತ್ರ ವಹಿಸಿದರು. ಕೋವೂರ್‌ರವರು ೧೮ ಪವಾಡಗಳನ್ನು ಪಟ್ಟಿ ಮಾಡಿ ಆ ಪವಾಡಗಳನ್ನು ಮಾಡಿ ತೋರಿಸಿದ ವ್ಯಕ್ತಿಗೆ ತನ್ನ ಎಲ್ಲಾ ಆಸ್ತಿಗಳನ್ನು ಬರೆದುಕೊಟ್ಟು ಅವರ ಆಶ್ರಮದಲ್ಲಿ ಇನ್ನುಳಿದ ಜೀವನವನ್ನು ಆ ಪವಾಡ ಪುರುಷರ ಅನುಯಾಯಿಯಾಗಿ ಕಳೆಯುವುದಾಗಿ ಘೋಷಿಸಿದರು. ಈ ಒಂದು ಸವಾಲನ್ನು ಪತ್ರಿಕೆಯಲ್ಲಿ ಪ್ರಕಟಿಸಿ ಸವಾಲನ್ನು ಸ್ವೀಕರಿಸುವವರು ಒಂದು ಸಾವಿರ ರೂಗಳನ್ನು ಮುಂಗಡ ಕಟ್ಟಿ ಪವಾಡವನ್ನು ಪ್ರದರ್ಶಿಸಬಹುದು ಎಂದು ಘೋಷಿಸಲಾಯಿತು. ಆ ಸಂದರ್ಭದಲ್ಲಿ ಬೆಂಗಳೂರಿನ ಮುನಿರೆಡ್ಡಿಪಾಳ್ಯದ ಒಬ್ಬ ವೈದ್ಯ ಮುಂಗಡ ಹಣ ಕಟ್ಟಿ ಪುಟ್ಟಪರ್ತಿಯ ಸಾಯಿಬಾಬರವರ ಪವಾಡವನ್ನು ಮಾಡಿ ತೋರಿಸುವುದಾಗಿ ಸವಾಲನ್ನು ಸ್ವೀಕರಿಸಿದರು. ಆದರೆ ನಿಗದಿತ ದಿನದಂದು ಸದರಿ ವೈದ್ಯರಾಗಲೀ, ಪವಾಡ ಪುರುಷರಾಗಲೀ ಪತ್ತೆಯೇ ಇಲ್ಲ. ಹಾಗಾಗಿ ಸವಾಲು ಸ್ವೀಕರಿಸಿದ್ದರೂ ಸಹ ಪವಾಡ ಪ್ರದರ್ಶನ ನಡೆಯಲಿಲ್ಲ. ಈ ಸನ್ನಿವೇಶದಲ್ಲಿ ಕೋವೂರ್‌ರವರನ್ನು ಕರ್ನಾಟಕದಾದ್ಯಂತ ಪ್ರವಾಸಕ್ಕೆ ಕರೆದುಕೊಂಡು ಹೋದವರು ಕಡಿದಾಳ್ ಶಾಮಣ್ಣ. ಅವರ ಸಾರಥ್ಯದಲ್ಲಿಯೇ ಪವಾಡಗಳನ್ನು ಬಯಲು ಮಾಡುತ್ತಾ ಕೋವೂರ್ ಕರ್ನಾಟಕ ಪ್ರವಾಸ ಮುಗಿಸಿದರು. ಶಾಮಣ್ಣನವರ ಪಕ್ಕ ಕುಳಿತಿದ್ದಾಗ ಒಮ್ಮೆ ಶಾಮಣ್ಣನವರು ಕೋವೂರ್‌ಗೆ ಹೇಳಿದರು. ಅವರು ಮಾತ್ರವಲ್ಲದೆ ತಮ್ಮ ಕಾರು ಸಹ ಲೆಫ್ಟಿಸ್ಟ್ Leftist ಎಂದು. ಕೋವೂರ್, ಹಾಗೆಂದರೆ ಏನು ಎಂದು ಪ್ರಶ್ನಿಸಿದರು. ಆಗ ಕೊಟ್ಟ ಉತ್ತರದಿಂದ ಕೋವೂರ್ ಹೊಟ್ಟೆ ಹುಣ್ಣಾಗುವಂತೆ ನಕ್ಕರು. ಶಾಮಣ್ಣನವರು ಹೇಳಿದ್ದೇನೆಂದರೆ ಕೆಲವು ತಾಂತ್ರಿಕ ಕಾರಣಗಳಿಂದಾಗಿ ಬಲಗಡೆಗೆ ತಿರುಗಿಸಲು ಸಾಧ್ಯವಾಗುತ್ತಿಲ್ಲವಾದ್ದರಿಂದ ಎಡಗಡೆಯಿಂದಲೇ ತಿರುಗಿಸಿಕೊಳ್ಳುವ ಅನಿವಾರ್ಯತೆ ಇದೆಯಾದ್ದರಿಂದ ಅವರ Car Leftist ಎಂದು ಹೇಳಿದರು.

ಛಲದಂಕ ರೈತ

ಲ್ಯಾಂಡ್ ಹೋಲ್ಡರ್ ಎಂದರೆ ನೆಲಕಚ್ಚಿದವ ಎಂದು ಶಾಮಣ್ಣನವರ ವ್ಯಾಖ್ಯಾನ. ಅವರ ಸ್ವಂತ ಅನುಭವವೇ ಇದಕ್ಕೆ ಸಾಕ್ಷಿ. ಹುಟ್ಟೂರಿನಿಂದ ದೂರದ ಭದ್ರಾವತಿ ತಾಲ್ಲೂಕಿನ ಭಗವತಿಕೆರೆಗೆ ಬಂದು ಹೊಸದಾಗಿ ಜಮೀನು ಕೊಂಡು ವ್ಯವಸಾಯ

ಪ್ರಾರಂಭಿಸಿದ ಶಾಮಣ್ಣ, ಕಾಡು ಜಮೀನನ್ನು ಪಳಗಿಸಿ ಸುಂದರ ತೋಟ ಮಾಡಲು ಮಾಡಿರುವ ಸಾಧನೆ ಹರಸಾಹಸವೇ ಸರಿ; ಒಂದು ದೊಡ್ಡ ಧಾರವಾಹಿಯನ್ನೇ ಸಿದ್ಧಮಾಡಬಹುದು. ಒಂದು ರೀತಿಯಿಂದ ಭೂಮಿಯ ಜೊತೆ ನಿರಂತರವಾಗಿ ಗುದ್ದಾಟವನ್ನು ಮಾಡಿಕೊಂಡು ಬಂದವರು ಶಾಮಣ್ಣ. ಸಾಂಪ್ರದಾಯಿಕ ವ್ಯವಸಾಯವನ್ನು ಮಾಡಿದರೆ ಅಷ್ಟೇನೂ ತೊಂದರೆಯಾಗುತ್ತಿರಲಿಲ್ಲ. ಆದರೆ ಪ್ರಗತಿಪರ ರೈತನಾಗಿ ನಿರಂತರ ಪ್ರಯೋಗಗಳನ್ನು ಮಾಡುತ್ತ ಪದೇ ಪದೇ ಕೈಸುಟ್ಟುಕೊಂಡ ಶಾಮಣ್ಣ ಕೊನೆಗೂ ಜಯಶಾಲಿಯಾಗಿ ತಾವೇ ರೂಪಿಸಿದ ಯಂತ್ರ–ತಂತ್ರಗಳ ಮೂಲಕ ಸಫಲವಾಗುತ್ತಿದ್ದರು. ಪ್ರಾರಂಭದಲ್ಲಿ ಜೋಪಡಿಯಲ್ಲಿ ವಾಸಿಸಿ ಕಾಡಿನಲ್ಲಿರುವ ಒಬ್ಬ ರೈತ ಪಡಬಹುದಾದ ಎಲ್ಲಾ ಕಷ್ಟಕಾರ್ಪಣ್ಯಗಳನ್ನು ಶಾಮಣ್ಣ ಅನುಭವಿಸಿದ್ದಾರೆ. ಆದರೆ ಅದನ್ನು ಕೆಚ್ಚೆದೆಯಿಂದ ನಿಭಾಯಿಸಿದ ಕೀರ್ತಿ ಶ್ರೀದೇವಿಯವರಿಗೆ ಸಲ್ಲಬೇಕು. Behind every successful man, there is a woman ಎಂಬ ನಾಣ್ಣುಡಿಗೆ ಒಂದು ಪಠ್ಯಪುಸ್ತಕ ನಿದರ್ಶನವಾಗಬಲ್ಲ ವ್ಯಕ್ತಿ ಶ್ರೀಮತಿ ಶ್ರೀದೇವಿ. ರೈತ ಮಹಿಳೆಯಾಗಿ, ತಾಯಿಯಾಗಿ, ಹೋರಾಟಗಾರ್ತಿಯಾಗಿ, ಅದ್ಭುತ ಸಂಘಟನಾ ಚಾತುರ್ಯದಿಂದ ಶಾಮಣ್ಣನವರ ಎಲ್ಲಾ ಚಟುವಟಿಕೆಗಳಿಗೆ ಬೆಂಬಲವಾಗಿ ನಿಂತವರು ಶ್ರೀದೇವಿಯವರು. ಎಲ್ಲಕ್ಕಿಂತ ಹೆಚ್ಚಾಗಿ ಶಾಮಣ್ಣನವರನ್ನು ನೋಡಲು ಬಂದವರಿಗೆ ಅವರಿಂದ ನಿತ್ಯ ಹಬ್ಬದೂಟವೂ great attraction. ಆತಿಥ್ಯಕ್ಕೆ ಇನ್ನೊಂದು ಹೆಸರೇ ಶ್ರೀದೇವಿ.

ಪರಿಸರ ಸ್ನೇಹಿ ಕಕ್ಕಸು

ಪ್ರತಿಯೊಂದು ಗ್ರಾಮೀಣ ಕುಟುಂಬಕ್ಕೆ ಒಂದು ಕಕ್ಕಸು ಕಟ್ಟಿಸುವ ಮೂಲಕ ಮಹಿಳೆಯರ ಸ್ವಾಭಿಮಾನ ಕಾಯ್ದುಕೊಳ್ಳಬೇಕು ಎಂಬ ಲೋಹಿಯಾ ಕರೆಗೆ ಕ್ರಿಯಾಶೀಲರಾಗಿ ಸ್ಪಂದಿಸಿದ ಶಾಮಣ್ಣ ಒಂದು ಕ್ರಾಂತಿಕಾರ ಬದಲಾವಣೆಯನ್ನು ಅವರ ಕ್ಷೇತ್ರದಲ್ಲಿ ತಂದಿದ್ದಾರೆ. ಸ್ಥಳೀಯ ಬ್ಯಾಂಕಿನಿಂದ ಪ್ರತಿ ಕುಟುಂಬಕ್ಕೆ ೬೦೦ ರೂಗಳ ಸಾಲ ಕೊಡಿಸಿ ಒಂದು ಪರಿಸರಸ್ನೇಹಿ ಕಕ್ಕಸನ್ನು ಕಟ್ಟಿಸಿ ತಿಂಗಳೊಂದಕ್ಕೆ ೧೦ ರೂಗಳನ್ನು ಕಟ್ಟುವ ಮೂಲಕ ಸಾಲ ಮರುಪಾವತಿ ಮಾಡಲು ಅನುವು ಮಾಡಿಕೊಟ್ಟರು. ಅತ್ಯಂತ ಪರಿಣಾಮಕಾರಿಯಾಗಿ ನಡೆದ ಕ್ರಾಂತಿ ಭಗವತೀಕೆರೆಯ ಸುತ್ತಮುತ್ತಲಿನ ಗ್ರಾಮೀಣ ಕುಟುಂಬಗಳ ನೈರ್ಮಲ್ಯ ಕಾಪಾಡುವುದಲ್ಲದೆ ಕತ್ತಲಾದಾಗ ಮಾತ್ರ ಕಕ್ಕಸಿಗೆ ಹೋಗುತ್ತಿದ್ದ ಮಹಿಳೆಯರ ಆರೋಗ್ಯ, ನೈರ್ಮಲ್ಯ ಮತ್ತು ಸ್ವಾಭಿಮಾನವನ್ನು ಎತ್ತಿಹಿಡಿದ ಕೀರ್ತಿ ಶಾಮಣ್ಣನವರಿಗೆ ಸಲ್ಲಬೇಕು.

ಆ ಕ್ರಾಂತಿಯ ಬಗ್ಗೆ ಪದೇ ಪದೇ ನನಗೆ ಹೇಳಿ ಅದನ್ನು ಪ್ರತ್ಯಕ್ಷವಾಗಿ ನೋಡಲು ಆಹ್ವಾನಿಸಿದ್ದರು. ಆದರೆ ಕೆಲಸದ ಒತ್ತಡದಿಂದ ಹೋಗಲು ಸಾಧ್ಯವಾಗದೇ ಸುಮಾರು ಒಂದು ವರ್ಷ ಕಳೆದ ನಾನು ಶಾಮಣ್ಣನವರಲ್ಲಿಗೆ ಹೋದೆನು. ಸಮೀಪದಲ್ಲಿ

ಲಂಬಾಣಿ ತಾಂಡಾಕ್ಕೆ ಕರೆದುಕೊಂಡು ಹೋಗಿ ತೋರಿಸಿದರು. ಕಕ್ಕಸಿನ ಒಳಗಡೆಗೂ ಹೋಗಿ ನೋಡಬೇಕೆಂದು ಒತ್ತಾಯಿಸಿದರು. ಮುಸ್ಸಂಜೆಯ ಕತ್ತಲಿನಲ್ಲಿ ಒಳಗಡೆ ಹೋದಾಗ ಜಾಲಿಮುಳ್ಳಿನ ತಡೆ ನಮಗೆ ಅಡ್ಡಬಂದಿತು. ಆಗ ಶಾಮಣ್ಣನವರು ಮನೆಯ ಯಜಮಾನನ್ನು ಕರೆದು ವಿಚಾರಿಸಿದಾಗ ತಿಳಿದುಬಂದ ಸಂಗತಿಯೇನೆಂದರೆ ಇವರು ಕಟ್ಟಿಸಿದ ಕಕ್ಕಸಿನ ನೆಲವು ಸಿಮೆಂಟಿನದಾಗಿದ್ದು ತಾವು ವಾಸಮಾಡುತ್ತಿದ್ದ ಸಗಣಿಯ ನೆಲಕ್ಕಿಂತಲೂ ಹೆಚ್ಚಿನ ಗುಣಮಟ್ಟದ್ದಾದ್ದರಿಂದ ಪಾಯಖಾನೆ ಮಾಡಲು ಆ ಕಕ್ಕಸನ್ನು ಬಳಸಲು ಮನಸ್ಸು ಬರಲಿಲ್ಲ ಎಂದು ಮುಚ್ಚಿದ್ದಾಗಿ ಹೇಳಿದರು.

ಕಳ್ಳಭಟ್ಟಿ ದುರಂತ

೧೯೮೧ರಲ್ಲಿ ಕಳ್ಳಭಟ್ಟಿ ಕುಡಿದು ಸಾವಿರ ಜನ ಪ್ರಾಣ ಕಳೆದುಕೊಂಡರು. ಸಾವಿರಾರು ಜನ ಕಣ್ಣು ಕಳೆದುಕೊಂಡರು. ಈ ಸಂಬಂಧ ಒಂದು ನ್ಯಾಯಾಂಗ ತನಿಖೆಯನ್ನು ನ್ಯಾಯಮೂರ್ತಿ ಆರ್.ಜಿ. ದೇಸಾಯ್ ಅಧ್ಯಕ್ಷತೆಯಲ್ಲಿ ನಡೆಸಲಾಯಿತು. ಕರ್ನಾಟಕ ದಲಿತ ಸಂಘರ್ಷ ಸಮಿತಿಯ ಪರವಾಗಿ ಎಲ್ಲ ಕಣ್ಣು ಕಳೆದುಕೊಂಡ ಹಾಗೂ ಮೃತಪಟ್ಟವರ ಕುಟುಂಬಗಳ ಪರವಾಗಿ ವಕಾಲತ್ತು ವಹಿಸಿ ವಿಚಾರಣೆಯಲ್ಲಿ ಭಾಗವಹಿಸಿದ್ದೆ. ಆ ಆಯೋಗದಲ್ಲಿ ಶಾಮಣ್ಣನವರೇ Star witness. ಎನ್.ಡಿ. ಸುಂದರೇಶ್‌ರವರೂ ಸಾಕ್ಷ್ಯ ನೀಡಿದ್ದರು. ಕೇಂದ್ರೀಕೃತ ಅಬಕಾರಿ ನೀತಿಯೇ ಕಳ್ಳಭಟ್ಟಿ ದುರಂತಕ್ಕೆ ಕಾರಣವೆಂದೂ ವಿಕೇಂದ್ರೀಕೃತ ವ್ಯವಸ್ಥೆಯಲ್ಲಿ ಮನೆ ಮನೆಯಲ್ಲಿ ತಮಗಿಷ್ಟ ಬಂದ ಪೇಯವನ್ನು ತಯಾರು ಮಾಡಿಕೊಳ್ಳುವ ಸ್ವಾತಂತ್ರವನ್ನು ನೀಡಿದ್ದೇ ಆದರೆ ಜನ ಕಳ್ಳಭಟ್ಟಿಗೆ ಶರಣಾಗುತ್ತಿರಲಿಲ್ಲ; ಬದಲಾಗಿ ಹೆಚ್ಚಿನ ಆದಾಯದ ದುರಾಸೆಯಿಂದ ಹೆಚ್ಚಿನ ತೆರಿಗೆ ಹಾಕಿ ಮಾರುಕಟ್ಟೆಯಲ್ಲಿ ಕಾನೂನು ಪ್ರಕಾರ ಮಾರಾಟವಾಗುವ ಸಾರಾಯಿ ದುಬಾರಿಯಾಗಿದ್ದರಿಂದ ಜನರು ಕಳ್ಳಭಟ್ಟಿಗೆ ಶರಣಾಗಿದ್ದಾರೆ; ಕಳ್ಳಭಟ್ಟಿ ತಯಾರಿಕೆಯನ್ನು ನಿಲ್ಲಿಸಲು ಸರ್ಕಾರಕ್ಕೆ ಸಾಧ್ಯವಾಗದೆ ಇದ್ದುದರಿಂದ, ಲಾಭಗಳಿಸುವ ದೃಷ್ಟಿಯಿಂದ ಕಳ್ಳಭಟ್ಟಿಯಲ್ಲಿ ಮನುಷ್ಯನ ಕಣ್ಣು ಮತ್ತು ಪ್ರಾಣಕ್ಕೆ ಮಾರಕವಾಗಬಹುದಾದ chloral hydrate ಇತ್ಯಾದಿ ರಾಸಾಯನಿಕ ವಸ್ತುಗಳನ್ನು ಬಳಸಿ ಪ್ರಾಣ ಹಾನಿಗೆ ಕಾರಣವಾಗುತ್ತಿದ್ದರು. ಮನೆ ಮನೆಯಲ್ಲಿ ಸುಲಭವಾಗಿ ಸಾರಾಯಿ ತಯಾರು ಮಾಡುವ ವಿಧಾನವನ್ನು ಶಾಮಣ್ಣನವರು ಆಯೋಗದ ಮುಂದೆ ಸಾದರಪಡಿಸಿ ತೋರಿಸಿದರು. "ಅಕ್ಕಿಭೋಜ" ತಯಾರಿಸಿ ಅತ್ಯಂತ ಕಡಿಮೆ ಖರ್ಚಿನಲ್ಲಿ ಕುಟುಂಬಕ್ಕೆ ಬೇಕಾಗುವ ಸಾರಾಯಿಯನ್ನು ಮನೆಯಲ್ಲಿ ತಯಾರು ಮಾಡಬಹುದೆಂದು ಮಾಡಿ ತೋರಿಸಿದರು. ಶಾಮಣ್ಣನವರ ಸಾಕ್ಷಿಯನ್ನು ಗಂಭೀರವಾಗಿ ಪರಿಗಣಿಸಿದ ಜಸ್ಟೀಸ್ ದೇಸಾಯಿ ಆಯೋಗ ಕಳ್ಳಭಟ್ಟಿ ದುರಂತಕ್ಕೆ ಅಂದಿನ Excise Commissioner ಮತ್ತು ಇಬ್ಬರು Deputy Commissionerಗಳನ್ನು ನೇರ ಹೊಣೆಗಾರರನ್ನಾಗಿ

ಮಾಡಿ ತೀರ್ಪಿತ್ತು ಶಾಮಣ್ಣನವರ ಸಲಹೆಯ ಮೇರೆಗೆ ಕರ್ನಾಟಕದಲ್ಲಿ ಹೊಸ ಅಬಕಾರಿ ನೀತಿಯನ್ನು ಜಾರಿಗೊಳಿಸಬೇಕೆಂದು ತೀರ್ಪು ಕೊಟ್ಟಿದೆ. ಆಯೋಗದ ತೀರ್ಪು ತಂದ ಎರಡು ವರ್ಷದ ನಂತರ ಒಮ್ಮೆ ಸಿಕ್ಕಿದ್ದ ಶಾಮಣ್ಣನವರನ್ನು "ಅಕ್ಕಿಭೋಜ" ಅಂದೋಲನ ಹೇಗೆ ನಡೆದಿದೆ ಎಂದಾಗ ಅದಕ್ಕೆ ಶಾಮಣ್ಣನವರು 'ದೊಡ್ಡ ತಲೆನೋವಾಗಿದೆ' ಎಂದು ಹೇಳಿದರು. ಏಕೆಂದರೆ ಸರ್ಕಾರಿ ಸಾರಾಯಿ ತಂದು ಕುಡಿಯುವಾಗ ಸಾಯಂಕಾಲ ಮಾತ್ರ ಕುಡಿಯುತ್ತಿದ್ದವರು ಈಗ ಮನೆಯಲ್ಲಿ ತಯಾರು ಮಾಡುತ್ತಿರುವುದರಿಂದ ೨೪ ಗಂಟೆ ಕುಡಿದು ಬಿದ್ದಿರುತ್ತಾರೆಂದು ಗೃಹಿಣಿಯರು ಶಾಪ ಹಾಕುವುದರ ಬಗ್ಗೆ ನಮಗೆ ತಿಳಿಸಿದರು. ಆಯೋಗದ ತೀರ್ಪಿನಿಂದ ಕೆಳಕಂಡ ಉಲ್ಲೇಖನಗಳು ಶಾಮಣ್ಣನವರಿಗೆ ಮತ್ತು ಸುಂದರೇಶ್‌ಗೆ ಸಂಬಂಧಿಸಿದ್ದು.

Para-23: Kadidal Shamanna (C.W.42) is an Agriculturist of Bhagavati Kere in Bhadravati Taluk. He has spoken about the pamphlet (Ex.D.55) prepared by him regarding the more and cost in preparing 'Akki Bhoja' and similar home-made liquers. According to him the cost of home-made liquor for 18ml. would be 50 paise was against the cost of Rs.550/- per similar quantity of arrack. He has stated the total prohibition is better and that the alternative would be to allow people to consume home-made liquor.

Para-25, Sri. N.D. Sundaresh (C.W.44) is a resident of Ashok Nagar in Bhadravati taluk, Shimoga Dist. He is the General Secretary of Karnataka State, Raitha Sangha. He has stated that Vokkaligas, Idigas and Harijana's drink 'Akkibhoja' while Bedats and Lambanis drink liquor prepared by jaggary and the total prohibition should be introduced giving opportunity to everybody drink liquor prepared at home.

Para -11. If persons residing in any local area are permited to prepare liquor at home for bonafide home. consumption then they could not normally adultarate it with poisonous substances and the possibility of their going in for illicit liquor will be remote. One litre of home made liquor prepared out of sweet lemon, banana and rice costs Rs.2.40 according to Sri. N.D. Sundaresh (C.W.44) According to Sri. Kadidal Shamanna (C.W.42) the cost of home

made liquor will be 0-50p for 180 ml., as against Rs.550 for similar quantity of arrack. This will be cheaper and safer for the poor people who are given to drinking. Such a provision is there in the Andhra Pradesh Excise Act (Vide Clause (3) of Section 13) and in the Kerala Abkari Act (Vide Provision to Sec.12) and the question of making such a provision in the Karnataka Excise Act deserves to be considered.

ಸಮತಾ ಸಂಘಟನೆ

೧೯೮೦ರ ಮೇ-ಜೂನ್ ತಿಂಗಳಲ್ಲಿ ಬೆಂಗಳೂರಿನಲ್ಲಿ ಸಮತಾ ಸಂಘಟನೆ ಎಂಬ ರಾಜಕೀಯ ಸಂಘಟನೆಯನ್ನು ಹುಟ್ಟುಹಾಕುವ ಒಂದು Foundation Conference ನಡೆಯಿತು. ಆ ವೇಳೆಗಾಗಲೇ ನರಗುಂದ-ನವಲಗುಂದ ರೈತರ ಹೋರಾಟವು ತೀವ್ರ ಸ್ವರೂಪ ಪಡೆದಿತ್ತು. ಮಾತೆತ್ತಿದರೆ ರೈತರ ಮೇಲೆ ಗೋಲಿಬಾರ್ ಮಾಡುವ ಪರಿಪಾಠವು ರೈತರನ್ನು ಕೆರಳಿಸಿತ್ತು. ಅಕ್ಟೋಬರ್ ೩, ೧೯೮೦ರಲ್ಲಿ ಒಂದು ಬೃಹತ್ ಕಬ್ಬು ಬೆಳೆಗಾರರ ಸಮಾವೇಶವನ್ನು ಆಯೋಜಿಸಿ ಆ ಸಭೆಗೆ ಎಂಡಿಎನ್ ಬರಬೇಕೆಂದು ಸುಂದರೇಶ್ ಮತ್ತು ಶಾಮಣ್ಣ ತಾರು ಕೊಟ್ಟರು. ಎಂಡಿಎನ್‌ರವರಿಗೆ ಆ ಸಭೆಗೆ ಹೋಗುವ ಹುಮ್ಮಸ್ಸು ಇರಲಿಲ್ಲ. ತಾರು ಬಂದಿರುವ ವಿಚಾರವನ್ನು ನನಗೆ ತಿಳಿಸಿ ತಾನು ಹೋಗುವುದಿಲ್ಲವೆಂದು ಘೋಷಿಸಿದರು. ಸಮತಾ ಸಂಘಟನೆ ಸಮ್ಮೇಳನದ ನಂತರ ನಡೆಯುತ್ತಿರುವ ಪ್ರಪ್ರಥಮ ರೈತರ ಸಮಾವೇಶ, ಯಾವ ಕಾರಣಕ್ಕೂ ತಪ್ಪಿಸಬಾರದೆಂದು ಬಲವಂತ ಮಾಡಿ ಅವರನ್ನು ಶಿವಮೊಗ್ಗಕ್ಕೆ ಕಳಿಸಿಕೊಟ್ಟೆ. ಆ ರೈತ ಸಮಾವೇಶದಲ್ಲಿ ಬೃಹತ್ ರೈತ ಶಕ್ತಿ ಪ್ರದರ್ಶನ. ಶಾಮಣ್ಣ, ಸುಂದರೇಶ್‌ರವರ ಅದ್ಭುತ ಸಂಘಟನಾ ಚಾತುರ್ಯ ಮತ್ತು ನಂಜುಂಡಸ್ವಾಮಿಯವರ ಪ್ರಚಂಡ ಮಾರ್ಗದರ್ಶನ ಕರ್ನಾಟಕ ರಾಜ್ಯ ರೈತ ಸಂಘದ ಉದಯಕ್ಕೆ ನಾಂದಿಯಾಯಿತು. ನಂತರ ರೈತ ಸಂಘ ಮಾಡಿದ ಸಾಧನೆ ಕರ್ನಾಟಕ ರಾಜಕೀಯ ಭೂಪಟವನ್ನೇ ತಲೆಕೆಳಗೆ ಮಾಡಿ ಪ್ರಪ್ರಥಮ ಕಾಂಗ್ರೆಸ್ಸೇತರ ಸರ್ಕಾರ ಅಧಿಕಾರಕ್ಕೆ ಬರಲು ದಾರಿ ಮಾಡಿಕೊಟ್ಟಿತು. ಈ ಎಲ್ಲಾ ಹಂತಗಳಲ್ಲಿ ಶಾಮಣ್ಣನವರು ಮತ್ತು ಸುಂದರೇಶ್‌ರವರು ರಾಜ್ಯದ ಮೂಲೆ ಮೂಲೆಗಳಲ್ಲಿ ರೈತರನ್ನು ಸಂಘಟಿಸಿ ರೈತ ಸಂಘದ ಬೆನ್ನೆಲುಬಾದರು.

ನಾಗಸಮುದ್ರ ಗೋಲಿಬಾರ್

ಭದ್ರಾವತಿ ತಾಲ್ಲೂಕಿನ ನಾಗಸಮುದ್ರ ಗ್ರಾಮದಲ್ಲಿ ನಿರಾಯುಧ ಅಮಾಯಕ ರೈತರ ಮೇಲೆ ಪೋಲಿಸ್ ಗೋಲಿಬಾರ್ ಮಾಡಿ ೩ ಜನ ರೈತರು ಸಾವನ್ನಪ್ಪಿದರು.

ಹ.ಬ. ವೀರಬಸಪ್ಪ ನೇತೃತ್ವದಲ್ಲಿ ನಡೆದಿದ್ದ ಅಂದೋಲನ ಹತ್ತಿಕ್ಕಲು ಪೋಲೀಸರು ಗೋಲಿಬಾರ್ ಮಾಡಿದ್ದರು. ಕೊಂದದ್ದು ಸಾಲದೆ ೩೯ ಜನ ರೈತ ನಾಯಕರನ್ನು ಸುಳ್ಳು ಆಪಾದನೆ ಮೇಲೆ ಬಂಧಿಸಿ ಜೈಲಿಗೆ ಹಾಕಿದ್ದರು. ಪೋಲೀಸರ ವಿರುದ್ಧ ವಾದ ಮಾಡಿ ಜಾಮೀನು ಕೊಡಿಸಲು ಯಾವ ವಕೀಲರೂ ಮುಂದೆ ಬರುತ್ತಿಲ್ಲ ಎಂದು ಹೇಳಿ ಎಂಡಿಎನ್‌ರವರು ನನ್ನನ್ನು ಭದ್ರಾವತಿಗೆ ಕರೆಸಿಕೊಂಡರು. ಜೈಲಿನಲ್ಲಿ ೩೯ ಸತ್ಯಾಗ್ರಹಿಗಳನ್ನು ಭೇಟಿ ಮಾಡಿ ಕೂಲಂಕುಷವಾಗಿ ಮಾಹಿತಿ ಪಡೆದು ಜಾಮೀನು ಅರ್ಜಿ ಹಾಕಿ ವಾದ ಮಾಡಿ ಭದ್ರಾವತಿ ಮ್ಯಾಜಿಸ್ಟ್ರೇಟ್ ಕೋರ್ಟಿನಿಂದ ಜಾಮೀನು ಕೊಡಿಸಿದೆ. ವಾದ ಮಾಡಿ ತೀರ್ಪು ಕೊಡುವವರೆಗೆ ಭದ್ರಾವತಿಯಲ್ಲಿಯೇ ಇದ್ದು ಅಲ್ಲಿನ ಪರಿಸ್ಥಿತಿಯನ್ನು ಅವಲೋಕಿಸಿದಾಗ ಪೋಲೀಸರ ದೌರ್ಜನ್ಯ ಎಳೆ ಎಳೆಯಾಗಿ ತಿಳಿದುಬರುತ್ತಿತ್ತು. ವಿನಾಕಾರಣ ರೈತರನ್ನು ಕೊಂದ ತಪ್ಪನ್ನು ಮುಚ್ಚಿಹಾಕಲು ಪೋಲೀಸರು ಮತ್ತು ಕಂದಾಯ ಅಧಿಕಾರಿಗಳು ಮನೆ ಮನೆಗೆ ನುಗ್ಗಿ ರೈತರನ್ನು ಸದೆಬಡಿಯುತ್ತಿದ್ದರು. ದೌರ್ಜನ್ಯಕ್ಕೆ ತುತ್ತಾದ ರೈತನು ಅರೆಸ್ಟ್ ಮಾಡಿಯಾರು ಎಂದು ಊರು ಬಿಟ್ಟು ಹೋಗಿದ್ದನು. ಆದಾಗ್ಯೂ ಪೋಲೀಸರು ಮನೆ ಮನೆಗೆ ನುಗ್ಗಿ ರೈತರನ್ನು ಶೋಧಿಸುತ್ತಿದ್ದರು. ಗಂಡಸರು ಯಾರೂ ಮನೆಯಲ್ಲಿ ಇಲ್ಲ ಎಂದು ರೈತ ಮಹಿಳೆಯರು ಗೋಳಿಟ್ಟರೂ ನಂಬದೆ ಮನೆಯೊಳಗೆ ಮಲಗಿದ್ದ ಹೆಂಗಸರ ಎದೆಯ ಮೇಲೆ ಲಾಟಿಯಿಟ್ಟು ಹೆಂಗಸರೋ ಗಂಡಸರೋ ಎಂದು ಪರೀಕ್ಷೆ ಮಾಡುತ್ತಿದ್ದರು. ಯಾರೊಬ್ಬ ಗಂಡಸರೂ ಗ್ರಾಮಕ್ಕೆ ಪ್ರವೇಶ ಮಾಡುವ ಧೈರ್ಯ ತೋರದೆ ಇದ್ದಾಗ ಶಾಮಣ್ಣನವರು ಮನೆ ಮನೆಗೆ ಹೋಗಿ ಸಾಂತ್ವನ ಹೇಳಿ ಧೈರ್ಯ ತುಂಬಿ ರೈತ ಮಕ್ಕಳನ್ನೆಲ್ಲಾ ಸಂಘಟಿಸಿ ರೈತರು ಮರಳಿ ಮನೆಗೆ ಬರುವ ಧೈರ್ಯ ತುಂಬಿದರು. ಈ ಸನ್ನಿವೇಶದಲ್ಲಿ ಶಾಮಣ್ಣನವರ ಜೊತೆ ಹಲವಾರು ಗ್ರಾಮಗಳಿಗೆ ಹೋಗಿ ಪೋಲಿಸರ ದೌರ್ಜನ್ಯಕ್ಕೆ ಸಾಕ್ಷಿಯಾದರು. ಆ ವೇಳೆಗೆ ಜಾಮೀನು ಸಿಕ್ಕಿದ್ದರ ಬಗ್ಗೆ ತೀರ್ಪು ಹೊರಬಂದು ಎಂಡಿಎನ್ ರವರು ಸುಂದರೇಶರನ್ನು ಕರೆದುಕೊಂಡು ನಾಗಸಮುದ್ರ ಗ್ರಾಮಕ್ಕೆ ಬಂದರು. ಆ ವೇಳೆಗಾಗಲೇ ರಾತ್ರಿಯಾಗಿತ್ತು. ಗೋಲಿಬಾರ್‌ಗೆ ಬಲಿಯಾದ ೩ ಜನ ರೈತರ ಮನೆಗೆ ಭೇಟಿಕೊಟ್ಟು ಸಾಂತ್ವನ ಹೇಳಿಬಂದರು. ನಟರಾಜ ಎಂಬ ೧೬ ವರ್ಷದ ಬಾಲಕ ಬಲಿಯಾದವರಲ್ಲಿ ಒಬ್ಬ. ಅವನ ಮನೆಗೆ ಹೋಗುವಾಗ ಅವನ ತಾಯಿಯ ಆಕ್ರಂದನ ನನ್ನನ್ನು ಭಯಭೀತನನ್ನಾಗಿ ಮಾಡಿತ್ತು. ಆದರೆ ನಟರಾಜನ ತಾಯಿ ಎಂಡಿಎನ್ ಮನೆಗೆ ಬಂದ ಸಮಯದಲ್ಲಿ ಮಗನನ್ನು ಕಳೆದುಕೊಂಡ ದು:ಖವನ್ನು ಮರೆತು ಕೈಮುಗಿದು ಹೇಳಿದ್ದು ನಾನು ಎಂದೂ ಮರೆಯುವುದಿಲ್ಲ. "ನಂಜುಂಡ ಸ್ವಾಮಪ್ಪ ನನ್ನ ಪಾಲಿನ ದೇವರಾಗಿ ಬಂದಿದ್ದೀಯ, ನನ್ನ ಮಗ ನಟರಾಜ ಸತ್ತಿದ್ದಕ್ಕೆ ದು:ಖವಾಗಲಿಲ್ಲ.

ಬೆಂಗಳೂರಿನಲ್ಲಿ ಕೆಲಸದಲ್ಲಿದ್ದ ದೊಡ್ಡ ಮಗ ಬಂದಿದ್ದಾನೆ. ಅವನನ್ನು ಚಳುವಳಿಗೆ ಕರೆದುಕೊಂಡು ಹೋಗು." ಎಂದಾಗ ಅಲ್ಲಿ ನೆರೆದ ಎಲ್ಲ ಜನರ ಮನ ಕಲಕಿ ಆ ಜನಶಕ್ತಿಯ ಮುಂದೆ ಯಾವುದೇ ದೌರ್ಜನ್ಯ, ಬೆದರಿಕೆ ನಿಲ್ಲುವುದಿಲ್ಲ ಎನ್ನುವ ಸಾಕ್ಷಾತ್ಕಾರ ಈ ಘಟನೆ. ಅಂತಹ ಕ್ಷಾತ್ರವನ್ನು ಬೆಳೆಸುವುದರಲ್ಲಿ ಶಾಮಣ್ಣನವರ ಪಾತ್ರ ಹಿರಿದಾದುದು.

ಕಲಾಭಿಮಾನಿ

ವೃತ್ತಿಯಿಂದ ವ್ಯವಸಾಯಗಾರರಾದರೂ ಪ್ರವೃತ್ತಿಯಿಂದ ಶಾಮಣ್ಣ ಸಂಗೀತಗಾರ. ಅದ್ಭುತವಾಗಿ ಸರೋದ್ ನುಡಿಸುತ್ತಾರೆ; ಆಲಿ ಅಕ್ಬರ್ ಖಾನ್‌ರವರ ಮೆಚ್ಚಿನ ಶಿಷ್ಯರು; ರವಿಶಂಕರ್ ಮತ್ತು ರಾಜೀವ್ ತಾರಾನಾಥ್‌ರವರ ಸಹಪಾಠಿ; ಸಂಗೀತವನ್ನೇ ಒಂದು ವೃತ್ತಿ ಮಾಡಿಕೊಳ್ಳದೆ ವ್ಯವಸಾಯಕ್ಕೆ ಮನಸೋತವರು. ೧೯೮೭ರಲ್ಲಿ ರೈತ ಸಂಘದಿಂದ ಉಚ್ಚಾಟನೆಗೊಂಡ ಮೇಲೆ ಶಾಮಣ್ಣ ಸುಂದರೇಶ್‌ರವರಿಂದ ದೂರವಾಗಿ ನನ್ನ ವಕೀಲಿ ವೃತ್ತಿಯಲ್ಲಿ ಮಗ್ನನಾಗಿದ್ದೆ. ನಂತರ ಆ ವೇಳೆಯಲ್ಲಿ ಇನ್ನೊಂದು ರೈತ ಸಂಘ ಸ್ಥಾಪನೆಗೆ ೧೭ ಜನ ಉಚ್ಚಾಟಿತ ರೈತ ನಾಯಕರ ಒತ್ತಾಯವಿದ್ದಾಗ್ಯೂ ಅವರ ಮನವೊಲಿಸಿ ರೈತ ಸಂಘ ಒಡೆದು ಹೋಳಾಗುವುದನ್ನು ತಪ್ಪಿಸಿದ್ದೆ. ನಂತರ ಶಾಮಣ್ಣನವರನ್ನೂ ರೈತ ಸಂಘದಿಂದ ಅಮಾನತ್ತು ಮಾಡಲಾಯಿತು ಎಂದು ಕೇಳಿ ತಬ್ಬಿಬ್ಬಾದೆ. ನೇರವಾಗಿ ಭಗವತೀಕೆರೆಗೆ ಹೋಗಿ ಶಾಮಣ್ಣನವರಿಗೆ ಸಮಾಧಾನ ಮಾಡಲು ಹೋಗಿದ್ದೆ. ಆಗ ನಾನು ಕರ್ನಾಟಕದ ರಾಜ್ಯದ ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷನಾಗಿದ್ದೆ. ಶಾಮಣ್ಣನವರ ಹೃದಯವಂತಿಕೆ ಎಂತಹುದೆಂದರೆ ಅಮಾನತ್ತಾದ ಬಗ್ಗೆ ಒಂದು ಮಾತೂ ಆಡದೆ ಉಚ್ಚಾಟಿಸಿದವರ ವಿರುದ್ಧ ಎಳ್ಳಷ್ಟೂ ಆಕ್ರೋಶ ತೋರದೆ ಸ್ಥಿತಪ್ರಜ್ಞರಂತೆ ಮೌನವಾಗಿದ್ದರು. ಶ್ರೀದೇವಿಯವರ ಆತಿಥ್ಯದಲ್ಲಿ ಊಟ ಮಾಡಿದ ನಂತರ ವಿಚಾರ ಪ್ರಸ್ತಾಪ ಮಾಡೋಣವೆಂದರೆ ಶಾಮಣ್ಣನವರು ಮಾತನಾಡದೆ ಕೈಯಲ್ಲಿ ಸರೋದ್ ಹಿಡಿದು ರಾತ್ರಿಯೆಲ್ಲಾ ಸರೋದ್ ನುಡಿಸಿ ತಮ್ಮ ನೋವನ್ನು ತೋಡಿಕೊಂಡರು. ತಾವು ಸಂಘಟನೆಗೆ ಆಹ್ವಾನಿಸಿದವರೇ ತಮ್ಮನ್ನು ಅಮಾನತ್ತುಗೊಳಿಸಿದವರ ವಿರುದ್ಧ ಬೇರೆ ಯಾರಾದರು ಆಗಿದ್ದರೆ ಕ್ರಾಂತಿ ಕಹಳೆಯನ್ನೇ ಮೊಳಗಿಸುತ್ತಿದ್ದರು. ಆದರೆ ಶಾಮಣ್ಣನವರು ಮಾತ್ರ ಶಾಂತಿ, ಸಹನೆ ಮತ್ತು ಶಿಸ್ತಿನ ಪ್ರತಿರೂಪ. ಏಕೆಂದರೆ ಅವರು ಕೇವಲ ವ್ಯಕ್ತಿಯಲ್ಲ, ಅವರೇ ಒಂದು ಸಂಘ ಶಕ್ತಿ. ಅವರಿಲ್ಲದ ರೈತ ಸಂಘವನ್ನು ಊಹಿಸಿಕೊಳ್ಳಲೂ ಸಾಧ್ಯವಿಲ್ಲ.

ಸ್ಪಟಿಕದಷ್ಟು ಶುದ್ಧ ಸಮಾಜವಾದಿ

ಕರ್ನಾಟಕದ ಸಮಾಜವಾದಿಗಳಲ್ಲಿ ರಾಜಕಾರಣಕ್ಕೆ ಬಂದವರಿಗಿಂತಲೂ ರಾಜಕೀಯದಿಂದ ಹೊರಗುಳಿದವರೇ ಜಾಸ್ತಿ. ಮೊದಲನೆ ವರ್ಗದಲ್ಲಿ ಶಾಂತವೇರಿ

ಗೋಪಾಲಗೌಡ, ಎಸ್. ಬಂಗಾರಪ್ಪ, ಜೆ.ಹೆಚ್. ಪಟೇಲ್, ಸಿದ್ದರಾಮಯ್ಯ, ಎಂ.ಪಿ. ಪ್ರಕಾಶ್, ಕಾಗೋಡು ತಿಮ್ಮಪ್ಪ, ಬಿ. ಕೃಷ್ಣಪ್ಪ, ಬಿ.ಆರ್. ಪಾಟೀಲ್, ನಜೀರ್‌ಸಾಬ್, ಜಗಳೂರು ಮಹಮದ್ ಇಮಾಮ್, ಎಂ.ಡಿ. ನಂಜುಂಡಸ್ವಾಮಿ, ಅಜೀಜ್‌ಸೇಟ್, ಕೆ. ಕೆಂಚಪ್ಪ, ಎಸ್. ಶಿವಪ್ಪ, ಎಂ.ಪಿ. ಈಶ್ವರಪ್ಪ, ಕೋಣಂದೂರು ಲಿಂಗಪ್ಪ, ಮುಂತಾದವರಿದ್ದಾರೆ. ಎರಡನೆಯ ವರ್ಗದಲ್ಲಿ ದೇವನೂರು ಮಹದೇವ, ಪೂರ್ಣಚಂದ್ರ ತೇಜಸ್ವಿ, ಕೆ. ರಾಮದಾಸ್, ಪಿ. ಲಂಕೇಶ್, ಎನ್. ಡಿ. ಸುಂದರೇಶ್, ಕಡಿದಾಳ್ ಶಾಮಣ್ಣ, ಮುಂತಾದವರಿದ್ದಾರೆ. ಮೊದಲನೆ ವರ್ಗದಲ್ಲಿ ಶಾಂತವೇರಿ ಗೋಪಾಲಗೌಡರ ಉಗ್ರ ಸಮಾಜವಾದದ bench mark ಉಳಿದವರಿಗೆ ದಾಟಲು ಕಷ್ಟವಾಗಿದೆ. ಬದಲಾಗಿ ಎರಡನೆಯ ವರ್ಗದಲ್ಲಿ ಒಬ್ಬರಿಗಿಂತ ಒಬ್ಬರು ಮಾದರಿ ಸಮಾಜವಾದಿಗಳಿದ್ದಾರೆ ಅಂದರೆ ಅತಿಶಯೋಕ್ತಿಯಾಗಲಾರದು. ಆ ದೃಷ್ಟಿಯಲ್ಲೂ ಕಡಿದಾಳ್ ಶಾಮಣ್ಣನವರು ಯಾರಿಗೂ ಕಮ್ಮಿಯಿಲ್ಲದಂತಹ ಸ್ಪಟಿಕದಷ್ಟು ಶುದ್ಧ ಸಮಾಜವಾದಿಯೆಂದು ಹೇಳಬಹುದು. ಎಲ್ಲರಿಗಿಂತ ಹೆಚ್ಚು ಕ್ರಿಯಾಶೀಲರಾಗಿ ನಿರಂತರವಾಗಿ ರಚನಾತ್ಮಕ ಕಾರ್ಯದಲ್ಲಿ ತೊಡಗಿಕೊಂಡಿರುವುದು ಅಪರೂಪದ ಗುಣ. ಪ್ರತಿಭಟನೆಯಲ್ಲಂತೂ ತಮ್ಮ ಬಂಧುಬಳಗದವರನ್ನು ಬಿಡದೆ ಕಾಡಿದ ಏಕೈಕ ಸಮಾಜವಾದಿಯೆಂದರೆ ಶಾಮಣ್ಣ.

ಸಮಾಜವಾದಿಗಳ ರಾಜಕೀಯದಿಂದ ಹೊರಗುಳಿಯುವಿಕೆ?

ಡಾ॥ ರಾಮಮನೋಹರ ಲೋಹಿಯಾ ಮತ್ತು ಜಯಪ್ರಕಾಶ್ ನಾರಾಯಣರು ತಾತ್ವಿಕ ಕಾರಣಗಳಿಗಾಗಿ ಸಂವಿಧಾನ ರಚನಾ ಸಭೆಗೆ ಸ್ಪರ್ಧಿಸಲಿಲ್ಲ. ಗಾಂಧಿ ಮತ್ತು ಪೆರಿಯಾರ್ ಸಹ ಹೊರಗುಳಿದರು. ನನ್ನನ್ನು ನಿರಂತರವಾಗಿ ಕಾಡುತ್ತಿರುವ ಪ್ರಶ್ನೆಯೆಂದರೆ ಇವರೆಲ್ಲಾ ಸಂವಿಧಾನ ರಚನಾ ಸಭೆಯಲ್ಲಿ ಭಾಗವಹಿಸಿದ್ದಿದ್ದರೆ ನಮ್ಮ ಸಂವಿಧಾನ ಗುಣಾತ್ಮಕವಾಗಿ ಭಿನ್ನವಾಗಿರುತ್ತಿತ್ತಲ್ಲವೇ? ಅದಕ್ಕಿಂತಲೂ ಹೆಚ್ಚಿನ ವಿಚಾರವೆಂದರೆ ಬಾಬಾಸಾಹೇಬ್ ಅಂಬೇಡ್ಕರ್ ಅನುಭವಿಸಿದ ಒಂಟಿತನ ಮತ್ತು ಅಸಹಾಯಕತೆಗೆ ಬದಲಾಗಿ, ಅಲ್ಪಸಂಖ್ಯಾತರಾಗಿದ್ದರೂ ಇದೊಂದು ginger group ಆಗಿ ಕೆಲಸ ಮಾಡಿ ಬಹುಸಂಖ್ಯಾತರ ಸೋಗಲಾಡಿತನ ಕಟ್ಟಿಹಾಕಿ ಇನ್ನೂ ಪ್ರಗತಿದಾಯಕವಾದ ಸಂವಿಧಾನವನ್ನು ಕೊಡುತ್ತಿರಲಿಲ್ಲವೆ?

ಗ್ರಾಮೀಣ ಬದುಕನ್ನು ನಿರ್ಲಕ್ಷಿಸಿದಾಗ ಕೆಂಗಲ್ ಹನುಮಂತಯ್ಯ ಅಂದು ಹೇಳುತ್ತಿದ್ದರು – "ಭಾರತೀಯ ವೀಣಾವಾದನ ಬಯಸಿದ ಜನತೆಗೆ ಇಂಗ್ಲೀಷ್ ಬ್ಯಾಂಡ್‌ಸೆಟ್ಟ ಸಂಗೀತ ಉಣಬಡಿಸಿದ್ದೀರಿ" ಆ ದೃಷ್ಟಿಯಲ್ಲಾದರೂ ಸಂವಿಧಾನ ಇನ್ನೂ ಹೆಚ್ಚಿನ ರೀತಿಯಲ್ಲಿ ಭಾರತೀಯತೆಯನ್ನು ಪ್ರದರ್ಶಿಸಿ ಇಲ್ಲಿನ ಸಮಸ್ಯೆಗಳಿಗೆ ಸ್ಪಂದಿಸಬಹುದಾದ ನ್ಯಾಯಾಂಗ, ಶಾಸಕಾಂಗ ಮತ್ತು ಕಾರ್ಯಾಂಗವನ್ನು

ಸೃಷ್ಟಿಸುತ್ತಿರಲಿಲ್ಲವೇ? ಲೋಹಿಯಾರವರ ಸಂವಿಧಾನ ಸಭೆ ಬಹಿಷ್ಕಾರದಿಂದ ಭಾರತಕ್ಕೆ ತುಂಬಲಾರದ ನಷ್ಟವಾಯಿತು. ನಂತರದ ಅವರ ಉಗ್ರ ಹೋರಾಟ ಕೂಡ ವ್ಯರ್ಥವಾಯಿತು. ಆ ಕಾರಣಕ್ಕಾಗಿಯೇ ಓಟು, ಜೈಲು ಮತ್ತು ರಚನಾತ್ಮಕ ಕೆಲಸ ಎಂಬ ಕಾರ್ಯ ಮಂತ್ರವನ್ನು ಪ್ರಧಾನವಾಗಿ ಪ್ರತಿಪಾದಿಸಿದರೆಂದು ಕಾಣುತ್ತದೆ. ಈ ಮಾತು ಹೇಳುವುದಕ್ಕೆ ಕಾರಣವೇನೆಂದರೆ ದೇವನೂರ್ ಮಹದೇವ, ಪೂರ್ಣಚಂದ್ರ ತೇಜಸ್ವಿ, ಕೆ. ರಾಮದಾಸ್, ಕಡಿದಾಳ್ ಶಾಮಣ್ಣನವರೂ ಸಹ ಇದೇ ರೀತಿ ರಾಜಕೀಯದಿಂದಲೂ, ಅಧಿಕಾರದಿಂದಲೂ ಹೊರಗುಳಿಯದೇ ಭಾಗವಹಿಸಿದ್ದರೆ ಕರ್ನಾಟಕದ ಜನತೆಗೆ ಅವರು ಪ್ರತಿಪಾದಿಸಿದ ಆದರ್ಶಗಳಿಂದ ಆಡಳಿತ ಮತ್ತು ರಾಜಕೀಯಕ್ಕೆ ಹೊಸ ಮೌಲ್ಯ ಕೊಡಬಹುದಾಗಿತ್ತೇನೋ ಎಂದು ಒಂದು ಅನಿಸಿಕೆ. ಗೋಪಾಲಗೌಡರ ಗರಡಿಯಲ್ಲಿ ಪಳಗಿ, ವಿಚಾರವಾದದ ಕ್ರಾಂತಿಯಲ್ಲಿ ಬೆಳಗಿ, ರೈತ ಸಂಘದ ರೂವಾರಿಯಾಗಿ ರಚನಾತ್ಮಕ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ಹಮ್ಮಿಕೊಂಡ ಅಪಾರ ಅನುಭವವುಳ್ಳ ಮತ್ತೊಬ್ಬ ಸಮಾಜವಾದಿ ಈ ರಾಜ್ಯಕ್ಕೇ ಏಕೆ, ಇಡೀ ಸಮಾಜವಾದಿ ಚಳುವಳಿಗೆ ಕೊನೆಯ ಕೊಂಡಿ ಕಡಿದಾಳ್ ಶಾಮಣ್ಣ.

ಮರೆತು ಬದುಕಲು ಬಹುದೆ ಕಡಿದಾಳ ಜೋಗಿಯೆಂಬ ಲೋಕ ಗುರುವ!

ಹಿ.ಶಿ.ರಾಮಚಂದ್ರೇಗೌಡ

ರೈತ ನಾಯಕರು ಸತ್ತರು. ಆ ದಾರಿಯಲ್ಲಿ ನಿಷ್ಠೆಯಿಂದ ನಡೆಯುತ್ತಿರುವವರೂ ಇದ್ದಾರೆ! ಆದರೆ, ಈ ಚಿರಂಜೀವಿ ರೈತ ಜೋಗಿ ಮಾತ್ರ ರೈತ ಮನಸ್ಸಿನೊಂದಿಗೇ ನಡೆ ದಾಡುತ್ತಿದ್ದಾರೆ; ರೈತ ಕರ್ನಾಟಕವನ್ನು ನಡೆಸಲೇ ಬೇಕೆಂದು. ಕಾಣೆ, ಏನು ಮಾಡುತ್ತಾರೊ, ಹೇಗೆ ಮಾಡುತ್ತಾರೊ...

ನಾಯಕನಾಗಲೊಲ್ಲೆ ನ್ಯಾಯಿಯೇ ಆಗುತ್ತೇನೆಂದು; ಬಿಜ್ಜಳನಾಗಲೊಲ್ಲೆ ಬಸವನೇ ಆಗುತ್ತೇನೆ; ಲಿಂಗಿಯಾಗ ಲೊಲ್ಲೆ ಜಂಗಮನೇ ಆಗುತ್ತೇನೆನ್ನುವುದಿದೆಯಲ್ಲ– ಇಪ್ಪತ್ತು ಇಪ್ಪತ್ತೊಂದನೆಯ ಮದಿಸಿದ ಮುದಿನಾಯಕತ್ವ ಜಗತ್ತಿಗೇ ಸಡ್ಡು ಹೊಡೆದಂತೆ ನಾಯಕ ಬಾಸ್ ಆದರೆ ಅವನ ಹಿಂಬಾಲಕರು ಸತ್ತಂತೆ, ನಾಯಕ ಗಾಂಧಿಯೆ ಆದರೆ ದೇಶಕ್ಕೆ, ಜನರಿಗೆ ಪ್ರಜಾಸತ್ತಾತ್ಮಕ ಬಾಳು ಸಿಗುತ್ತದೆ. ಅಷ್ಟೆಂದು ಹೇಳಲೆ ಈ ಶಾಮಣ್ಣನನ್ನು...

ಒಬ್ಬನಿಗೆ ಬಹುವಚನ ಇತ್ತೀಚಿನ ದಿನಗಳಲ್ಲಿ ಬಹಳ ದುಬಾರಿಯಾಗುತ್ತಿದೆ. ರಾಜಕೀಯದಲ್ಲಂತೂ ಅದು

ಗೆದ್ದವನ ಪರ-ಸಾಮಾನ್ಯನ ಪತನ. ಬಹುಜನರಲ್ಲಿ ಬಹುಜನನಾಗಿ ಬದುಕುವ ಪರಮ ಸುಖ, ಪರಮ ಸ್ವಾತಂತ್ರ್ಯ ಎನುವುದಿದೆಯಲ್ಲ- ಅದೇ ಶಾಮಣ್ಣ ಎನ್ನಬಹುದೆ? ಸಿದ್ಧಾಂತದಿಂದ ಬಿಗಿದುಕೊಂಡವನಿಗೆ ಈ ಶಾಮಣ್ಣ ಹುಟ್ಟುತ್ತ-ಬೆಳೆಯುತ್ತ ಒಂದೇ ಥರ ಇದಾನಲ್ಲ, ತಾನು ಕಟ್ಟಿದ ಮನೆಗೆ ಯಜಮಾನನಾಗಲು ಏನು ದಾಡಿ ಎನಿಸದಿರದು, ಎಲ್ಲವನ್ನೂ ಎಲ್ಲರನ್ನೂ ಸಿದ್ಧಾಂತದ ಒಳಗೆ ಅಭಿವೃದ್ಧಿ ಬಲೆಯಲ್ಲಿ ಸಿಕ್ಕಿಸಿಕೊಂಡ ನಮಗೆ. ಆದರೆ ಈ 'ಶ್ಯಾಮ' ಯಾರ ಕೈಗೂ ಸಿಗುತ್ತಿಲ್ಲವಲ್ಲ! ಇದೇ ಶಾಮಣ್ಣನಾ- ಯಜಮಾನಿಕೆಯ ಕೈಯಲ್ಲಿ ಜೀವಂತವಾಗಿರಲು ಸಾಧ್ಯವಾಗದ್ದು ಅಲ್ಲಿಂದ ನುಣುಚಿಕೊಂಡು ಜನರತ್ತ ಸಾಗುತ್ತದೆ; ಅಕ್ಷರ ಬಂಧನಕ್ಕೆ ಸಿಗದ್ದು ಮೌಖಿಕತೆಗೆ ಜಾರಿಕೊಂಡು ಜಣಜಣ ಎನ್ನುವಂತೆ – ಹೀಗೇ ಇರಬೇಕು ಈ ಹೊತ್ತಿನ ಶ್ಯಾಮ.

ಒಂದು ಟೆಕ್ಸ್ಟ್ ಥರ ಶಾಮಣ್ಣನ ಬಗ್ಗೆ ಹೇಳಿದರೆ ಮೇಲ್ವರ್ಗ- ಮೇಲ್ಜಾತಿಗಳು, ಆರ್ಥಿಕ-ಸಾಂಸ್ಕೃತಿಕ ಟೆಕ್ಸ್ಟ್ ಮಾಡಿಕೊಂಡು ಸಾಮಾನ್ಯರಿಗೆ ಅಪರಾಧಿಗಳಾಗಿ ಕಂಡಂತೆ ನಮಗೂ ಕಾಣಬಹುದಿತ್ತೇನೊ, ಇಲ್ಲ ಸಂಘಟನೆಯೊಳಗೆ ನಾಯಕನೊಬ್ಬನ ಸಾವು ಆಗಿರುತ್ತಿತ್ತೇನೊ- ಹಾಗಾಗದೆ, ಕೋಟ್ಯಾಂತರ ಜನ, ಲಕ್ಷಾಂತರ ಸಂಘಟನೆಗಳು, ಸಾವಿರಾರು ಸಂಸ್ಥೆಗಳು, ಮೇಲೆ ಮುನ್ನೂರ ಮುವತ್ತು ಕೋಟಿ ದೇವತೆಗಳು – ಈ ಎಲ್ಲಿಯೂ ಸಿಗದ, ಎಲ್ಲೆಂದರಲ್ಲಿ ಎಲ್ಲರೊಳಗೂ ಕಾಣುವ ಶ್ಯಾಮ ಆಕಾಶದಂತೆ, ಬೀದಿಗೆ ಬಂದ ಬಸವಣ್ಣನಂತೆ, ದಾರಿ ಸಿಕ್ಕಲೆಲ್ಲ ನಡೆದುಹೋದ ಸರ್ವಜ್ಞನಂತೆ, ಯಾರೂ ನಿರ್ಬಂಧಿಸಲಾಗದ ಅಲೆಮಾರಿಯಂತೆ ತಾನೇ ತಾನಾಗುವ ಪರಿ ಚೋಜುಗವೂ ಹೌದು.

ಒಬ್ಬ ಕಮ್ಯೂನಿಸ್ಟ್ ಹೇಳಿದರು; 'ಆ ಶಾಮಣ್ಣನಾ? ಎಲ್ಲೂ ಇಲ್ಲ, ಇದ್ದಾನೆ' ಅಂತ ಅಂದರು. ನನಗೆ ಖುಷಿಯಾಯಿತು. ಅಂದರೆ ಈ ಮನುಷ್ಯ ಒಂದು ಕಡೆ ಫಿಕ್ಸ್ ಆಗಿಲ್ಲ ಭೂಮಿಯಂತೆ ತಿರುಗುತ್ತಲೆ, ಗಾಳಿಯಂತೆ ಚಲಿಸುತ್ತಲೆ ನಿರಂತರತೆಯಲ್ಲಿ ಇದ್ದಾನೆ ಅಂತ. ಚಳುವಳಿಗಳು ತುಂಡಾಗುತ್ತಿವೆ, ವ್ಯಕ್ತಿತ್ವಗಳು ತೂತಾಗುತ್ತಿವೆ. ಈ ಶಾಮಣ್ಣ ಮಾತ್ರ ಪುರಾತನ (ರೈತ)ನಂತೆ ಪುರಾಣವಾಗುತ್ತ, ಕತೆಯಾಗುತ್ತ ಮತ್ತೆ ಮತ್ತೆ ಅಸಲಿಯಾಗೇ ಕಾಣುತ್ತಾರೆ; ಯಾವೊಂದು ಬಗೆಯ ಕ್ಯಾಪ್ಸೂಲ್ ಆವರಿಸಿ ಕಳಚಿಕೊಳ್ಳುವುದೂ ಕಷ್ಟ, ಸಮೂಹ ಪ್ರಕ್ರಿಯೆಯಾಗುವುದು ಆಗದ ಮಾತು. ಶಾಮಣ್ಣ ಬಹುಮುಖತೆಯಲ್ಲಿರುವುದು, ಮತ್ತೂ ಮತ್ತೂ ಮಾತುಕತೆಯಾಗುವುದು ಅವರ ವ್ಯಕ್ತಿತ್ವದ ಅಚ್ಚರಿಯೆ ಇರಬೇಕು!

ನೀವು ಏನೇ ದಾಖಲೆ ಮಾಡಿ ಬರವಣಿಗೆಗೆ ಸಿಗುವವರು ಕ್ಷಣಿಕರು. ಬದುಕಿನೊಳಗಿರುವವರು ದೊಡ್ಡವರು. ಇವರನ್ನು ಓದಿ ಮುಗಿಸಲಾಗುವುದಿಲ್ಲ ನೋಡಿ. ಅವರು

ನಮ್ಮೊಳಗೂ, ನಿಮ್ಮೊಳಗೂ ಗಾಂಧಿಯಂತೆ, ಮಂಡೇಲಾನಂತೆ, ಅಂಬೇಡ್ಕರ್ ಅಂತೆ, ಲೋಹಿಯಾ ಥರ ಇದ್ದಾರೆ, ಇರುತ್ತಾರೆ. ಬದುಕುವುದೆಂದರೆ ಹೀಗೇ ಇರಬೇಕು? ಶಾಮಣ್ಣನನ್ನೂ ಇಲ್ಲಿ ಸೇರಿಸಬಹುದೆ, ಅದೇ ಪಥಿಕನೆ...

ಯು.ಆರ್. ಅನಂತಮೂರ್ತಿಯವರು ರಾಜ್ಯೋತ್ಸವ ಪ್ರಶಸ್ತಿ ಆಯ್ಕೆ ಸಮಿತಿಯ ಅಧ್ಯಕ್ಷರಾಗಿದ್ದರು. ನನ್ನನ್ನು ಕರೆದು, "ನೋಡಿ, ಶಾಮಣ್ಣಗೆ ಸಿಕ್ಕಿದೆಯಾ" ಅಂದರು. "ಕೊಡ್ತೀವಿ ಅಂದ್ರೆ ಬೇಡ ಅಂದರು" ಅಂತ ಸಂಸ್ಕೃತಿ ಇಲಾಖೆಯಿಂದ ಉತ್ತರ. 'ಏನ್ರಿ ಯಾರ ಹಿಡಿಗೂ ಸಿಗುವುದಿಲ್ಲ ಈ ಮನುಷ್ಯ' ಅಂದರು. ಹೀಗೆ ದಾಖಲಿಸಿದರೆ, ಶಾಮಣ್ಣ ಮುಗಿದು ಹೋಗುವರೆ? ಈ ಸಾರಿಯ ದಸರಾ ಉದ್ಘಾಟನೆ ಮಾಡಿ ಎಂದು ಕೇಳಿದರೆ ವಿಧಾನಸೌಧದ ಕಸ ಗುಡಿಸಲು ಹೇಳಿ ಮಾಡುತ್ತೇನೆ ಎಂದರಲ್ಲ. ಈ ಬದುಕು ಯಾವ ದಾಖಲೆಗೆ ಸಿಗುತ್ತದೆ? ಯಾರ ದಾಖಲೆಗೆ ಸಿಗುತ್ತದೆ? ಕೆಲವರು ಹೇಳುತ್ತಾರೆ ಇದನ್ನೆಲ್ಲ ಚಿತ್ರಗುಪ್ತ ಬರೆದುಕೊಳ್ಳುತ್ತಾನೆ ಅಂತ. ಅವನು ಹುಚ್ಚನಿರಬೇಕು!

ನಿಜವಾಗಿ ಹೇಳಬೇಕೆಂದರೆ ನನಗೆ ಶಾಮಣ್ಣ ಇನ್ನೂ ತಿಳಿಯಬೇಕಿದೆ. ಇದ್ಯಾವ ಪರಿ ಶಾಮಣ್ಣ; ನಗುನಗುತ್ತಲೆ ಬದುಕುತ್ತೀರಿ, ನಡೆದಾಡುತ್ತಲೆ ಇರುತ್ತೀರಿ, ಹತ್ತಿರದವರಿಗೆ ಮತ್ತೂ ಹತ್ತಿರ, ನಿಮಗೆ ದೂರವೇ ಇಲ್ಲವಲ್ಲ. ನೀವು ಯಾತರವರು ಎಂಬುದೂ ಗೊತ್ತಾಗುವುದಿಲ್ಲ. ಜಾತಿಯಿಲ್ಲ ಕುಲವಿಲ್ಲ ಹತ್ತಿರದವರಿಗೆ ರೈತ, ದೂರದವರಿಗೆ ಶಾಲು ಸಾಬಿ. ಇನ್ನೂ ಆಚೆಯವರಿಗೆ ಅಜ್ಜನಾದ ಯುವಕ. ಎಲ್ಲರನ್ನೂ ಪ್ರೀತಿಸಲೆಂದೆ, ಎಲ್ಲರೂ ಪ್ರೀತಿಸಲೆಂದೆ ಹುಟ್ಟಿ ನಡೆದಾಡುತ್ತಲೇ ಇರುವ – ಮತ್ತೇನು ಹೇಳುವುದಿದೆ– ನವ ನವೋನ್ಮೇಷಶಾಲಿನಿ–ಚಿರಂಜೀವಿ.

ಶಾಮಣ್ಣನ ಕಕ್ಕಸ್ ಮನೆ...

ಕೃಪಾಕರ–ಸೇನಾನಿ

ಬ್ಯಾಂಕ್ ಮೇನೇಜರ್ ಕೊಠಡಿಯ ಬಾಗಿಲು ಸರಿಸಿದ ಅಟೆಂಡರ್: "ಸಾರ್....... ಯಾರೋ ರೈತ ಸಂಘದವರು ಬಂದಿದ್ದಾರೆ."

ಮೇನೇಜರ್ : ಬರಕ್ಕೇಳು

(ಬಿಳಿ ಜುಬ್ಬ, ಪಯಿಜಾಮ, ಕತ್ತಿಗೆ ಹಸಿರು ಟವಲ್ ಸುತ್ತಿಕೊಂಡಿದ್ದ ಬಿಳಿ ಗಡ್ಡಧಾರಿಯೊಬ್ಬರು ಆಗಮಿಸುತ್ತಾರೆ.)

ಮೇನೇಜರ್ : ಬನ್ನಿ ಕುಳಿತುಕೊಳ್ಳಿ (ಎಂದು ಕನ್ನಡಕದ ಗಾಜಿನೊಳಗಿನಿಂದ ಲೆಕ್ಕ ಪತ್ರದ ಹಾಳೆಗಳನ್ನು ನೋಡುತ್ತಾ..) ಏನ್ ಆಗ್ಬೇಕು ಹೇಳಿ........

ಶಾಮಣ್ಣ : ಒಂದು ಒಳ್ಳೆ ಯೋಜನೆ ಹಾಕಂಡಿದ್ದೀನಿ. ನಿಮ್ಮ ಸಹಕಾರ ಬೇಕು.

ಮೇನೇಜರ್ : ಹೇಳಿ.

ಶಾಮಣ್ಣ : ಇದಕ್ಕೆ ನೀವು ಸಾಲ ಮಂಜೂರು ಮಾಡ್ಬೇಕು.

ಮೇನೇಜರ್ : Project proposal ತಂದಿದ್ದೀರ?

ಶಾಮಣ್ಣ : ನಮ್ಮ ಹಳ್ಳೀಲಿ ಪ್ರತಿ ಮನೆಗೆ ಕಕ್ಕಸ್ ಮನೆ ಕಟ್ಟಬೇಕು....... ಅದಕ್ಯಾಕ್ರಿ project proposal?

ಮೇನೇಜರ್ : ನಮ್ಮಲ್ಲಿ ಅಂತಾ ಸ್ಕೀಂಗಳೆ ಇಲ್ಲವಲ್ಲ.

ಶಾಮಣ್ಣ : ಅಲ್ರಿ ನಿಮ್ ಬ್ಯಾಂಕ್ ಕೆಲಸ ಏನ್ರಿ..

ಸಾಲ ಕೊಡದು ಬಡ್ಡಿ ಜೊತೆ ಅಸಲು ವಸೂಲಿ ಮಾಡದು. ಸಾಲ ಕೊಡಿ ಜನ ಕಟ್‌ಕಂಡ್ ಹೋಗ್ತರೆ. ಅದಕ್ಕೆಂತದ್ರಿ ಸ್ಕೀಮು.

ಮೇನೇಜರ್ : ಸಾರ್ ಶೌಚಾಲಯಕ್ಕೆ ಸಾಲ ಕೊಡದು ಹೇಗೆ? ಶೂರಿಟಿ ಏನ್ ಸಾರ್......

ಶಾಮಣ್ಣ : ೧೦೦% ಶೂರಿಟಿ ಇದೆಯಲ್ರಿ.

ಮೇನೇಜರ್ : ಶೂರಿಟಿ ಬಿಡಿ ಸಾರ್. ಶೌಚಾಲಯದಲ್ಲಿ ಏನ್ income generate ಆಗುತ್ತೆ? returns ಹೇಗೆ ಸಾರ್?

ಶಾಮಣ್ಣ : ಒಳ್ಳೆ ಕಥೆ ಆಯ್ತಲ್ರಿ. returns ಅಂದ್ರೆ ದಿನಾ ಅವರು ಹುಂಡಿಗೆ ಹಾಕ್ತಾರಲ್ರಿ ಅದೇ returns.

ಮೇನೇಜರ್ : ನೀವು ಹೇಳಿದ್ದು ನನಗೆ ಅರ್ಥ ಆಗ್ತಿಲ್ಲ. ಅವರು ಬಡ್ಡಿ ಹೇಗೆ ಕಟ್ತಾರೆ. ಅದಕ್ಕೇನು ಗ್ಯಾರಂಟಿ ಹೇಳಿ.

ಶಾಮಣ್ಣ : ಇದಕ್ಕಿಂತ ಶೂರಿಟಿ ಇರೊ ಯೋಜನೆ ಪ್ರಪಂಚದಲ್ಲಿ ಎಲ್ರಿ ಇದೆ?

ಮೇನೇಜರ್ : ಸ್ವಲ್ಪ detail ಆಗಿ ಹೇಳಿ ಸಾರ್. ಅವರು payment ಹೇಗೆ ಮಾಡ್ತಾರೆ ಅಂತ.

ಶಾಮಣ್ಣ : ರೀ ದಿನಾ ಬೆಳಿಗ್ಗೆ ತಪ್ಪದೆ ನಿಮ್ಮ ಗೋಲಕಕ್ಕೆ ಬಡ್ಡಿ ಹಾಕ್ಲೇ ಬೇಕಲ್ರಿ. ವಿಧಿ ಇಲ್ದೆ.

ಮೇನೇಜರ್ : ಸ್ವಲ್ಪ ಬಿಡಿಸಿ ಹೇಳಿ ಸಾರ್.

ಶಾಮಣ್ಣ : ನೋಡ್ರಿ, ನೀವು ಕಟ್ಟಿಸಿಕೊಡೊ ಕಕ್ಕಸ್‌ಮನೆಯಲ್ಲಿ ಪಿಟ್ ಇರುತ್ತಲ್ಲ. ದಿನಾ ಬೆಳಿಗ್ಗೆ ಮನೆಯವರೆಲ್ಲ ಪಾಯಿಖಾನೆ ಹಾಕ್ಲೇಬೇಕು. ತಪ್ಸಂಗೆ ಇಲ್ಲವಲ್ಲ.
ವರ್ಷದ ಕೊನೆಗೆ ಅದನ್ನೆಲ್ಲ collect ಮಾಡಿದ್ರೆ ನಿಮ್ಮ ಅಸಲು ಬಡ್ಡಿ ಎಲ್ಲ ಒಟ್ಟಿಗೆ ಬಂದ್ ಬಿಡುತ್ತಲ್ಲ. ಅದರಲ್ಲಿ ಬ್ಯಾಂಕ್ ದೇಣಿಗೆ ಇಟ್ಕಂಡು, ಉಳಿದದ್ದನ್ನ ರೈತ್ರಿಗೆ ಕೊಟ್ರಾಯ್ತು.

ಮೇನೇಜರ್ : ಏನ್ ಹೇಳ್ತಿರ ಸಾರ್. ಅದೇನು ಮಾರ ಪದಾರ್ಥನ? ಚಿನ್ನನೊ ಬೆಳ್ಳಿನೊ ಅನ್ನು ತರ ಮಾತಾಡ್ತಿರಲ್ಲ.

ಶಾಮಣ್ಣ : ಸರಿ ಹೇಳಿದ್ರಿ ಕಣ್ರಿ. ಇದಕ್ಕಿರೊ ಡಿಮಾಂಡ್ ಚಿನ್ನಕ್ಕೂ ಇಲ್ಲ.

ಮೇನೇಜರ್ : ಸ್ವಲ್ಪ logical ಆಗಿ ಮಾತಾಡಿ ಸಾರ್.

ಶಾಮಣ್ಣ : ಒಂದ್ ಕೆಲಸ ಮಾಡ್ರಿ. ಈ ನಂಬರ್‌ಗೆ ಪೋನ್ ಮಾಡ್ರಿ.

ಮೇನೇಜರ್ : ಇದು ಯಾರ್ ನಂಬರ್ ಸಾರ್.

ಶಾಮಣ್ಣ : ಪ್ರಪುಲ್ಲ ಚಂದ್ರ ಅವರ್ದು.

ಮೇನೇಜರ್ : ಓ... ಪ್ರಗತಿ ಪರ ರೈತರಲ್ವ.....ಗೊತ್ತು ಸಾರ್..... ನಮ್ಮಲ್ಲೆ ಅವರ ಅಕೌಂಟ್ ಇದೆ.

ಶಾಮಣ್ಣ : ಅವರಿಗೆ ಫೋನ್ ಮಾಡಿ ನನಗೆ ಕೊಡಿ.

(ಟ್ರೆನ್...ಟ್ರೆನ್...ಟ್ರೆನ್.....)

ಮೇನೇಜರ್ : ಹಲೋ ಪ್ರಫುಲ್ಲ ಚಂದ್ರ ಅವರಾ ಸಾರ್.....ಸಾರ್ ಇಲ್ಲಿ ರೈತ ಸಂಘದವರು ಬಂದಿದ್ದಾರೆ.. ನಿಮ್ಮೊಂದಿಗೆ ಮಾತಾಡ್‌ಬೇಕಂತೆ ಲೈನ್‌ನಲ್ಲಿ ಇರಿ ಸಾರ್......

ಶಾಮಣ್ಣ : ನಾನು ಶಾಮಣ್ಣ ಕಣ್ರಿ...... ಒಂದು ಕೆಲಸ ಆಗ್‌ಬೇಕಿತ್ತಲ್ಲ.....

ಪ್ರಫುಲ್ಲಚಂದ್ರ : ಏನ್ರಿ ಅಪರೂಪ.....ಶಿವಮೊಗ್ಗದಲ್ಲಿ ಇದಿರೇನ್ರಿ..... ಏನ್ ಸಮಾಚಾರ.. ಬ್ಯಾಂಕಿಂದ ಫೋನ್ ಮಾಡ್ತಿದ್ದೀರ.

ಶಾಮಣ್ಣ : ಮನುಷ್ಯರ ಗೊಬ್ಬರ ಇತ್ತು.....ನಿಮಗೇನಾದ್ರು ಬೇಕಿತ್ತೇನ್ರಿ..

ಪ್ರಫುಲ್ಲಚಂದ್ರ : Dry ಆಗಿದ್ಯೇನ್ರಿ.

ಶಾಮಣ್ಣ : First class Dry item ಕಣ್ರಿ.

ಪ್ರಫುಲ್ಲಚಂದ್ರ : ಎಸ್ಟ್ ಲೋಡ್ ಇದೆ ಅಸ್ಟನ್ನು ನಮ್ ತೋಟಕ್ಕೆ ಕಳಿಸಿ ಶಾಮಣ್ಣ.

ಶಾಮಣ್ಣ : ರೇಟ್......

ಪ್ರಫುಲ್ಲಚಂದ್ರ : ಅದ್ಯಾಕೆ ತಲೆಕೆಡಿಸ್ಕೋತಿರ..... ಸುಫಲಾ ರೇಟ್ ಕೊಡೋಣ. ಬೇಗ್ ಕಳಿಸ್ರಿ ನಾಳೆ ಉಳುಮೆ ಇದೆ.

ಶಾಮಣ್ಣ : ಪ್ರಫುಲ್ಲ..... ನನಗೆ ಹೇಳಿದ್ರಲ್ಲ.... ಅದನ್ನೇ ಸ್ವಲ್ಪ ಈ ಬ್ಯಾಂಕ್ ಮೇನೇಜರ್‌ಗೆ ಹೇಳಿ(ಎಂದು ಫೋನ್ ಹಿಂದಿರುಗಿಸಿದಾಗ ಪ್ರಫುಲ್ಲ ಚಂದ್ರ–ಮೇನೇಜರ್ ಸಂಭಾಷಣೆ ಮುಂದುವರಿದಿತ್ತು. ತಲೆಯಾಡಿ ಸುತ್ತಾ ಫೋನ್ ಕರೆ ಮುಗಿಯುವ ಹೊತ್ತಿಗೆ ಗರ ಬಡಿದಂತಿದ್ದ ಮೇನೇಜರ್ ಮುಖ ಹುಳ್ಳಗಾಗಿತ್ತು.)

***

ಈ ಘಟನೆ ನಡೆದು ಒಂದೆರಡು ವರ್ಷಗಳೆ ಕಳೆದಿತ್ತು. ಶಾಮಣ್ಣನವರನ್ನು ಮತ್ತೆ ಭೇಟಿಯಾದೆವು. ಅದೂ ಇದೂ ಮಾತನಾಡ್ತ ಕಕ್ಕಸ್ ಮನೆ project ಏನ್ ಆಯ್ತು ಎಂದು ವಿಚಾರಿಸಿದೆವು. ಅವರು ಹೇಳಿದ್ದು:

"ಅಯ್ಯೋ ಮಾರಾಯ್ರೆ! ಕಕ್ಕಸ್ ಮನೆ ಕಟ್ಟಿಸಿ ಆಯ್ತು... ಆ ಊರಲ್ಲಿ ಏನ್ ಬದಲಾಗಿದೆ ಅಂತ ನೋಡಕೆ ಹೋದೆ. ಕಕ್ಕಸ್ ಮನೆ ಬಾಗಿಲೆಲ್ಲ ಬೀಗ ಹಾಕಿತ್ತು. ಯಾರು ಉಪಯೋಗಿಸ್ತಿಲ್ವ ಅಂತ ವಿಚಾರಿಸಿದೆ. ಜೊತೇಲಿ ಮಾತಾಡ್ಕಂಡು, ಬೀಡಿ ಸೇದ್‌ಕಂಡು ಕೂತ್ಕಳ ಸುಖನೆ ಬೇರೆ ಸಾರ್.... ಅದೆಂಗೆ ಒಬ್ಬೊಬ್ಬರೆ ಬಾಗಿಲ ಹಾಕ್ಕೊಂಡು ಅಷ್ಟೊತ್ತು ಕೂತ್ಕಳದು ಅಂತರಲ್ಲ ಮಾರಾಯ. ಈ experimentಗಳೇ ಬಹಳ ಕಷ್ಟ ಕಣ್ರಯ್ಯ..."

ನಾ ಕಂಡ ಶಾಮಣ್ಣ

ಜಿ.ಪಿ.ಬಸವರಾಜು

ಅಪಾರವಾದ ತಾಳ್ಮೆ, ಅಪ್ಪಟ ಪ್ರಾಮಾಣಿಕತೆ, ಆರೋಗ್ಯಕರವಾದ ನಿಲುವು, ಎಂಥ ಬಿಕ್ಕಟ್ಟಿನ ಸಂದರ್ಭದಲ್ಲಿಯೂ ಚಿತ್ತಸ್ವಾಸ್ಥ್ಯವನ್ನು ಉಳಿಸುವ ಹಾಸ್ಯಪ್ರವೃತ್ತಿ–ಇವುಗಳು ಕಡಿದಾಳು ಶಾಮಣ್ಣ ಅವರ ವ್ಯಕ್ತಿತ್ವವನ್ನು ರೂಪಿಸಿರುವ ಜೀವಧಾತುಗಳು. ಅದ್ಭುತ ಮಾತುಗಾರಿಕೆಯ ಸಾಮರ್ಥ್ಯವನ್ನು ದತ್ತವಾಗಿ ಪಡೆದಿರುವ ಶಾಮಣ್ಣ ಬರಹ ಕಲೆಯನ್ನು ಕೈಗೂಡಿಸಿಕೊಂಡಿದ್ದರೆ ತೇಜಸ್ವಿಯವರನ್ನು ಸರಿಗಟ್ಟುವ ಬರಹಗಾರರಾಗುವ ಸಾಧ್ಯತೆಯನ್ನು ಪಡೆದಿದ್ದರು. ಅದು ಆಗಿದ್ದರೆ ಇನ್ನೊಬ್ಬ ತೇಜಸ್ವಿ ಕನ್ನಡಕ್ಕೆ ದೊರೆಯುತ್ತಿದ್ದರು ಎನ್ನುವುದು ಉತ್ಪ್ರೇಕ್ಷೆಯ ಮಾತಾಗಲಾರದು. ಮುಂಬೈಯಲ್ಲಿ ಮಹಾನ್ ಕಲಾವಿದ ಉಸ್ತಾದ್ ಅಲಿ ಅಕ್ಬರ್ ಖಾನ್ ಅವರ ಮನೆಯಲ್ಲಿದ್ದು ಕೊಂಡು, ಅವರ ಪ್ರಿಯ ಶಿಷ್ಯನಾಗಿ ಸರೋದ್ ವಾದನವನ್ನು ಕಲಿಯಲಾರಭಿಸಿದ್ದ ಶಾಮಣ್ಣ ತಮ್ಮ ಸರೋದ್ ಕಲಿಕೆಯನ್ನು ಹಾಗೆಯೇ ಮುಂದುವರೆಸಿದ್ದರೆ ಅವರೊಬ್ಬ ಅಂತರ ರಾಷ್ಟ್ರೀಂಯು ಖ್ಯಾತಿಂಯು ಸರೋದ್ ವಾದಕರಾಗಿಯೂ ಹೆಸರು ಗಳಿಸಬಹುದಿತ್ತು. ಇವತ್ತಿಗೂ

ಹೆಗಲಿಗೆ ಕ್ಯಾಮರಾವನ್ನು ನೇತಾಡಿಸಿಕೊಂಡು ಕುತೂಹಲದ ಸಾವಿರಾರು ಸಂಗತಿಗಳಿಗೆ ಫೋಕಸ್ ಮಾಡುವ ಆಸಕ್ತಿಯನ್ನು ಇಟ್ಟುಕೊಂಡಿರುವ ಶಾಮಣ್ಣ ಈ ಕಲೆಯ ಹಾದಿಯೊಂದರಲ್ಲೇ ನಡೆದಿದ್ದರೆ ಎಂಥ ಅದ್ಭುತ ಫೋಟೋಗ್ರಾಫರ್ ನಮಗೆ ಸಿಕ್ಕುತ್ತಿದ್ದರು! ಪಕ್ಷಿ ವೀಕ್ಷಣೆ, ಶಿಕಾರಿ(ಈಗ ಅದಕ್ಕೆ ಅವಕಾಶವಿಲ್ಲವಲ್ಲ)ಗಳೂ ಶಾಮಣ್ಣನವರ ಆಸಕ್ತಿಯ ಕೇಂದ್ರಗಳೇ. ತಮ್ಮ ಆಸಕ್ತಿಯ ಹಲವು ಕೇಂದ್ರಗಳಲ್ಲಿ ಶಾಮಣ್ಣ ಹಂಚಿಹೋದರು. ಎಲ್ಲಿಯೂ ಒಂದೆಡೆ ನಿಂತು ಅವರು ಧ್ಯಾನಿಸಿದಂತೆ ಕಾಣಲಿಲ್ಲ. ಹಾಗೆ ಹೇಳಿದರೆ, 'ಎಲ್ಲಿಯೂ ನಿಲ್ಲದಿರು....' ಎಂದು ಕುವೆಂಪು ಅವರೇ ಹೇಳಿದರಲ್ಲಾ ಮಾರಾಯ್ರೆ ಎಂದು ನಕ್ಕುಬಿಡುತ್ತಾರೆ ಈ ಶಾಮಣ್ಣ.

ಆದರೂ ಶಾಮಣ್ಣ ಗಟ್ಟಿಯಾಗಿ ಬೇರೂರಿ ನಿಂತಿರುವ ಒಂದು ಕೇಂದ್ರವಿದೆ. ಅದು ಬದುಕಿನ ಕೇಂದ್ರ, ಈ ಬದುಕು ಕೇವಲ ಬದುಕಲ್ಲ. ತತ್ವನಿಷ್ಠೆಯ ಬದುಕು; ಪ್ರಾಮಾಣಿಕತೆಯ ಬದುಕು; ಜೀವಪರ ಧೋರಣೆಯ ಬದುಕು. ಶಾಮಣ್ಣನವರ ವ್ಯಕ್ತಿತ್ವಕ್ಕೊಂದು ಪ್ರಭೆಯಿದ್ದರೆ ಅದು ಪ್ರಾಪ್ತಿಯಾಗಿರುವುದೇ ಈ ತಾತ್ವಿಕತೆಯಿಂದ, ನಿಷ್ಠೆಯಿಂದ ಮತ್ತು ಪ್ರಾಮಾಣಿಕತೆಯಿಂದ.

ಶಾಮಣ್ಣ ಏನೂ ಮಾಡಲಾಗದ ಅಸಹಾಯಕತೆಯಲ್ಲಿ ಕೃಷಿಗೆ ಬಂದವರಲ್ಲ; ಬೇರೆಯಲ್ಲಿಯೂ ಸಲ್ಲದೆ ಹಳ್ಳಿಯನ್ನು ತಮ್ಮ ಕಾರ್ಯಕ್ಷೇತ್ರ ಮಾಡಿಕೊಂಡವರಲ್ಲ. ಗಾಂಧಿ ಮತ್ತು ಲೋಹಿಯಾ ಅವರ ಕರೆಯನ್ನು ಗಂಭೀರವಾಗಿ ಪರಿಗಣಿಸಿ ಹಳ್ಳಿಗೆ ಮರಳಿದ ಕೆಲವೇ ಕೆಲವು ತರುಣರಲ್ಲಿ ತೇಜಸ್ವಿ, ಸುಂದರೇಶ್ ಮತ್ತು ಶಾಮಣ್ಣ ಬಹಳ ಮುಖ್ಯರಾದವರು. ತಮ್ಮ ತಂದೆಯ ಆಸ್ತಿಯಿದ್ದ ಕಡಿದಾಳಿನಲ್ಲಿಯೇ ತಮ್ಮ ಬದುಕನ್ನು ರೂಪಿಸಿಕೊಳ್ಳಬಹುದಿತ್ತು. ಆದರೆ ಶಾಮಣ್ಣನವರ ವಿಚಾರ, ಚಿಂತನೆ, ಸ್ವತಂತ್ರ ಮನೋಧರ್ಮ ಅವರನ್ನು ಹೊಸ ಪ್ರಯೋಗಕ್ಕೆ ಒಡ್ಡಿಕೊಳ್ಳುವಂತೆ ಪ್ರೇರೇಪಿಸಿದವು. ತೇಜಸ್ವಿ ಮೈಸೂರಿನಿಂದ ಚಿಕ್ಕಮಗಳೂರು ಜಿಲ್ಲೆಯ ಕಾಡಿನ ಒಂದು ಮೂಲೆಗೆ ಹೋದರೆ, ಶಾಮಣ್ಣ ಮತ್ತು ಸುಂದರೇಶ್ ಭದ್ರಾವತಿ ತಾಲ್ಲೂಕನ್ನು ಆಯ್ಕೆ ಮಾಡಿಕೊಂಡರು. ಈಗ ಶಾಮಣ್ಣನವರ ಭಗವತೀಕೆರೆ ಒಂದು ನಂದನವನದಂತೆ ಕಾಣಿಸಬಹುದು. ಆದರೆ ಅವರು ಈ ಪ್ರಯೋಗಕ್ಕೆ ಹೊರಟು ಕಾಡುಭೂಮಿಯನ್ನು ಕೊಂಡಾಗ ನೂರಾರು ಸಮಸ್ಯೆಗಳು ಶಾಮಣ್ಣ ಮತ್ತು ಶ್ರೀದೇವಿಯವರನ್ನು ನುಂಗುವಂತೆ ಬಾಯ್ತೆರೆದಿದ್ದವು. ಗುಡ್ಡದ ಬುಡದಲ್ಲಿದ್ದ ಈ ಜಮೀನಿಗೆ ನರಿ, ಕರಡಿ, ತೋಳ, ಕಾಡುಹಂದಿ, ಚಿರತೆ, ಕಾಡೆಮ್ಮೆ ಹೀಗೆ ಅನೇಕ ಕಾಡುಪ್ರಾಣಿಗಳ ಕಾಟ. ನೀರಿನ ಆಸರೆಯೊಂದೆ ಇದ್ದದ್ದು. ಒಂಟಿ ಮನೆ; ಸುಂದರೇಶ್ ಇದ್ದದ್ದು ಇನ್ನೊಂದು ಮೂಲೆ. ಶಿವಮೊಗ್ಗ ಹತ್ತಿರದಂತೆ ಕಾಣಿಸಿದರೂ ಹತ್ತಿರವಲ್ಲ. ಕೂಲಿಯಾಳುಗಳು ಸಿಕ್ಕುವ ಕಷ್ಟ. ವಿದ್ಯುತ್ ಇಲ್ಲದ ಗೋಳು. ಬಸ್ಸು ಕಾರುಗಳು ಬರುವುದಕ್ಕೂ

ರಸ್ತೆಯಿಲ್ಲದ ಪರಿಸ್ಥಿತಿ. ತಮ್ಮ ಜಮೀನಿನಲ್ಲಿಯೇ ಗುಡಿಸಲೊಂದನ್ನು ಕಟ್ಟಿಕೊಂಡ ಶಾಮಣ್ಣ-ಶ್ರೀದೇವಿಯವರದ್ದು ಎಂಥ ಹೋರಾಟದ ಬದುಕು! ಮಕ್ಕಳ ವಿದ್ಯಾಭ್ಯಾಸಕ್ಕೂ ಇವರು ಹೋರಾಡಿದ ಪರಿ ಇವತ್ತಿಗೂ ಕಣ್ಣಿಗೆ ಕಟ್ಟುತ್ತದೆ.

ಶಾಮಣ್ಣ ಲೋಹಿಯಾ ವಿಚಾರಧಾರೆಯಿಂದ ಪ್ರಭಾವಿತರಾದ, ನಿಜವಾದ ಅರ್ಥದ ಸಮಾಜವಾದಿ. ಗೋಪಾಲಗೌಡರನ್ನು ಹತ್ತಿರದಿಂದ ಬಲ್ಲ ಅವರ ಒಡನಾಡಿ. ತೀರ್ಥಹಳ್ಳಿ ಸಮೀಪದ ಪ್ರೌಢಶಾಲೆಯಲ್ಲಿ ಅಧ್ಯಾಪಕರಾಗಿದ್ದ ಶಾಮಣ್ಣ ಅದನ್ನು ಬಿಟ್ಟುಕೊಟ್ಟು ಕೃಷಿಯನ್ನ ಆಯ್ದುಕೊಂಡವರು. ಗೋಪಾಲಗೌಡರನ್ನು ಅವರ ಸಿದ್ಧಾಂತಕ್ಕಾಗಿ ಪ್ರೀತಿಸಿದವರು. ಗೌಡರ ಮಾತುಗಳನ್ನು ಅನುಷ್ಠಾನಕ್ಕೆ ತರಲು ಪ್ರಾಮಾಣಿಕವಾಗಿ ಪ್ರಯತ್ನಿಸಿದರವರು. 'ಅತ್ತ ನೌಕರಿಯೂ ಮಾಡಿ, ಇತ್ತ ಕೃಷಿಯನ್ನು ಮಾಡುತ್ತೇನೆಂದು ಹೊರಡುವುದು ಸರಿಯಲ್ಲ' ಎಂದು ಹೇಳುತ್ತಿದ್ದ ಗೋಪಾಲಗೌಡರ ಮಾತು ಶಾಮಣ್ಣನವರ ಹೃದಯಕ್ಕೆ ಮುಟ್ಟಿದ್ದೇ ಅವರು ನೌಕರಿ ಬಿಡುವುದರ ಹಿಂದಿನ ಒತ್ತಡವಾಯಿತು.

'ಸಮಾಜವಾದಿ ಯುವಜನ ಸಭಾ'ದ ಸಕ್ರಿಯ ಸದಸ್ಯರಾಗಿ(ಶಾಮಣ್ಣ, ತೇಜಸ್ವಿ, ಸುಂದರೇಶ್, ನಂಜುಂಡಸ್ವಾಮಿ ಮೊದಲಾದವರು) ಶಿವಮೊಗ್ಗ ಜಿಲ್ಲೆಯಲ್ಲಿ ಅನೇಕ ಕ್ರಾಂತಿಕಾರಕ ಬದಲಾವಣೆಗಳನ್ನು ತರಲು ನೋಡಿದವರು. ಈ ಗುಂಪು ನಡೆಸಿದ ಸರಳ ಮದುವೆಗಳು, ಕಪ್ಪು ಬಾವುಟ ಪ್ರದರ್ಶನದ ಪ್ರತಿಭಟನೆಗೆ ಲೆಕ್ಕವೇ ಇಲ್ಲ. ತಮ್ಮ ಬಂಧುವೂ, ಆಗಿನ ಮುಖ್ಯಮಂತ್ರಿಯೂ ಆಗಿದ್ದ ಕಡಿದಾಳ್ ಮಂಜಪ್ಪನವರ ವಿರುದ್ಧವೇ ಕಪ್ಪು ಬಾವುಟ ಪ್ರದರ್ಶಿಸಿ ಅವರ ಮಕ್ಕಳ ವಿವಾಹವನ್ನು ಸರಳವಾಗಿ ಮಾಡಬೇಕೆಂದು ಒತ್ತಾಯಿಸಿದ ಸಾಹಸವನ್ನೂ ಈ ಗುಂಪು ಮಾಡಿತ್ತು. ಇಂಥ ಹಲವಾರು ಕಾರ್ಯಕ್ರಮಗಳನ್ನು ರೂಪಿಸಿ ಅನೇಕ ತೊಂದರೆಗಳನ್ನು ಅನುಭವಿಸಿದವರು ಶಾಮಣ್ಣ, ತೇಜಸ್ವಿ ಮತ್ತು ಸುಂದರೇಶ್ ಮೊದಲಾದವರು. ಮಂತ್ರಮಾಂಗಲ್ಯ ಮದುವೆಗೆ ಎಲ್ಲಿಂದಲೇ ಆಮಂತ್ರಣ ಬರಲಿ ಅದಕ್ಕೆ ತಮ್ಮೆಲ್ಲ ಕೆಲಸಗಳನ್ನು ಬದಿಗೆ ಸರಿಸಿ, ಹಲವಾರು ತೊಂದರೆಗಳನ್ನು ಸಹಿಸಿ ಈ ಶಾಮಣ್ಣ ಮತ್ತು ಸುಂದರೇಶ್ ಓಡುತ್ತಿದ್ದುದು ಆ ಸಿದ್ಧಾಂತದ ಬಗೆಗೆ ಅವರಿಗಿದ್ದ ನಿಷ್ಠೆಯಿಂದಾಗಿ.

೧೯೮೦ರ ದಶಕದಲ್ಲಿ ಕರ್ನಾಟಕ ರಾಜ್ಯ ರೈತ ಸಂಘ ಅಸ್ತಿತ್ವಕ್ಕೆ ಬಂದಾಗ ಅದರ ಆಧಾರಸ್ತಂಭಗಳಲ್ಲಿ ಶಾಮಣ್ಣ ಮುಖ್ಯರು. ಆದರೆಂದೂ ವೇದಿಕೆಯನ್ನು ಹತ್ತಿ ಭಾಷಣ ಮಾಡಲಿಲ್ಲ. ಅವರೇನಿದ್ದರೂ ವೇದಿಕೆಯ ಕೆಳಗೆ, ಜನರ ಜೊತೆಗಿನ ಒಡನಾಟದಲ್ಲಿ, ಹೋರಾಟದಲ್ಲಿ ಅರಳುತ್ತಿದ್ದ ಕ್ರಿಯಾಶೀಲತೆ. ಆಗ ಹಗಲು ರಾತ್ರಿಗಳನ್ನು ಲೆಕ್ಕಿಸದೆ ರೈತಚಳುವಳಿಯಲ್ಲಿ ಶಾಮಣ್ಣ ತಮ್ಮನ್ನು ತೊಡಗಿಸಿಕೊಂಡ ಕಾರಣ ಅವರು ಅನುಭವಿಸಿದ ತೊಂದರೆ ಅಪಾರ. ಅವರ ವೈಯಕ್ತಿಕ ಕೃಷಿ ಚಟುವಟಿಕೆಗಳು

ಅಸ್ತವ್ಯಸ್ತವಾದವು; ಅವರ ಆರೋಗ್ಯವೂ ಗಣನೀಯ ಪ್ರಮಾಣದಲ್ಲಿ ತೊಂದರೆಗೊಳಗಾಯಿತು. ಹಣಕಾಸಿನ ತೊಂದರೆ. ಹಲವರ ವಿರೋಧ. ಊಟ ನಿದ್ರೆಗಳಿಲ್ಲದ ಓಡಾಟ. ಇಷ್ಟಾದರೂ ಶಾಮಣ್ಣ ಎಂದೂ ಸಿಟ್ಟಿಗೆದ್ದವರಲ್ಲ. ಇನ್ನೊಬ್ಬರನ್ನು ದೂರಿದವರಲ್ಲ. ತಾವು ನಂಬಿದ ತತ್ವಗಳಿಂದ ದೂರ ಸರಿದವರಲ್ಲ. ಹಾಗೆ ದೂರ ಸರಿದವರ ವಿರುದ್ಧ ಗಟ್ಟಿ ಧ್ವನಿ ಎತ್ತಿದರೂ ಎಂದು ಅದು ವೈಯಕ್ತಿಕ ನಿಂದೆಯಾಗುತ್ತಿರಲಿಲ್ಲ. ಅವರ ಹಾಸ್ಯಪ್ರವೃತ್ತಿ ಎಲ್ಲವನ್ನು ತನ್ನೊಳಗೆ ನುಂಗಿಕೊಳ್ಳುವಂತೆ ಮಾಡುತ್ತಿತ್ತು. ರೈತಸಂಘದಿಂದಲೇ ಶಾಮಣ್ಣನವರನ್ನು ಉಚ್ಚಾಟಿಸುವ ಹುನ್ನಾರವೊಂದು ನಡೆದಾಗಲೂ ಶಾಮಣ್ಣ ಕಂಗೆಟ್ಟವರಲ್ಲ. ಉದ್ವೇಗವಿಲ್ಲದೆ ರೈತ ಸಂಘದ ಉಚ್ಚಾಟನೆಯನ್ನು ಒಪ್ಪಿಕೊಂಡು ತಣ್ಣಗೆ ಹೊರನಡೆದವರು ಈ ಶಾಮಣ್ಣ. ಮುಂದೆ ತಾವು ಮಾಡಿದ್ದು ತಪ್ಪು ಎಂದು ರೈತ ಮುಖಂಡರಿಗೆ ಅನಿಸಿದಾಗಲೂ ಶಾಮಣ್ಣ ಆ ರೈತಸಂಘದ ಚಟುವಟಿಕೆಗಳ ಮಾಹಿತಿಯನ್ನು ರಾಜ್ಯದ ಎಲ್ಲ ಜನರಿಗೆ ತಲುಪಿಸುವ ಏಕೈಕ ಉದ್ದೇಶದಿಂದಲೇ ಅವರು ಲಂಕೇಶ್ ಪತ್ರಿಕೆಗೆ ವರದಿಗಳನ್ನ ಬರೆಯುವ ಅಭ್ಯಾಸವನ್ನು ಮಾಡಿಕೊಂಡಿದ್ದರು. ಲಂಕೇಶ್ ಪತ್ರಿಕೆಗೆ ಅದ್ಭುತವಾದ ಫೋಟೊಗಳನ್ನು ಕೂಡಾ ಅವರು ನೀಡಿದ್ದರು. ಇದೇ ಹಲವರ ಕಣ್ಣುರಿಗೆ ಕಾರಣವಾಗಿತ್ತು.

ಕೃಷಿಕನಾಗಿ, ಹಳ್ಳಿಯನ್ನು ಕೇಂದ್ರ ಮಾಡಿಕೊಂಡ ಸಮಾಜವಾದಿ ಶಾಮಣ್ಣ ಮಾಡಿದ, ಮಾಡುತ್ತಿರುವ ಕೆಲಸಗಳು ಲೆಕ್ಕವಿಲ್ಲದಷ್ಟು. ತಮ್ಮ ಸುತ್ತಲಿನ ಬಡಕೂಲಿಕಾರರ ಬದುಕನ್ನು ಹಸನು ಮಾಡಲು ಅವರು ಅನೇಕ ಚಳವಳಿಗಳನ್ನು ತಮ್ಮ ವ್ಯಾಪ್ತಿಯ ಮಿತಿಯಲ್ಲಿಯೇ ಮಾಡಿದರು. ಅವರು ರೂಪಿಸಿದ ಮದ್ಯಪಾನ ವಿರೋಧಿ ಚಳವಳಿಯಲ್ಲಿ ಕೃಷಿ ಕಾರ್ಮಿಕ ಮಹಿಳೆಯರೇ ಅಧಿಕ ಸಂಖ್ಯೆಯಲ್ಲಿ ಇರುತ್ತಿದ್ದರು. ಶ್ರೀದೇವಿಯವರೇ ಈ ಚಳವಳಿಯ ನೇತೃತ್ವ ವಹಿಸಿದ್ದರು. ನಿರ್ಮಲ ಕರ್ನಾಟಕ ಯೋಜನೆಯ ಲಾಭ ಈ ಕಾರ್ಮಿಕರಿಗೆ ಸಿಕ್ಕಬೇಕೆಂದು ಬಯಸಿದ ಶಾಮಣ್ಣ ಕಕ್ಕಸು ಕಟ್ಟಿಸುವಂತೆ ಹಲವರನ್ನು ಪ್ರೇರೇಪಿಸುವ ಕೆಲಸದಲ್ಲಿ ತೊಡಗಿದ್ದರು. ಅದಕ್ಕಾಗಿ ಆಗಿನ ಮುಖ್ಯಮಂತ್ರಿ ಜೆ.ಹೆಚ್. ಪಟೇಲ್ ಮತ್ತು ಗ್ರಾಮೀಣ ಅಭಿವೃದ್ಧಿ ಸಚಿವ ಎಂ.ಪಿ. ಪ್ರಕಾಶ್ ಅವರ ಬಳಿಗೆ ಓಡಾಡಿದವರು. ತಮ್ಮ ಮನೆಯ ಸಮೀಪದಲ್ಲೆಯೇ ಒಂದು ಶಾಲೆಯನ್ನು ಮಾಡಿ ಹಿಂದುಳಿದ ಬಡವರು ಮತ್ತು ಕೃಷಿಕಾರ್ಮಿಕರ ಮಕ್ಕಳು ಈ ಶಾಲೆಯಲ್ಲಿ ಓದಲೆಂದು ಬಯಸಿದರು. ತಮ್ಮ ಸುತ್ತಮುತ್ತಲಿನ ಅವಿದ್ಯಾವಂತರಿಗೆ ಅಕ್ಷರ ಹೇಳಿಕೊಡುವುದಕ್ಕಾಗಿ ಶ್ರೀದೇವಿ ಮತ್ತು ಶಾಮಣ್ಣ ಲಾಟೀನು ಹಿಡಿದು ರಾತ್ರಿಶಾಲೆಯನ್ನು ನಡೆಸಿದ್ದೂ ಇದೆ. ತಮ್ಮ ಸುತ್ತಮುತ್ತಲಿನ ಎಳೆಯ ತಲೆಮಾರಿನಲ್ಲಿ ಪ್ರತಿಭಾವಂತರು ಕಾಣಿಸಿದರೆ ಅವರನ್ನು ಪ್ರೋತ್ಸಾಹಿಸುವುದಕ್ಕಾಗಿ ಅವರು ಮಾಡಿದ ಕೆಲಸಗಳೂ ಹಲವಾರು. ಅನೇಕರಿಗೆ ಫೋಟೋಗ್ರಫಿ

ಹೇಳಿಕೊಟ್ಟರು. ಹಾಡುವ ಸಾಮರ್ಥ್ಯವಿದ್ದ ಮಕ್ಕಳಿಗೆ ತಾವೇ ಸ್ವಲ್ಪ ತರಬೇತಿ ಕೊಟ್ಟು, ತಮ್ಮ ವಾಹನದಲ್ಲಿಯೇ ಅಂಥ ಮಕ್ಕಳನ್ನು ಕರೆದುಕೊಂಡು ಶಿವಮೊಗ್ಗ ಮೊದಲಾದ ಊರುಗಳನ್ನು ಸುತ್ತಿ ಆ ಪ್ರತಿಭೆಗಳನ್ನು ವೇದಿಕೆ ಹತ್ತಿಸಿದರು.

ಶಾಮಣ್ಣ ಫೋಟೋಗ್ರಫಿಯ ಬಗ್ಗೆ ತಲೆಕೆಡಿಸಿಕೊಂಡದ್ದು ನೆನೆದಾಗ ನಗು ಬರುತ್ತದೆ. ತಮ್ಮ ಮನೆಯ ಒಂದು ಕೋಣೆಯನ್ನ ರಾತ್ರಿಯ ಹೊತ್ತು ಡಾರ್ಕ್ ರೂಂ ಮಾಡಿದ್ದರು. ಅಲ್ಲಿ ನಾವೆಲ್ಲ ಇಡೀ ರಾತ್ರಿ ನೆಗೆಟಿವ್‌ಗಳನ್ನು ಪ್ರಿಂಟ್ ಹಾಕುತ್ತಿದ್ದೆವು. ಬಾಗಿಲು ಮುಚ್ಚುವುದು, ಕಿಟಕಿಗಳಿಗೆ ಬೆಡ್‌ಶೀಟ್ ಹೊದಿಸಿ ಬೆಳಕು ಬರದಂತೆ ಮಾಡಿ ಶಾಮಣ್ಣನವರೇ ರೂಪಿಸಿದ ಎನ್‌ಲಾರ್ಜರ್ ಮೊದಲಾದ ಸ್ಥಳೀಯ ಉಪಕರಣಗಳನ್ನು ಬಳಸಿ, ಅವುಗಳ ಅತ್ಯುತ್ತಮ ಪ್ರಯೋಜನ ಪಡೆಯುವಂತೆ ಇಡೀ ರಾತ್ರಿ ಪ್ರಿಂಟ್ ಹಾಕಿ ಬೆಳಗಿನ ನಾಲ್ಕು ಗಂಟೆಗೋ, ಐದು ಗಂಟೆಗೋ ಮಲಗುತ್ತಿದ್ದೆವು. ಬೆಳಗ್ಗೆ ಎದ್ದು ನೋಡಿದರೆ ನಮ್ಮ ಸುತ್ತ ಒಣಗಲು ಹಾಕಿದ್ದ ಪ್ರಿಂಟ್‌ಗಳೇ. ಶಾಮಣ್ಣ ಹಾಡುವುದು, ಸರೋದ್ ಬಾರಿಸುವುದು, ತಬಲಾ ನುಡಿಸುವುದು ಇತ್ಯಾದಿ ಎಲ್ಲವೂ ಮುಗಿದ ಮೇಲೆ ರಾತ್ರಿ ೧೧ರ ಸುಮಾರಿಗೆ ಊಟ; ಅದರ ನಂತರ ನಮ್ಮ ಡಾರ್ಕ್ ರೂಂ. ಎಂಥ ದಿನಗಳು ಅವು!

ಶಾಮಣ್ಣನವರಿಗೆ ಪಕ್ಷಿವೀಕ್ಷಣೆ ಒಂದು ಹವ್ಯಾಸವಲ್ಲ. ತಮ್ಮ ತೋಟಕ್ಕೆ ಬರುವ ಪ್ರತಿಯೊಂದು ಹಕ್ಕಿ ಅದು ಗೂಡುಕಟ್ಟುವ ವಿಧಾನ, ಮರಿಮಾಡುವುದು, ಹಾಡುವುದು ಎಲ್ಲವನ್ನೂ ಅವರು ಅತ್ಯಂತ ಶ್ರದ್ಧೆಯಿಂದ ಅಪಾರ ಕುತೂಹಲದಿಂದ ನೋಡುತ್ತಿದ್ದರು. ತಮ್ಮ ಮನೆಗೆ ಅತಿಥಿಗಳಾಗಿ ಬಂದ ಆಸಕ್ತ ಮಿತ್ರರೂ ಅದರಲ್ಲಿ ತೊಡಗುವಂತೆ ಮಾಡುತ್ತಿದ್ದರು. ತಮ್ಮ ಸುತ್ತಲಿನ ಎಲ್ಲ ಜೀವಿಗಳನ್ನೂ, ಗಿಡಮರಗಳನ್ನೂ ಅವರು ಅತ್ಯಂತ ಕಾಳಜಿಯಿಂದ ನೋಡಿಕೊಳ್ಳುತ್ತಿದ್ದರು. ಅವರ ಮನೆಯ ನಾಯಿಗಳಂತೂ ದೊಡ್ಡ ಕಾವಲು ಪಡೆಯಂತೆ ಕಾರ್ಯ ನಿರ್ವಹಿಸುತ್ತಿದ್ದವು. ಒಂದು ನಾಯಿಗಂತೂ ಗುಂಡ ಎಂದು (ಆಗಿನ ಮುಖ್ಯಮಂತ್ರಿ ಗುಂಡೂರಾವ್) ಹೆಸರಿಟ್ಟು ಪ್ರೀತಿಯಿಂದ ಕರೆಯುತ್ತಿದ್ದರು.

ಕಳ್ಳಭಟ್ಟಿಯನ್ನು ಕುಡಿದು ಅನೇಕರು, ವಿಶೇಷವಾಗಿ ಬಡವರು ಸಾಯುತ್ತಿದ್ದಾಗಲೆಲ್ಲ ಶಾಮಣ್ಣ ಬಹಳ ನೊಂದುಕೊಳ್ಳುತ್ತಿದ್ದರು. ಈ ಸರ್ಕಾರ ಮದ್ಯಪಾನವನ್ನು ನಿಷೇಧಿಸಬೇಕು, ಇಲ್ಲದಿದ್ದರೆ ಒಳ್ಳೆಯ ಮದ್ಯವನ್ನಾದರೂ ಬಡವರಿಗೆ ಒದಗಿಸಬೇಕು ಎಂದು ಶಾಮಣ್ಣ ಹೇಳುತ್ತಿದ್ದರು. ಮನೆ ಮದ್ಯದ ಪ್ರಸ್ತಾಪವೂ ಆಗಾಗ ಬರುತ್ತಿತ್ತು. ಭಟ್ಟಿ ಇಳಿಸುವುದರಲ್ಲಿ ನಿಷ್ಣಾತನಾಗಿದ್ದ ಒಬ್ಬ ಲಂಬಾಣಿಯ ಮುದುಕ ಶಾಮಣ್ಣನವರ ಹತ್ತಿರದ ಕಾಲೋನಿಯಲ್ಲಿ ಬದುಕುತ್ತಿದ್ದ. ಮದ್ಯಪಾನ ವಿರೋಧಿಯಾಗಿದ್ದ ಶಾಮಣ್ಣ ಈ ಮುದುಕನ ಪರಿಣತಿಯನ್ನು ನಮಗೆ ತೋರಿಸುವುದಕ್ಕಾಗಿಯೇ ಒಂದು ರಾತ್ರಿ

ತಮ್ಮ ತೋಟದ ಒಂದು ಮೂಲೆಯಲ್ಲಿ ಅಡಿಕೆ ಬೇಯಿಸುವ ಒಲೆಯನ್ನು ಬಳಸಿ ಸರಾಯಿ ತಯಾರಿಸಲು ಆ ಮುದುಕನಿಗೆ ಹೇಳಿದ್ದರು. ನಾವೆಲ್ಲ ತಯಾರಿಕೆಯ ವೈಭವವನ್ನು ಮಧ್ಯರಾತ್ರಿಯ ನಂತರ ವೀಕ್ಷಿಸಿದೆವು. ಆಹಾ! ಅದೆಂಥ ಅದ್ಭುತ ಮದ್ಯ! ಆ ಮುದುಕ ಎಂಥ ಪರಿಣತ! ರುಚಿ ನೋಡುವವರು ಯಾರೂ ನಮ್ಮಲ್ಲಿ ಇರಲಿಲ್ಲವಾಗಿ ಒಂದು ಬಾಟಲಿಯಲ್ಲಿ ಅದನ್ನು ತುಂಬಿಸಿ, ಉಳಿದದ್ದನ್ನು ತೆಗೆದುಕೊಂಡು ಹೋಗಲು ಆ ಮುದುಕನಿಗೆ ಪರವಾನಗಿ ನೀಡಿದ ಶಾಮಣ್ಣ, ಮುಂದೊಮ್ಮೆ ಪ್ರೊ. ನಂಜುಂಡಸ್ವಾಮಿಯವರು ಬಂದಾಗ ಅದನ್ನವರಿಗೆ ನೀಡಿದರು. ನಂಜುಂಡಸ್ವಾಮಿ ಅದರ ಘಾಟಿಗೆ, ಸ್ವಾದಕ್ಕೆ ಮನಸೋತರಾದರೂ ಆ ಮದ್ಯವನ್ನು ಮತ್ತೆ ತಯಾರಿಸಲು ಶಾಮಣ್ಣ ಆ ಮುದುಕನಿಗೆ ಅನುಮತಿ ನೀಡಲಿಲ್ಲ.

ಎಷ್ಟೊಂದು ಪ್ರಯೋಗಗಳು, ಎಂಥ ಜೀವನಪ್ರೀತಿ, ಎಂಥ ತತ್ವನಿಷ್ಠೆ! ಹಲವು ಕೇಂದ್ರಗಳಲ್ಲಿ ಹಂಚಿಹೋದ ಶಾಮಣ್ಣ ತಮ್ಮ ಬದುಕಿನ ಕೇಂದ್ರದಲ್ಲಿ ಎಷ್ಟು ಅಗಾಧವಾಗಿ ಬೆಳೆದರು! ಎಂಥ ಅದ್ಭುತ ವ್ಯಕ್ತಿತ್ವವನ್ನು ಕಟ್ಟಿಕೊಂಡರು.

ಶಾಮಣ್ಣ ನಿಜವಾದ ಅರ್ಥದಲ್ಲಿ 'ಕಾಡತೊರೆ'ಯೇ. ಅದರ ಸ್ವಚ್ಛಂದ, ಸಮೃದ್ಧಿ, ಯಾವ ಹಂಗೂ ಇಲ್ಲದೆ ಮನಬಂದತ್ತ ಹರಿಯುವ ಮುಕ್ತ ಸ್ವಾತಂತ್ರ್ಯ, ಹಾಗೆಯೇ ಜೀವ, ಸಸ್ಯ ಸಂಕುಲವನ್ನು ಪೊರೆಯಬಲ್ಲ ಅದರ ಅಗಾಧ ಚೈತನ್ಯ ಇವೆಲ್ಲ ಶಾಮಣ್ಣನವರ ವ್ಯಕ್ತಿತ್ವಕ್ಕೆ ಹೊಂದುವ ಅಂಶಗಳೇ. ಸಣ್ಣ ಜಲಮೂಲವೊಂದು ಉಕ್ಕುತ್ತ, ಹರಿಯುತ್ತ, ಮುಂದೆ ಮುಂದೆ ಸಾಗುತ್ತ, ಸಣ್ಣ ಸಣ್ಣ ಹಳ್ಳಗಳನ್ನು ತನ್ನ ತೆಕ್ಕೆಗೆ ತೆಗೆದುಕೊಳ್ಳುತ್ತ ದೊಡ್ಡ ತೊರೆಯಾಗಿ, ನದಿಯಾಗಿ ರೂಪಾಂತರ ಹೊಂದುವ ರೂಪಕವೇ ಈ ಶಾಮಣ್ಣ. ಮಲೆನಾಡಿನ ಪುಟ್ಟ ಗ್ರಾಮವೊಂದರಲ್ಲಿ ಹುಟ್ಟಿ, ಮೇಗರವಳ್ಳಿಯನ್ನೇ ದೊಡ್ಡ ಪಟ್ಟಣ ಎಂದುಕೊಂಡಿದ್ದ ಶಾಮಣ್ಣ ಸಂಕಲ್ಪ ಬಲದಿಂದ, ಛಲದಿಂದ, ನಿರಂತರ ಹುಡುಕಾಟದಿಂದ ಮತ್ತು ಇಂಗದ ಕುತೂಹಲದಿಂದ ಬೆಳೆಯುತ್ತ ಹೋದರು. ತಮ್ಮಲ್ಲಿದ್ದ ನೂರಾರು ಆಸಕ್ತಿಗಳಿಂದಾಗಿ ಶಾಮಣ್ಣನವರ ಕಾರ್ಯಕ್ಷೇತ್ರ ವಿಸ್ತಾರಕ್ಕೆ ಚಾಚಿಕೊಳ್ಳುತ್ತ ಹೋಯಿತು; ಅವರ ವ್ಯಕ್ತಿತ್ವವನ್ನೂ ಬೆಳೆಸುತ್ತ ಹೋಯಿತು. ಸರಳತೆ ಮತ್ತು ಪ್ರಾಮಾಣಿಕತೆಗಳನ್ನೇ ತಮ್ಮ ಅಸ್ತ್ರಗಳಾಗಿ ಮಾಡಿಕೊಂಡು ಸದಾ ಬದುಕನ್ನು ಪ್ರೀತಿಸಿದ ಈ ಜೀವಪರ ವ್ಯಕ್ತಿ ಕರ್ನಾಟಕದ ಬಹುದೊಡ್ಡ ಚೇತನವಾಗಿ ಅರಳಿದರು.

ನಮ್ಮಲ್ಲಿನ ಅನೇಕ ಆತ್ಮಕಥನಗಳನ್ನು ನೋಡಿದಾಗ ಶಾಮಣ್ಣ ಅವರ ಈ ಆತ್ಮಕಥಾನಕದ ಹೊಳಪು, ಪ್ರಕಾಶ ಕಣ್ಣು ಕುಕ್ಕುತ್ತದೆ. ಎಲ್ಲಿಯೂ ಯಾವ ಸೋಗಲಾಡಿತನವೂ ಇಲ್ಲದೆ, ಅತ್ಯಂತ ಸರಳವಾಗಿ, ನೇರವಾಗಿ, ದಿಟ್ಟವಾಗಿ ಮತ್ತು ಪ್ರಾಮಾಣಿಕವಾಗಿ ಶಾಮಣ್ಣ ತಮ್ಮ ನೆನಪುಗಳನ್ನು, ಕಥನಗಳನ್ನು ಮಂಡಿಸುತ್ತಾರೆ.

ತಮ್ಮನ್ನು ಎಂದೂ ದೊಡ್ಡ ನಾಯಕನೆಂದು ಬಿಂಬಿಸಿಕೊಳ್ಳದೆ ಶಾಮಣ್ಣ ತಮ್ಮ ಕಥನವನ್ನು ಮಂಡಿಸುವಾಗಲೂ ತಾವೊಬ್ಬ ಸಾಮಾನ್ಯ ಮನುಷ್ಯ ಸಾಮಾನ್ಯರಲ್ಲಿ ಸಾಮಾನ್ಯ ಎಂದೇ ತಿಳಿಯುತ್ತಾರೆ. ಈ ತಿಳುವಳಿಕೆಯ ಹಿಂದೆ ಕೃತಕತೆಯಾಗಲಿ, ಅಸಹಜ ವಿನಯವಾಗಲೀ ಕಾಣುವುದಿಲ್ಲ. ಅವರ ಗ್ರಹಿಕೆಯೇ ಆ ಬಗೆಯದು.

ಶಾಮಣ್ಣನವರ ಬಾಲ್ಯ ಮಲೆನಾಡಿನ ಆಗಿನ ಕಾಲದ ಅನೇಕ ಚಿತ್ರಗಳನ್ನು ಕೊಡುತ್ತದೆ. ಕೂಡು ಕುಟುಂಬ, ಅಲ್ಲಿರುವ ಅನೇಕ ಮಕ್ಕಳು, ಮುದುಕರು, ಮನೆಗೆಲಸವನ್ನು ಮತ್ತು ಗದ್ದೆ ಕೆಲಸಗಳೆರಡನ್ನೂ ಮಾಡಬೇಕಾದ ಮಹಿಳೆಯರು, ಹೆಣ್ಣುಮಕ್ಕಳಿಗೆ ಸೌಂದರ್ಯಕ್ಕಿಂತ ದುಡಿಮೆಯೇ ಮುಖ್ಯ ಎನ್ನುವ ಒಕ್ಕಲು ಮಕ್ಕಳ ಧೋರಣೆ, ಎಡೆಬಿಡದೆ ಸುರಿಯುವ ಮಳೆ, ಮಕ್ಕಳನ್ನು ಹೆದರಿಸುವ ಕಾಡುಪ್ರಾಣಿಗಳು, ಹಾಗೆಯೇ ಮಕ್ಕಳ ಆಕರ್ಷಣೆಯಾದ ಹಲಬಗೆಯ ಕಾಡು ಹಣ್ಣುಗಳು ಇವೆಲ್ಲದರ ದಟ್ಟ ಚಿತ್ರಣ ಇಲ್ಲಿ ಸಿಕ್ಕುತ್ತದೆ. ಹತ್ತಿರದ ಬಂಧುಗಳಾದರೂ ಮುಕ್ತ ಸ್ವಾತಂತ್ರ್ಯವಿಲ್ಲದ ಪರಿಸ್ಥಿತಿಯಲ್ಲಿ ಬೆಳೆಯುತ್ತ ಹಸಿವಿನೊಂದಿಗೆ ಸೆಣಸುವುದು, ಬಾಲ ಸಹಜ ಆಶೆಗಳನ್ನು ಈಡೇರಿಸಿಕೊಳ್ಳುವುದಕ್ಕಾಗಿ ಹಲವು ಉಪಾಯಗಳನ್ನು ಕಂಡುಕೊಳ್ಳುವುದು, ಕೆಲವೊಮ್ಮೆ ಹುಟ್ಟಿಕೊಳ್ಳುವ ಸೇಡಿನ ಕಿಡಿಗೇಡಿ ಕೃತ್ಯಗಳು ಇತ್ಯಾದಿ ಘಟನೆಗಳನ್ನು ಶಾಮಣ್ಣ ಯಾವ ಮುಚ್ಚುಮರೆಯೂ ಇಲ್ಲದೆ ದಾಖಲಿಸುತ್ತಾರೆ. ಇಂಥ ಸಂಗತಿಗಳನ್ನು ಹೇಳಿಕೊಂಡರೆ ತಮ್ಮ ವ್ಯಕ್ತಿತ್ವ ಎಲ್ಲಿ ಕುಬ್ಜವಾಗಿಬಿಡುತ್ತದೋ, ಮಸುಕಾಗಿಬಿಡುತ್ತದೋ ಎಂಬ ತಪ್ಪು ಕಲ್ಪನೆಯೂ ಅವರಿಗೆ ಇಲ್ಲ. ಇರುವುದನ್ನು ಇರುವ ಹಾಗೆಯೇ ಹೇಳಬೇಕೆಂಬ ಹಂಬಲವೊಂದೆ ಇಲ್ಲೆಲ್ಲ ಕಾಣುತ್ತದೆ. ಆಗ ಮಲೆನಾಡಿನಲ್ಲಿದ್ದ ವಿದ್ಯಾಭ್ಯಾಸದ ಕ್ರಮದ ಚಿತ್ರಣ, ಮಕ್ಕಳು ಸ್ವಚ್ಛವಾಗಿರಬೇಕೆಂದು ಅಧ್ಯಾಪಕರು ವಿದ್ಯಾರ್ಥಿಗಳ ಮೂಲಕ ನಡೆಸುತ್ತಿದ್ದ 'ಸ್ವಚ್ಛತೆಯ ಪರೀಕ್ಷೆ' ಇತ್ಯಾದಿ ಸ್ವಾರಸ್ಯಕರವಾದ ಪ್ರಸಂಗಗಳು ಇಲ್ಲಿ ಉತ್ಪ್ರೇಕ್ಷೆ ಇಲ್ಲದೆ ಚಿತ್ರಣಗೊಂಡಿವೆ. ಮಲೆನಾಡಿಗೆ ನಿಧಾನವಾಗಿ ಕಾಲಿರಿಸುತ್ತಿದ್ದ ಆಧುನಿಕ ವಿದ್ಯಮಾನಗಳು, ಫ್ಲೆಷ್‌ಔಟ್ ಕಕ್ಕಸ್ಸಿನ ತಮಾಷೆಯ ಸಂಗತಿಗಳೂ ಇಲ್ಲಿವೆ. ಕಕ್ಕಸ್‌ಗುಂಡಿಗೆ ಬಿದ್ದ ಬೀಗದಕೈ ಗೊಂಚಲನ್ನು ಯಾವ ಮುಜುಗರವೂ ಇಲ್ಲದೆ ಶಾಮಣ್ಣ ಎತ್ತಿಕೊಡುವುದು ಕೇವಲ ಮೋಜಿನ ಸಂಗತಿಯಾಗಿ ಕಾಣದೆ ಸಹನೆ ಎಂಬುದು ಶಾಮಣ್ಣನವರ ರಕ್ತಕ್ಕಂಟಿದ ಗುಣವಾಗಿ ಹೇಗೆ ಬಂದಿತ್ತು ಎಂಬುದರ ಸುಳಿವು ನೀಡುವ ಘಟನೆಯಂತೆ ಕಾಣಿಸುತ್ತದೆ.

ಸೋಡಾ ಮಾರಾಟ, ಗೇಣಿವಸೂಲಿ, ಕಂಡಕ್ಟರ್ ಕೆಲಸ ಇತ್ಯಾದಿ ಹಲವು ಕ್ರಿಯೆಗಳಲ್ಲಿ ತಮ್ಮನ್ನು ಬಾಲ್ಯಕಾಲದಲ್ಲೇ ತೊಡಗಿಸಿಕೊಂಡು ತಮ್ಮ ಕಾರ್ಯಕ್ಷೇತ್ರವನ್ನು ವಿಸ್ತರಿಸಿಕೊಂಡ ಶಾಮಣ್ಣ ಅವುಗಳ ಮೂಲಕ ಅನುಭವ ಸಮೃದ್ಧಿಯನ್ನು ಪಡೆದುಕೊಂಡರು; ತಮ್ಮ ವ್ಯಕ್ತಿತ್ವವನ್ನು ರೂಪಿಸಿಕೊಂಡರು. ಮಲೆನಾಡಿನ ಗೇಣಿಪದ್ಧತಿಯಲ್ಲಿದ್ದ ಕ್ರೌರ್ಯವನ್ನು ಬಾಲಕ ಶಾಮಣ್ಣ ಸೂಕ್ಷ್ಮವಾಗಿ ಗ್ರಹಿಸಿದರು

ಮತ್ತು ಜಾತಿಮತಗಳನ್ನು ಮೀರಿದ ಮಾನವೀಯ ಹೃದಯವಂತಿಕೆಯಿಂದ ಮಿಡಿದರು. ಇನ್ನೆಂದೂ ಗೇಣಿವಸೂಲಿಗೆ ಹೋಗುವುದಿಲ್ಲ ಎನ್ನುವ ದಿಟ್ಟ ನಿರ್ಧಾರವನ್ನು ಆ ಎಳೆಯ ವಯಸ್ಸಿನಲ್ಲಿಯೇ ತೆಗೆದುಕೊಂಡರು, ಇಂಥ ಮಹತ್ವದ ಘಟನೆಗಳು ಈ ಕಥನದಲ್ಲಿ ನಿರುದ್ವಿಗ್ನ ಶೈಲಿಯಲ್ಲಿ ಮೈ ಪಡೆದಿವೆ.

ಕಾಲೇಜಿನ ಓದಿಗೆಂದು ಶಾಮಣ್ಣ ಶಿವಮೊಗ್ಗಕ್ಕೆ ಬಂದ ಮೇಲೆ ಅವರ ಅನುಭವ ಪ್ರಪಂಚ ಬೇರೆಯದೇ ಆಗುತ್ತದೆ. ತೇಜಸ್ವಿಯವರ ಸ್ನೇಹವಾದ ನಂತರವಂತೂ ಅದು ಹೊಸ ಆಯಾಮಗಳನ್ನು ಪಡೆದುಕೊಳ್ಳುತ್ತದೆ. ಹೆಚ್ಚಿನ ತಮಾಷೆ, ಲವಲವಿಕೆ, ಗಂಭೀರ ಕಾಳಜಿಗಳು, ಆಸಕ್ತಿಗಳು ಕೂಡಿಕೊಳ್ಳುತ್ತವೆ. ಮುಂದೆ ಈ ಜೋಡಿ ಮೈಸೂರು ಸೇರಿದ ಮೇಲಂತೂ ಬದುಕಿನ ಪ್ರಯೋಗಗಳು ಹೆಚ್ಚುತ್ತಲೇ ಹೋಗುತ್ತವೆ. ಓದು ಎನ್ನುವುದು ಹಲವರಿಗೆ ಏಕಮುಖ ನಡಿಗೆಯಾದರೆ ಶಾಮಣ್ಣ–ತೇಜಸ್ವಿಯವರಿಗೆ ಅದು ಹಲವು ಮಾರ್ಗಗಳ ಓಟ. ಮಹಾರಾಜ ಕಾಲೇಜು, ಅಲ್ಲಿನ ಅಧ್ಯಾಪಕರು, ಪ್ರಭುಶಂಕರ, ಪರಮೇಶ್ವರ ಭಟ್ಟ, ಸಿಡಿಎನ್ ಅವರ ಹೆಲ್ತ್ ಕಿಚನ್, ಮಹಾರಾಜ ಕಾಲೇಜು ಹಾಸ್ಟೆಲು, ಅಲ್ಲಿ ಹಲವು ಆಸಕ್ತಿಗಳ ಜನ, ಮೈಸೂರಿನಲ್ಲಿ ನಡೆಯುತ್ತಿದ್ದ ಸಂಗೀತ ಕಚೇರಿಗಳು, ಸಂಗೀತ ಕಲಿಸುವ ಅನೇಕ ವೈವಿಧ್ಯಪೂರ್ಣ ಗುರುಗಳು, ರಾಮಕೃಷ್ಣಾಶ್ರಮ, ಲಹರಿ, ಪ್ರಿಂಟಿಂಗ್ ಪ್ರೆಸ್ ಸಾಹಸ, ಅಲಿ ಅಕ್ಬರ್ ಖಾನ್ – ರವಿಶಂಕರ್ ಅವರ ಪರಿಚಯ, ಸಂಗೀತಪ್ರಿಯ ದೊರೆಸ್ವಾಮಿ ಅವರಲ್ಲಿದ್ದ ಸಂಗೀತದ ರೆಕಾರ್ಡ್‌ಗಳ ಸಂಗ್ರಹ, ರಾಜೀವ ತಾರಾನಾಥ್, ಅನಂತಮೂರ್ತಿ, ಕಾಫಿಹೌಸ್, ಕುವೆಂಪು ಅವರ ವಿ ಸಿ ಬಂಗಲೆಯಲ್ಲಿ ಇವರ ಶಹನಾಯ್ ಅಭ್ಯಾಸ, ಶಾಮಣ್ಣ ಕಂಡುಕೊಂಡ ಹೊಸ ದಂತವಾದ್ಯ ಇದೆಲ್ಲ ಶಾಮಣ್ಣ, ತೇಜಸ್ವಿ ಅಂಥವರಿಗೆ ಮಾತ್ರ ಸಾಧ್ಯವಾಗುವಂಥದ್ದು ಎನಿಸಿಬಿಡುತ್ತದೆ. ಶಾಮಣ್ಣ ಸಂಗೀತದ ಬೆನ್ನುಹತ್ತಿ ಮುಂಬೈಗೆ ನಡೆದದ್ದು ಎಂಥ ಅದ್ಭುತ ಅಧ್ಯಾಯ. ಈ ಕೃತಿಯಲ್ಲಿ ಬಹಳಷ್ಟು ಸಂಗತಿಗಳು ದಾಖಲಾಗಿವೆ ಎಂಬುದು ನಿಜವಾದರೂ, ಶಾಮಣ್ಣನವರ ಅಕ್ಷಯ ಬತ್ತಳಿಕೆಯನ್ನು ಗಮನಿಸಿದವರಿಗೆ ಇನ್ನು ಅನೇಕ ಬಾಣಗಳನ್ನು ಶಾಮಣ್ಣ ಹೊರ ತೆಗೆಯಲೇ ಇಲ್ಲ ಎಂದೂ ಅನ್ನಿಸುತ್ತದೆ.

ಮುಖ್ಯವಾದ ಮಾತೆಂದರೆ, ಶಾಮಣ್ಣ ಎಲ್ಲೆಲ್ಲಿ ನಡೆದಾಡಿದರೂ, ವಿವಿಧ ಕ್ಷೇತ್ರಗಳನ್ನು ಹೊಕ್ಕುಬಂದರೂ ಅವರಲ್ಲಿನ ಮಾನವೀಯತೆ, ಅಪಾರ ಜೀವನ ಪ್ರೀತಿ ಮತ್ತು ಜೀವಪರ ಧೋರಣೆಗಳನ್ನು ಕಳೆದುಕೊಳ್ಳಲಿಲ್ಲ. ತೇಜಸ್ವಿಯಂಥವರ ಗೆಳೆತನವೂ ಅವರ ಈ ಗುಣಗಳಿಗೆ ಪುಷ್ಟಿ ನೀಡಿತು. ಈ ಗುಣಗಳೇ ಅವರೊಳಗೊಬ್ಬ ದೊಡ್ಡ ಬಂಡಾಯಗಾರನನ್ನು ಚಳವಳಿಗಾರನನ್ನು ರೂಪಿಸಿದವು. ಹೀಗಾಗಿಯೇ ಶಾಮಣ್ಣ ಅನೇಕ ಜನಪರ ಚಳುವಳಿಗಳ ಮುಂಚೂಣಿಯಲ್ಲಿ ನಿಲ್ಲುವುದು ಸಾಧ್ಯವಾಯಿತು.

('ಕಾಡತೊರೆಯ ಜಾಡು'–ಕಡಿದಾಳು ಶಾಮಣ್ಣನವರ ಆತ್ಮಕಥನಕ್ಕೆ ಬರೆದ ಮುನ್ನುಡಿಯ ಆಯ್ದ ಭಾಗ)

ನಮ್ಮ ಹಳ್ಳಿಗಾಡಿನಲ್ಲಿ ಶಾಮಣ್ಣನವರು

ಲೈಬ್ರರಿ ವಿಶ್ವನಾಥ

ಮೈದೊಳಲು, ಅಗರದಹಳ್ಳಿ, ಭಗವತೀಕೆರೆ ಈ ಗ್ರಾಮೀಣ ಪ್ರದೇಶದಲ್ಲಿ ಅಪರೂಪದ ವ್ಯಕ್ತಿಯೊಂದು ನಮ್ಮ ಹಳ್ಳಿಗರ ಜೊತೆ ಬೆರೆಯುತ್ತ ಓಡಾಡುತ್ತಿರುವುದು ತಾರುಣ್ಯದಲ್ಲಿ ಪ್ರಾಪ್ತಿಯಾದ ನಮ್ಮ ಹೊಸ ಕಣ್ಣುಗಳಿಗೆ ಗೋಚರಿಸಿತು. ಅವರ ಸರಳತೆ, ವಿಶ್ವಾಸ ತುಂಬಿದ ಮಾತುಕತೆಗಳು ನಮ್ಮನ್ನು ಆಕರ್ಷಿಸಿದವು. ಅವರ ಆಕಾರದಿಂದಲೇ ನಮಗೆ ಎಲ್ಲಿಂದಲೊ ಬಂದ ಪ್ರವಾದಿಯಂತೆ ಕಾಣು ತ್ತಿದ್ದರು. ಅವರ ನಡವಳಿಕೆಯಲ್ಲಿ ಜಾತಿಪಾತಿಗಳ ವಾಸನೆಯಿರಲಿಲ್ಲ. ದೇವರು ದಿಂಡಿರ ಸಹವಾಸವಿರಲಿಲ್ಲ. ಪ್ರೀತಿ–ಪ್ರೇಮ ಸಹಬಾಳ್ವೆಯ ವಿವೇಕ ಅವರ ಬಾಯಿಂದ ಬರುತ್ತಿದ್ದವು. ಸಹಜವಾಗಿ ನಮಗೆ ಶಾಮಣ್ಣನವರನ್ನು ಕಂಡರೆ ಇವರೇ ನಮ್ಮ ನಿಜವಾದ ನಾಯಕರು ಅನ್ನಿಸಿತು. ಶಾಮಣ್ಣನವರ ಆದರ್ಶಗಳಿಗೆ ಮನಸೋತ ಹೆಣ್ಣುಮಗಳೊಬ್ಬಳು ಧೈರ್ಯಮಾಡಿ ಅನ್ಯ ಜಾತಿಯ ಹುಡುಗನನ್ನು ಪ್ರೀತಿಸಿ ಓಡಿ ಹೋಗಿ ಮದುವೆಯಾ ದಳು. ಮುಗ್ಧ ತಂದೆತಾಯಿಗಳಿಗೆ ಇದು ಅಕ್ಷಮ್ಯ ಅಪರಾಧವಾಗಿ ಕಂಡಿತು. ಮಗಳು ಅಂತರ್ಜಾತಿ ವಿವಾಹವಾದುದಕ್ಕೆ ಈ ಶಾಮಣ್ಣನವರೇ ಕಾರಣವೆಂದು

ತೀರ್ಮಾನಿಸಿದರು. ವಾಸ್ತವವಾಗಿ ಮಗಳ ಕೃತ್ಯವನ್ನು ಅವರು ಸಹಿಸುವವರಾಗಿದ್ದರೂ ಕುಲಭಾಂದವರಿಗೆ ಹೆದರಿದ್ದರು. ಈ ಭಯ ಆಕ್ರೋಶಗೊಂಡು ಶಾಮಣ್ಣನವರ ಕಡೆ ತಿರುಗಿತು. ಆದ್ದರಿಂದ ಶಾಮಣ್ಣನವರ ಮೇಲೆ ಹಲ್ಲೆ ಮಾಡಲು ತಯಾರಾದರು. ಆದರೆ ಅದು ಅಷ್ಟು ಸಲಭವಾಗಿ ಕಾಣಲಿಲ್ಲ. ಏಕೆಂದರೆ ಶಾಮಣ್ಣನವರು ಅಲ್ಲಿನ ಮೂಲಪುರುಷರಂತೆ ಬೇರುಬಿಟ್ಟುಕೊಂಡು ಜನಾನುರಾಗಿಯಾಗಿದ್ದರು. ಇಲ್ಲಿನ ಯಾವುದೇ ಊರಿಗೆ ಬಂದರೂ ತಮ್ಮ ಕಾರಿನಲ್ಲಿ ತಬಲ ಹಾರ್ಮೋನಿಯಂ ಕೊಳಲಿನೊಂದಿಗೆ ಬಂದು, ಯಾರ್‍ಯಾರೋ ಅಂಥ ಕಲಾವಿದರನ್ನು ಕರೆತಂದು, ಗಂಟೆಗಟ್ಟಲೆ ಸಂಗೀತ ಸುಧೆ ಹರಿಸಿ ಹೋಗುತ್ತಿದ್ದರು. ಗ್ರಾಮೀಣ ಭಾಗದ ಜನರಿಗೆ ಅವರು ರೈತನಾಯಕರಷ್ಟೇ ಆಗಿರಲಿಲ್ಲ. ಬದಲಿಗೆ ಕಲೆ, ಸಾಹಿತ್ಯ, ಹೊತ್ತು ತರುವ ಅಪರೂಪದ ಕಲಾನಿಧಿಯಾಗಿದ್ದರು. ಇಂತಹ ಜನಾನುರಾಗಿಯ ಮೇಲೆ ಹಲ್ಲೆ ಮಾಡುವುದೂ ಒಂದೆ ತಾವೇ ನಾಶವಾಗುವುದೂ ಒಂದೆ ಎಂದು ಬಗೆದರೋ ಏನೊ, ಅಂತೂ ಶಾಮಣ್ಣನಂತಹ ವ್ಯಕ್ತಿ ನಮ್ಮೂರಿಗೆ ಬರಬಾರದೆಂದು ಕಟ್ಟಪ್ಪಣೆ ಮಾಡಿದರು. ನಮಗೆಲ್ಲಾ ಸಿಟ್ಟು ಬಂದಿದ್ದರಿಂದ ಶಾಮಣ್ಣನವರನ್ನು ಊರಿಗೆ ಬರದಂತೆ ಮಾಡಲು ಊರು ಇವರಪ್ಪನದೆ? ಶಾಮಣ್ಣನವರು ನಮಗೆ ಬೇಕು. ಅವರು ನಮ್ಮ ಮನೆಯ ಸದಸ್ಯರು, ನಮ್ಮ ಮನೆಯವರು. ನಮ್ಮ ಮನೆಗೆ ಬರುವುದನ್ನು ತಡೆಯಲು ನೀವ್ಯಾರು? ಎಂಬ ಧಮಕಿ ಹಾಕಿದೆವು. ಅಷ್ಟಕ್ಕೂ ನಿಮ್ಮ ಮಗಳ ಮದುವೆಗೂ ಶಾಮಣ್ಣನವರಿಗೂ ಸಂಬಂಧವಿಲ್ಲ ಎಂದಾಗ, ಎಂದಿನಂತೆ ನಮ್ಮ ಪ್ರಾಂತ್ಯದಲ್ಲಿ ಶಾಮಣ್ಣನವರು ತಿರುಗಾಡುತ್ತ ತಾವು ತರುವ ವಾದ್ಯಗಳ ಜೀವ ಹಿಂಡುವ ಕೆಲಸ ನಿರಾತಂಕವಾಗಿ ಮುಂದುವರಿಯಿತು.

ಶಾಮಣ್ಣನವರು ತಮ್ಮ ತೋಟದ ಕೆಲಸ ಕಾರ್ಯಗಳನ್ನು ಬಹಳ ಅಚ್ಚುಕಟ್ಟಾಗಿ ಮಾಡಿಕೊಂಡಿರುತ್ತಿದ್ದ ಪರಮೇಶಿಗೆ ಮದುವೆ ಮಾಡಲು ತೀರ್ಮಾನಿಸಿದರು. ದಂಪತಿಗಳಿಬ್ಬರೂ ತಮ್ಮದೇ ಕಾರಿನಲ್ಲಿ ಮೈದೊಳಲು ಗ್ರಾಮದ ಈಶ್ವರಪ್ಪ, ನಾಗೇಶ, ಲೈಬ್ರರಿ ಪರಮೇಶಿ, ತಿಪ್ಪೋಜಿ ಮತ್ತು ವೀರಪ್ಪನವರನ್ನ ಜೊತೆಗೆ ಕರೆದುಕೊಂಡು ಶಿವಮೊಗ್ಗ ಸಮೀಪದ ಹರಮಘಟ್ಟದಲ್ಲಿ ಹುಡುಗಿಯನ್ನ ನೋಡಿದರು. ಹುಡುಗಿಯ ಬಂಧು-ಬಳಗವನ್ನೆಲ್ಲಾ ಕೂರಿಸಿಕೊಂಡು ಮದುವೆಯ ಬಗ್ಗೆ ಮಾತನಾಡಿ ಸರಳ ರೀತಿಯಲ್ಲಿ ಮದುವೆ ಮಾಡಿ ಮುಗಿಸಬೇಕು, ಅದು ಕುವೆಂಪುರವರ ಮಂತ್ರ ಮಾಂಗಲ್ಯದಂತೆ ನಡೆಯುತ್ತೆ ಎಂದಾಗ, ಆ ಮುಗ್ಧರಿಗೆ ಸರಳ ಮದುವೆ ಅರ್ಥವಾಯ್ತೆ ಹೊರತು, ಕುವೆಂಪು ಮಂತ್ರಮಾಂಗಲ್ಯ ಅಂದರೇನೆಂದು ಅರ್ಥವಾಗಲಿಲ್ಲ. ಶಾಮಣ್ಣ ಮಂತ್ರಮಾಂಗಲ್ಯ ಮದುವೆಯ ಅರ್ಥ ವಿವರಿಸಿದರು. ಹುಡುಗಿಯ ಕಡೆ ಇಪ್ಪತ್ತೈದು ಜನ ಹುಡುಗನ ಕಡೆಯೂ ಅಷ್ಟೆ ಜನ. ಎಲ್ಲರೂ ಸೇರಿ ಪುರೋಹಿತರ ಬದಲಿಗೆ

ನಾವೇ ಮಂತ್ರ ಹೇಳಿ ತಾಳಿ ಕಟ್ಟಿಸುವುದೇ ಮಂತ್ರ ಮಾಂಗಲ್ಯ ಮದುವೆ ಎಂದರು. ಅದಕ್ಕೆ ವಧುವಿನ ಕಡೆಯವರು ಒಪ್ಪಿದರು. ಶಾಮಣ್ಣನವರು ತಮ್ಮ ಮನೆಯ ಮುಂದೆಯೇ ಮದುವೆ ಮಾಡಿಕೊಡಲು ಸಂಭ್ರಮದಿಂದ ಓಡಾಡತೊಡಗಿದರು. ಹುಡುಗ ಹುಡುಗಿಗೆ ಬೇಕಾದ ಸೀರೆ, ತಾಳಿ ಸರ, ಬಟ್ಟೆ ಇತ್ಯಾದಿ ಮದುವೆ ಪರಿಕರಗಳನ್ನು ಕೊಂಡು ಮೈದೊಳಲಿನ ತಮ್ಮ ಹಿಂಬಾಲಕರೊಡಗೂಡಿ ಮಂತ್ರ ಮಾಂಗಲ್ಯ ಭೋದನೆಯನ್ನು ವೀರಪ್ಪನವರಿಗೆ ವಹಿಸಿ, ಓದಿಸಿ, ಅದರ ವಿವರವನ್ನು ಜನರಿಗೆ ಮನವರಿಕೆ ಮಾಡಿಕೊಟ್ಟರು. ಇನ್ನುಳಿದ ಊಟದ ವ್ಯವಸ್ಥೆಯಲ್ಲಿ ತಮ್ಮ ಮಗನ ಮದುವೆಯೇನೊ ಎಂಬಂತೆ ಮುತುವರ್ಜಿಯಿಂದ ಓಡಾಡಿದರು. ತಮ್ಮ ಎಲ್ಲಾ ಜವಾಬ್ದಾರಿಯ ನಡುವೆ ಫೋಟೋಗ್ರಾಫರ್ ಕೂಡ ಆಗಿದ್ದರು. ಈ ಮದುವೇಲಿ ಶಾಮಣ್ಣನವರಿಂದ ಸಾವಿರಾರು ರೂಪಾಯಿ ಖರ್ಚಾಯಿತು. ಆದರೆ ಆ ಬಗ್ಗೆ ಶಾಮಣ್ಣ ತಲೆಕೆಡಿಸಿಕೊಳ್ಳಲಿಲ್ಲ. ನಂಬಿಕಸ್ಥ ಹುಡುಗನ ಮದುವೆಗೆ ಮಾಡಿದ ಖರ್ಚಿನ ಲೆಕ್ಕವನ್ನೆ ಇಡಲಿಲ್ಲ.

ಆದರೆ ಮದುಮಗ ಪರಮೇಶಿ, ಮದುಮಗಳೊಂದಿಗೆ ಯಾರಿಗೂ ಕಾಣದಂತೆ ರಾತ್ರೋರಾತ್ರಿ ಪರಾರಿಯಾದ. ಶಾಮಣ್ಣ ಒಂದು ಬಗೆಯ ವಿಷಾದದಿಂದ ನಕ್ಕರೇ ಹೊರತು, ಇನ್ನಾವ ಪ್ರತಿಕ್ರಿಯೆ ತೋರಲಿಲ್ಲ. ಕುವೆಂಪುರವರ ಮಂತ್ರಮಾಂಗಲ್ಯ ಮದುವೆ ಯಶಸ್ವಿಯಾಗಿ ನೆರವೇರಿದ ತೃಪ್ತಿ ಮಾತ್ರ ಅವರ ಕಣ್ಣುಗಳಲ್ಲಿತ್ತು.

ಒಮ್ಮೆ ಊರಿನ ಗ್ರಾಮಸ್ಥರು ಊರ ಹೊರಗಿದ್ದ ದೇವಾಲಯ ಪ್ರವೇಶದ್ವಾರ ನಿರ್ಮಾಣಕ್ಕೆ ಕೈಹಾಕಿ, ಜಾಗವನ್ನು ಗುರುತು ಮಾಡಿ ಇದೇ ಸರಿಯಾದ ಜಾಗವೆಂದು ನಿರ್ಧರಿಸಿ ಬಿಟ್ಟರು. ಆ ಜಾಗದ ಪಕ್ಕದಲ್ಲೇ ಒಂದು ಆಲದ ಮರವಿತ್ತು. ಇದರಿಂದ ಮುಂದೆ ದ್ವಾರ ಬಾಗಿಲಿಗೆ ತೊಂದರೆಯಾಗಬಹುದೆಂದು ಒಂದು ಗುಂಪು ಚರ್ಚಿಸಿ, ಮರವನ್ನು ಕಡಿಯುವ ನಿರ್ಧಾರ ಮಾಡಿತು. ಮತ್ತೊಂದು ಗುಂಪು ಮರವನ್ನು ಕಡಿಯದೆ ಪ್ರವೇಶ ದ್ವಾರದ ಜಾಗವನ್ನೇ ಸರಿಸಿ ಮರ ಉಳಿಸಿಕೊಂಡರೆ ಹೇಗೆ ಎಂಬ ಚರ್ಚೆ ಮಾಡಿತು. ಇದರ ಹಿಂದೆ ಶಾಮಣ್ಣನವರಿದ್ದರು. ಆದರೇನು, ಬೆಳಗಾಗುವಷ್ಟರಲ್ಲಿ ಆಲದಮರ ಧರೆಗುರುಳಿತ್ತು. ಇದರಿಂದ ಶಾಮಣ್ಣನವರು ಸಜ್ಜನ ವ್ಯಕ್ತಿಯ ಕೊಲೆ ನೋಡಿದವರಂತೆ ಗರಬಡಿದಂತಾದರು. ಪ್ರತಿದಿನ ನೋಡುತ್ತಿದ್ದ ಆ ಮರದ ಜಾಗ ಬೋಳಾಗಿರುವುದನ್ನು ನೋಡಿ, ಕೊರಗಿದರು. ಅಲ್ಲದೆ ಅನ್ಯಾಯವಾಗಿ ನೆರಳು ಕೊಡುವ ನೂರಾರು ಪಕ್ಷಿಗಳಿಗೆ ಆಶ್ರಯವಿತ್ತಿದ್ದ ಮರವನ್ನೇ ಕಡಿದ ಬಗ್ಗೆ ಸಿಕ್ಕ ಸಿಕ್ಕ ಜನಗಳ ಹತ್ತಿರ ಹೇಳಿಕೊಂಡರು. ಆದರೆ ಏನು ಮಾಡು ವಂತಿರಲಿಲ್ಲ. ಈ ನಡುವೆ ಯಾರೋ ಅರಣ್ಯ ಇಲಾಖೆಯವರಿಗೆ ದೂರೊಂದನ್ನು ಕೊಟ್ಟಿದ್ದರು ಕಾರ್ಯಪ್ರವೃತ್ತರಾದ ಕಾಡಿನ ಇಲಾಖೆಯವರು ಪೋಲೀಸರೊಂದಿಗೆ

ಊರಿಗೆ ಬಂದು ವಿಚಾರಿಸತೊಡಗಿದರು. ಇದರಿಂದ ಊರಲ್ಲಿ ಶಾಮಣ್ಣನವರ ಬಗ್ಗೆ ಅನುಮಾನ ಬಂದು, ಬಾಯಿಗೆ ಬಂದಂತೆ ನಿಂದಿಸತೊಡಗಿದರು. ಕುಡುಕರಂತೂ ಶಾಮಣ್ಣನವರನ್ನ ಹಿಗ್ಗಾ ಮುಗ್ಗ ಬೈದರು. ಪರಿಸ್ಥಿತಿಯ ತೀವ್ರತೆಯನ್ನರಿತ ಶಾಮಣ್ಣನವರು, ತಾವು ದೂರು ಕೊಡದೇಯಿದ್ದರೂ, ಆ ಮರದ ಉಪಯುಕ್ತತೆ ಮತ್ತು ಪರಿಸರದ ಬಗ್ಗೆ ಜನಕ್ಕೆ ಉಪದೇಶ ಮಾಡಿದರು. ಇದೇನೂ ಅವರಿಗೆ ಅರ್ಥವಾದಂತಿರಲಿಲ್ಲ. ಶಾಮಣ್ಣನವರು ಆಡಿದ ಮಾತೆಲ್ಲವೂ ಬೆಂಕಿಗೆ ತುಪ್ಪ ಸುರಿದಂತಾಗುತ್ತಿತ್ತು. ಶಾಮಣ್ಣನವರ ಜೊತೆಯಿದ್ದ ನಾವುಗಳೂ ಕೂಡ, ಆ ಸಮಯದಲ್ಲಿ ಏನೂ ಹೇಳುವ ಸ್ಥಿತಿಯಲ್ಲಿರಲಿಲ್ಲ. ಈ ಜನಗಳಿಗೆ ಏನು ಹೇಳಿದರೂ ಕೂಡ ಅರ್ಥವೆ ಆಗುತ್ತಿಲ್ಲವಲ್ಲ ಎಂದು ಶಾಮಣ್ಣ ಬಹಳವಾಗಿ ನೊಂದುಕೊಂಡರು. ಕಡೆಗೆ ಅವರ ಗುರುಗಳಾದ ಕವಿ ಜಿ.ಎಸ್. ಶಿವರುದ್ರಪ್ಪನವರು ಬಂದಾಗ, ಅವರ ನೇತೃತ್ವದಲ್ಲಿ ಬಿದ್ದ ಮರವಿದ್ದ ಜಾಗದಲ್ಲಿ ಉಪನ್ಯಾಸ ಕಾರ್ಯಕ್ರಮವೇ ನಡೆಯಿತು. ಶಿವರುದ್ರಪ್ಪನವರು ಪರಿಸರ ಮತ್ತು ಮಾನವ ಹೇಗೆ ಅವಲಂಬಿತರಾಗಿ ಬದುಕಬೇಕು ಎಂಬ ಬಗ್ಗೆ ಎಳೆ ಎಳೆಯಾಗಿ ಬಿಡಿಸಿ ಹೇಳಿದಾಗ, ಪ್ರಕ್ಷುಬ್ದತೆ ತಿಳಿಯಾಯಿತು. ಈ ಮರದ ಸುದ್ದಿ ಶಾಮಣ್ಣನಿಗೆ ಏಕೆ ಬೇಕಿತ್ತು ಎಂದು ಹಲವರು ಆಡಿಕೊಂಡರೂ ಶಾಮಣ್ಣನವರು ಮಾತ್ರ ಬಿದ್ದ ಮರದ ವಿಷಯದಲ್ಲಿ ರಾಜಿಯಾಗದೆ ಹಟಕ್ಕೆ ಬಿದ್ದು ರಾಷ್ಟ್ರಕವಿಗಳನ್ನೆ ಕರೆಸಿ, ಮುಂದೆ ಮರ ಕಡಿಯಬೇಕಾದರೆ ಯೋಚಿಸುವಂತೆ ಮಾಡಿದರು. ಶಾಮಣ್ಣನವರ ಜೊತೆಯಿದ್ದ ನಮಗೂ ಕೂಡ ಸಾಮಾಜಿಕ ಜವಾಬ್ದಾರಿಯ ಅರಿವಾಯಿತು.

ಶಾಮಣ್ಣನವರು ತಮ್ಮ ಉಪಾಧ್ಯಾಯ ವೃತ್ತಿ ಬಿಟ್ಟು ನಮ್ಮ ಏರಿಯಾಕ್ಕೆ ಬಂದು ನೆಲೆಸಿದಾಗ ಜಮೀನು ಕೊಳ್ಳಲೆಂದು ಎಡೇಹಳ್ಳಿ ಗ್ರಾಮಕ್ಕೆ ಬಂದ ಸುದ್ದಿ ಹನುಮಂತಾಪುರದ ಗಿರಿಯಪ್ಪನವರಿಗೆ ತಿಳಿಯಿತು. ಕೂಡಲೇ ಅವರು ಶಾಮಣ್ಣನವರನ್ನು ಕರೆಸಿಕೊಂಡು, ತಾವು ನನ್ನ ಆತ್ಮೀಯರಾದ ಕಡಿದಾಳು ಮಂಜಪ್ಪನವರ ಸಂಬಂಧಿಗಳೆಂದು ತಿಳಿಯಿತು. ನೀವು ಈ ಭಾಗಕ್ಕೆ ಹೊಸಬರಾದ್ದರಿಂದ ಜಮೀನು ಖರೀದಿಸುವುದಾದರೆ ನಮ್ಮೂರಲ್ಲೇ ಖರೀದಿಸಿ. ಅದಕ್ಕೆ ನಾನೇ ಮುಂದೆ ನಿಂತು ವ್ಯಾಪಾರ ಮಾಡಿಸಿಕೊಡುತ್ತೇನೆ ಎಂದು ಆಶ್ವಾಸನೆಯಿತ್ತಿದ್ದಲ್ಲದೆ, ಸಮೀಪದಲ್ಲೇ ಇದ್ದ ೧೬ ಎಕರೆ ತಮಿಳು ಜನಗಳ ಜಮೀನು ತೋರಿಸಿದರು. ಆ ಜಮೀನು ಶಾಮಣ್ಣನವರಿಗೆ ಇಷ್ಟವಾಯಿತು. ವ್ಯಾಪಾರ ಕುದುರಿದ ನಂತರ ಸ್ವಲ್ಪ ಹಣವನ್ನು ಮಾತ್ರ ಅವರ ಕೈಗಿತ್ತು. ಉಳಿದ ಹಣವನ್ನು ನೀವು ಬೇರೆ ಜಮೀನು ಕೊಳ್ಳುವಾಗ ಚುಕ್ತಾ ಮಾಡುವ ಕರಾರು ಪತ್ರದೊಂದಿಗೆ ವ್ಯವಹಾರ ಮುಗಿಯಿತು. ಪೂರ್ತಿ ಹಣವನ್ನು ಈಗಲೇ ಕೊಟ್ಟರೆ ಕುಡಿದು ಖರ್ಚು ಮಾಡಿಕೊಂಡು ಹಾಳಾಗುತ್ತರೆಂದು

ಶಾಮಣ್ಣ ಈ ಪ್ಲಾನ್ ಮಾಡಿದ್ದರು. ಅದರಂತೆ ಅವರೂ ನಡೆದುಕೊಂಡರು. ಆದರೆ ಶಾಮಣ್ಣನ ಜಮೀನು ಪಕ್ಕವಿದ್ದ ಹುಗ್ಗಿ ಈಶ್ವರಪ್ಪಗೌಡರು ಜಮೀನಿಗೆ ಒಡ್ಡು ಕಟ್ಟಿ ಅಲ್ಲಿ ನೀರು ನಿಂತು ಶಾಮಣ್ಣ ಬೆಳೆ ಬೆಳೆಯದಂತೆ ತೊಂದರೆ ಕೊಡಲಾರಂಭಿಸಿದರು. ಈ ಸಂಬಂಧವಾಗಿ ಮಾತನಾಡಿದರೆ, ಜಗಳದ ಕ್ಯಾತೆ ತೆಗೆಯುತ್ತಿದ್ದರು. ಇದು ಹಳ್ಳಿ ಮಟ್ಟದ ಪಂಚಾಯ್ತಿಯಿಂದಲೂ ಬಗೆಹರಿಯಲಿಲ್ಲ. ಕಡೆಗೆ ಜಮೀನಿನ ವ್ಯಾಜ್ಯ ಎ.ಸಿ. ಕೋರ್ಟಿಗೆ ಹೋಯಿತು. ಅಲ್ಲಿ ವಾದಿ ಮತ್ತು ಪ್ರತಿವಾದಿ ವಕೀಲರು ವೀರಾವೇಶದಲ್ಲಿ ವಾದಿಸುತ್ತಿದ್ದರೆ, ಶಾಮಣ್ಣ ಮತ್ತು ಹುಗ್ಗಿ ಈಶ್ವರಪ್ಪ ಜೊತೆಯಲ್ಲೇ ಕುಳಿತು ಹರಟುತ್ತಿದ್ದರು. ಅಷ್ಟೇ ಅಲ್ಲದೆ ಹೊರಗಡೆಯೂ ಕಾಫಿ ಕುಡಿಯುತ್ತ ಪಟ್ಟಾಂಗ ಹೊಡೆಯುತ್ತಿದ್ದರು. ಇದು ವಕೀಲರಿಗಲ್ಲದೆ ಸಾರ್ವಜನಿಕರಿಗೂ ಕುತೂಹಲದ ಸಂಗತಿಯಾಗಿತ್ತು. ಈ ಬಗ್ಗೆ ಜನಗಳು ಕೇಳಿದಾಗ "ನೋಡಿ ನಮ್ಮ ಜಮೀನಿನ ಸಮಸ್ಯೆ ನಮ್ಮ ವ್ಯಾಪ್ತಿ ಮೀರಿ ಕೋರ್ಟಿನಲ್ಲಿದೆ. ಬಗೆಹರಿಸಿಕೊಡುವ ಜವಾಬ್ದಾರಿ ಅವರದ್ದು. ಆದ್ದರಿಂದ ನಮ್ಮ ಎಂದಿನ ಸ್ನೇಹಕ್ಕೆ ಯಾವ ತೊಂದರೆಯೂ ಆಗಿಲ್ಲ. ಇದೇ ಕಾರಣಕ್ಕೆ ಹಾವು ಮುಂಗುಸಿಯಂತಾಡುವುದು ಸರಿಯಿಲ್ಲ. ಹಾಗಾಗಿ ನಾವು ಎಂದಿನಂತೆ ಸ್ನೇಹದಲ್ಲಿದ್ದೇವೆ" ಎಂದರು. ಇದು ಸಾರ್ವಜನಿಕರಿಗೆ ನೀತಿಪಾಠದಂತಿತ್ತು.

ಶಾಮಣ್ಣನವರು ಕಾರಿನಲ್ಲಿ ಓಡಾಡಬೇಕಾದರೆ ರಸ್ತೆಯಲ್ಲೇ ಭತ್ತ, ರಾಗಿ ಬಡಿದು ತೂರುವ ರೈತರನ್ನ ನೋಡಿದ್ದರು. ಕಣ ಮಾಡಲಾರದೆ ಟಾರು ರಸ್ತೆಯನ್ನೆ ಕಣ ಮಾಡಿಕೊಂಡವರ ಎದುರು ರೈತನಾಯಕ ಕಾರಿನಲ್ಲಿ ಓಡಾಡುತ್ತ ರಸ್ತೆ ಬಿಟ್ಟು ಕೆಳಗೆ ಇಳಿಯದೇ ಓಡಾಡುವ ಬಗ್ಗೆ ಏನಾದರೂ ಅಂದುಕೊಂಡಾರೆಂದು ಒಮ್ಮೆ, ಮೈದೊಳಲ ಈಶ್ವರಪ್ಪ ಮತ್ತು ಸಂಗಡಿಗರೊಂದಿಗೆ ಹೋಗುವಾಗ, ಭತ್ತದ ಹುಲ್ಲಿನ ಮೇಲೆ ನಿಲ್ಲಿಸಿದರು. ಸ್ಟಾರ್ಟ್ ಮಾಡಿದರೂ ಮುಂದೆ ಚಲಿಸುತ್ತಿಲ್ಲ. ಒಕ್ಕಲು ಮಾಡುವ ರೈತರಿಂದಲೇ ಸುಮಾರು ದೂರ ತಳ್ಳಿಸಿಕೊಳ್ಳುವಾಗ ಹಿಂದೆ ವಾಹನಗಳು ಬಂದು ಜಮಾವಣೆಗೊಂಡವು. ರಸ್ತೆ ಜಾಮ್ ಆಯಿತು. ಗಾಡಿಯಿಂದ ಇಳಿದ ಶಾಮಣ್ಣ ರೈತರನ್ನ ಕರೆದು ವಿನಯದಿಂದ "ನೋಡಿ ನೀವು ಮಾಡಿದ ಕೆಲಸದಿಂದ ನನ್ನ ಗಾಡಿ ಕೆಟ್ಟಿದೆ. ಹಿಂದೆ ನಿಂತ ಗಾಡಿಗಳಲ್ಲಿ ಆಸ್ಪತ್ರೆ, ಸ್ಕೂಲಿಗೋಗುವವರಿದ್ದಾರೆ. ಅವರು ಯಾವುದೇ ತಡೆಯಿಲ್ಲದೆ ಓಡಾಡಬಾರದೇ? ಈಗಾಗಲೇ ಹೆಚ್.ಇ. ಡಿಸ್ಟಿಲರಿ ಸಮೀಪ ಹುಲ್ಲಿನೊಳಗಿದ್ದ ಕಲ್ಲಿನಿಂದ ಬೈಕ್ ಸವಾರ ಸತ್ತಿದ್ದಾನೆ. ಆದ್ದರಿಂದ ನಾವು ನಮ್ಮ ಜಮೀನಿನಲ್ಲೇ ಒಕ್ಕಲು ಮಾಡಬೇಕೆಂದು ವಿನಂತಿ ಮಾಡಿದರು. ಆನಂತರ ಗೊತ್ತಾಗಿದ್ದೇನೆಂದರೆ, ಶಾಮಣ್ಣ ತಮ್ಮ ಕಾರು ಕೆಟ್ಟಂತೆ ಮಾಡಿ ರೈತರಿಂದ ದೂಡಿಸಿಕೊಂಡಿದ್ದರು. ರೈತರನ್ನು ತಿದ್ದುವ ಅವರ ಸಂಚುಗಳು ಯಾರಿಗೂ ಗೊತ್ತಾಗುತ್ತಿರಲಿಲ್ಲ.

ರಸ್ತೆ ಇಲಾಖೆಯವರು, ಅಪಘಾತಗಳನ್ನು ತಡೆಯುವ ಸಲುವಾಗಿ, ಅತಿಯಾದ ವೇಗ ನಿಯಂತ್ರಿಸುವ ದೃಷ್ಟಿಯಿಂದ ಅವೈಜ್ಞಾನಿಕ ಉಬ್ಬುಗಳನ್ನು ನಿರ್ಮಿಸಿ, ಬಿಲ್ ಮಾಡಿ ನೆಕ್ಕಿಕೊಂಡು ಹೋಗಿದ್ದರು. ಆದರೆ ಅಪಘಾತಗಳು ದಿನೇ ದಿನೇ ನಡೆಯುತ್ತಿದ್ದವು. ಇದರಿಂದ ಆ ಇಲಾಖೆ ತಲೆಕೆಡಿಸಿಕೊಳ್ಳದೆ ತೆಪ್ಪಗಿತ್ತು. ಆಗ ಶಾಮಣ್ಣನವರು ಇಲಾಖೆಗೆ ದೂರು ಬರೆದರು. ಅಲೆದರು. ಇದರಿಂದಲೂ ಪ್ರಯೋಜನವಾಗಲಿಲ್ಲ. ಕಡೆಗೆ ಅರಿವು ವೇದಿಕೆಯ ಅಧ್ಯಕ್ಷ ಈಶ್ವರಪ್ಪ, ಮತ್ತಿತರರ ಜೊತೆಗೂಡಿ, ಎರಡು ಲೀಟರ್ ಬಿಳಿ ಬಣ್ಣ ಮತ್ತು ಬ್ರೆಷ್ ತೆಗೆದುಕೊಂಡು, ಶಿವಮೊಗ್ಗದ ಗುರುಪುರದಿಂದ ರಸ್ತೆಯ ಉಬ್ಬುಗಳಿಗೆ ಜೀಬ್ರಾ ಪಟ್ಟಿಯನ್ನು ಸ್ವತಃ ತಮ್ಮ ಹುಡುಗರ ಜೊತೆ ಬಳಿಯುತ್ತಾ ಜಾವಳ್ಳಿಯವರೆಗೂ ಬಂದರು. ಇವರ ಕೆಲಸದಿಂದ ವಾಹನಗಳಿಗೆ ತೊಂದರೆಯಾಗಿದೆ. ಶಾಮಣ್ಣನ ಕೆಲಸ ನೋಡಿದವನೊಬ್ಬ ಶಿವಮೊಗ್ಗದ ಟ್ರಾಫಿಕ್ ಇನ್ಸ್‌ಪೆಕ್ಟರಿಗೆ ಸುದ್ದಿ ಮುಟ್ಟಿಸಿದ್ದಾನೆ. ಕೂಡಲೇ ಬಂದ ಪೋಲಿಸರು ಶಾಮಣ್ಣನ ಬಳಿ ಹೋಗಿ, ತಮ್ಮ ತಪ್ಪನ್ನು ಒಪ್ಪಿಕೊಂಡು ಕ್ಷಮಿಸುವಂತೆ ಕೇಳಿದರು. ಶಾಮಣ್ಣ ಆ ಕಡೆ ಗಮನ ಕೊಡದೆ ತಾವು ಹಿಡಿದ ಕೆಲಸ ಮಾಡಿ ಮುಗಿಸಿದರು. ಸ್ವಲ್ಪ ದಿನಗಳಲ್ಲೇ ಉಬ್ಬು, ರಸ್ತೆ ತಿರುವು ಮತ್ತು ಇನ್ನಿತರ ಸೂಚನೆಗಳ ಸೂಚನಾ ಫಲಕಗಳು, ಪೋಲಿಸರಿಂದ ಕಾಣಿಸಿಕೊಂಡವು. ಅಪಘಾತಗಳು ಕಡಿಮೆಯಾದವು. ಹೀಗೆ ಹೇಳುತ್ತಾ ಹೋದರೆ ನೂರಾರು ಘಟನೆಗಳನ್ನು ದಾಖಲಿಸಬಹುದು.

ತೀರ್ಥಹಳ್ಳಿ ಕ್ಷೇತ್ರದಿಂದ, ಗೋಪಾಲಗೌಡರ ಮಗ ರಾಮಮನೋಹರನನ್ನು ಕಣಕ್ಕಿಳಿಸಿದ್ದಾರೆ ಎಂಬ ಸುದ್ದಿ ಬಂತು. ಇದರಿಂದ ರೋಮಾಂಚಿತರಾದ ಶಾಮಣ್ಣ ನಮ್ಮನ್ನೆಲ್ಲಾ ಕರೆದುಕೊಂಡು ಚುನಾವಣಾ ಪ್ರಚಾರದ ಕಣಕ್ಕಿಳಿದರು. ಎದುರು ಪಾರ್ಟಿಯ ಅಭ್ಯರ್ಥಿಗಳು ಬಲಾಢ್ಯರಿದ್ದು ಯಥೇಚ್ಛವಾಗಿ ಹಣ ಖರ್ಚು ಮಾಡುವ ವರಾಗಿದ್ದು, ಅವರ ಎದುರು ನಾವು ತುಂಬ ಬಡತನದಲ್ಲಿಯೇ ಪ್ರಚಾರ ಮಾಡು ವಂತಾಗಿತ್ತು. ಶಾಮಣ್ಣನವರು ಸ್ವಂತ ಕಾರಿನಲ್ಲಿ ತಿರುಗುತ್ತ, ದೇಣಿಗೆ ಹಣದಿಂದ ಕರಪತ್ರ ಹಾಕಿಸಿಕೊಂಡು ಗೋಪಾಲಗೌಡರ ಕಾಲದ ಚುನಾವಣೆ ನೆನಪಿಗೆ ಬರುವಂತೆ ಓಡಾಡುತ್ತಿದ್ದರು. ಇವರ ಉತ್ಸಾಹಕ್ಕೆ ಸ್ಪಂದಿಸಿದ ಜನ ಗೋಪಾಲಗೌಡರ ಮಗನೇ ಬಂದು ನಿಂತಿದ್ದಾನೆಂದು ಸ್ವಂತ ಖರ್ಚಿನಿಂದ ಸಭೆ ಸಮಾರಂಭ ಏರ್ಪಡಿಸುತ್ತಿದ್ದರು. ಊಟ ತಿಂಡಿಯ ಕಡೆ ಗಮನ ಹರಿಸದ ಶಾಮಣ್ಣ ತಮ್ಮ ಅಭ್ಯರ್ಥಿ ಗೆಲುವಿನ ಸಮೀಪವಿದ್ದಾರೆ ಎಂಬಂತೆ ಶ್ರಮವಹಿಸತೊಡಗಿದರು. ಇನ್ನೇನು ಮತದಾನದ ದಿನ ಹತ್ತಿರ ಬಂದಾಗ ಶಾಮಣ್ಣನವರು ತಮ್ಮ ಸ್ವಂತ ಕಾರಿನಲ್ಲಿ ನನ್ನನ್ನ ಮತ್ತು ಈಶ್ವರಪ್ಪ, ನಾಗೇಶ, ತಿಪ್ಪೋಜಿಯನ್ನ ಮತಗಟ್ಟೆಗಳ ಭೇಟಿಗೆ ಕರೆದುಕೊಂಡು

ಹೋಗಿ ರಹಸ್ಯ ಚುನಾವಣಾ ವೀಕ್ಷಕರನ್ನಾಗಿ ಬಿಟ್ಟಿದ್ದರು. ಬೆಳಿಗ್ಗೆಯಿಂದ ಸಂಜೆಯವರೆಗೆ ಅವರ ಜೊತೆ ತಿರುಗಾಡಿ ತೀರಾ ಸುಸ್ತಾಗಿದ್ದೆವು. ರಾತ್ರಿ ಅವರ ಸಹೋದರ ಕಡಿದಾಳು ಪ್ರಕಾಶ್ ಅವರ ಮನೆಯಲ್ಲಿ ಉಳಿದುಕೊಂಡೆವು. ಪ್ರಕಾಶ್ ಶಾಮಣ್ಣನನ್ನು ಮಾತನಾಡಿಸುತ್ತಾ "ಅಣ್ಣಯ್ಯ, ಎಲ್ಲಿಗೆ ಬಂದಿದೆ ನಿಮ್ಮ ಯಲಕ್ಷನ್ ಪ್ರಚಾರ?" ಎಂದು ನಕ್ಕರು. "ಜನರ ಒಲವು ಹ್ಯಾಗಿದೆ ಮತದಾನ ಯಾರ ಪರವಾಗಿದೆ?" ಎಂದು ಕೇಳಿದರು. ಶಾಮಣ್ಣ ಎಲ್ಲ ಪ್ರಶ್ನೆಗಳಿಗೆ ಆತ್ಮವಿಶ್ವಾಸದಿಂದಲೇ ಉತ್ತರಿಸಿದರು. ಆಗ ಪ್ರಕಾಶ್ "ಅಣ್ಣಯ್ಯಾ, ಆ ಹುಡುಗನನ್ನ ಗೆಲ್ಲಿಸೋದಕ್ಕೆ ನೀನು ಮತ್ತು ಆ ಕೋಣಂದೂರು ಲಿಂಗಪ್ಪನನ್ನ ಬಿಟ್ಟರೆ ಇನ್ನ ಯಾರೂ ಓಡಾಡಲಿಲ್ಲ. ಬೇರೆ ಯಾರೂ ತಲೆ ಕೆಡಿಸಿಕೊಂಡಂತೆ ಕಾಣಲಿಲ್ಲ, ಕಾಲ ಬದಲಾಗಿದೆ. ನಿಮ್ಮ ಕಾಲದ ಆದರ್ಶ ಈಗ ನಡೆಯಲ್ಲ. ನಿಮ್ಮ ಅಭ್ಯರ್ಥಿ ಠೇವಣಿ ಉಳಿಸಿಕೊಳ್ಳುವುದು ಕಷ್ಟ. ಸುಮ್ಮನೆ ಊಟ ಮಾಡಿ ಆರಾಮವಾಗಿ ಮಲಗಿದ್ದು ಹೋಗಿ" ಎಂದರು. ಪ್ರಕಾಶರ ಸತ್ಯವಾದ ಮಾತುಗಳು ನಮಗೆ ನಗೆಯುಕ್ಕಿಸಿದರೆ, ಶಾಮಣ್ಣ ಮಾತ್ರ ಆತ್ಮವಿಶ್ವಾಸದಿಂದಲೇ ಇದ್ದರು. ಸೋಲನ್ನು ಖಚಿತಪಡಿಸಿಕೊಂಡೇ ಹೋರಾಡುವುದು ಶಾಮಣ್ಣನವರ ಜಾಯಮಾನ ಎಂದು ಗೆಳೆಯರು ಹೇಳಿದ್ದ ಮಾತು ಜ್ಞಾಪಕಕ್ಕೆ ಬಂತು. ಮುಂದೆ ಪ್ರಕಾಶ್ ಮಾತು ನಿಜವಾಯ್ತು. ರಾಮಮನೋಹರ ಮೂರುವರೆ ಸಾವಿರ ಮತ ಪಡೆದು ತೀರ್ಥಹಳ್ಳಿ ಕ್ಷೇತ್ರದ ವರ್ತಮಾನದ ಪರಿಸ್ಥಿತಿಯನ್ನ ಅನಾವರಣಗೊಳಿಸಿದ್ದ. ಈ ಬಗ್ಗೆ ಶಾಮಣ್ಣನವರನ್ನ ಕೇಳಿದರೆ, ಅವರೆಂದೂ ಸೋಲು ಗೆಲುವಿನ ಬಗ್ಗೆ ತಲೆ ಕೆಡಿಸಿಕೊಳ್ಳದೆ, ಚುನಾವಣೆಯನ್ನು ಎದುರಿಸಿದ ರೀತಿಯ ಬಗ್ಗೆ ಚರ್ಚಿಸುತ್ತಾರೆ. ಉಂಡ ಊಟ, ತಿಂದ ತಿಂಡಿ ಬಗ್ಗೆ ಮಾತನಾಡುತ್ತ ಆ ಕಡೆ ಹೋಗಿ ಬಿಡುತ್ತಾರೆ.

ಶಾಮಣ್ಣನವರು ಮಲೆನಾಡನ್ನು ಬಿಟ್ಟು ನಮ್ಮ ಪ್ರದೇಶಕ್ಕೆ ಬಂದು ನೆಲೆಸಿದ್ದೆ ನಮ್ಮ ಭಾಗ್ಯ ಎಂದುಕೊಂಡಿದ್ದೇವೆ. ಶ್ರೀದೇವಕ್ಕ ಮತ್ತು ಶಾಮಣ್ಣನವರು ನಮ್ಮಲ್ಲಿ ಇರುವುದೇ ನಮಗೊಂದು ಹೆಮ್ಮೆಯ ಸಂಗತಿ. ನಾವು ಎಲ್ಲೇ ಹೋದರೂ ಶಾಮಣ್ಣನವರ ಜೊತೆಗಿದ್ದೇವೆ ಎಂದು ಹೇಳಿಕೊಳ್ಳುವುದೇ ಸಂಭ್ರಮವೆನಿಸಿದೆ. ತಾಲೂಕಾಫೀಸು, ಡಿ.ಸಿ. ಕಛೇರಿ, ಪೋಲಿಸ್ ಠಾಣೆ ಹೀಗೆ ಸರಕಾರಿ ಕಛೇರಿಗಳಲ್ಲಿ ಶಾಮಣ್ಣ ಕಳುಹಿಸಿದ್ದಾರೆ ಎಂದರೆ ಸರಕಾರಿ ಜನ ನಮ್ಮ ಕಡೆ ತುಸು ಗಮನ ಕೊಡುತ್ತಾರೆ. ಅವರ ಮನೆಗೆ ಹೋಗಿ ಬಂದರೆ ಹೊಸ ಆಲೋಚನೆಯನ್ನು ನಮ್ಮ ತಲೆಗೆ ಬಿಟ್ಟು ಕಳುಹಿಸುತ್ತಾರೆ. ಅವರ ತೋಟ, ಮನೆ, ಜಾತಿ ಮತಗಳನ್ನು ಮೀರಿ, ಇದು ನಮ್ಮ ಅಯ್ಯನವರ ಮನೆ, ತೋಟ ಎಂಬ ಭಾವನೆ ಬರುವಂತೆ ಇಲ್ಲಿ ಬಾಳಿದ್ದಾರೆ. ನಾನೀಗಲೂ ಅವರ ಜೊತೆ ಇದ್ದೇನೆ. ಮೈದೊಳಲಿಗೆ ಬಂದರೆ ನಮ್ಮ ಲೈಬ್ರರಿಗೆ ಬರದೇ ಹೋಗುವುದಿಲ್ಲ.

ಶಾಮಣ್ಣ–ಮುಗ್ಧತೆಯ ಸಾಧ್ಯತೆಗಳು

ಡಾ. ರಾಜೇಂದ್ರ ಚೆನ್ನಿ

ಶಾಮಣ್ಣನ ಅನೇಕ ನೆನಪುಗಳಲ್ಲಿ ಅತ್ಯಂತ ನಾಟಕೀಯವಾದುದನ್ನು ಇಲ್ಲಿ ದಾಖಲಿಸುತ್ತಿದ್ದೇನೆ. ಅದು ಶಿವಮೊಗ್ಗೆಯಲ್ಲಿ ಪ್ರಕ್ಷುಬ್ಧವಾದ ಕಾಲ. ಮಲೆನಾಡಿನ ಈ ಕೇಂದ್ರಸ್ಥಾನವನ್ನು ಕೋಮುವಾದಿ ಕಲಹಗಳ ರಂಗಸ್ಥಳವನ್ನಾಗಿ ಮಾಡಲು ಹೊರಟಿದ್ದ ಬಲಪಂಥೀಯ ಸಂಘಟನೆಗಳು ಬಾಬಾ ಬುಡನ್‌ಗಿರಿಯ ಬಗ್ಗೆ ಅನಾವಶ್ಯಕವಾದ ವಿವಾದವೊಂದನ್ನು ಹುಟ್ಟಿಹಾಕಿ ಅದು ಕರ್ನಾಟಕದ ಸಾಮರಸ್ಯದ ನೆಲೆಯನ್ನು ಅಲ್ಲಾಡಿಸತೊಡಗಿತ್ತು. ಹೀಗಾಗಿ ಈ ಕೋಮುವಾದಿ ರಾಜಕೀಯಕ್ಕೆ ವಿರೋಧ ಹಾಗೂ ಪ್ರತಿಭಟನೆಗಳು ಕೂಡ ಶಿವಮೊಗ್ಗೆಯನ್ನು ಕೇಂದ್ರವಾಗಿಟ್ಟುಕೊಂಡೇ ನಡೆದವು. ಅದರಲ್ಲಿ ನಾನು ಸಕ್ರಿಯವಾಗಿ ಭಾಗವಹಿಸಿದೆ. ಅಂದಿನ ಕೆಲವು ಸಾರ್ವಜನಿಕ ಪ್ರತಿಭಟನೆಗಳು ಕಾರ್ಯಕ್ರಮಗಳು ಎಲ್ಲರ ನಿರೀಕ್ಷೆ ಮೀರಿ ಪ್ರಭಾವಶಾಲಿಯಾಗಿದ್ದವು. ಇದರಿಂದ ಬಲಪಂಥೀಯ ಸಂಘಟನೆಗಳಿಗೆ ಅಭದ್ರತೆಯ ಭಾವನೆ ಬರತೊಡಗಿತು. ಅವುಗಳು ಮಾಡಿದ ಕೆಲಸವೆಂದರೆ ವೈಯಕ್ತಿಕವಾಗಿ ಪತ್ರಗಳ ಮೂಲಕ ಬೆದರಿಕೆ ಒಡ್ಡುವುದು. ನನಗೆ ಅತ್ಯಂತ ಅಶ್ಲೀಲವಾದ ಭಾಷೆಯಲ್ಲಿ ಇಂಥ

ಅನೇಕ ಪತ್ರಗಳು ಬಂದವು. ಅದರಲ್ಲಿ ಒಂದು ಪತ್ರದಲ್ಲಿ "ನೀನು ಹಿಂದೂ ಆಗಿರುವುದರಿಂದಾಗಿ ನಿನ್ನ ತಲೆಯನ್ನು ಕತ್ತರಿಸದೇ ನಿನ್ನ ಬರೆಯುವ ಕೈಯನ್ನು ಮಾತ್ರ ಕತ್ತರಿಸುತ್ತೇವೆ" ಎಂದು ಬರೆದದನ್ನು ಓದಿ ಹಿಂದೂ ಐಕ್ಯತೆಯ ವೈಶಾಲ್ಯದ ಬಗ್ಗೆ ಆಶ್ಚರ್ಯವುಂಟಾಯಿತು. ಇಂಥ ಬೆದರಿಕೆಗಳನ್ನು ಆಗ ನಾವು ಗಂಭೀರವಾಗಿ ತೆಗೆದುಕೊಳ್ಳುತ್ತಿರಲಿಲ್ಲ. ಹೀಗಾಗಿ ಐತಿಹಾಸಿಕ ದಾಖಲೆಗಳು ಎನ್ನುವ ಹಾಗೆ ಅವುಗಳನ್ನು ಈವರೆಗೂ ಜೋಪಾನವಾಗಿ ಇಟ್ಟುಕೊಂಡಿದ್ದೇನೆ ಹೊರತು ರಕ್ಷಣೆಯನ್ನು ಕೇಳಲಿಲ್ಲ. ಇನ್ನೊಂದು ಕಾರ್ಯವಿಧಾನವೆಂದರೆ ಹೋರಾಟಗಳಲ್ಲಿ ಭಾಗಿಯಾದವರನ್ನು ನಕ್ಸಲರು ಎಂದು ಪ್ರಚಾರ ಮಾಡುವುದು. ಶೃಂಗೇರಿಯಲ್ಲಿ "ನಾಡಿನಲ್ಲಿರುವ ನಕ್ಸಲರ" ಮೇಲೆ ಕ್ರಮ ಕೈಕೊಳ್ಳಬೇಕೆಂದು ಅರ್ಜಿ ದಾಖಲಾಗಿ ಅದು ನಾನು ಕೆಲಸ ಮಾಡುತ್ತಿದ್ದ ಕುವೆಂಪು ವಿಶ್ವವಿದ್ಯಾಲಯಕ್ಕೆ ಬಂದು ತಲುಪಿತು. ಹಲವಾರು ಬಾರಿ ವಿಧಾನಸಭೆ ಪರಿಷತ್ತುಗಳಲ್ಲಿ ನಮ್ಮ ಬಗ್ಗೆ ಪ್ರಶ್ನೆ ಕೇಳಿ ಅವುಗಳನ್ನು ವಿಶ್ವವಿದ್ಯಾಲಯಕ್ಕೆ ರವಾನಿಸಲಾಯಿತು. ಉದಾರವಾದಿ ಧೋರಣೆ, ಪ್ರಗತಿಪರ ಚಿಂತನೆ ಇವುಗಳು ಪ್ರಬಲವಾಗಿದ್ದ ಆ ಕಾಲದಲ್ಲಿ ವಿಶ್ವವಿದ್ಯಾಲಯವು ಸೂಕ್ತ ಸಮಜಾಯಿಶಿ ನೀಡಿ ಸುಮ್ಮನಾಯಿತು. ಆದರೆ ನಕ್ಸಲ್‌ಪರರಾದ ಪ್ರೊ.ರಾಜೇಂದ್ರ ಚೆನ್ನಿಯವರನ್ನು ಬಂಧಿಸಬೇಕು, ಕೆಲಸದಿಂದ ವಜಾ ಮಾಡಬೇಕು ಎಂದು ಮತ್ತೆ ಮತ್ತೆ ಒತ್ತಡಗಳನ್ನು ತರಲಾಗುತ್ತಿತ್ತು. ಈ ಸುದೀರ್ಘವಾದ ಹಿನ್ನೆಲೆಯನ್ನು ನಾನು ವಿವರಿಸದಿದ್ದರೆ ಮುಂದೆ ನಾನು ವರ್ಣಿಸಲಿರುವ ನಾಟಕೀಯ ಘಟನೆಗಳು ಅರ್ಥವಾಗದಿರಬಹುದು.

ಸರಕಾರೀ ಹಾಗೂ ಖಾಸಗಿ ಕಾಲೇಜುಗಳಲ್ಲಿ ಸ್ನಾತಕೋತ್ತರ ವಿಭಾಗಗಳನ್ನು ಆರಂಭಿಸುವ ಬಗ್ಗೆ ಪರಿಶೀಲಿಸಲು ಒಂದು ಸಮಿತಿಯನ್ನು ವಿಶ್ವವಿದ್ಯಾಲಯವು ರಚಿಸಿ ಅದಕ್ಕೆ ಅಧ್ಯಕ್ಷನಾಗಿದ್ದ ನಾನು ಹಲವಾರು ಸಹೋದ್ಯೋಗಿಗಳೊಂದಿಗೆ ಕೆಲವು ಕಾಲೇಜುಗಳಿಗೆ ಭೇಟಿ ಕೊಡುತ್ತಿದ್ದೆ. ಅಂದು ಸಾಗರದ ಲಾಲ್ ಬಹಾದೂರ್ ಕಾಲೇಜಿನ ಪರಿಶೀಲನೆ ಮಾಡುತ್ತಾ ಕಾಲೇಜಿನ ಗ್ರಂಥಾಲಯಕ್ಕೆ ಬಂದಿದ್ದೆವು. ಅಲ್ಲಿ ಒಂದು ಕನ್ನಡ ಪತ್ರಿಕೆಯನ್ನು ಎತ್ತಿಕೊಂಡು ನೋಡಿದರೆ ಅದರಲ್ಲಿ "ಪ್ರೊ. ಚೆನ್ನಿ ನಕ್ಸಲ್‌ಪರ?" ಎನ್ನುವ ತಲೆಬರಹದ ವರದಿಯಿತ್ತು. ಅದರ ಪ್ರಕಾರ ಕಾರ್ಕಳದಲ್ಲಿ ಕಛೇರಿಯಿದ್ದ ನಕ್ಸಲ್ ನಿಗ್ರಹದಳ (ಅಥವಾ ಪಡೆ, ಹೆಸರು ಮರೆತಿದೆ) ಒಂದು ಚಿಕ್ಕ ಮಾಹಿತಿ ಪುಸ್ತಕವನ್ನು ಹೊರಡಿಸಿ ಅದರಲ್ಲಿ ನಕ್ಸಲರು ಹಾಗೂ ನಕ್ಸಲ್ ಸಮರ್ಥಕರ ಪಟ್ಟಿಯನ್ನು ಕೊಟ್ಟಿತ್ತು. ಅದರಲ್ಲಿ ರೈತ ಮುಖಂಡ ಕಡಿದಾಳ್ ಶಾಮಣ್ಣ, ಪ್ರಾಧ್ಯಾಪಕ ರಾಜೇಂದ್ರ ಚೆನ್ನಿ ಹಾಗೂ ಶಿವಮೊಗ್ಗೆಯ ಪತ್ರಕರ್ತ ಮಂಜುನಾಥ ಇವರುಗಳ ಹೆಸರಿದ್ದವು! ಇದೇ ಸಂದರ್ಭದ ಹೊತ್ತಿಗೆ ಅನೇಕ ಪತ್ರಿಕೆಗಳಲ್ಲಿ ಕುವೆಂಪು ವಿಶ್ವವಿದ್ಯಾಲಯ ಆವರಣದಲ್ಲಿ ನಕ್ಸಲ್ ತರಬೇತಿ ಶಿಬಿರಗಳು ನಡೆದಿವೆ ಎಂಬ

ವರದಿಗಳು ಬರುತ್ತಿದ್ದವು. ಸರಿ ನಾನು ಸಹ-ಅಪರಾಧಿ ಶಾಮಣ್ಣನವರನ್ನು ಸಂಪರ್ಕಿಸಿದೆ. ಅಪ್ಪಟ ಗಾಂಧೀವಾದಿ, ಸಮಾಜವಾದಿ ಶಾಮಣ್ಣನನ್ನು ನಕ್ಸಲ್ ಪರ ಎಂದಿದ್ದು ಎಷ್ಟು ಅಸಂಗತವಾಗಿತ್ತೆಂದರೆ ಎಲ್ಲರಿಗೂ ಸಿಟ್ಟಿನ ಜೊತೆಗೆ ನಗೆಯೂ ಬರುತ್ತಿತ್ತು. ಇಡೀ ಪೊಲೀಸ್ ವ್ಯವಸ್ಥೆಯ ಅಸಂಗತ ವ್ಯವಹಾರಗಳ ಮೇಲೆ ಇದು ಒಂದು ಟಿಪ್ಪಣಿಯ ಹಾಗಿತ್ತು. ಶಾಮಣ್ಣನ ಮೇಲೆ ಬಂದ ಆರೋಪದಿಂದಾಗಿ ಜನರಿಂದ ಎಂಥಾ ನೈತಿಕ ಆಕ್ರೋಶ ವ್ಯಕ್ತವಾಯಿತೆಂದರೆ ಪೋಲೀಸ್ ಹಾಗೂ ಗೃಹ ಇಲಾಖೆಗಳು ಆ ಪ್ರಕಟಣೆ ತಮ್ಮದಲ್ಲ ಎಂದು ಹೇಳತೊಡಗಿದವು. ಶಾಮಣ್ಣನಂತೂ ನಮ್ಮ ನಾಡಿನ ಅರಾಜಕ ಚಕ್ರವರ್ತಿ. ಆದರೆ ಸರಕಾರದ ವಿಶ್ವವಿದ್ಯಾನಿಲಯವೊಂದರಲ್ಲಿ ಕೆಲಸ ಮಾಡುತ್ತಿದ್ದ ನನ್ನಂಥವರು ಈ ಬಗ್ಗೆ ಏನಾದರೂ ಮಾಡಲೇಬೇಕಿತ್ತು. ಅಷ್ಟರಲ್ಲಿ ವಿಶ್ವವಿದ್ಯಾನಿಲಯದ ಕುಲಪತಿಗಳಿಂದ, ಅವರ ಕಛೇರಿಯಿಂದ ಪದೇ ಪದೇ ದೂರವಾಣಿ ಕರೆಗಳು ಬರತೊಡಗಿದ್ದವು. ಇದಕ್ಕೆ ಕಾರಣ ಆನಂತರ ಬಹು ದಿನಗಳ ನಂತರ ನನಗೆ ತಿಳಿಯಿತು. ಪೋಲೀಸ್ ಇಲಾಖೆಯ ದಳವೊಂದರ ಅಧಿಕೃತ ಪ್ರಕಟಣೆಯಲ್ಲಿ ನನ್ನ ಹೆಸರು ನಕ್ಸಲ್ ಸಮರ್ಥಕ/ ಬೆಂಬಲಿಗ ಎಂದು ನಮೂದಾಗಿರುವುದರಿಂದ ನನ್ನನ್ನು ಕೆಲಸದಿಂದ ವಜಾ ಮಾಡಲೇಬೇಕೆಂದು ಒಂದು ಗುಂಪು ಹಟ ಹಿಡಿದು ಕುಲಪತಿಗಳ ಮೇಲೆ ಒತ್ತಡ ತರುತ್ತಿತ್ತು. ನಾನು ಸರಕಾರದಿಂದ ಅಥವಾ ನ್ಯಾಯಾಲಯದಿಂದ ಈ ಬಗ್ಗೆ ಸ್ಪಷ್ಟೀಕರಣ ಅಥವಾ stay order ತರದಿದ್ದರೆ ವಿಶ್ವವಿದ್ಯಾಲಯಕ್ಕೆ ಕಷ್ಟವಾಗಬಹುದು ಎನ್ನುವ ಆತಂಕವಿತ್ತು. ಹೀಗಾಗಿ ನಾನು, ಶಾಮಣ್ಣ ಹಾಗೂ ಮಂಜುನಾಥ ಶಿವಮೊಗ್ಗೆಯಲ್ಲಿ ಒಂದು ಪತ್ರಿಕಾ ಹೇಳಿಕೆ ನೀಡಿ ಬೆಂಗಳೂರಿಗೆ ಹೊರಟೆವು. ಅಲ್ಲಿ ಮೂರು ಕೆಲಸಗಳನ್ನು ಮಾಡುವುದೆಂದು ಅಂದುಕೊಂಡೆವು. ಒಂದು ಅಲ್ಲಿಯ ಪ್ರೆಸ್ ಕ್ಲಬ್‌ನಲ್ಲಿ ಒಂದು ಪತ್ರಿಕಾಗೋಷ್ಠಿ ಮಾಡುವುದು. ಎರಡನೇಯದು ಆಗ ಕಮೀಶನರ್ ಆಗಿದ್ದ ಶಂಕರ ಬಿದರಿಯವರನ್ನು ಕಂಡು ವಿಚಾರಿಸುವುದು. ಮೂರನೇಯದು ಪ್ರೊ. ರವಿವರ್ಮ ಕುಮಾರ್ ಅವರನ್ನು ಸಂಪರ್ಕಿಸಿ ಆ ಪ್ರಕಟಣೆಯ ವಿರುದ್ಧ ಕೇಸು ಹಾಕುವುದು. ಇದರಲ್ಲಿ ಎರಡು ಸಂಗತಿಗಳು ಸುಲಭವಾಗಿ ನಡೆದವು. ಪತ್ರಿಕಾಗೋಷ್ಠಿಯಲ್ಲಿ ಶಾಮಣ್ಣ ನಕ್ಸಲ್ ವಿದ್ಯಮಾನವನ್ನು ಬದಿಗಿಟ್ಟು ಹಲವಾರು ವಿಷಯಗಳ ಬಗ್ಗೆ ಮಾತನಾಡಿದರು! ಆದರೆ ಬೆಂಗಳೂರಿನ ಪ್ರೊಫೆಶನಲ್ ಪತ್ರಕರ್ತರಿಗೆ ಕೂಡ ಶಾಮಣ್ಣನ ಬಗ್ಗೆ ಪ್ರೀತಿ, ಕುತೂಹಲವಿದ್ದುದರಿಂದ ಎಲ್ಲವು ಸಾಂಗವಾಗಿ ನಡೆಯಿತು. ರವಿವರ್ಮ ಕುಮಾರ್ ಅವರು ಎಲ್ಲಾ ವಿವರಗಳನ್ನು ಪಡೆದುಕೊಂಡು ನಾವು ಕೇಸ್ ಹಾಕಬಹುದೆಂದು ಹೇಳಿದರು. ಶಾಮಣ್ಣನ ಪ್ರಿಯಮಿತ್ರರಾದ ಅವರಿಗೆ ಇಡೀ ಪ್ರಸಂಗದ ಬಗ್ಗೆ ಗಂಭೀರ ಕಾಳಜಿಯ ಜೊತೆಗೆ ತುಂಟತನದಿಂದ ಕೂಡಿದ

ತಮಾಶೆ ಕೂಡ ಅನ್ನಿಸುತ್ತಿದುದು ಅವರ ನಗೆ ತುಂಬಿದ ಕಣ್ಣುಗಳಿಂದ ಗೊತ್ತಾಗುತ್ತಿತ್ತು. ಇದನ್ನು ನಾನು ಮತ್ತೆ ಕಂಡಿದ್ದು ವಿಶ್ವವಿದ್ಯಾನಿಲಯದ ಕಾರ್ಯಾಗಾರಕ್ಕಾಗಿ ತೇಜಸ್ವಿ ಬಂದ ಸಂದರ್ಭದಲ್ಲಿ. ಆಗ ತಾನೆ ಭಗವತೀಕೆರೆಯಲ್ಲಿ ತಮ್ಮದೇ ಶೈಲಿಯಲ್ಲಿ ಒಂದು ಕಾರ್ಯಕ್ರಮ ಪೂರೈಸಿ ಅದೇ ಉತ್ಸಾಹದಲ್ಲಿದ್ದ ಶಾಮಣ್ಣ ತೇಜಸ್ವಿಯನ್ನು ಹಳ್ಳಿಗೆ ಕರೆದೊಯ್ಯಲು ಬಂದಿದ್ದರು. ಅವರನ್ನು ನೋಡಿದ ತೇಜಸ್ವಿ ತಮ್ಮ ಮಾಮೂಲಿ ಶೈಲಿಯಲ್ಲಿ "ಥೋ, ನೀನು ಇಲ್ಲಿಗೂ ಬಂದಿದೀಯಾ" ಎಂದು ಹೇಳುತ್ತಾ ಯಾವ ಕಾರಣಕ್ಕೂ ಶಾಮಣ್ಣನ ಜೊತೆಗೆ ಹೋಗಲಾಗುವುದಿಲ್ಲವೆಂದರು. ಆದರೆ ಅದೇ ಸಾಯಂಕಾಲ ಹೋಗಿ ಬಂದರು. ನನಗೆ ಮರೆಯಲಾಗದ್ದೆಂದರೆ ತೇಜಸ್ವಿಯವರ ಬೇಸರದ ದನಿಗೆ ತದ್ವಿರುದ್ಧವಾಗಿ ಶಾಮಣ್ಣನನ್ನು ಪ್ರೀತಿ ಹಾಗೂ ಸ್ನೇಹದಿಂದ ನೋಡುತ್ತಿದ್ದ ಅವರ ಕಣ್ಣುಗಳ ಹೊಳಪು. ಅಂದು ರವಿವರ್ಮ ಕುಮಾರ್ ಅವರ ಕಣ್ಣಲ್ಲಿ ಕಂಡಿದ್ದೂ ಅದೇ. ಚಿವುಗಣ್ಣು ಮಾಡಿಕೊಂಡು ಸುಕ್ಕುಗಳಲ್ಲಿ ನಗುವ ಶಾಮಣ್ಣನ ನೋಡಿದರೆ ಎಲ್ಲರಿಗೂ ಅದೇ ಭಾವನೆ.

ಇರಲಿ. ಅಂದಿನ ಘಟನೆಗೆ ಮರಳುವೆ. ನೃಪತುಂಗ ರಸ್ತೆಯಲ್ಲಿದ್ದ ಪೋಲೀಸ್ ಕೇಂದ್ರ ಕಛೇರಿಯಲ್ಲಿ ಶಂಕರ ಬಿದರಿಯವರನ್ನು ನೋಡುವುದೆಂದು ನಿರ್ಧರಿಸಿದ್ದೆವು. ಆದರೆ ಅಂದು ರಾಜ್ಯದ ಪೋಲೀಸ್ ಅಧಿಕಾರಿಗಳ ಸಭೆಯೋ ಶಿಬಿರವೋ ಇದ್ದುದರಿಂದ ಮುಖ್ಯಮಂತ್ರಿ, ಉಪ ಮುಖ್ಯಮಂತ್ರಿ, ಗೃಹಮಂತ್ರಿ ಇವರೆಲ್ಲರೂ ಅಲ್ಲಿಗೆ ಬಂದು ಭಾಷಣ ಮಾಡುವುದಿತ್ತು. ನಮಗೆ ಬಿದರಿಯವರು ಭೇಟಿಯಾಗುವುದು ತಡವಾಗುವುದೆಂದು ಹೇಳಿದ್ದರು. ಹೀಗಾಗಿ ಪಕ್ಕದ ತೃಪ್ತಿ ಕ್ಯಾಂಟೀನ್‌ಗೆ ಹೋಗಿ ತಿಂಡಿ ತಿಂದುಕೊಂಡು ಮತ್ತೆ ಪೊಲೀಸ್ ಕಛೇರಿಗಳ ಹತ್ತಿರ ಹೊರಟೆವು. ರಸ್ತೆಯಲ್ಲಿ ಆರಾಮವಾಗಿ ಹರಟಿಕೊಂಡು ಬರುತ್ತಿದ್ದೆವು. ಅಷ್ಟರಲ್ಲಿ ಪೈಲಟ್ ವಾಹನದ ಸೈರನ್‌ನೊಂದಿಗೆ ಹಲವು ಸರಕಾರಿ ವಾಹನಗಳ ಮೆರವಣಿಗೆಯೇ ಆ ರಸ್ತೆಯಲ್ಲಿ ಬಂದಿತು. ನಾವು ಪಕ್ಕಕ್ಕೆ ಸರಿದು ಫುಟ್‌ಪಾತ್ ಮೇಲೆ ನಿಂತುಕೊಂಡಿದ್ದೆವು. ಹಠಾತ್ತನೆ ವಾಹನಗಳೆಲ್ಲ ನಿಂತುಕೊಂಡವು. ಸದಾ ಬಿಜಿಯಾಗಿರುವ ನೃಪತುಂಗ ರಸ್ತೆಯ ಮಧ್ಯ ಅವು ನಿಂತುಕೊಂಡಿದ್ದರಿಂದ ಆ ಮುಖ್ಯ ರಸ್ತೆಯ ಟ್ರಾಫಿಕ್ ನಿಂತುಬಿಟ್ಟು ವಿಚಿತ್ರವಾದ ದೃಶ್ಯದ ಹಾಗೆ ಕಾಣುತ್ತಿತ್ತು. ನೋಡುತ್ತಿದ್ದಂತೆಯೇ ದೊಡ್ಡ ವಾಹನವೊಂದರ ಬಾಗಿಲು ತೆರೆದು ಪೈಜಾಮ ಜುಬ್ಬದಲ್ಲಿ ವ್ಯಕ್ತಿಯೊಬ್ಬರು ಶಾಮಣ್ಣನ ಕಡೆಗೆ ಬರತೊಡಗಿದರು. ಅದು ಅಂದಿನ ಗೃಹ ಮಂತ್ರಿಗಳಾದ (ಉಪ ಮುಖ್ಯಮಂತ್ರಿಗಳು ಆಗಿದ್ದರೋ ನೆನಪಿಲ್ಲ) ಎಂ.ಪಿ. ಪ್ರಕಾಶ್ ಅವರು. ಅವರ ಕಣ್ಣಿನಲ್ಲೂ ರವಿವರ್ಮ ಕುಮಾರ್, ತೇಜಸ್ವಿ ಅವರ ಕಣ್ಣುಗಳಲ್ಲಿ ಕಂಡ ತುಂಟತನ, ಪ್ರೀತಿ, ಸ್ನೇಹದ ಹೊಳಪು. "ಏನ್ ಶಾಮಣ್ಣ, ಬೆಂಗಳೂರ್‌ವರೆಗೆ ಬಂದುಬಿಟ್ಟಿದ್ದೀರಿ"

ಎಂದು ನಗುತ್ತಾ ಮಾತನಾಡತೊಡಗಿದರು. "ಮತ್ತೆ, ನೀವು ಕರೆಸಿಕೊಂಡಿದೀರಲ್ಲಾ" ಎಂದು ಶಾಮಣ್ಣ ಹೇಳಿದರು. ರಾಜಧಾನಿ ಬೆಂಗಳೂರಿನ ಮುಖ್ಯ ರಸ್ತೆಯ ಮಧ್ಯ ಸಕಲ ಸರಕಾರಿ ವಾಹನಗಳನ್ನು ನಿಲ್ಲಿಸಿಕೊಂಡು ಗೃಹ ಮಂತ್ರಿಗಳು ಗಡ್ಡಧಾರಿಯಾದ ಹಸಿರು ಟವೆಲ್ಲಿನ ರೈತನೊಬ್ಬನ ಜೊತೆ ಮಾತನಾಡುತ್ತಾ ನಿಂತದ್ದನ್ನು ನೋಡುತ್ತಿದ್ದ ಅಲ್ಲಿಯ ಜನರಿಗೆ ಯಾವುದೂ ಅರ್ಥವಾಗುತ್ತಿರಲಿಲ್ಲ. ಎಂ.ಪಿ. ಪ್ರಕಾಶ್‌ರು ಶಾಮಣ್ಣ ಮತ್ತು ನಮ್ಮ ಹೆಸರುಗಳು ಹಾಗೆ ನಕ್ಸಲ್ ಪಟ್ಟಿಯಲ್ಲಿ ಬಂದಿದ್ದರ ಬಗ್ಗೆ ವಿಷಾದಿಸಿದ್ದು ಮಾತ್ರವಲ್ಲ ನಮಗೆ ಇದರಿಂದ ಬೇಸರವಾಗಿದ್ದರ ಬಗ್ಗೆ ಕ್ಷಮೆಯನ್ನು ಕೋರಿದರು. ಕಾರ್ಯಕ್ರಮಕ್ಕೆ ಹೋಗಬೇಕಿದ್ದ ಪ್ರಕಾಶ್‌ರು ಹೊರಟರು. ಅವರ ಜೊತೆಗೆ ಸಕಲ ಸರಕಾರಿ ವಾಹನಗಳು ಕೂಡ. ನನ್ನ ಮಟ್ಟಿಗೆ ಇದು ನಾನು ಮರೆಯಲಾಗದ ಒಂದು ಅದ್ಭುತ ರೂಪಕ. ಪ್ರಭುತ್ವದ ಅಧಿಕಾರದ ಕಣ್ಣಿಗೆ ರಾಚುವಂಥ ಸಂಕೇತಗಳಾದ ಪೋಲೀಸ್/ ಗೃಹ ಇಲಾಖೆಯ ವಾಹನಗಳು, ರಾಜಧಾನಿಯ ಪ್ರಧಾನ ರಸ್ತೆಯಲ್ಲಿ ನಿಂತಿದ್ದು, ಗೃಹಮಂತ್ರಿಗಳು ಚಲಿಸುತ್ತಿದ್ದ ವಾಹನದಿಂದಲೇ ಶಾಮಣ್ಣನನ್ನು ನೋಡಿ ಇಡೀ ಟ್ರಾಫಿಕ್ ನಿಲ್ಲಿಸಿ ಶಾಮಣ್ಣನನ್ನು ಮಾತನಾಡಿಸಲು ಬಂದಿದ್ದು ಇದೆಲ್ಲಾ ಶಾಮಣ್ಣನ ವ್ಯಕ್ತಿತ್ವದ ಅವ್ಯಕ್ತ ಘನತೆಯ ರೂಪಕವಾಗಿ ಕಂಡಿದೆ. ಪ್ರಕಾಶ್‌ರು ಗೃಹಮಂತ್ರಿಗಳೆನ್ನುವುದನ್ನು ಗಮನಿಸದೇ ಇದ್ದಂತ ಶಾಮಣ್ಣನ ನಿಲುವು, ನಿಂತುಕೊಂಡ ರೀತಿ ರೈತ ಸಂಘದ ಮೊದಲ ಹುರುಪಿನ ದಿನಗಳಲ್ಲಿ ತಮ್ಮ ಘನತೆಯಿಂದ ಪ್ರಭುತ್ವವನ್ನು ಮಣಿಸಿದ ರೈತರ ನೆನಪನ್ನು ಹೊತ್ತು ತಂದಿತು.

ಮರುದಿನ ಪತ್ರಿಕೆಗಳಲ್ಲಿ ಎಂ.ಪಿ. ಪ್ರಕಾಶ್‌ರ ವಿಷಾದ, ಜೊತೆಗೆ 'ನಕ್ಸಲ್' ಪಟ್ಟಿಯ ಪುನರ್ ಪರಿಶೀಲನೆಯ ವರದಿಗಳು ಪ್ರಕಟವಾಗಿದ್ದವು. ವಿಶ್ವವಿದ್ಯಾಲಯವು ಸಮಾಧಾನದ ಉಸಿರು ಬಿಡಲಾರಂಭಿಸಿತು. ಸದ್ಯಕ್ಕೆ ಕೇಸ್ ಹಾಕುವ ಅವಶ್ಯಕತೆ ಇಲ್ಲ ಎಂದು ರವಿವರ್ಮ ಕುಮಾರ್ ಹೇಳಿದರು. ನಾವು ಶಿವಮೊಗ್ಗೆಗೆ ವಾಪಸ್ಸಾದೆವು. ನಾವು ಮರಳಿದ ಒಂದೆರಡು ದಿನಗಳಲ್ಲಿ ನಮ್ಮ ಜೊತೆಗಿದ್ದ ಮಂಜುನಾಥರ ಪತ್ರಿಕೆಯಲ್ಲಿ ನನ್ನ ಬಗ್ಗೆ ಅವಮಾನಕರವಾದ ಟಿಪ್ಪಣಿಯೊಂದು ಪ್ರಕಟವಾಯಿತು. ಸ್ವಲ್ಪ ದಿನಗಳಲ್ಲಿ ರಾಜ್ಯದ ವಾರಪತ್ರಿಕೆ (ಟ್ಯಾಬ್‌ಲಾಯ್ಡ್)ಯಲ್ಲಿ ಶಿವಮೊಗ್ಗೆಯ ವರದಿಗಾರರೊಬ್ಬರು ಕೀಳು ಅಭಿರುಚಿಯ ಲೇಖನವೊಂದನ್ನು ಬರೆದರು. ಆ ಲೇಖನದ ಪ್ರಕಾರ ನನ್ನನ್ನು ನಕ್ಸಲ್ ಸಮರ್ಥಕನೆಂದು ಪಟ್ಟಿಮಾಡಿ ಸರಕಾರವು ನನಗೆ ಸಲ್ಲಬಾರದ ಗೌರವವನ್ನು ಕೊಟ್ಟಿತ್ತು! ಆ ಯೋಗ್ಯತೆ ಇಲ್ಲದಿದ್ದರಿಂದ ನನ್ನನ್ನು ಪಟ್ಟಿಯಿಂದ ಬಿಡಬೇಕೆಂದು ಸಲಹೆ ಕೊಡಲಾಗಿತ್ತು! ಪ್ರಗತಿಪರ ರಾಜಕೀಯದ ಕೊಳಕು ತಬ್ಬಿಬ್ಬುಗೊಳಿಸುವಂತಿತ್ತು. ಶಾಮಣ್ಣ ಮಾತ್ರ ಮಗುವಿನಂಥ ಮುಗ್ಧತೆಯನ್ನು ಉಳಿಸಿಕೊಂಡೂ ಆರೋಗ್ಯಕರ ಕ್ರಿಯಾಶೀಲ ರಾಜಕೀಯ ಮಾಡಬಹುದಾದ ಸಾಧ್ಯತೆಗಳ ಸಂಕೇತವಾಗಿ ನಮ್ಮ ಜೊತೆಗೆ ಇದ್ದಾರೆ.

ಕಡಿದಾಳು ಶಾಮಣ್ಣ:
ಸಾರ್ವಜನಿಕ ನೈತಿಕತೆಯ ಪ್ರತೀಕ

ಮೂಲ ಇಂಗ್ಲಿಷ್: **ಚಂದನಗೌಡ**
ಕನ್ನಡಕ್ಕೆ: **ಎಂ. ರಾಜು**

ನಮ್ಮ ಪ್ರೀತಿಯ ರೈತನಾಯಕರಾದ ಕಡಿದಾಳು ಶಾಮಣ್ಣನವರು(ಜನನ, ೧೯೩೮), ಮುಂದಿನ ತಿಂಗಳು ನಡೆಯಲಿರುವ ದಸರಾ ಉತ್ಸವವನ್ನು ಉದ್ಘಾಟಿಸುವಂತೆ ಕರ್ನಾಟಕ ಸರ್ಕಾರವು ನೀಡಿದ ಆಮಂತ್ರಣವನ್ನು ಕೆಲವು ದಿನಗಳ ಹಿಂದೆ ತಿರಸ್ಕರಿಸಿದರು. ಅವರನ್ನು ಆಹ್ವಾನಿಸುವುದಕ್ಕಾಗಿ ಸ್ವತಃ ಮುಖ್ಯಮಂತ್ರಿಗಳಾದ ಸಿದ್ಧರಾಮಯ್ಯನವರು ದೂರವಾಣಿಯ ಮೂಲಕ ಮಾತನಾಡಿದ್ದರು. ರಾಜ್ಯದಲ್ಲಿ ಬರ ಪರಿಸ್ಥಿತಿ ಬಿಗಡಾಯಿಸುತ್ತಿದ್ದು ರೈತರ ಆತ್ಮಹತ್ಯೆಗಳು ಹೆಚ್ಚುತ್ತಿರುವ ಪ್ರಸ್ತುತ ಸಂದರ್ಭದಲ್ಲಿ ದಸರಾ ಉತ್ಸವದ ಉದ್ಘಾಟನೆ ತಮ್ಮಿಂದ ಸಾಧ್ಯವಿಲ್ಲ ಎಂಬ ಕಾರಣ ನೀಡಿ ಶಾಮಣ್ಣನವರು ಸರ್ಕಾರದ ಆಹ್ವಾನವನ್ನು ತಿರಸ್ಕರಿಸಿದರು. ಆದರೆ ಸರ್ಕಾರದ ಆಲೋಚನೆ ಬೇರೆಯಾಗಿತ್ತು. ಕೃಷಿ ವಲಯವು ಸಂಕಷ್ಟದ ಸ್ಥಿತಿಯಲ್ಲಿರುವಾಗ ಕಡಿದಾಳು ಶಾಮಣ್ಣನವರಂತಹ ಪ್ರಗತಿಪರ ರೈತರೊಬ್ಬರು ದಸರಾ ಉತ್ಸವದ ಉದ್ಘಾಟನೆ ಮಾಡುವುದು ಸೂಕ್ತ ಎಂಬುದು

ಸರ್ಕಾರದ ನಿಲುವಾಗಿತ್ತು. ಶಾಮಣ್ಣನವರ ನಿಲುವು ಅವರ ನೈತಿಕ ಗಾಂಭೀರ್ಯದ ಮೂಲಕ ವ್ಯಕ್ತವಾಗಿತ್ತು.

ಪೂಜೆಯ ಆಚರಣೆಯಲ್ಲಿ ತಮಗೆ ನಂಬಿಕೆ ಇಲ್ಲವೆಂಬುದನ್ನು ಸೂಚಿಸುವುದಕ್ಕಾಗಿ ಶಾಮಣ್ಣನವರು ದಸರಾ ಉತ್ಸವದ ಪ್ರಮುಖ ಅಧಿದೇವತೆಯಾದ ಚಾಮುಂಡೇಶ್ವರಿಯಲ್ಲಿ ನಂಬಿಕೆಯಿರುವವರು ಯಾರಾದರೂ ಉತ್ಸವದ ಉದ್ಘಾಟನೆ ಮಾಡಲಿ ಎಂಬುದಾಗಿ ಹೇಳಿದರು.

ಶಾಮಣ್ಣನವರ ಆತ್ಮ ಕಥನವಾದ 'ಕಾಡತೊರೆಯ ಜಾಡು'(೨೦೧೧) ಕೃತಿಯಲ್ಲಿ ಅವರ ಸದ್ಯದ ಸಂಕಷ್ಟದ ಪರಿಸ್ಥಿತಿಯ ವ್ಯಂಗ್ಯವನ್ನು ನಿರೂಪಿಸುವಂತಹ ಪ್ರಸಂಗವೊಂದರ ಪ್ರಸ್ತಾಪವಿದೆ. ಮೈಸೂರಿನಲ್ಲಿ ಪದವಿ ಶಿಕ್ಷಣದ ಸಮಯದಲ್ಲಿ ದಸರಾ ಉತ್ಸವದ ಸಂದರ್ಭದ ಮಹಾರಾಜರ ಆನೆಯ ಮೇಲಿನ ಮೆರವಣಿಗೆಯಲ್ಲಿ ಶಾಮಣ್ಣ ಮತ್ತು ಅವರ ಮಿತ್ರರು ಕಪ್ಪು ಬಾವುಟ ಪ್ರದರ್ಶಿಸಿದ್ದಕ್ಕಾಗಿ ಬಂಧಿಸಲ್ಪಟ್ಟಿದ್ದರು. ಲೋಹಿಯಾ ಅವರ ವಿಚಾರದಿಂದ ಪ್ರಭಾವಿತರಾಗಿದ್ದ ಅವರು ಪ್ರಜಾಪ್ರಭುತ್ವದಲ್ಲಿ ಈ ಬಗೆಯ ಮೆರವಣಿಗೆಗೆ ಅವಕಾಶವಿರಬಾರದು ಎಂಬುದಾಗಿ ಭಾವಿಸಿದ್ದರು.

ಶಾಮಣ್ಣನವರ ನಿಸ್ವಾರ್ಥತೆ ಮತ್ತು ಅಧಿಕಾರದ ಬಗೆಗಿನ ತಿರಸ್ಕಾರದ ಪರಿಚಯವುಳ್ಳ ಅವರ ಅಪಾರ ಅಭಿಮಾನಿಗಳಿಗೆ ಅವರು ದಸರಾ ಉದ್ಘಾಟನೆಯ ಅವಕಾಶವನ್ನು ತಿರಸ್ಕರಿಸಿದ್ದು ಆಶ್ಚರ್ಯದ ಸಂಗತಿಯಾಗಿ ಕಾಣಿಸದು. ಶಾಮಣ್ಣನವರ ಸೂಕ್ಷ್ಮ ಹಾಸ್ಯ, ಅನುಕಂಪ ಮತ್ತು ನೈತಿಕ ಪ್ರಾಮಾಣಿಕತೆಗಳು ಅವರ ರಾಜಕಾರಣಕ್ಕೆ ಅಪೂರ್ವವಾದ ಆಳವನ್ನು ಮತ್ತು ಆಕರ್ಷಣೆಯನ್ನು ತಂದುಕೊಟ್ಟವೆ. ಪ್ರಾಣಿಪಕ್ಷಿ ಪ್ರಪಂಚದಲ್ಲಿ ಅವರು ನಡೆಸುವ ಸೌಂದರ್ಯದ ಹುಡುಕಾಟವು ಅವರ ವ್ಯಕ್ತಿತ್ವದ ಮತ್ತೊಂದು ಮುಖವನ್ನು ನಮಗೆ ಪರಿಚಯಿಸುತ್ತದೆ. ಪ್ರಕೃತಿ ಛಾಯಾಚಿತ್ರೀಕರಣದ ಜೊತೆ ಹಿಂದೂಸ್ಥಾನೀ ಸಂಗೀತ ಅವರ ಮತ್ತೊಂದು ಆಸಕ್ತಿಯ ಕ್ಷೇತ್ರ. (೧೯೬೩ರಲ್ಲಿ ಮಹಾನ್ ಸರೋದ್‌ವಾದಕರಾದ ಪಂಡಿತ್ ಅಲಿಅಕ್ಬರ್‌ಖಾನ್‌ರಿಂದ ಸರೋದ್ ಕಲಿಯುವುದಕ್ಕಾಗಿ ಅವರು ಮುಂಬೈಗೆ ತೆರಳಿದ್ದರು). ಆಸಕ್ತಿಗಳ ವಿಷಯದಲ್ಲಿ ಅವರ ಈ ಬಹುಮುಖತೆಯೇ ಅವರನ್ನೊಬ್ಬ ಅಪರೂಪದ ಹೋರಾಟಗಾರರನ್ನಾಗಿಸಿರುವ ಅಂಶ.

ಮಲೆನಾಡಿನಲ್ಲಿ ಮತ್ತು ಮೈಸೂರಿನಲ್ಲಿ ಅವರ ಪ್ರಾರಂಭದ ಸಮಾಜವಾದಿ ರಾಜಕಾರಣ ಮತ್ತು ಇದರಿಂದ ಮೂಡಿಬಂದ ಎಂಭತ್ತರ ದಶಕದ ಪ್ರಬಲವಾದ ರೈತ ಚಳುವಳಿಗೆ ಕಾರಣವಾದ ಕರ್ನಾಟಕ ರಾಜ್ಯ ರೈತ ಸಂಘ ಎಂಬ ಸಂಘಟನೆಗೆ ಸಂಬಂಧಿಸಿದ ಶ್ರೀಮಂತ ಪ್ರಸಂಗಗಳ ಚಿತ್ರಣವೇ 'ಕಾಡತೊರೆಯ ಜಾಡು'. ವೈಯಕ್ತಿಕ ವಿಲಕ್ಷಣಗಳು ಮತ್ತು ಲೇಖಕರು, ರಾಜಕಾರಣಿಗಳು, ಹಾಗೂ ಹೋರಾಟಗಾರರ

ಜೊತೆ ಶಾಮಣ್ಣನವರು ಮುಖಾಮುಖಿಯಾದ ಪ್ರಸಂಗಗಳೇ ಈ ರಾಜಕೀಯ ವೃತ್ತಾಂತವನ್ನು ವ್ಯಾಪಿಸಿದೆ.

೧೯೬೦ರ ಕೊನೆಯ ಭಾಗದಲ್ಲಿ ಶಾಮಣ್ಣನವರು ಶಾಲಾಮಾಸ್ತರರಾಗಿ ಕೆಲಸಮಾಡಿದ ಪ್ರಸಂಗದ ನಂತರದಲ್ಲಿ ಉಂಟಾದ ಒಂದು ವಿಶೇಷ ಪರಿಸ್ಥಿತಿಯಿಂದಾಗಿ ಶಾಮಣ್ಣನವರು ರೈತರಾದರು. ಸ್ಥಳೀಯ ಕಾಲೇಜೊಂದರಲ್ಲಿ ಉಪನ್ಯಾಸಕ ಹುದ್ದೆ ಪಡೆಯಲು ತಮಗೆ ಸಹಾಯ ಮಾಡಬೇಕೆಂದು ಅಂದಿನ ಸಮಾಜವಾದಿ ನಾಯಕರಾದ ಗೋಪಾಲಗೌಡರನ್ನು ಕೇಳಿದಾಗ ಅವರು, ಒಬ್ಬ ವ್ಯಕ್ತಿಗೆ ಒಂದೇ ಹುದ್ದೆ ಎಂಬ ವಿಚಾರದಲ್ಲಿರುವ ಒಳಿತನ್ನು ಕುರಿತು ತಾವಿಬ್ಬರೂ ಸಾರ್ವಜನಿಕ ಸಮಾರಂಭವೊಂದರಲ್ಲಿ ಘೋಷಣೆ ಮಾಡಿದ್ದನ್ನು ಗೋಪಾಲಗೌಡರು ಶಾಮಣ್ಣನವರಿಗೆ ಜ್ಞಾಪಿಸಿದರು. ಒಬ್ಬನೇ ವ್ಯಕ್ತಿ ಹಲವು ಹುದ್ದೆಗಳನ್ನು ಹೊಂದಿದ್ದಾಗ ಇತರರ ಕೆಲಸದ ಅವಕಾಶಗಳನ್ನು ಕಿತ್ತುಕೊಂಡಂತಾಗಿ ಕೆಲವೇ ವ್ಯಕ್ತಿಗಳ ಬಳಿ ಹಣ ಸಂಗ್ರಹವಾಗುವುದು ಎಂಬುದು ಅವರ ವಾದವಾಗಿತ್ತು. ಈ ದೃಷ್ಟಿಯಿಂದ ಸರ್ಕಾರಿ ಕೆಲಸಗಳಿಗಾಗಿ ಹಂಬಲಿಸುವ ಭೂಮಾಲೀಕರು ಅಪರಾಧಿಗಳೇ. ಈ ಪ್ರಸಂಗದ ನಂತರ ಒಬ್ಬ ಉಪನ್ಯಾಸಕರಾಗಬೇಕೆಂಬ ತಮ್ಮ ಬಯಕೆಯನ್ನು ತ್ಯಜಿಸಿ ಶಿವಮೊಗ್ಗದ ಬಳಿ ತಮ್ಮ ಕುಟುಂಬದವರು ತಮಗಾಗಿ ಖರೀದಿಸಿದ್ದ ಜಮೀನಿನಲ್ಲಿ ಕೃಷಿ ಮಾಡಲು ಶಾಮಣ್ಣನವರು ನಿರ್ಧರಿಸಿದರು.

ತಮ್ಮ ವಿದ್ಯಾರ್ಥಿ ಜೀವನದುದ್ದಕ್ಕೂ ರಾಜಕೀಯವಾಗಿ ಕ್ರಿಯಾಶೀಲರಾಗಿದ್ದ ಶಾಮಣ್ಣನವರು ಜಮೀನಿಗೆ ತಮ್ಮ ವಾಸ್ತವ್ಯವನ್ನು ಬದಲಾಯಿಸಿದ ನಂತರ ಸ್ಥಳೀಯ ರೈತರನ್ನು ಸಂಘಟಿಸುವ ಅವರ ಪ್ರಯತ್ನಗಳು ಹೊಸ ತೀವ್ರತೆಯನ್ನು ಪಡೆದುಕೊಂಡವು. ಸರಳ ವಿವಾಹಗಳ ಬಗ್ಗೆ ರೈತರ ಮನವೊಲಿಸುವ ವಿಚಾರದಲ್ಲಿ ಅವರು ಪ್ರಖ್ಯಾತರಾದರು(ಕುವೆಂಪು ಅವರ ಮಂತ್ರ ಮಾಂಗಲ್ಯದ ವಿಚಾರ). ಅಂತರ್ಜಾತಿ ವಿವಾಹವಾಗಬಯಸಿದ ಜೋಡಿಗಳು ನೈತಿಕ ಬೆಂಬಲಕ್ಕಾಗಿ ಶಾಮಣ್ಣನವರನ್ನು ಆಶ್ರಯಿಸತೊಡಗಿದರು. ಕರ್ನಾಟಕ ರಾಜ್ಯ ರೈತಸಂಘದ ಒಬ್ಬ ನಿಷ್ಠಾವಂತ ಸದಸ್ಯರಾಗಿ ೧೯೭೦ ಮತ್ತು ೧೯೮೦ ರ ದಶಕದಲ್ಲಿ ರೈತ ಪ್ರತಿಭಟನೆಗಳನ್ನು ಸರ್ಕಾರ ದಮನ ಮಾಡಲು ಪ್ರಯತ್ನಿಸಿದ್ದರ ವಿರುದ್ಧ, ಮತ್ತು ಸಾಲ ವಸೂಲಾತಿಗಾಗಿ ರೈತರ ಮನೆಗಳ ಮೇಲೆ ದಾಳಿ ಮಾಡುವುದರ ವಿರುದ್ಧ ಹಲವಾರು ರೈತ ರ‍್ಯಾಲಿಗಳನ್ನು ಸಂಘಟಿಸಿದರು. ಈ ಎಲ್ಲ ಸಂಗತಿಗಳ ಹಾಗೇ ಇತರ ಹಲವಾರು ಸಂಗತಿಗಳ ಬಗೆಗಿನ ವಿವರಗಳು 'ಕಾಡತೊರೆಯ ಜಾಡು' ಕೃತಿಯಲ್ಲಿ ಹೃದಯಂಗಮವಾಗಿ ಚಿತ್ರಿಸಲ್ಪಟ್ಟಿವೆ.

೧೯೮೦ರ ಆದಿಯಲ್ಲಿ ತೀರ್ಥಹಳ್ಳಿಯ ಬಳಿ ಒಂದು ಸೇತುವೆ ನಿರ್ಮಾಣ ಕಾರ್ಯ ಪೂರ್ಣಗೊಂಡಿದ್ದರೂ, ಅಂದಿನ ಮುಖ್ಯಮಂತ್ರಿಗಳಾಗಿದ್ದ ಗುಂಡೂರಾವ್ ಅವರು ಉದ್ಘಾಟನೆ ನೆರವೇರಿಸುವವರೆಗೆ ಸೇತುವೆಯನ್ನು ಸಾರ್ವಜನಿಕರು ಬಳಸದಂತೆ ಸ್ಥಳೀಯ ಕಾಂಗ್ರೆಸ್ ಪಕ್ಷದ ಕಾರ್ಯಕರ್ತರು ತಡೆ ಬೇಲಿಯನ್ನು ನಿರ್ಮಿಸಿದ್ದರು. ಈ ಉದ್ಘಾಟನಾ ಕಾರ್ಯಕ್ರಮಕ್ಕೆ ಹಣ ನೀಡಬಲ್ಲ ಸ್ಥಳೀಯ ವ್ಯಕ್ತಿಗಳನ್ನು ಪತ್ತೆ ಮಾಡಲು ಮೂರು ತಿಂಗಳು ಕಳೆದೇ ಹೋಗಿತ್ತು. ಸೇತುವೆಯ ಉದ್ಘಾಟನೆಗಾಗಿ ಮುಖ್ಯಮಂತ್ರಿಗಳು ಹೆಲಿಕಾಪ್ಟರ್‌ನಲ್ಲಿ ಆಗಮಿಸುವರೆಂಬ ವದಂತಿ ಹರಡಿತ್ತು. ಮುಖ್ಯಮಂತ್ರಿಗಳ ಕಾರ್ಯಕ್ರಮದ ಸಲುವಾಗಿ ಸ್ಥಳೀಯ ನಿರೀಕ್ಷಣಾ ಮಂದಿರದ ರಿಪೇರಿ ಕಾರ್ಯವೂ ನಡೆಯುತ್ತಿತ್ತು. ಮುಖ್ಯ ಮಂತ್ರಿಗಳ ಉದ್ಘಾಟನಾ ಸಮಾರಂಭದ ಖರ್ಚು ಸೇತುವೆಯ ನಿರ್ಮಾಣದ ವೆಚ್ಚಕ್ಕಿಂತಲೂ ಹೆಚ್ಚಾಗಬಹುದೆಂಬುದನ್ನು ಅಂದಾಜು ಮಾಡಿ ಶಾಮಣ್ಣ ಮತ್ತು ಸ್ನೇಹಿತರು ಇದನ್ನೆಲ್ಲ ವಿವರಿಸಿ ಮುಖ್ಯಮಂತ್ರಿಗಳು ತಮ್ಮ ಸೇತುವೆ ಉದ್ಘಾಟನಾ ಕಾರ್ಯಕ್ರಮವನ್ನು ಕೈಬಿಡಬೇಕೆಂದು ತಿಳಿಸಿ ಪತ್ರ ಬರೆದರು. ಆದರೆ ಈ ಪತ್ರಕ್ಕೆ ಯಾವ ಉತ್ತರವೂ ಬರಲಿಲ್ಲ. ನಿಗದಿತ ಉದ್ಘಾಟನಾ ಸಮಾರಂಭಕ್ಕೆ ಎರಡು ದಿನ ಮೊದಲು ಶಾಮಣ್ಣ ಮತ್ತು ಅವರ ಸ್ನೇಹಿತರು ಸೇತುವೆ ನಿರ್ಮಾಣ ಕಾರ್ಯದಲ್ಲಿ ಪಾಲ್ಗೊಂಡಿದ್ದ ಕೆಲಸಗಾರನೊಬ್ಬನಿಂದ ಸೇತುವೆಯ ಉದ್ಘಾಟನೆ ಮಾಡಿಸಿಯೇಬಿಟ್ಟರು. ಅಲಂಕರಿಸಲ್ಪಟ್ಟಿದ್ದ ಎತ್ತಿನ ಗಾಡಿಯಲ್ಲಿ ಕುಳಿತಿದ್ದ, ಸೇತುವೆ ಉದ್ಘಾಟಿಸಿದ ಕೆಲಸಗಾರನ ಹಿಂದೆ ೫೦೦ ಜನ ಸಾರ್ವಜನಿಕರು ನಡೆದು ಸೇತುವೆ ದಾಟಿದರು. ಸೇತುವೆ ಈಗ ಸಾರ್ವಜನಿಕರ ಬಳಕೆಗೆ ಮುಕ್ತವಾಗಿತ್ತು. ಮುಖ್ಯಮಂತ್ರಿಗಳು ತಮ್ಮ ಕಾರ್ಯಕ್ರಮವನ್ನು ರದ್ದು ಮಾಡಿದರು.

ರೈತರು ಶಾಮಣ್ಣನವರನ್ನು ತಮ್ಮ ನಾಯಕನೆಂದು ಗುರುತಿಸುತ್ತಾರೆ. ಆದರೆ ಶಾಮಣ್ಣನವರು ಮಾತ್ರ ಕರ್ನಾಟಕ ರಾಜ್ಯ ರೈತ ಸಂಘದಲ್ಲಿ ಯಾವುದೇ ಅಧಿಕೃತ ಹುದ್ದೆಯಿಲ್ಲದೆ ಕೆಲಸಮಾಡಲು ಬಯಸುತ್ತಾರೆ. ತಮ್ಮ ಆತ್ಮಕಥೆಯಲ್ಲಿ ತಮ್ಮನ್ನು ಒಬ್ಬ ನಾಯಕನೆಂದು ಹೇಳಿಕೊಳ್ಳಲು ಅವರು ಒಪ್ಪುವುದಿಲ್ಲ. ಆದರೆ ಕರ್ನಾಟಕ ರಾಜ್ಯ ರೈತ ಸಂಘದ ಸದಸ್ಯರು ತಮ್ಮ ಹೆಗಲಮೇಲೆ ಧರಿಸುವ ಹಸಿರು ಖಾದಿ ಶಾಲಿನ ಕೀರ್ತಿ ತಮಗೆ ಸೇರಬೇಕೆಂದು ಖುಷಿಯಿಂದ ತಿಳಿಸುತ್ತಾರೆ. ರಾಜ್ಯ ರೈತ ಸಂಘದ ನಾಯಕರು ಹಸಿರು ಶಾಲಿನ ನಿಶಾನೆಯನ್ನು ಒಪ್ಪಲು ಇನ್ನೂ ಮೀನಮೇಷ ಎಣಿಸುತ್ತಿದ್ದಾಗ ಶಾಮಣ್ಣ ಹೇಳುತ್ತಾರೆ: "ಯಾರೋ ಒಬ್ಬ ಡಾಕ್ಟರ್ ಅಥವಾ ಯಾರೋ ಒಬ್ಬ ಎಂಜಿನಿಯರನ ಸಹೋದರನೆಂದು ತಮ್ಮನ್ನು ಪರಿಚಯಿಸಿಕೊಳ್ಳುವುದಕ್ಕೆ ಪ್ರತಿಯಾಗಿ ಒಬ್ಬ ರೈತ ತನ್ನನ್ನು ತಾನು ಒಬ್ಬ ರೈತನೆಂದೇ ಪರಿಚಯಿಸಿ

ಕೊಳ್ಳಬೇಕು. ಇದು ಸಾಧ್ಯವಾಗುವಂತೆ ಮಾಡಲು ಒಂದು ಚಿಹ್ನೆ ಬೇಕು. ಹಸಿರು ಶಾಲು ಆ ಚಿಹ್ನೆಯಾಗಬೇಕು. ಇದು ನಮ್ಮ ಸ್ವಾಭಿಮಾನದ ಚಳುವಳಿ". ಹೀಗೆ ಹಸಿರು ಶಾಲು ರಾಜಕೀಯವಾಗಿ ಎಚ್ಚೆತ್ತ ರೈತರ ಸ್ಫೂರ್ತಿ ಚಿಹ್ನೆಯಾಯಿತು.

ರೈತರ ಸ್ವಾಸ್ಥ್ಯವು ಶಾಮಣ್ಣನವರಿಗೆ ಈಗಲೂ ಮುಖ್ಯವಾಗುತ್ತದೆ. ತಮ್ಮ ಐಕಮತ್ಯವನ್ನು ಪ್ರದರ್ಶಿಸುವುದಕ್ಕಾಗಿ ರೈತ ಚಳುವಳಿಗಳು ನಡೆಯುವ ಸ್ಥಳಗಳಿಗೆಲ್ಲಾ ಶಾಮಣ್ಣ ಈಗಲೂ ಹೋಗುತ್ತಾರೆ. ಕರ್ನಾಟಕ ರಾಜ್ಯ ರೈತ ಸಂಘದ ಬೇರೆ ಬೇರೆ ಘಟಕಗಳೆಲ್ಲ ಒಂದಾಗಿ ಒಂದು ಅಮೋಘ ಸಾಮಾಜಿಕ ಚಳುವಳಿಯು ಮರುಜೀವ ತಳೆಯಬೇಕೆಂಬುದು ಅವರ ಬಯಕೆ.

(ಕೃಪೆ: *'ಬೆಂಗಳೂರು ಮಿರರ್'* ವಾರಪತ್ರಿಕೆ, ಸೆಪ್ಟಂಬರ್ ೨೬, ೨೦೧೫)

ವಿಶಿಷ್ಟ ವ್ಯಕ್ತಿತ್ವದ ಶಾಮಣ್ಣ

ಡಾ.ಜೆ.ಕೆ ರಮೇಶ್

ಕಡಿದಾಳು ಶಾಮಣ್ಣನವರನ್ನು ನಾನು ನೋಡುತ್ತಿರುವುದು ಒಂದೇ ಬಗೆಯ ಉಡುಪಿನಲ್ಲಿ. ಖಾದಿಯ ನಿಲುವಂಗಿ(ಜುಬ್ಬ) ಖಾದಿಯ ಪೈಜಾಮ. ತಲೆಗೊಂದು ಟೋಪಿ. ಹೆಗಲ ಮೇಲೆ ಹಸಿರು ಟವಲು (ರೈತ ಸಂಘಕ್ಕೆ ಅವರೇ ನೀಡಿದ ಲಾಂಛನ) ಬಗಲಲ್ಲಿ ಒಂದು ಚೀಲ. ಅದರಲ್ಲೊಂದು ಕ್ಯಾಮರಾ. ಕಣ್ಣಿಗೆ ಕನ್ನಡಕ ಕಾಲಲ್ಲಿ ಚಪ್ಪಲಿ ಇವಲ್ಲದೆ ಬೇರೆ ದಿರಿಸಿನಲ್ಲಿ ನಾನವರನ್ನು ನೋಡಿಲ್ಲ. ಚಿಕ್ಕಂದಿನಲ್ಲಿ ಇತರೆ ವೇಷಭೂಷಣ ಧರಿಸುತ್ತಿದ್ದರೇನೋ ತಿಳಿಯೆ. ನಾನು ಅವರನ್ನು ನೋಡುವುದಾಗಿನಿಂದ ಅವರ ಮುಖದಲ್ಲಿ ಬಿಳಿಯ ಗಡ್ಡವೇ ಇದೆ. ಅವರ ಮಧ್ಯವಯಸ್ಸಿನ ನಂತರವೇ ನನಗವರ ದರ್ಶನ–ಪರಿಚಯ ಆದದ್ದೆನಿಸುತ್ತದೆ.

ಧರಿಸುವ ವಸ್ತ್ರಗಳನ್ನು ಕುರಿತ ಈ ನಿಷ್ಠೆಯೊಂದೇ ಸಾಕು ಶಾಮಣ್ಣನವರ ವ್ಯಕ್ತಿತ್ವ ದರ್ಶನಕ್ಕೆ. ಉದ್ಯೋಗ, ತತ್ವ ಸಿದ್ಧಾಂತಗಳ ಬಗೆಗೂ ಅವರದು ಇಂಥದೇ ಎರಡಿಲ್ಲದ ನಿಷ್ಠೆ. ರೈತನಾಗಿ ದುಡಿದು ಬದುಕುವ ಸಮಾಜವಾದಕ್ಕೆ ಬದ್ಧವಾಗಿರುವ, ಸರಳತೆಯಿಂದ ದೂರ ಸರಿಯದಿರುವ ಕಡು ನಿಷ್ಠೆ. ಆದ್ದರಿಂದಲೇ ಶಾಮಣ್ಣ

ರೈತರ ಹಿತ ರಕ್ಷಣೆಗೆ ಜೀವನವನ್ನು ಮೀಸಲಿಟ್ಟಿರುವುದು. ಸಮಾಜದಲ್ಲಿ ಅಸಮಾನತೆ, ವಿಕೃತ ಮನುಷ್ಯ-ಸಂಬಂಧ, ಕಳಂಕಿತ ಪ್ರಜಾಪ್ರಭುತ್ವ ಭ್ರಷ್ಟ ವ್ಯವಸ್ಥೆಗಳನ್ನು ಕಂಡಾಗ ಕೆರಳುತ್ತಿರುವುದು. ರಾಜ್ಯೋತ್ಸವ ಪ್ರಶಸ್ತಿ, ದಸರಾ ಮಹೋತ್ಸವ ಉದ್ಘಾಟನೆ ಮುಂತಾದ ಗೌರವಗಳನ್ನು ತಿರಸ್ಕರಿಸುತ್ತಿರುವುದು. ಸಂಪ್ರದಾಯ ಧರ್ಮ ಆಚರಣೆ ಮಠ ಮಂದಿರಗಳ ಕುರಿತು ಅನಾಸ್ಥೆ ತಾಳುವುದು. ರೈತ ನಾಯಕನೆಂದು ಇತರರು ಮನಸಾ ಒಪ್ಪಿಕೊಂಡಿರುವಾಗಲೂ ನಾಯಕತ್ವ, ಪದವಿ ಅಧಿಕಾರಗಳನ್ನು ಸ್ವೀಕರಿಸದೆ ಸಾಮಾನ್ಯ ರೈತನಂತೆ ಬದುಕು ಸಾಗಿಸುತ್ತಿರುವುದು. ಇವನ್ನೆಲ್ಲ ಶಾಮಣ್ಣ ಅಭಾವ ವೈರಾಗ್ಯದಿಂದ ಆಚರಿಸುತ್ತಿರುವುದಿಲ್ಲ. ಅವರು ಶ್ರೀಮಂತ ಮನೆತನದಿಂದಲೇ ಬಂದವರು. ಸೂಟು ಬೂಟು ಧರಿಸಲಿಕ್ಕೆ; ವೈಭವ ದರ್ಪ ಪ್ರದರ್ಶನಕ್ಕೆ; ಜಮೀನ್ದಾರನಾಗಿ ಬಡವರನ್ನು ಶೋಷಿಸಲಿಕ್ಕೆ; ಸಮಾಜದಲ್ಲಿ ಸಂಘ ಸಂಸ್ಥೆಗಳಲ್ಲಿ ನಾಯಕರಾಗಿ ಮೆರೆಯಲಿಕ್ಕೆ; ಸರಕಾರದ ದೊಡ್ಡ ಅಧಿಕಾರ ಸ್ಥಾನವನ್ನು ಆಕ್ರಮಿಸಲಿಕ್ಕೆ ಎಲ್ಲ ರಹದಾರಿಗಳೂ ಅವರಿಗೆ ಇದ್ದವು. ಅವರೆಲ್ಲವನ್ನು ಪ್ರಜ್ಞಾಪೂರ್ವಕವಾಗಿ ತ್ಯಜಿಸಿದರು. ಉಡುಪಿನ, ಬದುಕಿನ ಸರಳತೆ ಅವರದೇ ಆಯ್ಕೆ. ತಂದೆಯವರ ಪ್ರತಿನಿಧಿಯಾಗಿ ಒಕ್ಕಲುಗಳಿಂದ ಗೇಣಿ ವಸೂಲಿ ಮಾಡಲು ಹೋದಾಗ ಕಂಡ ಬಡವರ ಬವಣೆ ಬುದ್ಧನಂತೆ ಅವರನ್ನು ವಿರುದ್ಧ ದಿಕ್ಕಿನಲ್ಲಿ ಸಾಗಿಸಿತು. ನಾನು ಮುಂದೆ ಜಮೀನ್ದಾರಿಕೆ ನಡೆಸುವುದಿಲ್ಲವೆಂಬ ಸ್ಪಷ್ಟ ಸಂದೇಶವನ್ನು ತಂದೆಯವರಿಗೆ ತಲುಪಿಸಿಯೇ ಮನೆಯಿಂದ ಹೊರಬಿದ್ದರು. ಕಾಲೇಜು ಉಪನ್ಯಾಸಕ ಹುದ್ದೆಯ ಹೊಸ್ತಿಲಲ್ಲಿದ್ದಾಗಲೇ ಗೋಪಾಲಗೌಡರ ಸಮಾಜವಾದಿ ತತ್ತ್ವೋಪದೇಶಕ್ಕೆ ಕಟ್ಟು ಬಿದ್ದು ಅದನ್ನು ಬಿಟ್ಟುಕೊಟ್ಟರು. ತಮ್ಮಿಷ್ಟದಂತೆ ಭಗವತಿಕೆರೆಯಲ್ಲಿ ಸ್ವಲ್ಪ ಜಮೀನು ಕೊಂಡು ಬಡತನದ ಬದುಕನ್ನು ಆವಾಹಿಸಿಕೊಂಡರು.

ತನ್ನ ಬದ್ಧತೆಗೆ ಒಗ್ಗುವ ಯಾವುದೇ ಸಭೆ ಸಮಾರಂಭ ಮದುವೆ ಮೆರವಣಿಗೆ ಹೋರಾಟಗಳಿಗೆ ಕರೆ ಇರಲಿ ಇಲ್ಲದಿರಲಿ ಶಾಮಣ್ಣ ಬಿಡುವು ಮಾಡಿಕೊಂಡು ಬಂದೇ ಬರುತ್ತಾರೆ. ಹಾಗೆ ಹೋದಾಗೆಲ್ಲ ಅವರು ಮುಂದೆ ನಿಂತು ಭಾಷಣ ಘೋಷಣೆ ಮಾಡುವವರಲ್ಲ. ಕೇವಲ ಅವರ ಉಪಸ್ಥಿತಿಯೇ ವಿದ್ಯುತ್ ಸಂಚಲನೆ ಮಾಡಿ ಸನ್ನಿವೇಶಕ್ಕೆ ಚೈತನ್ಯ ಉತ್ಸಾಹಗಳನ್ನೂ, ಗೌರವ ಘನತೆಯನ್ನು ತಂದು ಕೊಡುತ್ತದೆ. ಆ ವ್ಯಕ್ತಿತ್ವಕ್ಕೆ ಅಂಥದೊಂದು ವರ್ಚಸ್ಸಿದೆ. ಅದು ರಾಸಾಯನಿಕ ಕ್ರಿಯೆಯಲ್ಲಿ ಲಿಟಿಕ್ ಏಜೆಂಟ್ ಇದ್ದಂತೆ ತಾನು ಸ್ಥಿರವಾಗಿದ್ದು ಇತರರಿಗೆ ಚುರುಕು ಚಟುವಟಿಕೆ ನಡೆಸುವಂತೆ ಸ್ಫೂರ್ತಿ ನೀಡುತ್ತದೆ.

ಶಾಮಣ್ಣನವರು ನನಗೆ ಮೊದಲು ಪರಿಚಿತರಾದದ್ದು ಬಹುಶಃ ಅವರ ತಂದೆಯವರ ೭೫ನೇ ವರ್ಷಾಚರಣೆಯ ಸಂದರ್ಭದಲ್ಲಿ. ಅಂದು ಏರ್ಪಾಡಾಗಿದ್ದ

ಸಮಾರಂಭ ಮತ್ತು ಔತಣ ಕೂಟಕ್ಕೆ ಮುಖ್ಯ ಅತಿಥಿಯಾಗಿ ಮಾತನಾಡಲು ನನ್ನನ್ನು ಆಹ್ವಾನಿಸಿದ್ದರು. ಆಗಿನ್ನೂ ತೀರ್ಥಹಳ್ಳಿಯ ತುಂಗಾ ಕಾಲೇಜಿನಲ್ಲಿ ಉಪನ್ಯಾಸಕನಾಗಿ ನಾನು ಸೇರಿಕೊಂಡ ಆರಂಭದ ವರ್ಷಗಳು. ಉತ್ಸಾಹದಲ್ಲಿ ಏನೇನೋ ಒಂದಿಷ್ಟು ಮಾತನಾಡಿದೆನೆಂದು ತೋರುತ್ತದೆ. ಭಾಷಣದ ನಂತರ ಎದುರಿಗೆ ಸಿಕ್ಕ ಶಾಮಣ್ಣ "ಮನೆ ಮಕ್ಕಳು ಅಪ್ಪನ ಮಂಡೆಗೆ ಬಿಸಿ ನೀರು ಹೊಯ್ಯುವುದೇ ಹೆಚ್ಚು" ಎಂದು ನೀವು ಹೇಳಿದ್ದು ಬಹಳ ಚೆನ್ನಾಗಿತ್ತು ಮಾರಾಯರೆ ಎಂದಿದ್ದು ಚೆನ್ನಾಗಿ ನೆನಪಿದೆ. ನಂತರದಲ್ಲಿ ಹಲವಾರು ಬಾರಿ ಅವರನ್ನು ಕಂಡಿದ್ದೇನಾದರೂ ಮಾತನಾಡಿದ್ದು ಒಡನಾಡಿದ್ದು ಕಡಿಮೆ. ಶಾಮಣ್ಣ ತೀರ್ಥಹಳ್ಳಿಯಲ್ಲೇ ಇಲ್ಲದಿದ್ದದ್ದು. ಚಳವಳಿಗಳಿಂದ ನಾನು ದೂರವೇ ಉಳಿದದ್ದು. ಮೇಲೆ ಬಿದ್ದು ಯಾರನ್ನೂ ಹಚ್ಚಿಕೊಳ್ಳುವ ಸ್ವಭಾವ ನನ್ನದಲ್ಲದ್ದು ಮುಂತಾದ್ದು ಸೈದ್ಧಾಂತಿಕವಾಗಿ ವೈಚಾರಿಕವಾಗಿ ಅವರಿಗೆ ಹತ್ತಿರದವನಾಗಿಯೂ ಭೌತಿಕವಾಗಿ ದೂರ ಉಳಿಯಲು ಕಾರಣವಾಯಿತೆನ್ನಬಹುದು. ಇತರ ದೊಡ್ಡವರ ಬಗ್ಗೆ ನನ್ನನ್ನು ಕಾಡುತ್ತಿದ್ದ ಭಯ ಸಂಕೋಚಗಳು ಶಾಮಣ್ಣನವರ ಬಗ್ಗೆ ಕಾಡಲು ಕಾರಣಗಳಿಲ್ಲ. ಹೀಗಾಗಿ ಅವರ ಬಗ್ಗೆ ಹೆಚ್ಚು ತಿಳಿಯದಿದ್ದಾಗ್ಯೂ ಅಪಾರ ಗೌರವ ಆದರಗಳನ್ನು ಹೊಂದಿದ್ದೇನೆ.

ಶಾಮಣ್ಣನವರ ಭಾವ ಡಾ.ಹಾ.ಮಾ.ನಾಯಕರ ಕುರಿತ ನನ್ನ ಪುಸ್ತಕ ಕೇಂದ್ರ ಸಾಹಿತ್ಯ ಅಕಾಡೆಮಿಯಿಂದ ಪ್ರಕಟವಾದಾಗ ಅದನ್ನು ಓದಿ ಶ್ರೀಮತಿ ಶ್ರೀದೇವಕ್ಕ ವಿಶೇಷ ಮೆಚ್ಚುಗೆ ಪ್ರೀತಿಯಿಂದ ಮಾತನಾಡಿದರು. ನನ್ನ ಶ್ರೀಮತಿಗೆ ಅವರು ಆತ್ಮೀಯರಾದರು. ನನ್ನ ಮಗನ 'ಮಂತ್ರ ಮಾಂಗಲ್ಯ' ಮದುವೆಗೆ ಶಾಮಣ್ಣ ಶ್ರೀದೇವಕ್ಕ ಕುಪ್ಪಳಿಗೆ ಬಂದಿದ್ದು ನಮಗೆ ತುಂಬ ಸಂತೋಷವಾಯಿತು. ಕುವೆಂಪು ಪ್ರತಿಷ್ಠಾನ ನನ್ನನ್ನು ಮಂತ್ರಮಾಂಗಲ್ಯ ವಿವಾಹ ಕಾರ್ಯಕ್ರಮದ ಸಂಚಾಲಕನನ್ನಾಗಿ ಮಾಡಿದಾಗ ಆ ಕುರಿತ ಒಂದು ಸಲಹಾ ಸಮಿತಿಯನ್ನು ರಚಿಸಿ ಅದಕ್ಕೆ ಶಾಮಣ್ಣವರನ್ನು ಅಧ್ಯಕ್ಷರನ್ನಾಗಿಸಿದ್ದೆ. ಯಶಸ್ವಿಯಾಗಿ ಸರಳ ವಿವಾಹಗಳನ್ನು ಏರ್ಪಡಿಸುವಲ್ಲಿ ಶಾಮಣ್ಣ ನಮ್ಮ ಬೆನ್ನಿಗಿದ್ದರು. ಈಚೆಗೆ ಅವರ ಗೆಳೆಯ ಕೋಣಂದೂರು ಲಿಂಗಪ್ಪನವರ ಕುರಿತು ಒಂದು ಅಭಿನಂದನ ಗ್ರಂಥ ಹೊರತರುವಾಗ ನನ್ನ ಒತ್ತಾಸೆಯನ್ನು ಮನ್ನಿಸಿ ಒಂದು ಒಳ್ಳೆಯ ಲೇಖನ ಬರೆದುಕೊಟ್ಟಿದ್ದರು.

ಇಷ್ಟಾಗಿ ಶಾಮಣ್ಣನವರ ಹೃದಯ, ಮನಸ್ಸುಗಳಲ್ಲಿ ಒಂದು ಸ್ಥಾನ ಪಡೆಯಲು ನನಗೆ ಸಾಧ್ಯವಾಗಿಲ್ಲವೇನೋ ಎಂಬ ಸಂಶಯ ನನ್ನನ್ನು ಕಾಡುತ್ತದೆ. ಶಾಮಣ್ಣ ಸಹೋದರರು ಏರ್ಪಡಿಸಿದ್ದ ತಂದೆಯವರ ೭೫ನೇ ಹುಟ್ಟುಹಬ್ಬದಲ್ಲಿ ಭಾಗವಹಿಸಿದ್ದನ್ನು ಆಗಲೇ ಹೇಳಿದ್ದೇನೆ. ಶ್ರೀ ಕಡಿದಾಳು ರಾಮಪ್ಪ ಗೌಡರು ಕಾಲವಾದಾಗ ಸಾಂಪ್ರದಾಯಕವಾದ ವೈಕುಂಠ ಸಮಾರಾಧನೆ ಭೋಜನ ಕೂಟ

ಇತ್ಯಾದಿ ನಡೆಸದೆ ಮಕ್ಕಳು ಅವರ ಜೀವನ ಸಾಧನೆಗಳನ್ನು ಕುರಿತ ಸ್ಮರಣಸಂಚಿಕೆ ಪ್ರಕಟಿಸುವ ಸತ್ಕಾರ್ಯ ಮಾಡಿ ಮಾದರಿಯಾದರು. ನನ್ನನ್ನು ಅದರ ಪ್ರಧಾನ ಸಂಪಾದಕನನ್ನಾಗಿ ನಿಯೋಜಿಸಿದ್ದರು. ೨೦೦೧ರಲ್ಲಿ 'ಸ್ಮೃತಿ-ಸಂಸ್ಕೃತಿ' ಎಂಬ ಆ ಸಂಚಿಕೆ ಹೊರಬಂದಿತು. ಸುಂದರವೂ ಮೌಲಿಕವೂ ಆದ ಆ ಕೃತಿಯನ್ನು ಶಾಮಣ್ಣನವರೇ ತಮ್ಮ ಸಹ್ಯಾದ್ರಿ ಪ್ರಕಾಶನದಿಂದ ಪ್ರಕಟಿಸಿದ್ದರು. ಒಳ್ಳೆಯ ಪ್ರತಿಕ್ರಿಯೆಗೆ ಅದು ಪಾತ್ರವಾಯಿತು.

ಶಾಮಣ್ಣ ತಮ್ಮ ಆತ್ಮಕಥೆ 'ಕಾಡತೊರೆಯ ಜಾಡು ಕೃತಿಯಲ್ಲಿ ಬದುಕಿನ ಹಲವಾರು ಸಂದರ್ಭ ವಿಚಾರಗಳನ್ನು ಪ್ರಸ್ತಾಪಿಸಿದ್ದಾರೆ. ಮೈಸೂರು, ತೀರ್ಥಹಳ್ಳಿ ಪರಿಸರದ ಹಲವು ವ್ಯಕ್ತಿಗಳನ್ನು ಹೆಸರಿಸಿದ್ದಾರೆ. ಸಹ್ಯಾದ್ರಿ ಪ್ರಕಾಶನ ವಿಚಾರವೂ ಅಲ್ಲಿದೆ. ಆದರೆ ಎಲ್ಲಿಯೂ ಮೇಲಿನೆರಡು ಸಂದರ್ಭಗಳಾಗಲಿ ಅವುಗಳಲ್ಲಿ ಮುಖ್ಯ ಪಾತ್ರವಹಿಸಿದ್ದ ನನ್ನ ಬಗೆಗಾಗಲಿ ಉಲ್ಲೇಖವಿಲ್ಲ! ಈಗಲೂ ಆ ಕುರಿತ ಅಸಮಾಧಾನ ನನ್ನ ಮನದಲ್ಲಿದೆ. ತಮ್ಮ ಕುಟುಂಬದ ವಿಚಾರವೆಂಬ ಕಾರಣಕ್ಕೊ, ಅಗತ್ಯ ಕಾಣದ್ದಕ್ಕೊ ಮರೆವಿನಿಂದಲೋ ಬಿಟ್ಟು ಹೋಗಿರಬಹುದು. ಆದರೆ ಅವರ ವಿಶಿಷ್ಟ ವ್ಯಕ್ತಿತ್ವದ ಕುರಿತ ಗೌರವವನ್ನು ಹಾಗೇ ಉಳಿಸಿಕೊಂಡಿದ್ದೇನೆ. ಇನ್ನೂ ನೂರ್ಕಾಲ ಬದುಕಿ ಸಮಾಜಕ್ಕೆ ಯುವಜನತೆಗೆ ಶ್ರೇಷ್ಠ ತತ್ವಾದರ್ಶಗಳ ದಾರಿ ದೀಪವಾಗಿರಲಿ ಎಂದು ಆಶಿಸುತ್ತೇನೆ.

ಶಾಮಣ್ಣ ಮೇಷ್ಟ್ರು

ಎಲ್. ಸಿ. ಸುಮಿತ್ರಾ

ಹೀಗೆ ಹೇಳಿದರೆ ಯಾರಪ್ಪಾ ಇವರು ಅನಿಸಬಹುದು. ನಮ್ಮೂರಿನ ಜನ ಅವರನ್ನು ಹಾಗೇ ಕರೀತಿದ್ದರು. ಈಗ ಕಡಿದಾಳ್ ಶಾಮಣ್ಣ ಅಂದರೆ ತಿಳಿಯಬಹುದು. ನನಗೆ ಹೈಸ್ಕೂಲ್‌ನಲ್ಲಿ ಎರಡು ವರ್ಷ ಪಾಠ ಹೇಳಿದ ಮೇಷ್ಟ್ರುಗಳಲ್ಲಿ ಇವರು ವಿಶಿಷ್ಟ ವ್ಯಕ್ತಿತ್ವದವರು. ನಾವು ಮೇಷ್ಟ್ರು ಹೇಳಿದ್ದನ್ನು ವೇದವಾಕ್ಯವೆಂದು ತಿಳೀತಿದ್ದ ಕಾಲ ಅದು. ಸಮಾಜ ವಿಜ್ಞಾನ ಪಾಠ ಮಾಡುತ್ತಿದ್ದ ಶಾಮಣ್ಣ ನಮ್ಮ ಇತರ ಅಧ್ಯಾಪಕರಿಗಿಂತ ಉಡಿಗೆ ತೊಡಿಗೆ ಆಚಾರ ವಿಚಾರಗಳಲ್ಲಿ ಭಿನ್ನರಾಗಿದ್ದರು.

ಮೈಸೂರಿನ ಮಾನಸ ಗಂಗೋತ್ರೀಲಿ ಸಮಾಜ ಶಾಸ್ತ್ರದ ಎಮ್.ಎ. ಓದಿನ ನಂತರ ಕೆಲವು ಕಾಲ ಪ್ರೆಸ್ ನಡೆಸಿ ಆಮೇಲೆ ಕಡಿದಾಳ್‌ಗೆ ಮರಳಿ ನಮ್ಮ ಶಾಲೆಯಲ್ಲಿ ಅಧ್ಯಾಪಕರಾದರು.

ಜುಬ್ಬಾ, ಪೈಜಾಮ ತೊಡುತ್ತಿದ್ದ ಶಾಮಣ್ಣನವರಿಗೆ ಟ್ರಿಮ್ ಮಾಡಿದ ಗಡ್ಡವಿತ್ತು. ಅದು ಆ ಕಾಲಕ್ಕೆ ವಿಶೇಷವಾಗಿತ್ತು. ನಮ್ಮ ಮೇಷ್ಟ್ರುಗಳು ಯಾರೂ ಹಾಡು ಹೇಳುತ್ತಿರಲಿಲ್ಲ. ಆದರೆ ಶಾಮಣ್ಣನವರದು ವರ್ಣ ರಂಜಿತ ವ್ಯಕ್ತಿತ್ವವಾಗಿತ್ತು. ವಿದ್ಯಾರ್ಥಿಗಳ ನಡುವೆ ಕುಳಿತು

ತಲೆ ಕುಣಿಸುತ್ತಾ 'ಎಲ್ಲಾದರು ಇರು ಎಂತಾದರೂ ಇರು' ಹಾಡುತ್ತಿದ್ದ ಅವರ ಭಂಗಿ ನೆನಪಿನ ಭಿತ್ತಿಯಲ್ಲಿ ಹಸಿರಾಗಿದೆ. ದೀಪಾವಳಿಯಲ್ಲಿ ವಿದ್ಯಾರ್ಥಿಗಳ 'ಅಂಟಿಗೆ ಪಂಟಿಗೆ' ತಂಡ ಕಟ್ಟಿಕೊಂಡು ರಾತ್ರಿಹೊತ್ತು ಮನೆಮನೆಗೆ ದೀಪ ತೆಗೆದುಕೊಂಡು ಹೋಗಿ ಹಾಡು ಹೇಳಿ ಹಣ ಸಂಗ್ರಹಿಸಿ, ಆ ಹಣದಿಂದ ಶಾಲೆಯ ಸುತ್ತ ತಂತಿ ಬೇಲಿ ನಿರ್ಮಿಸಿದರು ಶಾಮಣ್ಣ. ಬಾರಿಸು ಕನ್ನಡ ಡಿಂಡಿಮವ, ಎಲ್ಲಾದರೂ ಇರು ಮುಂತಾದ ಕುವೆಂಪು ಗೀತೆಗಳನ್ನು ವೃಂದಗಾನವಾಗಿ ಮಕ್ಕಳಿಗೆ ಹೇಳಿಕೊಡುತ್ತಿದ್ದರು. ಕ್ಲಾಸ್‌ನಲ್ಲಿ ಸಂಕೋಚದಿಂದ ಮುದುಡಿಕೊಳ್ಳುತ್ತಿದ್ದ ನನಗೆ ವೇದಿಕೆಯ ಮೇಲೆ ಭಾಷಣ ಮಾಡಲು ಕಲಿಸಿದವರು ಅವರೆ. ತಮ್ಮ ಸಹ್ಯಾದ್ರಿ ಪ್ರಕಾಶನದಿಂದ ಪ್ರಕಟಿಸಿದ ಪುಸ್ತಕಗಳನ್ನು ಅವರು ನಮ್ಮ ತಂದೆಗೆ ತಂದುಕೊಟ್ಟಿದ್ದರು. ತೇಜಸ್ವಿಯವರ 'ಸ್ವರೂಪ', ಲಂಕೇಶರ 'ಬಿಚ್ಚು' ಕವನಸಂಗ್ರಹ, ಕಂಬಾರರ 'ಹೇಳತೇನ ಕೇಳ', ಲೋಹಿಯಾ ವಿಚಾರಗಳ ಅನುವಾದಿತ ಪುಸ್ತಕಗಳು ಹೀಗೆ ನನಗೆ ಓದಲು ಸಿಕ್ಕಿದವು. ಒಂದು ಬಗೆಯಲ್ಲಿ ಆದರ್ಶಗಳನ್ನು ತುಂಬಿಕೊಂಡು ಅವುಗಳನ್ನು ವಿದ್ಯಾರ್ಥಿಗಳಿಗೂ ತಮ್ಮ ಪರಿಸರದ ಜನಗಳಿಗೂ ತಲುಪಿಸಲು ಪ್ರಯತ್ನಿಸುತ್ತಿದ್ದ ಶಾಮಣ್ಣ ಭಿನ್ನವಾಗಿ ಕಾಣುತ್ತಿದ್ದರು. ಅಮೆರಿಕಾದಲ್ಲಿ ಮನಶಾಸ್ತ್ರದ ಉನ್ನತ ಅಧ್ಯಯನ ನಡೆಸಿದ ಅವರ ಬಂಧುವೊಬ್ಬರು ಕಡಿದಾಳ್‌ಗೆ ಬಂದಾಗ ಅವರನ್ನು ನಮ್ಮ ಸ್ಕೂಲ್‌ಗೆ ಕರೆತಂದು ಅಮೆರಿಕಾದ ಶಾಲೆಗಳು, ಅಲ್ಲಿನ ವಿದ್ಯಾಭ್ಯಾಸ ಕ್ರಮ ಕುರಿತು ಭಾಷಣ, ಸಂವಾದ ಏರ್ಪಡಿಸಿದ್ದರು. ತುಂಬಾ ಉತ್ಸಾಹದಿಂದ ಹೊಸ ವಿಚಾರಗಳನ್ನು ಆ ಪರಿಸರದಲ್ಲಿ ಮೂಡಿಸಲು ಪ್ರಯತ್ನಿಸುತ್ತಿದ್ದರು. ಶಿಕ್ಷಕರು ಎಂದರೆ ಕೆಲವು ವಿದ್ಯಾರ್ಥಿಗಳು ಶಿಕ್ಷೆ ಕೊಡಲು ಇರುವವರೆಂದೇ ಭಾವಿಸಿಕೊಂಡವರಿಗೆ ಹಾಗಲ್ಲ ಎಂದು ತೋರಿಸಿ ಕೊಟ್ಟವರು ಶಾಮಣ್ಣ. ಆಮೇಲೆ ಅವರು ಶಿಕ್ಷಕ ವೃತ್ತಿಯನ್ನು ಬಿಟ್ಟು ಕೃಷಿಕರಾದರು. ತೀವ್ರ ಸಾಮಾಜಿಕ ಕಾಳಜಿ ಹೊಂದಿದ್ದ ಶಾಮಣ್ಣನವರಿಗೆ ನಾಲ್ಕು ಗೋಡೆಗಳ ಒಳಗಿನ ತರಗತಿಗಿಂತ ಹೊರಗಿನ ಜಗತ್ತು ಮುಖ್ಯವೆನಿಸಿರಬೇಕು. ರೈತ ಸಂಘಟನೆಯಲ್ಲಿ ಅವರು ತೊಡಗಿಕೊಂಡರು. ಈಗ ಅವರು ಭಗವತಿಕೆರೆಯಲ್ಲಿ ಶಾಲೆಯೊಂದನ್ನು ನಡೆಸುತ್ತಿದ್ದೇನೆಂದು ಹೇಳಿದರು. ಆ ಮಕ್ಕಳಿಗಾಗಿ ದಶಕಗಳ ಹಿಂದಿನ ತಮ್ಮ ಹಾರ್ಮೋನಿಯಮ್ ರಿಪೇರಿ ಮಾಡಿಸಿರುವುದಾಗಿ ಹೇಳಿದಾಗ ಅವರೊಳಗಿನ ಮೇಷ್ಟ್ರು ಇನ್ನೂ ಜಗೃತವಾಗಿರುವುದು ನನಗೆ ಖಚಿತವಾಯಿತು. ತುಂಬಾ ಸರಳ ಸ್ವಭಾವದ ಶಾಮಣ್ಣ ತಾವು ತೆಗೆದ ಅಪರೂಪದ ಫೋಟೊಗಳ ಪ್ರದರ್ಶನ ಮಾಡಲು ಸ್ಕೂಲು, ಕಾಲೇಜುಗಳಿಗೆ ಆಹ್ವಾನಿಸಿದರೆ ತಾವೇ ಬ್ಯಾಗ್‌ಗಳನ್ನು ಹೊತ್ತುಕೊಂಡು ಬಸ್‌ನಲ್ಲೇ ಪ್ರಯಾಣಿಸಿ ಬರುತ್ತಾರೆ. ಅವರು ನಿಜವಾದ ಗಾಂಧೀವಾದಿ.

ನಾಲ್ಕೈದು ವರ್ಷಗಳ ಹಿಂದೆ ನನ್ನ ಎರಡು ಪುಸ್ತಕಗಳ ಅನಾವರಣ ಕಾರ್ಯಕ್ರಮವನ್ನು ನಮ್ಮ ಮನೆಯಲ್ಲೇ ಏರ್ಪಡಿಸಿ ನನ್ನ ಅಧ್ಯಾಪಕರು ಕೆಲವರನ್ನು ಕರೆದಿದ್ದೆ. ಆಗ ಪುಸ್ತಕ ಬಿಡುಗಡೆ ಮಾಡಿದವರು ಶಾಮಣ್ಣ. ಬಕುಲದ ದಾರಿಯ ಕವಿತೆಗಳನ್ನು ಅವರು ಆನಂತರ ಶಿವಮೊಗ್ಗೆಯ ಕಾರ್ಯಕ್ರಮವೊಂದರಲ್ಲಿ ವಾಚಿಸಿದರೆಂದು ತಿಳಿಯಿತು.

ಶಾಮಣ್ಣ ಎಂಬ ಶಕ್ತಿ-ಸ್ಫೂರ್ತಿಯ ಸೆಲೆ

ಕೆ.ಎಸ್.ಗೋಪಿನಾಥ್

ನಮ್ಮ ಬದುಕಿನ ಪಯಣದಲ್ಲಿ ಹಲವಾರು ವ್ಯಕ್ತಿಗಳು, ಸಂದರ್ಭಗಳು ಹಾಗೂ ಸಂಬಂಧಗಳು ಎದುರಾಗಿ ನಮಗೆ ಹಲವಾರು ಬಗೆಯ ಒಳ್ಳೆಯ ಹಾಗೂ ಹಿತವಲ್ಲದ ಅನುಭವಗಳನ್ನು ತಂದು ಕೊಡುತ್ತವೆ. ಅದರಲ್ಲಿ ಬೇಕಾದುದ್ದನ್ನು ಸ್ವೀಕರಿಸುವ ಯಾ ಬೇಡದ್ದನ್ನು ತಿರಸ್ಕರಿಸುವ ಆಯ್ಕೆ ನಮ್ಮದಾಗಿರುತ್ತದೆ. ಇಂತಹ ಹಲವಾರು ಬಗೆಯ ಅನುಭವಗಳಿಗೆ ಒಳಗಾಗುವ ಸಂದರ್ಭಗಳು ನನಗೆ ವಿದ್ಯಾರ್ಥಿ ದೆಸೆ ಯಿಂದಲೇ ದಕ್ಕುತ್ತಾ ಬಂದಿದೆ. ಜಾತಿ ಮೀರಿದ ಬದುಕು ಮತ್ತು ನನ್ನ ಮದುವೆಯಿಂದಾಗಿ ಎಲ್ಲ ಜಾತಿಯವ ರೊಂದಿಗೆ ಸೌಹಾರ್ದಯುತ ಮತ್ತು ಪ್ರೀತಿಯ ಬದುಕು ಸಾಧ್ಯವಾಗಿದೆ.

ಇಂತಹ ಪಯಣದಲ್ಲಿ ನಾನು ನಿಕಟ ಸಂಬಂಧ ವನ್ನು ಹೊಂದಿರುವ ವ್ಯಕ್ತಿಗಳಲ್ಲೊಬ್ಬರು ಕಡಿದಾಳು ಶಾಮಣ್ಣ. ನಾನು ರೈತಸಂಘದಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡ ದಿನಗಳಿಂದಲೂ ಶಾಮಣ್ಣ ನನಗೆ ಪರಿಚಿತರು. ನಾನು ಪ್ರೊ. ನಂಜುಂಡಸ್ವಾಮಿಯವರ ಪ್ರಭಾವಕ್ಕೆ ಒಳಗಾಗಿ ೧೯೮೦ರಲ್ಲಿ ಅವರು ಪ್ರಿನ್ಸಿಪಾಲ

ರಾಗಿದ್ದ ಅವರ ಕಾಲೇಜಿಗೆ ಕಾನೂನು ಕಲಿಯಲು ಸೇರಿಕೊಂಡಾಗಲಿನಿಂದ ರೈತಸಂಘದೊಂದಿಗಿನ ನಂಟು ನನಗೆ ಪ್ರಾರಂಭವಾಯಿತು. ರೈತನಲ್ಲದವನ ಮಗನಾಗಿ ರೈತಸಂಘದಲ್ಲಿ ಸಕ್ರಿಯಾಗಿ ತೊಡಗಿಸಿಕೊಂಡದ್ದು ನನ್ನ ಬದುಕಿನ ಅತ್ಯಂತ ಸೃಜನಶೀಲ ಘಳಿಗೆಗಳು ಎಂದು ಭಾವಿಸಿದ್ದೇನೆ. ನಾನು ಶಿವಮೊಗ್ಗದಿಂದ ಬಂದು ನಂಜುಂಡಸ್ವಾಮಿಯವರ ವಿದ್ಯಾರ್ಥಿಯಾದೆನೆಂಬ ಕಾರಣದಿಂದಾಗಿ ನನಗೆ ರೈತಸಂಘದಲ್ಲಿ ವಿಶೇಷ ಪ್ರೀತಿ ಮತ್ತು ಗೌರವ ದಕ್ಕಿತ್ತು. ಬೆಂಗಳೂರು ಹಾಗೂ ಶಿವಮೊಗ್ಗ ಜಿಲ್ಲೆಯಲ್ಲಿ ನಡೆಯುತ್ತಿದ್ದ ಹಲವಾರು ರೈತಸಂಘದ ಕಾರ್ಯಕ್ರಮಗಳಲ್ಲಿ ನಾನು ಭಾಗವಹಿಸುತ್ತಿದ್ದೆ. ಆದರೆ ನಂಜುಂಡಸ್ವಾಮಿಯವರ ರಂಜನೀಯ 'ವಾಗ್ವಾದ'ಗಳನ್ನು ಮಾತ್ರ ತಪ್ಪಿಸಿಕೊಳ್ಳುತ್ತಿರಲಿಲ್ಲ. ಆ ದಿನಗಳಲ್ಲಿ ರೈತಸಂಘದ ನಾಯಕರ ಸಂಪರ್ಕ ಮತ್ತು ಕಾರ್ಯಕ್ರಮಗಳು ಭಾವನಾತ್ಮಕವೂ ಆಗಿತ್ತು. ಎಷ್ಟೋ ದಿನಗಳವರೆಗೆ ರೈತ ಸಂಘದಲ್ಲಿರುವವರೆಲ್ಲ ಈ ನನ್ನಂತಹ ಹಲವರ ತರಹ ಜಾತಿ ಮೀರಿ ಬದುಕುತ್ತಿದ್ದಾರೆ ಎಂದು ಭಾವಿಸಿದ್ದೆ. ವಾಸ್ತವ ಹಾಗೇನೂ ಇರಲಿಲ್ಲ. ಆದರೆ ಶಾಮಣ್ಣ ಇದಕ್ಕೆ ಅಪವಾದ.

ಶಾಮಣ್ಣ ಮತ್ತು ನನ್ನ ನಡುವಿನ ಭೇಟಿ ನಾನು ನನ್ನ ಬದುಕಿನ ಅತ್ಯಂತ ಪ್ರಮುಖವಾದ ತೀರ್ಮಾನವನ್ನು ಕೈಗೊಂಡ ನಂತರದ್ದಾಗಿತ್ತು. ನಾನು ಬೇರೊಂದು ಜಾತಿಯ ಹುಡುಗಿಯೊಬ್ಬಳನ್ನು ಪ್ರೀತಿಸಿ ಅವಳನ್ನು ಮಡದಿಯನ್ನಾಗಿಸಿಕೊಳ್ಳುವ ತೀರ್ಮಾನಕ್ಕೆ ಬಂದು, ಈ ಸಂಬಂಧ ಶಾಮಣ್ಣನವರ ಸಹಾಯಕೋರಿ ೧೯೮೬ರ ಒಂದು ದಿವಸ ಭಗವತಿಕೆರೆಯ ಅವರ ನಿವಾಸದಲ್ಲಿ ಅವರನ್ನು ಕಂಡಿದ್ದೆ. ನನ್ನ ಪರಿಸ್ಥಿತಿಯನ್ನು ತಿಳಿದುಕೊಂಡ ಶಾಮಣ್ಣ "ನಿಮ್ಮ ಮದುವೆ ಶಾಂತಿ ಹಾಗು ಸೌಹಾರ್ದಯುತವಾಗಿ ನಡೆಯುತ್ತೆ. ನೀವೇನೂ ತಲೆಕೆಡಿಸಿಕೊಳ್ಳಬೇಡಿ" ಎಂಬ ಧೈರ್ಯದ ಮಾತುಗಳನ್ನು ಹೇಳಿದ್ದರು. ಅವರ ಮಾತಿನಂತೆ ನನ್ನ ಪರ ವಕಾಲತ್ತು ವಹಿಸಿ, ಹುಡುಗಿಯ ಮನೆಯವರೊಂದಿಗೆ ಮಾತನಾಡಿ ನನ್ನ ಮದುವೆ ನಾನು ಪ್ರೀತಿಸಿದ್ದ ಕರುಣಾಮಯಿಯೊಂದಿಗೆ ಸಾಧ್ಯವಾಗುವಂತೆ ನೋಡಿಕೊಂಡರು. ಅತ್ಯಂತ ಸರಳವಾಗಿ ನಡೆದ ನನ್ನ ಮದುವೆಯ ಅಧ್ಯಕ್ಷತೆಯೂ ಅವರದ್ದೇ ಆಗಿತ್ತು. ಆ ಘಳಿಗೆ ನನ್ನ ಬದುಕಿನ ಸಂತೋಷದ ಗಳಿಗೆ. ಅಂತಹ ನೂರಾರು ಮದುವೆಗಳನ್ನು ಶಾಮಣ್ಣ ಮಾಡಿಸಿದ್ದಾರೆ. ಶಾಮಣ್ಣ ಅಂದ ಕೂಡಲೇ "ಸದಾ ಹಸನ್ಮುಖಿ ಯಾಗಿರುವ ಎಲ್ಲಾ ವಿಷಯಗಳ ಬಗ್ಗೆಯೂ ಭರವಸೆ ಹಾಗೂ ಸಕಾರಾತ್ಮಕ ದೃಷ್ಟಿಕೋನವನ್ನು ಹೊಂದಿರುವ ಒಬ್ಬ ಆಶಾವಾದಿ ಮಾರ್ಗದರ್ಶಿ ಮತ್ತು ನಾಯಕ" ಎಂಬ ವರ್ಣನೆ ನನಗೆ ನೆನಪಾಗುವುದು. ಶಾಮಣ್ಣ ಯಾವುದೇ ಸಂದರ್ಭದಲ್ಲೂ ಯಾವುದೇ ರೀತಿಯ ಪ್ರಗತಿಪರ ಕಾರ್ಯಕ್ರಮಕ್ಕೆ ಅತ್ಯಂತ ಕಡಿಮೆ ಅವಧಿಯ ಮುನ್ಸೂಚನೆಯಿಂದ

ಕಾರ್ಯಕ್ಷೇತ್ರಕ್ಕೆ ಹೊರಡಬಲ್ಲ ವ್ಯಕ್ತಿ. ಅವರ ಮಾತುಗಳು ಸೌಮ್ಯ ಎನಿಸಿದರೂ ಅದರ ಹಿಂದಿರುವ ಮನಸ್ಸು ಮತ್ತು ನಿರ್ಧಾರ ಗಂಭೀರ ಹಾಗೂ ತೀವ್ರತೆಯಿಂದ ಕೂಡಿದ್ದಾಗಿರುತ್ತದೆ. ಅಂತರ ಜಾತಿ ಮದುವೆಯೊಂದರ ಕುರಿತಾದ ಪಂಚಾಯಿತಿ. ಸರಳ ಮದುವೆಗೆ ಒಪ್ಪದ ಕುಟುಂಬದೊಂದಿಗೆ ಮಾತು, ಯಾವುದೇ ಸರ್ಕಾರಿ ಕಛೇರಿ ಅಥವಾ ವಿದ್ಯಾಸಂಸ್ಥೆಯಲ್ಲಿನ ಭ್ರಷ್ಟಾಚಾರ, ಯಾರಿಗೇ ಆದ ಅವಮಾನ, ರೈತರ ಕುರಿತು ಸರ್ಕಾರದ ತಪ್ಪು ನಿರ್ಧಾರ, ಜಾತಿಯ ಕಾರಣದಿಂದಾಗಿ ಯಾರೋ ಪಡುತ್ತಿರುವ ಹಿಂಸೆ ಇತ್ಯಾದಿಗಳು ಶಾಮಣ್ಣ ಮನೆಯಿಂದ ಹೊರ ಹೊರಡುವ ಕಾರಣಗಳಾಗಿರುತ್ತದೆ. ಶಾಮಣ್ಣ ಸಂಬಂಧಪಟ್ಟವರೊಂದಿಗೆ ಮಾತನಾಡಿ ಅಥವಾ ಪ್ರತಿಭಟಿಸಿ ಅದನ್ನು ತಾರ್ಕಿಕ ಅಂತ್ಯಕ್ಕೆ ಕೊಂಡೊಯ್ಯುತ್ತಾರೆ.

ಕೆಲವರಿಗೆ ಮನುಷ್ಯನಲ್ಲಿರಬಹುದಾದ ಒಳ್ಳೆಯ ಗುಣಗಳು ಹುಟ್ಟಿನಿಂದ ಬಂದಿರುತ್ತವೆ. ಮತ್ತೆ ಕೆಲವರಿಗೆ ಅದು ಓದು ಮತ್ತು ಸಹವಾಸದಿಂದ ಬಂದಿರುತ್ತದೆ. ಶಾಮಣ್ಣ ಮೊದಲ ಪಂಗಡಕ್ಕೆ ಸೇರಿದವರು. ಅವರ ಶಾಂತ ಚಿತ್ತತೆ, ಹಸನ್ಮುಖಿ ಗುಣ, ನೊಂದವರಿಗೆ ತುಡಿಯುವ ಮನಸ್ಸು, ಹೋರಾಟದ ಕಿಚ್ಚು, ಎಂತಹ ಅತಿರೇಕದ ಪರಿಸ್ಥಿತಿಯಲ್ಲಿಯೂ ಶಾಂತಿಯಿಂದ ವ್ಯವಹರಿಸುವ ಅವರ ಗುಣಗಳೆಲ್ಲ ಅವರಿಗೆ ಹುಟ್ಟಿನಿಂದಲೇ ಬಂದಿವೆ ಎನಿಸುತ್ತದೆ.

ಶಾಮಣ್ಣ ಮನೆಯನ್ನು ಮರೆತು ಸಮಾಜದ ಸೇವೆಯಲ್ಲಿ ಪೂರ್ಣವಾಗಿ ತೊಡಗಿಸಿಕೊಂಡು, ಅವುಗಳ ಪ್ರತಿಕ್ಷಣವನ್ನು ಸಂತೋಷದಿಂದ ಅನುಭವಿಸುವಂತೆ ನೋಡಿಕೊಳ್ಳುತ್ತಿರುವ ವ್ಯಕ್ತಿಯೊಬ್ಬರ ಕುರಿತು ನಾವು ತಿಳಿಯದಿದ್ದರೆ ತಪ್ಪಾದೀತು. ಆ ವ್ಯಕ್ತಿ ಅವರ ಧರ್ಮಪತ್ನಿ ಶ್ರೀಮತಿ ಶ್ರೀದೇವಿ. ನಾನು ಅವರನ್ನು ಶ್ರೀದೇವಕ್ಕ ಎಂದೇ ಕರೆಯುತ್ತೇನೆ. ಅವರು ಶಾಮಣ್ಣನ ಹಿಂದಿರುವ ಪ್ರೇರಕ ಶಕ್ತಿ, ಮಾರ್ಗದರ್ಶಿ ಹಾಗೂ ಸಹಾಯಕಿ ಇತ್ಯಾದಿ. ಶಾಮಣ್ಣನವರ ಆರೋಗ್ಯದ ಕುರಿತು ನಿಗಾ ಇಡುವುದರಿಂದ ಹಿಡಿದು, ಜಮೀನು ಮತ್ತು ತೋಟದ ರೈತಾಪಿ ಕೆಲಸಗಳನ್ನು ನೋಡಿಕೊಳ್ಳುವ ಜವಾಬ್ದಾರಿಯನ್ನು ಅವರು ಹೊತ್ತಿರದಿದ್ದರೆ, ಶಾಮಣ್ಣ ಮನೆ ಬಿಟ್ಟು ಹೊರಗೆ ಬರಲು ಕಡಿಮೆ ಸಾಧ್ಯವಾಗುತ್ತಿತ್ತು. ಶಾಮಣ್ಣನವರ ಕಾರ್ಯಕ್ರಮದ ಕುರಿತು ಎಲ್ಲ ಬಗೆಯ ತಯಾರಿಯೂ ಅವರದ್ದೆ. ಶಾಮಣ್ಣ ಮನೆ ಬಿಟ್ಟು ಹೊರಡುವ ಘಳಿಗೆಯಿಂದ ಅವರು ಹಿಂತಿರುಗುವ ತನಕ ಅವರನ್ನು ಮಾನಿಟರ್ ಮಾಡುವ ಶಕ್ತಿಯೇ ಶ್ರೀದೇವಕ್ಕ. ಈ ಕೆಲಸವನ್ನು ಅವರು ಮಾಡದೇ ಹೋದರೆ ಶಾಮಣ್ಣ ಮನೆ ಮಾರು ಮರೆತು ತಿಂಗಳುಗಟ್ಟಲೆ ತಮಗಿಷ್ಟದ ಕಾಡು ಮೇಡು, ಹೋರಾಟ, ಸಂಗೀತ, ಸ್ನೇಹಿತರ ಹಾಗೂ ನೆಂಟರ ಮನೆ ಅಂತ ಹಲವಾರು ದಿನಗಳ ಕಾಲ ಅಲೆದಾಡಬಲ್ಲರು. ಕೆಲ ವಿಷಯಗಳಲ್ಲಿ ಇವತ್ತಿಗೂ ಶಾಮಣ್ಣ ಮುಗ್ಧ ಶಾಲಾ

ವಿದ್ಯಾರ್ಥಿಯಂತೆ. ಅವರಿಗೆ ಗೊತ್ತಿಲ್ಲದ ಮನೆ ಮತ್ತು ಜನ ಇಲ್ಲವೇ ಇಲ್ಲ ತೀರ್ಥಹಳ್ಳಿ ತಾಲ್ಲೂಕಿನಲ್ಲಿ ಹಾಗೂ ಹೊಳೆಹೊನ್ನೂರು ಭಾಗದ ಪ್ರದೇಶದಲ್ಲಿ. ತೀರ್ಥಹಳ್ಳಿಯ ಸಾಬರಿಂದ ಹಿಡಿದು ಶೃಂಗೇರಿ ಸೆರಗಿನ ಗ್ರಾಮವೊಂದರಲ್ಲಿರುವ ದೀವರ ಕುಟುಂಬದವರೊಂದಿಗೂ ಅವರದ್ದು ಒಂದೇ ರೀತಿಯ ಒಡನಾಟ. ಹಸಿವಾದಾಗ ಕಂಡ ಮನೆ ಹೊಕ್ಕು, ಮಲಗಲು ನೆಲ ತೋರಿಸಿದರೆ ಶಾಮಣ್ಣ ಎಲ್ಲಾದರೂ ನಿಶ್ಚಿಂತೆಯಿಂದ ನಿದ್ರಿಸಬಲ್ಲರು.

ಶಾಮಣ್ಣ ರಾಜ್ಯಾದ್ಯಂತ ಜನಪ್ರಿಯರು ಹಾಗೂ ಪರಿಚಿತರು, ಆದರೆ ಮಲೆನಾಡಿನಿಂದ ದೂರವಾಗಿ ಹೊಳೆಹೊನ್ನೂರು ಬಳಿಯ ಭಗವತಿಕೆರೆಯಲ್ಲಿ ಮನೆ ಮತ್ತು ಕೃಷಿಯಲ್ಲಿ ತೊಡಗಿದ್ದರೂ ಅವರಿಗೆ ಇಷ್ಟದ ಪ್ರದೇಶವೆಂದರೆ ತಾವು ಹುಟ್ಟಿದ, ಓದಿದ ಮಲೆನಾಡಿನ ತೀರ್ಥಹಳ್ಳಿ ತಾಲ್ಲೂಕು. ಅಲ್ಲಂತೂ ಅವರು ಮನೆಮಾತು. ಅವರು ತಮ್ಮ ಆಪ್ತರ, ಸ್ನೇಹಿತರ ಹಾಗೂ ನೆಂಟರ ಜೊತೆ ನಿಕಟ ಸಂಬಂಧವನ್ನು ಹೊಂದಿದ್ದಾರೆ. ನಿಯಮಿತವಾಗಿ ಅವರುಗಳ ಮನೆಗೆ ಭೇಟಿ ನೀಡುತ್ತಾರೆ. ಬಹುಪಾಲು ಸಂದರ್ಭಗಳಲ್ಲಿ ಶಾಮಣ್ಣ ಮತ್ತು ಶ್ರೀದೇವಕ್ಕ ಒಟ್ಟಿಗೇ ಓಡಾಡುತ್ತಾರೆ. "ನಮ್ಮ ಮನೆಗೆ ಬನ್ನಿ" ಎಂದು ಯಾರೂ ಅವರನ್ನು ಕರೆಯುವ ಅವಶ್ಯಕತೆಯಿಲ್ಲ. ಅವರಿಬ್ಬರೂ ಬಂದೇ ಬರುತ್ತಾರೆ ಗ್ಯಾರಂಟಿಯಾಗಿ. ಯಾರದ್ದಾದರೂ ಮನೆಗಳಲ್ಲಿ ಅವಗಾಡ ಸಂಭವಿಸಿದರೆ ಅಥವಾ ತೊಂದರೆಯಾದರೆ ದಂಪತಿಗಳು ಭೇಟಿ ನೀಡಿ ಸಂಬಂಧಿತರಿಗೆ ಸಾಂತ್ವನದ ಮಾತನಾಡಿ ನೆಮ್ಮದಿ ತರುತ್ತಾರೆ. ಶ್ರೀ ಪ್ರಭುಶಂಕರರನ್ನು ನೆನಪಿಸಿಕೊಂಡು ಮೈಸೂರಿಗೆ, ಎಸ್.ವಿ. ಪರಮೇಶ್ವರ ಭಟ್ಟರನ್ನು ನೆನಪಿಸಿಕೊಂಡು ಮಂಗಳೂರಿಗೆ, ಅನಂತಮೂರ್ತಿ ಅವರಿದ್ದ ಸಮಯದಲ್ಲಿ ಬೆಂಗಳೂರಿಗೆ ಹೊರಟೆಬಿಟ್ಟರು.

ಶಾಮಣ್ಣ ದಂಪತಿಗಳು ನನಗೆ ಪ್ರೀತಿ ಹಾಗೂ ಗೌರವದ ವ್ಯಕ್ತಿಗಳು. ಅವರ ಬಳಿ ಯಾವ ಮುಲಾಜೂ ಇಲ್ಲದೇ ಏನನ್ನಾದರೂ ಚರ್ಚಿಸಬಹುದು. ಶಾಮಣ್ಣನವರು ನನಗಿಂತ ಹೆಚ್ಚಿನ ವಯಸ್ಸಿನವರು ಎಂದು ನನಗೆಂದೂ ಅನಿಸಿಲ್ಲ. ಆ ತರಹದ ಭಾವನೆ ಬರುವಂತೆ ಅವರು ನಡೆದು ಕೊಳ್ಳುವುದೂ ಇಲ್ಲ. ಅವರ ಆಸಕ್ತಿಗಳು ಹತ್ತಾರು. ಅದರಲ್ಲೂ ಸಂಗೀತ, ನಾಟಕ ಅವರಿಷ್ಟದವು. ಅವರು ಖುದ್ದು ಸರೋದ್ ಹಾಗೂ ತಬಲಾ ವಾದಕರು. ಅತ್ಯುತ್ತಮ ಕೊಳಲು ವಾದಕರು ಹೌದು. ಉತ್ತಮವಾದ ಸಂಗೀತ ಕಛೇರಿ ಎಲ್ಲೇ ನಡೆದರೂ ಶಾಮಣ್ಣ ಅಲ್ಲಿ ಹಾಜರು. ಎರಡು ತಿಂಗಳ ಹಿಂದೆ ಬೆಂಗಳೂರಿನಲ್ಲಿ ಅವರಿಷ್ಟದ ಶ್ರೀ ರಾಜೀವ್ ತಾರಾನಾಥ್ ಅವರ ಸರೋದ್ ವಾದನದ ಕಛೇರಿಗೆ ಅವರೊಂದಿಗೆ ಹೋದದ್ದು ನನಗಿನ್ನು ಹಸಿರಾಗಿದೆ. ಶಿವಮೊಗ್ಗ, ತೀರ್ಥಹಳ್ಳಿ, ಬೆಂಗಳೂರು, ಹೆಗ್ಗೋಡು ಹಾಗೂ ಸಾಣೆಹಳ್ಳಿಯ ನಾಟಕೋತ್ಸವಗಳು ಶಾಮಣ್ಣ ಮೆಚ್ಚುವ ಕಾರ್ಯಕ್ರಮಗಳು.

ಸಮಾಜವಾದಿ ಹಿನ್ನಲೆಯನ್ನು ಹೊಂದಿರುವ ಶಾಮಣ್ಣ ಶಾಂತವೇರಿ ಗೋಪಾಲ ಗೌಡರಿಂದ ಹಿಡಿದು ಸಮಕಾಲೀನ ರಾಜಕಾರಣಿಗಳನ್ನು ಬಲ್ಲರು. ಅವರನ್ನು ಚೆನ್ನಾಗಿ ಬಲ್ಲ ರಾಜಕಾರಣಿಗಳು ಅವರೊಂದಿಗೆ ಪ್ರೀತಿ ಹಾಗೂ ಗೌರವದೊಂದಿಗೆ ನಡೆದುಕೊಳ್ಳುತ್ತಾರೆ. ಸಹಜವಾಗಿ ವರ್ತಿಸುತ್ತಿದ್ದ ಸಮಾಜವಾದಿ ಪಟೇಲರು ಶಾಮಣ್ಣನಂತೆ ಅಚ್ಚುಮೆಚ್ಚು. ಹಾಗಂತ ಶಾಮಣ್ಣ ಯಾವ ರಾಜಕಾರಣಿಗಳ ಬಳಿಯೂ ಸಹಾಯ ಕೋರಿ ಹೋಗಿಲ್ಲ. ಗ್ರಾಮ ಪರವಾದ ಬೇಡಿಕೆಗಳಿದ್ದಲ್ಲಿ, ನೊಂದವರ ಪರವಾಗಿ ದನಿಯಾಗಲೂ ಶಾಮಣ್ಣ ಸಂಕೋಚವಿಲ್ಲದೆ ರಾಜಕಾರಣಿಗಳಿಂದ ಕೆಲಸ ಮಾಡಿಸಿಕೊಡಲು ಪ್ರಾಮಾಣಿಕ ಪ್ರಯತ್ನ ಪಡುತ್ತಾರೆ.

ರೈತ ಚಳುವಳಿ ಪ್ರಗತಿ ಪರ ಚಳುವಳಿಯಾದರೂ ಅಲ್ಲಿರುವವರೆಲ್ಲಾ ನಮ್ಮವರೇ ಅಲ್ಲವೇ? ಇದೇ ಮಣ್ಣು ಮತ್ತು ನೀರನ್ನು ಕಂಡವರಲ್ಲವೆ? ಹಾಗಾಗಿ ಅಲ್ಲಿಯೂ ಬಹಳ ಮಂದಿ ಸಹಜವಾಗಿ ನಾಯಕತ್ವಕ್ಕಾಗಿ ಪೈಪೋಟಿ, ಜನಪ್ರಿಯತೆಗಾಗಿ ಪೈಪೋಟಿ, ಮಾಧ್ಯಮಗಳಲ್ಲಿ ಕಾಣಿಸಲು ಹೆಣಗುತ್ತಾರೆ. ಶಾಮಣ್ಣ ಇದಕ್ಕೆಲ್ಲಾ ಹೊರತು. ಅವರು ಎಲ್ಲಿಯೂ ತಮ್ಮ ಮಾತುಗಳನ್ನು ಹೇಳಲೇಬೇಕಂತ ಮುನ್ನುಗ್ಗಿ ಹೋಗುವವರಲ್ಲ. ಅವರದ್ದು "Low Profile" ಬದುಕು. ಆದರೂ ಎಲ್ಲರೂ ಶಾಮಣ್ಣನವರನ್ನು ಹೆಚ್ಚು ಇಷ್ಟಪಟ್ಟು ನಂಬುತ್ತಾರೆ, ಮಾತನಾಡಿಸುತ್ತಾರೆ, ಕಳೆದ ಮೂರೂವರೆ ದಶಕಗಳಿಂದ ನಾನು ಶಾಮಣ್ಣನವರನ್ನು ಅತ್ಯಂತ ಹತ್ತಿರದಿಂದ ಕಂಡಿಹೆನಾದ್ದರಿಂದ, ಒಂದು ನಿರ್ದಿಷ್ಟ ಸಂದರ್ಭದಲ್ಲಿ ಶಾಮಣ್ಣನವರ ಪ್ರತಿಕ್ರಿಯೆ ಏನಾಗಿರುತ್ತದೆ ಎಂಬುದನ್ನು ನಾನು ಸುಲಭವಾಗಿ ಊಹಿಸಬಲ್ಲೆ. ಶಾಮಣ್ಣ ನನ್ನ ಊಹೆಯಂತೆಯೇ ನಡದುಕೊಳ್ಳುತ್ತಾರೆ. ಅವರ ಮಾತುಗಳಲ್ಲಿ ತತ್ವ ಸಿದ್ಧಾಂತಗಳಿಗಿಂತ ವಾಸ್ತವಿಕತೆಗೆ ಹೆಚ್ಚು ಒತ್ತಿರುತ್ತದೆ. ಹೇಳಬೇಕಾದ್ದನ್ನು ಕಡ್ಡಿ ಮುರಿದಂತೆ ಸಂಕ್ಷಿಪ್ತವಾಗಿ ಹೇಳುವುದು ಅವರ ಅಭ್ಯಾಸ. ಯಾರನ್ನೊ ಮೆಚ್ಚಿಸಲು ಅಥವಾ ಸ್ವಾರ್ಥತೆಗಾಗಿ ಅವರು ಮಾತನಾಡಿದ್ದನ್ನು ನಾನೆಂದೂ ಕೇಳಿಲ್ಲ. ಸಹಜವಾಗಿ ನಾವು ರಸ್ತೆಯಲ್ಲಿ ನಡೆಯುವಾಗ ಮಾತನಾಡುವ ಧಾಟಿಯಲ್ಲಿಯೇ ಅವರು ಸಭೆಗಳಲ್ಲೂ ಮಾತನಾಡುತ್ತಾರೆ. ಮೊನ್ನೆ ಶ್ರೀ ಸಿದ್ಧರಾಮಯ್ಯನವರು ಅವರನ್ನು ದಸರಾ ಉದ್ಘಾಟಿಸಲು ಬನ್ನಿ ಎಂದು ಕರೆದಾಗ ಅವರ ಪ್ರತಿಕ್ರಿಯೆ ಎಷ್ಟು ಸಹಜ ಮತ್ತು ಆಡುಮಾತಿನಲ್ಲಿತ್ತು ಅಲ್ಲವೇ? ಅವರನ್ನು ಬಲ್ಲವರು ಅವರ ಮಾತಿಗೆ ತಪ್ಪು ಅರ್ಥಗಳನ್ನು ಕಲ್ಪಿಸುವುದಿಲ್ಲ. ಅವರ ಮಾತಿಗೆ ಪ್ರತಿಕ್ರಿಯೆಯಾಗಿ ಮುಖ್ಯಮಂತ್ರಿಗಳು "ಶಾಮಣ್ಣ ಇರುವುದೇ ಹಾಗೆ, ಮಾತನಾಡುವುದೇ ಹಾಗೆ. ಅವರ ಮಾತಿನ ಬಗ್ಗೆ ನನಗೆ ಗೌರವವಿದೆ" ಎಂದರು. ಶಾಮಣ್ಣನವರನ್ನು ಅರ್ಥಮಾಡಿಕೊಂಡವರು ಆಡುವ ಮಾತು. ಯಾರಾದರೂ ಗಂಭೀರವಾಗಿ 'ಶಾಮಣ್ಣ ಹೇಳಿದ ಹಾಗೆ ವಿಧಾನಸೌಧದ ಕಸಗುಡಿಸಿ' ಎಂದಿದ್ದರೆ,

ಶಾಮಣ್ಣ ಅದಕ್ಕೂ ಹಿಂಜರಿಯುತ್ತಿರಲಿಲ್ಲ ಎಂಬುದೂ ನನಗೆ ಗೊತ್ತು. ಹಿಂದೊಮ್ಮೆ ಪ್ರೊ. ನಂಜುಂಡಸ್ವಾಮಿಯವರು, ಸರ್ಕಾರದ ವಿರುದ್ಧ ಪ್ರತಿಭಟಿಸಲು ಮೆಟ್ಟಿಲುಗಳ ಮೇಲೆ ಕಕ್ಕಸ್ಸು ಮಾಡಬೇಕು ಎಂದದ್ದನ್ನು ಶಾಮಣ್ಣ ಬಹಳ ಗಂಭೀರವಾಗಿ ತೆಗೆದುಕೊಂಡು. ನಮ್ಮನ್ನೆಲ್ಲಾ ಹುರಿದುಂಬಿಸಿ ಅವರೊಂದಿಗೆ ನಾವೂ ಮಾನಸಿಕವಾಗಿ ಸಿದ್ಧರಾಗುವಂತೆ ಮಾಡಿದ್ದನ್ನು ನಾನು ಮರೆಯಲಾರೆ.

ಶಾಮಣ್ಣಂಗೂ ಹಾಸ್ಯಕ್ಕೂ ಅವಿನಾಭಾವ ಸಂಬಂಧ. ಅವರಿದ್ದ ಕಡೆ ಹಾಸ್ಯ ಗ್ಯಾರಂಟಿ. ಪ್ರತಿ ಘಟನೆಯಲ್ಲೂ ಹಾಸ್ಯವನ್ನು ಕಾಣುವ ಅಥವಾ ಹುಡುಕುವ ಅವರ ಪರಿ ನನಗಿಷ್ಟ. ಶಾಮಣ್ಣ ಯಾವುದೇ ವಿಷಯದಲ್ಲಿ ಗಂಭೀರವಾಗಿ ತೊಡಗಿರದಿದ್ದರೆ, ಸಂಗೀತದಲ್ಲಿ ಲೀನವಾಗಿಲ್ಲವಾದರೆ ಅವರು ಹಾಸ್ಯದಲ್ಲೆ ಇರುತ್ತಾರೆ. ಎಲ್ಲರೆದುರಿಗೆ ಮಾತನಾಡುವ ಹಾಸ್ಯದಿಂದ, ನಾವು ಗಂಡಸರೇ ಇರುವಾಗ ಹೇಳುವ ಹಾಸ್ಯದ ಪ್ರಸಂಗಗಳೂ ಅದರಲ್ಲಿ ಸೇರಿರುತ್ತವೆ. ಅವೆಲ್ಲವೂ ಅನುಭವದ ಹಾಸ್ಯ ಪ್ರಸಂಗಗಳಾಗಿರುತ್ತವೆ. ಅವು ಅಶ್ಲೀಲವಾಗಿರುವುದಿಲ್ಲ. ನಾವೆಲ್ಲಾ ಕೆಲ ಮಂದಿ ಸ್ನೇಹಿತರು ೧೯೮೭ರಲ್ಲಿ ಚಂದ್ರಗುತ್ತಿಯ ಬೆತ್ತಲೆ ಸೇವೆಯನ್ನು ವಿರೋಧಿಸಲು ಹೋದಾಗ ಅಲ್ಲಿಯ ಗಲಭೆಯ ಪರಿಣಾಮ ದಿಕ್ಕಾಪಾಲಾದೆವು. ಬೆತ್ತಲೆ ಸೇವೆಯನ್ನು ವಿರೋಧಿಸುವುದಿರಲಿ, ನಮ್ಮನ್ನು ನಾವು ರಕ್ಷಿಸಿಕೊಳ್ಳುವ ಪರಿಸ್ಥಿತಿ ನಮಗೆ ಬಂದೊದಗಿತ್ತು. ಆಗ ಶಾಮಣ್ಣ ಮತ್ತು ಮತ್ತೊಬ್ಬರನ್ನು ಬೆತ್ತಲೆ ಯುವಕರಿಬ್ಬರು ಅಟ್ಟಿಸಿಕೊಂಡು ಹೋದರು. ಹಲ್ಲೆ ಮಾಡುವುದು ಅವರುಗಳ ಉದ್ದೇಶವಾಗಿತ್ತು. ಅಲ್ಲಿರುವ ಹೊಲಗಳ ಮಧ್ಯೆ ಶಾಮಣ್ಣ ಮತ್ತಿಬ್ಬರು ಓಟ ಕಿತ್ತಿದ್ದು ಹಾಗೂ ಆ ಬೆತ್ತಲೆ ಯುವಕರು ತಮ್ಮ ಪ್ರಯತ್ನದಲ್ಲಿ ಯಶಸ್ವಿಯಾಗದಿದ್ದುದಕ್ಕೆ ಕಾರಣಗಳನ್ನು ಶಾಮಣ್ಣನವರ ಬಾಯಿಂದಲೇ ಕೇಳಬೇಕು! ಆ ಪ್ರಸಂಗ ನೆನಪಾದರೆ ಈಗಲೂ ನಾವೆಲ್ಲಾ ಹೊಟ್ಟೆ ಹುಣ್ಣಾಗುವಂತೆ ನಗುತ್ತಿರುತ್ತೇವೆ.

ಶಾಮಣ್ಣನವರ ಜೊತೆ ನಾನು ಹಲವಾರು ಕಾರ್ಯಕ್ರಮ ಹಾಗೂ ಚಳುವಳಿಯ ಸಂದರ್ಭದಲ್ಲಿರುವ ಅವಕಾಶ ನನಗೆ ಸಿಗುತ್ತಾ ಬಂದಿದೆ. ಎಲ್ಲೆ ಆಗಲಿ ಅವರು ಎಂತಹ ದೊಡ್ಡ ವ್ಯಕ್ತಿಗಳಾದರೂ ಸರಿ ಅಂತಹವರಿಗೆ ನಮ್ಮನ್ನು ಪರಿಚಯಿಸುವಾಗ "ಇವರ ಪರಿಚಯ ನಿಮಗಿಲ್ಲವೇ" ಅಂತನೇ ಪರಿಚಯಿಸುತ್ತಾರೆ. ಇದು ಶಾಮಣ್ಣನವರು ಎಲ್ಲರನ್ನೂ ಸಮಾನವಾಗಿ ಕಾಣುವ ಪರಿ.

ಪಟೇಲರು ಮುಖ್ಯಮಂತ್ರಿಗಳಾಗಿದ್ದ ಅವಧಿಯದು. ಒಂದು ದಿವಸ ಶಾಮಣ್ಣ ಯಾವುದೋ ಕೆಲಸದ ನಿಮಿತ್ತ ತನ್ನ ಸ್ನೇಹಿತ ಹಾಗೂ ರಾಂಪುರ ಹೆಚ್ಚುವರಿ ಕಾರ್ಯದರ್ಶಿಯಾಗಿದ್ದ ಹಿರಿಯ ಐ.ಎ.ಎಸ್ ಅಧಿಕಾರಿ ಶ್ರೀಮುತ್ತಣ್ಣ ಅವರನ್ನು ಕಾಣಲು ವಿಧಾನಸೌಧದ ಮೂರನೇ ಮಹಡಿಗೆ ಹೋಗಿದ್ದಾರೆ. ಅವರನ್ನ

ಮಾತನಾಡಿಸಿದ ನಂತರ ಹೊರ ಹೊರಟಿದ್ದಾರೆ. ಆಕಸ್ಮಿಕವಾಗಿ ಪಟೇಲರು ತಮ್ಮ ದಂಡಿನೊಂದಿಗೆ ಶಾಮಣ್ಣನವರ ಎದುರಿಗೆ ಬರಬೇಕೆ, ಶಾಮಣ್ಣ ಮಾಮೂಲಿನಂತೆ ನಕ್ಕು ನಮಸ್ಕಾರ ಪಟೇಲರೇ ಎಂದಿದ್ದಾರೆ. ಅದಕ್ಕೆ ಪಟೇಲರು ಏನೋ ಶಾಮಣ್ಣ? ಇಲ್ಲಿಗೇಕೆ ಬಂದೆ. ನಾನು ಕರ್ನಾಟಕದ ಮುಖ್ಯಮಂತ್ರಿ ನನ್ನನ್ನು ಕಾಣದೇ ಹೋಗುತ್ತಿರುವೆಯಲ್ಲಾ? ಏನು ಕೆಲಸವಾಗಬೇಕಿತ್ತು ಎಂದೆಲ್ಲಾ ಕೇಳಿದ್ದಾರೆ. ಅಂತೂ ಶಾಮಣ್ಣ ಏನೋ ಸಮಜಾಯಿಷಿ ನೀಡಿ ಪಟೇಲರಿಂದ ಪಾರಾಗಬೇಕಾಯಿತು. ಈ ಘಟನೆಯಿಂದ ನಾವು ಶಾಮಣ್ಣನವರ ವ್ಯಕ್ತಿತ್ವವನ್ನು ಅರ್ಥೈಸಿಕೊಳ್ಳಬಹುದು.

ನಾನು ನಂಜುಂಡಸ್ವಾಮಿಯವರ ವಿದ್ಯಾರ್ಥಿಯಾದ ನಂತರದಲ್ಲಿ ದಿನಗಳೆದಂತೆ ನಮ್ಮ ಸಂಬಂಧ ವಿಸ್ತಾರಗೊಳ್ಳುತ್ತಾ ಹೋಯಿತು. ಅವರು ನನ್ನನ್ನು ತಮ್ಮ ನಂಬುಗೆಯ ವ್ಯಕ್ತಿಯೆಂದು ತಿಳಿದು ಅದರಂತೆ ನನ್ನೊಡನೆ ನಡೆದುಕೊಳ್ಳ ತೊಡಗಿದರು. ಅವರು ಯಾರೊಂದಿಗೆ ಮಾತನಾಡುವಾಗಲೂ ನನ್ನನ್ನು ಯಾವತ್ತೂ 'ಹೊರಗಿರಿ' ಎಂದು ಹೇಳುತ್ತಿರಲಿಲ್ಲ. ನಾನೇ ಕೆಲ ಬಾರಿ ಹೊರಬರುತ್ತಿದ್ದೆ. ಆ ದಿನಗಳಲ್ಲಿ ಪ್ರೊಫೆಸರ್ ಶಿವಮೊಗ್ಗಕ್ಕೆ ಬಂದಿದ್ದರು. ಆಗ ರೈತ ಸಂಘದ ಕಛೇರಿ ಶಿವಮೊಗ್ಗದ ಜಯನಗರದಲ್ಲಿ ಲಾಯರ್ ಉಜ್ಜಪ್ಪನವರ ಮನೆಯ ಮಹಡಿಯಲ್ಲಿತ್ತು. ನಾನು ಮಾಮೂಲಿನಂತೆ ಅವರೊಂದಿಗೆ ಮಾತನಾಡುತ್ತಾ ಕುಳಿತಿದ್ದೆ. ಕೆಲ ಪದಾಧಿಕಾರಿಗಳೂ ಅಲ್ಲಿದ್ದರು. ನನಗೆ ನೆನಪಿದ್ದ ಹಾಗೆ ಶಾಮಣ್ಣನವರನ್ನೂ ರೈತಸಂಘದಿಂದ ಉಚ್ಚಾಟಿಸುವ ನಿರ್ಧಾರ ಕೈಗೊಂಡಾಗಿತ್ತು. ಲಂಕೇಶ್ ಪತ್ರಿಕೆಗೆ ಶಾಮಣ್ಣ ಬರೆಯುತ್ತಾರೆ ಎಂಬುದರಿಂದ ಹಿಡಿದು ಹಲವಾರು ಆರೋಪಗಳನ್ನು ಅವರ ವಿರುದ್ಧ ಮಾಡಲಾಗಿತ್ತು. ಆ ಹೊತ್ತಿನಲ್ಲಿ ಶಾಮಣ್ಣ ಏನೂ ಆಗಿಲ್ಲವೆಂಬಂತೆ ಕಛೇರಿಗೆ ಬಂದರು. ಪ್ರೊಪೆಸರ್‌ಗೆ ನಮಸ್ಕಾರ ಮಾಡಿ ಅಲ್ಲಿದ್ದ ಪದಾಧಿಕಾರಿಗಳ ಜೊತೆ ಮಾತನಾಡಲು ಪ್ರಾರಂಭ ಮಾಡಿದರು. ಆಗ ಒಮ್ಮಿಂದೊಮ್ಮೆಲೆ ಪ್ರೊಫೆಸರ್ ಸಿಟ್ಟಿನಿಂದ 'ರೈತ ವಿರೋಧಿಗಳಿಗೆ ರೈತ ಸಂಘದಲ್ಲಿ ಪ್ರವೇಶವಿಲ್ಲ. ಅವರ ಸಹವಾಸವೂ ನನಗೆ ಬೇಡ' ಎಂದರು. ನಾನು ಮಾತನಾಡಲು ಹವಣಿಸಿದಾಗ "ನೀವೊಂದು, ಸುಮ್ನಿರಿ" ಎಂದು ಸುಮ್ಮನಾಗಿಸಿದರು. ಈ ಮಧ್ಯೆ ಶಾಮಣ್ಣ ಮೆಟ್ಟಿಲಿಳಿದು ಹೊರ ಹೊರಟರು. ನಾನು ಮತ್ತೆ ಸಿಗುತ್ತೇನೆ ಸಾರ್ ಎನ್ನುತ್ತಾ ಹೊರನಡೆದೆ. ಮುಂದಿನದೆಲ್ಲಾ ಇತಿಹಾಸ. ಅಂದಿನ ಆ ಕ್ಷಣದವರೆಗೆ ಯಾರಾದರೂ ಶಾಮಣ್ಣನನ್ನು ಕುರಿತು ಆ ರೀತಿ ಮಾತನಾಡಬಹುದು ಎನ್ನುವ ಕಲ್ಪನೆಯೇ ನನಗಿರಲಿಲ್ಲ! ಅದೊಂದು ನೋವಿನ ಘಳಿಗೆ.

ಸಣ್ಣ ಘಟನೆಯೊಂದು ಸಂಘಟನೆಯೊಂದರ ರಚನೆ ಮತ್ತು ಕಾರ್ಯ ವೈಖರಿಯ ಕುರಿತು ಹಲವಾರು ಪ್ರಶ್ನೆಗಳನ್ನು ಎತ್ತಿದ್ದನ್ನು ನಾವು ಚರಿತ್ರೆಯಲ್ಲಿ ಕಂಡಿದ್ದೇನೆ. ಶಾಮಣ್ಣನವರ ಉಚ್ಚಾಟನೆ, ರೈತಸಂಘದ ಕುರಿತು ಅದೇ ರೀತಿಯ ಮೂಲಭೂತ

ಪ್ರಶ್ನೆಗಳನ್ನು ಎತ್ತಿದ್ದಂತೂ ಸತ್ಯ. ಈ ಬಗ್ಗೆ 'ಪಂಚಮ'ದ ವಿಶೇಷಾಂಕದಲ್ಲಿ ಚರ್ಚೆಯಾಗಿದ್ದು ನಮ್ಮ ನೆನಪಿನಿಂದ ಸರಿಯುತ್ತಲೇ ಇಲ್ಲ. ಪ್ರೊಫೆಸರ್ ಕ್ಯಾನ್ಸರಿಗೆ ತುತ್ತಾಗಿ ಸಾವನ್ನು ಎದುರು ನೋಡುತ್ತಿದ್ದಾಗ ಎಂದಿನ ಸಹಜ ಪ್ರೀತಿ ಮತ್ತು ಗೌರವದೊಂದಿಗೆ ಅವರನ್ನು ಭೇಟಿಯಾದದ್ದನ್ನು ನಾನು ಬಲ್ಲೆ. ನಂಜುಂಡಸ್ವಾಮಿಯವರ ಅಂತಹ ಪರಿಸ್ಥಿತಿ ಕಂಡು ದುಃಖಿಸಿದ್ದನ್ನು ಬಲ್ಲೆ. ಸಿಟ್ಟು ಅಥವಾ ದ್ವೇಷ ಶಾಮಣ್ಣನ ರಕ್ತದಲ್ಲೇ ಇಲ್ಲ! ಶಾಮಣ್ಣ ಮತ್ತು ರೈತಸಂಘದ ಕುರಿತು ಬರೆಯಲು ಕೂಟ್ಟರೆ, ದೊಡ್ಡ ಪುಸ್ತಕವೊಂದನ್ನೆ ನಾನು ಬರೆಯಬಹುದೇನೋ!

ಶಾಮಣ್ಣ ನಮ್ಮ ನಡುವಿನ ಒಂದು ಶಕ್ತಿ ಹಾಗೂ ಸ್ಫೂರ್ತಿಯ ಸೆಲೆ. ಅವರೊಂದಿಗೆ ಒಡನಾಡುವ ಅವಕಾಶ ನನಗೆ ಒದಗಿ ಬಂದಿರುವುದು ನನ್ನ ಬದುಕಿನ ಅತ್ಯಂತ ಅವಿಸ್ಮರಣೀಯ ಘಳಿಗೆಗಳು ಅಂತ ತಿಳಿದಿದ್ದೇನೆ. ಸಾತ್ವಿಕತೆ ನಮ್ಮ ಸಾರ್ವತ್ರಿಕ ಬದುಕಿನಿಂದ ಮರೆಯಾಗಿರುವ ಹಾಗೂ ಸಿನಿಕತನ ತುಂಬಿರುವ ಈ ಹೊತ್ತಿನಲ್ಲಿ ಶಾಮಣ್ಣ ಒಂದು ಮಾದರಿ ಹಾಗೂ ಭರವಸೆಯಾಗಿ ನಮ್ಮೊಂದಿಗಿದ್ದಾರೆ.

ಕಡಿದಾಳು ಶಾಮಣ್ಣನೆಂಬ ಹೋರಾಟದ ಸಂತ

ಕಲ್ಕುಳಿ ವಿಠಲ್ ಹೆಗ್ಡೆ

ಶಾಮಣ್ಣನ ಅಜ್ಜಿಮನೆ, ನನ್ನ ಅತ್ತೆ ಮನೆ ಎರಡೂ ಒಂದೇ ಆದ್ರು ಶಾಮಣ್ಣ 'ತುಂಗಾ ಮೂಲ ಉಳಿಸಿ' ಹೋರಾಟಕ್ಕಿಂತ ಮುಂಚೆ ನನಗೆ ಹೆಚ್ಚು ಹತ್ತಿರದ ಪರಿಚಯವಿರಲಿಲ್ಲ. 'ಕರ್ನಾಟಕ ವಿಮೋಚನಾ ರಂಗ'ದ ನೇತೃತ್ವದಲ್ಲಿ ನಾವು 'ತುಂಗಾ ಮೂಲ' ಹೋರಾಟದ ಸೈಕಲ್ ಜಾಥಾ ಉದ್ಘಾಟನೆಗೆ ಶಾಮಣ್ಣ ಶೃಂಗೇರಿಗೆ ಬಂದಿದ್ದರು. ಶಾಮಣ್ಣ ಅಲ್ಲಿಂದ ನನಗೆ ಹೆಚ್ಚು ನಿಕಟ ರಾದರು. ಶಾಮಣ್ಣ ಹೆಚ್ಚು ಮಾತನಾಡುವವರಲ್ಲ. ಅವರಿಗೆ ಸಿಟ್ಟು ಬರುವುದೇ ಕಡಿಮೆ. ಸಿಟ್ಟು ಬಂದರೆ ಮಾತ್ರ ಶಾಮಣ್ಣ ಒಳ್ಳೆ ಭಾಷಣ ಮಾಡ್ತರೆ. ಇಲ್ಲಾ ಅಂದ್ರೆ ಅವರನ್ನು ಅಧ್ಯಕ್ಷತೆಗೆ ಕೂರಿಸೂದೂ ಕಷ್ಟ. ಅವರನ್ನು ಯಾವುದೇ ಸಭೆಗೆ ಅತಿಥಿಯಾಗಿ, ಅಧ್ಯಕ್ಷನಾಗಿ ಏನಾದರೂ ಕೂರಿಸಿದರೂ ಅವರು ಕುರ್ಚಿ ಮೇಲೆ ಕೂರುವ ಜನವೇ ಅಲ್ಲ. ಕಾರ್ಯಕ್ರಮ ನಡೀತಿದ್ರೆ ಅವ್ರು ಅದರ ಸುತ್ತಾ ಮುತ್ತಾ ಓಡಾಡಿಕೊಂಡು ಪೋಟೋ ತೆಗೆಯೋದು ಅವರ ಹವ್ಯಾಸ.

ನನ್ನ ಶಾಮಣ್ಣನ ಹೋರಾಟದ ಒಡನಾಟ ೩೦ವರ್ಷಗಳದ್ದು. ಅದನ್ನಿಲ್ಲಿ ನೆನಪು ಮಾಡಿಕೊಂಡು ಬರೆಯೋದೇ ಸದ್ಯಕ್ಕೆ ಸಾಧ್ಯ ಇಲ್ಲ. ಶಾಮಣ್ಣ ನನ್ನ ತರಾನೆ ಅಡಿಕೆ ಕೃಷಿಕರು. ಅವರ ಮನೆಯಲ್ಲಿ ಅವರಿಬ್ಬರೆ ಆದ್ರು ಯಾವ ಕಾರ್ಯಕ್ರಮಕ್ಕೆ ಹೇಳಿದರು ತಪ್ಪದೆ ಬರುತ್ತಿದ್ದರು. ರೈತಾಪಿ ಮಾಡಿಕೊಂಡು ಎಲ್ಲಾ ಹೋರಾಟಗಳಲ್ಲಿ ಭಾಗವಹಿಸೋದು ತುಂಬಾ ಕಷ್ಟದ ಕೆಲಸ. ಅದರಲ್ಲೂ ಶಾಮಣ್ಣನಿಗೆ ಹೋರಾಟ ಮಾತ್ರ ಅಲ್ಲ, ಸಂಗೀತದ ಖಯಾಲಿ ಕೂಡ. ಸಂಗೀತ, ನಾಟಕ ಮುಂತಾದ ಏನೇ ಸಾಂಸ್ಕೃತಿಕ ಕಾರ್ಯಕ್ರಮವಿರಲಿ, ಶಾಮಣ್ಣ ಒಬ್ಬರೆ ಅಲ್ಲ, ಅವರ ಪತ್ನಿ ಶ್ರೀದೇವಕ್ಕನೂ ಭಾಗವಹಿಸುವ ಅಭ್ಯಾಸವಿಟ್ಟುಕೊಂಡವರು. ನನಗೆ ಅವರನ್ನು ನೋಡಿ ಆಶ್ಚರ್ಯ. ಅದ್ರೆ ಶಾಮಣ್ಣ ಕೃಷಿನೂ ಮಾಡಿಕೊಂಡು ಹೋರಾಟದಲ್ಲು ಸಕ್ರಿಯವಾಗಿ ಪಾಲ್ಗೊಂಡರು.

ಶಾಮಣ್ಣ ನಾನು 'ತುಂಗಾ ಮೂಲ'ದ ಹೋರಾಟದಲ್ಲಿ ಎಲ್ಲಿ ಎಲ್ಲಿಗೊ ಸುತ್ತಿದ್ದಿವಿ. ನಮ್ಮ ಕುದುರೆಮುಖ ರಾಷ್ಟ್ರೀಯ ಉದ್ಯಾನದ ಹೋರಾಟಕ್ಕೂ ನಮ್ಮ ಜೊತೆಜೊತೆಗೆ ಹೆಜ್ಜೆ ಹಾಕಿದವ್ರು ಶಾಮಣ್ಣ. ಶಾಮಣ್ಣ ಎಂತವ್ರು ಅನ್ನೋಕೆ ಒಂದು ಘಟನೆ ಹೇಳ್ತೀನಿ. ಅದು ಅವರ ಮಾನವೀಯ ಸಂಬಂಧವನ್ನು ಜನಪರ ಕಾಳಜಿಯನ್ನು ನಿರೂಪಿಸುತ್ತದೆ ಅಂದುಕೊಂಡಿದ್ದೇನೆ. ಶಿವಮೊಗ್ಗದಲ್ಲಿ ಯಾವುದೋ ಒಂದು ಕಾರ್ಯಕ್ರಮ. ಶಾಮಣ್ಣನೂ ಬಂದಿದ್ರು. 'ಶಾಮಣ್ಣ ಒಂದು ಕಾಫಿ ಕುಡಿಬೇಕಲ್ಲ' ಅಂದೆ. ಅದ್ಕೆ, 'ತಡಿರಿ ನನ್ನ ಮಗಳ ಹೋಟ್ಲಿದೆ ಹೋಗಾನ' ಅಂದ್ರು. ಸರಿ ನಂಜಪ್ಪ ಆಸ್ಪತ್ರೆ ಪಕ್ಕದ ರಸ್ತೆಯಲ್ಲಿ ನಡೆದುಕೊಂಡು ಹೊರಟೆವು. ನನಗೆ ತಿಳಿದಂತೆ ಶಾಮಣ್ಣನಿಗೆ ಎರಡೇ ಹೆಣ್ಣು ಮಕ್ಕಳು. ಅವ್ರು ಡಾಕ್ಟರ್, ಎಂಜಿನಿಯರ್ ಓದ್ತಿದ್ವು. ಇನ್ನೊಂದು ಯಾವ ಮಗಳು ಅಂತ ಸ್ವಲ್ಪ ಹೊತ್ತು ಯೋಚನೆ ಮಾಡುದ್ರೊಳಗೆ ಹೋಟೆಲ್ ಬಂತು. ಅದು ಪೆಟ್ಟಿಗೆ ಅಂಗಡಿ. ಶಾಮಣ್ಣ ಬೈಟು ಕಾಫಿ ಕುಡಿಯೋ ಜಾಯಮಾನದವರಲ್ಲ. ಅವರಿಗೆ ಸಣ್ಣ ಲೋಟದಲ್ಲಿ ಕಾಫಿ ಕುಡಿದ್ರೆ ಕುಡಿದಂಗೆ ಆಗಲ್ಲ. 'ಅದೆಂಥದು! ಗಂಟಲು ನೆನೆಯಲಿಲ್ಲ!!' ಅಂತಾರೆ. ಅದಕ್ಕೆ ಅವರು ಎಲ್ಲೇ ಹೋದ್ರು ಡಬಲ್ ಕಾಫಿ. ನೀರು ಕುಡಿಯೊ ಲೋಟದಲ್ಲಿ ಕಾಫಿ ಕುಡಿಯೋದು. ಅವರ ಮಗಳ ಹೋಟೆಲಿಗೆ ಹೋಗುತ್ತಿದ್ದಂಗೆ ಆ ಮಗಳು ಹೊರಗೆ ಬಂದು "ಬಾ, ಬಯ್ಯ" ಅಂತ ಅಪ್ಪಿಕೊಂಡಳು. ಅದೇನು! ಹತ್ತು ಹನ್ನೆರಡು ವರುಷದ ಹುಡುಗಿ. ನನಗೆ ಏನೊಂದೂ ಅರ್ಥ ಆಗಲಿಲ್ಲ. 'ಇವರ‍್ಯಾರು ಗೊತ್ತಾ, ನೀನು ಇಂತಹವರ ಪರ ಹೋರಾಟ ಮಾಡು' ಅಂತ ನನ್ನ ಪರಿಚಯ ಮಾಡಿದರು. ಆ ಮಗಳಿಗೆ, 'ಕಾಫಿ ಕೊಡು. ಅದ್ರೆ ದುಡ್ಡು ತಗೊಬೇಕು' ಅಂದ್ರು. ರಸ್ತೆ ಬದಿಯಲ್ಲೆ ಹಾಕಿದ ಹಲಗೆ ಬೆಂಚಿನ ಮೇಲೆ ಕುಳಿತು ಕಾಫಿ ಕುಡಿದು, ನಾನು ಸಿಗರೇಟು ತಗೊಂಡು ಒತ್ತಾಯ ಮಾಡಿ ದುಡ್ಡು ಕೊಟ್ಟೆ. ಶಾಮಣ್ಣ ಹೊರಡತಿವಿ ಅಂತ ಹೇಳಿದಾಗ ಆ ಮಗುವಿನ

ಕಣ್ಣಂಚಲ್ಲಿ ನೀರು ಉಕ್ಕಿತು. ಅಲ್ಲಿಂದ ಹೊರಟು ಹಾಗೆ ನಡೆದುಕೊಂಡು ಬರುವಾಗ ಕುತೂಹಲ ತಡೆಯದೆ ಶಾಮಣ್ಣನ ಹತ್ತಿರ "ಯಾರ್ರೀ ಆ ಹುಡುಗಿ" ಅಂತ ಕೇಳಿದೆ. ಮತ್ತದೆ "ನನ್ನ ಮಗಳು ಗೊತ್ತಾಗಿಲ್ಲೇನು" ಅಂದ್ರು. ತಮಾಷೆ ಕೇಳಿ ಹೇಳ್ತೀನಿ ಅಂತ ಕಥೆ ಹೇಳಕ್ಕೆ ಶುರು ಮಾಡಿದ್ರು ಶಾಮಣ್ಣ.

ಶಾಮಣ್ಣನ್ನ ನೋಡಿದವರಿಗೆಲ್ಲ ಕಾಣೂಹಂಗೆ ಸಾಬ್ರ ತರ ಗೋರಿಲಿ ಇರೊ ಸೂಫಿ ಸಂತ. ಅವರ ಮನಸು ಹಾಗೆ. ಶಾಮಣ್ಣ ಒಂದಿನ ಅದೇ ದಾರೀಲಿ ಒಂದು ಸಾರಿ ನಡಕೊಂಡು ಬರುತ್ತಿದ್ದರಂತೆ. ಒಂದು ಹುಡುಗಿ ಓಡಿ ಬಂದು ಅವರನ್ನ 'ಭಯ್ಯಾ' ಅಂತ ಅಪ್ಪಿಕೊಂಡಿತಂತೆ. ಬೇರೆ ಯಾರಾದ್ರು ಆಗಿದ್ರೆ ಆ ಕೊಳಕು ಹುಡುಗಿನ ದೂಡಿ ಬೆರಸ್ತಿದ್ದರೋ ಏನೋ. ಶಾಮಣ್ಣ ಆ ಮಗುವನ್ನು ಯಾರಮ್ಮ ನೀನು, ಯಾಕ ಅಳ್ತಿಯ, ಏನು ಅಂತ ವಿಚಾರಿಸಿದರಂತೆ. ಆ ಹುಡುಗಿ ಅವಳ ಭಾಷೆಯಲ್ಲಿ ಅಪ್ಪ ಅಪ್ಪ ಅನ್ನೊದು ಬಿಟ್ರೆ ಬೇರೆ ಮಾತಿಲ್ಲ. ಶಾಮಣ್ಣಂಗೆ ಅರ್ಜೆಂಟ್ ಕೆಲಸ ಇತ್ತಂತೆ. ಆದ್ರು ಹುಡುಗಿ ಅಳುತ್ತಿದ್ದಾಳೆ ಅಂತ ಪಕ್ಕಕ್ಕೆ ಎತ್ಕೊಂಡು ಹೋಗಿ ಯಾರು ನೀನು ಏನ್ ಸಮಾಚಾರ ಅಂತ ವಿಚಾರಿಸಿದ್ರಂತೆ. ಆವಾಗ ಹುಡುಗಿಗೆ ಎಚ್ಚರ ಆಗಿ ಇದು ನನ್ನ ಅಪ್ಪ ಅಲ್ಲ ಅಂತ ಗೊತ್ತಾಯಿತಂತೆ. ವಿಷಯ ಏನು ಅಂದ್ರೆ ಆ ಹುಡುಗಿ ಅಪ್ಪ ತೀರಿಹೋಗಿ ೧೦–೨೦ ದಿನ ಆಗಿತ್ತು. ಆ ಹುಡುಗಿ ಅಪ್ಪನಂಗೆ ಯತ್ಲಾಗಿಂದ ನೋಡಿದ್ರು ಒಂಚೂರು ಫರಕಿಲ್ಲಾ. ಆ ಹುಡುಗಿ ಶಾಮಣ್ಣನ್ನ ದೂರದಿಂದಲೆ ನೋಡಿತ್ತಂತೆ. ಅದಕ್ಕೆ ಹೆಂಗೆ ನೋಡಿದ್ರು ತನ್ನ ಅಪ್ಪನೆ ಬರುತ್ತಿದ್ದಾರೆ ಅನ್ನಿಸಿತ್ತಂತೆ. ಶಾಮಣ್ಣ ಮಾತಾಡಿಸಿದ ಮೇಲೆ ಅವಳಿಗೆ ಗೊತ್ತಾಗಿದ್ದು. ಇವರು ಶಾಮಣ್ಣ ಅಂತ. ಆನಂತರ ಆ ಹುಡುಗಿಗೆ ಶಾಮಣ್ಣ ಸಮಾಧಾನ ಹೇಳಿ ನೀನು ನನ್ನನ್ನು ಅಪ್ಪ ಅಂತ್ಲೆ ಕರಿ. ನಾನು ಈ ಕಡೆ ಬಂದಾಗೆಲ್ಲ ಬರ್ತಿನಿ. ಸಮಾಧಾನ ಮಾಡ್ಕೊ ಅಂತ ಹೇಳಿ ಬಂದರಂತೆ. ಅನಂತರ ಶಾಮಣ್ಣ ಶಿವಮೊಗ್ಗದ ಆ ರಸ್ತೇಲಿ ಆ ಹುಡುಗಿಯ ಪೆಟ್ಟಿಗೆ ಅಂಗಡಿಗೆ ಭೇಟಿ ಕೊಡುವ ಸಂಪ್ರದಾಯ ಮಾಡಿಕೊಂಡಿದ್ದಾರೆ.

ಶಾಮಣ್ಣ, ಇಂಥ ಅನೇಕ ಕಥೆಗಳನ್ನು ಹೇಳಿದ್ದಾರೆ. ಅದು ಅವರು ಪೂರ್ಣಚಂದ್ರ ತೇಜಸ್ವಿಯವರೊಂದಿಗೆ ನಡೆಸಿದ ಪ್ರಿಂಟಿಂಗ್ ಪ್ರೆಸ್‌ನಂತ ವಿಚಾರಗಳು, ಕಾಗೋಡು ತಿಮ್ಮಪ್ಪರ ಪ್ರತಿಷ್ಠೆಗೋಸ್ಕರ ನಡೆದ ಗೋಲಿಬಾರ್ ಸಂದರ್ಭ, ಅವಾಗ ಅವರ ಕಣ್ಣೆದುರಿಗೆ ಒಬ್ಬ ಅಮಾಯಕನ ಹತ್ಯೆ ನಡೆದದ್ದು, ಚಂದ್ರಗುತ್ತಿಯಲ್ಲಿ ಚಡ್ಡಿಗಳಿಂದ ಪೆಟ್ಟು ತಿನ್ನದೆ ಅಂಡಿಗೆ ಕಾಲುಕೊಟ್ಟಿದ್ದು, ರೈತ ಸಂಘದವರಿಗೆ ಹಸಿರು ಶಾಲನ್ನು ಹೋರಾಟದ ಸಂಕೇತವಾಗಿ ತೊಡಿಸಿದ್ದು, ಅವರನ್ನು ನೋಡಿ ಉಳಿದವರು ಕುತ್ತಿಗೆಗೆ ತಂತಮ್ಮ ಹೋರಾಟಗಳಿಗೆ ತಕ್ಕಂತೆ ಅವರವರಿಗೆ ಬೇಕಾದ ಬಣ್ಣದ ಶಾಲು ಸುತ್ತುವುದು ಇತ್ಯಾದಿ. ಹಸಿರು ಬಟ್ಟೆ ಹೆಗಲ ಮೇಲೆ ಹಾಕುವುದು ರೈತ ಸಂಘದ ಸಂಕೇತವಾಗಿ ರೂಢಿ ಮಾಡಿದವರು ಶಾಮಣ್ಣ. ಅಂಥ ಶಾಮಣ್ಣನನ್ನೇ ರೈತ ಸಂಘದವರು

ಒಳಜಗಳಗಳಿಂದ ಕಿತ್ತು ಹಾಕಿದ್ದರು. ಆದರೂ ಶಾಮಣ್ಣ ಆಕ್ರೋಶಗೊಳ್ಳಲಿಲ್ಲ. ಶಾಮಣ್ಣ ಯಾವುದೇ ಹೋರಾಟದಲ್ಲೂ, ಅವರದೇ ರೈತ ಹೋರಾಟದಲ್ಲೂ ಯಾವುದೇ ನ್ಯೂನತೆ ಇರಲಿ, ಅವರಿಗೆ ವೈಯಕ್ತಿಕವಾಗಿ ಬೇಕಾದರೆ ನೋವು ಮಾಡಿರಲಿ, ಎಲ್ಲವನ್ನು ಶಾಂತವಾಗಿ ನುಂಗಿ ನಿರುಂಬಳವಾಗಿ ಇರುತ್ತಾರೆ. ಅವರಲ್ಲಿ ನಾನು ಕಂಡ ಒಂದು ವಿಶೇಷವೆಂದರೆ, ತನಗಿಂತ ತನ್ನ ಹೋರಾಟ ದೊಡ್ಡದು, ಆ ಚಳುವಳಿಗೆ ಧಕ್ಕೆ ಬರುತ್ತದೆ ಅಂದರೆ ನಾನಲ್ಲಿ ಗೌಣ ಎಂಬ ಅವರ ಮನೋಭಾವ.

ಜೀವನವನ್ನೆ ಹೋರಾಟಕ್ಕೆ ಮುಡುಪಾಗಿಟ್ಟಿದ್ದ ಖ್ಯಾತ ಹೋರಾಟಗಾರ್ತಿ ಪೊನ್ನಮ್ಮಾಳರ ಶ್ರದ್ಧಾಂಜಲಿ ಕಾರ್ಯಕ್ರಮದಲ್ಲಿ ನನ್ನ ಭಾವನೆಗೆ ಬಂದ ಒಂದು ಮಾತನ್ನು ಹೇಳಿದ್ದೆ. ಆ ಸಭೆಯಲ್ಲಿ ಕಾಗೋಡು ಚಳುವಳಿಯ ರೂವಾರಿ ಗಣಪತಿಯಪ್ಪ, ಕಡಿದಾಳು ಶಾಮಣ್ಣ ಎಲ್ಲರೂ ಇದ್ದರು. ಅವರ ಎದುರಿನಲ್ಲೆ ಒಂದು ಮಾತಾಡಿದ್ದೆ, "ಪೊನ್ನಮ್ಮಾಳ್ ಅವರಿಗೆ ಶ್ರದ್ಧಾಂಜಲಿ ಸಲ್ಲಿಸುತ್ತಿದ್ದೇವೆ. ಮಲೆನಾಡಿನ ಹೋರಾಟದ ನಕ್ಷತ್ರಗಳಲ್ಲಿ ಒಂದನ್ನು ಕಳೆದುಕೊಂಡಿದ್ದೇವೆ. ಉಳಿದವರು ಗಣಪತಿಯಪ್ಪ, ಕಡಿದಾಳು ಶಾಮಣ್ಣ. ಇಂಥ ಹೋರಾಟದ ನಕ್ಷತ್ರಗಳನ್ನು ಕಾಪಾಡಿ ಉಳಿಸಿಕೊಳ್ಳುವುದು ನಮ್ಮ ಕೆಲಸವಾಗಬೇಕು" ಅಂತ. ಯಾಕಂದರೆ ಶಾಮಣ್ಣ ಹೋರಾಟದ ಸಂತ. ತಣ್ಣನೆಯ ಮನುಷ್ಯ. ಶಾಮಣ್ಣ ಮನಸ್ಸು ಬದಲಾಯಿಸಿದ್ದರೆ ತೀರ್ಥಹಳ್ಳಿ ಕ್ಷೇತ್ರದ ಶಾಸಕರಾಗಬಹುದಿತ್ತು. ತನ್ನ ಆಪ್ತ ಜೆ.ಎಚ್. ಪಟೇಲರು ಮುಖ್ಯಮಂತ್ರಿಯಾದಾಗ ಶಾಮಣ್ಣ ಏನೂ ಆಗಬಹುದಿತ್ತು. ಪಟೇಲರೆ ಶಾಮಣ್ಣನನ್ನು ಕೇಳಿದರೆ, "ಬಡವರ ಮನೆಗಳಿಗೆ ಕಕ್ಕಸು ಮನೆ ಕೊಡಿ. ಗತಿ ಇಲ್ಲದಿದ್ದರೆ ಸರ್ಕಾರದಿಂದ ಸಾಲ ಕೊಡಿ. ಕಕ್ಕಸು ಗೊಬ್ಬರದಲ್ಲಿ ಸಾಲ ಮುರ್ರೊಳಿ" ಅಂತ ಅತ್ಯಂತ ವೈಜ್ಞಾನಿಕ ಪರಿಸರ ಸ್ನೇಹಿ ಯೋಜನೆ ಕೊಟ್ಟಿದ್ದರಂತೆ.

ಶಾಮಣ್ಣನ ಸಂಪರ್ಕ ಈ ನಾಡಿನ ಗಣ್ಯಾತಿಗಣ್ಯರಾದ ಕುವೆಂಪು, ಕಡಿದಾಳ್ ಮಂಜಪ್ಪ, ಪಟೇಲ್, ಅನಂತಮೂರ್ತಿ ಮೇಷ್ಟ್ರು, ತೇಜಸ್ವಿ, ಅಂತಾರಾಷ್ಟ್ರೀಯ ಸಂಗೀತ ವಿದ್ವಾಂಸ ರಾಜೀವ್ ತಾರಾನಾಥ ಅವರುಗಳೊಂದಿಗಿತ್ತು. ಅವರ ಒಡಲಾಳದಲ್ಲಿ ಎಂಥೆಂಥ ಕತೆಗಳಿವೆ, ಅನುಭವಗಳಿವೆ. ಆದರೆ ಅವರು ಎಷ್ಟು ಸರಳರು ಎಂದರೆ, ಖಾದಿ ಬಟ್ಟೆ ಬಿಟ್ಟರೆ ಬೇರೆ ಬಟ್ಟೆ ತೊಟ್ಟಿದ್ದು ಕಂಡಿಲ್ಲ. ಪ್ರತಿಷ್ಠೆಯೇ ಇಲ್ಲದ ಮನುಷ್ಯರೆಂದರೆ ಶಾಮಣ್ಣ. ನಾನು ಶಾಮಣ್ಣನನ್ನು ಬಿಟ್ಟರೆ ಇನ್ನೊಬ್ಬ ಅಂತವರನ್ನು ನೋಡಿಲ್ಲ.

ಎಲ್ಲ ದೊಡ್ಡ ಮನುಷ್ಯರು ತಾವು ಮಹಾ ಅಂತ ಪ್ರತಿಷ್ಠೆಯ ಕಿರೀಟ ಇಟ್ಟುಕೊಂಡಿರುತ್ತಾರೆ. ಕಿರೀಟವಿಲ್ಲದ ಮನುಷ್ಯರನ್ನು ನಾನು ಕಂಡಿದ್ದರೆ ಅದು ಶಾಮಣ್ಣ ಮಾತ್ರ. ಸಮಾಜವಾದಿಗಳೆಂದರೆ ಅವರ ತಲೆ ತುಂಬಾ ವಿಚಾರ. ತಲೆ ಮೇಲೆ ಕಿರೀಟ, ಆಚಾರದಲ್ಲಿ ಸಮ ಮಜವಾದಿಗಳೇ ಹೆಚ್ಚು. ನಾವು ಕಾಣುವ

ಪ್ರಖ್ಯಾತ ಹೋರಾಟಗಾರರು, ಸಾಹಿತಿಗಳು ಎಲ್ಲರೂ ಶಾಮಣ್ಣನ ಒಡನಾಡಿಗಳೆ. ನಂಜುಂಡಸ್ವಾಮಿ, ಲಂಕೇಶ, ಅನಂತಮೂರ್ತಿ, ಜೆ.ಹೆಚ್ ಪಟೇಲರು, ಕುವೆಂಪು, ತೇಜಸ್ವಿ ಆದಿಯಾಗಿ ಗೋಪಾಲಗೌಡರು ಸೇರಿ. ಆದರೆ ಆ ಒಬ್ಬೊಬ್ಬರ ಸಿಟ್ಟು, ಪ್ರತಿಷ್ಠೆ ಅವರ ಆಪ್ತರೆಲ್ಲರಿಗೂ ಗೊತ್ತು. ಆದರೆ ಶಾಮಣ್ಣ ಎಲ್ಲಾ ವಿಚಾರ, ಸಿದ್ಧಾಂತ ಎಲ್ಲವು ತಲೆಗೆ ತುಂಬಿಕೊಡಿದ್ದರು. ಅದಕ್ಕೆ ಹಸಿರು ಟವೆಲನ್ನು ಕಟ್ಟಿ ಕಿರೀಟವಿಲ್ಲದೆ ಓಡಾಡುವ ಮನುಷ್ಯ. ರೈತರ ಬೆಳೆಗೆ ಲಾಭದಾಯಕ ಬೆಲೆ ಸಿಕ್ಕಿ, ರೈತರಿಗೂ ರೈತಾಪಿಗೂ ಮರ್ಯಾದೆ ಸಿಕ್ಕಬೇಕು ಎನ್ನುವುದಷ್ಟೇ ಅವರ ಕಳಕಳಿ. ಶಾಮಣ್ಣನ ಇನ್ನೊಂದು ವಿಶೇಷವೆಂದರೆ, ಹೋರಾಟಕ್ಕೆ ಜನ ಬರದೆ ಎಷ್ಟೇ ಕನಿಷ್ಟವಾಗಲಿ, ಅವರು ಧೃತಿಗೆಡುತ್ತಿರಲಿಲ್ಲ. ಯಾವಾಗಲೂ ಹೋರಾಟದಲ್ಲಿ ನಂಬಿಕೆ ಇಟ್ಟು ಹೋರಾಟದಿಂದಲೇ ಏನನ್ನಾದರು ಸಾಧಿಸಬಹುದು ಎಂಬ ಭರವಸೆ ಇಟ್ಟುಕೊಂಡವರು. ಎಲ್ಲ ಜನಪರ ಹೋರಾಟಕ್ಕೂ ಅವರೊಂದು ಸ್ಫೂರ್ತಿ.

ಶಿವಮೊಗ್ಗದಲ್ಲಿ 'ತುಂಗಾಭದ್ರ ಉಳಿಸಿ ಹೋರಾಟ ಒಕ್ಕೂಟ'ದ ಯಾವುದೊ ಒಂದು ಬಹಳ ಮುಖ್ಯವಾದ ಹೋರಾಟ. ಅದಕ್ಕೆ ಸಂಬಂಧಪಟ್ಟ ಸಮಾವೇಶ. ಕಾರ್ಯಕ್ರಮಕ್ಕೆ ಬಂದವರಿಗೆ ಮದ್ಯಾಹ್ನದ ಊಟ ವ್ಯವಸ್ಥೆ ಆಗಬೇಕು. ನಮ್ಮ ಹೋರಾಟ, ಒಕ್ಕೂಟ ಎಲ್ಲಾ ಯಾವಾಗಲು ಪಾಪರ್ ಕಂಪೆನಿ ಗೊತ್ತಲ್ಲಾ. ಆದರೆ ಒಕ್ಕೂಟದ ಸರ್ವಸದಸ್ಯರ ಸಭೆಯಲ್ಲಿ ತೀರ್ಮಾನಿಸಿದಂತೆ ನಡೆಯಲೇಬೇಕು. ನಡೆಸಿಕೊಂಡು ಬಂದಿದೇವೆ. ನಮ್ಮ ಹೋರಾಟದ ಯಾವ ಕಾರ್ಯಕ್ರಮವು ಬಡವಾಗಲಿಲ್ಲ. ಯಾರ ಎಂತೋದೊ ಅಂತು ಯಶಸ್ವಿಯಾದ್ದೆ ಹೆಚ್ಚು. ಆದರೆ ಯಾವುದೇ ಕಾರ್ಯಕ್ರಮ ವ್ಯವಹಾರಿಕವಾಗಿ ತಲೆ ಬಿಸಿ ಇಲ್ಲದೆ ಮುಗಿದಿದ್ದಿಲ್ಲ. ಹೋರಾಟಗಳೆಂದ ಮೇಲೆ ಹಾಗೆ. ಆ ಒಂದು ಕಾರ್ಯಕ್ರಮ ನಾವಂದುಕೊಂಡಂತೆ ಅದರ ವ್ಯವಸ್ಥೆ ನಡೆಯಲಿಲ್ಲ. ಎಲ್ಲರು ಕೈಚೆಲ್ಲಿ ಕೂತರು. ಶಾಮಣ್ಣ ನಮ್ಮ ಕಷ್ಟ ನೋಡಿ ಚಿಂತೆ ಮಾಡಬೇಡಿ ಅಂತ ಹೊಳೆ ಬಸ್ಟಾಪ್‌ನಲ್ಲಿರುವ ಶಾಮಣ್ಣನ ಆತ್ಮೀಯರಾದ ಶ್ರೀರಾಮ ಹೋಟೇಲಿನ ಮಾಲಿಕರ ಬಳಿ ಹೋದರು. ಅವರಿಗೆ ನಾವು ಚಳುವಳಿಗೆ ಬಂದವರಿಗೆ ಮಧ್ಯಾಹ್ನದ ಊಟ ಕೊಡಬೇಕು ಅಂತ ಕೇಳಿಕೊಂಡರು. ಆ ಹೋಟೆಲಿನ ಯಜಮಾನರು ಶಾಮಣ್ಣ ಹೇಳಿದ್ದಕ್ಕೆ ದುಸರಾ ಮಾತಾಡದೆ ತಮ್ಮ ಕರ್ತವ್ಯ ಎನ್ನುವಂತೆ, ಅಚ್ಚುಕಟ್ಟಾಗಿ ಎಲ್ಲರ ಮಧ್ಯಾಹ್ನದ ಹಸಿವನ್ನು ನೀಗಿಸಿದ್ದರು. ಅಷ್ಟೆ ಹೇಳಿದರೆ ಸಾಕಾಗುವುದಿಲ್ಲವೇನೋ. ಆ ರಾಮಣ್ಣ ನಮ್ಮ ಶಾಮಣ್ಣನ ಋಣ ತೀರಿಸಿದ ಕೃತಜ್ಞತೆಯಿಂದ ಅಂದಿನ ಊಟ ಬಡಿಸಿದ ಕಾರ್ಯವನ್ನು ಸೇವೆಯಂತೆ ನಿರ್ವಹಿಸಿದ್ದರು.

ಶಾಮಣ್ಣ ನನ್ನ ದೂರದ ಸಂಬಂಧಿ. ಆದರೆ ಅವರಿಗೂ ನನಗೂ ಹೋರಾಟದ ನಂಟೆ ಜಾಸ್ತಿ. ೨೦೦೩ರಲ್ಲಿ ಕುದುರೆಮುಖ ಕಂಪೆನಿಯ ಗಣಿಗಾರಿಕೆಯ ವಿರುದ್ಧ

ಕುದುರೆಮುಖದಲ್ಲಿ ನಮ್ಮ ಹತ್ತು ಹನ್ನೆರಡು ವರುಷಗಳ ಅವಿರತ ಹೋರಾಟದಿಂದ ಮತ್ತು ಕುದುರೆಮುಖದಲ್ಲಿ ಇನ್ನು ಗಣಿಗಾರಿಕೆ ಮುಂದುವರೆದರೆ ತುಂಗಾಭದ್ರಾ ತೀರದ ಜನ ಕಂಪನಿ ಮೇಲೆ ದಾಳಿ ಮಾಡಿ ಬಲಾತ್ಕಾರವಾಗಿ ಮುಚ್ಚಿಸುತ್ತೇವೆ ಅಂತ ಹತ್ತು ಸಾವಿರ ಜನ ಸೇರಿದ ದಾವಣಗೆರೆ ಸಮಾವೇಶದಲ್ಲಿ ನಿರ್ಣಯ ಪಾಸು ಮಾಡಿದೆವು. ಅನಂತರ ಕರ್ನಾಟಕ ಸರ್ಕಾರ ಸರ್ವೋಚ್ಚ ನ್ಯಾಯಾಲಯಕ್ಕೆ, ಬದಲಾದ ರಾಜಕೀಯ ಸನ್ನಿವೇಶಗಳಿಂದ ಕೆಐಓಸಿಲ್ ಕುದುರೆಮುಖ ಗಣಿಗಾರಿಕೆ ಮುಂದುವರೆಸಲು ಸಾಧ್ಯವಿಲ್ಲ ಅಂತ ತಿಳಿಸಿತು. ಸರಕಾರದ ಆ ನಿರ್ಣಯ ಸರ್ವೋಚ್ಚ ನ್ಯಾಯಾಲಯ ಗಂಭೀರವಾಗಿ ಪರಿಗಣಿಸಿ ಗಣಿಗಾರಿಕೆಯನ್ನು ಶಾಶ್ವತವಾಗಿ ನಿಲ್ಲಿಸಿತು.

ಕುದುರೆಮುಖ ಗಣಿಗಾರಿಕೆ ನಿಂತ ಮೇಲೆ ಅಲ್ಲಿನ ಹಂಗಾಮಿ ನೌಕರರು ನಾನೂರು ಜನ, ಅವರ ಕುಟುಂಬದವರು ಬೀದಿಗೆ ಬಿದ್ದಿದ್ದಾರೆ ಅಂತ, ಆ ಕಾರ್ಮಿಕರನ್ನು ನಮ್ಮ ವಿರುದ್ಧ ಎತ್ತಿ ಕಟ್ಟಿದ್ದರು. ನಾವು ಹಿಂದಿನಿಂದ ಗಣಿಗಾರಿಕೆ ನಿಲ್ಲಿಸಿ ಕಾರ್ಮಿಕರಿಗೆ ಪರ್ಯಾಯ ವ್ಯವಸ್ಥೆ ಮಾಡಿ ಅನ್ನೊ ಬೇಡಿಕೆ ಇಟ್ಟುಕೊಂಡು ಬಂದವರು. ಶಾಮಣ್ಣನ ಹತ್ತಿರ ಚರ್ಚೆ ಮಾಡಿದೆ. ಭದ್ರಾ ತುಂಗಾಭದ್ರಾ ನೀರಾವರಿ ಪ್ರದೇಶದಲ್ಲಿ ಒಂದಷ್ಟು ಭತ್ತ, ಅಕ್ಕಿ ಸಂಗ್ರಹಣೆ ಮಾಡಿದ್ರೆ ಹ್ಯಾಗೆ ಅಂದೆ. ಶಾಮಣ್ಣ ತಡ ಮಾಡಲಿಲ್ಲ 'ನಡೀರಿ ಹೋಗೋಣ' ಅಂದ್ರು. ನಾನು ಮಂಜುಳನನ್ನು ಕರೆದುಕೊಂಡು ಶಾಮಣ್ಣನ ಮನೆಗೆ ಹೋದೆ. ಶಾಮಣ್ಣ ಅಲ್ಲಿಂದ ಅವರ ಕಾರಿನಲ್ಲಿ ನಮ್ಮೊಂದಿಗೆ ಹೊರಟರು. ದಾವಣಗೆರೆಯ ರೈತ ಮುಖಂಡ ತೇಜಸ್ವಿ ಪಟೇಲ್‌ರನ್ನು ಜೊತೆಗೆ ಕರೆದುಕೊಂಡೆ. ಅದು ಬೇಸಿಗೆ ಬೆಳೆಯ ಸುಗ್ಗಿಕಾಲ. ಎಲ್ಲಿ ನೋಡಿದರೂ ಭತ್ತದ ಗದ್ದೆಗಳು ಹಣ್ಣಾಗಿ ಬಗ್ಗುತ್ತಾ ನಿಂತಿದ್ದವು. ಮೊದಲು ಬಿತ್ತಿದವರು ದೇವಸ್ಥಾನದ ಅಂಗಳ, ರಸ್ತೆ ಎಲ್ಲೆಂದರಲ್ಲಿ ಭತ್ತ ಹರಡಿದ್ದರು. ಊರುಗಳಲ್ಲಿ ಪ್ರಚಾರವಾಯಿತು. ಎಲ್ಲರು ಭತ್ತ ಕೊಡುವ ಭರವಸೆ ಕೊಟ್ಟರು. ನಂತರ ಲಾರಿ ಕಳುಹಿಸಿದರೆ ಸುಮಾರು ಲೋಡ್ ಭತ್ತದ ಭರವಸೆ ಸಿಕ್ಕಿತು. ಬಯಲು ಸೀಮೆಯಲ್ಲಿ ನಮ್ಮ ಯಾತ್ರೆ ಶಾಮಣ್ಣನೊಂದಿಗೆ ಸಾಗಿತ್ತು. ಹತ್ತು ಲೋಡ್ ಭತ್ತ ಸಿಕ್ಕಿತ್ತು. ಶಾಮಣ್ಣನ ಜೊತೆ ನಾಲ್ಕರು ದಿನ ಊರೂರು ಸುತ್ತಿದೆವು.

ಶಾಮಣ್ಣನ ಜೊತೆ ಇರುವುದೇ ಒಂಥರಾ ಮಜ, ಅವರ ಹತ್ತಿರ ಗತಕಾಲದ ಅದೆಷ್ಟೊ ರೋಚಕ ಕತೆಗಳಿರುತ್ತವೆ. ಸಂದರ್ಭಕ್ಕೆ ಸರಿಯಾಗಿ ಹೊರಬರುತ್ತವೆ. ಅವುಗಳನ್ನು ಶಾಮಣ್ಣ ಸ್ವಾರಸ್ಯವಾಗಿ ಹೇಳುತ್ತಿದ್ದರೆ, ಹೊತ್ತು ಹೋಗುವುದೇ ಗೊತ್ತಾಗುವುದಿಲ್ಲ.

ಕವಿ ಮನಸ್ಸಿನ ವೈವಿಧ್ಯತೆಯ ಹೋರಾಟಗಾರ

ನೆಂಪೆ ದೇವರಾಜ್

ನಮ್ಮ ಊರಿನಲ್ಲಿ ಗಡ್ಡ, ಬಿಳಿ ಜುಬ್ಬ, ಪಾಯಜಾಮ ಹಾಕುತ್ತಿದ್ದವರು ಇವರೊಬ್ಬರೆ. ಇವರು ಜುಬ್ಬ ಪಾಯಿ ಜಾಮ ಹಾಕಲಾರಂಭಿಸಿದ್ದು ಯಾವಾಗ ಎಂಬುದು ಇನ್ನೂ ತಿಳಿಯದ ವಿಷಯ. ನಾನು ಎರಡನೆಯ ತರಗತಿಯಿಂದಲೂ ನೋಡುತ್ತಿದ್ದೇನೆ. ಇವರ ಬಿಳಿ ಯಾದ ಗಡ್ಡ, ಬಿಳಿ ಪಾಯಜಾಮಗಳು ಈ ನಲವತ್ತೆಂಟು ವರ್ಷಗಳಿಂದ ಹೇಗಿದ್ದವೋ ಅದರಲ್ಲಿ ಒಂಚೂರೂ ಬದಲಾವಣೆಗಳನ್ನು ಕಾಣಲು ಸಾಧ್ಯವಿಲ್ಲ. ಇವರ ಓಡಾಟಕ್ಕೆ ಆಗಿನಿಂದಲೆ ವಿಶೇಷತೆ ಇತ್ತು. ಕಡಿದಾಳು ರಾಮಪ್ಪಗೌಡರ ಮಗ ಎಂಬ ಭಯವೂ ಇತ್ತು. ಇವರೂ ಹಾಗೂ ಇವರ ಗೆಳೆಯರನೇಕರು(ಇವರ ತರವೇ ಗಡ್ಡ ಬಿಟ್ಟ ವ್ಯಕ್ತಿಗಳು) ಹೇಳಿ ಕೇಳಿ ಕಾಂಗ್ರೆಸ್ಸಿನ ಭದ್ರಕೋಟೆ ಯಂತಿದ್ದ ನಮ್ಮ ಊರಿನಲ್ಲಿ ಸೋಷಲಿಸ್ಟ್ ಪಕ್ಷದಿಂದ ಕೋಣಂದೂರು ಲಿಂಗಪ್ಪನವರು ಚುನಾವಣೆಗೆ ನಿಂತ ಸಂದರ್ಭದಲ್ಲಿ ಅವರ ಗೆಲುವಿಗಾಗಿ ಮಳೆ ಚಳಿ ಬಿಸಿಲು ಬೆಂಕಿ ಎನ್ನದೆ ಹೋರಾಟ ನಡೆಸಿದ್ದನ್ನು ನನ್ನ ಏಳನೇ ವಯಸ್ಸಿನ ಬಾಲ್ಯ ಗ್ರಹಿಸಿತ್ತು. ನಮ್ಮ ಊರಿನ ಪಕ್ಕದ ಹರಳೀಮಠ ಎಂಬ ಊರಿಗೆ ಇವರು ಹಾಗೂ ಇವರ

ಗೆಳೆಯರು ಕೋಣಂದೂರು ಲಿಂಗಪ್ಪನವರ ಪರ ಪ್ರಚಾರಕ್ಕೆ ಹೋಗಿದ್ದ ಸಂದರ್ಭದಲ್ಲಿ ಇವರಿಗೆ ಪ್ರಚಾರ ಮಾಡದಂತೆ ತಡೆದರಂತೆ ಎಂಬ ಸುದ್ದಿಯೂ ಸಹಾ ಕೇಳಿ ಬರುತ್ತಿತ್ತು. ಏಕೆಂದರೆ ಹರಳೀಮಠದಲ್ಲಿ ಅಪ್ಪಣ್ಣ ಹೆಗಡೆ ಎಂಬ ಕಮ್ಯೂನಿಸ್ಟ್ ಪಕ್ಷದ ಅಭ್ಯರ್ಥಿ ಪ್ರಬಲರಾಗಿದ್ದರು. ಇವರೂ ಕೂಡಾ ಪ್ರಖ್ಯಾತ ವಕೀಲರಾಗಿ ಪ್ರಖರ ವಾಗ್ಮಿಗಳಾಗಿ ಪ್ರಸಿದ್ದರಾಗಿದ್ದಂತವರು.

ಆಗಿನ್ನೂ ಮನೆ ಕಟ್ಟದೆ ಕೇವಲ ನೆಲಗಟ್ಟನ್ನು ಮಾತ್ರ ಮಾಡಿದ್ದ ನಮ್ಮ ಜಾಗದಲ್ಲಿ ಕೋಣಂದೂರು ಲಿಂಗಪ್ಪನವರ ಚುನಾವಣೆಗೆ ಸಂಬಂಧಿಸಿದಂತೆ ಅಡಿಕೆ ತಟ್ಟಿಗಳನ್ನು ಕಟ್ಟಿ, ಚಪ್ಪರ ಹಾಕಲು ಕಡಿದಾಳು ಶಾಮಣ್ಣವರೇ ಕಾರಣಕರ್ತರಾಗಿದ್ದರು. ಈ ಚುನಾವಣೆಯ ನಂತರ ಶಾಮಣ್ಣನವರು ಊರಿನ ಕಡೆ ಬರುವುದು ಸ್ವಲ್ಪ ಕಡಿಮೆ ಯಾಯಿತು. ಆದರೆ ಮತ್ತೆ ಅವರ ಅವಿರತ ಆಗಮನ ಶುರುವಾದದ್ದು ರೈತ ಚಳುವಳಿ ಪ್ರವರ್ಧಮಾನಕ್ಕೆ ತರುವ ಕೆಲಸದಲ್ಲಿ ತೊಡಗಿಸಿಕೊಂಡಾಗ. ಇಡೀ ತಾಲೂಕಿನಾದ್ಯಂತ ಇವರು ನಡೆಸಿದ ಬಗೆ ಬಗೆಯ ಹೋರಾಟಗಳು ಕಡಿದಾಳು ಶಾಮಣ್ಣವರೇ ಮುಂದಿನ ವಿಧಾನಸಭಾ ಕ್ಷೇತ್ರದ ಅಭ್ಯರ್ಥಿ ಎಂಬಷ್ಟರ ಮಟ್ಟಿಗೆ ಇವರನ್ನು ಎಳೆದುಕೊಂಡು ಹೋಯಿತು.

೧೯೭೩ರ ಚುನಾವಣೆಯ ನಂತರ ಭದ್ರಾವತಿ ತಾಲೂಕಿನ ಹೊಳೆಹೊನ್ನೂರು ಸಮೀಪದ ಭಗವತಿಕೆರೆಯ ಜಮೀನಿನ ಜೊತೆ ಇವರ ಸಂಬಂಧ ಗಟ್ಟಿಯಾಗುತ್ತಾ ಹೋಯಿತು. ಈ ನಡುವೆ ಡಾ. ಕೊವೂರ್‌ರವರನ್ನು ನಮ್ಮ ಊರಿಗೆ ತಂದವರು ಕಡಿದಾಳು ಶಾಮಣ್ಣವರೇ ಎಂದು ಹೇಳಬೇಕಾದ್ದು ಬಹು ಮುಖ್ಯ ಸಂಗತಿ. ನಾನಾಗ ಆರನೇ ತರಗತಿಯಲ್ಲಿದ್ದ ಕಾಲ. ಆಗ ಡಾ. ಕೋವೂರ್‌ರವರಿಗೆ ಪವಾಡ ಬಯಲು ಮಾಡಲು ತೀರ್ಥಹಳ್ಳಿಯಲ್ಲಿ ಕಾರ್ಯಕ್ರಮವೊಂದನ್ನು ಏರ್ಪಡಿಸಿದ ನಂತರ ಅವರು ಕಡಿದಾಳಿನ ಇವರ ಮನೆಯಲ್ಲೇ ಉಳಿದದ್ದು, ಈ ಸಂಬಂಧ ಕರಪತ್ರವೊಂದು ನನ್ನ ಕೈಸೇರಿದ್ದು, ಅದರಲ್ಲಿ ಹತ್ತೋ ಹದಿನೈದೋ ವಿಧದ ಈ ಪವಾಡಗಳಲ್ಲಿ ಯಾರಾದರೂ ಯಾವುದಾದರೂ ಒಂದನ್ನು ಮಾಡಿ ತೋರಿಸಿದರೆ, ಅವರಿಗೆ ಒಂದು ಲಕ್ಷ ರೂಪಾಯಿ ಕೊಡುವ (ಮುಖ್ಯವಾಗಿ ಸಾಯಿ ಬಾಬಾಗೆ) ಸವಾಲುಗಳ ಕರ ಪತ್ರ ಕೈಗೆ ಸಿಕ್ಕ ಮೇಲೆ ನನ್ನ ಬಾಲ್ಯ ಸತ್ಯ ಅಸತ್ಯಗಳ ಹುಡುಕಾಟದಲ್ಲಿ ತೊಡಗಲು ಪ್ರೇರಣೆಯಾಯಿತು.

ಶಾಮಣ್ಣವರು ಭಗವಗತಿಕೆರೆಯಲ್ಲಿದ್ದರೂ ಊರ ಸಂಬಂಧ ಸಂಪರ್ಕಗಳಿಗೆ ಯಾವತ್ತೂ ಕುಂದು ತಂದುಕೊಂಡವರಲ್ಲ. ಪಶ್ಚಿಮ ಘಟ್ಟದ ಸೆರಗಿನ ಜನರ ಶೈಲಿಯೋ, ಉದಾರತನವೋ, ಹೊಸತಕ್ಕೆ ತೆರೆದುಕೊಳ್ಳುವ ಮನೋಭಾವವೋ ಏನೋ ಪದೇ ಪದೇ ತಮ್ಮ ಊರಿನ ಜೊತೆ ಕಡಿದುಕೊಳ್ಳಲಾರದ ಭಾವನಾತ್ಮಕ ಸಂಬಂಧಗಳ ಬಗ್ಗೆ ಅತ್ಯಂತ ಭಾವುಕರಾಗಿ ಈಗಲೂ ಹೇಳುವುದನ್ನು ಕೇಳಬಹುದು.

ಶಾಮಣ್ಣನವರನ್ನು ದೂರದಿಂದ ನೋಡಿದರೆ ಸಂತತನ ಮತ್ತು ಕವಿತ್ವದಲ್ಲಿ ಬದುಕು ಕಟ್ಟುವವರೆಂದರೂ ಹತ್ತಿರದಿಂದ ನೋಡಿದಾಗ ಅಥವಾ ಸೂಕ್ಷ್ಮವಾಗಿ ಅವಲೋಕಿಸಿದಾಗ ಅವರ ಕ್ರಾಂತಿಕಾರಿ ಮನೋಭಾವ ಮನದಟ್ಟಾಗುತ್ತದೆ. ತೀರ್ಥಹಳ್ಳಿಗೆ ೧೯೮೩ರಲ್ಲಿ ಮಹಾ ನೆರೆ ಬಂದು ಪುಷ್ಯ ಮಳೆ ಒಂದೇ ದಿನದಲ್ಲಿ ಇಡೀ ತೀರ್ಥಹಳ್ಳಿಯನ್ನು ಬಡಿದೆಬ್ಬಿಸಿತ್ತು. ತೂದೂರು, ಮಂಡಗದ್ದೆಗಳು ಮುಳುಗಿ ಹೋಗಿದ್ದವು. ರಾತ್ರಿ ಬೆಳಗಾಗುವುದರೊಳಗಾಗಿ ಕೆರೆ ಕಟ್ಟೆ, ಗದ್ದೆ ಬಯಲುಗಳು ಕೆನ್ನೀರಲ್ಲಿ ಮುಳುಗಿ ಹೋಗಿದ್ದರೆ ಇದೊಂದು ಮಾಮೂಲಿ ವಿಷಯವೆಂದು ಸುಮ್ಮನಿರಬಹುದಿತ್ತು. ಏಕೆಂದರೆ ಪ್ರತಿ ವರ್ಷದ ಮಳೆಯೇ ಹಾಗೆ. ಆದರೆ ೧೯೮೩ರಲ್ಲಿ ಬಂದದ್ದು ಭಯಾನಕ ಮಳೆ.. ತುಂಗೆಯ ತಟದ ತೀರ್ಥಹಳ್ಳಿಯ ಕುರುವಳ್ಳಿ, ತೂದೂರು ಮಂಡಗದ್ದೆಗಳು ಮುಳುಗಿಯೇ ಹೋದವು.. ರಸ್ತೆಗಳೇ ಕಾಣದಂತಹ ಪರಿಸ್ಥಿತಿಯಲ್ಲಿ ಮನೆ ಮಠಗಳಿಗೆ ನುಗ್ಗಿದ ತುಂಗೆಯ ನೀರು ಮೊಟ್ಟ ಮೊದಲ ಬಾರಿಗೆ ತನ್ನ ರೌದ್ರಾವತಾರ ತೋರಿಸಿತ್ತು. 'ಗಂಜಿ ಕೇಂದ್ರಗಳ ತೆರೆಯುವಿಕೆ' ಎಂಬ ಹೊಸ ಪದ ತೀರ್ಥಹಳ್ಳಿ ಸುತ್ತ ಮುತ್ತ ಚಾಲ್ತಿಗೆ ಬಂತು. ಗದ್ದೆಯಲ್ಲಿ ಬಿದ್ದ ಒಡುವಟ್ಟೆಗಳು ತೊಳೆದು ಹೋದ ಮಣ್ಣು, ರಾಶಿ ರಾಶಿಯಾಗಿ ಬೆಟ್ಟದೋಪಾದಿಯಲ್ಲಿ ನಾಟಿ ಮಾಡಿದ ಗದ್ದೆಯಲ್ಲಿ ಕುಳಿತಿತ್ತು. ಕಾಗೆ ಬಂಗಾರದೋಪಾದಿಯಲ್ಲಿ ಹೊಳೆವ ಮರಳು ರೈತ ಸಂಕುಲವನ್ನು ಸುಯುಲು ಮರಗುವ ಶವಾಗಾರಗಳಂತೆ ಮಾರ್ಪಡಿಸಿತ್ತು. ಪರಿಹಾರ ಘೋಷಣೆ ಮಾಡಿದ್ದ ಸರ್ಕಾರಕ್ಕೆ ಮಲೆನಾಡ ಕೃಷಿ ಬದುಕಿನ ಬಗ್ಗೆ ಎಬಿಸಿಡಿಯೂ ಗೊತ್ತಿರಲಿಲ್ಲ. ಮಳೆಯ ಹೊಡೆತಕ್ಕೆ ದಾರಿ ಬಂದ್ ಆಗಿ ಮಾಮೂಲಿ ಹಳ್ಳಗಳು ತಮ್ಮ ದಂಡೆಯನ್ನೆ ತುಂಡರಿಸಿಕೊಂಡು ಹೊಸದಾದ ದಾರಿಯನ್ನು ನಾಟಿ ಮಾಡಿದ್ದ ಗದ್ದೆಗಳಲ್ಲಿ ಪಡೆದು ಕೊಂಡವು. ಸಾವಿರಾರು ರೂಪಾಯಿಗಳ ನಷ್ಟಕ್ಕೆ ರೈತ ಗುರಿಯಾದಾಗ ತಾಲೂಕು ಆಡಳಿತ ಅದಕ್ಕೆ ಪರಿಹಾರ ರೂಪದಲ್ಲಿ ಎರಡು ಮೂಟೆ ರಸಾಯನಿಕ ಗೊಬ್ಬರ ಕೊಟ್ಟು ಕೈ ತೊಳೆದುಕೊಳ್ಳಲು ನೋಡಿತು. ಹಳ್ಳದ ದಂಡೆ ಕಟ್ಟಲು ಕೂಲಿಕಾರರು ಬೇಕು. ಗೊಬ್ಬರದ ಮೂಟೆಯಿಂದ ದಂಡೆ ಕಟ್ಟಲು ಸಾಧ್ಯವೆ ಎಂಬುದು ರೈತರ ಪ್ರಶ್ನೆಯಾಯಿತು. ಇಂತಹ ಸಂದರ್ಭದಲ್ಲಿ ಕಡಿದಾಳು ಶಾಮಣ್ಣ ರೈತರಿಗೆ ನ್ಯಾಯ ಒದಗಿಸುವ ನಿಟ್ಟಿನಲ್ಲಿ ಆಮರಣಾಂತ ಉಪವಾಸ ಸತ್ಯಾಗ್ರಹವನ್ನು ತಾಲೂಕು ಕಚೇರಿ ಎದುರು ಹಮ್ಮಿಕೊಂಡರು. ಇಡೀ ತಾಲೂಕು ಆಡಳಿತ ಇವರ ಅಮರಣಾಂತ ಉಪವಾಸದಿಂದ ಕಂಗೆಟ್ಟಿತಾದರೂ ಏನು ಮಾಡಬೇಕೆಂಬುದು ತೋಚದೆ ಕೈ ಹೊಸಕಿಕೊಂಡು ಕೂತಿತು. ಶಾಮಣ್ಣನವರ ಉಪವಾಸ ದಿನೇ ದಿನೇ ಕಾವೇರತೊಡಗಿತು. ಇವರು ಉಪವಾಸ ಕೂತಿದ್ದಾರೆಂಬು ದನ್ನು ತಿಳಿದು ನಮ್ಮ ಊರಿನಿಂದ ನೂರಾರು ರೈತರು ರಾತ್ರೋ ರಾತ್ರಿ ಕಾಲ್ನಡಿಗೆಯಲ್ಲಿ

ತೀರ್ಥಹಳ್ಳಿಗೆ ಹೋಗಿ ಇವರಿಗೆ ಸಾಥ್ ನೀಡಿದೆವು. ಕೋಡ್ಲು ವೆಂಕಟೇಶ್, ದಿವಂಗತ ಟಿಸಿ ಜಗನ್ನಾಥ್, ಕಿಟ್ಟಪ್ಪ ಮಾಸ್ಟರ್ ಮುಂತಾದವರ ನೇತೃತ್ವ, ಶಾಮಣ್ಣನವರ ಉಪವಾಸದ ತೀವ್ರತೆ ಇಡೀ ರಾಜ್ಯಾದ್ಯಂತ ಪಸರಿಸುವಂತಾಗಲು ಸಹಾಯಕವಾಯಿತು. ಎರಡನೇ ಪಿಯುಸಿಯಲ್ಲಿ ಓದುತ್ತಿದ್ದ ನಾನು ಹಿರಿಯರ ಜೊತೆ ಕಾಲ್ನಡಿಗೆಯಲ್ಲಿ ಶಾಮಣ್ಣನವರನ್ನು ಸೇರಿಕೊಂಡಿದ್ದು, ತಾಲೂಕು ಕಚೇರಿ ಎದುರು ಮೂರು ದಿನ ಶಾಮಣ್ಣವರ ಜೊತೆ ಇದ್ದಾಗ ನಡೆಯುತ್ತಿದ್ದ ತಾತ್ವಿಕ ಚರ್ಚೆಗಳು, ಅಧಿಕಾರಸ್ಥರಿಗೆ ತರಾಟೆಗೆ ತೆಗೆದುಕೋಳ್ಳುವ ರೀತಿ ನಿಜಕ್ಕೂ ಪ್ರಜಾಪ್ರಭುತ್ವಕ್ಕೆ ಕರ್ನಾಟಕದ ಮಟ್ಟಿಗಾದರೂ ಹೊಸ ಚೈತನ್ಯ ತುಂಬುವ ದಿನಗಳು ಎಂದರೆ ಉತ್ಪ್ರೇಕ್ಷೆಯಾಗಲಾರದು. ತಾಲೂಕು ಕಚೇರಿ ಆವರಣದಲ್ಲಿ ಕುಚ್ಚಲು ಅಕ್ಕಿ ಗಂಜಿ ಮತ್ತು ಒಣಮೀನು ತಿನ್ನುತ್ತಾ ಇಡೀ ತೀರ್ಥಹಳ್ಳಿ ಪೇಟೆ ಗಬ್ಬೆದ್ದು ಹೋಗುವಂತೆ ಬೆಂಕಿಯ ಹೊಗೆ ಹಾಕಿದ್ದನ್ನು ನೆನಪಿಸಿಕೊಳ್ಳುವುದೇ ರೋಮಾಂಚಕಾರಿ ಸಂಗತಿ.

ಅಂದಿನ ಮುಖ್ಯಮಂತ್ರಿ ಗುಂಡೂರಾಯರಿಂದ ಉದ್ಘಾಟನೆಗೊಳ್ಳಬೇಕಿದ್ದ ತುಂಗಾ ನದಿಗೆ ಅಡ್ಡಲಾಗಿ ನಿರ್ಮಿಸಿದ್ದ ಮುಡುಬಾ ಸೇತುವೆಯನ್ನು ಮೇಸ್ತ್ರಿ ಮಲ್ಲಣ್ಣನ ಮೂಲಕ ಉದ್ಘಾಟನೆ ಮಾಡಿಸುವ ಕಾರ್ಯಕ್ರಮ, ಅಕ್ಟೋಬರ್ ಎರಡರಂದು ಬೆಂಗಳೂರಿನಲ್ಲಿ ನಡೆದ ರೈತ ಸಮಾವೇಶಕ್ಕೆ ಲಾರಿ ಹತ್ತಿ ಹೋಗಿದ್ದು, ಆ ನಂತರ ಶಾಮಣ್ಣನವರು ತಮ್ಮ ತೋಟದ ತೆಂಗಿನಕಾಯಿಗಳನ್ನು ಮಾರಾಟ ಮಾಡಿ ಲಾರಿ ಬಾಡಿಗೆಯನ್ನು ತೀರಿಸಿದ್ದು, ಈ ಎಲ್ಲದಕ್ಕೂ ನಾನು ಪ್ರತ್ಯಕ್ಷ ಸಾಕ್ಷಿ. ಹೋರಾಟಗಳಲ್ಲಿ ಶಾಮಣ್ಣನವರ ಹಿಂದೆ ಮುಂದೆ ಇದ್ದುದರ ಬಗ್ಗೆ ಹೇಳಿಕೊಳ್ಳಲು ಅದೇನೋ ಖುಷಿ. ಈ ಎಲ್ಲವುಗಳಿಗಿಂತ ರಾಮಕೃಷ್ಣ ಹೆಗಡೆ ನೇತೃತ್ವದ ಸರ್ಕಾರ ಜಾರಿಗೆ ತಂದಿದ್ದ (ಸಹಕಾರಿ ಕಾಯ್ದೆಯ ೧೦೧– ಸಿ) ಕಾನೂನು ರದ್ದತಿಗೆ ಶಿವಮೊಗ್ಗದಿಂದ ಬೆಂಗಳೂರಿಗೆ ಅಂತಿಮ ಬಿ.ಎ ಯಲ್ಲಿದ್ದಾಗ ಪಾದಯಾತ್ರೆ ಮಾಡುವಾಗ ಕಲಿತ ಪಾಠಗಳು ಗಟ್ಟಿಯಾಗಿ ಎದೆಯಲ್ಲಿ ಉಳಿದುಕೊಂಡಿರುವುದನ್ನು ಮರೆಯಲು ಸಾಧ್ಯವೆ? ಸುಂದರೇಶ್, ಶಾಮಣ್ಣ, ನಂಜುಂಡಸ್ವಾಮಿ ಇವರೆಲ್ಲರ ಹೋರಾಟದ ಗಟ್ಟಿತನವನ್ನು ತಮ್ಮ ಸರಳ ಕ್ರಿಯಾಶೀಲತೆಯ ಮೂಲಕ ಹೇಳಿ ಕೊಡದಿದ್ದರೆ ನಾವೆಲ್ಲ ಏನಾಗುತ್ತಿದ್ದೆವೋ ಏನೋ? ನಾಲ್ಕಾರು ಬಾರಿಯ ಜೈಲು ವಾಸ. ಅದೂ ಹಿಂಡೆಲಗಾದಂತಹ ದೊಡ್ಡ ಜೈಲಿನಲ್ಲಿ ಹದಿನೈದು ದಿನ. ಊಟಕ್ಕಾಗಿ ಲಕ್ಷಾಂತರ ರೈತರು ಪರದಾಡುವ ಚಳುವಳಿ, ಅಲ್ಲೇ ಉಪವಾಸ ಸತ್ಯಾಗ್ರಹ. ಅಲ್ಲೇ ಪಿಕೆಟಿಂಗ್. ನೂರಾರು ತರದ ಅನುಭವಗಳು. ಎಲ್ಲವೂ ಅಧ್ಯಯನ ಶಿಬಿರಗಳೇ.... ನನ್ನ ಹೋರಾಟ ಮತ್ತು ವಿದ್ಯಾರ್ಥಿ ಜೀವನ ಎರಡೂ ಒಂದೇ ಆಗಲು ಶಾಮಣ್ಣನವರಂತಹವರ ಸರಳ ಮತ್ತು ಆತ್ಮ ವಂಚನೆಯಿಲ್ಲದ ನಡವಳಿಕೆಗಳು ಕಾರಣ.

ಒಂದು ಕಡೆ ಶಾಮಣ್ಣನವರು ರೈತ ಹೋರಾಟಗಾರರಾಗಿ ಪ್ರಸಿದ್ಧರಾದರೆ, ಇನ್ನೊಂದೆಡೆ ಪೂರ್ವಾಗ್ರಹಗಳಿಲ್ಲದ ಇವರ ವೈಯಕ್ತಿಕ ಜೀವನ ಶೈಲಿ. ಇದು ನಮ್ಮಂತವರಿಗೆ ಬಹುದೊಡ್ಡ ಮಾದರಿ. ಶಾಮಣ್ಣ, ಸುಂದರೇಶ್ ಕಾರಣಕ್ಕಾಗಿ ಚಳುವಳಿ ನಮ್ಮ ಕಡೆ ತೀವ್ರತೆ ಪಡೆದುಕೊಂಡಿತ್ತು. ಬೆಂಗಳೂರಿನ ಬಹುದೊಡ್ಡ ರ್‍ಯಾಲಿಗೆ ಬಂದಾಗಲೂ ಶಾಮಣ್ಣನವರು ಒಬ್ಬ ಸಾಮಾನ್ಯನಂತೆ ಲಾರಿಯಲ್ಲಿ ನಿಂತುಕೊಂಡೇ ಮುನ್ನೂರು ಕಿಲೋಮೀಟರ್ ಬಂದಿದ್ದಾರೆ. ವೇದಿಕೆಯಲ್ಲಿ ಇತರ ನಾಯಕರು ಭಾಷಣ ಮಾಡುತ್ತಿದ್ದ ಹೊತ್ತಲ್ಲಿ ಒಂದಷ್ಟು ರೈತರನ್ನು ಸೇರಿಸಿಕೊಂಡು "ರೈತರೆಲ್ಲ ಸೇರಬೇಕು, ಹೋರಾಟ ಮಾಡಬೇಕು. ಒಂಟಿ ಬದುಕು ಸಾಕು. ಒಗ್ಗಟ್ಟು ಆಗಬೇಕು" ಎಂಬ ತಾವೇ ಕಟ್ಟಿದ ಹಾಡುಗಳನ್ನು ರೈತರಿಗೆ ಹೇಳಿಕೊಡುತ್ತಾ ಕೋಲಾಟ ಆಡಿಸುತ್ತಿದ್ದಂತವರು.

ನಮ್ಮ ಊರಿನಲ್ಲಿ ಬ್ರೆಕ್ಟನ ನಾಟಕಗಳನ್ನು ಪರಿಚಯಿಸಿದ್ದಾರೆ. ಅತುಲ್ ತಿವಾರಿಯಂತಹ ಮಹಾನ್ ನಿರ್ದೇಶಕನನ್ನು ಕರೆಸಿದ್ದಾರೆ. ಹೊಸ ಅಲೆ ನಾಟಕಗಳ ಬಗೆಗೆ ಅಭಿರುಚಿ ಬೆಳೆಸುವಲ್ಲಿ ಹಳ್ಳಿಗರೊಂದಿಗೆ ಏಗಿದ್ದಾರೆ. ನೂರಾರು ಮಂತ್ರ ಮಾಂಗಲ್ಯ ವಿವಾಹಗಳಿಗೆ ಪ್ರೇರಣೆಯಾಗಿದ್ದಾರೆ. ತಾವೇ ಖುದ್ದು ನಿಂತು ಮದುವೆ ಮಾಡಿಸಿದ್ದಾರೆ. ಸರಳ ಮದುವೆ ವಿಷಯದಲ್ಲಿ ಕಡಿದಾಳು ಶಾಮಣ್ಣ ದ್ವಂದ್ವ ನಿಲುವು ತಾಳಿದ್ದಾರೆ ಎಂದು ಕೋಡ್ಲು ವೆಂಕಟೇಶ್ ಕಪ್ಪು ಬಾವುಟ ಹಿಡಿದು ಕರ ಪತ್ರ ಹಂಚಿದರೂ ವೆಂಕಟೇಶ್‌ರೊಂದಿಗಿನ ಸ್ನೇಹಕ್ಕೆ ಧಕ್ಕೆ ತಂದುಕೊಳ್ಳದ ಇವರ ನಡೆ ಅದ್ಭುತವೇ ಸರಿ. ಯಾವುದೇ ಕಾರ್ಯಕ್ರಮಗಳಿಗೆ ಮುಖ್ಯ ಅತಿಥಿಯಾಗಿ ಆಗಮಿಸಿದರೆ ಪ್ರಯಾಣ ವೆಚ್ಚ ಕೊಡುವುದು ಮಾಮೂಲಿ. ಆದರೆ ಇಂದಿನವರೆಗೆ ಇವರು ಯಾವುದೇ ಕಾರ್ಯಕ್ರಮಗಳಿಗೆ ಹೋದರೂ ಟಿ.ಎ, ಡಿ.ಎ.ಯನ್ನು ತೆಗೆದು ಕೊಳ್ಳುವುದಿಲ್ಲ. ಇಂತಹ ವ್ಯಕ್ತಿ ಯಾರಾದರೂ ಇದ್ದರೆ ಅದು ಶಾಮಣ್ಣ ಮಾತ್ರ ಎಂದು ಸಾರಾ ಸಗಟಾಗಿ ಹೇಳಬಹುದು.

ನಾನಾಗ ತುಂಬಾ ಚಿಕ್ಕವನು. ಕಡಿದಾಳು ಮಂಜಪ್ಪನವರ ತಮ್ಮನವರ ಹೆಣ್ಣು ಮಕ್ಕಳಿಬ್ಬರ ವಿವಾಹ ಸರಳವಾಗಿಸುವುದರ ಮೂಲಕ ಮಂಜಪ್ಪನವರು ಇತರರಿಗೆ ಮಾದರಿಯಾಗಬೇಕೆಂಬ ಉದ್ದೇಶದಿಂದ ಶಾಮಣ್ಣ, ಸುಂದರೇಶ್, ರಾಮದಾಸ್, ನಂಬಳ ಪ್ರಭಾಕರ್, ದಯಾನಂದ್ ಮುಂತಾದವರು ಮದುವೆಯ ದಿನ ಕಪ್ಪು ಬಾವುಟ ಪ್ರದರ್ಶನ ಮಾಡಿದ್ದು ಸ್ವತಃ ಶಾಮಣ್ಣವರಿಗೆ ಊರು ಮನೆಯಲ್ಲಿ ಒಂಚೂರು ಇರುಸು ಮುರುಸು ಉಂಟು ಮಾಡಿದ್ದಂತೂ ಸುಳ್ಳಲ್ಲ.

ತಾತ್ವಿಕವಾದ ಬಲ ಶಾಮಣ್ಣನವರಿಗೆ ಸಿಕ್ಕಿತಾದರೂ ವಾಸ್ತವ ಬೇರೆಯದೇ ದಿಕ್ಕು ದೆಸೆ ಪಡೆಯುತ್ತಾ ಹೋದದ್ದು ವಿಷಾದನೀಯ ಸಂಗತಿ. ದೊಡ್ಡ ಮಹಲುಗಳಲ್ಲಿ,

ಅರಮನೆ ಮೈದಾನದಲ್ಲಿ, ಪಂಚತಾರಾ ಹೋಟೆಲುಗಳಲ್ಲಿ ಆಡಂಬರದ ವಿವಾಹಗಳು ಎಗ್ಗಿಲ್ಲದೆ ನಡೆಯುತ್ತಿದ್ದರೂ, ಶಾಮಣ್ಣ ಹಾಗೂ ಅವರ ಗೆಳೆಯರು ಮಾತಾಡದೆ ಸುಮ್ಮನಿದ್ದಾರೆ. ಸಾಮಾನ್ಯ ಹಳ್ಳಿಯಲ್ಲಿ, ಅದೂ ವಧುವಿನ ಪುಟ್ಟ ಕುಗ್ರಾಮದ ಸ್ವಗೃಹದಲ್ಲಿ ನಡೆದ ವಿವಾಹವನ್ನೇ ದೊಡ್ಡ ವಿಷಯವನ್ನಾಗಿ ಮಾಡಿರುವುದು ಸರಿಯಲ್ಲ. ಶಾಮಣ್ಣ ಮತ್ತು ಅವರ ಗೆಳೆಯರು ಕಡಿದಾಳು ಮಂಜಪ್ಪನವರ ಮನೆ ವಿವಾಹವನ್ನು ವಿರೋಧಿಸಿ ಕಪ್ಪು ಬಾವುಟ ಪ್ರದರ್ಶಿಸಿದರು. ಒಪ್ಪೋಣ. ಆದರೆ ಇದೇ ಶಾಮಣ್ಣನವರ ಕಡಿದಾಳು ಮನೆಗೆ ತೀರ್ಥಹಳ್ಳಿಯಲ್ಲೇ ಮೊಟ್ಟ ಮೊದಲ ಬಾರಿಗೆ ಅಂದಿನ ಬಾಲ ಗಂಗಾಧರನಾಥ ಸ್ವಾಮೀಜಿಯವರನ್ನು ಕರೆತರುತ್ತಾರೆ. ಅವರಿಗೆ ಪಾದ ಪೂಜೆ ಮಾಡಲಾಗುತ್ತದೆ. ಸ್ವಾಮೀಜಿಗಳ ಅಥವಾ ಮಠಾಧೀಶರ ಪರಿ ಕಲ್ಪನೆಯೇ ಇಲ್ಲದ ಮಲೆನಾಡಿಗೆ ಆದಿಚುಂಚನಗಿರಿ ಮಠಾದೀಶರನ್ನು ಕರೆ ತಂದಾಗ, ಅದೂ ತಮ್ಮ ಮನೆಗೇ ಕರೆದುಕೊಂಡು ಬಂದಾಗ ಇವರೆಲ್ಲ ಏನು ಮಾಡುತ್ತಿದ್ದರು? ಈ ವಿಷಯ ಹಾಗೆಯೇ ಮರೆಯಾಯಿತು. ಎಲ್ಲೂ ದಾಖಲಾಗಲೇ ಇಲ್ಲ. ಇದು ಸರಿಯೇ? ಎಂಬ ಪ್ರಶ್ನೆಗಳು ಪದೇ ಪದೇ ಬರುತ್ತಿವೆ.

ಆದರೆ ಕಡಿದಾಳು ಶಾಮಣ್ಣನವರು, ಆದಿ ಚುಂಚನಗಿರಿ ಮಠಾಧೀಶರು ಇವರ ಮನೆಗೆ ಬಂದ ಸಂದರ್ಭದಲ್ಲಿ ಊರಿನಲ್ಲೇ ಇರಲಿಲ್ಲ. ಬಹುದೂರದ ಭಗವತಿಕೆರೆಯಲ್ಲಿ ಜಮೀನು ಕೊಂಡು ತುಂಬ ವರ್ಷಗಳೇ ಆಗಿದ್ದವು. ಶಾಮಣ್ಣನವರ ಹಾಜರಿಯಲ್ಲಿ ಇಂತಹ ಘಟನೆ ನಡೆದಿದ್ದರೆ ಖಂಡಿತಾ ವಿರೋಧಿಸುತ್ತಿದ್ದರು ಎನ್ನುವವರೂ ಇದ್ದಾರೆ.

ಇಷ್ಟೆಲ್ಲ ವೈವಿಧ್ಯತೆಗಳ ಹೋರಾಟಗಾರ ಕಡಿದಾಳು ಶಾಮಣ್ಣವರ ಪತ್ನಿ ಶ್ರೀದೇವಕ್ಕನವರ ಬಗ್ಗೆ ಒಂಚೂರು ಹೇಳೋಣ ಎನಿಸುತ್ತಿದೆ. ಹತ್ತಾರು ರೈತ ಚಳುವಳಿಯ ಸಮಾವೇಶ, ಸೆಮಿನಾರು, ಅಧ್ಯಯನ ಶಿಬಿರಗಳಿಗೆ ಶ್ರೀದೇವಕ್ಕನವರೂ ಬರುತ್ತಿದ್ದರಿಂದ ಅದೆಷ್ಟೋ ಮಹಿಳೆಯರು ರೈತ ಚಳುವಳಿಯ ಭಾಗವಾಗುವಲ್ಲಿ ಪ್ರೇರಕ ಶಕ್ತಿಯಾದರು. 'ಸಮಾಜದ ಅರ್ಧದಷ್ಟಿರುವ ಮಹಿಳೆಯರು ಭಾಗವಹಿಸದಿದ್ದರೆ ಯಾವುದೇ ಹೋರಾಟ ಚಳುವಳಿಗಳು ಯಶಸ್ವಿಯಾಗುವುದಿಲ್ಲ. ಅದು ಪಾರ್ಶ್ವವಾಯು ಪೀಡಿತವಾಗುತ್ತದೆ' ಎಂಬ ಡಾ. ಲೋಹಿಯಾರವರ ಅಭಿಪ್ರಾಯಕ್ಕೆ ಕಳಶ ಪ್ರಾಯ ವಾದಂತೆ ಶ್ರೀದೇವಕ್ಕನವರ ಭಾಗವಹಿಸುವಿಕೆ ಪ್ರಶಂಸನೀಯ ಸಂಗತಿ. ಬೆಂಗಳೂರಿನಲ್ಲಿ ನಡೆದ ಎಷ್ಟೋ ರ್‍ಯಾಲಿಗಳಲ್ಲಿ ಚಳುವಳಿಗಾರ ಮಹಿಳೆಯರೊಂದಿಗೆ ಚಳಿ-ಬಿಸಿಲು ಎನ್ನದೆ ಭಾಗವಹಿಸಿದ ಕೀರ್ತಿ ಇವರದು.

ಕಳೆದ ಇಪ್ಪತ್ತು ವರ್ಷಗಳಲ್ಲಿ ತೀರ್ಥಹಳ್ಳಿಯಲ್ಲಿ ಹತ್ತಾರು ಚಳುವಳಿಗಳನ್ನು ರೂಪಿಸಿರುವವರಲ್ಲಿ ನಾನೂ ಒಬ್ಬ. ಶಾಮಣ್ಣ ಆಹ್ವಾನ ಪತ್ರಿಕೆ ಇಲ್ಲದಿದ್ದರೂ ಉದ್ದೇಶ

ಒಳ್ಳೆಯದಿದ್ದರೆ ಹಾಜರಾಗಿ ಸಂಗಾತಿಗಳಿಗೆ ಆಶ್ಚರ್ಯ ಉಂಟು ಮಾಡುತ್ತಾ ಹೋಗುವ ಇವರ ಕಳಕಳಿಗೆ ತಲೆದೂಗಲೇಬೇಕು. ರೈತ ವಿದ್ಯಾರ್ಥಿ ಒಕ್ಕೂಟದಂತಹ ಸಂಘಟನೆ ಕಟ್ಟುವಾಗ ಇವರ ಸಲಹೆಗಳು ಬರಿಯ ಮೌನದಲ್ಲೇ ಅರ್ಥಕೊಡುತ್ತಿದ್ದವು. ತಪ್ಪನ್ನು ತಪ್ಪು ಎಂದು ಹೇಳಿ ಖಂಡಿಸುವ ಸ್ವಭಾವದಿಂದ ಶಾಮಣ್ಣ ಸ್ವಲ್ಪ ದೂರ ಎಂಬುದು ಇವರ ಮೇಲ್ನೋಟದ ಸ್ವಭಾವದ ಅಳೆಯುವಿಕೆಯಿಂದ ಬಂದ ಅಭಿಪ್ರಾಯ ಇರಬಹುದು.

ಆದರೂ ಸುಂದರೇಶ್ ನಿಧನದ ನಂತರ ಕಡಿದಾಳು ಶಾಮಣ್ಣನವರು ಬೃಹತ್ ಪ್ರಮಾಣದ ಹೋರಾಟಗಳನ್ನು ಕೈಗೆತ್ತಿಕೊಳ್ಳಬಹುದಿತ್ತು. ಅಂತಹ ಹೋರಾಟಗಳನ್ನು ನಡೆಸುವ ತಾಕತ್ತು, ಪ್ರಭೆ ಶಾಮಣ್ಣನವರಿಗಿದ್ದರೂ ಕೈಚೆಲ್ಲಿ ಕೂತರು. ಇದರಿಂದ ಶಿವಮೊಗ್ಗ ಜಿಲ್ಲೆ ಕೋಮುಶಕ್ತಿಗಳ ಮತ್ತು ಭ್ರಷ್ಟಾಚಾರಿಗಳ ತವರೂರಾಗಲು ಕಾರಣವಾಯಿತು ಎಂದು ಹೇಳುವವರನ್ನು ಉಪೇಕ್ಷಿಸಲು ಸಾಧ್ಯವಿಲ್ಲ. ಇವರ ತಮ್ಮ ಕಡಿದಾಳು ದಯಾನಂದ್ (ರೈತ ಚಳುವಳಿ ಹಾಗೂ ವೈಚಾರಿಕ ನಡವಳಿಕೆಗಳು ತೀರ್ಥಹಳ್ಳಿಯಲ್ಲಿ ಮೇಲ್ಮಟ್ಟಕ್ಕೇರಲು ತಮ್ಮದೇ ಕೊಡುಗೆ ನೀಡಿದವರು) ಮತ್ತು ಇವರಿಗೆ ಹತ್ತಿರದವರೆನಿಸಿಕೊಂಡವರು ಆಗುಂಬೆಯಲ್ಲಿ 'ಮೇಘ' ಎಂಬ ಹೆಸರಲ್ಲಿ ರೆಸಾರ್ಟ್ ಒಂದನ್ನು ನಿರ್ಮಿಸಲು ಹೊರಟಾಗ, ಶಾಮಣ್ಣ ಬೀದಿಗೆ ಬಂದು ನಮ್ಮಂತವರ ಗೊಂದಲಗಳನ್ನು ಪರಿಹರಿಸಿದ್ದು ಮಾತ್ರವಲ್ಲ, ಅಲ್ಲಿ ರೆಸಾರ್ಟ್ ನಡೆಯದಂತೆ ನೋಡಿಕೊಳ್ಳುವಲ್ಲಿ ಯಾವುದೇ ಮುಲಾಜು ತೋರಿಸದವರು. ಇವರಿಲ್ಲದಿದ್ದರೆ ಮೇಘ ರೆಸಾರ್ಟ್ ಖಂಡಿತ ಆಗುಂಬೆಯಂತಹ ದಟ್ಟ ನಿತ್ಯ ಹರಿದ್ವರ್ಣ ಕಾಡಲ್ಲಿ ಆಧುನಿಕ ಭಂಗಿಗಳ ತಾಲೀಮಾಗಿ ಹೊರ ಹೊಮ್ಮುತ್ತಿತ್ತು ಎಂಬ ಪರಿಸರವಾದಿಗಳ ಮಾತು ಅಕ್ಷರಶಃ ನಿಜ ಎಂದೇ ಹೇಳಬೇಕು.

ಇತ್ತೀಚೆಗೆ ಶಾಮಣ್ಣನವರು ಊರಿನ ಕಡೆ ಸಂಪೂರ್ಣ ಬರುವುದನ್ನೇ ನಿಲ್ಲಿಸಿದ್ದಾರೆ. ವಯಸ್ಸು ಇರಬಹುದು. ಪ್ರತಿ ಹಬ್ಬಗಳಲ್ಲಿ ಶಾಮಣ್ಣ– ಶ್ರೀದೇವಕ್ಕರ ಬರುವಿಕೆ ಒಂದು ರೀತಿಯ ಸಂಚಲನಕ್ಕೆ ಕಾರಣವಾಗುತ್ತಿತ್ತು. ಆರೇಳು ತಿಂಗಳ ಹಿಂದೆ ನಮ್ಮ ಮನೆಗೆ ಬಂದು ನನ್ನ ಅಮ್ಮನವರೊಂದಿಗೆ ತೆಗೆಸಿಕೊಂಡ ಫೋಟೋ ಇನ್ನೂ ಮನಸ್ಸಿನಿಂದ ಮರೆಯಲಾಗದ ಘಟನೆ. ಹಳ್ಳಿಯ ಪ್ರತಿ ಚಲನವಲನ ಹಾಗೂ ಬದಲಾಗುತ್ತಿರುವ ಸಮಾಜವೊಂದರ ಸೂಕ್ಷ್ಮತೆಯನ್ನು ತಮ್ಮ ನವಿರಾದ ಹಾಸ್ಯದ ಮೂಲಕ ಮನ ಮುಟ್ಟಿಸುತ್ತಿದ್ದ ಇವರು ಮತ್ತೊಮ್ಮೆ ಶಿವಮೊಗ್ಗದಾದ್ಯಂತ ಸಿಡಿಯಲಿ. ಹೊಸ ಕಾಲದ ಹೊಸ ಹೊಸ ಹುಡುಗರನ್ನು ತಾಂತ್ರಿಕತೆಯ ಮೂಲಕ ಅರಿತುಕೊಂಡು ಹೋರಾಟಗಳನ್ನು ರೂಪಿಸಿದರೆ ಯಶಸ್ಸು ಖಂಡಿತ.

ಹಸಿರು ಶಾಲಿನ ಸಂತನ ಒಳ್ಳೆಯತನದ ಬಿಕ್ಕಟ್ಟುಗಳು

ಸರ್ಜಾಶಂಕರ ಹರಳೀಮಠ

ನನ್ನ ಹರಳಿಮಠಕ್ಕೂ ಶಾಮಣ್ಣನವರ ಕಡಿದಾಳಿಗೂ ಎರಡು ಮೈಲಿಗಿಂತ ಕಡಿಮೆ ಅಂತರ. ನಾನು ಮಾಧ್ಯಮಿಕ ಶಿಕ್ಷಣ ಪೂರೈಸಿದ ಹಾರೊಗೊಳಿಗೆ ಶಾಲೆಗೂ ಶಾಮಣ್ಣ ನವರ ಮನೆಗೂ ಮಧ್ಯೆ ಗದ್ದೆ ಬಯಲೊಂದೇ ಅಡ್ಡ. ನನ್ನಂತಹ ಇಸ್ಕೂಲು ಹುಡುಗರಿಗೆ ಶಾಮಣ್ಣನವರ ದರ್ಶನವಾಗುತ್ತಿದ್ದುದು ಗಣಪತಿ ಹಬ್ಬದ ರಾತ್ರಿಯ ನಾಟಕ ಪ್ರದರ್ಶನಗಳಲ್ಲಿ. ಅಪರೂಪಕ್ಕೆ ಶಾಮಣ್ಣನವರೇ ವ್ಯವಸ್ಥೆಗೊಳಿಸುತ್ತಿದ್ದ ರಾತ್ರಿಯ ಬಯಲು ನಾಟಕಗಳಲ್ಲಿ. ಈ ಎಲ್ಲಾ ಸಂದರ್ಭಗಳಲ್ಲಿ ಶಾಮಣ್ಣನವರು ತಮ್ಮ ಕುತ್ತಿಗೆಗೆ ನೇತು ಹಾಕಿಕೊಂಡಿದ್ದ ಕ್ಯಾಮೆರಾದಿಂದ ಫೋಟೋ ತೆಗೆಯುವುದರಲ್ಲಿ ತುಂಬಾ ಬ್ಯುಸಿಯಾಗಿರು ತ್ತಿದ್ದರು !

ನಾನು ಆರನೆಯ ತರಗತಿಯಲ್ಲಿದ್ದಾಗ ಆ ವರ್ಷದ ಗಣಪತಿ ಹಬ್ಬದ ಸಂದರ್ಭದಲ್ಲಿ 'ಹೆಂಗಸ್ಕತ್ರಿ' ಎಂಬ ನಾಟಕ ಮಾಡಿಸಿದರು. ಅದರಲ್ಲಿ ನನಗೆ 'ಆನಂದ' ಎಂಬ ನಾಯಕ ಪಾತ್ರ. ಶಾಮಣ್ಣನವರು ಈ ನಾಟಕದ ಅನೇಕ ದೃಶ್ಯಗಳ ಫೋಟೋ ತೆಗೆದಿದ್ದರು.

ಒಮ್ಮೆ ನಮ್ಮ ಹಳ್ಳಿಯ ಶ್ರೀ ಕಲಾನಾಥೇಶ್ವರ ಯುವಕ ಸಂಘದಿಂದ ತಾಲ್ಲೂಕು ಯುವಜನ ಮೇಳದ ಸ್ಪರ್ಧೆಯಲ್ಲಿ ಭಾಗವಹಿಸಲು 'ಲಚ್ಚಿ' ಎಂಬ ನಾಟಕ ಕಲಿತೆವು. ಅದರಲ್ಲಿ ನನ್ನದು ಲಚ್ಚಿಯ ಪಾತ್ರ. ಈ ಸ್ಪರ್ಧೆ ನಡೆಯುತ್ತಿದ್ದುದು ಹಾರೋಗೊಳಿಗೆಯ ರಂಗಮಂದಿರದಲ್ಲಿ. ನಮ್ಮ ಪ್ರದರ್ಶನ ಎಷ್ಟು ಹೊತ್ತಿಗೆ ಬರುತ್ತದೆ ಎಂದು ನಮಗೆ ಗೊತ್ತಿರಲಿಲ್ಲ. ನಾವು ರಾತ್ರಿ ಎಂಟು ಗಂಟೆಗೆ ಮೇಕಪ್ ಮಾಡಿಕೊಂಡು ಸಿದ್ಧರಾದೆವು. ರಾತ್ರಿ ೧೧ ಗಂಟೆಯಾದರೂ ನಮ್ಮ ನಾಟಕ ಪ್ರದರ್ಶನಕ್ಕೆ ಕರೆ ಬರಲಿಲ್ಲ. ನಾನು ಗ್ರೀನ್ ರೂಮಿನಲ್ಲಿದ್ದು ಬೋರ್ ಆಗಿ ಹೊರಗೆ ಬಂದು ಬಾಗಿಲಿಗೆ ಒರಗಿ ನಿಂತೆ. ನಿದ್ದೆಯ ಮಂಪರು ಬಂದು ತೂಕಡಿಸಲಾರಂಭಿಸಿದೆ. ಆ ವೇಳೆಗೆ ಅಲ್ಲಿಗೆ ಬಂದ ಶಾಮಣ್ಣನವರು ನನ್ನನ್ನು ಮಹಿಳೆಯೆಂದೇ ಭಾವಿಸಿ "ಹೋಗಮ್ಮ ಮನೆಗೆ ಹೋಗಿ ಮಲಗಿಕೋ" ಎಂದರು!

ತೀರ್ಥಹಳ್ಳಿಯಿಂದ ಶಾಮಣ್ಣನವರು ತಮ್ಮ ಊರು ಕಡಿದಾಳಿಗೆ ಹರಳಿಮಠ ದಾಟಿಯೇ ಹೋಗಬೇಕು. ಹರಳಿಮಠ ಮುಖ್ಯ ರಸ್ತೆಯ ಬದಿಯಲ್ಲಿ ವೆಂಕಟೇಶನ ಅಂಗಡಿ ಹತ್ತಿರ ಒಂದು ದೊಡ್ಡ ಧೂಪದ ಮರವಿದೆ. ಶಾಮಣ್ಣ ತಮ್ಮ ಊರಿಗೆ ಹೋಗುತ್ತಾ, ಬರುತ್ತಾ ಆಗಾಗ ಅಲ್ಲಿ ಕಾರು ನಿಲ್ಲಿಸಿ ಆ ಮರವನ್ನು ಸ್ವಲ್ಪ ಕಾಲ ತನ್ಮಯರಾಗಿ ನೋಡುತ್ತಾ, ಕೆಲವೊಮ್ಮೆ ಫೋಟೋ ತೆಗೆದುಕೊಂಡು ಹೋಗುವುದು ವಾಡಿಕೆ.

ನಾನು ಪದವಿ ಮುಗಿಯುತ್ತಿದ್ದಂತೆ ಉದ್ಯೋಗವರಸಿ ಬೆಂಗಳೂರಿಗೆ ತೆರಳಿದೆ. ನಾನು ಬೆಂಗಳೂರಿನಲ್ಲಿರುವ ಸಂದರ್ಭದಲ್ಲಿಯೇ ಶಾಮಣ್ಣನವರ ತಂದೆ ಕಡಿದಾಳು ರಾಮಯ್ಯ ಗೌಡರು ತೀರಿಕೊಂಡರು. ಅವರ ಹೆಸರಿನಲ್ಲಿ ಪುಸ್ತಕವೊಂದನ್ನು ತರಲು ಅವರ ಕುಟುಂಬ ವರ್ಗ ಹಾಗೂ ಸ್ನೇಹಿತ ಬಳಗ ನಿರ್ಧರಿಸಿತು.

ಶಾಮಣ್ಣ ಹಾಗೂ ಅವರ ತಂದೆ ರಾಮಯ್ಯ ಗೌಡರನ್ನು ಒಟ್ಟಿಗೆ ನಿಲ್ಲಿಸಿದರೆ ಅಪರಿಚಿತರು ತಂದೆ ಮಗನನ್ನು ಅದಲು ಬದಲಾಗಿ ತಿಳಿಯುವ ಸಾಧ್ಯತೆಯಿತ್ತು. ಜುಬ್ಬಾ-ಪೈಜಾಮ ಧರಿಸಿದ, ಅರಿಸ್ಟಾಟಲ್ ರೀತಿಯ ದಟ್ಟವಾದ ಗಡ್ಡದ ಹಿನ್ನೆಲೆಯಲ್ಲಿ ಸಂತನಂತೆ ಶಾಮಣ್ಣ ಕಾಣುತ್ತಿದ್ದರೆ ಪೂರ್ಣ ಶೇವ್ ಮಾಡಿದ, ಪ್ಯಾಂಟು ಶರಟು ಧರಿಸಿ ಟ್ರಿಮ್ ಆಗಿರುತ್ತಿದ್ದ ರಾಮಯ್ಯಗೌಡರು ಶಾಮಣ್ಣನವರಿಗಿಂತ ಎಳೆಯರಾಗಿ ಕಾಣುತ್ತಿದ್ದರು.

ಶಾಮಣ್ಣನವರ ತಂದೆ ಹಲವು ಅಭಿರುಚಿಯ ವ್ಯಕ್ತಿಯಾಗಿದ್ದರು. ಭೂಮಾಲೀಕ ರಾಗಿದ್ದ ಗೌಡರು ಹಳ್ಳಿಯಲ್ಲಿ ಗೌಡರ ಸಹಜ ಯಜಮಾನಿಕೆಯನ್ನು ನಿಭಾಯಿಸುತ್ತಲೇ ಹಲವು ಆಸಕ್ತಿಗಳನ್ನು ಬೆಳೆಸಿಕೊಂಡಿದ್ದರು. ಬೇಟೆ, ಒಕ್ಕಲಿಗ ಸಮಾಜದ ಚಟುವಟಿಕೆ, ನಾಟಕ, ಜಾನಪದ ಗೌಡರ ಆಸಕ್ತಿಗಳಾಗಿದ್ದವು. ಭೂಮಾಲೀಕರ ಪ್ರಧಾನ ಚಹರೆಗಳನ್ನು

ರಾಮಯ್ಯಗೌಡರು ಮೈಗೂಡಿಸಿಕೊಂಡಿದ್ದರೂ, 'ಸಾರಾಯಿ'ಯ ವಿಚಾರದಲ್ಲಿ ಮಾತ್ರ ಅವರ ನಿಲುವು ಭೂಮಾಲೀಕರ ವ್ಯಕ್ತಿತ್ವಕ್ಕೆ ವಿರುದ್ಧವಾಗಿತ್ತು. ರಾಮಯ್ಯ ಗೌಡರು 'ಸಾರಾಯಿ'ಯ ವಿರುದ್ಧ ಸದಾ ದನಿ ಎತ್ತುತ್ತಿದ್ದರು. ರಾಮಯ್ಯ ಗೌಡರು ಹಾಗೂ ಹಾರೋಗೊಳಿಗೆ ಬಸಪ್ಪಗೌಡರ ಕಾರಣದಿಂದಾಗಿ 'ಸಾರಾಯಿ' ಅಂಗಡಿ ಇಲ್ಲದಿರುವ ಮಲೆನಾಡಿನ ಅಪರೂಪದ ಹಳ್ಳಿಗಳಲ್ಲಿ ಕಡಿದಾಳು ಹಾಗೂ ಹಾರೋಗೊಳಿಗೆಯೂ ಸೇರಿತ್ತು. ಆದರೆ ಈ ಊರುಗಳ ಪಕ್ಕದ ಹಳ್ಳಿಯಾದ ನಮ್ಮ ಹರಳಿಮಠದಲ್ಲಿ ಭರ್ಜರಿ ಮೂರು ಸಾರಾಯಿ ಅಂಗಡಿಗಳಿದ್ದವು. ಕಡಿದಾಳು, ಹಾರೋಗೊಳಿಗೆಗಳಿಗೆ ಮಂಜೂರಾದ ಸಾರಾಯಿ ಅಂಗಡಿಗಳನ್ನು ಹರಳಿಮಠಕ್ಕೆ ದಯಪಾಲಿಸಿದರು ಎಂದು ನಮ್ಮೂರಿನ ಕೆಲವರು ನನ್ನ ಬಳಿ ಆಪಾದಿಸಿದ್ದುಂಟು!

ಈ ಹಿನ್ನೆಲೆಯಲ್ಲಿ ಪಾನನಿರೋಧಕ್ಕೆ ರಾಮಯ್ಯಗೌಡರ ಕೊಡುಗೆ ಕುರಿತು ಲೇಖನವೊಂದನ್ನು ಕಳಿಸಬೇಕೆಂದು ಕೃತಿಯ ಸಂಪಾದಕರು ನನಗೆ ಪತ್ರ ಬರೆದರು. ಸಂಪಾದಕೀಯ ಮಂಡಳಿಯಲ್ಲಿ ರಾಮಯ್ಯಗೌಡರ ಹಿರಿಮಗ ಕಡಿದಾಳು ಶಾಮಣ್ಣನವರೂ ಇದ್ದರು. ನಾನು ಅತ್ಯಂತ ನಿಷ್ಠೂರವಾಗಿ ರಾಮಯ್ಯಗೌಡರ ಹೆಚ್ಚುಗಾರಿಕೆ – ಮಿತಿಗಳನ್ನು ಉಲ್ಲೇಖಿಸಿ ಲೇಖನವೊಂದನ್ನು ಕಳಿಸಿದೆ. ಆ ಲೇಖನ ಪ್ರಕಟವಾಗುವ ಬಗ್ಗೆ ನನಗೆ ಗಾಢ ಅನುಮಾನವಿತ್ತು. ಆದರೆ ಅದು ಪ್ರಕಟವಾಯಿತು. ಪುಸ್ತಕ ಹೊರಬಂದ ಮೇಲೆ ರಾಮಯ್ಯಗೌಡರ ಕುಟುಂಬದ ಕೆಲವು ಮಹಿಳೆಯರು 'ಯಾವನು ಆ ರೀತಿ ಬರೆದವನು' ಎಂದು ಕೇಳಿದರೆಂದು ಅಲ್ಲಿಗೆ ಹೋಗಿ ಬಂದವರು ನನಗೆ ತಿಳಿಸಿದರು.

ಕಳೆದ ದಶಕದ ಆರಂಭದಲ್ಲಿ ನಾನು ಬೆಂಗಳೂರು ಬಿಟ್ಟು ಶಿವಮೊಗ್ಗಕ್ಕೆ ವಾಪಸಾದೆ. ಅದು ಕುದುರೆಮುಖ ಗಣಿಗಾರಿಕೆ ವಿರೋಧಿ ಚಳುವಳಿ ತೀವ್ರಗೊಳ್ಳುತ್ತಿದ್ದ ಕಾಲ. ಶಿವಮೊಗ್ಗಕ್ಕೆ ಬಂದ ನಾನು ಯಾವ ಉದ್ಯೋಗವನ್ನು ಹಚ್ಚಿಕೊಳ್ಳದೇ ಆರಾಮವಾಗಿ ತಿರುಗುತ್ತ ನನ್ನ ಮಾನಸಿಕ ಸ್ವಾಸ್ಥ್ಯದ ಬಗ್ಗೆ ಮನೆಯವರಿಗೆ, ಹಿತೈಷಿಗಳಿಗೆ ಅನುಮಾನ ಮೂಡಿಸುತ್ತಿದ್ದೆ. ತುಂಗಭದ್ರ ಉಳಿಸಿ ಚಳುವಳಿಯಲ್ಲಿ ತೊಡಗಿಸಿಕೊಂಡಿದ್ದೆ. ಈ ಚಳವಳಿಯ ಭಾಗವಾದ ತುಂಗಾ-ಭದ್ರಾ ನದಿ ತೀರದ ಎಂಟು ಜಿಲ್ಲೆಗಳಲ್ಲಿ ಜಾಗೃತಿ ಮೂಡಿಸುವ ನದಿ ಜನ ಜಾಥಾದೊಂದಿಗೆ ಹೊರಟೆ. ನಾವು ಹೊಳೆಹೊನ್ನೂರಿಗೆ ಹೋದಾಗ ಶಾಮಣ್ಣನವರು ಹಾರ್ಮೋನಿಯಂನೊಂದಿಗೆ ಅಲ್ಲಿ ನಮಗೆದುರಾದರು. ಹಾರ್ಮೋನಿಯಮ್ಮನ್ನು ಕುತ್ತಿಗೆಗೆ ನೇತು ಹಾಕಿಕೊಳ್ಳಲು ಹಗ್ಗ ತಾರದಿರುವ ಕಾರಣ ಶಾಮಣ್ಣ ಕೊಂಚ ಚಡಪಡಿಕೆಯಲ್ಲಿದ್ದರು. ಅತ್ತಿತ್ತ ನೋಡಿ ಯಾರದೋ ಮನೆಯ ದನದ ಕೊಟ್ಟಿಗೆಗೆ ನುಗ್ಗಿ ದನಕ್ಕೆ ಕಟ್ಟುವ ಸೊಪ್ಪಿನ ಹಗ್ಗವನ್ನು ತಂದು ಹಾರ್ಮೋನಿಯಮ್ಮನ್ನು ಕುತ್ತಿಗೆಗೆ ನೇತು ಹಾಕಿಕೊಂಡು ಹಾಡತೊಡಗಿದರು. ಅಂದು ಶಾಮಣ್ಣ

ತುಂಬಾ ಭಾವೋದ್ವೇಗಕ್ಕೆ ಒಳಗಾಗಿದ್ದರು. 'ಗಣಿಗಾರಿಕೆ ನಿಲ್ಲಿಸದಿದ್ದರೆ ಅಧಿಕಾರಿಗಳನ್ನು, ರಾಜಕಾರಣಿಗಳನ್ನೂ ಬಾರುಕೋಲಿನಿಂದ ಬಾರಿಸುವ ಚಳುವಳಿ ಮಾಡಬೇಕಾದೀತೆಂದು' ಘೋಷಿಸಿದರು.

ಇಲ್ಲಿಂದ ಶಾಮಣ್ಣನವರೊಂದಿಗಿನ ನನ್ನ ಒಡನಾಟ ನಿರಂತರವಾಯಿತು. ಶಾಮಣ್ಣನವರಿಗೆ ಸುಮ್ಮನೆ ನಡೆದುಕೊಂಡು ಹೋಗುವುದು ಇಷ್ಟ. ನನಗೂ ಅಷ್ಟೆ. ನಾನೂ ಶಾಮಣ್ಣ ಅದೂ ಇದೂ ಮಾತನಾಡುತ್ತಾ ಶಿವಮೊಗ್ಗ ಬೀದಿಗಳಲ್ಲಿ ಹಲವು ಸಲ ನಡೆದಿದ್ದೇವೆ. ಒಮ್ಮೆ ಹೀಗೆ ಹೋಗುವಾಗ ಅವರ ಬಂಧುಗಳ ಮನೆಗೆ ಹೋಗುವ ಪ್ರಸಂಗ ಎದುರಾಯಿತು. ಅದು ಊಟದ ಸಮಯ. ಅವರು ಊಟಕ್ಕೆ ಆಹ್ವಾನಿಸಿದರೂ, ಆಹ್ವಾನದಲ್ಲಿನ 'ಕಾಟಾಚಾರತೆ' ಗಮನಿಸಿ 'ನಮ್ಮದಾಗಲೇ ಊಟವಾಗಿದೆ' ಎಂದು ಹೊರಬಂದರು. 'ಆತ್ಮೀಯತೆಯಿಲ್ಲದ ಕಡೆ ಊಟ ಮಾಡಬಾರದು' ಎಂದು ತಮ್ಮಷ್ಟಕ್ಕೆ ಅಂದುಕೊಂಡ ಶಾಮಣ್ಣ ನನ್ನನ್ನು ಅವರ ಗೆಳೆಯರ ಮನೆಗೆ ಕರೆದುಕೊಂಡು ಹೋದರು. ಆ ಮನೆಯಲ್ಲಿ ನಮಗೆ ಭರ್ಜರಿ ಜೋಳದ ರೊಟ್ಟಿಯ ಅಡುಗೆ ಮಾಡಿ ಬಡಿಸಿದರು.

ಇನ್ನೊಮ್ಮೆ ರೈತ ಸಂಘದ ಎರಡು ಬಣಗಳನ್ನು ಒಟ್ಟುಗೂಡಿಸಲು ಶಾಮಣ್ಣ ಪ್ರಯತ್ನಿಸುತ್ತಿದ್ದ ಸಂದರ್ಭದಲ್ಲಿ ಈ ಪ್ರಯತ್ನದ ಭಾಗವಾಗಿ ಡಾ॥ ಚಿಕ್ಕಸ್ವಾಮಿಯವರನ್ನು ಭೇಟಿಯಾಗಲು 'ನೀವೂ ಬನ್ನಿ' ಎಂದು ಅವರ ಮನೆಗೆ ನನ್ನನ್ನು ಕರೆದುಕೊಂಡು ಹೋದರು. ಆ ಸಂದರ್ಭದಲ್ಲಿ ಅವರಿಗೆ 'ರಾಜ್ಯಮಟ್ಟದಲ್ಲಿ ರೈತ ಸಂಘದ ಎರಡು ಬಣಗಳನ್ನು ಒಟ್ಟುಗೂಡಿಸಲು ಓಡಾಡುತ್ತಿದ್ದೀರಿ. ಕಷ್ಟ ಅನ್ನಿಸ್ತಿದೆ. ಅದು ಅತ್ಲಾಗಿರ್ಲಿ, ಶಿವಮೊಗ್ಗದ ಇಬ್ಬರು ರೈತ ನಾಯಕರನ್ನು ಒಟ್ಟು ಮಾಡಲು ಇನ್ನೂ ನಿಮಗ್ಯಾಕೆ ಆಗಲಿಲ್ಲ' ಎಂದು ಕೇಳಿದೆ.

"ಅದು ನನಗೆ ಖಂಡಿತಾ ಸಾಧ್ಯವಿಲ್ಲ" ಎಂದು ಜೋರಾಗಿ ನಗತೊಡಗಿದರು. ಶಾಮಣ್ಣನವರನ್ನು ಐದನೇ ತರಗತಿಯಿಂದ ನೋಡುತ್ತಿದ್ದೇನೆ. ಅದೇ ಗಡ್ಡ, ಅದೇ ಜುಬ್ಬಾ, ಅದೇ ಪೈಜಾಮ. ಅದೇ ಹಸಿರು ಶಾಲು, ಅದೇ ತುಂಟ ನಗೆ, ಒಂದಿನಿತೂ ವ್ಯತ್ಯಾಸವಿಲ್ಲ.

ಶ್ರೀಮಂತ ಕುಟುಂಬದಿಂದ ಬಂದ ಶಾಮಣ್ಣ ಅಹಂಕಾರದ ಬದಲು ವಿನಯ, ಸ್ವಪ್ರತಿಷ್ಠೆಯ ಜಾಗದಲ್ಲಿ ಆತ್ಮ ವಿಮರ್ಶೆ, ಹುಸಿಗಾಂಭೀರ್ಯಕ್ಕೆ ಬದಲು ತಮಾಷೆ ರೂಢಿಸಿಕೊಂಡಿದ್ದು ಅದೇ ಪರಿಸರದಿಂದ ಬಂದ ನನಗೆ ಅಚ್ಚರಿಯ ಸಂಗತಿ. ಶಾಮಣ್ಣನವರ ಈ ವಿಸ್ಮಯ ವ್ಯಕ್ತಿತ್ವದ ಪರಿವರ್ತನೆಯಲ್ಲಿ ಅವರ ಶ್ರೀಮತಿ ಶ್ರೀದೇವಿಯಕ್ಕನವರ ಪಾಲೂ ದೊಡ್ಡದು ಎಂದು ನನಗನ್ನಿಸಿದೆ.

ತಮ್ಮ ನೆಂಟರೇ ಆದ ಕಡಿದಾಳು ಮಂಜಪ್ಪನವರ ಕುಟುಂಬ ವರ್ಗದಲ್ಲಿ

ನಿಶ್ಚಿತಾರ್ಥವೊಂದು ಅದ್ದೂರಿಯಾಗಿ ಜರುಗಿದಾಗ ಕಪ್ಪು ಬಾವುಟ ಪ್ರದರ್ಶಿಸಿದ ಶಾಮಣ್ಣ ವೈಭವದಿಂದ ಜರುಗಿದ ತಮ್ಮ ಸಹೋದರರ ಮಕ್ಕಳ ಮದುವೆಯಲ್ಲಿ ಓಡಾಡುತ್ತಾ ಫೋಟೋ ತೆಗೆಯುತ್ತಿದ್ದದನ್ನು ನನ್ನ ಬಳಿ ಆಕ್ಷೇಪಿಸಿದವರಿದ್ದಾರೆ. ಬಾಂಧವ್ಯವನ್ನು ನಿರಾಕರಿಸಲಾಗದ ಮೃದು ಹೃದಯಿ ಶಾಮಣ್ಣನವರ ಇಕ್ಕಟ್ಟಿದು. ಬಹುಷಃ ಇದೇ ಕಾರಣದಿಂದ ತಮಗೆ ಗಾಢವಾಗಿ ಅನ್ನಿಸಿದ್ದನ್ನು ಹೇಳಿಕೊಳ್ಳಲಾಗದೇ ನುಂಗಿಕೊಂಡ ಶಾಮಣ್ಣನವರು ಎಲ್ಲರ ಪ್ರೀತಿ ಸಂಪಾದಿಸಿದರೂ ರೈತ ಸಂಘವನ್ನು ನಿರ್ದೇಶಿಸಬಲ್ಲ ಗಟ್ಟಿ ನಾಯಕರಾಗಲಿಲ್ಲ. ಬಹುಷಃ ನಾಯಕತ್ವ ಎನ್ನುವುದು ಸ್ವಲ್ಪ ಮಟ್ಟಿಗೆ ನಿರ್ದಯತೆಯನ್ನು ಬೇಡುತ್ತದೆ ಎನ್ನಿಸುತ್ತದೆ. ನಿರ್ದಯತೆ ಎನ್ನುವುದು ಶಾಮಣ್ಣನ ಭಾವಕೋಶದಲ್ಲಿಯೇ ಇಲ್ಲ.

ರೈತ ನಾಯಕರ ಸರ್ವಾಧಿಕಾರಿ ಮನೋಭಾವ ರೈತಸಂಘದ ಅವನತಿಗೆ ಕಾರಣವಾದಂತೆ ಶಾಮಣ್ಣನವರ ಅವಿಮರ್ಶಾತ್ಮಕ ಒಳ್ಳೆಯತನವೂ ರೈತಸಂಘ ದಾರಿ ತಪ್ಪಲು ಕಾರಣವಾಗಿರಬೇಕು. ದೊಡ್ಡ ದೊಡ್ಡ ಘೋಷಣೆಯ ಸರ್ವಾಧಿಕಾರಿ ನಾಯಕರು ಪರಮಭ್ರಷ್ಟರೂ, ಆಷಾಢಭೂತಿಗಳೂ ಆದದ್ದು ನಮ್ಮ ಕಣ್ಣೆದುರಿಗಿರುವಾಗ ಶಾಮಣ್ಣನವರು ಹೀಗೆ ಏನೂ ಆಗದೆ ಇರುವಂತೆ ಅವರನ್ನು ಕಾಪಾಡಿದ್ದು ಕೂಡ ಅವರ ಇದೇ ಗುಣವಿರಬೇಕು.

ಪೊಲೀಸ್ ಠಾಣೆಯಲ್ಲಿ ಕೊಳಲು ವಾದನ

ಕೆ.ಪಿ.ಶ್ರೀಪಾಲ್

ಶಾಮಣ್ಣರವರನ್ನು ನಾನು ನೋಡುವ ಮೊದಲೆ ಶಾಮಣ್ಣರವರ ರೈತ ಚಳುವಳಿಯ ಬಗ್ಗೆ ಅರಿವುಳ್ಳವನಾಗಿದ್ದೆ. ಲಂಕೇಶ್ ಪತ್ರಿಕೆಯಲ್ಲಿ ಬರೆದಿದ್ದ 'ಗಡ್ಡದ ಶಾಮಣ್ಣ' ಮತ್ತು ಇನ್ನಿತರೆ ಕೆಲವು ಲೇಖನಗಳನ್ನು ಓದಿದ್ದ ನನಗೆ ಶಾಮಣ್ಣರವರ ಬಗ್ಗೆ ಏನೋ ಒಂದು ರೀತಿಯ ಆಕರ್ಷಣೆಯನ್ನು ಮೂಡಿಸಿತ್ತು. ೧೯೯೭ರಲ್ಲಿ ಮೊದಲ ಬಾರಿಗೆ ಶಾಮಣ್ಣರವರೊಂದಿಗೆ ಸಂಪರ್ಕ ಬೆಳೆಯಿತು, ಮೊದಲು ನಾನು ಬೆಳೆದು ಬಂದ ವಾತಾವರಣವು ಗಡ್ಡಧಾರಿಗಳ ಬಗ್ಗೆ ಸಂಶಯ ಪಡುವ ಕೆಟ್ಟ ಹವ್ಯಾಸವನ್ನು ಬೆಳೆಸಿತ್ತು. ಶಾಮಣ್ಣ ಮತ್ತವರ ಜೊತೆಗಿದ್ದ ಹಲವು ಗಡ್ಡಧಾರಿಗಳ ನಡುವಿನ ಒಡನಾಟ ನನ್ನ ಸಂಶಯವನ್ನು ದೂರಮಾಡಿ ಗೌರವ ಹುಟ್ಟಿಸುವಂತೆ ಮಾಡಿತು, ನಾನು ಕಳೆದ ೩೦ ವರ್ಷಗಳಿಂದ ನೋಡುತ್ತಿದ್ದೇನೆ ಈ ಶಾಮಣ್ಣ ಗುಣದಲ್ಲಿ, ನಡತೆಯಲ್ಲಿ ಬದಲಾಗಿದ್ದನ್ನು ನೋಡಿದ್ದಾಗಲಿ ಕೇಳಿದ್ದಾಗಲಿ ಇಲ್ಲಾ ಕೊನೆ ಪಕ್ಷ ಅವರ ಗಡ್ಡದ ದಟ್ಟಣೆಯಲ್ಲಾದರು ಹೆಚ್ಚು ಕಡಿಮೆ ಕಾಣುತ್ತದೆಯೇ ಅಂದರೆ ಅದರಲ್ಲು ಕಾಣಲಿಲ್ಲ.

ಶಾಮಣ್ಣ ಒಬ್ಬರು ಮೂಡಿ, ಭಾವುಕಜೀವಿ. ಇವರು ಹಲವು ಬಾರಿ ಅತ್ಯಂತ ಮುಗ್ಧರಾಗಿ, ಕೆಲವೊಮ್ಮೆ ಅತ್ಯಂತ ವಿನೋದಶೀಲ ವ್ಯಕ್ತಿಯಾಗಿ ನನಗೆ ಕಂಡಿದ್ದಾರೆ.

ಕಳೆದ ಕೆಲವು ವರ್ಷಗಳ ಹಿಂದೆ ತೀರ್ಥಹಳ್ಳಿಯಲ್ಲಿ ಗೆಳೆಯ ನೆಂಪೆದೇವರಾಜರವರ ಪತ್ರಿಕೆಯ ಕಾರ್ಯಕ್ರಮಕ್ಕೆ ತೀರ್ಥಹಳ್ಳಿಗೆ ಹೋಗಿದ್ದೆವು. ಆ ಕಾರ್ಯಕ್ರಮಕ್ಕೆ ಶಾಮಣ್ಣ ಕೂಡ ಒಬ್ಬರು ಮುಖ್ಯ ಅತಿಥಿ. ಅದೆ ಸಮಯದಲ್ಲಿ ನಮ್ಮ ಚಳುವಳಿಗಳಲ್ಲಿ ಸಕ್ರಿಯರಾಗಿದ್ದ ಪ್ರಶಾಂತ್ ಹುಲ್ಕೋಡು ಮತ್ತು ಕೆಲವು ಗೆಳೆಯರು ಎರಡನೇ ಹಂತದ ತುಂಗಾಮೂಲ ಚಳುವಳಿಯ ಕಾರ್ಯಕ್ರಮದ ಬಗ್ಗೆ ತೀರ್ಥಹಳ್ಳಿ ನಗರದಲ್ಲಿ ಕರಪತ್ರಗಳನ್ನು ಹಂಚಲು ಹೋಗಿದ್ದರು ಅವರನ್ನು ನಕ್ಸಲ್ ಸಂಘಟನೆಯ ನಂಟು ಇರುವವರಿರಬಹುದೆಂಬ ಅನುಮಾನದ ಮೇಲೆ ತೀರ್ಥಹಳ್ಳಿಯ ಪೋಲೀಸರು ಬಂಧಿಸಿ ತಂದು ಠಾಣೆಯಲ್ಲಿ ಕೂರಿಸಿದ್ದರು, ಈ ವಿಷಯ ತಿಳಿದು ನಾನು ಮತ್ತು ಆ ದಿನ ನೆಂಪೆಯವರ ಕಾರ್ಯಕ್ರಮಕ್ಕೆ ಬಂದಿದ್ದ ಕಲ್ಕುಳಿ ವಿಠಲ್‌ಹೆಗ್ಡೆಯವರು ಶಾಮಣ್ಣರವರನ್ನು ಕರೆದುಕೊಂಡು ಸರ್ಕಲ್ ಇನ್ಸ್‌ಪೆಕ್ಟರ್ ಕಚೇರಿಗೆ ಹೋದೆವು. ಆ ಸಮಯದಲ್ಲಿ ಸರ್ಕಲ್ ಇನ್ಸ್‌ಪೆಕ್ಟರ್ ಬಾಲರಾಜ್ ಶಿವಮೊಗ್ಗಕ್ಕೆ ಹೊಗಿದ್ದರಿಂದ ಅಲ್ಲಿದ್ದ ಸಿಬ್ಬಂದಿಗಳು 'ಸಾಹೇಬ್ರು ಬಾರದೆ ಬಂಧಿತರನ್ನು ಬಿಡಲು ಆಗುವುದಿಲ್ಲಾ ಅವರು ಬರಬೇಕು' ಎಂದರು, ಸುಮಾರು ಒಂದು ಗಂಟೆ ಕಾದೆವು ಅಲ್ಲಿಯವರೆಗು ಏನನ್ನು ಮಾತನಾಡದೆ ಕುಳಿತ ಶಾಮಣ್ಣ ನಿಧಾನಕ್ಕೆ ಹಾಡನ್ನು ಗೊಣಗುಡಲು ಶುರುಮಾಡಿ ತಮ್ಮ ಬಗಲಿನಲ್ಲಿದ್ದ ಚೀಲಕ್ಕೆ ಕೈ ಹಾಕಿ ಕೊಳಲನ್ನು ತೆಗೆದು ನುಡಿಸಲು ಆರಂಭಿಸಿದರು. ಅಲ್ಲಿದ್ದ ಪೊಲೀಸ್‌ರಿಗೆ ಒಮ್ಮೆಲೆ ಶಾಕ್ ಆಗಿ 'ಸಾರ್ ಇದು ಪೊಲೀಸ್ ಠಾಣೆ. ಇದೇನಿದು ಕೊಳಲು ನುಡಿಸೋದು?' ಎಂದು ಪ್ರಶ್ನಿಸಿದರು. ಆದರೆ ಶಾಮಣ್ಣ ಆ ಮಾತು ತಮಗೆ ಕೇಳಿಯೆ ಇಲ್ಲವೆಂಬ ರೀತಿಯಲ್ಲಿ ಅವರ ಪಾಡಿಗೆ ಕೊಳಲುವಾದನವನ್ನು ಮುಂದುವರೆಸಿದರು. ಗಲಿಬಿಲಿ ಆದ ಪೊಲೀಸರು ಕೂಡಲೆ ಇನ್ಸ್‌ಪೆಕ್ಟರ್ ಮತ್ತು ಆಗ ಶಿವಮೊಗ್ಗದಲ್ಲಿದ್ದ ಡಿವೈಎಸ್‌ಪಿ ಯವರಿಗೆ ಕರೆಮಾಡಿ ವಿಷಯ ತಿಳಿಸಿದರು. ಕೂಡಲೆ ಡಿವೈಎಸ್‌ಪಿ ಕಛೇರಿಯಿಂದ ನನ್ನ ಮೋಬೈಲ್‌ಗೆ ಪೋನ್ ಬಂತು. 'ಶಾಮಣ್ಣರವರ ಸಂಗೀತ ಕಚೇರಿ ನಿಲ್ಲಿಸಿ ಹುಡುಗರನ್ನು ಬಿಟ್ಟು ಕಳಿಸುತ್ತೇವೆ' ಎಂದರು. ಇದೇ ಶಾಮಣ್ಣರವರ ವಿಶೇಷತೆ. ಸಂಗೀತದಲ್ಲು ಪ್ರತಿಭಟಿಸುವ ವಿದ್ಯೆಯನ್ನು ನಮಗೆ ಮೊದಲು ತೋರಿಸಿಕೊಟ್ಟವರು ಶಾಮಣ್ಣ.

ನಮ್ಮ ಎಲ್ಲಾ ಚಳುವಳಿಗಳಲ್ಲು ಸಕ್ರಿಯವಾಗಿರುವ ಶಾಮಣ್ಣರವರನ್ನು ನಾವು ಹಲವು ಬಾರಿ ದೊಡ್ಡ ದೊಡ್ಡ ವೇದಿಕೆ ಕಾರ್ಯಕ್ರಮಗಳಿಗೆ ಹಣ ಸಂಗ್ರಹ ಮಾಡಲು ಕರೆದುಕೊಂಡು ಹೋಗಿದ್ದು ಸಹ ಇದೆ. ತುಂಗಾಮೂಲ ಚಳುವಳಿಯ ಸಮಯದಲ್ಲಿ ಅಡಿಕೆ ಮಂಡಿ ವರ್ತಕರ ಬಳಿ ಶಾಮಣ್ಣ ಬಂದರೆ ಒಳ್ಳೆಯದೆಂದು ಶಾಮಣ್ಣರವರನ್ನು

ಕರೆದುಕೊಂಡು ಹೊಗಿದ್ದೆವು. ನಾವು ಮೊದಲು ತಿಳಿದುಕೊಳ್ಳುವುದೇನೆಂದರೆ ಶಾಮಣ್ಣನವರಿಗೆ ಎಲ್ಲರು ಸಲಿಗೆಯಿಂದ ಇರುವುದರಿಂದ ಶಾಮಣ್ಣ ಗಟ್ಟಿ ಧ್ವನಿಯಲ್ಲಿ ಮಾತನಾಡಬಹುದು ಎಂದು ನಾವು ಭಾವಿಸಿದ್ದರೆ, ನಮ್ಮ ಶಾಮಣ್ಣ ಕಾರ್ಯಕ್ರಮದ ವಿಷಯವನ್ನು ಮಾತ್ರ ಹೇಳುತ್ತಿದ್ದರು, ಕಾರ್ಯಕ್ರಮದ ದೇಣಿಗೆ ಬಗ್ಗೆ ಮಾತನಾಡು ತ್ತಿರಲಿಲ್ಲ. ಮಧ್ಯದಲ್ಲಿ ನಾವು, ಶಾಮಣ್ಣ ವಿಷಯ ಪ್ರಸ್ತಾಪ ಮಾಡಿ ಅಂದಾಗ ಏನೂ ಕೇಳದ ಹಾಗೆ ಇರುತ್ತಿದ್ದರು. ಅದರೆ ಮಂಡಿಯ ಮಾಲೀಕರಿಗೆ ನಮ್ಮ ಹಾವಭಾವ ಗಳನ್ನು ನೋಡಿ ತಿಳಿದುಕೊಂಡು ಶಾಮಣ್ಣ ನಮ್ಮಿಂದ ಏನಾಗಬೇಕು ಎಂದಾಗ ನೋಡಿ ಏನೋ ದೊಡ್ಡ ಕಾರ್ಯಕ್ರಮ ಮಾಡುತ್ತಿದ್ದಾರೆ ಎಂದೂ ಹೇಳಿ ಸುಮ್ಮನಾಗು ತ್ತಿದ್ದರು. ಅದೆ ಅವರ ಕೊನೆಯ ಮಾತು. ನಂತರ ಅವರ ಬಾಯಿಂದ ಒಂದೂ ಮಾತನ್ನು ಹೊರತರಲು ನಮಗೆ ಆಗುತ್ತಿರಲಿಲ್ಲ. ಕೊನೆಗೆ ನಮ್ಮಗಳಲ್ಲಿ ಯಾರಾದರು ಒಬ್ಬರು ನಮ್ಮ ಖರ್ಚುವೆಚ್ಚಗಳ ಬಗ್ಗೆ ಮಾತನಾಡುತ್ತಿದ್ದೆವು. ಹೊರಬಂದ ನಂತರ ಶಾಮಣ್ಣರವರಿಗೆ ನೀವು ಬಾಯಿ ಬಿಟ್ಟು ಕೇಳಿದ್ದರೆ ಇನ್ನಷ್ಟು ಜಾಸ್ತಿ ಹಣ ಕೊಡುತ್ತಿದ್ದರು ಎಂದರೆ ಅಯ್ಯೋ ಮಾರಾಯ್ರೇ ಮೊನ್ನೆ ಅಷ್ಟೆ ನಮ್ಮ ರೈತಸಂಘದ ಕಾರ್ಯಕ್ರಮಕ್ಕೆ ಹಣ ಕೊಟ್ಟಿದ್ರು. ಅದಕ್ಕೆ ನಾನು ಏನೂ ಮಾತನಾಡಲಿಲ್ಲ ಎಂದು ನಕ್ಕು, ನಾನು ಇನ್ನೊಂದು ವರ್ಷ ಈ ಕಡೆ ಬರಲೇಬಾರದು ಎಂದು ಇದ್ದೆ. ನೀವೆಲ್ಲ ಒತ್ತಾಯ ಮಾಡಿದ್ದಕ್ಕೆ ಬಂದೆ ಎಂದೂ ಹೇಳುತ್ತಿದ್ದರು. ಅವರ ಆ ಪ್ರಾಮಾಣಿಕ ಮಾತಿನ ಧಾಟಿಯು ನಮ್ಮನ್ನು ಮರುಮಾತನಾಡದಂತೆ ಮಾಡುತ್ತಿತ್ತು.

ಇತ್ತೀಚಿನ ದಿನಗಳಲ್ಲಿ ಯಾವುದೇ ಧರಣಿ, ವೇದಿಕೆ ಕಾರ್ಯಕ್ರಮ, ಮೆರವಣಿಗೆಗಳಿಗೆ ಹಲವರನ್ನು ಕರೆದಾಗ ಮೊದಲು ಕರಪತ್ರದಲ್ಲಿ ನಮ್ಮ ಹೆಸರು ಎಲ್ಲಿದೆ, ನಮಗೆ ಭಾಷಣಕ್ಕೆ ಅವಕಾಶವಿದೆಯೇ, ವೇದಿಕೆಯ ಮೇಲೆ ನಮ್ಮನ್ನು ಕರೆಯುತ್ತಾರೆಯೇ ಎಂಬುವ ರೀತಿ ಯೋಚಿಸುವ ಮನಸ್ಸುಗಳು ಹೆಚ್ಚಾಗಿವೆ. ಹಲವು ಬಾರಿ ಕೆಲವರನ್ನು ಸಮಾಧಾನಪಡಿಸಲೆಂದೆ ಅವರ ಹೆಸರು ಮತ್ತು ಸಂಘಟನೆ ಹೆಸರನ್ನು ಕರಪತ್ರದಲ್ಲಿ ಹಾಕಿ, ವೇದಿಕೆಗು ಕರೆದು ಭಾಷಣಕ್ಕು ಅವಕಾಶ ನೀಡಲೇಬೇಕಾದ ಅನಿವಾರ್ಯತೆ ಸೃಷ್ಟಿಯಾಗಿದೆ. ಅದು ಹೇಗಿದೆ ಎಂದರೆ ಭೂತ, ಚೌಡಿಗಳು ತೊಂದರೆ ನೀಡ ಬಾರದೆಂದು ಹಬ್ಬ-ಹರಿದಿನಗಳಲ್ಲಿ ಪ್ರತ್ಯೇಕ ಎಡೆ ಇಟ್ಟು ಸಮಾಧಾನ ಪಡಿಸಿದಂತೆ ನಡೆದುಕೊಳ್ಳುವ ಪರಿಸ್ಥಿತಿ ನಮ್ಮದಾಗಿದೆ. ಆದರೆ ಶಾಮಣ್ಣ ಇವೆಲ್ಲದಕ್ಕು ತದ್ವಿರುದ್ಧ. ನಾವು ಕರೆಯಲಿ ಕರೆಯದೆ ಇರಲಿ ಕರಪತ್ರದಲ್ಲಿ ಹೆಸರು ಮುದ್ರಿಸಲಿ ಮುದ್ರಿಸದೆ ಇರಲಿ, ಜನಪರವಾದ ನಿಲುವನ್ನು ಹೊಂದಿರುವ ಎಲ್ಲಾ ಚಳುವಳಿಗಳಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುವ ನಿಸ್ವಾರ್ಥಿ. ಹಲವು ಬಾರಿ ವೇದಿಕೆಯಲ್ಲಿ ಏನೇ ಒತ್ತಾಯ ಮಾಡಿದರು ಶಾಮಣ್ಣರವರಿಂದ ಮಾತನಾಡಿಸಲು ಆಗುವುದಿಲ್ಲ. ಧರಣಿ ಮೆರವಣಿಗೆಗಳಲ್ಲಿ ಪತ್ರಿಕೆ ಮತ್ತು ಟಿ.ವಿ.ಮಾಧ್ಯಮದವರು ಬಂದಾಗ ಹಲವರು ಮುಂದೆ ನುಗ್ಗುವ, ಮುಖ

ಒಡ್ಡುವವರನ್ನು ನೋಡಿದ್ದೇವೆ. ಆದರೆ ನಮ್ಮ ಶಾಮಣ್ಣ ಪತ್ರಿಕಾ ಛಾಯಗ್ರಾಹಕರು ಬರುವ ಸಮಯಕ್ಕೆ ಇವರು ತಮ್ಮ ಕ್ಯಾಮರ ಹಿಡಿದು ಪತ್ರಕರ್ತರ ನಡುವೆ ನಿಂತು ಧರಣಿ ಮೆರವಣಿಗೆಯ ಫೋಟೋವನ್ನು ತೆಗೆಯುವುದು ಅವರ ಹವ್ಯಾಸ. ಅದರಲ್ಲಿ ಶಾಮಣ್ಣರವರನ್ನು ಭಾಷಣಕ್ಕೆ ಕರೆಯಬೇಕು ಎನ್ನುವ ಸಮಯದಲ್ಲಿ ಶಾಮಣ್ಣ ಕ್ಯಾಮರ ಹಿಡಿದು ಫೋಟೋ ಹೊಡೆಯುತ್ತ ದೂರಕ್ಕೆ ಹೋಗುತ್ತಾರೆ. ಈ ರೀತಿಯ ಅವರ ನಡುವಳಿಕೆ ಅವರ ಪ್ರಾಮಾಣಿಕತೆಯನ್ನು ತೋರಿಸುವುದರೊಂದಿಗೆ ನೈಜ ಕಾಳಜಿ ಇರುವ ಹೋರಾಟಗಾರರಿಗೆ ಮಾದರಿ ಆಗಿದ್ದಾರೆ.

ಶಾಮಣ್ಣನವರಿಗೆ ಇರುವ ತಾಳ್ಮೆ ಮತ್ತು ಸಮಯೋಚಿತವಾಗಿ ತೆಗೆದುಕೊಳ್ಳುವ ಕೆಲವು ತೀರ್ಮಾನಗಳು ಅವರನ್ನು ಅತ್ಯಂತ ಪ್ರಬುದ್ಧ ವ್ಯಕ್ತಿ ಎಂಬುದನ್ನು ಸಾರಿ ಸಾರಿ ಹೇಳುತ್ತವೆ. ಇದಕ್ಕೆ ನಿದರ್ಶನವೆಂಬಂತೆ ಒಂದು ಘಟನೆಯನ್ನು ಪ್ರಸ್ತಾಪಿಸಲೇ ಬೇಕು. ಒಮ್ಮೆ ಶಿವಮೊಗ್ಗಕ್ಕೆ ಕಾಳೇಗೌಡ ನಾಗವಾರರು ಬಂದಾಗ ಬಿ. ಚಂದ್ರೇಗೌಡ್ರು ಫೋನ್ ಮಾಡಿ ಕಾಳೇಗೌಡ್ರು ಬಂದಿದ್ದಾರೆ, ಎನ್.ಡಿ.ಸುಂದರೇಶರವರ ಬಗ್ಗೆ ಪುಸ್ತಕವೊಂದನ್ನು ತರುವ ಬಗ್ಗೆ ಚರ್ಚೆ ಮಾಡೋಣ ಬನ್ನಿ ಎಂದರು. ನಾವು ಹೋಗುವಾಗ ಶಾಮಣ್ಣರವರಿಗೆ ವಿಷಯ ತಿಳಿಸಿದೆವು. ಆ ದಿನ ಶಾಮಣ್ಣ ಶಿವಮೊಗ್ಗದಲ್ಲಿಯೆ ಇದ್ದಿದ್ದರಿಂದ ಅವರು ಅಲ್ಲಿಗೆ ಬಂದರು. ಅಲ್ಲಿ ಎನ್.ಡಿ.ಸುಂದರೇಶ್ ಕುಟುಂಬಸ್ಥರು ಶಾಮಣ್ಣರವರಿಗೂ ಸೇರಿದಂತೆ ರೈತ ಸಂಘದ ಕೆಲವರಿಗೆ ಅತ್ಯಂತ ಕಠೋರವಾದ ಶಬ್ದಗಳನ್ನು ಬಳಸಿ ಮಾತನಾಡಿದರು. ಆ ಸಮಯದಲ್ಲಿ ಕಾಳೆಗೌಡ್ರು ಸೇರಿದಂತೆ ನಾವೆಲ್ಲ ಒಂದು ಕ್ಷಣ ಶಾಕ್ ಆದೆವು. ಆದರೆ ಶಾಮಣ್ಣ ಏನೂ ಆಗಿಲ್ಲದವರಂತೆ ಅತ್ಯಂತ ತಾಳ್ಮೆಯಿಂದ ವರ್ತಿಸಿ ತಮ್ಮ ದೊಡ್ಡತನವನ್ನು ತೋರಿದರು. ಅನಿರೀಕ್ಷಿತವಾಗಿ ನಡೆದ ಈ ಘಟನೆಯಿಂದ ಎನ್.ಡಿ.ಸುಂದರೇಶ್‌ರವರ ಬಗ್ಗೆ ತರಬೇಕಾದ ಪುಸ್ತಕದ ಬಗ್ಗೆ ಚರ್ಚೆ ಆಗಲೇ ಇಲ್ಲ. ಆ ದಿನದ ಘಟನೆ ಆಗಾಗ ನೆನಪಾಗಿ ನಮಗೆ ನೋವನ್ನು ತರುತ್ತಿದೆ. ಆದರೆ ಶಾಮಣ್ಣ ತಮ್ಮನ್ನು ನಿಂದಿಸಿದವರ ಬಗ್ಗೆ ಇಂದಿಗೂ ಒಳ್ಳೆಯ ಮಾತುಗಳನ್ನು ಆಡುತ್ತಾರೆ. ಅದೆ ಶಾಮಣ್ಣರವರ ಹೃದಯ ಶ್ರೀಮಂತಿಕೆ.

ಹಲವು ಬಾರಿ ಶಾಮಣ್ಣನವರ ಹೆಸರನ್ನು ಮತ್ತು ಅವರಿಗೆ ಸಮಾಜದಲ್ಲಿ ಇರುವ ಗೌರವವನ್ನೆ ಬೇರೆ ಬೇರೆ ರೀತಿಯಲ್ಲಿ ತಮ್ಮ ಸ್ವಾರ್ಥಕ್ಕೆ ಬಳಸಿಕೊಂಡವರು ಮತ್ತು ಬಳಸಿಕೊಳ್ಳುವವರು ಬಹಳ ಜನ ಇಂದಿಗೂ ನಮ್ಮ ಕಣ್ಣ ಮುಂದೆ ಕಾಣಿಸಿ ಕೊಳ್ಳುತ್ತಾರೆ. ಇದಕ್ಕೆ ಕಾರಣ ಶಾಮಣ್ಣರವರ ಮುಗ್ಧತನ ಮತ್ತು ಯಾರ ಮನಸ್ಸಿಗೂ ನೋವು ಉಂಟುಮಾಡಬಾರದು ಎಂಬುವ ಹಾಗೂ ಯಾರೊಂದಿಗು ನಿಷ್ಠೂರತೆ ಯನ್ನು ಕಟ್ಟಿಕೊಳ್ಳುವ ಕಠೋರ ಹೃದಯವಿಲ್ಲದಿರುವುದು.

ಶಾಮಣ್ಣರವರೊಂದಿಗೆ ತೀರ್ಥಹಳ್ಳಿ ಕಡೆ ಹೊರಟಾಗ ತೂದೂರು ಶೆಟ್ರ ಹೋಟೆಲ್‌ಗೆ ಕರೆದುಕೊಂಡು ಹೋಗಿ ಅಲ್ಲಿ ಕಾಫಿ ಕುಡಿಯುವಾಗ ಗೋಪಾಲಗೌಡ್ರು ಮತ್ತು ಕೋಣಂದೂರು ಲಿಂಗಪ್ಪರವರ ಚುನಾವಣೆ ಸಮಯದಲ್ಲಿ ಸಮಾಜವಾದಿ ಪಾರ್ಟಿಯವರು ಪ್ರಚಾರ ಮುಗಿಸಿ ಬರುವ ಸಮಯಕ್ಕೆ ಗಸಿ ಮಾತ್ರ ಉಳಿದಿರುತ್ತಿತ್ತು. ತುಂಡುಗಳನ್ನು ಕಾಂಗ್ರೆಸ್‌ನವರು ತಿಂದುಕೊಂಡು ಹೋಗಿರುತ್ತಿದ್ದರು ಎಂದು ಊಟದ ಕತೆಯನ್ನು ಮತ್ತು ಪ್ರೊಫೆಸರ್ ನಂಜುಂಡಸ್ವಾಮಿಯವರನ್ನು ಚುನಾವಣಾ ಪ್ರಚಾರಕ್ಕೆ ತೀರ್ಥಹಳ್ಳಿಗೆ ಕರೆತಂದ ಸನ್ನಿವೇಶಗಳನ್ನು ಹೇಳುವಾಗ ಹಿರಿ ಅಜ್ಜನೊಬ್ಬ ತನ್ನ ಜೀವನದ ಅನುಭವಗಳನ್ನು ಹೇಳಿದಂತೆ ಸೊಗಸಾಗಿ ಕೇಳಿ ಬರುತ್ತವೆ. ಬೇರೆ ಸಮಯದಲ್ಲಿ ಶಾಮಣ್ಣರವರ ಬಾಯಿನಿಂದ ಬರುವ ಈ ಘಟನೆಗಳು ವೇದಿಕೆಯಲ್ಲಿ ಭಾಷಣದ ಮೂಲಕ ಅವರ ಬಾಯಿನಲ್ಲಿ ಬರುವುದಿಲ್ಲ. ಆತ್ಮೀಯವಾಗಿದ್ದಾಗ ಬರುವ ಅವರ ಜೀವನದ ಇಂತಹ ಅನುಭವಗಳನ್ನು ಬರವಣಿಗೆಯಾಗಿ ದಾಖಲಿಸಿದರೆ ಅದು ಅದ್ಭುತವಾಗಿರುತ್ತದೆ.

ಪ್ರತಿ ವ್ಯಕ್ತಿಯ ಸಾಧನೆಯ ಹಿಂದೆ ಒಬ್ಬ ಮಹಿಳೆ ಇರುತ್ತಾಳೆ ಎಂಬ ಮಾತು ಸಾಮಾನ್ಯವಾಗಿದೆ. ಆದರೆ ಆ ಮಹಿಳೆಯು ಗಂಡನ ಎಂತಹ ಏಳಿಗೆಯನ್ನು ಬಯಸುತ್ತಾಳೆ ಎಂದರೆ ಗಂಡ ಒಳ್ಳೆಯ ಸಂಪಾದನೆ ಮಾಡುವ ವೃತ್ತಿ ಅಥವಾ ರಾಜಕಾರಣದಲ್ಲಿ ಶಾಸಕ, ಮಂತ್ರಿ, ಅಥವಾ ಇನ್ನಾವುದೆ ರಂಗದಲ್ಲಿ ಗಂಡ ಬೆಳೆಯಬೇಕು. ಆ ಬೆಳವಣಿಗೆಯು ತಮ್ಮ ಕುಟುಂಬಕ್ಕೆ ಲಾಭವನ್ನು, ಹೆಚ್ಚು ಗೌರವವನ್ನು ತರುವಂತಹದಿದ್ದಾಗ ಸಹಜವಾಗಿ ಗಂಡನ ಸಾಧನೆಯ ಹಿಂದೆ ಹೆಂಡತಿಯ ಪ್ರೋತ್ಸಾಹ ಮತ್ತು ಸಹಕಾರವಿರುವುದು ನಾವು ನೋಡಿದ್ದೇವೆ. ಆದರೆ ತಮ್ಮ ಸ್ವಂತ ಆದಾಯ ವ್ಯಯಮಾಡಿ ದೂರದ ಊರುಗಳಿಗೆ ಹೋಗಿ ಜನರನ್ನು ಸಂಘಟಿಸುವ, ರಾತ್ರಿ ಹಗಲು ಎನ್ನದೆ ಜನರ ಸೇವೆಗಾಗಿ ದುಡಿಯುವ, ಯಾವುದೆ ಆದಾಯವಿಲ್ಲದ ಸಮಾಜ ಸೇವೆಗೆ ತೊಡಗಿಕೊಂಡಾಗ ತಾನು ಅದರಲ್ಲಿ ಭಾಗಿ ಆಗುತ್ತೇನೆ ಎಂದು ಗಂಡನನ್ನು ಪ್ರೋತ್ಸಾಹಿಸುವ ಶಾಮಣ್ಣರವರ ಪತ್ನಿ ಶ್ರೀದೇವಕ್ಕರಂತಹ ಮನಸ್ಸುಗಳು ಅತಿ ವಿರಳ. ಶಾಮಣ್ಣರವರಿಗೆ ಶ್ರೀದೇವಕ್ಕರವರ ಪ್ರೋತ್ಸಾಹ ಸಿಗದೆ ಇದಿದ್ದರೆ ಶಾಮಣ್ಣ ಚಳುವಳಿಯಿಂದ ಬಹಳ ಹಿಂದೆಯೇ ನಿವೃತ್ತಿ ಹೊಂದಿರುತ್ತಿದ್ದರೇನೋ. ಚಳುವಳಿಯನ್ನು ಮುನ್ನಡೆಸುವವರಿಗೆ ತಾಯತನದ ಮನಸ್ಸು ಇರಬೇಕು. ಆಗ ಮಾತ್ರ ಜನ ನಂಬಲು, ನಮ್ಮೊಂದಿಗೆ ಕೈ ಜೋಡಿಸಲು ಮುಂದಾಗುತ್ತಾರೆ. ಶಾಮಣ್ಣರವರಿಗೆ ಆ ತಾಯತನದ ಗುಣಗಳಿವೆ. ಎಲ್ಲರನ್ನು ಪ್ರೀತಿಯಿಂದ ಮಾತನಾಡಿಸುವ, ಎಲ್ಲದಕ್ಕಿಂತ ಮಿಗಿಲಾಗಿ ಎಲ್ಲರನ್ನು ನಂಬುವ, ವಿಶ್ವಾಸ ತೋರಿಸುವ ನಮ್ಮ ಶಾಮಣ್ಣ ಹೀಗೆಯೆ ಜನರ ನಡುವೆ ಸಕ್ರಿಯವಾಗಿರಲಿ.

ಗೆಜ್ಜೆ ಕಟ್ಟಿಕೊಂಡ ಶಾಮಣ್ಣ

ಗೌರಿ ಲಂಕೇಶ್

ಮಿತ್ರರೊಂದಿಗೆ ಅಪ್ಪನ ಭೇಟಿಗಳು ಹೆಚ್ಚಾಗಿ ನಡೆಯುತ್ತಿದ್ದದ್ದು ಅವರು ಪಾಠ ಹೇಳುತ್ತಿದ್ದ ಕಾಲೇಜಿನಲ್ಲಿ ಅಥವಾ ಆನಂತರ ಪತ್ರಿಕೆಯ ಆಫೀಸಿನಲ್ಲಿ. ಇನ್ನು ಅಪ್ಪ ಎಂದೂ ತನ್ನ ಊರೂರು ಸುತ್ತಾಟಕ್ಕೆಂದು ನಮ್ಮನ್ನು ಕರೆದುಕೊಂಡು ಹೋದದ್ದು ಇಲ್ಲವಾದ್ದರಿಂದ ಅವರ ಮಿತ್ರರ ಪರಿಚಯವೂ ನಮಗಿರಲಿಲ್ಲ. ಜೊತೆಗೆ ಅಪ್ಪ ತನ್ನ ಸ್ನೇಹಿತರ ಬಗ್ಗೆ ನಮ್ಮೊಂದಿಗೆ ಚರ್ಚಿಸುತ್ತಿರಲಿಲ್ಲವಾದ್ದರಿಂದ ಅವರಲ್ಲಿ ಹಲವರ ಹೆಸರುಗಳು ನಮಗೆ ಗೊತ್ತಿರುತ್ತಿತ್ತೇ ಹೊರತು ಬೇರೆ ಏನೇನೂ ಗೊತ್ತಿರಲಿಲ್ಲ. ಹಾಗಾಗಿ ನಮ್ಮ ಮನೆಗೆ ಹೆಚ್ಚಾಗಿ ಬರುತ್ತಿದ್ದ ಕಿ.ರಂ. ನಾಗರಾಜ್, ಕೆ. ಮರುಳಸಿದ್ದಪ್ಪ, ಅಗ್ರಹಾರ ಕೃಷ್ಣಮೂರ್ತಿ, ಟಿ.ಎನ್. ಸೀತಾರಾಮ್ ಇಂತಹವರು ನಮಗೆ ಗೊತ್ತಿದ್ದರೆ ಹೊರತು ಮಿಕ್ಕವರಲ್ಲ.

ಆ ಕಾರಣಕ್ಕೇ ಇರಬೇಕು, ಅಪ್ಪ ಮತ್ತು ಕಡಿದಾಳು ಶಾಮಣ್ಣ ಹಲವು ದಶಕಗಳ ಮಿತ್ರರಾಗಿದ್ದರೂ ನನಗೆ ಶಾಮಣ್ಣನವರನ್ನು 'ಪರಿಚಯಿಸಿದ್ದು' ಅಪ್ಪ ಅಲ್ಲ, ಬದಲಾಗಿ ಪೂರ್ಣಚಂದ್ರ ತೇಜಸ್ವಿ ಎಂದರೆ ಸರಿ. ಅದೂ ಹೇಗೆಂದರೆ ಪತ್ರಿಕೆಯಲ್ಲಿ ತೇಜಸ್ವಿಯವರು

‘ಅಣ್ಣನ ನೆನಪು’ ಅಂಕಣದ ಮೇಲೆ ಕಣ್ಣಾಡಿಸುತ್ತಿದ್ದೆ. ಆದರೆ ಯಾವಾಗ ‘ಬುಲ್‌ಬುಲ್ ತರಂಗ್’ ಎಂಬ ಶೀರ್ಷಿಕೆಯಡಿ ಪ್ರಕಟಗೊಂಡ ಸಂಚಿಕೆಯಲ್ಲಿ ಶಾಮಣ್ಣ ಭರ್ಜರಿಯಾದ ಎಂಟ್ರಿ ಕೊಟ್ಟರೋ ಅವತ್ತಿನಿಂದ ಅದನ್ನು ತಪ್ಪದೇ ಓದಲಾರಂಭಿಸಿದೆ. ಸಂಗೀತದ ಬಗ್ಗೆ ತೇಜಸ್ವಿ ಮತ್ತು ಶಾಮಣ್ಣ ಹುಚ್ಚು ಹಿಡಿಸಿಕೊಂಡು ಮಾಡಿದ ಅಪರಾತಪರಾಗಳನ್ನು ಓದುತ್ತಾ ನಕ್ಕನಕ್ಕೂ ಸುಸ್ತಾಗುತ್ತಿದ್ದೆ. ಗ್ರಾಮಾಫೋನ್ ಅನ್ನೇ ಗುರುಗಳನ್ನಾಗಿಸಿಕೊಳ್ಳುವ ಪ್ರಯತ್ನ, ಶಾಮಣ್ಣನವರ ಸಂಗೀತದ ಗೀಳು ಮತ್ತು ತೇಜಸ್ವಿಯವರ ಬರಹದ ಶೈಲಿಯಲ್ಲಿ ಮೂಡಿಬಂದ ಆ ನೆನಪುಗಳು ಇವತ್ತಿಗೂ ಸಖತ್ತಾಗಿವೆ, ಎಷ್ಟರಮಟ್ಟಿಗೆ ಅಂದರೆ ಇದನ್ನು ಬರೆಯುವ ಮುನ್ನ ‘ಅಣ್ಣನ ನೆನಪು’ ಪುಸ್ತಕದ ಹಾಳೆಗಳನ್ನು ತಿರುವಿ ಹಾಕುತ್ತಿದ್ದ ನಾನು ಈ ಅಂಕಣ ಬರೆಯುವುದನ್ನೇ ಮರೆತು ಅದನ್ನೇ ಓದುತ್ತಾ ಕೂತೆ.

ಇಂತಹ ಶಾಮಣ್ಣನವರನ್ನು ಆಮೇಲೆ ನನಗೆ ಮತ್ತೆ ‘ಪರಿಚಯಿಸಿದ್ದು’ ನಮ್ಮ ಬಿ. ಚಂದ್ರೇಗೌಡ. ನಾನು ಪತ್ರಿಕೆಯ ಜವಾಬ್ದಾರಿಯನ್ನು ವಹಿಸಿಕೊಂಡ ನಂತರ ಗೌಡರು ‘ಕಡಿದಾಳು ಶಾಮಣ್ಣನ ಶೌಚಾಲಯಗಳು’ ಎಂಬ ಲೇಖನವನ್ನು ಬರೆದರು. ಅದು ಶಾಮಣ್ಣ ತಮ್ಮ ಭಗವತಿಕೆರೆಯಲ್ಲಿ ಶೌಚಾಲಯಗಳನ್ನು ಕಟ್ಟಿಸಲು ಮಾಡಿದ ಹೋರಾಟ ಕುರಿತ ಹಾಸ್ಯಮಯ ಲೇಖನವಾಗಿತ್ತು. ಅದಾದ ಹಲವು ಸಮಯದ ನಂತರ ಯಾವುದೋ ಕಾರಣಕ್ಕೆ ಶಿವಮೊಗ್ಗೆಗೆ ಹೋದೆ. ಆಗ ಗೌಡರು “ಬಾರವ್ವ, ಶಾಮಣ್ಣನ ಮನೆಗೆ ಹೋಗೋಣ” ಎಂದರು. ಇಬ್ಬರೂ ಕಾರನ್ನೇರಿ ಭಗವತಿಕೆರೆಯತ್ತ ಹೋದೆವು. ದಾರಿಯಲ್ಲಿ ಹಲವು ಮನೆಗಳ ಹಿಂದಿದ್ದ ಹಾಳೂ ಬಿದ್ದ ಶೌಚಾಲಯಗಳನ್ನು ತೋರಿಸಿದ ಗೌಡರು “ನೋಡವ್ವ, ನಮ್ಮ ಶಾಮಣ್ಣ ಕಷ್ಟಪಟ್ಟು ಶೌಚಾಲಯಗಳನ್ನು ಕಟ್ಟಿಸಿಕೊಟ್ಟಿದ್ದರೆ, ಜನ ಅವುಗಳನ್ನು ಉಪಯೋಗಿಸದೆ ಈಗಲೂ ಬಯಲಲ್ಲೇ ಬಹಿರ್ದೆಸೆಗೆ ಕೂರುತ್ತಾರೆ. ಬೆಳಗ್ಗೆ ಎದ್ದು ಇವರೆಲ್ಲಾ ಶೌಚಾಲಯವನ್ನು ಉಪಯೋಗಿಸುತ್ತಿದ್ದಾರೋ ಇಲ್ಲವೋ ಎಂದು ಚೆಕ್ ಮಾಡುವುದೇ ಶಾಮಣ್ಣನವರಿಗೆ ದೊಡ್ಡ ತಲೆನೋವಾಗಿತ್ತು. ಈಗ ಈ ಶೌಚಾಲಯಗಳನ್ನು ಜನ ಕಸ, ಸಗಣಿ ಹಾಕುವ ತಿಪ್ಪೆ ಮಾಡಿಕೊಂಡಿದ್ದಾರೆ. ಇವರನ್ನೆಲ್ಲ ಶಾಮಣ್ಣ ಅದು ಹೇಗೆ ನೆಟ್ಟಗೆ ಮಾಡುತ್ತಾರೋ” ಎಂದು ನಕ್ಕಿದ್ದರು.

ಅವತ್ತು ಶಾಮಣ್ಣನವರ ತೋಟದಲ್ಲಿ ಸುತ್ತಾಡುತ್ತಿದ್ದಾಗ ಎಲ್ಲೆಲ್ಲೂ ಪಾಮ್ ಮರಗಳ ಕಾಂಡಗಳು ಬಿದ್ದದ್ದು ಕಂಡುಬಂತು. ಅಲ್ಲಿಯತನಕ ನಾನು ಪಾಮ್ ಆಯಿಲ್ ಮರಗಳನ್ನು ನೋಡಿರಲಿಲ್ಲ. ಚೂಪಾದ ಚಿಪ್ಪುಗಳನ್ನು ಜೋಡಿಸಿದಂತಿದ್ದ ಆ ಕಾಂಡಗಳು ಕೆರೆ ಪಕ್ಕದಲ್ಲಿ ಒಂದಿಷ್ಟು ಅಲ್ಲಾಡದೆ ಬಿದ್ದಿರುವ ಮೊಸಳೆಗಳಂತೆ ಕಾಣಿಸುತ್ತಿದ್ದವು. “ಇದೇನು ಶಾಮಣ್ಣನವರೇ?” ಎಂದು ಕೇಳಿದೆ. ಆಗ ಅವರು ತಮ್ಮ ಪಾಮ್ ಆಯಿಲ್ ಆಂದೋಲನದ ಬಗ್ಗೆ ನಗುನಗುತ್ತಲೇ ಹೇಳಿದರು.

ಏನಾಗಿತ್ತೆಂದರೆ ಅದಕ್ಕೂ ಮುನ್ನ ಭದ್ರಾವತಿಯಲ್ಲಿ ಅದ್ಯಾರೋ ಒಬ್ಬರು ಪಾಮ್ ಆಯಿಲ್ ಕಾರ್ಖಾನೆಯನ್ನು ತೆರೆದು ಸುತ್ತಮುತ್ತಲಿನ ರೈತರಿಗೆ ಪಾಮ್ ಮರಗಳನ್ನು ಬೆಳೆಯುವಂತೆ ಉತ್ತೇಜಿಸಿದ್ದರು. ಅಷ್ಟೇ ಅಲ್ಲ, ಕಾರ್ಖಾನೆಯವರು ತೋಟಗಳಿಗೆ ಬಂದು ಸಂಗ್ರಹಿಸಲಾದ ಪಾಮ್ ಹಣ್ಣುಗಳಿಗೆ ಅವತ್ತೇ ಚೆಕ್‌ಗಳನ್ನೂ ನೀಡಲಾರಂಭಿಸಿದರು. ಅದನ್ನು ಕಂಡು ಶಾಮಣ್ಣ ಚಕಿತರಾದರು. ರೈತರ ಎಲ್ಲಾ ಸಮಸ್ಯೆಗಳಿಗೆ ಪಾಮ್ ಹಣ್ಣುಗಳೇ 'ಸಂಜೀವಿನಿ' ಎಂದು ಅವರು ಭಾವಿಸಿದರು. ಶಾಮಣ್ಣ ಎಂತಹವರೆಂದರೆ ಅದು ರೈತ ಚಳವಳಿಯಾಗಲಿ, ಶೌಚಾಲಯ ಚಳವಳಿಯಾಗಲಿ, ಮತ್ತಿನ್ನೇನೋ ಆಗಲಿ, ಒಂದು ಸಾರಿ ಒಂದು ವಿಷಯ ಅವರ ತಲೆ ಹೊಕ್ಕರೆ ಸಾಕು ಅವರು ಕಾರ್ಯಪ್ರವೃತ್ತವಾಗದೆ ಸುಮ್ಮನೆ ಕೂರುವವರಲ್ಲ. ಹಾಗಾಗಿ ಅವರು ಸ್ವತಃ ಪಾಮ್ ಸಸಿಗಳನ್ನು ನೆಟ್ಟರಲ್ಲದೆ ಇತರೆ ರೈತರೂ ಅದನ್ನು ಬೆಳೆಯುವಂತೆ ಒತ್ತಾಯಿಸಿದರು. ಪರಿಣಾಮವಾಗಿ ಸುತ್ತಮುತ್ತಲೂ ಹಲವಾರು ಪಾಮ್ ತೋಟಗಳು ಎದ್ದುನಿಂತವು. ಆದರೆ ಅದೇನೇನೋ ಸಮಸ್ಯೆಯಾಗಿ ರೈತರಿಂದ ಪಾಮ್ ಹಣ್ಣನ್ನು ಖರೀದಿಸುತ್ತಿದ್ದ ಕಾರ್ಖಾನೆಯೇ ಬಂದ್ ಆಯಿತು. ಇನ್ನು ಪಾಮ್ ಬೆಳೆದು ಏನು ಪ್ರಯೋಜನ? ವಿಧಿ ಇಲ್ಲದೆ ಶಾಮಣ್ಣ ಸೇರಿದಂತೆ ಎಲ್ಲ ರೈತರೂ ಪಾಮ್ ಮರಗಳನ್ನು ಕೆಡವಿ ಅಡಿಕೆ ಸಸಿಗಳನ್ನು ನೆಟ್ಟಿದ್ದರು.

"ಈಗ ಈ ಕಾಂಡಗಳನ್ನು ಏನು ಮಾಡುತ್ತೀರಿ?" ಎಂದು ಕೇಳಿದೆ, "ಇನ್ನೇನು ಮಾಡೋದು, ಅವು ಅಲ್ಲೇ ಕೊಳೆತು ಗೊಬ್ಬರವಾಗಬೇಕಷ್ಟೇ" ಎಂದು ಶಾಮಣ್ಣ ನಕ್ಕರು. ಸೋತ ಪ್ರಯೋಗದ ಬಗ್ಗೆ ಅವರಲ್ಲಿ ಕಿಂಚಿತ್ತೂ ಬೇಸರ ಇದ್ದಂತಿರಲಿಲ್ಲ.

ಶಾಮಣ 'ಮೂಡ್'ನಲ್ಲಿದ್ದರೆ ಸಖತ್ ಮಜಾ ಕೊಡುತ್ತಾರೆ. ಮೂಡ್‌ನಲ್ಲಿಲ್ಲದಿದ್ದರೆ ಅವರು ಮಾತನ್ನೇ ಆಡುವುದಿಲ್ಲ. ನಮ್ಮ ಅದೃಷ್ಟಕ್ಕೆ ಅವತ್ತು ಶಾಮಣ್ಣ 'ಮೂಡ್'ನಲ್ಲಿದ್ದರು. ಅಪ್ಪ ಅವರ ತೋಟಕ್ಕೆ ಭೇಟಿ ಕೊಟ್ಟಾಗ ಆದದ್ದನ್ನೆಲ್ಲ ಹೇಳುತ್ತಾ ನಮ್ಮಿಬ್ಬರನ್ನು ನಗಿಸಿದರು. ಜೊತೆಗೆ ತಮ್ಮ ಸರೋದ್ ಅನ್ನೂ ಮರೆಯದೆ ನಮ್ಮ ಮುಂದೆ ನುಡಿಸಿದರು.

೨೦೦೮ರ ವಿಧಾನಸಭಾ ಚುನಾವಣೆಗಳು ಬಂದವು. ತೀರ್ಥಹಳ್ಳಿಯಲ್ಲಿ ಬಿಜೆಪಿ ಅಭ್ಯರ್ಥಿಯಾಗಿ ಆರಗ ಜ್ಞಾನೇಂದ್ರ ಸ್ಪರ್ಧಿಸಿದರೆ ಕಾಂಗ್ರೆಸ್ ಅಭ್ಯರ್ಥಿಯಾಗಿ ಕಿಮ್ಮನೆ ರತ್ನಾಕರ್‌ಗೆ ಟಿಕೆಟ್ ಸಿಕ್ಕಿತ್ತು. ನಮ್ಮೆಲ್ಲರಿಗೂ ಕಿಮ್ಮನೆ ಗೆಲ್ಲಬೇಕೆಂಬ ಆಶಯ ಇತ್ತು. ಆದರೆ ಈ ಚುನಾವಣೆಯಲ್ಲಿ ದೇವೇಗೌಡರು ತಮ್ಮ ಜನತಾ ದಳದ ಅಭ್ಯರ್ಥಿಯಾಗಿ ಗೋಪಾಲಗೌಡರ ಪುತ್ರ ರಾಮ್‌ಮನೋಹರ್ ಅವರನ್ನು ಕಣಕ್ಕೆ ಇಳಿಸಿದರು. ನಮಗೆಲ್ಲ ಒಂದೇ ಆತಂಕ; ರಾಮ್‌ಮನೋಹರ್ ಮತ್ತು ಕಿಮ್ಮನೆ ನಡುವೆ ಜಾತ್ಯಾತೀತ ಮತಗಳು ಹಂಚಿಹೋಗಿ ಮತ್ತೆ ಎಲ್ಲಿ ಆರಗ ಜ್ಞಾನೇಂದ್ರ ಗೆದ್ದುಬಿಡಬಹುದೋ

ಎಂಬ ಆತಂಕ ಅದು. ಅಂತಹ ಸಮಯದಲ್ಲಿ ಶಾಮಣ್ಣನವರು ಕಾರ್ಯಾಚರಣೆಗೆ ಇಳಿದರು. ಕಿಮ್ಮನೆ ಪರವಾಗಿ ಅಲ್ಲ, ಬದಲಾಗಿ ತಮ್ಮ ಹಳೆ ಗುರು ಗೋಪಾಲಗೌಡರ ಪುತ್ರನ ಪರವಾಗಿ. ಕ್ರಾಂತಿಕಾರಿ ಕವಿ ಹಾಡುಗಾರ ಗದ್ದರ್ ಶೈಲಿಯಲ್ಲಿ ಶಾಮಣ್ಣನವರು ತಮ್ಮ ಕಾಲುಗಳಿಗೆ ಗೆಜ್ಜೆಗಳನ್ನು ಕಟ್ಟಿಕೊಂಡು, ಕತ್ತಿನ ಸುತ್ತ ಒಂದು ಕೊಳಲನ್ನು ನೇತು ಹಾಕಿಕೊಂಡು, ಕೈಯಲ್ಲಿ ಮೌತ್ ಆರ್ಗನ್ ಹಿಡಿದು ತೀರ್ಥಹಳ್ಳಿಯಲ್ಲಿ ಹಾಡುತ್ತ ಕುಣಿಯುತ್ತಾ ರಾಮ್ ಮನೋಹರ್ ಪರ ಪ್ರಚಾರದಲ್ಲಿ ತೊಡಗಿದರು. ಒಂದು ದಿನ ಹೀಗೆ ಅವರು ಪ್ರಚಾರ ಮಾಡುತ್ತಿದ್ದ ಸಂದರ್ಭದಲ್ಲಿ ಚಂದ್ರೇಗೌಡರು ಒಂದು ಫೋನ್‌ಬೂತ್‌ನಿಂದ ನನಗೆ ಫೋನ್ ಮಾಡಿ "ಶಾಮಣ್ಣನವರು ಮಾತನಾಡುತ್ತಾರಂತೆ" ಎಂದು ಅವರಿಗೆ ಫೋನ್ ಕೊಟ್ಟರು. "ಹೇಗೆ ನಡೆಯುತ್ತಿದೆ ಶಾಮಣ್ಣರೆ ಚುನಾವಣೆ ತಯಾರಿಗಳು. ಯಾರು ಗೆಲ್ಲಬಹುದು ಅನ್ನಿಸುತ್ತೆ ನಿಮಗೆ?" ಎಂದು ಕೇಳಿದೆ. ಅದಕ್ಕೆ ಅವರು "ನಮ್ಮ ಗೋಪಾಲಗೌಡರ ಮಗ ಭಾರೀ ಅಂತರದಿಂದ ಗೆಲ್ತಾನೆ" ಎಂದು ಭವಿಷ್ಯ ನುಡಿದಿದ್ದರು. ಅಷ್ಟೇ ಅಲ್ಲ, ಫೋನ್ ಮೂಲಕವೇ ತಾವು ಪ್ರಚಾರದಲ್ಲಿ ಹಾಡುತ್ತಿದ್ದ ಒಂದೆರಡು ಹಾಡುಗಳನ್ನೂ ಹಾಡಿದರು. ಶಾಮಣ್ಣನವರಿಗೆ ಚುನಾವಣಾ ರಾಜಕೀಯದ ಅರಿವು ಇಲ್ಲದಿದ್ದರೂ ಅವರ ಉತ್ಸಾಹ ಮತ್ತು ಗುರುಗಳ ಬಗ್ಗೆ ಇರುವ ಬದ್ಧತೆ ಕಂಡು ಬೆರಗಾಗಿದ್ದೆ. ಕೆಲ ವರ್ಷಗಳ ಹಿಂದೆ ತೀರ್ಥಹಳ್ಳಿಯಲ್ಲಿ ಪ್ರಗತಿಪರ ರೈತರೊಬ್ಬರು ಸಾವಿಗೀಡಾದರು. ಅವರ ಕುಟುಂಬದವರು ತಿಥಿ ಎಂಬ ಮೌಢ್ಯಾಚರಣೆಗೆ ಹಣವನ್ನು ಪೋಲು ಮಾಡುವ ಬದಲು ರೈತ ಸಮುದಾಯಕ್ಕೆ ನೆರವಾಗಬಲ್ಲ 'ಪ್ರಸ್ತುತ ಚಳವಳಿ ಮತ್ತು ಸಮಸ್ಯೆಗಳನ್ನು' ಕುರಿತು ಒಂದು ವಿಚಾರಸಂಕಿರಣವನ್ನು ಹಮ್ಮಿಕೊಂಡು ನನ್ನನ್ನೂ ಸೇರಿದಂತೆ ಹಲವರನ್ನು ಆಹ್ವಾನಿಸಿದರು. ಅಂದಿನ ಸಭೆಗೆ ರೈತ ಹೋರಾಟಗಳ ಮುಂಚೂಣಿ ಯಲ್ಲಿದ್ದ ಶಾಮಣ್ಣನವರೂ ಬಂದಿದ್ದರು. ಆದರೆ ಸಭೆಯನ್ನುದ್ದೇಶಿಸಿ ಮಾತನಾಡಲು ಅಲ್ಲ. ಬದಲಾಗಿ ಫೋಟೋಗ್ರಾಫರ್ ಆಗಿ! ಅವರು ಅವತ್ತು ತಮ್ಮ ಕ್ಯಾಮೆರಾ ಹಿಡಿದು ಫೋಟೋಗಳನ್ನು ಕ್ಲಿಕ್ಕಿಸಿದ್ದೇ ಕ್ಲಿಕ್ಕಿಸಿದ್ದು.

ಸಭೆಯ ನಂತರ ನನ್ನನ್ನು ತಮ್ಮ ಕಾರಿನಲ್ಲಿ ಕೂರಿಸಿಕೊಂಡ ಶಾಮಣ್ಣ ಕಡಿದಾಳಿನಲ್ಲಿ ತಮ್ಮ ತಂದೆ ಕಟ್ಟಿಸಿದ್ದ ಮತ್ತು ಈಗ ಅವರ ಸಹೋದರ ಪ್ರಕಾಶ್ ಅವರ ಕುಟುಂಬ ವಾಸಿಸುತ್ತಿರುವ ಮನೆಗೆ ಕರೆದುಕೊಂಡು ಹೋದರು. ಅವತ್ತು ಸಣ್ಣಗೆ ಮಳೆ ಬೀಳುತ್ತಿತ್ತು. ಮನೆಯ ಸುತ್ತಲೂ ಭತ್ತದ ಹೊಲಗಳು ಕಂಗೊಳಿಸುತ್ತಿದ್ದವು. ದೂರದಲ್ಲಿದ್ದ ಬೆಟ್ಟಗಳ ಹತ್ತಿರ ಮನಮೋಹಕ ಮೋಡಗಳು. ಆ ಹಳೆ ಮನೆಯನ್ನು ಆದಷ್ಟೂ ರಕ್ಷಿಸುತ್ತಾ ಅವಶ್ಯಕತೆಗೆ ಸೂಕ್ತವಾಗುವಂತೆ ಮಾರ್ಪಾಡುಗಳನ್ನು ಮಾಡಿಕೊಂಡಿದ್ದರೂ ಆ ಮನೆ ತುಂಬಾ ಚಂದವಾಗಿದೆ; ಅದರಲ್ಲಿ ವಾಸಿಸುವ ಜನರ ಅಭಿರುಚಿಯಂತೆ.

ಅವತ್ತು ಆ ಮನೆಯ ಸುತ್ತಮುತ್ತಲಿನ ದೃಶ್ಯ ನನಗೆ ಮಲೆನಾಡಿನ ಸಕಲ ಸೌಂದರ್ಯವನ್ನೂ ಕಟ್ಟಿಕೊಟ್ಟಿದ್ದರಿಂದಲೋ ಏನೋ ಇವತ್ತಿಗೂ ಅದು ನನ್ನ ಕಣ್ಣಿಗೆ ಕಟ್ಟಿದಂತಿದೆ.

ಆಮೇಲೆ ನಾವಿಬ್ಬರೂ ತೀರ್ಥಹಳ್ಳಿಯಲ್ಲಿರುವ ಶಾಮಣ್ಣರ ಮತ್ತೊಬ್ಬ ಸಹೋದರ ದಯಾನಂದ ಅವರ ಮನೆಗೆ ಹೋದೆವು. ಅಲ್ಲೊಂದಿಷ್ಟು ಹೊತ್ತು ಹರಟೆ ಹೊಡೆದ ನಂತರ ಶಿವಮೊಗ್ಗೆಯತ್ತ ನಮ್ಮ ಸವಾರಿ ಸಾಗಿತು. ಅವತ್ತು ನಮ್ಮ ಸುತ್ತಾಟ ಹೆಚ್ಚಾಗಿದ್ದರಿಂದ ಮತ್ತು ಶಾಮಣ್ಣನವರು ನನಗಿಂತ ಹಿರಿಯರಾದ್ದರಿಂದ ಅವರಿಗೆ ಸುಸ್ತಾಗಿರಬೇಕೆಂದು "ನಾನೇ ಕಾರ್ ಡ್ರೈವ್ ಮಾಡಲೆ?" ಎಂದು ಕೇಳಿದೆ. "ಯಾಕೆ?" ಅಂದರು ಶಾಮಣ್ಣ. ಆಗ ಅವರ ಇನ್ನೊಂದು ವ್ಯಾಮೋಹದ ಬಗ್ಗೆ ನೆನಪಾಗಿ "ವಾಹನಗಳ ಬಗ್ಗೆ ನಿಮಗೂ ಮತ್ತು ತೇಜಸ್ವಿಗೂ ಇದ್ದ ಆಸಕ್ತಿ ಗೊತ್ತಿದ್ದೂ ಹೋಗಿ ಹೋಗಿ ನಿಮ್ಮನ್ನು ಕೇಳುತ್ತಿದ್ದೇನಲ್ಲ! ನೀವೇ ಡ್ರೈವ್ ಮಾಡಿ" ಎಂದು ನಕ್ಕೆ. ಶಾಮಣ್ಣ ಯುವಕನೊಬ್ಬನ ಉತ್ಸಾಹದಲ್ಲಿ ಕಾರ್ ಡ್ರೈವ್ ಮಾಡುತ್ತಾ ಸಾಗಿದರು. ಕೆಲ ದಿನಗಳ ಹಿಂದೆಯಷ್ಟೇ ಗಣೇಶ ಹಬ್ಬ ಬಂದು ಹೋಗಿತ್ತು. ಆದ್ದರಿಂದ ದಾರಿಯಲ್ಲಿ ಹಲವಾರು ಗುಂಪುಗಳು ಗಣೇಶನ ವಿಗ್ರಹಗಳನ್ನು ವಿಸರ್ಜನೆಗೆ ತೆಗೆದುಕೊಂಡು ಹೋಗುತ್ತಿದ್ದರು. ಅಂತಹ ಒಂದು ಗುಂಪಿನ ಮುಂದೆ ಹಲವು ಯುವಕರು ಮೈಗೆಲ್ಲ ಕಪ್ಪು ಬಣ್ಣ ಬಳಿದುಕೊಂಡು ಕುಣಿಯುತ್ತಿದ್ದರು. ಅಂತಹ ದೃಶ್ಯವನ್ನು ನಾನು ಅಲ್ಲಿಯತನಕ ನೋಡಿರಲಿಲ್ಲ. ಶಾಮಣ್ಣ ಕಾರ್ ಅನ್ನು ನಿಲ್ಲಿಸಿ "ಅದು ಇಲ್ಲಿನ ಬುಡಕಟ್ಟೊಂದರ ಸಂಪ್ರದಾಯ. ಅವರು ಅಡಿಕೆ ಸಿಪ್ಪೆಗಳನ್ನು ಸುಟ್ಟ ನಂತರ ಸಿಕ್ಕ ಬೂದಿಯಿಂದ ಆ ಕಪ್ಪುಬಣ್ಣವನ್ನು ತಯಾರಿಸುತ್ತಾರೆ. ಹಬ್ಬ ಹರಿದಿನಗಳಲ್ಲಿ ಅದನ್ನು ಮೈಗೆಲ್ಲ ಬಳಿದುಕೊಂಡು ಕುಣಿಯುತ್ತಾರೆ. ಆ ಬಣ್ಣವನ್ನು ತೊಳೆದುಕೊಳ್ಳುವುದೇ ಒಂದು ದೊಡ್ಡ ಸಮಸ್ಯೆ. ಆದ್ದರಿಂದ ಈಗೀಗ ಯುವಕರು ಅದನ್ನು ಹಚ್ಚಿಕೊಳ್ಳಲು ನಿರಾಕರಿಸುತ್ತಿದ್ದಾರೆ" ಎಂದು ವಿವರಿಸಿದ ನೆನಪು. ನನ್ನನ್ನು ಆ ಕಪ್ಪು ಬಣ್ಣವನ್ನು ಬಳಿದುಕೊಂಡಿದ್ದ ಯುವಕರ ನಡುವೆ ನಿಲ್ಲಿಸಿದ ಶಾಮಣ್ಣ ತಮ್ಮ ಕ್ಯಾಮೆರಾದಲ್ಲಿ ಅದನ್ನು ಸೆರೆಹಿಡಿದಿದ್ದರು.

ಶಾಮಣ್ಣನವರಿಗೆ ಸರೋದ್ ಕಲಿಸಿದ ಗುರು ಅಲಿ ಅಕ್ಬರ್ ಖಾನ್ ಆದರೂ ಅವರಿಗೆ ಸರೋದ್ ಪಂಡಿತ ರವಿಶಂಕರ್ ಅವರ ಪರಿಚಯವೂ ಇತ್ತು. ಮಾತ್ರವಲ್ಲ, ರವಿಶಂಕರ್ ಅವರ ಮೊದಲ ಪತ್ನಿ ಅನ್ನಪೂರ್ಣಾದೇವಿ ಅವರ ಹತ್ತಿರವೂ ಅವರು ಕೆಲ ಸಮಯ ಸಂಗೀತ ಅಭ್ಯಾಸ ಮಾಡಿದ್ದರು. ಪಂಡಿತ್ ರವಿಶಂಕರ್ ಅವರು ೨೦೧೩ರಲ್ಲಿ ತೀರಿಕೊಂಡಾಗ ಅವರು ಅನ್ನಪೂರ್ಣಾರಿಗೆ ಕೊಟ್ಟ ಸಮಸ್ಯೆಗಳು, ನೋವುಗಳು ಇತ್ಯಾದಿಗಳನ್ನು ಕುರಿತು ನನ್ನ ಕಂಡಹಾಗೆ ಅಂಕಣದಲ್ಲಿ ಬರೆದಿದ್ದೆ.

ಅದನ್ನು ಓದಿದ ಶಾಮಣ್ಣನವರು ನನಗೆ ಫೋನ್ ಮಾಡಿ "ಅಯ್ಯೋ, ಅನ್ನಪೂರ್ಣ ಅವರು ನನಗೂ ಗುರುಗಳಾಗಿದ್ದವರು. ಆದರೆ ಅವರು ತಮ್ಮ ಜೀವನದಲ್ಲಿ ಇಷ್ಟೆಲ್ಲಾ ಕಷ್ಟಗಳನ್ನು ಎದುರಿಸಿದ್ದಾರೆ ಎಂದು ನನಗೆ ಗೊತ್ತೇ ಇರಲಿಲ್ಲ" ಎಂದು ಬೇಸರ ಪಟ್ಟುಕೊಂಡಿದ್ದರು.

ಶಾಮಣ್ಣ ಇವತ್ತಿಗೂ ರೈತ ನಾಯಕ ಮಾತ್ರವಲ್ಲ, ಅವರು ಈಗಲೂ ಸಂಗೀತದ ಅಪ್ಪಟ ಅಭಿಮಾನಿ ಕೂಡ. ಎಲ್ಲಾದರೂ ಖ್ಯಾತ ಸಂಗೀತಗಾರರ ಗೋಷ್ಠಿ ಇದ್ದರೆ ಅಲ್ಲಿಗೆ ಶಾಮಣ್ಣ ತಪ್ಪದೇ ಹಾಜರು. ಭಗವತಿಕೆರೆಯಲ್ಲಿ ಅವರು ಈ ಹಿಂದೆ ಮಾಡಿದ್ದ ಶೌಚಾಲಯ ಆಂದೋಲನ ವರ್ಕ್‌ಔಟ್ ಆಗಿರಲಿಲ್ಲ ನಿಜ. ಆದರೆ ಅದಾದ ಹಲವು ವರ್ಷಗಳ ನಂತರ ಆ ಊರಿನವರೇ ಬಂದು "ನನ್ನ ಮಗನಿಗೆ ಹೆಣ್ಣು ಕೊಡಲು ಜನ ಒಪ್ಪುತ್ತಿಲ್ಲ, ಯಾಕೆಂದರೆ ನಮ್ಮ ಮನೆಯಲ್ಲಿ ಶೌಚಾಲಯ ಇಲ್ಲ" ಎಂದು ಗೋಗರೆದಾಗ ಶಾಮಣ್ಣನಿಗೆ ಆದ ಸಂತೋಷ ಅಷ್ಟಿಷ್ಟಲ್ಲ. ಇತ್ತೀಚೆಗೆ ಹೆಗ್ಗೋಡು ಪ್ರಸನ್ನ ಅವರು ಬದನವಾಳುವಿನಲ್ಲಿ ಹೋರಾಟ ಹಮ್ಮಿಕೊಂಡಾಗ ಅಲ್ಲಿಗೂ ಎಂದಿನ ಉತ್ಸಾಹದೊಂದಿಗೆ ಹೋದ ಶಾಮಣ್ಣ ಅಲ್ಲೊಂದು ಪರಿಸರ ಸ್ನೇಹಿ ಶೌಚಾಲಯವನ್ನು ನಿರ್ಮಿಸಿ ಬಂದಿದ್ದಾರೆ.

ಶಾಮಣ್ಣನವರಿಗೆ ಈಗ ೭೫ರ ಹರೆಯ. ಆದರೇನಂತೆ ಅಪಾರ ಜೀವನೋತ್ಸಾಹ ವನ್ನು ಹೊಂದಿರುವ ಶಾಮಣ್ಣ ಈಗಲೂ ಚಿರಯೌವ್ವನಿಗ ಎಂದರೆ ತಪ್ಪಲ್ಲ!

ಶಾಮಣ್ಣನವರ ನಾಟಕ...

ಬಿ. ಚಂದ್ರೇಗೌಡ

ಕಡಿದಾಳು ಶಾಮಣ್ಣನವರನ್ನು ನಾನು ಮೊದಲು ನೋಡಿದ್ದು ಕೆಮ್ಮಣ್ಣುಗುಂಡಿಯಲ್ಲಿ. ಅದು ಎರಡು ಐತಿಹಾಸಿಕ ಘಟನೆಗಳು ಸಂಭವಿಸಿದ ಸಂದರ್ಭ ವಾಗಿತ್ತು.

ಪ್ರೊ. ಬಿ. ಕೃಷ್ಣಪ್ಪನವರ ಮುಂದಾಳತ್ವದಲ್ಲಿ ದಲಿತ ಸಂಘರ್ಷ ಸಮಿತಿಯ ಕಾರ್ಯಕರ್ತರು ಚಂದ್ರಗುತ್ತಿ ಯಲ್ಲಿ ನಡೆಯುತ್ತಿದ್ದ ಬೆತ್ತಲೆ ಸೇವೆ ತಡೆಯಲು ಹೋಗಿ, ದಿಗ್ವಿಜಯ ಮುಗಿಸಿಕೊಂಡು ಕೆಮ್ಮಣ್ಣುಗುಂಡಿಗೆ ಬಂದಿ ದ್ದರು. ಅದೇ ಸಮಯದಲ್ಲಿ ದೇವನೂರು ಮಹಾದೇವರ ಉಪಸ್ಥಿತಿಯಲ್ಲಿ, ಅಂಬೇಡ್ಕರ್, ಲೋಹಿಯಾ, ಗಾಂಧಿ ಮತ್ತು ಮಾರ್ಕ್ಸ್ ವಿಚಾರ ಸಂಕಿರಣ ನಡೆದಿತ್ತು. ಈ ಸೆಮಿನಾರಿಗಾಗಿ ಶಂಕರ ಲಾಳಾಪುರ, ಸೀನೋಜಿ, ಸುಚೇತನ ಸ್ವರೂಪ, ಎಂ.ಡಿ. ಗಂಗಯ್ಯ ಬಹಳವಾಗಿ ಶ್ರಮಿಸಿದ್ದರು. ಹೊಸಕಾನ್ ಎಸ್ಟೇಟಿನ ಮಾಲೀಕ ರೊಬ್ಬರು ಮೂರು ದಿನದ ಸೆಮಿನಾರಿಗಾಗಿ ಹಣ ನೀಡಿದ್ದರು. ನಾಡಿನ ಮೂಲೆ ಮೂಲೆಯ ದಸಂಸದ ಯುವಕರು ಬಂದಿದ್ದರು. ಮೈಸೂರಿನಿಂದ ರಾಮದಾಸ್ ಆಗಮಿಸಿ ಮೂರು ದಿನವೂ ಇದ್ದರು. ಸಂಜೆಯ ಇಳಿ ಹೊತ್ತಿನಲ್ಲಿ ಕೆಮ್ಮಣ್ಣುಗುಂಡಿ ಹುಲ್ಲುಹಾಸಿನ ಮೇಲೆ

ಕುಳಿತ ಎಲ್ಲರೂ, ಅದಾಗ ತಾನೇ ಚಂದ್ರಗುತ್ತಿ ಯಿಂದ ಬಂದ ಕೃಷ್ಣಪ್ಪನವರಿಂದ ಅರಾಜಕತೆಯಲ್ಲಿ ನಡೆದ ಅಮಾನುಷತೆಯ ವೃತ್ತಾಂತವನ್ನು ಕೇಳುತ್ತಿದ್ದರು. ಚಂದ್ರಗುತ್ತಿಯಿಂದ ಕಾಪಾಡಿಕೊಂಡು ತಂದಿದ್ದ ಕ್ಯಾಮರಾದಿಂದ, ಶಾಮಣ್ಣನವರು ಪೋಟೋ ತೆಗೆಯುತಿದ್ದರು.

ಆ ನಂತರ ಬಿಡಿಬಿಡಿಯಾಗಿ ಹಲವು ನಾಯಕರ ಪೋಟೋ ತೆಗೆದು, ಹೊಸ ದಂಪತಿಗಳಂತೆ ಕಂಡುಬಂದ ಸವಿತಾ ನಾಗಭೂಷಣರ ಪೋಟೋವನ್ನು ತೆಗೆದರು. ಮರುದಿನದ ಗೋಷ್ಠಿಯಲ್ಲಿ ರೈತ ಸಂಘದ ಹೋರಾಟ ಮತ್ತು ದಲಿತ ಸಂಘದ ಹೋರಾಟಗಳ ಉದ್ದೇಶ ಒಂದೇ ಆಗಿರುವ ಬಗ್ಗೆ ಹೇಳಿದರು. ದಲಿತ ಹೋರಾಟ ಗಾರರಿಗೆ ಶಾಮಣ್ಣ ಹೇಳುವ ಸೌಮ್ಯತೆಯೇನು ಕಾಣದೆ, ಅವರ ಮಾತಿಗೆ ಪೂರಕ ವಾದುದೇನೂ ವ್ಯಕ್ತವಾಗಲಿಲ್ಲ. ಅಂತೂ ಕೆಮ್ಮಣ್ಣುಗುಂಡಿ ಸೆಮಿನಾರು ಮುಕ್ತಾಯ ಗೊಂಡಿತು. ಅಂಥ ಸೆಮಿನಾರು ಮಾಡಿದ ಸಿ.ಪಿ. ಸುಂದರೇಶ್, ಗಂಗಯ್ಯ, ಶಂಕರ್ ಲಾಳಾಪುರ, ಸೀನೋಜಿ, ಡಾ. ತಾರಾನಾಥ್ ಮತ್ತು ಬಿ.ಕೃಷ್ಣಪ್ಪ ಇವರಾರೂ ಇಂದು ಬದುಕಿಲ್ಲ. ಆದರೂ ಕೆಮ್ಮಣ್ಣುಗುಂಡಿಯಲ್ಲಿ ಭಾಗವಹಿಸಿದ್ದ ಕಾರ್ಯಕರ್ತರು ತಮ್ಮ ಸಿದ್ಧಾಂತಗಳ ಕ್ಷಿತಿಜವನ್ನು ವಿಸ್ತರಿಸಿಕೊಂಡಿದ್ದಂತೂ ಸತ್ಯ.

ನಾನು ಚಿಕ್ಕಮಗಳೂರು ಜಿಲ್ಲೆಯಿಂದ ವರ್ಗವಾಗಿ ಶಿವಮೊಗ್ಗಕ್ಕೆ ಬಂದ ನಂತರ, ಬಾಲರಾಜ ಅರಸ್ ರಸ್ತೆಯಲ್ಲಿದ್ದ ದಿವಾಕರ ಹೆಗಡೆ ಪುಸ್ತಕದ ಅಂಗಡಿ 'ಕವಿಶೈಲ'ದಲ್ಲಿ ಶಾಮಣ್ಣ ಸಿಕ್ಕರು. ನಾಡಿನ ಸಾಂಸ್ಕೃತಿಕ ಪ್ರತಿಭಾವಂತರು, ಭೇಟಿಕೊಡಲೆಂದೇ ತೆರೆದಂತಿದ್ದ ಕವಿಶೈಲ ಪುಸ್ತಕದ ಅಂಗಡಿಗೆ ಬರದವರೇಯಿಲ್ಲ; ಅಂತಹ ಐತಿಹಾಸಿಕ ತಾಣದಲ್ಲಿ ಸಿಕ್ಕ ಶಾಮಣ್ಣನವರು, ಹೊಸ ಕ್ರಾಂತಿಯೊಂದಕ್ಕೆ ತಯಾರಿ ನಡೆಸಿದ್ದರು, ಅದನ್ನು ಕೇಳಿಯೇ ಹೊಟ್ಟೆ ತುಂಬಾ ನಕ್ಕೆವು.

ಹಳ್ಳಿಗಾಡಿನ ಶೌಚಾಲಯದ ಅಗತ್ಯವನ್ನು ವಿಧಾನಸೌಧದಲ್ಲಿ ಕುಳಿತವರಿಗೆ ಮನವರಿಕೆ ಮಾಡಿಕೊಡಲು, ಲಾರಿಯಲ್ಲಿ ಜನ ತೆಗೆದುಕೊಂಡು ಹೋಗಿ, ವಿಧಾನಸೌಧದ ಸುತ್ತ ಕಕ್ಕಸ್ಸು ಮಾಡಿಸಿಬಿಡುತ್ತೇನೆ. ಆ ವಾಸನೆಗೆ ಎಚ್ಚೆತ್ತುಕೊಂಡ ನಾಯಕರು ಹಳ್ಳಿಗಳಿಗೆ ಶೌಚಾಲಯ ಕಟ್ಟಿಸುವ ಕಡೆ ಗಮನ ಹರಿಸುತ್ತಾರೆಂದು ಹೇಳಿಕೊಂಡು ತಿರುಗುತ್ತಿದ್ದರು. ಶಾಮಣ್ಣನವರ ಈ ಅಪರೂಪದ ಚಳುವಳಿ ವಿಷಯವನ್ನು ನಾನು ಲಂಕೇಶ್‌ಗೆ ಬರೆದೆ. ಲಂಕೇಶ್ ನಕ್ಕು ಅದಕ್ಕೊಂದು ಟಿಪ್ಪಣಿ ಬರೆದು ಪ್ರಕಟಿಸಿದರು. ನಮ್ಮ ಭಾಗದ ಕೆಲಸ ಅಲ್ಲಿಗೆ ಮುಗಿಯಿತು. ಆದರೆ ಶಾಮಣ್ಣ ಹಿಡಿದ ಕೆಲಸದ ಬಗ್ಗೆ, ಗಂಭೀರವಾಗಿಯೇ ಯೋಚಿಸುತ್ತ, ಕೆನರಾ ಬ್ಯಾಂಕಿಗೆ ನುಗ್ಗಿ ಡಿವಿಜನಲ್ ಮ್ಯಾನೇಜರ್ ಉಪಾಧ್ಯಾಯರನ್ನ ಕಂಡು ಶೌಚಾಲಯದ ಲೋನನ್ನು ಕಕ್ಕಸ್ ಗೊಬ್ಬರ ಮಾಡಿ ಮಾರಿ ತೀರಿಸುವ ಭರವಸೆಯೊಂದಿಗೆ, ಲೋನ್ ಬಿಡುಗಡೆ ಮಾಡಿಸಿದರು. ಅದರಂತೆ ೩೩ ಶೌಚಾಲಯಗಳು ರೆಡಿಯಾದವು.

ಆನಂತರ ಕೆಲವು ಉಪಯೋಗಿಸಲ್ಪಟ್ಟರೆ, ಕೆಲವು ಹಾಳುಬಿದ್ದವು. ನಾನೊಮ್ಮೆ ಶಾಮಣ್ಣನವರನ್ನ ನೋಡಲು ಹೋದಾಗ, "ನೀವೀಗ ಕಕ್ಕಸ್ಸಿಗೆ ಲೋನು ಕೊಟ್ಟಂತಹ ಬ್ಯಾಂಕ್ ಮ್ಯಾನೇಜರ್, ನನ್ನ ಜೊತೆ ಬನ್ನಿ" ಎಂದು ಕರೆದುಕೊಂಡು ಹೋದರು. ಕಕ್ಕಸ್ಸು ರೂಮು ಉಪಯೋಗಿಸದೇ ಹಾಳು ಬಿಟ್ಟವರನ್ನ ಮಾತನಾಡಿಸುತ್ತ "ಅಮ್ಮಾ, ಬ್ಯಾಂಕ್ ಮ್ಯಾನೇಜರ್ ಬಂದವ್ರೆ, ಉತ್ತರ ಕೊಡಿ" ಎಂದರು. ನಾನು ಮ್ಯಾನೇಜರ್ ಗತ್ತಿನಲ್ಲೇ "ನೋಡಿ ನೀವು ಲೋನ್ ತಗೊಂಡು ಕಕ್ಕಸ್ಸು ಮನೆ ಕಟ್ಟಿದ ಮೇಲೆ, ಅದರೊಳಗೇ ಹೋಗಬೇಕು. ನಮ್ಮ ಲೋನು ತೀರೋದ್ಯಂಗೇ" ಎಂದು ಒಂದಿಬ್ಬರಿಗೆ ದಬಾಯಿಸಿದೆ. ಅವರ ಭಾಗಕ್ಕೆ ಇದೊಂದು ರೀತಿಯ ತಮಾಸೆಯ ಸಂಗತಿಯಾಗಿತ್ತು. ನಾವು ಎಲ್ಲಿ ಕಕ್ಕಸ್ಸು ಮಾಡಿದರೆ ಇವರಿಗೇನು ಎಂಬಂತಿತ್ತು ಅವರ ವರ್ತನೆ. ಎಲ್ಲಿ ಅಗತ್ಯವಿದೆಯೊ ಅಲ್ಲಿ ತಮ್ಮ ಚಳುವಳಿ ಮಾಡದ ಶಾಮಣ್ಣ, ಮೋಸ ಹೋಗಿದ್ದರು. ಆದರೂ ಛಲಬಿಡದ ತ್ರಿವಿಕ್ರಮನಂತೆ, ವಿಧಾನಸೌಧಕ್ಕೆ ನುಗ್ಗಿ, ಎಂ.ಪಿ. ಪ್ರಕಾಶರಿಗೆ ಈ ಕಾರ್ಯಕ್ರಮ ಅಂಟಿಸಿದರು. ಪ್ರಕಾಶ್ ಆ ಬಗ್ಗೆ ಅಧಿಕಾರಿಗಳ ಸಭೆ ಕರೆದು ಚರ್ಚಿಸುವಂತೆ ಆಜ್ಞಾಪಿಸಿದರು. ಆ ಸಭೆಗೆ ಶಾಮಣ್ಣ, ಕೆ.ಟಿ.ಗಂಗಾಧರ್ ಕರೆದುಕೊಂಡು ಹೋದಾಗ; ಆ ಮೀಟಿಂಗಿನ ಅದ್ದೂರಿ ಸಭಾಂಗಣ ಮತ್ತು ಅಧಿಕಾರಿಗಳ ಸೂಟುಬೂಟು ನೋಡಿ ದಂಗು ಬಡಿದು, "ಅರೆ, ಕಕ್ಕಸ್ ಮೀಟಿಂಗ್ ಇಷ್ಟೊಂದು ಅದ್ದೂರಿಯಾಗಿ ನಡಿಬೇಕೆ" ಎಂಬ ಉದ್ಗಾರ ತೆಗೆದರು. ಆದರೆ ಅದು ಮುಂದೆ ಗ್ರಾಮಪಂಚಾಯ್ತಿ ಕಾರ್ಯಕ್ರಮದಲ್ಲಿ ಸೇರಿತು.

ಶಾಮಣ್ಣ ಹಲವರಿಗೆ ಅಕ್ಷರಾಭ್ಯಾಸ ಮಾಡಿಸಿ, ಸಹಿ ಕಲಿಸಿದ್ದರು. ಗ್ರಾಮೀಣ ಭಾಗದ ಯಾವುದೇ ಸಮಸ್ಯೆಯ ಅರ್ಜಿ ಸರಕಾರಕ್ಕೆ ಹೋಗಬೇಕಾದರೆ, ಹೆಬ್ಬೆಟ್ಟಿನ ಬದಲು ರುಜು ಮಾಡಬೇಕು. ಅರ್ಜಿಯ ವಿಷಯದ ಸುತ್ತಲೂ ಹಳ್ಳಿಗರ ಸಹಿ ಮಾಡಿಸುತ್ತಿದ್ದರು. ಸಹಿ ಕಲಿತವನೊಬ್ಬ ಕೃಷ್ಣಪ್ಪ ಎಂದು ಸಹಿ ಮಾಡುತ್ತಿದ್ದವ, ಕೆಲವೇ ದಿನಗಳಲ್ಲಿ ಒತ್ತಕ್ಷರ ಮರೆತು ಬಿಟ್ಟ, ಶಾಮಣ್ಣ ಜೋರು ಮಾಡಿದ ನಂತರ ಮೂರು ಅಕ್ಷರದ ಕೆಳಗೆ ಲಾವೊತ್ತು ಸೇರಿಸುತ್ತಿದ್ದ. ಇನ್ನು ಭಗವತಿಕೆರೆ ಪ್ರಾಂತ್ಯದಿಂದ ಸಾರಾಯಿ ಓಡಿಸಿದ್ದು ಸಾಮಾನ್ಯ ಸಂಗತಿಯಲ್ಲ. ಅದೊಂದು ಯಶಸ್ವಿ ಚಳುವಳಿ. ಈ ಚಳುವಳಿಯಲ್ಲಿ ಶಾಮಣ್ಣ ಮಹಿಳಾ ಹೋರಾಟಗಾರ್ತಿಯರನ್ನ ತಯಾರು ಮಾಡಿ, ಮುಂದೆ ಅವರೆಲ್ಲಾ ಮೈದೊಳಲು ಗ್ರಾಮ ಪಂಚಾಯ್ತಿಗೆ ಆರಿಸಿ ಬರುವಂತೆ ಮಾಡಿ, ಕರ್ನಾಟಕದಲ್ಲಿ ಮೊತ್ತ ಮೊದಲ ಮಹಿಳಾ ಪಂಚಾಯ್ತಿ ಎಂಬ ಕೀರ್ತಿ ಬರುವಂತೆ ಮಾಡಿದರು.

ಒಮ್ಮೆ ಕೃಷಿ ಕಾರ್ಮಿಕನಾಗಿ ಕೆಲಸ ಮಾಡುತ್ತಿದ್ದ ಹುಡುಗನೊಬ್ಬ ಹುಡುಗಿ ಹಾರಿಸಿಕೊಂಡು ಬಂದ. ಅವರನ್ನು ರಕ್ಷಿಸಿದ ಶಾಮಣ್ಣ ದಂಪತಿಗಳು, ಕೂಡಲೇ ಮದುವೆ ಮಾಡುವ ಜವಾಬ್ದಾರಿ ಹೊತ್ತುಕೊಂಡರು. ಹುಡುಗಿಗೆ ೧೮

ವರ್ಷವಾಗಿರುವುದನ್ನು ಪತ್ತೆ ಹಚ್ಚಲು, ಡಾಕ್ಟರ್ ಸರ್ಟಿಫಿಕೇಟ್ ಬೇಕಿತ್ತು ಅದನ್ನು ಮಾಡಿಸಿದರು. ಈ ಘನ ಕಾರ್ಯಕ್ಕಾಗಿ ವೈದ್ಯರು ನಮ್ಮ ಜೇಬನ್ನು ನೋಡುವಾಗ "ನಮ್ಮ ಸಾಹೇಬ್ರು ಅಂಥೋರಲ್ಲ" ಎಂದು ಬಿಟ್ಟರು. ಇನ್ನುಳಿದ ಮಂತ್ರಮಾಂಗಲ್ಯ ಮದುವೆಯನ್ನು ಭಗವತಿಕೆರೆಯಲ್ಲಿ ಏರ್ಪಡಿಸಿದರು. ಶಿವಮೊಗ್ಗದ ನವಾಬ ಮಾಂಗಲ್ಯ ತಂದರೆ, ಗೆಳೆಯ ನಿಸ್ಸಾರ್ ಅಹಮದ್ ಹೂ-ಹಣ್ಣು ಇತ್ಯಾದಿ ಶುಭ ಕಾರ್ಯದ ಸಾಮಾಗ್ರಿ ತಂದರು. ಮದುವೆಯಾಯ್ತು. ಶ್ರೀದೇವಕ್ಕ ಬಂದವರಿಗೆಲ್ಲಾ ಎಲೆಯಡಿಕೆ ಕೊಟ್ಟರು ಮತ್ತು ಎಲ್ಲರೂ ಊಟಕ್ಕೆ ಮನೆಗೆ ಬನ್ನಿ ಎಂದು ಆಹ್ವಾನಿಸಿದರು.

ರೈತ ಸಂಘ ಭೂ ಸಂಬಂಧವಾದ ತನ್ನ ಬೇಡಿಕೆಯಿಟ್ಟುಕೊಂಡು ಹೋರಾಡುತ್ತಿತ್ತು. ಶಾಮಣ್ಣನವರು ಮಂತ್ರಮಾಂಗಲ್ಯ, ಶೌಚಾಲಯ, ಅನಕ್ಷರತೆ, ಪಾನನಿರೋಧ, ಇವೆಲ್ಲಾ ಸಮಸ್ಯೆಗಳನ್ನು ಕೈಗೆತ್ತಿಕೊಂಡು, ಇವೂ ಕೂಡ ರೈತ ಚಳುವಳಿಯ ಬಹು ಮುಖ್ಯ ಭಾಗವೆಂದು ಹೋರಾಡುತ್ತಿದ್ದರು. ಇವೆಲ್ಲಾ ಬೇರೆಯವರಿಗೆ ಹೋರಾಟವಾಗಿ ಕಂಡರೆ, ಶಾಮಣ್ಣನವರಿಗೆ ಬದುಕಿನ ಭಾಗವಾಗಿ ಕಾಣುತ್ತಿದ್ದವು.

ಇದ್ದಕ್ಕಿದ್ದಂತೆ ಅವರನ್ನ ರೈತ ಸಂಘದಿಂದ ತೆಗೆಯಲಾಯ್ತು. ಆಗ ಶಾಮಣ್ಣ "ನನ್ನನ್ನ ಹ್ಯಾಗೆ ತಗಿತರೆ" ಎಂದು ಬಹಳ ಅರ್ಥಪೂರ್ಣವಾಗಿ ಪ್ರತಿಕ್ರಿಯಿಸಿದ್ದರು. "ಶಾಮಣ್ಣನಂಥವರನ್ನ ರೈತ ಸಂಘ ಹೊರಹಾಕಿದ ಮೇಲೆ ಅದು ಉದ್ಧಾರಾಯ್ತದೇನ್ರಿ" ಎಂದು ತೇಜಸ್ವಿ ಪ್ರತಿಕ್ರಿಯಿಸಿದ್ದರು. ಆ ಸಮಯದಲ್ಲಿ ಶಾಮಣ್ಣ ಯಾರಲ್ಲೂ ಬಾಯಿಬಿಡದೆ ನೊಂದುಕೊಂಡದ್ದು ನಿಜ. ಅವರ ಬಗ್ಗೆ ಯೋಚಿಸುತ್ತ ರೈಲಿನಲ್ಲಿ ಹೋಗುತ್ತಿರಬೇಕಾದರೆ, ಶಾಮಣ್ಣನ ಬಗ್ಗೆ ಯಾಕೆ ನಾಟಕ ಬರೆಯಬಾರದು ಅನ್ನಿಸಿತು. ಬೆಂಗಳೂರು ತಲುಪುವಷ್ಟರಲ್ಲಿ ನಾಟಕದ ಕೊನೆಯ ದೃಶ್ಯ ರೂಪು ತಳೆದು ಆನಂತರ ಹಿಂದು ಮುಂದಾಗಿ ದೃಶ್ಯಜೋಡಣೆಗೊಂಡು ನಾಟಕ ರೆಡಿಯಾಯ್ತು. ಕಾಳೇಗೌಡ ನಾಗವಾರರು ಒತ್ತಾಯಿಸಿದ್ದರಿಂದ ರಂಗದ ಮೇಲೂ ಬಂದು ಮೆಚ್ಚುಗೆ ಪಡೆಯಿತು. ನಾಗೇಶ್‌ರವರ ಒತ್ತಾಯದಿಂದ ಮೊದಲ ಪ್ರದರ್ಶನವೇ ಬೆಂಗಳೂರಿನಲ್ಲಿ ನಡೆಯಿತು. ಆಗ ಪ್ರೊಫೆಸರ್ ನಂಜುಂಡಸ್ವಾಮಿಯವರು ಕ್ಯಾನ್ಸರ್‌ಗೆ ತುತ್ತಾಗಿ ಬೆಂಗಳೂರಿನ ಆಸ್ಪತ್ರೆಯಲ್ಲಿದ್ದರು. ಶಾಮಣ್ಣನವರ ನಾಟಕದ ಬಗ್ಗೆ ಕುತೂಹಲಗೊಂಡ ಅವರ ಮಗ ಪಚ್ಚೆ ಯಾರಿಗೂ ಕಾಣದಂತೆ ಬಂದು ನಾಟಕ ಶೂಟ್ ಮಾಡಿಕೊಂಡು ಹೋಗಿ ಪ್ರೊಫೆಸರರಲ್ಲಿ ತೋರಿದಾಗ "ನಾಟಕ ಚೆನ್ನಾಗಿದೆ. ಆದ್ರೆ ಇದನ್ನ ಬರೆದವರು ಪೂರ್ವಾಗ್ರಹಕ್ಕೆ ತುತ್ತಾಗಿದಾರೆ" ಎಂದರಂತೆ ಅದು ನಿಜ. ನಾವು ಪೂರ್ವಾಗ್ರಹಕ್ಕೆ ತುತ್ತಾಗಿದ್ದು ಸತ್ಯ ಸಂಗತಿ. ಅದನ್ನು ಸರಿಮಾಡಿಕೊಂಡು ನಂತರ ಪ್ರದರ್ಶಿಸಿದ ನಾಟಕವನ್ನು ರೈತ ಸಂಘದ ಲೀಡರುಗಳೇ ಮೆಚ್ಚಿಕೊಂಡರು. ಜೀವಿತವಾಗಿರುವ ವ್ಯಕ್ತಿಯೊಬ್ಬರ ಬಗ್ಗೆ ನಾಟಕ ಬರೆದು, ಅವರನ್ನು ಕೂಡ ತಂದು ಕೂರಿಸಿಕೊಂಡು ನಾಟಕ ಆಡಿದ್ದು ನಮ್ಮದೂ ಒಂದು ದಾಖಲೆ.

ಶಾಮಣ್ಣ ಎಂಬ ಅದಮ್ಯ ಸಂಭ್ರಮ

ಎನ್.ಆರ್.ಸ್ನೇಹಾ

ಅಪ್ಪನಿಗೆ ರಕ್ತ ಸಂಬಂಧಿಗಳಿಗಿಂತ ಸ್ನೇಹಿತರೇ ಹೆಚ್ಚು ಹತ್ತಿರವಾಗಿದ್ದವರು. ಹಾಗಾಗಿ ನೆಂಟರಿಗಿಂತ ಸ್ನೇಹಿತರ ಮನೆಗೆ ಹೋಗುವುದು, ಸ್ನೇಹಿತರ ಕುಟುಂಬಗಳು ನಮ್ಮ ಮನೆಗೆ ಬರುವುದೇ ಅಭ್ಯಾಸ. ಅಪ್ಪ ಗಳಿಸಿದ್ದ ಅಪಾರ ಸ್ನೇಹಿತರ ಗುಂಪಿನ ಪ್ರೀತಿಯ ಗೆಳೆಯರಲ್ಲಿ ಶಾಮಣ್ಣ ಮುಖ್ಯರು. ಅಪ್ಪನ ವ್ಯಕ್ತಿತ್ವಕ್ಕೆ ಹೊಳಪು ಮೂಡಿಸಿದವರು. ನಮ್ಮಂತ ಮಕ್ಕಳ ಕಣ್ಣಲ್ಲಿ ಬೆರಗು ತುಂಬಿದವರೂ ಹೌದು. ಗೆಳೆಯರೆಲ್ಲ ಒಂದಿಲ್ಲೊಂದು ಹೋರಾಟದಲ್ಲಿ, ಸಭೆ, ಚರ್ಚೆಗಳೆಂದು ಆಗಿಂದಾಗ್ಗೆ ಸೇರುತ್ತಲೇ ಇದ್ದರು. ಹಾಗಾಗಿ ಸ್ನೇಹಿತರ ಗುಂಪಿನಲ್ಲಿ ಅವರ ಮಕ್ಕಳಾದ ನಾವೆಲ್ಲ ಒಟ್ಟು ಸೇರುತ್ತಲೇ ಬೆಳೆದವರು. ಆದ್ದರಿಂದ ನಮ್ಮ ಕುಟುಂಬಗಳ ಸಂಬಂಧ ಔಪಚಾರಿಕತೆಯನ್ನು ಮೀರಿದ್ದಾಗಿತ್ತು.

ಅಪ್ಪ ತನ್ನ ವಿದ್ಯಾರ್ಥಿ ಜೀವನದ ಅನುಭವಗಳನ್ನು ಸಮಯ ಸಿಕ್ಕಾಗಲೆಲ್ಲ ರಸವತ್ತಾಗಿ ಮೆಲಕು ಹಾಕುತ್ತಿದ್ದರು. ಆಗೆಲ್ಲ ನನ್ನನ್ನು ಹೆಚ್ಚು ಸೆಳೆಯುತ್ತಿದ್ದದ್ದು ಶಾಮಣ್ಣನ ಸೃಷ್ಟಿಯ ಸ್ವಾರಸ್ಯಕರ ಪ್ರಸಂಗಗಳೇ. ಅಂತಹ ಕತೆಗಳಿಗಾಗಿ ಮೈಯೆಲ್ಲ ಕಿವಿಯಾಗಿ ಕಾದು ಕೂತಿರುತ್ತಿದ್ದೆ.

ಎಷ್ಟು ಬಾರಿ ಕೇಳಿದರೂ ಮತ್ತೊಮ್ಮೆ ಕೇಳುವಾಗ ಅದೇ ಕುತೂಹಲ ಹುಟ್ಟಿಸುತ್ತಿದ್ದವು ಅವರ ಕುರಿತ ಕತೆಗಳು. ಟೆಲಿಫೋನ್ ಕೂಡ ಇಲ್ಲದ ಕಾಲವದು. ಕಾಗದ ಬರೆಯುವುದೇ ದೊಡ್ಡ ಸಂವಹನ ಸಾಧನ. ಶಾಮಣ್ಣ–ಶ್ರೀದೇವಿ ಆಂಟಿಯಿಂದ ಬರುತ್ತಿದ್ದ ಉಭಯ ಕುಶಲೋಪರಿಯ ಪೋಸ್ಟ್ ಕಾರ್ಡ್‌ಗಳು, ಅದರಲ್ಲಿನ ಶಾಮಣ್ಣನ ಹಸಿರು ಶಾಹಿಯ ಅಕ್ಷರಗಳು, ಎರಡು ಕುಟುಂಬದ ನಡುವಿನ ಆತ್ಮೀಯತೆಯನ್ನು ತುಳುಕಿಸುತ್ತಿದ್ದವು; ಗೆಳೆತನದ ಮಧುರ ಬಾಂಧವ್ಯವನ್ನು ಹಸುರಾಗಿಟ್ಟಿದ್ದವು.

ಮಕ್ಕಳು–ಮಹಿಳೆಯರು–ಗಂಡಸರು ಕುಕ್ಕರುಗಾಲಿನಲ್ಲಿ ಬಯಲು ಶೌಚಕ್ಕೆ ಕುಳಿತ ಮಾದರಿಯ ರೇಖಾಚಿತ್ರವನ್ನು ಶಾಮಣ್ಣ ತಮ್ಮ ಲೆಟರ್‌ಹೆಡ್‌ನಲ್ಲಿ ಬಳಸಿದ್ದರ ಬಗ್ಗೆ ಆಗ ನನಗೆ ಬಹಳ ಕುತೂಹಲ ಮೂಡಿತ್ತು. ತುಂಬಾ ತಮಾಷೆಯ ಸಂಗತಿಯಂತೆಯೂ ಕಂಡಿತ್ತು. ಆದರೆ, ಮುಂದೊಮ್ಮೆ ಅದರ ಹಿಂದಿನ ಗಂಭೀರ ಉದ್ದೇಶ, ಅಪಾರ ಕಾಳಜಿಯನ್ನು ಗ್ರಹಿಸಲು ಸಾಧ್ಯವಾದಾಗ ಶಾಮಣ್ಣ ನನ್ನ ದೃಷ್ಟಿಯಲ್ಲಿ ನಿಜ ಹೀರೋ ಆಗಿಬಿಟ್ಟರು. ಬಯಲು ಶೌಚದ ಗಂಭೀರತೆ, ಹೆಂಗಸರ ಸಂಕಟವನ್ನು ಎಲ್ಲರಿಗೂ, ಮುಖ್ಯವಾಗಿ ಅಧಿಕಾರಸ್ಥ ಜನರಿಗೆ ಮನವರಿಕೆ ಮಾಡಿಕೊಡಲು ಅವರು ಬಳಿಸಿದ ಈ ಮಾದರಿ ಎಲ್ಲರ ಮನಸ್ಸು ಕಲಕಿದ್ದು, ತಡವಾಗಿಯಾದರೂ ಉದ್ದೇಶದಲ್ಲಿ ಸಫಲವಾಗಿದ್ದು ಕಣ್ಣಮುಂದಿನ ಸತ್ಯ.

ಶಾಮಣ್ಣ, ಶ್ರೀದೇವಿ ಆಂಟಿ ಬಂದಾಗಲೆಲ್ಲ ಚಾರ್ವಾಕದಲ್ಲಿ ಸಹಜ ಸಂಭ್ರಮ ಮನೆಮಾಡುತ್ತಿತ್ತು. ಗೆಳೆಯರ ಹರಟೆ, ನಗು, ಕಳೆದ ದಿನಗಳ ಖುಷಿಯ ನೆನಪು, ಊಟೋಪಚಾರ ಎಲ್ಲದರಲ್ಲೂ ಸಡಗರ. ನನ್ನ ಮಂಜಮ್ಮಜ್ಜಿಗೂ ಶಾಮಣ್ಣ–ಶ್ರೀದೇವಿ ಅವರ ಭಗವತಿಕೆರೆಯ ತೋಟ, ಮನೆ ಅಚ್ಚುಮೆಚ್ಚು. ಅಜ್ಜಿ–ಮೊಮ್ಮಗಳ ನಮ್ಮ ಜೋಡಿ ಸವಾರಿ ಆಗೀಗ ರಜೆಯಲ್ಲಿ ಅಲ್ಲಿಗೆ ಹೋಗುತ್ತಿತ್ತು. ಅಂತಹ ಭೇಟಿ ಸಂದರ್ಭದಲ್ಲೊಮ್ಮೆ ಅವರ ಮನೆಯ ಎಮ್ಮೆ ಕರು ಹಾಕಿ, ತೀರಿ ಹೋಗಿತ್ತು. ಬಾಟಲಿ ಹಾಲಿನಿಂದ ಕರುವನ್ನು ಆರೈಕೆ ಮಾಡುತ್ತಿದ್ದ ಶ್ರೀದೇವಿ ಆಂಟಿ ಅದಕ್ಕೆ ಬಾಟಲಿ ಹಾಲುಣಿಸುವ ಸದವಕಾಶವನ್ನು ನನಗೂ ಕೊಟ್ಟರು. ನಾನು ಹೆಮ್ಮೆಯಿಂದ ಎಮ್ಮೆ ಕರುವಿಗೆ ಹಾಲುಣಿಸುತ್ತಿದ್ದ ಚಿತ್ರವನ್ನು ತಮ್ಮ ಕ್ಯಾಮೆರಾದಲ್ಲಿ ಸೆರೆ ಹಿಡಿದು, ಪ್ರಿಂಟು ಹಾಕಿಸಿ ಒಂದು ಪ್ರತಿಯನ್ನು ನನಗೆ ಕಳುಹಿಸಿ ಕೊಟ್ಟರು ಶಾಮಣ್ಣ. ಕಪ್ಪು –ಬಿಳುಪಿನ ಆ ಚಿತ್ರ ಅಂದಿನ ಆನಂದದ ನೆನಪಿಗೆ ಇಂದಿಗೂ ಬಣ್ಣ ತುಂಬುತ್ತಲೇ ಇದೆ.

ಹೀಗೆ, ನನ್ನ ಬಾಲ್ಯದ ತುಂಬೆಲ್ಲ ಇಂತಹ ಅನೇಕ ಬಣ್ಣಗಳನ್ನು ಚೆಲ್ಲಿದ ಶಾಮಣ್ಣ ನನಗೆ ಎಂದಿಗೂ ಪ್ರೀತಿಯ ಮಾಮ. ಒಮ್ಮೆ ಶಾಮಣ್ಣ, ಶ್ರೀದೇವಿ ಆಂಟಿ ಚಾರ್ವಾಕದಲ್ಲಿ ಉಳಿದಿದ್ದು, ಎಂದಿನಂತೆ ಮೈಸೂರಿನ ಸ್ನೇಹಿತರೆಲ್ಲರ ಮನೆಗೆ ಹೋಗಿ ಬರುವ

ಕಾರ್ಯಕ್ರಮ ಹಾಕಿಕೊಂಡಿದ್ದರು. ಅಪ್ಪನಿಗಂದು ಕಾಲೇಜಿಗೆ ರಜೆ ಇರಲಿಲ್ಲ. ಆಗ ತಾನೆ ಅಪ್ಪನ ಹಳೆಯ ಮಾರುತಿ ವ್ಯಾನನ್ನು ಓಡಿಸಲು ಕಲಿತಿದ್ದ ನಾನು, ಅವರನ್ನು ಕರೆದಕೊಂಡು ಹೋಗುವ ಉತ್ಸಾಹ ತೋರಿದೆ. ನಿರೀಕ್ಷೆಯಂತೆಯೇ ಅಪ್ಪ ಒಪ್ಪಲಿಲ್ಲ. ನನ್ನ ವಾಹನ ಚಾಲನೆಯ ಬಗ್ಗೆ ಅವರಿಗಿನ್ನೂ ವಿಶ್ವಾಸ ಮೂಡಿರಲಿಲ್ಲ. ಆದರೆ, ಎಂದೂ ನಾನು ಡ್ರೈವ್ ಮಾಡುವುದನ್ನು ನೋಡಿರದಿದ್ದ ಶಾಮಣ್ಣ, "ಹೇಗೂ ಜತೆಗೆ ನಾನಿರುತ್ತೇನಲ್ಲ; ಓಡಿಸಲಿ ಬಿಡಿ" ಎಂದು ಅಪ್ಪನನ್ನು ಪುಸಲಾಯಿಸಿದರು. ಅಪ್ಪನ ಸಿಟ್ಟಿನ ಅರಿವಿದ್ದ ಶಾಮಣ್ಣ ನನ್ನ ಉತ್ಸಾಹವನ್ನು ಕುಂದದಂತೆ ಮಾಡಲೂ ಪ್ರಯತ್ನಿಸಿದರು. ಸ್ನೇಹಿತನ ಮಾತನ್ನು ತೆಗೆದುಹಾಕಲಾಗದ ಅಪ್ಪ ಅನಿವಾರ್ಯವಾಗಿ ಒಪ್ಪಿ, ವ್ಯಾನ್ ಛಾವಿ ಕೊಟ್ಟರು.

ಮೊದಲು ನಮ್ಮ ಪ್ರಯಾಣ ಹತ್ತಿರದ ಡಾ.ಪ್ರಭುಶಂಕರರ ಮನೆಗೆ. ಅಲ್ಲಿಂದ ದೂರದ ಹಾ.ಮಾ.ನಾಯಕರ ಮನೆಯತ್ತ. ಹೀಗೆ ನಾಲ್ಕೈದು ಸ್ನೇಹಿತರು, ಅವರ ಗುರುಗಳ ಮನೆಗಳಿಗೆ ನಮ್ಮ ವಿಸಿಟ್ ಸಾಗಿತು. ನಾನೇನೋ ಬಹಳ ಕಾನ್ಫಿಡೆಂಟ್ ಆಗಿ ಚಾಲನೆ ಮಾಡುತ್ತಿದ್ದರೂ, ಶಾಮಣ್ಣ ಆಗೀಗ ಗೈಡ್ ಮಾಡುತ್ತಲೇ ಇದ್ದರು. ಅಂತೂ ಸುತ್ತಾಟ ಮುಗಿಸಿ ಮನೆ ತಲುಪಿದ ನಂತರ ನಾನು ಜಗತ್ತು ಗೆದ್ದಷ್ಟು ಅಮಿತೋತ್ಸಾಹದಲ್ಲಿದ್ದೆ. ಆದರೆ ಶಾಮಣ್ಣ, "ಹೇಳೋದೇನೋ ಹೇಳ್ಬಿಟ್ಟೆ ಮಾರಾಯ್ತಿ. ನೀನು ಓಡಿಸೋ ಪರಿ ಕಂಡು ವಾಪ್ಸ್ ತಲುಪೋವರೆಗೆ ನನಗೂ ಅಂಜಿಕೆಯೇ ಆಗ್ತಿತ್ತು" ಎನ್ನುವುದೇ! ಆದರೂ, ಅಂದು ಅವರು ನನ್ನಲ್ಲಿ ತುಂಬಿದ ಕಾನ್ಫಿಡೆನ್ಸ್ ನಾನೀಗ ವಾಹನ ಚಾಲನೆಯಲ್ಲಿ ಸೈ ಎನ್ನಿಸಿಕೊಂಡಿದ್ದರ ಮುನ್ನುಡಿಯಾಗಿತ್ತು.

ಯಾವಾಗ ನಮ್ಮಲ್ಲಿಗೆ ಬಂದರೂ, ನಾವು ಅವರಲ್ಲಿಗೆ ಹೋದಾಗಲೂ ಹಾಡುವ, ಕೊಳಲು-ಹಾರ್ಮೋನಿಯಂ ನುಡಿಸುವ, ಸರೋದ್‌ನಲ್ಲಿ ಮುಳುಗಿ ನಮ್ಮನ್ನು ಆನಂದಗೊಳಿಸುವ ಅವರ ಉತ್ಸಾಹ ಚಕಿತಗೊಳಿಸುವಂತದ್ದು. ಇಂಥ ಪ್ರೀತಿಯ ಧಾರೆ ಈಗಲೂ ಹಾಗೇ ಹರಿಯುತ್ತಿದೆ. ಬಂದಾಗಲೆಲ್ಲ, ನನ್ನ ಮಗಳು ತುಷಾರಳ ಕೊಳಲು ಪಡೆದು ನುಡಿಸುತ್ತಾರೆ. ಆಕೆಗೂ ನುಡಿಸಲು ಹೇಳಿ, ಕೇಳಿ ಸಂಭ್ರಮಿಸುತ್ತಾರೆ. ತಪ್ಪಿದಲ್ಲಿ ತಿದ್ದಿ, ಆಕೆಯ ಎಳೆಯ ಕಣ್ಣುಗಳಲ್ಲೂ ಅಚ್ಚರಿ ತುಳುಕುವಂತೆ ಮಾಡುತ್ತಾರೆ.

ಶಾಮಣ್ಣ ಎಂದರೆ ಹಾಗೇನೆ. ಅವರ ನಡೆ, ನುಡಿ, ಬಿಳಿ ಗಡ್ಡ, ಹಸಿರು ಶಾಲು, ಬಗಲಲ್ಲೊಂದು ಕ್ಯಾಮೆರಾ. ಇಂಥವರೇ ಆಗಬೇಕೆಂದೇನಿಲ್ಲ, ಆಟೋ ಡ್ರೈವರ್, ಪೈಂಟರ್, ಬಸ್ ಕಂಡಕ್ಟರ್, ಬೀದಿಯಲ್ಲಿ ಹಣ್ಣು ಮಾರುವ ಅಜ್ಜಿ...ಹೀಗೆ ಯಾರೇ ಸಿಕ್ಕರೂ ಆತ್ಮೀಯವಾಗಿ ಮತನಾಡಿಸುತ್ತಾರೆ; ಆಪ್ತ ಸಂವಾದಕ್ಕಿಳಿದು ಜೀವ ಚೈತನ್ಯವನ್ನು ಎದೆಯಿಂದ ಎದೆಗೆ ದಾಟಿಸುತ್ತಾರೆ. ಅಂತೆಯೇ, ಇಂಥದೇ ವಾದ್ಯ ಬೇಕೆಂದೇನಿಲ್ಲ, ಏನೇ ಸಿಕ್ಕರೂ, ಕಡೆಗೆ ಹಲ್ಲಿನಲ್ಲೂ ರಾಗ ಹೊಮ್ಮಿಸುತ್ತಾರೆ. ರಾಗಬದ್ಧವಾಗಿ

ಹಾಡಲಾರಂಭಿಸುತ್ತಾರೆ. ದುಗುಡಗೊಂಡ ಮನಸ್ಸುಗಳಲ್ಲೂ ಖುಷಿಯನ್ನು ಮೀಟುತ್ತಾರೆ.

ಶಾಮಣ್ಣ ಇರುವುದೇ ಹೀಗೆ. ೭೫ರ ಹರೆಯದಲ್ಲೂ, ಚಿಕ್ಕವರೂ ನಾಚಿಕೊಳ್ಳು ವಷ್ಟು ಬತ್ತದ ಉತ್ಸಾಹ. ತಮ್ಮದೇ ಲೋಕದಲ್ಲಿ ವಿಹರಿಸುತ್ತಿರುವಂತೆ ಕಂಡರೂ, ಕಣ್ಣ ವ್ಯಾಪ್ತಿಯಲ್ಲಿ ವಾಸ್ತವದೆಡೆಗಿನ ಚಿಕಿತ್ಸಕ ನೋಟ ಸದಾ ಜಾಗರೂಕ. "ಹಿಂಗೆಲ್ಲ ಆಗ್ತದಲ್ಲ, ಎಂತದ್ರೀ ಮಾರಾಯ್ರೆ' ಎಂದು ತಳಮಳಿಸುತ್ತಿದ್ದಾರೆಂದರೆ ಶಾಮಣ್ಣ ಏನಕ್ಕೋ ಬೇಸರಗೊಂಡಿದ್ದಾರೆ ಎಂದರ್ಥ. ಇದ್ದ ತಾವಿನಿಂದ ಎದ್ದು ಹೊರಟರೆಂದರೆ, ತಾನಿರುವುದಕ್ಕೆ ಇದು ಲಾಯಕ್ಕಾದ ಜಾಗ ಅಲ್ಲ ಎಂದು ಭಾವಿಸಿದ್ದಾರೆ ಎಂದು ಕೊಳ್ಳಬೇಕು. ನುಡಿಯಲ್ಲಿ, ನಡೆಯಲ್ಲಿ ಯಾವುದೇ ಕಾರಣಕ್ಕೂ, ಯಾವತ್ತೂ ಎಚ್ಚರ ತಪ್ಪಿದವರಲ್ಲ. ಬಹುಕಾಲದಿಂದ ಒಡನಾಟ ಹೊಂದಿದ ಮುಖ್ಯಮಂತ್ರಿ ಸಿದ್ದರಾಮಯ್ಯ ಸ್ವತಃ ಕರೆ ಮಾಡಿ, "ದಸರೆ ಉದ್ಘಾಟನೆಗೆ ಬನ್ನಿ" ಎಂದು ಕರೆದಾಗಲೂ, ಮುಲಾಜಿಗೆ ಬಿದ್ದು ಆಹ್ವಾನವನ್ನು ಒಪ್ಪಲಿಲ್ಲ. ಬದಲು, ಬೇಕಿದ್ರೆ ಪ್ರಜಾಪ್ರಭುತ್ವದ ಶಕ್ತಿ ಕೇಂದ್ರ ವಿಧಾನಸೌಧದ ಕಸ ಹೊಡೆಯುತ್ತೇನೆ. ಪ್ರಭುತ್ವದ ಸಂಕೇತವಾದ ದಸರೆಯಲ್ಲಿ ಪಾಲ್ಗೊಳ್ಳುವುದಿಲ್ಲ" ಎಂದು ಹೇಳುವ ಮೂಲಕ ನಾಲ್ಕೈದು ದಶಕದ ಹಿಂದಿನ ತಮ್ಮದೇ ನಿಲುವಿಗೆ ಬದ್ಧತೆಯನ್ನು ತೋರಿದರು.

ಈ ಕಾರಣಕ್ಕಾಗಿಯೇ, ಅವರ ಮೇಷ್ಟ್ರುಗಳು, ಗೆಳೆಯರು, ಸಮಕಾಲೀನರು, ನಂತರದ ತಲೆಮಾರಿನವರು, ಈಗಿನ ಯುವಕರು, ಇನ್ನೂ ಕನಸನ್ನು ಅರಳಿಸಿಕೊಳ್ಳು ತ್ತಿರುವ ಮಕ್ಕಳು ಎಲ್ಲರಿಗೂ ಶಾಮಣ್ಣ ಎಂದರೆ ಒಂದು ಅಚ್ಚರಿ. ಎಲ್ಲರ ಮನೆಯಲ್ಲೂ ಇಂಥ ಹಿರಿಯರೊಬ್ಬರು ಇದ್ದರೆ ಎಷ್ಟೊಂದು ಚೆಂದ ಎಂಬ ಆಸೆ ಹುಟ್ಟಿಸುವಂತ ತಾತನ ಮಾದರಿ!

ನಮ್ಮೇಷ್ಟ್ರು ಶಾಮಣ್ಣ

ಅ.ಮ. ಶಿವಮೂರ್ತಿ

ನನ್ನದು ಅರಹತೊಳಲು. ಶಾಮಣ್ಣನವರ ಭಗವತೀಕೆರೆಗೆ ಕೇವಲ ಏಳು ಮೈಲಿ ದೂರದಲ್ಲಿದೆ. ನಮ್ಮ ದಲಿತರ ಹಟ್ಟಿಯಲ್ಲಿ ನಮ್ಮಪ್ಪ ನಾಲ್ಕನೇ ತರಗತಿ ಪಾಸಾದ ಮೊದಲ ವ್ಯಕ್ತಿ. ಪಿಡಬ್ಲ್ಯೂಡಿ ಕಾಲೋನಿಯಲ್ಲಿ ದಿನಗೂಲಿ ನೌಕರರಾಗಿ ಕೆಲಸ ಮಾಡ್ತಿದ್ದರು. ಇಡೀ ಕೇರಿಯಲ್ಲಿ ಐದನೇ ತರಗತಿಗೆ ಹೋದ ಮೊದಲಿಗ ನಾನೇ. ನಂತರ ಹೈಸ್ಕೂಲು ಮೆಟ್ಟಿಲು ಹತ್ತಿ ಪಾಸಾಗಿ ಪಿಯುಸಿ ಸೇರಿದೆ. ಪಕ್ಕದ ಕಲ್ಲಿಹಾಳ್‌ನಲ್ಲಿ ಪಿಯುಸಿ ಓದುತ್ತಿರುವ ಸಂದರ್ಭದಲ್ಲಿ ಅಕ್ಷರ ತುಂಗಾ ಯೋಜನೆಯ ಬಗ್ಗೆ ಹಳ್ಳಿಹಳ್ಳಿಗೆ ಹೋಗಿ ಶಾಮಣ್ಣ ಪ್ರಚಾರ ಮಾಡುತ್ತಿದ್ದರು. ಹಾಗೆ ಅವರು ನಮ್ಮೂರಿಗೂ ಬಂದಿದ್ದರು. ಅವರ ಮಾತು ಕೇಳಿ ಪ್ರಭಾವಿತನಾದ ನಾನು ಅಕ್ಷರ ತುಂಗಾ ಕಾರ್ಯಕ್ರಮದ ಕಾರ್ಯಕರ್ತನಾಗಿ ನಮ್ಮೂರ ಶಾಲೆಯಲ್ಲಿ ಅನಕ್ಷರಸ್ಥರಿಗೆ ಅಕ್ಷರ ಕಲಿಸಲು ತೊಡಗಿದೆ. ನಲವತ್ತು ಜನರಿಗೆ ದಿನಾ ಸಂಜೆ ನಾನು ಪಾಠ ಹೇಳಿಕೊಡುತ್ತಿದ್ದೆ. ಆವಾಗ ಅಕ್ಷರ ತುಂಗಾ ಕಾರ್ಯಕ್ರಮಗಳು ನಡೆದಾಗ ನಾನು ಶಾಮಣ್ಣನವರನ್ನು ಅಲ್ಲಲ್ಲಿ ಭೇಟಿಯಾಗುತ್ತಿದ್ದೆ. ನನ್ನ ಕೆಲಸದ ಬಗ್ಗೆ ಶಾಮಣ್ಣ

ತುಂಬಾ ಮೆಚ್ಚುಗೆ ಮಾತಾಡುತ್ತಿದ್ದರು. ಅದು ನನ್ನನ್ನು ಇನ್ನೂ ಹೆಚ್ಚು ಹೆಚ್ಚಾಗಿ ಇಂಥ ಕೆಲಸಕ್ಕೆ ತೊಡಗಿಸಿಕೊಳ್ಳುವಂತೆ ಸ್ಫೂರ್ತಿ ನೀಡುತ್ತಿತ್ತು.

ನಂತರ ಶಿವಮೊಗ್ಗದ ಸಹ್ಯಾದ್ರಿ ಕಾಲೇಜಿನಲ್ಲಿ ಬಿಎಗೆ ಸೇರಿಕೊಂಡೆ. ಅಲ್ಲಿ ಕೆ.ಜಿ.ವೆಂಕಟೇಶ, ಪ್ರಭಾಕರರಾವ್ ತರದ ಪ್ರಾಧ್ಯಾಪಕರು, ನಾಗರಾಜ ನೇರಿಗೆ, ರಘುರಾಮ್, ಸಂತೋಷ ಕಾಚಿನಕಟ್ಟೆ ಮೊದಲಾದ ಗೆಳೆಯರು ನನಗೆ ಸಿಕ್ಕಿದರು. ಸಹ್ಯಾದ್ರಿ ಸಾಹಿತ್ಯ ವೇದಿಕೆಗೆ ಸದಸ್ಯನಾಗಿ ಕಥೆ, ಕವನ ಬರೆಯಲು ಶುರು ಮಾಡಿದೆ. ನಮ್ಮೂರಲ್ಲೂ ಸಮಾನ ಮನಸ್ಕ ಗೆಳೆಯರಾದ ಟಿ.ಎಂ ಸಂಗಪ್ಪ, ರುದ್ರೇಶ, ಸುರೇಶ, ಗಜೇಂದ್ರಸ್ವಾಮಿ, ರುದ್ರಮ್ಮ, ನಾಗರತ್ನ ಮತ್ತಿತರರು ಸೇರಿ ಸಮುದಾಯ ವಿಚಾರ ವೇದಿಕೆ ಕಟ್ಟಿಕೊಂಡು ಕವಿಗೋಷ್ಠಿ, ಕಾವ್ಯಕಮ್ಮಟ, ವಿಚಾರ ಸಂಕಿರಣ ಮೊದಲಾದ ಕಾರ್ಯಕ್ರಮಗಳನ್ನು ನಡೆಸತೊಡಗಿದೆವು. ಇದಕ್ಕೆಲ್ಲ ನಮ್ಮ ಬೆನ್ನಿಗೆ ನಿಂತು ಪ್ರೋತ್ಸಾಹ ನೀಡುತ್ತಿದ್ದವರು ಶಾಮಣ್ಣ. ಅವರೇ ಕೆ. ರಾಮದಾಸ್, ತೇಜಸ್ವಿ, ಗಣಪತಿಯಪ್ಪ ಮೊದಲಾದವರನ್ನು ನಮ್ಮ ವೇದಿಕೆಗೆ ಕರೆಸಿ ಮಾತಾಡಿಸಿದ್ದರು. ಹೀಗೆ ನನಗೆ ಹತ್ತಿರವಾದರು ಶಾಮಣ್ಣ. ನಂತರ ನಾನು ಶಿವಮೊಗ್ಗದ 'ಕ್ರಾಂತಿದೀಪ' ಪತ್ರಿಕೆಯಲ್ಲಿ ಕೆಲಸ ಮಾಡುತ್ತಿದ್ದ ಸಂದರ್ಭದಲ್ಲಿ... ಬಲಪಂಥೀಯರ ಕೆಂಗಣ್ಣಿಗೆ ಪತ್ರಿಕೆಯ ವರದಿಯೊಂದು ಗುರಿಯಾಗಿ, ಅವರು ಪತ್ರಿಕಾ ಕಛೇರಿ ಮೇಲೆ ದಾಳಿ ಮಾಡಿ, ಕಛೇರಿಯನ್ನು ಧ್ವಂಸ ಮಾಡಿದ್ದಲ್ಲದೇ ಆಗ ಕಚೇರಿಯಲ್ಲಿದ್ದ ಪತ್ರಿಕೆಯ ಸಂಪಾದಕ ಎನ್.ಮಂಜುನಾಥ್ ಮತ್ತು ನನ್ನ ಮೇಲೆ ಮಾರಣಾಂತಿಕ ಹಲ್ಲೆ ನಡೆಸಿದರು. ಶಿವಮೊಗ್ಗದ ನೆಹರು ರಸ್ತೆಗೆ ನನ್ನನ್ನು ಬಲತ್ಕಾರವಾಗಿ ಎಳೆದು ತಂದ ಆ ಗುಂಪು ರಸ್ತೆಯಲ್ಲಿ ಹಾಕಿ ಬಡಿದು, ತುಳಿದು ಹಲ್ಲೆ ನಡೆಸಿದರು. ನನ್ನ ಜೀವ ಉಳಿವ ಯಾವ ಭರವಸೆಯೂ ಇರಲಿಲ್ಲ. ಆಸ್ಪತ್ರೆಯಲ್ಲಿ ಜೀವನ್ಮರಣದ ಸ್ಥಿತಿಯಲ್ಲಿ ಒದ್ದಾಡುತ್ತಿದ್ದ ನನ್ನನ್ನು ಶಾಮಣ್ಣ ಪದೇ ಪದೇ ಆಸ್ಪತ್ರೆಗೆ ಬಂದು ನೋಡಿಕೊಂಡು ಹೋಗುತ್ತಿದ್ದರಂತೆ ಜೊತೆಗೆ ನಮ್ಮ ಅಪ್ಪ ಅಮ್ಮನಿಗೆ ಧೈರ್ಯದ ಮಾತುಗಳನ್ನು ಹೇಳಿ ಅವರನ್ನು ಸಂತೈಸುತ್ತಿದ್ದರಂತೆ. ಇದೆಲ್ಲ ನನಗೆ ಪ್ರಜ್ಞೆ ಬಂದ ಮೇಲೆ ತಿಳಿದದ್ದು.

ಹೀಗೆ ನೋವಿನ ಸಂದರ್ಭದಲ್ಲಿ ಆಪ್ತರಾದ ಶಾಮಣ್ಣನವರು ಆಗಾಗ ನಮ್ಮ ಹಟ್ಟಿಗೆ ಬಂದು ನಮ್ಮ ಅಪ್ಪ-ಅವ್ವನ ಕ್ಷೇಮ ಸಮಾಚಾರ ವಿಚಾರಿಸಿಕೊಳ್ಳುತ್ತಿದ್ದರು. ಹಾಗೆ ಬರುವಾಗ ತಮ್ಮ ಹಾರ್ಮೋನಿಯಂ ಪೆಟ್ಟಿಗೆಯನ್ನು ಹೊತ್ತು ತಂದು ನಮ್ಮ ಹಟ್ಟಿಯ ಮಕ್ಕಳನ್ನು ಗುಡ್ಡೆ ಹಾಕಿ ಹಾಡು ಕಲಿಸಿಕೊಡುತ್ತಿದ್ದರು. ಇವರಿಂದ ಹಾಡು ಕಲಿತ ನನ್ನ ತಂಗಿಯ ಮಗಳು ಕೃತ್ತಿಕಾ ಇವತ್ತಿಗೂ ಇವರನ್ನು ಚೀಂವ್ ಚೀಂವ್ ತಾತ ಎಂದೇ ಕರೆಯುತ್ತಾಳೆ. ಇವರು ಕಲಿಸಿಕೊಟ್ಟ ಚೀಂವ್ ಚೀಂವ್ ಚಿಕ್ಕ ಗುಬ್ಬಿ ಹಾಡು ಅವರಿಗೆ ಬಹಳ ಇಷ್ಟವಾಗಿತ್ತು. ಶಾಮಣ್ಣನವರಿಂದ ಪ್ರಭಾವಿತರಾಗಿ ನಾವು

ಅರಹತೊಳಲು ಕೈಮರದಲ್ಲಿ ಶ್ರೀ ಪಂಚಾಕ್ಷರಿ ಪುಟ್ಟರಾಜ ಗವಾಯಿ ಸಂಗೀತ ಶಾಲೆಯನ್ನು ಪ್ರಾರಂಭಿಸಿದೆವು. ಅದಕ್ಕೆ ಸಂಗೀತ ಮೇಷ್ಟ್ರನ್ನು ನೇಮಿಸುವುದರಿಂದ ಹಿಡಿದು ಎಲ್ಲ ಜವಾಬ್ದಾರಿಗಳನ್ನು ಶಾಮಣ್ಣನವರು ಖುಷಿಯಿಂದ ಹೊತ್ತು ನಿರ್ವಹಿಸಿಕೊಟ್ಟರು.

ಶಾಮಣ್ಣನವರ ಪಾಲಿಗೆ ಸಂಗೀತವೆಂಬುದು ಬರಿಯ ಮನರಂಜನೆ ಮಾತ್ರ ಆಗಿರಲಿಲ್ಲ. ಸಂಗೀತ ಗ್ರಾಮೀಣ ಪ್ರದೇಶದವರಿಗೆ ಅನ್ನ ಸಂಪಾದಿಸುವ ಮಾರ್ಗವೂ ಆಗಬೇಕು ಎಂಬುದು ಅವರ ಆಶಯ. ಸಂಗೀತ ಕೇವಲ ಪಟ್ಟಣದ ಒಂದು ವರ್ಗಕ್ಕೆ ಮಾತ್ರ ಅನ್ನ ನೀಡುವ ಮಾರ್ಗವಾಗಿದೆ. ಗ್ರಾಮೀಣ ಪ್ರದೇಶದವರು ಮತ್ತು ದಲಿತರು ಸಂಗೀತ ಕಲಿತು ಸರ್ಕಾರಿ ಕೋಟಾದಡಿಯಲ್ಲಿ ಸಂಗೀತ ಶಿಕ್ಷಕರಾಗಿ ನೇಮಕಗೊಳ್ಳಬೇಕು ಎಂಬುದು ಅವರ ಮಹದಾಸೆ. ಆದ್ದರಿಂದ ಗ್ರಾಮೀಣ ಪ್ರದೇಶದ ಶಾಲೆಗಳ ಮಕ್ಕಳಿಗೆ ಎಲ್ಲೆಲ್ಲಿ ಸಾಧ್ಯವೋ ಅಲ್ಲೆಲ್ಲ ಸಂಗೀತದ ಅಭಿರುಚಿ ಬೆಳೆಸಲು ಪ್ರಯತ್ನಿಸುತ್ತಾರೆ.

ಶಾಮಣ್ಣನವರು ಸಮಯ ಸಿಕ್ಕಾಗಲೆಲ್ಲ ರೈತರ ಸಮಸ್ಯೆಗಳ ಬಗ್ಗೆ, ರೈತ ಹೋರಾಟದ ಬಗ್ಗೆ ಹೇಳುತ್ತಿದ್ದರು. ನಾನು ಅವರ ಜೊತೆ ತುಂಗಾ ನದಿ ಉಳಿಸಿ ಹೋರಾಟದಲ್ಲೂ ಬಾಗಿಯಾಗಿ ನೆಲ್ಲಿಬೀಡಿಗೆ ಹೋದಾಗ ಅವರ ಹೆಗಲಮೇಲಿದ್ದ ಕ್ಯಾಮರಾ ನನಗೆ ಕೊಟ್ಟು ಫೋಟೊ ಕ್ಲಿಕ್ಕಿಸುವಂತೆ ಹೇಳುತ್ತಿದ್ದರು. ಇದರಿಂದಾಗಿ ಫೋಟೋ ತೆಗೆಯುವ ಆಸಕ್ತಿ ಹುಟ್ಟಿತು. ನಾನೇ ೩೦೦೦ ರೂಗಳ ಏಮ್ ಅಂಡ್ ಶೂಟ್ ಕ್ಯಾಮರಾ ಖರೀದಿ ಮಾಡಿ, ಪತ್ರಿಕೆಗಳಿಗೆ ಚಿತ್ರ ಲೇಖನ ಬರೆದು ಕಳಿಸಲು ಪ್ರಾರಂಭಿಸಿದೆ. ಕೆಲವು ಪತ್ರಿಕೆಗಳು ನನ್ನ ಚಿತ್ರ ಲೇಖನವನ್ನು ವಿಶೇಷ ಪ್ರಾಶಸ್ತ್ಯ ನೀಡಿ ಪ್ರಕಟ ಮಾಡಿದವು. ಆಗ ಫೋಟೋಗ್ರಫಿಯ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿ ಖ್ಯಾತ ಲೇಖಕ ನಾಗೇಶ ಹೆಗ್ಡೆಯವರು ನನಗೊಂದು ಪತ್ರ ಬರೆದಿದ್ದರು.

ನನ್ನ ಬದುಕಿನಲ್ಲಿ ಸಾಹಿತ್ಯ, ಸಂಗೀತ, ಫೋಟೋಗ್ರಫಿಯಂತಹ ಅಭಿರುಚಿಗಳನ್ನು ಹುಟ್ಟುಹಾಕಿದ ಶಾಮಣ್ಣನವರೇ ನನಗೆ ಮಂತ್ರಮಾಂಗಲ್ಯ ಸರಳ ಮದುವೆಯ ಬಗ್ಗೆ ಅರಿವು ಮೂಡಿಸಿ ನಾನು ಅದೇ ರೀತಿ ಸರಳ ಮದುವೆಯಾಗುವಂತೆ ಪ್ರೇರೇಪಿಸಿದರು. ನಮ್ಮೂರಿನ ಭೂಮಿಗೀತಾ ರಂಗಮಂದಿರದಲ್ಲಿ ನನ್ನ ಮತ್ತು ಗೌರಿಯ ಮಂತ್ರಮಾಂಗಲ್ಯ ಮದುವೆ ಮಾಡಿಸಿದವರು ಶಾಮಣ್ಣ–ಶ್ರೀದೇವಿಯಕ್ಕ ನವರೇ. ಈಗವರು ನನ್ನ ಮಗ ಗೌಶಿತ್ ಮತ್ತು ಮಗಳು ಲಿಪಿತಾಗೆ ಪ್ರೀತಿಯ ಶ್ಯಾಮಣ್ಣ ತಾತ...

ಶಾಮಣ್ಣ ಎಂಬ ಸಂತ

ಎಂ.ರಾಘವೇಂದ್ರ

"ರಕ್ತ, ಮಾಂಸಗಳಿಂದ ಕೂಡಿದ ದೇಹವುಳ್ಳ ಇಂತಹ ವ್ಯಕ್ತಿಯೊಬ್ಬ ನಮ್ಮ ನಡುವೆ ಬದುಕಿದ್ದ ಎನ್ನುವುದೇ ನಂಬುವುದು ಕಷ್ಟ" ಇದು ಗಾಂಧೀಜಿ ಕುರಿತು ಐನ್‌ಸ್ಟೈನ್ ಹೇಳಿದ ಮಾತು. ನಮ್ಮ ನಡುವೆ ಜೀವಂತಿಕೆಯ, ಚೈತನ್ಯದ ಸೆಲೆಯಂತಿರುವ ಕಡಿದಾಳು ಶಾಮಣ್ಣ ಅವರನ್ನು ನೋಡಿದಾಗಲೆಲ್ಲ ನನಗೆ ಐನ್‌ಸ್ಟೈನ್ ಗಾಂಧಿ ಬಗ್ಗೆ ಹೇಳಿದ ಮೇಲಿನ ಮಾತು ನೆನಪಾಗುತ್ತದೆ.

ಸಾರ್ವಜನಿಕ ಬದುಕಿನಲ್ಲಿ ಇರುವ ಹೆಚ್ಚಿನ ವ್ಯಕ್ತಿಗಳು ಒಂದಲ್ಲ ಒಂದು ಕಾರಣಕ್ಕೆ 'ಕಟಕಟೆ'ಯಲ್ಲಿ ನಿಂತಿರುವ ಹೊತ್ತು ಇದು. ತುಂಬಾ ನಿಷ್ಠೂರರು, ಪ್ರಾಮಾಣಿಕರು ಎಂದು ನಾವು ನಂಬಿರುವ ವ್ಯಕ್ತಿಗಳೇ ಅಲ್ಲಲ್ಲಿ ಗುಟ್ಟಾಗಿ ರಾಜಿ ಮಾಡಿಕೊಂಡು ಲಾಭಗಳಿಸುತ್ತಿರುವ ಸನ್ನಿವೇಶ ದಲ್ಲಿ ನಾವಿದ್ದೇವೆ. ನೈತಿಕತೆ ಎನ್ನುವುದು ಪಾತಾಳಕ್ಕೆ ಕುಸಿದಿರುವ ಈ ದಿನಗಳಲ್ಲಿ ಶಾಮಣ್ಣ ಅವರಂತಹ ಸರಳ, ಸಜ್ಜನಿಕೆಯ, ನೈತಿಕ ಪ್ರಜ್ಞೆಯ ಅಪರೂಪದ ವ್ಯಕ್ತಿ ನಮ್ಮ ನಡುವೆ ಇರುವುದೇ ವಿಶೇಷ ಅನಿಸುತ್ತದೆ.

ಶಾಮಣ್ಣ ಅವರ ಸಂಪರ್ಕ ನನಗೆ ಆದದ್ದು ೧೯೯೫-೯೬ನೇ ಸಾಲಿನಲ್ಲಿ. ಆಗ ಕರ್ನಾಟಕ ರಾಜ್ಯ

ರೈತ ಸಂಘದ ಮುಖವಾಣಿ ಎನ್ನುವ ರೀತಿಯಲ್ಲಿ 'ರೈತ ಹೋರಾಟ' ಎಂಬ ವಾರಪತ್ರಿಕೆ ಸಾಗರದಿಂದ ಪ್ರಕಟವಾಗುತ್ತಿತ್ತು. ರೈತ ಸಂಘದ ಎನ್.ಡಿ. ವಸಂತ್ ಕುಮಾರ್ ಸಂಪಾದಕರಾಗಿದ್ದ ಆ ಪತ್ರಿಕೆಯ ಮುಖ್ಯ ವರದಿಗಾರನಾಗಿ ನಾನು ಕೆಲಸ ಮಾಡುತ್ತಿದ್ದೆ.

ಶಿವಮೊಗ್ಗದಲ್ಲಿ ಕಾನೂನು ವಿದ್ಯಾಭ್ಯಾಸ, ಪತ್ರಿಕೆಯ ಕೆಲಸ ಒಟ್ಟಿಗೆ ಸಾಗಿದ್ದ ದಿನಗಳವು. ಆ ಸಂದರ್ಭದಲ್ಲೆ ವಸಂತಕುಮಾರ್ ಶಾಮಣ್ಣ ಅವರಿಗೆ ನನ್ನನ್ನು ಪರಿಚಯಿಸಿದರು. ರೈತ ಸಂಘದ ವತಿಯಿಂದ ಕರ್ನಾಟಕದ ವಿವಿಧ ಭಾಗಗಳಲ್ಲಿ ಆಗ ಅಧ್ಯಯನ ಶಿಬಿರಗಳನ್ನು ಆಯೋಜಿಸಲಾಗುತ್ತಿತ್ತು. ಇಂತಹ ಶಿಬಿರಗಳಿಗೆ ತೆರಳಿ ಅದರ ವಿಸ್ತೃತ ವರದಿಯನ್ನು ಪ್ರಕಟಿಸುವುದು ನನ್ನ ಕೆಲಸವಾಗಿತ್ತು. ಜೊತೆಗೆ ಸಾಂದರ್ಭಿಕವಾಗಿ ರೈತ ಮುಖಂಡರಾದ ಪ್ರೊ.ಎಂ.ಡಿ. ನಂಜುಂಡಸ್ವಾಮಿ, ಬಾಬಾಗೌಡ ಪಾಟೀಲ್, ಕೆ.ಎಸ್.ಪುಟ್ಟಣ್ಣಯ್ಯ, ಕಡಿದಾಳ್ ಶಾಮಣ್ಣ, ಕೆ.ಟಿ. ಗಂಗಾಧರ್, ಹೆಚ್.ಆರ್. ಬಸವರಾಜಪ್ಪ ಮೊದಲಾದವರ ಸಂದರ್ಶನ ಹೇಳಿಕೆ ಪ್ರಕಟಿಸುತ್ತಿದ್ದೆವು. ಈ ಕೆಲಸದ ಕಾರಣಕ್ಕೆ ಶಾಮಣ್ಣ ಅವರನ್ನು ಅನೇಕ ಬಾರಿ ಭೇಟಿಯಾಗುವ ಸಂದರ್ಭ ಬಂದಿತ್ತು.

೧೯೯೬ ಅಂತ ಕಾಣುತ್ತೆ. ರೈತಸಂಘವು ಬೆಂಗಳೂರಿನಲ್ಲಿ ಪ್ರೊ. ಎಂ.ಡಿ.ಎನ್ ನೇತೃತ್ವದಲ್ಲಿ ಬೃಹತ್ ರೈತ ಸಮಾವೇಶವೊಂದನ್ನು ಸಂಘಟಿಸಿತ್ತು. ಮೇಧಾ ಪಾಟ್ಕರ್, ಮಹೇಂದ್ರ ಸಿಂಗ್ ಟಿಕಾಯತ್, ಗದ್ದರ್ ಸೇರಿದಂತೆ ದೇಶದ ಬೇರೆ ಬೇರೆ ಭಾಗಗಳಿಂದ ಹೋರಾಟಗಾರರು ಬಂದಿದ್ದರು. ಆ ಸಮಾವೇಶದ ವರದಿ ಸಂಗ್ರಹಿಸಲು ನಾನು ಬೆಂಗಳೂರಿಗೆ ಹೋಗಿದ್ದೆ. ಸಂಪಾದಕರು ನನ್ನ ಕೈಗೆ ಕ್ಯಾಮರಾವೊಂದನ್ನು ಕೊಟ್ಟಿದ್ದರು. ಸಮಾವೇಶದ ಒಂದಿಷ್ಟು ಚಿತ್ರಗಳು ಪತ್ರಿಕೆಗೆ ಬೇಕಿತ್ತು.

ಈಗಿನಂತೆ ಆಗ ಡಿಜಿಟಲ್ ಕ್ಯಾಮರಾ ಇರಲಿಲ್ಲ. ಮೊಬೈಲ್ ಫೋನ್‌ಗಳ ಕಾಲವೂ ಅದಾಗಿರಲಿಲ್ಲ. ಸಮಾವೇಶ ಇನ್ನೇನು ಆರಂಭವಾಗಬೇಕು ಎನ್ನುವ ಹೊತ್ತಿಗೆ ನನ್ನ ಕ್ಯಾಮರಾ ಕೈಕೊಟ್ಟಿತ್ತು. ಏನು ಮಾಡಿದರೂ ಕ್ಯಾಮರಾ ಕೆಲಸ ಮಾಡುತ್ತಲೇ ಇರಲಿಲ್ಲ.

ಆ ಹೊತ್ತಿಗೆ ಅಲ್ಲಿದ್ದ ಶಾಮಣ್ಣ ನನ್ನ ನೆರವಿಗೆ ಬಂದರು. "ಇದೇನು ಕಷ್ಟ ಅಲ್ಲ ಮಾರಾಯ್ರೆ" ಎನ್ನುತ್ತಾ ನೋಡ ನೋಡುತ್ತಿದ್ದಂತೆ ಕ್ಯಾಮರಾ ಕೆಲಸ ಮಾಡುವಂತೆ ಮಾಡಿ ನನ್ನ ಕೈಗಿತ್ತರು. ನಂತರದ ದಿನಗಳಲ್ಲಿ ಎಲ್ಲೆ ಭೇಟಿಯಾದರೂ ಆತ್ಮೀಯತೆಯಿಂದ ಮಾತನಾಡಿಸುತ್ತಿದ್ದ ಶಾಮಣ್ಣ ನಮ್ಮ ಪತ್ರಿಕೆಯ ಆಗು–ಹೋಗುಗಳ ಬಗ್ಗೆ ಕಾಳಜಿಯಿಂದ ವಿಚಾರಿಸುತ್ತಿದ್ದರು. "ಸಾಗರದಲ್ಲಿ ಪತ್ರಿಕೆಯ ಪುಟಗಳನ್ನು ಸಿದ್ಧಪಡಿಸಿ ಬೆಂಗಳೂರಿನಲ್ಲಿ ಮುದ್ರಿಸಿ ಬೇರೆ ಬೇರೆ ಊರಿಗೆ ಕಳುಹಿಸುವುದು ತಾಪತ್ರಯ ಅಲ್ವೇನ್ರಿ, ಆ ವಸಂತ್‌ಕುಮಾರ್‌ಗೆ ಕಷ್ಟ ಆಗಲ್ವೇನ್ರಿ" ಎಂದು ಶಾಮಣ್ಣ ಯಾವಾಗಲೂ ಕೇಳುತ್ತಿದ್ದರು.

ಆ ವೇಳೆಗೆ ಶಾಮಣ್ಣ 'ಲಂಕೇಶ್ ಪತ್ರಿಕೆ'ಗೆ ಬರೆಯುತ್ತಿದ್ದರು. ಹಾಗೆಂದು ನಮ್ಮ ಪತ್ರಿಕೆಗೆ ಬರಹ ಕೇಳಿದಾಗ ಯಾವತ್ತೂ ಹಮ್ಮು-ಬಿಮ್ಮು ತೋರಿದವರಲ್ಲ. ಪತ್ರಿಕೆಗೆ ಬರಹದ ಜೊತೆಗೆ ಅದಕ್ಕೆ ಪೂರಕವಾದ ಚಿಕ್ಕ ಚಿಕ್ಕ ಚಿತ್ರಗಳನ್ನು ಅವರೇ ಬರೆದು ಕಳುಹಿಸುತ್ತಿದ್ದರು. ಪತ್ರಿಕೆ ಬಗ್ಗೆ ಅಂಚೆ ಕಾರ್ಡ್‌ನಲ್ಲಿ ಅಭಿಪ್ರಾಯ ತಿಳಿಸುತ್ತಿದ್ದರು.

ಈ ನಡುವೆ ನನ್ನ ಅಣ್ಣನ ಮದುವೆ ನಿಶ್ಚಿತಾರ್ಥ ಅದದ್ದು ನಮ್ಮ ಕುಟುಂಬಕ್ಕೆ ಶಾಮಣ್ಣ ಅವರ ಕುಟುಂಬದವರು ಹತ್ತಿರವಾಗಲು ಕಾರಣವಾಯಿತು. ಏಕೆಂದರೆ ನಮ್ಮ ಅತ್ತಿಗೆ ಅವರ ಊರು ಕೂಡಾ ಶಾಮಣ್ಣ ಅವರ ಭಗವತಿಕೆರೆ ಗ್ರಾಮವೇ ಆಗಿದ್ದು.

೧೯೯೦ನೇ ಸಾಲಿನಲ್ಲಿ ನಾನು ಕಾನೂನು ಪದವಿ ಮುಗಿಸಿ ಸಾಗರದಲ್ಲಿ ವಕೀಲಿ ವೃತ್ತಿ ಆರಂಭಿಸಿದೆ. ಅದೇ ವರ್ಷ ನಾನು ನನ್ನ ಕಾಲೇಜಿನ ಸಹಪಾಠಿಯನ್ನು ಪ್ರೀತಿಸಿ ಮದುವೆಯಾದೆ. ನನ್ನ ಪತ್ನಿ ಎಂ.ವಿ. ಪ್ರತಿಭಾ ಅವರ ಊರು ಭಗವತಿಕೆರೆಗೆ ಹತ್ತಿರವೇ ಇರುವ ಮೈದೊಳಲು ಗ್ರಾಮ. ಪ್ರತಿಭಾ ಅವರ ಕುಟುಂಬಕ್ಕೂ ಶಾಮಣ್ಣ ಅವರ ಕುಟುಂಬಕ್ಕೂ ಬಹಳ ವರ್ಷದಿಂದ ಆತ್ಮೀಯವಾದ ನಂಟು ಇತ್ತು.

ನಮ್ಮ ಮದುವೆ ಕಾರಣಕ್ಕೆ ಈ ನಂಟಿಗೆ ಪೆಟ್ಟು ಬಿದ್ದದ್ದು ಮಾತ್ರ ಅತ್ಯಂತ ನೋವಿನ ಸಂಗತಿ. ನಮ್ಮ ಮದುವೆಗೆ ಶಾಮಣ್ಣ ಬೆಂಬಲವಾಗಿ ನಿಂತಿದ್ದರು ಎಂಬ ತಪ್ಪು ಭಾವನೆ ಈ ಸನ್ನಿವೇಶ ನಿರ್ಮಾಣವಾಗಲು ಕಾರಣವಾಗಿತ್ತು. ಪ್ರತಿಭಾಳಿಗೆ ಬಾಲ್ಯದಿಂದಲೂ ಶಾಮಣ್ಣ ಅವರ ಕುಟುಂಬದ ಜೊತೆಗೆ ಒಡನಾಟವಿತ್ತು. ನನಗೆ ಪತ್ರಿಕೆ ಕಾರಣಕ್ಕೆ ಶಾಮಣ್ಣ ಅವರ ಸಂಪರ್ಕ ಸಿಕ್ಕಿತ್ತು. ಹಾಗೆಂದು ನಾನಾಗಲೀ, ಪ್ರತಿಭಾ ಆಗಲಿ ಯಾವತ್ತೂ ಶಾಮಣ್ಣ ಅಥವಾ ಅವರ ಕುಟುಂಬದವರೊಂದಿಗೆ ನಮ್ಮ ಮದುವೆಯ ವಿಷಯವನ್ನು ಪ್ರಸ್ತಾಪಿಸಿಯೇ ಇರಲಿಲ್ಲ. ಆದರೂ ಶಾಮಣ್ಣ ಅವರಿಗೆ ನಮ್ಮ ಮದುವೆಯ ವಿಷಯ ಗೊತ್ತಿತ್ತು ಎಂದು ವಿನಾ ಕಾರಣ ನಮ್ಮಗಳ ಕುಟುಂಬದವರು ತಪ್ಪಾಗಿ ಭಾವಿಸಿಬಿಟ್ಟಿದ್ದರು. ತೀರಾ ಅನಿರೀಕ್ಷಿತವಾಗಿ ಎದುರಾದ ಸಂದರ್ಭದಲ್ಲಿ ಮದುವೆಯಾಗಿ ಅದಕ್ಕೆ ಎದುರಾದ ವಿರೋಧಕ್ಕೆ ಪ್ರತಿರೋಧ ಒಡ್ಡಲಾಗದ ಸ್ಥಿತಿಯಲ್ಲಿ ಇದ್ದಾಗ ನಮಗೆ ಧೈರ್ಯ ತುಂಬಿದ್ದು ಶಾಮಣ್ಣ ಮತ್ತು ಅವರ ಕುಟುಂಬದವರು ಎನ್ನುವುದನ್ನು ಮರೆಯುವಂತಿಲ್ಲ. ನಾವು ಮದುವೆಯಾಗಿ ದ್ದೇವೆ ಎಂಬುದನ್ನು ತಿಳಿದವರೆ ಶಾಮಣ್ಣ ತಮ್ಮ ಪತ್ನಿ ಶ್ರೀದೇವಿ ಹಾಗೂ ಮಗಳು ಲಾಜವಂತಿ ಜೊತೆ ಸಾಗರಕ್ಕೆ ಬಂದು ವಸಂತ್‌ಕುಮಾರ್ ಮತ್ತು ಅವರ ಪತ್ನಿಯೊಂದಿಗೆ ನಾವಿದ್ದ ಭಟ್ಕಳದ ನನ್ನ ಅಕ್ಕನ ಮನೆಗೆ ಬಂದರು. "ಎಲ್ಲಾ ಸರಿಯಾಗುತ್ತದೆ" ಎಂಬ ಭರವಸೆಯ ಮಾತುಗಳನ್ನು ಹೇಳಿದರು.

ನಂತರದ ಎರಡೇ ದಿನಕ್ಕೆ ಸಾಗರದ ಎನ್.ಡಿ. ವಸಂತ್‌ಕುಮಾರ್ ಅವರ ಮನೆಯಲ್ಲಿ ನಮ್ಮ ಮದುವೆ ಸಂಬಂಧ ಒಂದು ರಾಜಿ ಪಂಚಾಯ್ತಿ ನಡೆಯಿತು.

ಅವತ್ತು ಶಾಮಣ್ಣ ಕೂಡಾ ಬಂದಿದ್ದರು. ಅಂದು ನಡೆಯಬಾರದ ಕೆಲವು ಕಹಿ ಘಟನೆಗಳು ನಡೆದು ಅತಿರೇಕಕ್ಕೆ ಹೋಗಿ ಪಂಚಾಯ್ತಿ ವಿಫಲವಾಯಿತು. ಪಂಚಾಯ್ತಿ ನಂತರ ಶಾಮಣ್ಣ ಅವರು ಊರಿಗೆ ಮರಳುವ ವೇಳೆಯಲ್ಲಿ ಅವರನ್ನು ತೀರಾ ನೋಯಿಸುವ ರೀತಿಯಲ್ಲಿ ಘಟನೆಯೊಂದು ನಡೆಯಿತು ಎಂಬುದು ನನಗೆ ಎಷ್ಟೋ ಸಮಯದ ನಂತರ ಗೊತ್ತಾಯಿತು. ಶಾಮಣ್ಣ ಎಷ್ಟು ದೊಡ್ಡ ವ್ಯಕ್ತಿ ಎಂದರೆ ಇಂತಹ ಒಂದು ಘಟನೆ ನಡೆಯಿತು ಎಂದು ಇವತ್ತಿಗೂ ಯಾರೊಂದಿಗೂ ಹೇಳಿಲ್ಲ. ನಮ್ಮಿಂದಾಗಿ ಶಾಮಣ್ಣ ನೋವು ಅನುಭವಿಸುವಂತಾಯಿತಲ್ಲ ಎಂಬ ಪಾಪ ಪ್ರಜ್ಞೆ ಇಂದಿಗೂ ಕಾಡುತ್ತಿದೆ. ಯಾವುದೇ ತಪ್ಪು ಮಾಡದೆಯೂ ಶಾಮಣ್ಣ ತಮ್ಮ ಬದುಕಿನಲ್ಲಿ ಇಂತಹ ಸಂದರ್ಭಗಳನ್ನು ಎದುರಿಸಿದ್ದಾರೆ ಎಂಬ ಮಾತು ಬಂದಾಗಲೆಲ್ಲಾ ನಮ್ಮ ಮದುವೆ ಸಂದರ್ಭದ ಘಟನೆ ನೆನಪಾಗಿ ನಾನು ನನ್ನ ಪತ್ನಿ ಇಬ್ಬರೂ ಅಪರಾಧಿ ಸ್ಥಾನದಲ್ಲಿ ನಿಂತ ಹಾಗಾಗುತ್ತದೆ.

ಈಗ ನಮ್ಮೂರಿನ ವರದಾ ನದಿಯಲ್ಲಿ ಸಾಕಷ್ಟು ನೀರು ಹರಿದಿದೆ. ಅಂತೆಯೇ ಶಿವಮೊಗ್ಗದ ತುಂಗಾ ನದಿಯಲ್ಲಿ ಕೂಡಾ. ಹೆಚ್ಚಿನ ಅಂತರ್ಜಾತಿಯ ಪ್ರೇಮ ವಿವಾಹಗಳಲ್ಲಿ ಎದುರಾಗುವ ಆರಂಭದ ವಿರೋಧಗಳು ಕ್ರಮೇಣ ತಿಳಿಯಾಗಿ ನಾವು ಜಗತ್ತಿನ ಸಾಮಾನ್ಯ ಸಂಸಾರವಂದಿಗರಂತೆ ಬದುಕುತ್ತಿದ್ದೇವೆ. ಶಾಮಣ್ಣ ಅವರ ಕುಟುಂಬ ಮತ್ತು ಪ್ರತಿಭಾಳ ಕುಟುಂಬದವರು ಮೊದಲಿನಂತೆ ಹತ್ತಿರವಾಗಿದ್ದಾರೆ. ಹಿಂದಿನ ತಪ್ಪು ಕಲ್ಪನೆಗಳೆಲ್ಲ ದೂರಾಗಿವೆ. ಶಾಮಣ್ಣ ಮಾತ್ರ ಸಂತನಂತೆ ಏನೂ ನಡದೇ ಇಲ್ಲ ಎನ್ನುವ ರೀತಿಯಲ್ಲಿ ನಮ್ಮ ನಡುವೆ ಇದ್ದಾರೆ.

ಒಮ್ಮೆ ಭೂಮಿ ಹುಣ್ಣಿಮೆ ಸಂದರ್ಭದಲ್ಲಿ ನನ್ನ ಅಮ್ಮನನ್ನು ಭಗವತಿಕೆರೆಯ ಅವರ ತೋಟಕ್ಕೆ ಕರೆದುಕೊಂಡು ಹೋಗಿ ಅಮ್ಮನ ಕೈಯಿಂದ ಭೂಮಿ ಪೂಜೆ ಮಾಡಿಸಿದ ಶಾಮಣ್ಣ ಮತ್ತು ಅವರ ಕುಟುಂಬವನ್ನು ನೆನಪಿಸಿಕೊಂಡಾಗಲೆಲ್ಲಾ ಅವರು ನಮ್ಮವರೇ ಎಂಬ ಪ್ರೀತಿ, ಗೌರವ, ಅಭಿಮಾನ, ವಿಶ್ವಾಸ ಉಕ್ಕುತ್ತದೆ. ಇತ್ತೀಚಿನ ವರ್ಷಗಳಲ್ಲಿ ಹೆಗ್ಗೋಡಿನ ನೀನಾಸಂನ ಸಂಸ್ಕೃತಿ ಶಿಬಿರಕ್ಕೆ, ಪ್ರಸನ್ನ ಅವರ ಚರಕ ಸಂಸ್ಥೆಯ ಕಾರ್ಯಕ್ರಮಕ್ಕೆಂದು ಸಾಗರಕ್ಕೆ ಬಂದಾಗಲೆಲ್ಲಾ ಶಾಮಣ್ಣ ನಮ್ಮ ಮನೆಗೆ ಭೇಟಿ ಕೊಡಲು ಮರೆಯುವುದಿಲ್ಲ ಎನ್ನುವುದೇ ಖುಷಿಯ ವಿಷಯ. ಇವತ್ತಿಗೂ ಮೊಬೈಲ್ ಫೋನ್ ಇಟ್ಟುಕೊಳ್ಳದ ಶಾಮಣ್ಣ ಸಾಗರಕ್ಕೆ ಬಂದು ಅಲ್ಲಿನ ಬಸ್ ಸ್ಟಾಂಡ್‌ನಲ್ಲಿರುವ ನಮ್ಮಣ್ಣನ ಹೊಟೇಲ್‌ನಲ್ಲಿ ಇದ್ದವರಿಂದ ಫೋನ್ ಮಾಡಿಸಿ ಕರೆಯಿಸಿಕೊಳ್ಳುತ್ತಾರೆ. ಮನೆಗೆ ಬಂದಾಗ ರಾತ್ರಿ ಎಷ್ಟೊತ್ತಾದರೂ ಒಮ್ಮೆ ಸ್ನಾನ ಮಾಡಿ ಬಿಟ್ಟರೆ ಶಾಮಣ್ಣ ಫ್ರೆಶ್ ಆಗಿ ಬಿಡುತ್ತಾರೆ.

ಮಗಳು ಭೂಮಿಗೆ ಶಾಮಣ್ಣ ತಮಗೆ ಪ್ರಿಯವಾದ 'ಉಡುಗಣ ವೇಷ್ಟಿತ.....' ಮತ್ತು 'ಮುಗಿಲು ಮುಗಿಲು....' ಹಾಡನ್ನು ಹೇಳಿ ಅಥವಾ ಕೊಳಲಿನಿಂದ ನುಡಿಸಿ ನೀನು ಕಲಿತುಕೋ ಎನ್ನುತ್ತಾರೆ. ಹೀಗೆ ಮಕ್ಕಳ ಜೊತೆ ಮಕ್ಕಳೇ ಆಗಿ ಬಿಡುವ ಮುಗ್ಧತೆಯ ನೆರಳಲ್ಲೆ ಅವರ ಆಳವಾದ ನೈತಿಕ ಪ್ರಜ್ಞೆಗೂಡು ಕಟ್ಟಿದಂತೆ ಕಾಣುತ್ತದೆ.

ನನ್ನ ಅಂತರಂಗದ ಅರಿವು

ಎಂ.ವಿ. ಪ್ರತಿಭಾ, ಸಾಗರ

ನನ್ನೂರಾದ ಮೈದೊಳಲಿನ ಸರ್ಕಾರಿ ಶಾಲೆಯಲ್ಲಿ ನಾನು ನಾಲ್ಕೋ, ಐದನೆಯದೋ ತರಗತಿಯಲ್ಲಿ ಓದುತ್ತಿದ್ದೆ ... ಒಂದು ಮಧ್ಯಾಹ್ನ ಒಂದನೇ ತರಗತಿಯ ಕೊಠಡಿಯಿಂದ ಮಗುವೊಂದು ಜೋರಾಗಿ ಅಳುತ್ತಿದ್ದುದು ಕೇಳಿ..... ಪಾಠ ಮಾಡುತ್ತಿದ್ದ ದೇವೇಂದ್ರಪ್ಪ ಮೇಷ್ಟ್ರು ಸೇರಿದಂತೆ ನಮ್ಮ ಇಡೀ ಬಳಗ ಅವರ ಹಿಂದೆ ಅಲ್ಲಿಗೆ ಹೊರಟಿತು. ನೋಡಿದರೆ ಬಾರ್ಬಿ ಬೊಂಬೆಯಂಥ ಗುಂಗುರು ಕೂದಲಿನ ಮಗುವೊಂದು ಸಿಕ್ಕಾಪಟ್ಟೆ ಅಳುತ್ತಿತ್ತು. ಕಾರಣ ಅದಕ್ಕೆ ಅವತ್ತು ಮೊದಲ ದಿನದ ಶಾಲೆಯಾಗಿದ್ದು ಮಾತ್ರವಲ್ಲದೆ... ಅದೆಂಥದೋ ಸೊಪ್ಪು ತಾಗಿ ಮೈಯೆಲ್ಲ ತುರಿಕೆಗಳಾಗಿ ಬೊಬ್ಬೆಗಳಾಗಿ, ಆ ಉರಿ ತಡೆದುಕೊಳ್ಳದೆ ಅಳುತ್ತಿತ್ತು...... ತಕ್ಷಣ ಎಲ್ಲರು ಕಾರ್ಯೋನ್ಮುಖರಾದೆವು. ನಾನು ಓಡಿ ಹೋಗಿ ಅಮ್ಮನನ್ನು ಕರೆದುಕೊಂಡು ಬಂದೆ. ಹಾಗೆ ಸುಮಾರು ಮನೆಗಳ ಅಮ್ಮಂದಿರು, ಅಪ್ಪಂದಿರು ಜಮಾಯಿಸಿ ಔಷಧೋಪಚಾರಗಳು ನಡೆದವು. ಒಬ್ಬರು ವಿಭೂತಿ ಹಾಕಿದರು. ಮತ್ತೊಬ್ಬರು ಶಾಲೆಯನ್ನು ಕಾಯುತ್ತಿದ್ದ ಆಂಜನೇಯ ದೇವರ ಗುಡಿಯಿಂದ ಬೂದಿ ತರಹದ

ಪ್ರಸಾದ ತಂದು ಅವಳಿಗೆ ಹಚ್ಚಿದರು. ಒಟ್ಟಾರೆ ಮಗುವಿಗೆ ಯಾರ ಉಪಚಾರ ತಾಗಿತೋ... ಉರಿ ಕಡಿಮೆಯಾಗಿ ಅಳು ನಿಲ್ಲಿಸಿತು. ಅಮ್ಮ ನಮ್ಮನ್ನು ಶಾಲೆಗೆ ಕಳಿಸಿ ಅವಳನ್ನು ನಮ್ಮ ಮನೆಗೆ ಕರೆದುಕೊಂಡು ಹೋದರು. ಅವರ ಅಪ್ಪ ಬಂದ ಮೇಲೆ ಕರೆದುಕೊಂಡು ಬಾ ಅಂತ ಹೇಳಿದರು. ಆಗ... ಚರ್ಚೆಯಾಗಿದ್ದು... ಯಾರ ಮನೆ ಹುಡುಗಿ ಅದು ಅಂತ... ಒಬ್ಬೊಬ್ಬರು ಒಂದೊಂದು ವಿವರಣೆ ನೀಡಿದರು. ಅದ್ಯಾರೋ ಮಲೆನಾಡಿನವರಂತೆ, ಇಲ್ಲಿ ಜಮೀನು ತಗೆದುಕೊಂಡಿದ್ದಾರಂತೆ... ಉದ್ದ ಗಡ್ಡವಿದೆಯಂತೆ.... ಒಂದು ಮನೆ ಕಟ್ಟಿದಾರಂತೆ ಇತ್ಯಾದಿ ಇತ್ಯಾದಿ...

ಇರಲಿ, ಆ ದೊಡ್ಡ ಮನುಷ್ಯರನ್ನ ನೋಡೇ ಬಿಡೋಣ ಅಂತ ನಾವೆಲ್ಲ ಕಾದೆವು... ಆಗ ಒಂದು ಪೈಜಾಮ, ಜುಬ್ಬ- ಹಸಿರು ಶಾಲು ಹೊದ್ದು ಬಂದ ಆ ಗಡ್ಡದ ವ್ಯಕ್ತಿಯನ್ನು ನೋಡಿ ಯಾರೋ ಒಬ್ಬ 'ಅಯ್ಯೋ ಯಾರೋ ಸಾಬರು ಇರಬೇಕು' ಅಂದದ್ದು ನೆನಪಿದೆ... ಮಗುವಿನ ಹೆಸರು ಲಾಜವಂತಿ ಅಂತ ಹೇಳೋಕೆ ನಮಗೆಲ್ಲಾ ಬರುತ್ತಿರಲಿಲ್ಲ... ಹಾಗೇ ನಮ್ಮ ಊರಿಗೆ, ನಮ್ಮ ಮನೆಗೆ, ನನ್ನ ಬದುಕಿಗೆ ಬಂದ ಈ ಶಾಮಣ್ಣನವರು... ನನ್ನ ಅಂತರಂಗದ ಅರಿವಾಗಿ, ಗುರುವಾಗಿ, ಜೀವ ಚೈತನ್ಯವಾಗಿ ನನ್ನೊಳಗೆ ಬೆರೆತಿರುವುದು ನಾನು ಪಡೆದ ಭಾಗ್ಯ. ಅಂದಿನಿಂದ ಲಾಜವಂತಿ ನಮ್ಮ ಮನೆಯ ಮಗಳಾದಳು... ನಾನು ಅವರ ಮನೆಯ ಮಗಳಾದೆ... ಸಾವಿರ ಸಾವಿರ ಅನುಭವಗಳ ಮುಗಿಯದ ಸರಮಾಲೆ ಆ ನೆನಪು. ನಮ್ಮೂರ ಶಾಲೆಯೇ ಬದಲಾಯಿತು, ಮೇಷ್ಟ್ರುಗಳ ಪಠ್ಯಕ್ರಮ ಬದಲಾಯಿತು, ಊರಲ್ಲಿ ಸರಳ ವಿವಾಹಗಳು ಜರುಗತೊಡಗಿದವು... ಗಣಪತಿ ಹಬ್ಬದ ಸಂಭ್ರಮದಲ್ಲಿ ವಿಶಿಷ್ಟವಾದ, ಅರ್ಥಪೂರ್ಣ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯಲಾರಂಭಿಸಿದವು. ಗಂಭೀರ ವಿಚಾರಧಾರೆಯುಳ್ಳ ಕಾರ್ಯಕ್ರಮಗಳು ಊರ ಜನರಿಗೆ ಜೀವಚೈತನ್ಯ ನೀಡಿದವು. ಆಸ್ಪತ್ರೆ ವ್ಯವಸ್ಥೆ ಸುವ್ಯವಸ್ಥಿತವಾಯಿತು. ರೈತ ಸಂಘಟನೆ ಬಲವಾಯಿತು. ಮನೆಮನಗಳಲ್ಲಿ ಒಂದಿಷ್ಟು ಬದಲಾವಣೆ–ಎಲ್ಲವೂ ಅವರಿಂದ. ಹೆಚ್ಚು ಮಾತಾಡದೆ... ಎಲ್ಲವನ್ನು ಕಾರ್ಯರೂಪಕ್ಕೆ ತರುತ್ತಿದ್ದರು. ಅವರ ರೀತಿ ನಮಗೊಂದು ಮಾರ್ಗದರ್ಶಿಯಾಯಿತು.

ಅವರು ಒಂದು ಪ್ರತಿಭಟನೆಗೊ, ಕಾರ್ಯಕ್ರಮಕ್ಕೊ ಕರೆದರೆ ಊರಿಗೆ ಊರೇ ಹೊರಡುತ್ತಿತ್ತು. ನಮ್ಮೂರು ಮಾತ್ರವಲ್ಲ, ಅವರ ಪ್ರಭಾವಕ್ಕೆ ಸುತ್ತಮುತ್ತಲಿನ ಸುಮಾರು ಹಳ್ಳಿಗಳು ಚೈತನ್ಯ ಪಡೆದವು. ಅವರು ವಾಸಿಸುತ್ತಿದ್ದ ಏರಿಯಾಕ್ಕೆ ಅದೆಂಥದೋ ಕ್ಯಾಂಪ್ ಅಂತಿದ್ದರು... ಅವರೇ ಅದಕ್ಕೆ ಭಗವತಿಕೆರೆ ಅಂತ ಹೆಸರಿಟ್ಟರು.

ಇದು ಊರಿನ, ಸಮಾಜದ ನಡುವಿನ ಬದಲಾವಣೆಗಳಾದರೆ, ವೈಯಕ್ತಿಕವಾಗಿ ನನ್ನ ಮಟ್ಟಿಗೆ ಆದ ಪ್ರಭಾವವೇ ಬೇರೆ. ನನ್ನ ಅಪ್ಪ–ಅಮ್ಮ ಶಾಮಣ್ಣರನ್ನು ತುಂಬಾ

ಗೌರವಿಸುತ್ತಿದ್ದರು. ಅವರ ಪತ್ನಿ ಶ್ರೀದೇವಿ ಆಂಟಿ ಮತ್ತು ನನ್ನ ಅಮ್ಮ ಅದೆಷ್ಟು ಹೊಂದಿಕೊಂಡಿದ್ದರೆಂದರೆ... ಒಮ್ಮೆ ನಮ್ಮ ಕುಟುಂಬ ಮತ್ತು ಅವರ ಕುಟುಂಬದ ಎಲ್ಲಾ ಎಂಟು ಜನವು ಲಕ್ಕವಳ್ಳಿ ಹತ್ತಿರ ಬೋಟಿಂಗ್ ಎಂದು ಹೋದೆವು. ನೀರಲ್ಲಿ ದೋಣಿ ಒಮ್ಮೆ ಅಲ್ಲಾಡಿದಂತೆ ಭಾಸವಾಯಿತು. ಆಗ ಆಂಟಿ "ಅಯ್ಯೋ ಏನು ಹೆದರಿಕೆ ಇಲ್ಲ ... ಒಟ್ಟಿಗೆ ಇದೀವಿ... ಹೋದ್ರೆ ಒಟ್ಟಿಗೆ ಹೋಗ್ತಿವಿ... ಒಬ್ಬರು ಹೊರಗಿದ್ದರು ಕಷ್ಟ ಆಗ್ತಿತ್ತು" ಅಂದಿದ್ದರು. ಆಗ ಆ ಮಾತನ್ನು ಅರ್ಥ ಮಾಡಿಕೊಳ್ಳುವಷ್ಟು ಜ್ಞಾನ ನನಗಿರಲಿಲ್ಲ. ಈಗಲೂ ಅದು ನೆನಪಾದಾಗ ಕಣ್ಣು ತುಂಬಿ ಬರುತ್ತೆ...

ಬಾಲ್ಯದ ಶಾಲಾ ದಿನಗಳು ಅರ್ಥಪೂರ್ಣವಾಗಿದ್ದವು. ಸಂಗೀತದ, ಸಾಹಿತ್ಯದ, ನೃತ್ಯದ, ಓದಿನ, ಕವಿಗಳ, 'ಲಂಕೇಶ್ ಪತ್ರಿಕೆ'ಯ ಹೀಗೆ ಎಲ್ಲದರ ಪರಿಚಯ ಅವರಿಂದ... ನನ್ನ ತಂದೆ ವೀರಪ್ಪನವರಿಗೂ ಓದಿನ ಅಭಿರುಚಿ ಇತ್ತು. ಹಾಗಾಗಿ ಎಲ್ಲವು ಒಂದು ರೀತಿ ಸುಸ್ಥಿರ ಸಮಾಗಮವಾಗಿತ್ತು. ಸ್ವಚ್ಛತೆ, ಅಚ್ಚುಕಟ್ಟುತನ, ನೇರವಂತಿಕೆ, ಸತ್ಯ ಹೇಳುವ ಧೈರ್ಯ, ವಿರೋಧಿಯನ್ನೂ ನೋಯಿಸಲಾರದ ಸಂಕೋಚ, ಸಮಯ ಪಾಲನೆ, ಶಿಸ್ತು... ಕಲಿಯಲು ಶಾಮಣ್ಣನವರಲ್ಲಿ ನಮಗೆ ಬೇಕಾದಷ್ಟು ಇತ್ತು.

ಅವರ ಮನೆಗೆ ಯಾರೇ ಬಂದರೂ, ಹತ್ತು ನಿಮಿಷಕ್ಕಾದರೂ ನಮ್ಮ ಮನೆಗೆ ಕರೆದುಕೊಂಡು ಬರುತ್ತಿದ್ದರು. ಜೊತೆಗೆ ಊರಿನ ಕಾರ್ಯಕ್ರಮಗಳಿಗೆ ಶಾಮಣ್ಣರೇ ಕರೆಸುತ್ತಿದ್ದ ಅತಿಥಿಗಳಿಗೆ ನಮ್ಮ ಮನೆಯಲ್ಲೇ ಆತಿಥ್ಯವಾಗುತ್ತಿತ್ತು. ಮತ್ತೆ ನನ್ನ ರಜಾ ದಿನಗಳಲ್ಲಿ ಊರೂರು ಸುತ್ತಿಸುತ್ತಿದ್ದರು. ಈ ಸಂದರ್ಭಗಳಲ್ಲಿ ನನ್ನನ್ನು ಪರಿಚಯಿಸುತ್ತಿದ್ದ ರೀತಿ ಇತ್ತಲ್ಲ... 'ನೋಡ್ರಿ ಇವಳು ಪ್ರತಿಭಾ ಅಂತ, ನಮ್ಮ ಮೈದೊಳಲು ವೀರಪ್ಪನವರ ಮಗಳು. ನನಗು ಮಗಳೇ. ಬಹಳ ಚೂಟಿ...' ಇತ್ಯಾದಿ. ಪ್ರಾಯಶಃ ಹೀಗೆ ಅವರು ನನಗೆ ಪರಿಚಯಿಸಿದವರ ಪಟ್ಟಿ ಮಾಡಿದರೆ ಅದೇ ಒಂದು ಪುಸ್ತಕವಾದಿತು. ಗೆಳೆಯ ಶಿವಮೊಗ್ಗ ನಂದನ್, ಶೃಂಗೇಶ್, ಚಂದ್ರೇಗೌಡರಿಂದ ಹಿಡಿದು... ಚದುರಂಗ, ತೇಜಸ್ವಿ, ಲಂಕೇಶ್‌ವರೆಗೆ ಎಲ್ಲ ಪ್ರಾಯದ, ಎಲ್ಲ ರಂಗದ ನೂರಾರು ವ್ಯಕ್ತಿಗಳನ್ನು ನನಗೆ ಪರಿಚಯಿಸಿದರು. ಕುವೆಂಪು ಮನೆಗೆ ಕರೆದೊಯ್ದು ಅವರ ಮನೆಯವರನ್ನೆಲ್ಲ ಪರಿಚಯಿಸಿದ್ದರು. ಕುವೆಂಪು ನನ್ನ ಪ್ರಭಾವಿಸಿದ್ದು ಆಗಲೇ.

ನಾನು ಸಂಗೀತದ ಪಾಠ ಕಲಿತದ್ದು ಹುಮಾಯೂನ್‌ರವರಿಂದ. ಅವರನ್ನು ನಮ್ಮೂರ ಶಾಲೆಗೆ ಸಂಗೀತದ ಪಾಠಕ್ಕೆ ಕರೆಸಿದವರು ಮತ್ತು ಮಕ್ಕಳನ್ನು ಸಂಗೀತಕ್ಕೆ ಒಲಿಸಿದವರು ಶಾಮಣ್ಣನವರೇ. ಇಡೀ ಊರು ಹುಮಾಯೂನ್ ಸರ್‌ನ್ನು, ಅವರ ಗಾಯನವನ್ನು ಪ್ರೀತಿಸುತ್ತಿತ್ತು. ಶಾಮಣ್ಣರವರ ಜೊತೆಗೆ ಶಾಮಣ್ಣನವರ ಎಲ್ಲ ಸಂಬಂಧಿಕರ ಮನೆ, ಊರುಗಳನ್ನು ನೋಡಿದ್ದೇನೆ... ನಮ್ಮ ಪ್ರಯಾಣದಲ್ಲಿ ಒಮ್ಮೊಮ್ಮೆ

ಜೀಪು ಕೆಡುತ್ತಿತ್ತು. ನಾವು ತಳ್ಳುತ್ತಿದ್ದೆವು... ಶಾಮಣ್ಣ ಜೀಪು ರಿಪೇರಿಯಲ್ಲಿ ಮಗ್ನರಾಗುತ್ತಿದ್ದರು. ಅವರ ಮನೆಯಲ್ಲೆ ಹೆಚ್ಚು ಸಮಯ ಇರುತ್ತಿದ್ದೆ. ನನ್ನ ಉದ್ದ ಜಡೆಯನ್ನು ಆಂಟಿ ಬಾಚುತ್ತಿದ್ದರು. ಹೀಗೆಲ್ಲ ನೆನಪಿಸಿಕೊಳ್ಳುವಾಗ, ಅನುಭವ ಹಂಚಿಕೊಳ್ಳುವಾಗ ಶಾಮಣ್ಣ ಹಾಗು ಶ್ರೀದೇವಿ ಆಂಟಿ ಇಬ್ಬರನ್ನು ಬೇರೆ ಬೇರೆಯಾಗಿ ನೋಡಲು ಆಗುವುದೇ ಇಲ್ಲ.

ನನಗೆ ಸಿನಿಮಾ ನೋಡುವ ಹುಚ್ಚಿತ್ತು. ಈಗಲೂ ಇದೆ. ಒಮ್ಮೆ ಹೀಗೆ ಹಾಸನಕ್ಕೆ ಹೋಗಿದ್ದಾಗ ಸಿನಿಮಾ ನೋಡುವ ಆಸೆ ಹೇಳಿಕೊಂಡೆ. ಎಂದೂ ಟಾಕೀಸಿಗೆ ಹೋಗದ ಅವರು ಅಲ್ಲಿನ ಥಿಯೇಟರ್ ಒಂದರಲ್ಲಿ ಕುಳಿತು ನನಗಾಗಿ ಪೂರ್ಣ ಸಿನಿಮಾ ನೋಡಿದ್ದರು. ಗೀತಾ ನಟಿಸಿದ 'ಮಾಧುರಿ' ಸಿನಿಮಾ ಅದು. ನಾನಾಗ ಹತ್ತನೆ ತರಗತಿ... ಮೊದಲ ಮಗಳು ಉಲೂಪಿ ನಾನು ಒಂದೇ ವಯಸ್ಸಿನವರು. ಅವಳ ನೋಡುತ್ತ ಸುಮಾರು ಕಲಿತೆ ನಾನು. ಈಗಲೂ ಸಿಕ್ಕಾಗ ಅಷ್ಟೆ ಮುಗ್ಧತೆಯಿಂದ, ಅದೇ ಪ್ರೀತಿಯ ನೆನಪಿನಿಂದ ಮಾತಾಡುತ್ತಾಳೆ...

ಶುಚಿತ್ವಕ್ಕೆ ತುಂಬಾ ಮಹತ್ವ ನೀಡುತ್ತಿದ್ದರು... ಅದಕ್ಕಾಗಿ ಸಾಮಾಜಿಕ ಆಂದೋಲನಕ್ಕೆ ಕೈ ಹಾಕಿದವರು ಶಾಮಣ್ಣ. 'ಅರಿವು' ಎಂಬ ಸಂಸ್ಥೆಯನ್ನು ಹುಟ್ಟು ಹಾಕಿ ನಮ್ಮನ್ನೆಲ್ಲ ಸ್ವಚ್ಚತಾ ಆಂದೋಲನ, ಮದ್ಯಪಾನ ವಿರೋಧಿ ಆಂದೋಲನಗಳಲ್ಲಿ ತೊಡಗಿಸುತ್ತಿದ್ದರು. ತಾವೇ ಕೈಯಲ್ಲಿ ತಯಾರಿಸಿದ ಗ್ರೀಟಿಂಗ್ಸ್‌ಗಳನ್ನು ಮಾಡುತ್ತಿದ್ದರು. ಅವುಗಳ ಲಾಭವನ್ನು ಗ್ರಾಮೀಣಾಭಿವೃದ್ಧಿಗೆ ಬಳಸುವುದು ಅವರ ಆಲೋಚನೆಯಾಗಿತ್ತು.

ಸಂಬಂಧಗಳಿಗೆ ಇಷ್ಟು ಮಹತ್ವ ಇರುತ್ತದಲ್ಲ ಅಂತ ನನಗೆ ಅರಿವಾಗಿದ್ದು, ನಾನು ಕಲಿತದ್ದು ಅವರಿಂದ... ಹೀಗೆ... ಒಂದು ದಿನ ಭದ್ರಾವತಿಯ ಕಡೆಗೆ ಕಾರಿನಲ್ಲಿ ಹೋಗ್ತಾಯಿದ್ವಿ, ಒಂದಿಷ್ಟು ಕತ್ತೆಗಳನ್ನು ನಡೆಸಿಕೊಂಡು ಒಬ್ಬ ಹುಡುಗ ಹೋಗ್ತಿದ್ದ. ಹಾಗೇ ಹೋಗುವಾಗ ಚಾವಟಿಯಿಂದ ಕತ್ತೆಗಳ ಬೆನ್ನಿಗೆ, ಹಿಂಭಾಗಕ್ಕೆ ಹೊಡೆಯುತ್ತಿದ್ದ... ಹಾಗಾಗಿ ಅವುಗಳ ಚರ್ಮ ಹಿಂಭಾಗದಲ್ಲಿ ಸುಲಿದು ಹೋಗಿತ್ತು... ಅಂಕಲ್ ಡ್ರೈವ್ ಮಾಡುತ್ತಿದ್ದವರು ಅವನ ಬಳಿ ನಿಲ್ಲಿಸಿ 'ನಿನ್ನ ಅಂಡ ಮೇಲೆ ಹೀಗೆ ಬಾರಿಸಿದರೆ ನಿಂಗೆ ನೋವಾಗಲ್ವ, ಹಂಗೆ ಚರ್ಮ ಕಿತ್ತೋಗೋಹಾಗೆ ಹೊಡಿತಿಯಲ್ಲ...' ಅಂತ ಗದರಿಸಿ ಜೋರುಮಾಡಿ ಪಾಠ ಹೇಳಿದರು. ಆ ಹುಡುಗ ಒಮ್ಮೆಯೂ ತಿರುಗಿ ಮಾತಾಡದೆ ತನ್ಮಯನಾಗಿ ಇವರತ್ತ... ನೋಡಿ ತಲೆತಗ್ಗಿಸಿದ... ಅವತ್ತು ಜೀವ ಸಂಕುಲದ ನೋವಿಗೆ ಅವರ ಸ್ಪಂದನೆ ಕಂಡು ಬೆರಗಾಗಿದ್ದೆ. ಅವರೊಂದಿಗೆ... ಎಷ್ಟೆಲ್ಲಾ ತಿರುಗಾಡಿದ್ದೆ. ಶಾಲೆ, ಮನೆ, ಪ್ರತಿಭಟನೆಗಳು, ರೈತ ಸಂಘದ ಮೀಟಿಂಗ್‌ಗಳು, ಸಮಾರಂಭಗಳು, ವಿಚಾರ ಸಂಕಿರಣಗಳು...... ನನ್ನ ಹಾಸ್ಟೆಲ್‌ಗೆ ಅವರು ಬಂದರೆ 'ಪ್ರತಿಭಾನ ಅಪ್ಪ ಬಂದಿದ್ದಾರೆ' ಅಂತ ಅಂತಿದ್ರು ಹುಡಿಗೀರು. ಅದೆಷ್ಟು 'ಮಂತ್ರ

ಮಾಂಗಲ್ಯ' ಮದುವೆಗಳಿಗೆ ಅವರೊಂದಿಗೆ ಭಾಗವಹಿಸಿದ್ದೇನೆ. ಕಳೆದ ಮಳೆಬಿಲ್ಲು ಮಕ್ಕಳ ರಂಗ ಶಿಬಿರದ ನಡುವೆ ಕುಪ್ಪಳಿಯಲ್ಲಿ ಒಂದು 'ಮಂತ್ರ ಮಾಂಗಲ್ಯ' ನಡೆಯುವುದಿತ್ತು. ಕಡಿದಾಳು ಪ್ರಕಾಶಣ್ಣ ನನಗೆ ಮಂತ್ರಮಾಂಗಲ್ಯ ಮಾಡಿಸಲು ಹೇಳಿದರು. ಶಾಮಣ್ಣರ ಒಡನಾಟವೇ ಧೈರ್ಯ. ಮದುವೆ ಮಾಡಿಸುವಾಗ ಅಂಕಲ್ ನನ್ನ ಜೊತೆಗಿದ್ದ ಭಾವ ತುಂಬಿತ್ತು.

ಹೀಗೆಲ್ಲಾ ಜೊತೆ ಇದ್ದಾಗ ಒಮ್ಮೊಮ್ಮೆ ಅತ್ಯಂತ ಗಂಭೀರ ವಿಚಾರಗಳು ನಡೆದಿದ್ದವು. ಒಮ್ಮೊಮ್ಮೆ ಹಾಸ್ಯಾಸ್ಪದ ಘಟನೆಗಳು ನಡೆಯುತ್ತಿದ್ದವು. ಒಮ್ಮೆ... ನಾನು ಡಿಗ್ರಿ ಓದುತ್ತಿದ್ದೆ... ಬೇರೆ ಊರಿನ ಸಭೆ ಮುಗಿಸಿಕೊಂಡು ಸುಮಾರು ರಾತ್ರಿ ಹತ್ತರ ಹೊತ್ತಿಗೆ ಶಿವಮೊಗ್ಗ ಬಂದಿಳಿದಿದ್ದೆವು. ಹಸಿವಾಗಿತ್ತು. ನಾನು ಅಂಕಲ್ ಇಬ್ಬರೇ ಇದ್ವಿ. ಮೈದೊಳಲಿಗೆ ಹೋಗೊ ತನಕ ಲೇಟ್ ಆಗುತ್ತೆ ಅಂತ ಏನಾದರೂ ತಿನ್ನೋಣ ಅಂದರೆ ಅಷ್ಟೊತ್ತಿಗೆ ಯಾವ ಹೊಟೇಲೂ ತೆರೆದಿರಲಿಲ್ಲ. ನನಗೆ ಚೆನ್ನಾಗಿ ನೆನಪಿದೆ... ಗೋಪಿ ಸರ್ಕಲ್ ಬಳಿ ಯಾವುದೋ ಬಾರ್ ಆ್ಯಂಡ್ ರೆಸ್ಟೋರೆಂಟ್ ತೆರೆದಿತ್ತು. ಅಲ್ಲಿ ಹೋಗಿ ತಿನ್ನೋಕೆ ಏನಿದೆ ಅಂತ ವಿಚಾರಿಸಿದ್ವಿ. ರೊಟ್ಟಿ ಅಂದ್ರು. ಸರಿ ಒಳಗೆ ಹೋದ್ರೆ ಬರಿ ಗಂಡಸರು... ಇಬ್ಬರಿಗು ಸಂಕಟ. ಸರಿ ಹೇಗೊ... ರೊಟ್ಟಿ ತಿನ್ನೋಕೆ ಶುರುಮಾಡಿದರೆ ಯಾರ್ಯಾರೋ ಬಂದು ಅಂಕಲ್ ಹತ್ತಿರ ಮಾತಾಡೋಕೆ ಶುರುಮಾಡಿದರು. ಅಂತು ಇಂತು ಮುಗಿಸಿ ಹೊರಟ್ವಿ. ಮಾರನೇ ದಿನ ಕಾಲೇಜಲ್ಲಿ ಎಲ್ಲರ ಬಾಯಲ್ಲೂ ತಮಾಷೆಯ ಮಾತು... ಪ್ರತಿಭಾ ರಾತ್ರಿ ಬಾರ್‌ನಲ್ಲಿ ಇದ್ದಳಂತೆ ಅಂತ... ಹೇಳಿದರೆ ಮುಗಿಯುವುದೇ ಇಲ್ಲ... ಈ ನಡುವೆ ಅವರು ಪರಿಚಯಿಸಿದವರಲ್ಲಿ ಚಂದ್ರೇಗೌಡರು ಕೂಡ ಒಬ್ಬರು. ಅದೇ ನೆನಪು ಅವರಿಗೆ... ಅದಕ್ಕೆ ಮರಿ ಅಂತಲೇ ಮಾತು ಶುರು ಮಾಡ್ತಾರೆ. ಹಲವಾರು ಜನ ನನ್ನನ್ನು ಶಾಮಣ್ಣನವರ ಶಿಷ್ಯೆ-ಮಗಳು ಅಂತಾನೆ ಕರಿತಾರೆ... ನನ್ನ ಮದುವೆ ವಿಷಯದಲ್ಲಿ ಒಂದಿಷ್ಟು ಕಹಿಯಾಗಿದೆ... ಅದರ ಕುರಿತು ನನಗೆ ವಿಷಾದವಿದೆ... ನೋವಿದೆ... ಈಗಲೂ ನನಗೆ ನೆನಪಾದರೆ... ದುಃಖವೆನ್ನಿಸುತ್ತಿದೆ... ಆದರೆ ಅದೆಲ್ಲವನ್ನು ಮೀರಿ ಅವರು ನನ್ನ ಜೊತೆಗಿದ್ದಾರೆ. ನನ್ನೊಳಗಿದ್ದಾರೆ. ನಾನು ಆರಂಭಿಸಿದ ಮಕ್ಕಳ ರಂಗ ತರಬೇತಿಯ ಮೊದಲ ಶಿಬಿರವನ್ನು ಅವರೇ ಉದ್ಘಾಟಿಸಬೇಕೆಂಬ ಆಸೆಯಿತ್ತು. ಸಾಗರದಲ್ಲಿ 'ಚೈತ್ರಮೇಳ' ಮಕ್ಕಳ ರಂಗಶಿಬಿರವನ್ನು ಅವರೆ ದೀಪ ಬೆಳಗಿಸಿ ಉದ್ಘಾಟಿಸಿದರು. ಅಂದು ಶಾಮಣ್ಣ ಬಂದು ಹಚ್ಚಿದ ಹಣತೆ... ನನ್ನನ್ನು ಮಕ್ಕಳ ರಂಗಭೂಮಿಯಲ್ಲಿ ಸ್ಥಿರವಾಗಿ ನಿಲ್ಲಿಸಿದೆ. ನಮ್ಮ ಕುಪ್ಪಳಿಯ 'ಮಳೆಬಿಲ್ಲು' ಶಿಬಿರಕ್ಕೆ ಅವರೇ ಸ್ಫೂರ್ತಿ, ಅವರದೇ ಮಾರ್ಗದರ್ಶನ. ಸಾವಿರಾರು ಮಕ್ಕಳ ನಡುವಿನ ಸಣ್ಣ ಮಗು ಶಾಮಣ್ಣ. ನಾನು ಯಾವುದನ್ನು ಅವರಿಂದ ಕಲಿತಿದ್ದೇನೊ

ಅವನ್ನೆಲ್ಲ ನನ್ನ ಮಗಳಿಗೆ ಅವರು ಕಲಿಸುತ್ತಿದ್ದಾರೆ. ನನ್ನ ಮೂಲಕ ಅವಳು ಕಲಿಯುತ್ತಿದ್ದಾಳೆ. ನನಗೆ, ರಾಘುಗೆ ಮದುವೆಯಲ್ಲಿ ಇದ್ದ ಕೊರಗು ನನ್ನ ಮಗಳಿಂದ ಮರೆಯಾಗಿದೆ...

ಶಬ್ದಕ್ಕೆ ನಿಲುಕದ ನಿಶ್ಯಬ್ದವೂ, ನನ್ನೊಳಗಿನ ಸಂಗೀತವೂ ಲಯವೂ ಅವರೇ. ಶಾಮಣ್ಣ ನನ್ನ ಅಂತರಂಗದ ಅರಿವು. ನನ್ನೊಳಗಿನ ಚೈತನ್ಯ. ಬರೆದರೆ, ನುಡಿದರೆ, ಬಯಲಾದರೆ ಆ ಭಾವಗಳು ಬಾಡಿ ಹೋಗಿಬಿಡುತ್ತಾವೆಂಬ ಆತಂಕ. ನನ್ನೆದೆಯ ಬೆಳದಿಂಗಳಲ್ಲಿ ಇರಲಿ ಹಾಗೆಯೇ ಅಂತ ಕಾಪಿಟ್ಟು ಕೊಂಡಿರುವ ನನಗೆ, ಇಲ್ಲಿ ಹೇಳಬೇಕಾದ್ದನ್ನು ಬರೆಯಲಾಗಿಲ್ಲವೆಂಬ ಸಂಕೋಚವೂ ಇದೆ. ಅಲ್ಲವೆ ಮತ್ತೆ, ಕೊಳಗದಿಂದ ಆಕಾಶವನ್ನು ಅಳೆಯಲಾದೀತೆ? ನನ್ನಲ್ಲೇನಾದರೂ ಹೋರಾಟದ, ಭಾವುಕತನದ, ಸಾಂಸ್ಕೃತಿಕ ನಡೆಗಳು ಒಳಗೊಂಡಿದ್ದರೆ ಅದು ಅವರಿಂದ ಬಂದ ಬಳುವಳಿ... ಅವರ ಫೋಟೋಗ್ರಫಿಗೆ ನಾನು ಎಷ್ಟೋ ಸರಿ ರೂಪದರ್ಶಿಯಾಗುತ್ತಿದ್ದೆ. ಆಗೆಲ್ಲ ನನ್ನ ಕೈ ಹಿಡಿದುಕೊಂಡು ಬೆಟ್ಟ-ಗುಡ್ಡ ಹತ್ತಿಸುತ್ತಿದ್ದರು... ಅವರ ಸ್ಕೂಟರಿನಲ್ಲಿ ಹಿಂದೆ ಕೂರಿಸಿಕೊಂಡು ಓಡಾಡುತ್ತಿದ್ದರು... ಈಗ ಸಾಗರಕ್ಕೆ ಬಂದರೆ ನಾನು ಅವರನ್ನು ಹಿಂದೆ ಕೂರಿಸಿಕೊಂಡು ಸಂಭ್ರಮದಿಂದ ಓಡಾಡುತ್ತೇನೆ... ಆಗ ಜಗತ್ತನ್ನೇ ಗೆದ್ದೆನೆಂಬ ಖುಷಿ. ಮೊನ್ನೆ ಕವಿಶೈಲ ಹತ್ತುವಾಗ ಅವರ ಕೈಹಿಡಿದುಕೊಂಡೇ ನಡೆದೆ... ಅಲ್ಲೊಂದು ದಿವ್ಯಶಕ್ತಿ... ಸಂಚಾರವಾಗುತ್ತದೆ... ನನ್ನಂಥ ಅದೆಷ್ಟೊ ಮನಸ್ಸಿಗೆ ಶಾಮಣ್ಣ ಜೀವ ಚೈತನ್ಯ... ಅವರೆಲ್ಲರಿಂದಲೂ ಅವರ ಆದರ್ಶಗಳು ಬೆಳಗಲಿ...

ಸಮಾಜವಾದಿ ಆದರ್ಶಗಳ ಪ್ರತೀಕ: ಶಾಮಣ್ಣ

ಬಿ.ವಿ. ಸುರೇಂದ್ರ

ಕಡಿದಾಳು ಶಾಮಣ್ಣನವರ ಗೌರವ ಗ್ರಂಥಕ್ಕೆ ಲೇಖನ ಬರೆಯುವ ಈ ಸಂದರ್ಭದಲ್ಲಿ ನನ್ನ ಮನಸ್ಸಿಗೆ ಬಹು ಮುಖ್ಯವಾಗಿ ಬರುತ್ತಿರುವುದೇನೆಂದರೆ ಅವರೊಡನೆಯ ನಾಲ್ಕೈದು ವರ್ಷಗಳ ಪರಿಚಯದಲ್ಲಿ ಅವರೆಂದೂ ಎಪ್ಪತ್ತೋ ಎಪ್ಪತ್ತೈದೊ ತಲುಪಿದ್ದಾರೆಂದು ಅನಿಸಿಯೇ ಇಲ್ಲ ಎಂಬುದು. ಎಲ್ಲಾ ವಯೋಮಾನದವರಿಗೂ ಅವರೊಬ್ಬ ಸಮವಯಸ್ಕರಾಗಿ ಸದಾ ಪುಟಿಯುವ ಉತ್ಸಾಹದ ಚಿಲುಮೆಯಾಗಿದ್ದಾರೆ.

ಸಮಾಜವಾದ, ಜಾತ್ಯಾತೀತತೆ, ಪ್ರಗತಿಪರತೆ ಯಂತಹ ಧೋರಣೆಗಳನ್ನು ಬುದ್ಧಿ ಬಂದಾಗಿನಿಂದ ಬೆಳೆಸಿಕೊಂಡಿದ್ದ ನನಗೆ ಸಹಜವಾಗೇ ಪತ್ರಿಕೆಗಳ ವರದಿಗಳ ಮೂಲಕ ತಿಳಿದುಬರುತ್ತಿದ್ದ ಶಾಮಣ್ಣನವರ ವ್ಯಕ್ತಿತ್ವ, ಸಾಮಾಜಿಕ ಚಟುವಟಿಕೆಗಳು ಹಾಗೂ ರೈತ ಸಂಘದ ಹೋರಾಟಗಳು ನನ್ನಲ್ಲಿ ಅವರ ಬಗ್ಗೆ ಅಪಾರವಾದ ಅಭಿಮಾನವನ್ನು ಬೆಳೆಸಿತ್ತು. ಆದರೆ ಅವರ ನೇರ ಸಂಪರ್ಕ ಹಾಗೂ ಪರಿಚಯದ ಭಾಗ್ಯ ದೊರೆತದ್ದು ೨೦೧೦ರ ಸಾಗರದ ಚರಕ ಉತ್ಸವಕ್ಕೆ ಬಂದಿದ್ದಾಗ. ಉದ್ಯೋಗ ನಿಮಿತ್ತ ಸಾಗರದಲ್ಲಿ ನಾವು ನೆಲೆಸಿದ್ದಾಗ

ಪ್ರತಿಭಾ ಮತ್ತು ರಾಘವೇಂದ್ರ ದಂಪತಿಗಳ ಮೂಲಕ ಪರಿಚಯವಾಗಿ ಅಂದು ರಾತ್ರಿ ನಮ್ಮ ಮನೆಗೆ ಊಟಕ್ಕೆ ಕರೆದುಕೊಂಡು ಬಂದಿದ್ದೆವು. ಅಂದು ನಾನು ಮತ್ತು ನನ್ನ ಪತ್ನಿ ಅವರೊಡನೆ ಸ್ವಲ್ಪ ಮಟ್ಟಿನ ಅಳುಕಿನಿಂದ, ಔಪಚಾರಿಕವಾಗಿ ನಡೆದು ಕೊಳ್ಳುತ್ತಿದ್ದಾಗ ಶಾಮಣ್ಣನವರು ಎಷ್ಟು ಸಹಜವಾಗಿ, ಸರಳವಾಗಿ ನಾವು ಅವರಿಗೆ ಬಹುಮುಖ್ಯರು ಎಂಬಂತೆ ಮಾತನಾಡುತ್ತಾ ಕುಳಿತರೆಂದರೆ ಸ್ವಲ್ಪ ಸಮಯದಲ್ಲೇ ನಮಗರಿವಿಲ್ಲದಂತೆಯೇ ಹೊಸ ಪರಿಚಯದ ಬಿಗು ಕಳೆದು ಹಗುರಾಗಿದ್ದೆವು. ತಮ್ಮ ಸರಳ ನೇರ ನಡೆನುಡಿಯಿಂದ ಮೊದಲ ಪರಿಚಯದಲ್ಲೇ ಆಪ್ತ ಒಡನಾಡಿ ಯಗಿದ್ದರು. ಶಾಮಣ್ಣನವರ ಸಾಮಾಜಿಕ ಚಟುವಟಿಕೆಗಳು, ಹೋರಾಟ ಆಂದೋಲನ ಗಳ ಬಗ್ಗೆ ಬರೆಯುವ ಅರ್ಹತೆ ಇಲ್ಲವೆಂದು ಭಾವಿಸಿ ಅವರೊಡನೆಯ ಒಡನಾಟದ ಕೆಲವು ಸಂದರ್ಭಗಳನ್ನು ಮತ್ತು ಅದರಿಂದ ನಮಗೆ ಸಿಕ್ಕ ಒಳನೋಟಗಳು, ಆನಂದವನ್ನು ಹೇಳಲಿಕ್ಕಷ್ಟೇ ಮಿತಿಗೊಳಿಸಿಕೊಳ್ಳುತ್ತೇನೆ. ಮೊದಲ ಸಲ ಶಾಮಣ್ಣನವರು ನಮ್ಮ ಮನೆಗೆ ಬಂದಾಗ ಸುಮಾರು ರಾತ್ರಿ ಒಂದು ಗಂಟೆಯಾದರೂ ಕಾಲದ ಮತ್ತು ದಣಿವಿನ ಪರಿವೇ ಇಲ್ಲದೆ ಹರಟೆ, ಹಾಡು, ಹಸೆ ಮತ್ತು ಅವರ ನಿರಂತರ ಒಡನಾಡಿಯಾದ ಕೊಳಲನ್ನು ನುಡಿಸುವುದರಲ್ಲಿ ತಲ್ಲೀನರಾಗಿದ್ದು ನಮ್ಮೆಲ್ಲರನ್ನೂ ಮೋಡಿ ಮಾಡಿತ್ತು. ಅಂದು ಅವರ ಜೀವನೋತ್ಸಾಹವನ್ನು ಕಂಡು ಬೆರಗಾಗಿದ್ದೆವು.

ನಾವು ಧಾರವಾಡಕ್ಕೆ ವರ್ಗವಾಗಿ ಬಂದಾಗ ಇಲ್ಲಿ ಪಂ. ರಾಜೀವ ತಾರಾನಾಥ ಅವರ ಸಂಗೀತ ಕಛೇರಿ ಮತ್ತು ಅವರಿಗೆ ಸನ್ಮಾನ ಏರ್ಪಡಿಸಿದ್ದು ಶಾಮಣ್ಣನವರು. ಅತಿ ಉತ್ಸಾಹದಿಂದ ಶಿವಮೊಗ್ಗದಿಂದ ಕೆಂಪು ಬಸ್ಸು ಹತ್ತಿ ಕಾರ್ಯಕ್ರಮಕ್ಕೆ ಬಂದಿದ್ದರು. ಕಾರ್ಯಕ್ರಮದ ನಂತರ ತಮ್ಮ ಗುರು ರಾಜೀವ ತಾರಾನಾಥರಿಗೆ ನನ್ನನ್ನು ಮತ್ತು ನನ್ನ ಪತ್ನಿಯನ್ನು ಗುಂಪಿನೊಳಗೆ ಎಳೆದುಕೊಂಡು ಹೋಗಿ ಅವರಿಗೆ ನಾವೇನೋ ವಿಶೇಷ ವ್ಯಕ್ತಿಗಳೇನೋ ಎನ್ನುವಂತೆ ಪರಿಚಯ ಮಾಡಿಸಿ ನಮಗೆ ಸಂಕೋಚ ಉಂಟು ಮಾಡಿದ್ದರು. ಇನ್ನೂ ವಿಶೇಷವೇನೆಂದರೆ ಕಾರು ಹತ್ತಿ ಹೊರಡಲು ಸಿದ್ದರಾದ ರಾಜೀವ ತಾರಾನಾಥರನ್ನು ನಿಲ್ಲಿಸಿ ನಮ್ಮ ಇಬ್ಬರು ಪುಟ್ಟ ಮಕ್ಕಳನ್ನು ಅವರಿಗೆ ಪರಿಚಯಿಸಿ ನಮ್ಮ ಮಕ್ಕಳು ಕಕ್ಕಾ ಬಿಕ್ಕಿ ಆಗುವಂತೆ ಮಾಡಿದರು. ರಾಜೀವ ಅವರು ನಮ್ಮ ಇಬ್ಬರು ಮಕ್ಕಳಲ್ಲಿ ಒಬ್ಬರನ್ನು ಸಂಗೀತ ಕ್ಷೇತ್ರಕ್ಕೆ ಕೊಟ್ಟುಬಿಡಿ ಎಂದು ಕೇಳಿದ್ದು ಈಗಲೂ ನಮಗೆ ಒಂದು ಸವಿ ನೆನಪು. ಇದನ್ನು ಕೇಳಿ ಕೆಲ ಕ್ಷಣ ಶಾಮಣ್ಣನವರೂ ಸಂಭ್ರಮ ಪಟ್ಟಿದ್ದು, ಅವರ ಸಂಗೀತ ಅಭಿಮಾನಕ್ಕೆ ಸಾಕ್ಷಿಯಾಗಿತ್ತು ಹಾಗೂ ಅವರ ಒಡನಾಟಕ್ಕೆ ಸಿಕ್ಕ ಪ್ರತಿಯೊಬ್ಬರನ್ನೂ ಅವರು ಬಹುಮುಖ್ಯ ವ್ಯಕ್ತಿಯನ್ನಾಗಿ ಮಾಡಿಬಿಡುತ್ತಿದ್ದರು. ಇದು ಅಪ್ಪಟ ಸಮಾಜವಾದಿಯೊಬ್ಬನಲ್ಲಿ ಅಡಕವಾಗಿರಬೇಕಾದ ಮೂಲ ಗುಣವೆಂದು ನನಗೆ ಗಾಢವಾಗಿ ಅನಿಸಿತು.

ಶಾಮಣ್ಣನವರು ನಮ್ಮ ಮನೆಗೆ ಬಂದ ಇನ್ನೊಂದು ಸಂದರ್ಭದಲ್ಲಿ ಅವರಿಗೆ ಸಿಹಿ ಊಟ ಪ್ರೀತಿಯೆಂದು ತಿಳಿದಿದ್ದರೂ ಅಂದಿನ ಊಟದಲ್ಲಿ ಏನು ಸಿಹಿಯನ್ನು ಬಡಿಸಲಾಗಲಿಲ್ಲ ಎಂಬ ಚಡಪಡಿಕೆಯಲ್ಲಿ ನನ್ನ ಪತ್ನಿ ಇದ್ದು ಅದನ್ನು ಅವರಲ್ಲಿ ತೋಡಿಕೊಂಡಾಗ "ಅಯ್ಯೋ ಅದಕ್ಕೇನಂತೆ ಬಿಡ್ರಿ, ಮೊಸರನ್ನಕ್ಕೆ ಸ್ವಲ್ಪ ಸಕ್ಕರೆ ಬಹಳ ಸೊಗಸಾಗಿರುತ್ತೆ" ಅಂತ ಒಂದೇ ಬಾರಿಗೆ ತಾವು ಸಿಹಿ ಉಟವೂ ಮಾಡಿ ಪತ್ನಿಯ ಚಡಪಡಿಕೆಯನ್ನು ದೂರ ಮಾಡಿದ್ದರು. ಶಾಮಣ್ಣನವರ ಎಲ್ಲಾ ವಯೋಮಾನದವರಲ್ಲಿ ಉತ್ಸಾಹ ತುಂಬುವ ಮತ್ತು ಒಡನಾಡಿಯಾಗಿ ಮಾಡಿಕೊಳ್ಳುವ ಗುಣಕ್ಕೆ ಮತ್ತೊಂದು ಸಾಕ್ಷಿಯೆಂದರೆ ಒಮ್ಮೆ ಅವರ ಸ್ನೇಹಿತ ಅನಿಲ್ ಕುಮಾರ ಭೂಮರೆಡ್ಡಿ –ಶೋಭಾ ದಂಪತಿಗಳ ನೂತನ ಮನೆಯ "ಗೃಹ ಪ್ರವೇಶ" ಸಮಾರಂಭದ ಔಪಚಾರಿಕೆಗಳು ನಡೆಯುತ್ತಿದ್ದರೆ ಶಾಮಣ್ಣನವರು ಅಲ್ಲಿಂದ ಕಾಣೆಯಾಗಿದ್ದರು. ಹುಡುಕಾಡಿದಾಗ ಅಲ್ಲೇ ಪಕ್ಕದ ಖಾಲಿ ನಿವೇಶನದಲ್ಲಿ ನನ್ನ ೯ ವರ್ಷದ ಮಗನಿಗೆ ಅವರಿಂದ ಛಾಯಾಗ್ರಹಣದ ಪ್ರಾಥಮಿಕ ಪಾಠ ನಡೆಯುತ್ತಿತ್ತು. ಅದನ್ನು ನೋಡಿ ನಾನೂ ಸಹ ಉತ್ಸಾಹಗೊಂಡು ಅವರೊಡನೆ ನಿಂತು ಪಾಠ ಹೇಳಿಸಿಕೊಂಡು ಅವರ ಶಿಫಾರಸ್ಸಿನ ಒಂದು ಕ್ಯಾಮರಾ ಕೊಳ್ಳುವ ತುಡಿತದಲ್ಲಿದ್ದೇನೆ.

ಕಳೆದ ೩–೪ ವರ್ಷಗಳಿಂದ ಸಾಗರದ 'ಸ್ಪಂದನ' ತಂಡವು ಮಕ್ಕಳ ರಂಗ ತರಬೇತಿ ಶಿಬಿರ ನಡೆಸುತ್ತಿದ್ದು ಶಾಮಣ್ಣನವರು ಶಿಬಿರದ ಮಾರ್ಗದರ್ಶಕರಾಗಿ ಸಕ್ರಿಯವಾಗಿ ಪಾಲ್ಗೊಂಡು ಮಕ್ಕಳೆಲ್ಲರಿಗೂ ಪ್ರೀತಿಯ 'ಶಾಮಣ್ಣಜ್ಜ'ನಾಗಿ ಮಕ್ಕಳೆಲ್ಲರ ಮನದಲ್ಲಿ ನೆಲೆಸಿದ್ದನ್ನು ಕಂಡಿದ್ದೇನೆ. ಅದೇ ಶಿಬಿರದ ಒಂದು ಸಂದರ್ಭದಲ್ಲಿ ಶಾಮಣ್ಣನವರ ಒಂದು ನಡೆ ಇವತ್ತಿಗೂ ಆಳವಾಗಿ ನನ್ನ ಮನ ಕಲಕಿದ್ದು ಪದೇ ಪದೇ ನೆನಪಿಗೆ ಬರುತ್ತಿರುತ್ತದೆ. ಕುಪ್ಪಳ್ಳಿಯಲ್ಲಿರುವ ಹೇಮಾಂಗಣ ಆವರಣದಲ್ಲಿ ಸಂಜೆ ವೇಳೆ ಹೀಗೆ ಅವರೊಂದಿಗೆ ಮಾತನಾಡುತ್ತಾ ಕುಳಿತಿದ್ದ ಸಂದರ್ಭದಲ್ಲಿ ಒಂದು ಮಗು ಶಾಮಣ್ಣನವರಿಗೆ ಪ್ರೀತಿಯಿಂದ ಅಲ್ಲೇ ಕಾಡಿನಲ್ಲಿ ಬೆಳೆದಿದ್ದ ಒಂದು ಹೂವಿನ ಗರಿಕೆಯನ್ನು ತಂದು ಉಡುಗೊರೆಯಾಗಿ ಕೊಟ್ಟಿತು. ಅತ್ಯಂತ ಪ್ರೀತಿಯಿಂದ ಸ್ವೀಕರಿಸಿದ ಶಾಮಣ್ಣ ಬಹಳ ಕಾಲದವರೆಗೆ ಆ ಗರಿಕೆಯನ್ನು ಕೈಯಲ್ಲೇ ಹಿಡಿದಿದ್ದರು, ಅಲ್ಲಿಂದ ಎದ್ದು ಹೊರಟು ಕ್ಯಾಮರಾ ಹಿಡಿದುಕೊಳ್ಳುವ ಸಂದರ್ಭ ಬಂದಾಗ ಏನೋ ಒಂದು ರೀತಿಯ ಚಡಪಡಿಕೆಗೆ ಒಳಗಾಗಿ ಅತ್ತಿಂದಿತ್ತ ನೋಡ ತೊಡಗಿದರು. ತಮ್ಮ ಕೈಯಲ್ಲಿದ್ದ ಹೂವಿನ ಗರಿಕೆಯನ್ನು ಎಲ್ಲಿಯೋ ಹಾಗೆಯೇ ಎಸೆಯಲಾಗದೆ ಹಿಡಿದುಕೊಳ್ಳಲು ಆಗದೆ ಸಂದಿಗ್ದಕ್ಕೆ ಸಿಕ್ಕಿಕೊಂಡು ಕೊನೆಗೆ ಅತ್ಯಂತ ಕಾಳಜಿಯಿಂದ ನವಿರಾದ ಭಾವನೆಯಿಂದ ಆ ಹೂವನ್ನು ಜೋಪಾನವಾಗಿ ಇನ್ನೊಂದು ಗಿಡದ ಬುಡದಲ್ಲಿ ಇಟ್ಟು ಬಂದು ಸಮಾಧಾನಗೊಂಡಿದ್ದರು. ಇಂತಹ ಸೂಕ್ಷ್ಮ

ಸಂವೇದನೆಗಳಿಂದಲೇ ಶಾಮಣ್ಣನವರು ದೊಡ್ಡ ಚಳಿವಳಿಯೊಂದರ ಹೋರಾಟಗಾರರಾಗಿಯೂ ಅಪ್ಪಟ ಮನುಷ್ಯರಾಗಿಯೇ ಉಳಿಯುತ್ತಾರೆ. ಮತ್ತೊಮ್ಮೆ ಧಾರವಾಡ ಸಾಹಿತ್ಯ ಸಂಭ್ರಮದ ಕಾರ್ಯಕ್ರಮಕ್ಕೆ ಬಂದ ಸಂದರ್ಭದಲ್ಲಿ ಮಧ್ಯಾನ್ಹದ ಊಟದ ವೇಳೆ ಅಲ್ಲಿ ಇಲ್ಲಿ ಚೆಲ್ಲಾಡಿದ್ದ ಪೇಪರ್, ಲೋಟ, ತಟ್ಟೆಗಳನ್ನು ನೋಡಿ ಸಹಿಸಲಾಗದೇ ತಾವೇ ಒಂದೊಂದನ್ನೇ ಎತ್ತಿ ಕಸದ ಬುಟ್ಟಿಗೆ ಹಾಕಲು ಶುರು ಮಾಡಿದ್ದರು. ಇದನ್ನು ಕಂಡು ಮುಜುಗರಗೊಂಡ ಅಕ್ಕಪಕ್ಕದ ನಾಲ್ಕಾರು ಜನರು ಇದಕ್ಕೆ ಕೈ ಜೋಡಿಸಿದರು. ಆದರೆ ಉಳಿದವರಲ್ಲಿಲ್ಲದ ಸ್ವಚ್ಛತಾ ಪ್ರಜ್ಞೆಯಿಂದಾಗಿ ಆ ಸ್ಥಳ ರಾಡಿಯಾಗಿಯೇ ಉಳಿದಿತ್ತು. ಮಾತು, ಕೃತಿಗೆ ಅಂತರವೇ ಇಟ್ಟುಕೊಳ್ಳದಿದ್ದ ಅತ್ಯಂತ ವಿರಳ ವ್ಯಕ್ತಿಗಳಲ್ಲಿ ಶಾಮಣ್ಣ ಅವರು ಒಬ್ಬರು. ಅವರ ಸಂಪರ್ಕದಿಂದಾಗಿ ನಮ್ಮಂತ ಬಾಲವೃದ್ಧರೂ ಚೈತನ್ಯ, ಉತ್ಸಾಹಗಳನ್ನು ಪಡೆದಿದ್ದೇವೆ. ಸಮಾಜವಾದಿಯೊಬ್ಬ ತನ್ನ ವ್ಯಕ್ತಿತ್ವವನ್ನ ಹೇಗೆ ಬೆಳೆಸಿಕೊಳ್ಳಬೇಕೆಂಬುದಕ್ಕೆ ಶಾಮಣ್ಣ ಒಂದು ಬಹು ದೊಡ್ಡ ಉದಾಹರಣೆ. ತಮ್ಮ ಸರಳತೆ, ಸಜ್ಜನಿಕೆ, ಮುಗ್ಧತೆ, ಸಂವೇದನಾಶೀಲತೆ, ಪ್ರಜ್ಞಾವಂತಿಕೆ ಮತ್ತು ಸೂಕ್ಷ್ಮತೆಗಳಿಂದ ಒಬ್ಬ ಆದರ್ಶ ವ್ಯಕ್ತಿಯಾಗಿದ್ದಾರೆ. ಶಾಮಣ್ಣನವರು ಇನ್ನು ಹೆಚ್ಚಿನ ನಿಷ್ಠುರತೆ ಮತ್ತು ನಾಯಕತ್ವದ ಗುಣವನ್ನು ಹೊಂದಿದ್ದಲ್ಲಿ ಬಹುಶಃ ರೈತಸಂಘಕ್ಕೆ ಮೇರು ನಾಯಕನಾಗಿ ಹೊಮ್ಮುತ್ತಿದ್ದರೆಂದು ನನ್ನ ಭಾವನೆ. ಶಾಮಣ್ಣ ಮತ್ತು ಶ್ರೀದೇವಿ ಅಕ್ಕನವರ ತುಂಬು ಪ್ರೀತಿಗೆ ನಾವು ಕೃತಾರ್ಥರಾಗಿದ್ದೇವೆ.

ಪತ್ರಕರ್ತನ ಕಣ್ಣಲ್ಲಿ ಶಾಮಣ್ಣ

ಹೊನ್ನಾಳಿ ಚಂದ್ರಶೇಖರ್

ಪತ್ರಕರ್ತನಾಗಿ ಕಡಿದಾಳು ಶಾಮಣ್ಣ ಅವರ ಸಂದರ್ಶನ ಮಾಡುವ ಸಂದರ್ಭ ಬಂತೆಂದರೆ ನನಗಂತೂ ಭಾರಿ ಖುಷಿ. ಪ್ರಶ್ನೆಗಳು ನಾಲ್ಕೇ ಇದ್ದರೂ ಉತ್ತರಗಳು ಮಾತ್ರ ಸುದೀರ್ಘ. ಒಂದು ಪ್ರಶ್ನೆಗೆ ಉತ್ತರ ಹೇಳುತ್ತಾ ಹೇಳುತ್ತಾ ಶಾಮಣ್ಣ ತೀರ್ಥಹಳ್ಳಿಯಿಂದ ಮೈಸೂರಿನವರೆಗೆ, ತೇಜಸ್ವಿಯಿಂದ ಕುವೆಂಪುವರೆಗೆ, ಗುಬ್ಬಿಗೂಡಿನಿಂದ ಹುಲಿ ಬೇಟೆವರೆಗೆ, ಮಂತ್ರ ಮಾಂಗಲ್ಯದಿಂದ ದಲಿತ ಕೇರಿಯಲ್ಲಿ ಜೀವಗಳು ಅರಳಿದವರೆಗೆ, ಸೈಕಲ್ಲಿನಿಂದ ಕಾರಿನವರೆಗೆ.... ಹೀಗೆ ಲಹರಿ ಸಾಗುತ್ತಲೇ ಹೋಗುತ್ತದೆ. ಕೇಳಿದ ಪ್ರಶ್ನೆಯೇ ಮರೆತು ಹೋದಂತಾಗಿ, ನಡುವೆ ದಿಢೀರನೆ ನೆನಪಿಸಿಕೊಂಡು, ನಾನು ಕೇಳಿದ ಪ್ರಶ್ನೆಗೆ ಉತ್ತರ ಸಿಕ್ಕಿತೆ ಎಂದು ನನ್ನಲ್ಲೇ ಒಮ್ಮೆ ಪ್ರಶ್ನಿಸಿಕೊಳ್ಳುತ್ತೇನೆ. ಇಡೀ ಪ್ರಶ್ನೆಯ ಪಯಣದಲ್ಲಿ ಶಾಮಣ್ಣರನ್ನು ಅರ್ಥ ಮಾಡಿ ಕೊಳ್ಳುವ ಸಣ್ಣ ಪ್ರಯತ್ನ ಮಾಡುತ್ತೇನೆ. ಆಗ ಗೊತ್ತಾಗು ತ್ತದೆ ಶಾಮಣ್ಣರೇ ನನಗೆ ಪ್ರಪಂಚವನ್ನು ಅರ್ಥ ಮಾಡಿಸಲು ಪ್ರಯತ್ನಿಸುತ್ತಿದ್ದಾರೆ ಎಂದು. ಕೆಲವೊಮ್ಮೆ ಶಾಮಣ್ಣ ಬೇಕಂತಲೇ ನಾನು ಕೇಳುವ ಪ್ರಶ್ನೆಗಳಿಗೆ

ಉತ್ತರ ಹೇಳುತ್ತಿಲ್ಲ ಎಂದೆನಿಸುತ್ತದೆ. ಅಥವಾ, ನಾನು ಹೇಳುತ್ತಿರುವುದರಲ್ಲೇ ಉತ್ತರ ಕಂಡುಕೊ ಎಂಬ ರೀತಿಯಲ್ಲೂ ಇರುತ್ತದೆ. ಇದನ್ನೆಲ್ಲಾ ಅವರು ಪ್ರಜ್ಞಾಪೂರ್ವಕ ಮಾಡುತ್ತಿದ್ದಾರೆ ಎಂದು ಅನಿಸುವುದೇ ಇಲ್ಲ. ಏಕೆಂದರೆ ಶಾಮಣ್ಣ ಇರುವುದೇ ಹಾಗೆ. ಪ್ರತಿ ಸಂದರ್ಭದಲ್ಲಿ ಅವರನ್ನು ಸಂದರ್ಶಿಸುವಾಗಲೂ ಇಂಥದ್ದೇ ಅನುಭವ. ಶಾಮಣ್ಣ ಅವರೊಂದಿಗೆ ಪ್ರತಿಬಾರಿ ಮಾತನಾಡಿದಾಗಲೂ ಒಂದು ಹೊಸ ವಿಷಯದ ಅರಿವಾಗುತ್ತಿತ್ತು. ಕೆಲವೊಮ್ಮೆ ಇಷ್ಟು ಸಣ್ಣ ವಿಷಯ ನನಗೆ ತಿಳಿದಿರಲಿಲ್ಲವಲ್ಲಾ ಎಂದೆನಿಸುತ್ತಿತ್ತು. ಇನ್ನೂ ಕೆಲವೊಮ್ಮೆ ಇಂಥದ್ದೊಂದು ಮಹತ್ವದ ವಿಷಯವನ್ನು ನಾನು ಅರ್ಥ ಮಾಡಿಕೊಳ್ಳುವ ಪ್ರಯತ್ನವನ್ನು ಮಾಡಲೇ ಇಲ್ಲವಲ್ಲ ಎಂದು ಅಚ್ಚರಿಯಾಗುತ್ತಿತ್ತು. ನಮಗೆ ಗೊತ್ತಿರುವ ವಿಷಯವನ್ನೇ ಹೇಳುತ್ತಿದ್ದರೂ ಅದರಲ್ಲಿ ನಮಗೇ ಗೊತ್ತಿರದ ಹೊಸದೊಂದು ಹೊಳವು ನೀಡಿರುತ್ತಿತ್ತು. ಅದು ಸಂದರ್ಶನ ಮಾಡುವಾಗಲಾದರೂ ಆಗಲಿ, ಸುಮ್ಮನೆ ಮಾತನಾಡುವ ಸಮಯವಾಗಲಿ, ನೆನಪಿನ ಬುತ್ತಿಯನ್ನು ಬಿಚ್ಚಿಕೊಂಡು ಕುಳಿತರೆ ಅಲ್ಲಿ ಕಾಲವೂ ಸಹ ನಿಲ್ಲುತ್ತಾ ಸಾಗುತ್ತದೆ ಎನಿಸುತ್ತಿತ್ತು.

ಅವರ ಗುರು ಉಸ್ತಾದ್ ಅಲಿ ಅಕ್ಬರ್ ಖಾನ್, ಹಿಂದಿ ಚಲನಚಿತ್ರ ಸಂಗೀತ ನಿರ್ದೇಶಕ ನೌಷಾದ್, ಕುವೆಂಪು ಅವರ ಫೋಟೋ ತೆಗೆದಿದ್ದು, ಅವರ ಮನೆ ಮುಂದೆ ಕಟ್ಟಿ ಹಾಕಿದ್ದ ಮುದ್ದಿನ ನಾಯಿ ಮರಿಯನ್ನು ಚಿರತೆ ಹಿಡಿದುಕೊಂಡು ಹೋಗಿದ್ದು, ತೋಟದ ಯಾವುದೇ ಒಂದು ತೆಂಗಿನ ಮರಕ್ಕೆ ಸಿಡಿಲು ಬಡಿದು ಉಂಟಾದ ಗೂಡಿನಲ್ಲಿ ಹಕ್ಕಿಯೊಂದು ಬಂದು ವಾಸಿಸುತ್ತಿರುವುದು, ಕಾರನ್ನು ನಿಧಾನವಾಗಿ ಚಾಲನೆ ಮಾಡುವ ರೀತಿ, ಲಂಕೇಶ್–ತೇಜಸ್ವಿ–ದೇವನೂರು ಅವರು ಬಂದು ತಮ್ಮ ಮನೆಯಲ್ಲಿ ಉಳಿದುಕೊಂಡಿದ್ದು, ಅಕ್ಷರ ತುಂಗ ಯೋಜನೆಯಲ್ಲಿ ಹಳ್ಳಿಹಳ್ಳಿಗೆ ಹೋಗಿ ಹಾಡುಗಳನ್ನು ಹೇಳಿಕೊಟ್ಟಿದ್ದು, ಮರ ಕಡಿಯಬೇಡಿರೆಂದು ಹೋರಾಟ ಮಾಡಿ ಘರ್ಷಣೆಯ ವಾತಾವರಣ ಉಂಟಾದಾಗ ಅಂದು ನಗರದಲ್ಲಿದ್ದ ಕವಿ ಜಿ.ಎಸ್. ಶಿವರುದ್ರಪ್ಪ ಅವರು ಸಂಧಾನಕ್ಕೆ ಬಂದಿದ್ದು, ಹೀಗೆ ಸಾವಿರಾರು ನೆನಪುಗಳು ಮೇಲೆದ್ದು ಬರುತ್ತವೆ. ಮತ್ತೆ ಶಾಮಣ್ಣ ಅವರನ್ನು ಪ್ರಶ್ನೆಯತ್ತ ಕರೆತರಬೇಕಾಗುತ್ತದೆ.

ಹಾಗಂತ ಅವರು ನೇರ ಉತ್ತರ ಕೊಡುವುದಕ್ಕೂ ಹಿಂದೆ ಮುಂದೆ ನೋಡುವುದಿಲ್ಲ. ಸಿಜಿಕೆ ಅವರು ಬೆಂಗಳೂರು ವಿಶ್ವವಿದ್ಯಾಲಯದ ಗಾಂಧಿ ಅಧ್ಯಯನ ಕೇಂದ್ರದ ನಿರ್ದೇಶಕರಾಗಿದ್ದಾಗ ನಮ್ಮ ನಡುವಿನ ಗಾಂಧಿಯರು ಎಂಬ ಸರಣಿ ಕೃತಿಗಳನ್ನು ಹೊರತಂದರು. ೨೦೦೩ರ ವೇಳೆ. ಆಗ ಕಡಿದಾಳು ಶಾಮಣ್ಣ ಅವರ ಸಂಕ್ಷಿಪ್ತ ಜೀವನ ಚರಿತ್ರೆಯನ್ನು ಬರೆಯುವ ಜವಾಬ್ದಾರಿ ನನ್ನ ಮೇಲಿತ್ತು. ಪ್ರತಿದಿನ ಅವರ

ಮನೆಗೆ ಹೋಗಿ ಬೆಳಗಿನಿಂದ ಸಂಜೆಯವರೆಗೂ ಅವರೊಂದಿಗೆ ಮಾತನಾಡಿ, ಸಂಜೆ ಕಚೇರಿಗೆ ಬಂದು (ಆಗ ನಾನು ಉಪ ಸಂಪಾದಕ) ಕೆಲಸ ಮಾಡಿ, ರಾತ್ರಿ ಮನೆಗೆ ಹೋಗಿ ಅವರೊಂದಿಗೆ ಆಡಿದ ಮಾತುಗಳನ್ನು ಅಕ್ಷರಕ್ಕಿಳಿಸುತ್ತಿದ್ದೆ. ಆ ಪುಸ್ತಕಕ್ಕೂ ಅವರ ಸಂದರ್ಶನ ಜೋಡಿಸಬೇಕಿತ್ತು.

ಆಗ ನಕ್ಸಲ್ ಬೆಂಬಲಿಗರ ಪಟ್ಟಿಯಲ್ಲಿ ಶಾಮಣ್ಣ ಅವರ ಹೆಸರು ಸೇರ್ಪಡೆಯಾಗಿ ರಾಜ್ಯಾದ್ಯಂತ ಸುದ್ದಿಯಾಗಿತ್ತು. ಆ ಸಂದರ್ಶನದಲ್ಲಿ ಶಾಮಣ್ಣರಿಗೆ ಕೇಳಿದ್ದೆ- 'ನಕ್ಸಲರು ಯಾರು?' ಅಂತ. 'ಜನರಿಗೆ ಬೇಕಾದ್ದು ಸರ್ಕಾರ ಕೊಡ್ಲಿಲ್ಲ ಅಂದ್ರೆ, ಅದಕ್ಕೆ ನಾನು ಪ್ರತಿಭಟನೆ ಮಾಡಿದ್ರೆ, ಅದನ್ನು ಸರ್ಕಾರ ಒಪ್ಪದಿದ್ರೆ, ನಾನು ನಕ್ಸಲೀಯ ಎಂದು ಹೇಳಿದರೆ, ನಾನು ನಕ್ಸಲೀಯನೇ' ಎಂದರು. ಒಮ್ಮೆ ಮೈ ಜುಂ ಅಂದಿತ್ತು. ಈ ಸಂದರ್ಶನ ಯಾವುದಾದರೂ ಪತ್ರಿಕೆಯಲ್ಲಿ ಪ್ರಕಟವಾಗಿದ್ರೆ ರಾಜ್ಯದ್ಯಾಂತ ಎಷ್ಟು ಚರ್ಚೆಯಾಗುತ್ತಿತ್ತೋ ಏನೋ. ಬೆಂಗಳೂರು ಪ್ರಸಾರಾಂಗ ಪ್ರಕಟಿಸಿದ ಪುಸ್ತಕದ ಕೊನೆಯ ಪುಟದಲ್ಲಿ ಅಚ್ಚಾಗಿ ಬಂದಿತ್ತು.

ರಾಜ್ಯೋತ್ಸವ ಪ್ರಶಸ್ತಿ ತಿರಸ್ಕರಿಸಿದಾಗ, ಮೈಸೂರು ದಸರಾ ಉದ್ಘಾಟನೆ ಮಾಡುವುದಿಲ್ಲ ಎಂದಾಗ, ಬಗರ್‌ಹುಕುಂ ಸಾಗುವಳಿದಾರರು ಶಿವಮೊಗ್ಗದಿಂದ ಶಿಕಾರಿಪುರಕ್ಕೆ ಪಾದಯಾತ್ರೆ ಹೊರಟಿದ್ದು, ಅದನ್ನು ಉದ್ಘಾಟಿಸಲೆಂದು ಬಂದ ಶಾಮಣ್ಣ ದಿಢೀರನೇ ಪಾದಯಾತ್ರೆ ಹೊರಟು ನಿಂತಾಗ, ಹೀಗೆ ಹಲವು ಬಾರಿ ಒಂದು ಪ್ರಶ್ನೆಯಿಂದ ಹತ್ತಾರು ಪ್ರಶ್ನೆಗಳ ಸಂದರ್ಶನ ನಡೆಸಿದ್ದೇನೆ. ಪ್ರತಿ ಬಾರಿಯೂ ಅವರೊಂದಿಗೆ ಇದೇ ಅನುಭವವೇ. ಜಗತ್ತಿನ ಸೌಂದರ್ಯದೊಂದಿಗೆ ಮುಳ್ಳುಗಳನ್ನೂ ತೋರಿಸುವ ಪ್ರಯತ್ನ. ಈ ಕಾರಣದಿಂದಾಗಿಯೇ ಅವರೊಂದಿಗೆ ಸಂದರ್ಶನ ನಡೆಸುವ ಯಾವ ಒಂದು ಅವಕಾಶವನ್ನೂ ತಪ್ಪಿಸಿಕೊಳ್ಳಲು ಇಷ್ಟ ಪಡುವುದಿಲ್ಲ.

ಇತ್ತೀಚೆಗೆ ಶ್ರೀದೇವಿ ಅಕ್ಕನಿಗೆ ಆತಂಕ ಜಾಸ್ತಿ ಆಗಿದೆ. ಶಾಮಣ್ಣನ ಜತೆ ಸುಮ್ಮನೆ ಮಾತನಾಡುತ್ತಾ ಕುಳಿತರೆ ಅವರು ಅರಾಮಾಗಿ ಓಡಾಡಿಕೊಂಡು, ಆಗಾಗ ಹಣ್ಣು-ಚಹ ತಂದು ಕೊಡುತ್ತಿರುತ್ತಾರೆ. ಯಾವಾಗ ಪೆನ್ನು-ಪೇಪರ್ ಕೈಗೆ ತೆಗೆದುಕೊಳ್ಳುತ್ತೇನೋ ಅವರ ಕಣ್ಣಿನಲ್ಲಿ ಸಣ್ಣ ತಳಮಳ ಕಾಣುತ್ತದೆ. ಶಾಮಣ್ಣ ಯಾವ ಪ್ರಶ್ನೆಗೆ ಏನು ಉತ್ತರ ಹೇಳುತ್ತಾರೋ, ಅದು ಹಾಗೆಯೇ ಪ್ರಕಟವಾದರೆ ಇನ್ನೇನಾಗುವುದೋ ಎಂಬ ಚಿಕ್ಕ ಸಂಕಟವದು. ಸಂದರ್ಶನ ಮುಗಿದ ಕೂಡಲೇ, ಏನು ಹೇಳಿದ್ರು ಅಂತ ಮೌನವಾಗೇ ಕೇಳುತ್ತಾರೆ. ಅಂಥಾದ್ದೇನಿಲ್ಲ ಬಿಡಿ ಅಂತ ಕಿರುನಗೆಯಲ್ಲೇ ಹೇಳಿ ಮೇಲೇಳುತ್ತೇನೆ. ಶಾಮಣ್ಣ ಮಾತ್ರ ಹೇಳೋದು ಹೇಳಿ, ಸ್ವಲ್ಪವೂ ತಲೆ ಕೆಡಿಸಿಕೊಳ್ಳದೇ ಆರಾಮಾಗಿ ಇದ್ದುಬಿಡುತ್ತಾರೆ.

ಅಸಹಿಷ್ಣುತೆ ಎಂದು ಎಲ್ಲೆಡೆ ನಾವು ಮಾತನಾಡಿಕೊಳ್ಳುವಾಗ, ಸ್ನೇಹಿತರೊಂದಿಗೆ ಚರ್ಚಿಸುವಾಗ, ಸಾಮಾಜಿಕ ಜಾಲತಾಣಗಳಲ್ಲಿ ಶರಂಪರ ಗುದ್ದಾಡುವಾಗ ಶಾಮಣ್ಣ ಹೇಳಬೇಕಾದ್ದೆಲ್ಲವನ್ನೂ ಹೇಳಿ ತಣ್ಣಗೆ ಕುಳಿತುಕೊಳ್ಳುವುದು ನಮಗೊಂದು ಪಾಠವಾಗಿಬಿಡುತ್ತದೆ. ವೇದಿಕೆ ಮೇಲೆ ಅವರು ಮಾಡುವ ಭಾಷಣ ಹೊಸ ಪತ್ರಕರ್ತರಿಗೆ ಸವಾಲು. ಅವರು ಹೇಳುವ ಯಾವ ಮಾತನ್ನು ಬರೆಯಬೇಕು ಎಂಬ ಗೊಂದಲ. ಒಮ್ಮೊಮ್ಮೆಯಂತೂ ನಾನು ಮಾತೇ ಆಡುವುದಿಲ್ಲ. ಕೊಳಲು ನುಡಿಸುತ್ತೇನೆ ಎಂದುಬಿಡುತ್ತಾರೆ.

***

ಬಿ. ಚಂದ್ರೇಗೌಡರು ರಚಿಸಿರುವ ಕಡಿದಾಳು ಶಾಮಣ್ಣ ನಾಟಕ ನಿರ್ದೇಶನ ಮಾಡುವಾಗ ನನ್ನನ್ನು ಕಾಡಿದ್ದು ಇದೇ ಅಂಶಗಳು. ತೇಜಸ್ವಿ ಅವರ ಅಣ್ಣನ ನೆನಪು ಕೃತಿಯಲ್ಲಿ ಶಾಮಣ್ಣ ಅವರ ಸುದೀರ್ಘ ಚಿತ್ರಣವಿದೆ. ಇದರಲ್ಲಿ ಬಹಳಷ್ಟು ವಿವರ ಅವರ ತೀರ್ಥಹಳ್ಳಿ–ಮೈಸೂರು ಜೀವನ, ಕಾಲೇಜು ಜೀವನದ ವಿವರಗಳೇ ಇವೆ. ಇದನ್ನು ಓದಿದವರು ಶಾಮಣ್ಣ ಒಬ್ಬ ಭಾರಿ ತಮಾಷೆ ಮನುಷ್ಯ ಅಂತ ತಿಳಿಯುವವರೇ ಹೆಚ್ಚು.

ಹಾಗೆ ನೋಡಿದರೆ ತೇಜಸ್ವಿ ಅವರು ಬರೆದ ಯಾವುದೇ ನಾಟಕ, ಕಥೆ–ಕಾದಂಬರಿಯಲ್ಲಿ ಎಲ್ಲೋ ಒಂದು ಕಡೆ ಅಥವಾ ಪೂರ್ತಿಯಾಗಿ ಶಾಮಣ್ಣನ ಛಾಯೆ ಇದ್ದೇ ಇರುತ್ತದೆ. ಆದರೆ 'ಅಣ್ಣನ ನೆನಪು' ಕೃತಿಯಲ್ಲಿ ಮೂಡಿಬಂದ ಶಾಮಣ್ಣನ ನೆನಪುಗಳು ಒಂದು ಹಗುರ ಮಾದರಿಯ ಪರಿಚಯವನ್ನು ನಾಡಿನಲ್ಲೆಡೆ ಹರಡಿತ್ತು. ಶಾಮಣ್ಣನ ಬಗ್ಗೆ ತೇಜಸ್ವಿ ಅವರು ಇನ್ನೆಷ್ಟು ಬರೆಯುವುದು ಉಳಿಸಿಕೊಂಡಿದ್ದರೋ, ಇನ್ನೆಷ್ಟು ಅಣ್ಣನ ನೆನಪು, ಮಾಯಾಮೃಗಗಳು ಬರಬೇಕಿತ್ತೋ, ಅಷ್ಟರಲ್ಲಿ ತೇಜಸ್ವಿಯವರೇ ದೂರವಾದರು.

ಬಿ. ಚಂದ್ರೇಗೌಡ ಅವರ ಶೈಲಿಯೂ ಸಹ ವಿಡಂಬನೆಯ ಮೂಲಕ ಒಂದು ಗಂಭೀರ ವಿಷಯವನ್ನು ಮೇಲ್ಪಂಕ್ತಿಗೆ ತರುವುದೇ ಆಗಿದೆ. ಈ ಕಾರಣದಿಂದಲೇ ಅವರು ಕಡಿದಾಳು ಶಾಮಣ್ಣ ಅವರ ಜೀವನವನ್ನೇ ನಾಟಕ ಮಾಡಲು ಆರಿಸಿಕೊಂಡರೇನೋ. ಶೌಚಾಲಯಕ್ಕೆ ಬ್ಯಾಂಕ್ ಲೋನ್ ಕೊಡಿಸಿದ್ದು, ಮನೆಯ ಕಟ್ಟೆಯ ಮೇಲೆಯೇ ಮಂತ್ರ ಮಾಂಗಲ್ಯ ವಿವಾಹ ಮಾಡಿಸಿದ್ದು, ರೈತಸಂಘದ ಪ್ರತಿಭಟನೆ ವೇಳೆ ಹುಟ್ಟಿದ ಹಾಸ್ಯ ಇತ್ಯಾದಿ ಪ್ರಸಂಗಗಳು ರಂಗದ ಮೇಲೆ ಬಂದವು. ಜತೆಗೆ ರೈತಸಂಘದಿಂದ ಶಾಮಣ್ಣ ಅವರನ್ನು ಉಚ್ಛಾಟಿಸುವ ಪ್ರಸಂಗ ಇಡೀ ನಾಟಕದ ಕ್ಲೈಮ್ಯಾಕ್ಸ್.

ಅಷ್ಟರಲ್ಲಾಗಲೇ ನಾಟಕ ಒಂದು ಪ್ರದರ್ಶನವನ್ನೂ ಕಂಡಿತ್ತು. ಶಾಮಣ್ಣನ ಪಾತ್ರ ನಿರ್ವಹಿಸುತ್ತಿದ್ದ ಸಾಸ್ವೆಹಳ್ಳಿ ಸತೀಶ್ ಅವರೇ ನಿರ್ದೇಶಿಸಿದ್ದರು. ಈ ನಾಟಕದ

ಮರುನಿರ್ಮಾಣದ ಸಂದರ್ಭದಲ್ಲಿ ನಿರ್ದೇಶನವನ್ನು ಕೈಗೆತ್ತಿಕೊಂಡಾಗ ಇದಕ್ಕೆ ಇನ್ನೂ ಸ್ವಲ್ಪ ಬೇಕಿತ್ತು ಎನಿಸುತ್ತಿತ್ತು. ಚಂದ್ರೇಗೌಡರೂ ಸಹ ಅದೇ ಅಭಿಪ್ರಾಯ ಹೊಂದಿದ್ದು ಗೊತ್ತಾಯಿತು. ಈ ಕುರಿತು ಹಲವು ಬಾರಿ ಚರ್ಚಿಸಿದೆವು. ಕೊನೆಗೆ ಚಂದ್ರೇಗೌಡರು ಇನ್ನೂ ಕೆಲವು ದೃಶ್ಯ ಸೇರ್ಪಡೆಗೆ ಒಪ್ಪಿ, ಅವುಗಳನ್ನು ಹಣೆದು ಕೊಟ್ಟರು. ಶಾಮಣ್ಣ ಅವರ ಜೀವನದಲ್ಲಿ ಯಾವತ್ತೂ ಕಾಡುವ ನಾಗಸಮುದ್ರ ಗೋಲಿಬಾರ್, ಜಪ್ತಿ-ಮರುಜಪ್ತಿ, ಲೇವಿ ಗೇಟ್ ಮುರಿಯುವ ಚಳವಳಿ ದೃಶ್ಯಗಳನ್ನು ಸೇರ್ಪಡೆ ಮಾಡಿಕೊಂಡೆವು.

ಹೀಗೆ ಒಂದು ಸಮತೋಲಿತ ನಾಟಕವನ್ನು ರಂಗದ ಮೇಲೆ ತಂದ ಖುಷಿ ಎಲ್ಲರದ್ದಾಗಿತ್ತು. ಶಾಮಣ್ಣ ಅವರ ವ್ಯಕ್ತಿತ್ವ ಎಂದರೆ ಅದು ಬರೀ ಉಡಾಫೆತನದ್ದಲ್ಲ, ಅದೊಂದು ಘನ ವ್ಯಕ್ತಿತ್ವ ಎಂದು ತೋರಿಸುವ ಸಣ್ಣ ಪ್ರಯತ್ನ ಮಾಡಿದ ನೆಮ್ಮದಿ ಸಿಕ್ಕಿತ್ತು. ನನ್ನ ಮಗ ಸೂರ್ಯ- ಮಗಳು ಚುಕ್ಕಿ ಭಗವತಿಕೆರೆಯಲ್ಲಿರುವ ಇವರ ಮನೆಗೆ ಹೋದಾಗ ಶ್ರೀದೇವಿ ಅಕ್ಕ 'ಏನಾದ್ರೂ ಪುಸ್ತಕ ತಗೊಳ್ಳೋ' ಅಂತ ಒಂದು ನೋಟನ್ನು ಕೊಟ್ಟರು. ಅವರು ಆ ನೋಟನ್ನು ಡೈರಿಯ ಒಂದು ಪುಟದಲ್ಲಿಟ್ಟು, ಮೇಲೆ ಶಾಮಣ್ಣ ಕೊಟ್ಟ ನೋಟು ಎಂದು ಬರೆದರು. ಅದನ್ನು ನೋಡಿದ ನನಗೆ ಶಾಮಣ್ಣ ನನ್ನ ನಂತರದ ಎಲ್ಲಾ ಪೀಳಿಗೆಗೂ ಪ್ರಸ್ತುತವಾಗುವುದು ಖಚಿತವಾಯಿತು.

ಕಟಿಬದ್ಧತೆ, ಕಾರುಣ್ಯ ಮತ್ತು ಮುಗ್ಧತೆಗಳ ತ್ರಿವೇಣಿ ಸಂಗಮ ಶಾಮಣ್ಣ

ಶೃಂಗೇಶ್

ಕಡಿದಾಳು ಶಾಮಣ್ಣನವರನ್ನು ಮೊದಲ ಬಾರಿ ನೋಡಿದ್ದು ಶಿವಮೊಗ್ಗದ ನಗರಸಭೆ ಆವರಣದಲ್ಲಿ ಲಂಕೇಶರು ನಡೆಸಿದ 'ಇಟ್ಟಿಗೆ ಪವಿತ್ರವಲ್ಲ ಜೀವ ಪವಿತ್ರ' ಎಂಬ ಸಂದೇಶ ಹೊತ್ತ 'ಪ್ರಗತಿರಂಗ'ದ ಸಭೆಯಲ್ಲೇ ಇರಬೇಕು. ಶೃಂಗೇರಿ ಕಾಲೇಜಿನಲ್ಲಿ ಓದುತ್ತಿದ್ದ ನಾನು ಮತ್ತು ನನ್ನ ಗೆಳೆಯರು ಮನೆಯಲ್ಲಿ ಹೇಳದೆ ಕೇಳದೇ ಶಿವಮೊಗ್ಗದ ಈ ಸಭೆಗೆ ಬಂದಿದ್ದೆವು. 'ಲಂಕೇಶ್ ಪತ್ರಿಕೆ'ಯಲ್ಲಿ ಓದುತ್ತಿದ್ದ ಆಸಾಮಿಗಳನ್ನೆಲ್ಲ ಮೊದಲ ಬಾರಿಗೆ ಕಣ್ಣಾರೆ ನೋಡಿದ್ದು ಈ ಸಭೆಯಲ್ಲಿ. ಶಾಮಣ್ಣ ಕೂಡ ಫೋಟೋ ಕ್ಲಿಕ್ಕಿಸುತ್ತಾ ಓಡಾಡುತ್ತಿದ್ದ ನೆನಪು. ಲಂಕೇಶ್ ಪತ್ರಿಕೆಯಲ್ಲಿ ಓದುತ್ತಿದ್ದ, ಅಲ್ಲಲ್ಲಿ ಕೇಳುತ್ತಿದ್ದ ಶಾಮಣ್ಣರನ್ನು ಹಾಗೆ ನೋಡಿದ್ದು ನಿಜವಾದರು, ಅವರನ್ನು ಕಾಣುವಂತಾದದ್ದು ತೀರ್ಥಹಳಿಯಲ್ಲಿ ನಡೆದ ಸಂಧಾನ ಸಭೆಯೊಂದರಲ್ಲಿ.

ಇಸವಿ ನೆನಪಿಲ್ಲ. ಆಗುಂಬೆ ಸಮೀಪದ ಮಲ್ಲಂದೂರಿಗೆ ಶಿವಮೊಗ್ಗದ ನಾವೊಂದಿಷ್ಟು ಪತ್ರಕರ್ತರನ್ನು ದಿವಾಕರ ಹೆಗ್ಡೆ ಕರೆದುಕೊಂಡು ಹೋಗಿದ್ದರು. ನಾಗರಿಕ

ಸೌಲಭ್ಯವೇ ಇಲ್ಲದೆ ದಟ್ಟ ಕಾಡೊಳಗೆ ಹೂತು ಹೋಗಿದ್ದ ಮಲ್ಲಂದೂರು ಎಂಬ ಆ ಊರಿನ ಜನರ ಬವಣೆ ಕೇಳಲು. ಕಡಿದಾಳ್ ಶಾಮಣ್ಣ, ಕೋಡ್ಲು ವೆಂಕಟೇಶ್, ಬಂಜಗೆರೆ ಜಯಪ್ರಕಾಶ್ ಎಲ್ಲರೂ ಇದ್ದರು. ಮಲ್ಲಂದೂರಿನ ಜನರಿಗಿಂತ ಹೆಚ್ಚಾಗಿ ಆ ಊರವರ ಕಷ್ಟಗಳು ಶಾಮಣ್ಣನವರಿಗೆ ಗೊತ್ತಿತ್ತು. ಅವರು ಹೇಳುತ್ತಾ ಹೋಗಿದ್ದರು. ಮಲ್ಲಂದೂರಿನ ಕತೆ ಒಂದು ಕಡೆಯಾದರೆ ಶಾಮಣ್ಣ, ಕೋಡ್ಲು ವೆಂಕಟೇಶ್, ಬಂಜಗೆರೆ ಜಯಪ್ರಕಾಶ್, ಸುಂದರ್ ಮೊದಲಾದವರು ಅವತ್ತು ಆಗುಂಬೆಯಲ್ಲಿ ಕಾಣಿಸಿಕೊಳ್ಳುವುದಕ್ಕೆ ಮತ್ತೊಂದು ಕಾರಣವೂ ಇತ್ತು. ಆಗುಂಬೆಯಿಂದ ತೀರ್ಥಹಳ್ಳಿಗೆ ಸಾಗುವ ರಸ್ತೆಯಲ್ಲಿ ಅತ್ಯದ್ಭುತವೆಂದೇ ಕರೆಯಬಹುದಾದ ಕಾಡೊಳಗಿನ ಜಾಗದಲ್ಲಿ ರೆಸಾರ್ಟ್ಸ್‌ವೊಂದರ ನಿರ್ಮಾಣ ನಡೆಯುತ್ತಿತ್ತು. ತೀರ್ಥಹಳ್ಳಿಯ ಕೆಲವು ಶ್ರೀಮಂತರು ಸೇರಿ ಆ ರೆಸಾರ್ಟ್ಸ್ ಆರಂಭಿಸಲು ಮುಂದಾಗಿದ್ದರು. ಅವರಲ್ಲೊಬ್ಬರು ಶಾಮಣ್ಣನವರ ಖಾಸಾ ಸೋದರರೇ ಆಗಿದ್ದರು. ಹಾಗೆ ನಿರ್ಮಾಣವಾಗುತ್ತಿದ್ದ ರೆಸಾರ್ಟ್ಸ್‌ನ್ನು ಕರ್ನಾಟಕ ವಿಮೋಚನ ರಂಗದ ಗೆಳೆಯರು ವಿರೋಧಿಸಿದ್ದೆವು. ಆಗುಂಬೆಯಲ್ಲಿ ಜೇಡಿ ಮಣ್ಣಿನ ಗಣಿಗಾರಿಕೆ ವಿರೋಧಿಸಿ ಯಶಸ್ಸು ಪಡೆದದ್ದು ಕವಿರಂ, ಆಗಷ್ಟೇ ಕರ್ನಾಟಕದಲ್ಲಿ ಕಾಲಿಡತೊಡಗಿದ್ದ ರೆಸಾರ್ಟ್ಸ್ ಸಂಸ್ಕೃತಿಯನ್ನು ಆಗುಂಬೆಯಲ್ಲಿನ ನಿರ್ಮಾಣ ಕಾರ್ಯವನ್ನು ವಿರೋಧಿಸುವ ಮೂಲಕ ದೊಡ್ಡ ಗದ್ದಲವನ್ನು ಹುಟ್ಟುಹಾಕಿತ್ತು. ರೆಸಾರ್ಟ್ಸ್ ನಿರ್ಮಾಣ ಕಾರ್ಯದಲ್ಲಿ ತೊಡಗಿದವರು ಮತ್ತು ಅದನ್ನು ವಿರೋಧಿಸುವವರ ನಡುವೆ ಸಂಧಾನ ಸಭೆ ತೀರ್ಥಹಳ್ಳಿಯಲ್ಲಿ ನಡೆಯುವುದಿತ್ತು. ಮಲ್ಲಂದೂರಿನ ಭೇಟಿ ನಂತರ ಪತ್ರಿಕಾ ಗೆಳೆಯರು ವಾಪಸ್ಸಾದರು. ನಾನು ಕವಿರಂ ಗೆಳೆಯರ ಜೊತೆ ತೀರ್ಥಹಳ್ಳಿಯಲ್ಲಿ ನಡೆದ ಸಂಧಾನ ಸಭೆಗೆ ತೆರಳಿದೆ.

ಅವತ್ತಿನ ಸಭೆ ನನಗಿನ್ನೂ ಕಣ್ಣಿಗೆ ಕಟ್ಟಿದಂತಿದೆ. 'ಆಯಾಮ'ದಲ್ಲಿ ನಡೆದ ಸಭೆಯದು. ರೆಸಾರ್ಟ್ಸ್ ನಿರ್ಮಾಣದಲ್ಲಿ ತೊಡಗಿದವರು ಒಂದು ಕಡೆಯಾದರೆ, ರೆಸಾರ್ಟ್ಸ್ ವಿರೋಧಿಸಿ ಹೋರಾಟದಲ್ಲಿ ತೊಡಗಿದವರು ಮತ್ತೊಂದು ಕಡೆ. ಕವಿರಂನ ಎಲ್ಲಾ ಹೋರಾಟದಲ್ಲೂ ಜೊತೆಯಾಗುತ್ತಿದ್ದ ಶಾಮಣ್ಣನವರ ಪಾಲಿಗೆ ಇದೊಂದು ಸಂದಿಗ್ಧತೆಯ ಸಭೆಯಂತಾಗಿತ್ತು. ಸಂಧಾನ ಸಭೆಯಲ್ಲಿ ಮಾತಿಗೆ ಮಾತು ಬೆಳೆಯಿತು. ರೆಸಾರ್ಟ್ಸ್ ನಿರ್ಮಾಣ ಕೈ ಬಿಡುವ ಪ್ರಶ್ನೆಯೇ ಇಲ್ಲ, ಅದರಿಂದ ಪರಿಸರಕ್ಕೇನೂ ಹಾನಿಯಾಗಲ್ಲ, ಆಗುಂಬೆಯ ಪರಿಸರಕ್ಕೆ ಪೂರಕವಾಗಿಯೇ ರೆಸಾರ್ಟ್ಸ್ ಚಟುವಟಿಕೆ ಮಾಡುತ್ತೇವೆ ಎನ್ನುವುದು ಒಂದು ಕಡೆಯ ಮಾತಾದರೆ, ರೆಸಾರ್ಟ್ಸ್ ವಿರುದ್ಧದ ಹೋರಾಟದಲ್ಲಿದ್ದ ಬಂಜಗೆರೆ ಜಯಪ್ರಕಾಶ್, ಸುಂದರ್, ಕೋಡ್ಲು ವೆಂಕಟೇಶ್ ಮೊದಲಾದವರು ಯಾವ ಕಾರಣಕ್ಕೂ ರೆಸಾರ್ಟ್ಸ್ ನಿರ್ಮಾಣಕ್ಕೆ ಅವಕಾಶ

ನೀಡುವುದಿಲ್ಲ ಎಂದರು. ಹಿಂಸಾತ್ಮಕ ಪ್ರತಿಭಟನೆಯೂ ಸೇರಿದಂತೆ ಯಾವ ರೀತಿಯ ಹೋರಾಟಕ್ಕೂ ಸಿದ್ಧ ಅಂತ ಬಂಜಗೆರೆ ಜಯಪ್ರಕಾಶ್ ಘೋಷಿಸಿಬಿಟ್ಟರು. ಸಂಧಾನ ಸಭೆ ವಿಫಲವಾಯಿತು. ಕಡಿದಾಳ್ ಶಾಮಣ್ಣ ರೆಸಾರ್ಟ್ಸ್ ವಿರುದ್ಧದ ಹೋರಾಟವನ್ನು ಬೆಂಬಲಿಸಿ ಎದ್ದು ನಡೆದರು. ಮುಂದೆ ಕೋರ್ಟ್ ಆದೇಶದ ಕಾರಣಕ್ಕೆ ರೆಸಾರ್ಟ್ಸ್ ತಲೆ ಎತ್ತಲೂ ಇಲ್ಲ.

ಪರಸ್ಪರ ಸೌಹಾರ್ದ ಮಾತುಕತೆಯ ಮೂಲಕ ಎಲ್ಲವೂ ಸರಿಯಾಗುವುದಾದರೆ ಒಳ್ಳೆಯದು ಎಂಬುದು ಹೋರಾಟದ ಸಂದರ್ಭದಲ್ಲಿ ಮುಖ್ಯವಾಗಬೇಕು. ಹಾಗೆಯೇ ತಪ್ಪು ಹೆಜ್ಜೆ ಇಡಲು ಹೊರಟವರನ್ನು ಸೌಹಾರ್ದತೆಯಿಂದ ಮಣಿಸಲು ಸಾಧ್ಯವಾಗದಿದ್ದರೆ ಬಂಧು ಬಳಗ, ಗೆಳೆತನ ಎಲ್ಲವನ್ನೂ ಮೀರಿ ನಿಷ್ಠೂರವಾಗಿಬಿಡಬೇಕು. ಇದು ಶಾಮಣ್ಣನವರ ಇಷ್ಟು ವರ್ಷಗಳ ಹೋರಾಟದ ಸಂದರ್ಭದಲ್ಲಿ ಕಂಡು ಬರುವ ಗುಣ. ಸಾಮಾಜಿಕ ಬದಲಾವಣೆಗಾಗಿ, ರಾಜಕೀಯ ವಿಪ್ಲವಕ್ಕಾಗಿ ಕಾತರಿಸುವ ಎಲ್ಲರಲ್ಲೂ ಇರಬೇಕಾದ ಗುಣವೇ ಇದು. ಶಾಮಣ್ಣನವರು ಇಷ್ಟವಾಗುವುದು, ಪ್ರಸ್ತುತವಾಗುವುದು ಇದೇ ಕಾರಣಕ್ಕಾಗಿ. ಬದಲಾವಣೆಯ ಆಶಯಗಳನ್ನಿಟ್ಟುಕೊಂಡ ಯಾವುದೇ ಚಳುವಳಿಗೆ ಸವಾಲುಗಳನ್ನೆದುರಿಸುವ ಕಾಠಿಣ್ಯದ ಜೊತೆಗೆ ತಾಯ್ತನದ ಕಾರುಣ್ಯವೂ, ನಿಷ್ಠುರತೆಯ ಜೊತೆಗೇ ಮಗುವಿನ ಮುಗ್ಧತೆಯೂ ಇರಬೇಕೆಂದು ಬಯಸುವುದಾದರೆ ಆ ಎರಡೂ ಭಾವವೂ ಶಾಮಣ್ಣನವರಲ್ಲಿದೆ. ಇದನ್ನು ರೈತ ಸಂಘ ಜೀರ್ಣಿಸಿಕೊಳ್ಳುವಲ್ಲಿ ವಿಫಲವಾಯಿತು ಹಾಗೂ ಶಾಮಣ್ಣನವರು ಜೊತೆಯಾದ ತರಹೇವಾರಿ ಸಂಘಟನೆಗಳು ಹಾಗು ಹೋರಾಟಗಾರರು ಅರ್ಥ ಮಾಡಿಕೊಳ್ಳುವಲ್ಲಿ ವಿಫಲರಾದರು ಎಂಬ ಮಾತು ಕೂಡ ಸತ್ಯವೆ.

ಹೋರಾಟ–ಚಳುವಳಿಯಲ್ಲಿ ತೊಡಗಿಸಿಕೊಂಡವರು ಈಗಂತೂ ಅನ್ಯಗ್ರಹ ಜೀವಿಗಳಂತೆ ವರ್ತಿಸುವುದನ್ನು ಕಾಣುತ್ತೇವೆ. ತಾವು ಪ್ರಶ್ನಾತೀತರು ಎಂಬ ಭ್ರಮೆಯಲ್ಲಿರುವವರೆ ಹೆಚ್ಚು ಮಂದಿ. ಅಂತಹವರ ನಡುವೆ ಶಾಮಣ್ಣ ಸ್ಪಷ್ಟತೆಯಿಲ್ಲದ ನಾಯಕರಂತೆ ಕಂಡಾರು. ಬೀದಿಯಲ್ಲಿ ನಿಂತು ಘೋಷಣೆ ಕೂಗಿ, ಭಾಷಣ ಮಾಡುವುದನ್ನಷ್ಟೇ ಹೋರಾಟ ಅಂದುಕೊಂಡವರಿಗೆ ಕಡಿದಾಳ್ ಶಾಮಣ್ಣ ಕೆಲವೊಮ್ಮೆ ನಿರಾಶೆಯುಂಟು ಮಾಡುತ್ತಾರೆ. ಆದರೆ ಅವರ ಬದುಕಿನಲ್ಲೆ ಹೋರಾಟದ ಲಯವಿದೆ. ಬಂಡಾಯದ ಗುಣವಿದೆ. ಅಸಹಾಯಕರನ್ನು ಪೊರೆಯುವ ಪ್ರೀತಿಯಿದೆ. ಅವರೊಬ್ಬ ಮಹಾನ್ ಆಶಾವಾದಿ. ಕಪಟತನವಿಲ್ಲದ ಸಹೃದಯಿ. ಚಳುವಳಿ–ಹೋರಾಟಗಳಲ್ಲಿ ತೊಡಗಿರುವವರಿಗೆ, ಪ್ರಗತಿಪರವಾಗಿ ಚಿಂತಿಸುವವರಿಗೆ ಸೂಕ್ಷ್ಮತೆ ಕಡಿಮೆಯಿರುತ್ತದೆ, ಸಂವೇದನಾರಹಿತರಾಗಿರುತ್ತಾರೆ ಎಂಬುದೊಂದು ಆಪಾದನೆಯಿದೆ. ಹಲವು ಸಂದರ್ಭಗಳಲ್ಲಿ ಇದು ಸತ್ಯವೂ ಹೌದು. ವಿಚಾರಕ್ಕೆ ತಲೆಕೊಟ್ಟವರು ಭಾವರಹಿತ

ರಾಗಿರುವುದನ್ನು ನಾವು ನೋಡಿರುತ್ತೇವೆ. ಶಾಮಣ್ಣ ಇದಕ್ಕೆ ಹೊರತಾದ ಭಾವಜೀವಿ. ಕೌಟುಂಬಿಕ ಪ್ರೀತಿ-ಆಪ್ತತೆಯನ್ನು ಉಳಿಸಿಕೊಂಡವರು. ತಮ್ಮ ಸಂಪರ್ಕಕ್ಕೆ ಬಂದವರೆಲ್ಲರಲ್ಲೂ ಬೆಸೆಯುತ್ತಾ ಹೋಗುವವರು. ಸಂಗೀತದ ಆಸಕ್ತಿ, ಸಾಹಿತ್ಯದ ಓದು ಕೂಡ ಅವರೊಳಗಿನ ಚಳುವಳಿಗಾರರನ್ನು ಸೂಕ್ಷ್ಮ ಸಂವೇದಿಯಾಗುವಂತೆ ಮಾಡಿದೆ.

ನನಗೊಮ್ಮೆ ಪತ್ರಿಕೋದ್ಯಮದ ಕುರಿತಾಗಿ ವೈರಾಗ್ಯ ಹುಟ್ಟಿತ್ತು. ಅಂಗಡಿಯೊಂದನ್ನು ಮಾಡಿಕೊಂಡಿದ್ದೆ. ಶಾಮಣ್ಣ ತಮ್ಮ ಗ್ರೀಟಿಂಗ್ ವ್ಯವಹಾರವನ್ನು ನನ್ನ ಹೆಗಲಿಗೆ ಹಾಕಿದ್ದರು. ಅದೆಷ್ಟು ಜನರಿಗೆ ಗೊತ್ತಿದೆಯೋ ಏನೋ, ಶಾಮಣ್ಣನವರು ತಾವು ತೆಗೆದ ಅಪರೂಪದ ಫೋಟೊಗಳನ್ನೊಳಗೊಂಡ ಹ್ಯಾಂಡ್‌ಮೇಡ್ ಗ್ರೀಟಿಂಗ್ಸ್‌ಗಳನ್ನು ಜನಪ್ರಿಯಗೊಳಿಸಲು ಮೊದಲಿಂದಲೂ ಪ್ರಯತ್ನಿಸುತ್ತಿದ್ದಾರೆ. ಉತ್ತಮ ಫೋಟೊ ಹಾಗು ಕವಿಗಳ ಸಂದೇಶವುಳ್ಳ ಗ್ರೀಟಿಂಗ್ಸ್‌ಗಳನ್ನು ತಮ್ಮ ಅರಿವು ಸಂಸ್ಥೆ ಮೂಲಕ ಹೊರತಂದು ಮಾರುಕಟ್ಟೆ ಮಾಡಲು ಪ್ರಯತ್ನಿಸಿದ್ದಾರೆ. ಪತ್ರಿಕೋದ್ಯಮವನ್ನೇ ತೊರೆಯುವ ಸನ್ನಾಹದಲ್ಲಿದ್ದ ನನಗೆ ಗ್ರೀಟಿಂಗ್ಸ್ ಮಾರುವ ಕೆಲಸವನ್ನು ಹಚ್ಚಿದ್ದರು. ನಾನು ಒಂದಿಷ್ಟು ಕಾಲ ಗ್ರೀಟಿಂಗ್ಸ್ ಮಾರಿದೆ. ಗಿರಾಕಿಗಳನ್ನು ಶಾಮಣ್ಣನವರೇ ಕಳುಹಿಸುತ್ತಿದ್ದರು. ದೀಪಾವಳಿ, ಯುಗಾದಿ ಸಂದರ್ಭಗಳಲ್ಲಿ ಖರೀದಿಯಾಗುತ್ತಿತ್ತು. ಹೀಗೆ ತಮ್ಮ ಸಂಪರ್ಕಕ್ಕೆ ಬರುವ ಯುವಕರನ್ನು ಕೆಲಸಕ್ಕೆ ಹಚ್ಚುವ ಶಾಮಣ್ಣ ವ್ಯಕ್ತಿಗತ ನೆಲೆಯಲ್ಲೂ ತಮ್ಮ ಸಮೀಪಕ್ಕೆ ಬರುವವರ ಯೋಗಕ್ಷೇಮ ನೋಡಿಕೊಳ್ಳು ತ್ತಾರೆ. ಪ್ರೀತಿ ಕಾಳಜಿ ಇದ್ದಾಗ ಮಾತ್ರ ಇದು ಸಾಧ್ಯವಾಗುತ್ತದೆ. ಈ ನಡುವೆ ನಾನು ಸರಳವಾಗಿ ಮದುವೆಯಾಗಲು ನಿರ್ಧರಿಸಿ ಶಾಮಣ್ಣನವರ ಮನೆಗೆ ಹೋದೆ. ಕರ್ನಾಟಕ ಸಂಘದಲ್ಲಿ ಮದುವೆ. ಶಾಮಣ್ಣನವರದ್ದೆ ಸಾರಥ್ಯ. ತ್ಯಾನಂದೂರು ಪುಟ್ಟಣ್ಣನವರನ್ನು ಕರೆಯಲು ಶಾಮಣ್ಣ ಸೂಚಿಸಿದ್ದರು. ಶಿವರಾಮಯ್ಯ, ಹಿ.ಶಿ. ರಾಮಚಂದ್ರೇಗೌಡ, ಶ್ರೀಕಂಠ ಕೂಡಿಗೆ, ಹೆಚ್.ಎಲ್.ಪುಷ್ಪ, ಬಂಜಗೆರೆ ಜಯಪ್ರಕಾಶ್, ಬಿದರಳ್ಳಿ ನರಸಿಂಹಮೂರ್ತಿ ಮೊದಲಾದವರು ಬಂದಿದ್ದರು. ಅಪ್ಪ-ಅಮ್ಮ ಬಂದಿರಲಿಲ್ಲ. ಶಾಮಣ್ಣ-ಶ್ರೀದೇವಿಯಕ್ಕ ಎಲ್ಲವೂ ಆಗಿ ಮದುವೆ ನಡೆಸಿಕೊಟ್ಟಿದ್ದರು.

೧೯೯೫ರಲ್ಲಿ ಕಡಿದಾಳ್ ಶಾಮಣ್ಣ ರಾಜ್ಯೋತ್ಸವ ಪ್ರಶಸ್ತಿ ನಿರಾಕರಿಸಿದರು. ಆವತ್ತು ಅದೊಂದು ದೊಡ್ಡ ಸುದ್ದಿ. ನಾನು ಆಗ 'ಈ ವಾರ' ಕರ್ನಾಟಕ ಪತ್ರಿಕೆಗೆ ಶಿವಮೊಗ್ಗದಿಂದ ವರದಿ ಮಾಡುತ್ತಿದ್ದೆ. 'ಈ ವಾರ' ಪತ್ರಿಕೆಗಾಗಿ ಶಾಮಣ್ಣನವರನ್ನು ಸಂದರ್ಶಿಸಲು ನಾನು ಮತ್ತು ಸುಂದರ್ ಭಗವತಿಕೆರೆಗೆ ಹೋದೆವು. ಮಾತಿಗೆ ಕೂರದ ಶಾಮಣ್ಣ ಇಡೀ ದಿನ ನಮ್ಮನ್ನು ಭಗವತೀಕೆರೆ, ಮೈದೊಳಲು, ಮಲ್ಲಾಪುರ ಹೀಗೆ ಅವರ ಕಾರಲ್ಲಿ ಕೂರಿಸಿಕೊಂಡು ಸುತ್ತ ಮುತ್ತಲಿನ ಹಳ್ಳಿಗಳನ್ನು ಸುತ್ತಿಸಿದರು.

ಕೇಳಬೇಕೆಂದಿದ್ದ ಪ್ರಶ್ನೆಗಳಿಗೆ ಆಸ್ಪದವೇ ಇಲ್ಲದಂತೆ ತಮಾಷೆ, ಮಾತು, ಊಟ, ತಿಂಡಿಯಲ್ಲಿ ಇಡೀ ದಿನ ಕಳೆದು ಹೋಗಿತ್ತು. ರಾತ್ರಿ ಊಟದ ನಂತರ ಸಂಗೀತ ಕಛೇರಿಯೂ ನಡೆಯಿತು. ರಾತ್ರಿ ೧೨ಗಂಟೆ ನಂತರ ಶುರುವಾದ ಸೀರಿಯಸ್ಸಾದ ಮಾತುಕತೆ ಮುಗಿದದ್ದು ಬೆಳಿಗ್ಗೆ ೩ ಗಂಟೆಗೆ. ಅವತ್ತಿನ ಸಂದರ್ಶನ 'ಈ ವಾರ' ಪತ್ರಿಕೆಯಲ್ಲಿ ಪ್ರಕಟವಾಯಿತು. ಅರ್ಜೆಂಟಿಗೆ ಹೋಗಿ ಕುಳಿತು ಸಂದರ್ಶನ ಮಾಡಬೇಕೆನ್ನುವವರಿಗೆ ಶಾಮಣ್ಣರಿಂದ ಏನು ಸಿಗುವುದಿಲ್ಲ. ಅವಸರಕ್ಕೆ ಶಾಮಣ್ಣ ದಕ್ಕುವುದೇ ಇಲ್ಲ. ಆದರೆ ನಾವವತ್ತು ಅವರ ಲಹರಿಯಲ್ಲೇ ಬೆನ್ನು ಹತ್ತಿ ಮಾತನಾಡಿಸಿದ್ದರಿಂದ ಅತ್ಯುತ್ತಮ ಸಂದರ್ಶನವೊಂದು ಸಾಧ್ಯವಾಗಿತ್ತು.

ಮತ್ತೊಂದು ಸಾರಿ ಹೀಗಾಗಿತ್ತು; ಶಿವಮೊಗ್ಗದ ಬಿ.ಹೆಚ್ ರಸ್ತೆಯಲ್ಲಿ ಜ್ವರಾರಿ ಮೆಡಿಕಲ್ಸ್ ಎದುರು ಟಿವಿಎಸ್‌ನಲ್ಲಿ ಸಾಗುತ್ತಿದ್ದ ನನ್ನನ್ನು ತಡೆದು ನಿಲ್ಲಿಸಿದ ಶಾಮಣ್ಣ ಅದೇ ವಾರ 'ಹಾಯ್ ಬೆಂಗಳೂರ್'ನಲ್ಲಿ ಸಾಹಿತ್ಯ ಪ್ರೇಮಿ, ಸಾರಾಯಿ ಉದ್ಯಮಿ ಹೀರೆಹಾಳ್ ಇಬ್ರಾಹಿಂ ಕುರಿತು ಬರೆದಿದ್ದ ವರದಿ ಬಗ್ಗೆ ಪ್ರಸ್ತಾಪಿಸಿದ್ದರು. "ಪತ್ರಿಕೆಯಲ್ಲಿ ವರದಿ ಬರೆದಿರುವುದೇನೋ ಸರಿ, ಆದರೆ ಅಷ್ಟು ಕಟುವಾಗಿ ಬರೆಯುವ ಅಗತ್ಯವಿತ್ತೇನ್ರಿ" ಅಂತ ಮಾತು ಶುರು ಮಾಡಿ... "ಒಂದು ಕಡೆ, ಸರಾಯಿ ವಿರೋಧಿ ಹೋರಾಟ ಮಾಡ್ತೀದಿವಿ. ಮತ್ತೊಂದು ಕಡೆ ಇಬ್ರಾಹಿಂ ಸಾಹೇಬರ ಸಮಾಜಸೇವೆ ಸಮರ್ಥಿಸೋದು, ಇದೆಲ್ಲಾ ಸರಿಯಲ್ಲ ಅಂತ ನನಗೂ ಅನಿಸಿತು. ಶಾಲೆಯೊಂದರ ಕೊಠಡಿ ನಿರ್ಮಾಣಕ್ಕೆ ಧನಸಹಾಯ ಕೇಳಲು ಊರವರು ನನ್ನನ್ನು ಇಬ್ರಾಹಿಂ ಹತ್ತಿರ ಕರೆದುಕೊಂಡು ಹೋಗಿದ್ದರು. ಈಗ ನೋಡಿ. ನೀವು ಬರೆದದ್ದನ್ನು ಓದಿ ನಾಚಿಕೆ ಪಡುವಂತಾಯಿತು.." ಅಂತೆಲ್ಲಾ ಶಾಮಣ್ಣ ಹೇಳುತ್ತಿದ್ದರೆ ನನಗೆ ಕಸಿವಿಸಿಯಾಗತೊಡಗಿತ್ತು. ಸಾಹಿತ್ಯ ಪ್ರೇಮಿಯಾಗಿದ್ದ ಹೀರೆಹಾಳ್ ಇಬ್ರಾಹಿಂರವರ ಸರಾಯಿ ದಂಧೆ ಕುರಿತು ನಾ ಬರೆದ ವರದಿಗೆ ಶಿವಮೊಗ್ಗದ ಬುದ್ಧಿಜೀವಿ ವಲಯ ಆಕ್ರೋಶ ವ್ಯಕ್ತಪಡಿಸುತ್ತಿದ್ದರೆ ಕಡಿದಾಳ್ ಶಾಮಣ್ಣ ಒಳ್ಳೆ ಕೆಲಸ ಮಾಡಿದಿರಿ ಅಂತ ಬೆನ್ನು ತಟ್ಟುತ್ತಿದ್ದರು. ನನಗಾದರೋ ಆಯೋಮಯ.

ಸಕತ್ತಾಗಿ ಭಾಷಣ ಮಾಡ್ತಾರೆ ಅಂತ ಶ್ಲಾಘನೆಗೊಳಗಾಗುವವರ ಬಗ್ಗೆ ನನಗೆ ಯಾವಾಗಲೂ ಗುಮಾನಿಯೇ. ಕೇವಲ ಮಾತಿನ ವೈಖರಿ, ಆಂಗಿಕ ಅಭಿನಯದಿಂದ ಜನರನ್ನು ಸೆಳೆಯುವವರಲ್ಲಿ ಹಿಟ್ಲರ್, ಮೋದಿ ತರಹದವರನ್ನೂ ಕಂಡಿದ್ದೇವೆ. ಲಂಕೇಶ್ ಉತ್ತಮ ಭಾಷಣಕಾರರಾಗಿರಲಿಲ್ಲ. ಕಡಿದಾಳ್ ಶಾಮಣ್ಣ ಕೂಡ ಭಾಷಣಗಾರರಲ್ಲ. ತಮ್ಮ ಕೆಲಸದ ಮೂಲಕವೇ ಅವರು ಗಮನ ಸೆಳೆಯುತ್ತಾರೆ. ತಮಾಷೆ ಮಾಡುತ್ತಲೇ ಲವಲವಿಕೆಯಿಂದ ತಮ್ಮ ಸುತ್ತಮುತ್ತಲಿನವರಲ್ಲಿ ಉತ್ಸಾಹ ಮೂಡಿಸುತ್ತಾರೆ. ಶಿಸ್ತು, ಸಮಯಪಾಲನೆ, ಅಚ್ಚುಕಟ್ಟು ತನದ ಮೂಲಕ ಎಲ್ಲರನ್ನೂ

ಕೆಲಸಕ್ಕೆ ಪ್ರೇರೇಪಿಸುತ್ತಾರೆ. ಶಾಮಣ್ಣ ತಮ್ಮ ಡೆಸಿಗ್ನೇಶನ್ ಅನ್ನು 'ರೈತ' ಅಂತಲೇ ಹೇಳುತ್ತಾರೆ. ತಮ್ಮನ್ನು ರೈತ ಮುಖಂಡ ಅಂತ ಕರೆದರೆ ಆಕ್ಷೇಪಿಸುತ್ತಾರೆ. ರೈತ ಹೋರಾಟಕ್ಕೆ ಸೀಮಿತಗೊಳಿಸಿಕೊಳ್ಳದೆ ಬಲಪಂಥೀಯವಲ್ಲದ ಯಾವುದೇ ಸಾಮಾಜಿಕ-ರಾಜಕೀಯ ಹೋರಾಟಗಳಲ್ಲೂ ಅವರು ಸಕ್ರಿಯರಾಗಿರುತ್ತಾರೆ.

ಅಂತರ್ಜಾತಿ ವಿವಾಹ, ಸರಳ ವಿವಾಹ ಮಾಡಿಸುವಲ್ಲಿನ ಉತ್ಸಾಹವೇ, ರೈತ ಪರ ಹೋರಾಟದಲ್ಲೂ, ಕೋಮು ಸೌಹಾರ್ದಕ್ಕಾಗಿನ, ಗಣಿಗಾರಿಕೆ ವಿರುದ್ಧದ, ಆದಿವಾಸಿಗಳ ಪರ ನಡೆಯುವ ಚಳವಳಿಯಲ್ಲೂ ಶಾಮಣ್ಣನವರಿಗೆ ಇರುತ್ತದೆ. ಹೆಗ್ಗೋಡಿನ ನೀನಾಸಂ ಶಿಬಿರದಲ್ಲೂ, ಕುಪ್ಪಳಿಯ ಮಕ್ಕಳರಂಗ ತರಬೇತಿ ಶಿಬಿರದಲ್ಲೂ ಅಷ್ಟೇ ಉತ್ಸಾಹದಿಂದ ಶಾಮಣ್ಣ ಭಾಗವಹಿಸುತ್ತಾರೆ. ಮಕ್ಕಳರಂಗ ತರಬೇತಿ ಶಿಬಿರದಲ್ಲಿ ಮಕ್ಕಳಿಗೆ ಹಾಡು ಹೇಳಿಕೊಡುತ್ತ, ಫೋಟೋಗ್ರಫಿ ಕಲಿಸುತ್ತ, ಕುವೆಂಪುರನ್ನು ಮಕ್ಕಳ ಕಣ್ಣಲ್ಲಿ ಮೂಡಿಸುತ್ತಾ ಖುಷಿ ಪಡುವ ಶಾಮಣ್ಣನವರನ್ನು ನೋಡಿದರೆ ಅವರ ಜೀವನೋತ್ಸಾಹ ಬೆರಗು ಮೂಡಿಸುತ್ತದೆ. ಹೋರಾಟವೂ, ಸಂಗೀತವೂ ಮಕ್ಕಳ ಶಿಬಿರವೂ ಅವರ ಬದುಕಿನ ಸಹಜ ಲಯದಂತೆ ವ್ಯಕ್ತವಾಗುತ್ತದೆ. ನಮಗೆ ಮುಖ್ಯವಾಗಬೇಕಾದದ್ದು ಈ ಬಗೆಯ ಜೀವನ ಕ್ರಮ.

ಸಾಹಿತಿ, ಕವಿ, ಸಂಗೀತಗಾರ, ಬರಹಗಾರ ಅಂತೆಲ್ಲ ಗುರುತಿಸಿಕೊಳ್ಳುವವರು ಸಮಾಜದಲ್ಲಿನ ವ್ಯಗ್ರತೆಗೆ ಸ್ಪಂದಿಸದೇ ಹೋಗುವ ಸಂದರ್ಭವನ್ನು ನೋಡುತ್ತಿದ್ದೇವೆ. ಹೋರಾಟ, ಚಳವಳಿಯಲ್ಲಿ ತೊಡಗಿರುವವರು, ರಾಜಕೀಯ ಮಾಡುವವರು, ಸಾಂಸ್ಕೃತಿಕವಾಗಿ ಬರಡಾಗಿರುವುದನ್ನು ಕಾಣುತ್ತಿದ್ದೇವೆ. ಸಂಗೀತಗಾರನೊಬ್ಬನಲ್ಲಿ ಬಂಡಾಯದ ಸ್ವಭಾವವಿರುವುದಾದರೆ, ಸಮಾಜಕ್ಕೆ ಸ್ಪಂದಿಸುವ ಹೃದಯವಿರುವುದಾದರೆ ಮಾತ್ರವೇ ಆತನ ಸಂಗೀತದ ಪಾಂಡಿತ್ಯಕ್ಕೆ ಬೆಲೆ. ಹಾಗೆಯೇ ಹೋರಾಟ ಚಳವಳಿಯಲ್ಲಿರುವಾತನಲ್ಲಿ ಕವಿ ಹೃದಯವಿರುವುದಾದರೆ, ರಾಜಕಾರಣಿಯೊಬ್ಬ ಸಾಹಿತ್ಯದ ಓದುಗನಾಗಿದ್ದರೆ ಅವರಿಂದ ಸಮಾಜ ಏನನ್ನಾದರೂ ನಿರೀಕ್ಷಿಸಬಹುದಾಗಿರುತ್ತದೆ. ಶಾಮಣ್ಣ ಮತ್ತು ಶ್ರೀದೇವಿಯವರು ಈ ಎಲ್ಲ ಕಾರಣಕ್ಕೆ ನಮಗೆ ಆದರ್ಶವಾಗಿದ್ದಾರೆ, ಅನುಕರಣೀಯರಾಗಿದ್ದಾರೆ. ಸರ್ವೋದಯ ಮತ್ತು ಸಹ ಬಂಧುತ್ವದ ನೆಲೆಯಿಂದ ಸಾಮಾಜಿಕ ಬದಲಾವಣೆಯನ್ನು ಪ್ರತಿಪಾದಿಸುವ ಶಾಮಣ್ಣನವರಲ್ಲಿ ನಕ್ಸಲ್ ಬಂಡಾಯಗಾರನೂ ಆಗಾಗ ಇಣುಕುತ್ತಾನೆಂಬುದು ಅವರನ್ನು ಹೆಚ್ಚು ಪ್ರೀತಿಸಲು ನನಗಿರುವ ಕಾರಣಗಳಲ್ಲಿ ಒಂದೆಂಬುದೂ ಸತ್ಯವೇ.

ಶಾಮಣ್ಣನ ಕಥಾ ಕಾಲಕ್ಷೇಪ...

ಸವಿತಾ ನಾಗಭೂಷಣ

ಶಿವಮೊಗ್ಗ–ತೀರ್ಥಹಳ್ಳಿ–ಕಡಿದಾಳು–ಕುಪ್ಪಳ್ಳಿ ರಸ್ತೆಯಲ್ಲಿ ಅನೇಕ ಸಲ ನಾವು ಶಾಮಣ್ಣ ಅವರೊಂದಿಗೆ ಓಡಾಡಿದ್ದೇವೆ. ಈ ರಸ್ತೆಯ ಅಂಗುಲಂಗುಲವನ್ನೂ ಶಾಮಣ್ಣ ಬಲ್ಲರು. ಬೇಕಾದರೆ ಇಲ್ಲಿ ಕಣ್ಣು ಮುಚ್ಚಿ ಕಾರು ಓಡಿಸಬಲ್ಲರು. ಈ ರಸ್ತೆಗಳಿಗೂ ಇಕ್ಕೆಲಗಳ ಮರ ಗಿಡ ಬಳ್ಳಿ ಬಿದಿರ ಮೆಳೆಗಳಿಗೂ, ಸೇತುವೆ ನದಿ ಹಕ್ಕಿಗಳಿಗೂ ಶಾಮಣ್ಣ ಅಷ್ಟೇ ಪರಿಚಿತರು. 'ಅಯ್ಯೋ, ನಮ್ಮ ಶಾಮಣ್ಣ ಅಲ್ವೆ!' ಎಂದು ಅವು ಕೂಡಲೇ ಗುರುತಿಸಬಲ್ಲವು. ಈ ರಸ್ತೆಯಲ್ಲಿ ಸಾಗಿದಾಗಲೆಲ್ಲ ಶಾಮಣ್ಣ ನಮಗೆ ಕಥೆ ಹೇಳುವರು. ಅನೇಕ ಬಾರಿ ಹೇಳಿದ ಕಥೆಯನ್ನೇ ಹೇಳಿದರೂ ಕೇಳಿದ ಕಥೆಯನ್ನೇ ಕೇಳಿದರೂ ಹಾವಾಡಿಗನ ಪುಂಗಿಯ ನಾದಕ್ಕೆ ತಲೆದೂಗುವ ಹಾವಿನಂತೆ ನಾವು ತಲೆದೂಗುವೆವು. ದಿಲ್‌ಖುಷ್ ಆಗಿ ಜೋಷ್‌ನಲ್ಲಿದ್ದರೆ ಈ ಹೇಳಿ–ಕೇಳಿ ಪ್ರಸಂಗಗಳು ಮತ್ತಷ್ಟು ಕಳೆಗಟ್ಟಿ ಹಾಡೂ ಉಕ್ಕುವುದು!

ಶಾಮಣ್ಣ ಹುಟ್ಟಿದ ನೆಲ, ಆಟವಾಡಿದ ಹೊಲ, ಪಾಠ ಕಲಿತ, ಕಲಿಸಿದ ಶಾಲೆ ಇಲ್ಲೇ ಈ ರಸ್ತೆಯ ಅಕ್ಕಪಕ್ಕದಲ್ಲೇ ಇವೆ. ಅವರು ಆಸೆಯಿಂದ ಕಡಲೆ ಪುರಿ,

ಮಿಠಾಯಿ ಖರೀದಿಸಿ ತಿಂದ ಗೂಡಂಗಡಿಗಳೂ, ಹಾಜರಿ ಹಾಕಿದ ನೆಂಟರ ಮನೆಗಳೂ, ಟೀ ಕುಡಿದು ಲೆಕ್ಕ ಬರೆಸಿದ ಸೋಷಲಿಸ್ಟರ ಪುಟ್ಟ ಹೋಟೆಲು, ಅವರು ಶ್ರೀದೇವಿಯಕ್ಕನವರೊಂದಿಗೆ ಒಡನಾಡಿದ ತಾವುಗಳು ಹೀಗೆ ಅವರ ಪ್ರೇಮ, ತಂಟೆ, ಹೋರಾಟ, ಹಾರಾಟ ತರಲೆ-ತಾಪತ್ರಯಗಳಿಗೆ ತೀರ್ಥಹಳ್ಳಿಯ ಇಕ್ಕೆಲಗಳ ಗಿಡ ಮರ ಬೆಟ್ಟ ನದಿ ನೆಲ ಜಲ ಸಾಕ್ಷಿಯಾಗಿವೆ. ಶಾಮಣ್ಣ ಅದೆಷ್ಟು ಬಾರಿ ಈ ರಸ್ತೆಯಲ್ಲಿ ಎತ್ತಿನ ಗಾಡಿ, ಸೈಕಲು, ಸ್ಕೂಟರು, ಬೈಕು, ಕಾರು ಜೀಪಿನಲ್ಲಿ ಸವಾರಿ ಮಾಡಿರುವರೋ! ಹೀಗೆ ಹೇಳಿದಾಕ್ಷಣ ಸವಾರಿಗಿಂತ ವಾಹನಗಳ ರಿಪೇರಿಯಲ್ಲೇ ಹೆಚ್ಚು ಸಮಯ ವ್ಯಯವಾಗಿದೆ ಎಂದು ಕಾಮೆಂಟ್ ಮಾಡಿ ಅವರಿಗೆ ಸೈಡ್ ಹೊಡೆಯುವವರಿಗೇನೂ ಕೊರತೆಯಿಲ್ಲ!

"ಈ ಪುಟ್ಟ ಸೇತುವೆ ಉದ್ಘಾಟನೆ ಮಾಡಕ್ಕೆ ಮುಖ್ಯಮಂತ್ರಿ ಬರಬೇಕಿತ್ತು. ನಾವು ರೈತಸಂಘದವರು ನೀವು ಬರಬೇಡೀಂತ ಅವರಿಗೆ ಹೇಳಿಕಳಿಸಿ ನಮ್ಮ ಗಾರೆ ಕೆಲಸದವರಿಂದ್ಲೇ ಅದರ ಉದ್ಘಾಟನೆ ಮಾಡ್ಸಿದ್ವಿ" ಅಂತ ಒಂದು ಸೇತುವೆ ತೋರಿ ಶಾಮಣ್ಣ ನಗಾಡುವರು. ಮುಂದೆ ರಸ್ತೆ ಪಕ್ಕದ ಶಾಲೆಯೊಂದನ್ನು ತೋರಿಸಿ, 'ನಾನು ಅಲ್ಲಿ ಮೇಷ್ಟ್ರಾಗಿದ್ದಾಗ ಹಾಕಿದ ಗಿಡಗಳು ಎಷ್ಟು ದೊಡ್ಮರವಾಗಿವೆ ನೋಡಿ!" ಎಂದು ಅವರೇ ಕೌತುಕ ಪಡುವರು. ನಂತರ ಒಂದು ಕೆರೆ ಪಕ್ಕದ ಜಾಗ ತೋರಿಸಿ, "ಈ ಜಾಗದಲ್ಲಿ ನಾನು ಶ್ರೀದೇವಿ ಕಾರಿನಲ್ಲಿ ಕೂತು ಯಾವುದೋ ಸಣ್ಣ ವಿಷಯಕ್ಕೆ ಜಗಳ ಆಡ್ತಾ ಇದ್ದಾಗ ಏನಾಯ್ತೂಂತ ಕಾರಿನ ಸುತ್ತ ಹತ್ತಾರು ಜನ ಸೇರಿ ಕೇಳೋದೇ! ನಮಗೆ ಗೊತ್ತೇ ಇಲ್ಲ ಮಾರಾಯ್ರೆ!" ಅಂತ ಶಾಮಣ್ಣ ಕತ್ತು ಕೊಂಕಿಸಿ ನಗುವರು. "ಈ ಇಳಿಜಾರಿನಲ್ಲಿ ಶ್ರೀದೇವೀನ ಕೂರಿಸಿಕೊಂಡು ಸ್ಕೂಟರ್‌ನಲ್ಲಿ ಭರ್ರಂತ ಬರ್ತಿದ್ದಾಗ ಬ್ರೇಕ್ ಫೇಲ್ ಆಗಿ ಎದೆ ಢವಢವ ಗುಟ್ತಿದ್ದಾಗ, ಯಾರೋ ಗಡ್ಡದ ಸಾಬೀನ ಹಿಡಿಯೋಕೆ ಆರ್ಡರ್ ಬಂದಿದೇಂತ ಪೋಲೀಸ್ನೋನು ನಮ್ಮ ಸ್ಕೂಟರ್‌ನ ಅಡ್ಡ ಹಾಕಿ ನಿಲ್ಸೋಕೆ ಯತ್ನಿಸಿದ್ದು ಇಲ್ಲೇ. ಬ್ರೇಕ್ ಇಲ್ದ ಗಾಡಿ ನಿಲ್ಲೋದೆಲ್ಲಿ! ಪೋಲೀಸ್ನೋನು ಸಾಬರು ಪರಾರೀಂತ ಸದ್ಯ ಹಿಂಬಾಲಿಸಲಿಲ್ಲ!' ಎಂದು ಆಗಿನ ನಿಟ್ಟುಸಿರನ್ನು ಈಗ ರಿಪೀಟ್ ಮಾಡುವರು. ಕುಪ್ಪಳ್ಳಿ ತಿರುವಿನಲ್ಲಿನ ಒಂದು ಬೆಟ್ಟದ ಕರುಹುಗಳನ್ನು ತೋರಿಸುತ್ತಾ, "ಅಲ್ಲ ಕಣ್ರಿ, ಈ ತೀರ್ಥಳ್ಳಿ ಬೆಟ್ಟದ ಕಲ್ಲು ಜರ್ಮನಿಯಲ್ಲಿ ಫುಟ್‌ಪಾತ್ ಆಗಿ ಬಿದಿದ್ದೆಯಂತೆ!" ಅಂತ ಪಿಸುಗುಟ್ಟುವರು. ಕುಪ್ಪಳಿ ಹತ್ತಿರ ಬರುತ್ತಿದ್ದಂತೆ, "ನಾನೂ ಸುಂದ್ರೇಶ 'ಮಂತ್ರಮಾಂಗಲ್ಯ' ಬೋಧಿಸೋಕ್ಕೆ ಸ್ಕೂಟ್ರಲ್ಲಿ ಯಾರದ್ದೋ ಮದ್ವೆಗೆ ಹೋಗ್ತಿದ್ದಾಗ ಗಾಡಿ ಸ್ಕಿಡ್ಡಾಗಿ ಬಿದ್ದದ್ದು, ಪ್ರಜ್ಞೆ ತಪ್ಪಿದಂತೆ ಬಿದ್ದಿದ್ದ ಸುಂದ್ರೇಶ ಮೇಲೆ ಎಳೆನೀರಿನ ಮರ ನೋಡಿ 'ಎಳೆನೀರು' ಎಂದು ಎದ್ದು ಕೂತದ್ದು ಇಲ್ಲೇ. ನನ್ನ ವೇಷ ಭೂಷಣ ನೋಡಿ ಅಕ್ಕಪಕ್ಕದ

ಮನೆಗಳ ಬೂವ್ವಮ್ಮದೀರು ಲಗುಬಗೆಯಿಂದ ನಮ್ಮನ್ನು ನೀರು–ಎಳೆನೀರುಗಳಿಂದ ಉಪಚರಿಸಿದ್ದು ಇಲ್ಲೇ!!" ಎಂದು ತಾವು ನಗದೆ ನಮ್ಮನ್ನು ಬಿದ್ದುಬಿದ್ದು ನಗುವಂತೆ ಮಾಡುವರು. ಇನ್ನು ಬಲಬದಿಯ ಹೊಂಡ ತೋರಿಸಿ "ಕಾನೂರು ಹೆಗ್ಗಡಿತಿಯ ಭೈರ ಹೊಂಡ ತೋಣಕಿದ್ದು ಇಲ್ಲೇ" ಎಂದು ಹೇಳಿ ನಮ್ಮಲ್ಲಿ ಕುತೂಹಲ ಹುಟ್ಟಿಸುವರು. ಹೀಗೇ ಅದೆಷ್ಟು ಪ್ರಾಸಂಗಿಕ ಕಥೆಗಳೋ!

ನಾನು ಅಂದಾಜಿಸುವುದೇನೆಂದರೆ, ಅವರ ಕಥೆಗಳು, ನಗು, ದುಃಖ ದುಮ್ಮಾನಗಳು ಎಲ್ಲವೂ ಈ ಪರಿಸರದಲ್ಲಿ ಯಥಾವತ್ತಾಗಿ ರೆಕಾರ್ಡಾಗಿವೆ. ಅವರ ಭಾವ–ಭಂಗಿಗಳನ್ನೆಲ್ಲ ಇಲ್ಲಿನ ಗಿಡ ಮರಗಳು ಕ್ಲಿಕ್ಕಿಸಿವೆ. ಶಾಮಣ್ಣನವರ ಎಲ್ಲ ಆಟಗಳನ್ನೂ ವರಸೆಗಳನ್ನೂ ಅವು ಬಲ್ಲವು. ಒಂದೊಮ್ಮೆ ಶಾಮಣ್ಣ ಯಾವುದಾದರೂ ಪ್ರಸಂಗವನ್ನು ಅರ್ಧ ಹೇಳಿ ನಿಲ್ಲಿಸಿದರೆ ಅವು ಮುಂದುವರೆಸಬಲ್ಲವು. ಅಷ್ಟರಮಟ್ಟಿಗೆ ಅವುಗಳಿಗೆ ಅವೆಲ್ಲ ಬಾಯಿಪಾಠವಾಗಿವೆ!

ಮನುಷ್ಯನ ಆಯುಷ್ಯ ಚಿಕ್ಕದು. ಪುಸ್ತಕಗಳ ಆಯಸ್ಸು ತುಸು ಹೆಚ್ಚಿರಬಹುದು. ಆದರೆ ಪಂಚಭೂತಗಳು ಅಂದಿನಿಂದಲೂ ಎಂದಿನವರೆಗೂ ಇರುವಂತಹವುಗಳು. ಹಾಗೆಯೇ ಇವುಗಳ ಜೊತೆ ಬೆಸೆದುಕೊಂಡ ನಮ್ಮ ಶಾಮಣ್ಣನ ಉಸಿರು ಮತ್ತವರ ಕಥಾಕಾಲಕ್ಷೇಪವೂ.

ಹಳ್ಳಿಗಳ ಜೀವಂತಿಕೆಗೆ ಕಾತರಿಸುವ ಜೀವ

ಅಕ್ಷತಾ ಹುಂಚದಕಟ್ಟೆ

ನಾನು ಶಾಮಣ್ಣನವರನ್ನು ಮೊದಲು ಕಂಡಿದ್ದು; ನನ್ನ ನೆಚ್ಚಿನ ಲಂಕೇಶ್ ಪತ್ರಿಕೆಯಲ್ಲಿ ಧಾರಾವಾಹಿಯಾಗಿ ಬರುತ್ತಿದ್ದ ತೇಜಸ್ವಿಯವರ 'ಅಣ್ಣನ ನೆನಪು' ಕೃತಿಯ ಒಂದು ಮುಖ್ಯ ಪಾತ್ರವಾಗಿ. ಆಗ ಹೈಸ್ಕೂಲ್ ಓದುತ್ತಿದ್ದ ನನಗೆ ಅತಿ ಹೆಚ್ಚು ರುಚಿಸುತ್ತಿದ್ದುದು ಲಂಕೇಶ್ ಪತ್ರಿಕೆಯ ಬರಹಗಳು. ನಂತರ ಮದುವೆಯಾಗಿ ಶಿವಮೊಗ್ಗೆಯಲ್ಲಿ ನೆಲೆ ನಿಂತಾಗಲೂ ಶಾಮಣ್ಣನವರನ್ನು ಅಲ್ಲಲ್ಲಿ ಸಭೆ ಸಮಾರಂಭಗಳಲ್ಲಿ ನೋಡಿದ್ದು ಬಿಟ್ಟರೆ ಹತ್ತಿರದ ಒಡನಾಟವೇನೂ ಇರಲಿಲ್ಲ. ಅದು ೨೦೦೭ನೇ ಇಸ್ವಿಯ ಒಂದು ದಿನ. ಆಗ ನಾನು ಸ್ಥಳೀಯ 'ನಮ್ಮ ನಾಡು' ಪತ್ರಿಕೆಯಲ್ಲಿ ಕೆಲಸ ಮಾಡುತ್ತಿದ್ದೆ. ಸಂಜೆ ಪತ್ರಿಕೆ ಯಾದ್ದರಿಂದ ಮಧ್ಯಾಹ್ನವಾಗುತ್ತಿದ್ದಂತೆ ಪತ್ರಿಕೆ ಪ್ರಿಂಟ್‌ಗೆ ಕಳಿಸುವ ಗಡಿಬಿಡಿಯಲ್ಲಿದ್ದೆವು. ಆಗ ಯಾರೋ ಫೋನ್ ಮಾಡಿದರು. 'ತೇಜಸ್ವಿ ತೀರಿ ಹೋದರಂತೆ' . ಅವರಿಗೂ ನಿಚ್ಚಳವಿರಲಿಲ್ಲ... ಕೂಡಲೇ 'ಈ ಟಿವಿ' ಹಾಕಿದೆವು. ತೇಜಸ್ವಿ ತೀರಿಹೋದ ವಾರ್ತೆ ಬರುತ್ತಿತ್ತು...ಹಾಗೆಯೇ ಟಿವಿ ನೋಡುತ್ತಲೇ ಹೋದಾಗ 'ಬಂದರು ಶಾಮಣ್ಣ ಗೆಳೆಯನನ್ನು ನೋಡಲು' ಎಂದು ಶಾಮಣ್ಣನವರನ್ನು

ತೋರಿಸಿದರು. ಶಾಮಣ್ಣ ತೇಜಸ್ವಿಯವರ ಕೊನೆಯ ಫೋಟೋಗಳನ್ನು ತಮ್ಮ ಕ್ಯಾಮರಾದಲ್ಲಿ ಸೆರೆ ಹಿಡಿಯುವಲ್ಲಿ ತಲ್ಲೀನರಾದ ದೃಶ್ಯವನ್ನು 'ಈ ಟಿವಿ' ತೋರಿಸಿತು. ಹರೆಯದ ದಿನಗಳಿಂದಲೂ ಜೊತೆಗಿದ್ದ ಜೀವದ ಗೆಳೆಯನನ್ನು ಅವನ ಸಾವಿನಲ್ಲೂ ಛಾಯಾಚಿತ್ರಗಳ ಮೂಲಕ ಜೀವಂತವಾಗಿಟ್ಟುಕೊಳ್ಳುವ ಪ್ರಯತ್ನದಂತೆ ನನಗೆ ಆ ದೃಶ್ಯ ಕಂಡುಬಂತು.

ಅದೇ ಸಂದರ್ಭದಲ್ಲಿ ನಾನು ಶಾಮಣ್ಣನವರ ಒಡನಾಟಕ್ಕೆ ಬಂದಿದ್ದು. ವಸಂತ ಬನ್ನಾಡಿಯವರು ತಮ್ಮ 'ಶಬ್ದಗುಣ' ಪತ್ರಿಕೆಗೆ ಶಾಮಣ್ಣನವರನ್ನು ಮಾತಾಡಿಸಿ ತೇಜಸ್ವಿಯವರ ಜೊತೆಗಿನ ಅವರ ಸ್ನೇಹದ ನೆನಪುಗಳನ್ನು ಬರಹ ರೂಪದಲ್ಲಿ ಕಳಿಸುವಂತೆ ಹೇಳಿದ್ದರು. ನನಗೆ ಆಗ ಶಾಮಣ್ಣ ಯಾವ ಊರಲ್ಲಿ ಇರುತ್ತಾರೆ? ಅವರ ಊರಿಗೆ ಹೇಗೆ ಹೋಗಬೇಕು? ಎಂಬುದು ತಿಳಿದಿರಲಿಲ್ಲ. ಜೊತೆಗೆ ಹೊಸಬಳಾದ ನನ್ನ ಜೊತೆ ಮನಬಿಚ್ಚಿ ನೆನಪುಗಳನ್ನು ಹೇಳಿಕೊಂಡಾರೆಯೆ? ಎಂಬ ಪ್ರಶ್ನೆಯು ನನ್ನನ್ನು ಕಾಡುತ್ತಿತ್ತು. ಆದರೆ ಸ್ನೇಹಿತರ ಇಂಥ ಆದೇಶಗಳಿಗೆ ನಾನು ಬಹಳಷ್ಟು ಬಾರಿ ನಾನು ತಲೆಬಾಗುತ್ತೇನೆ. ಸ್ನೇಹ ಎಂದರೆ ಮತ್ತೆ ಸುಮ್ಮನೆಯೇ? ಗೆಳತಿ, ಹೋರಾಟಗಾರ್ತಿ ಮಂಜುಳಾ ಅವರನ್ನು ಶಾಮಣ್ಣನವರ ಮನೆಗೆ ಕರೆದೊಯ್ಯಲು ಕೋರಿದೆ. ಅವರು ಎರಡು ಬಸ್ಸು ಬದಲಾಯಿಸಿಕೊಂಡು ನಂತರ ಒಂದು ಮೈಲಿ ನಡೆಸಿ ಶಾಮಣ್ಣನವರ ಮನೆಗೆ ಕರೆದೊಯ್ದರು. ಮಂಜುಳಾ ಕರೆದೊಯ್ಯದಿದ್ದರೆ ನನ್ನ ಸಂಕೋಚ, ಆತಂಕ ಮತ್ತು ಸೋಮಾರಿತನದಿಂದ ಶಾಮಣ್ಣನವರ ಮನೆಗೆ ಹೋಗಿ ಅವರನ್ನು ಮಾತಾಡಿಸುವ ಸಾಹಸಕ್ಕೆ ನಾನು ಖಂಡಿತಾ ಮುಂದಾಗುತ್ತಿರಲಿಲ್ಲ. ಆವತ್ತು ಶಾಮಣ್ಣನವರು ಮೊದಲ ಭೇಟಿಯಲ್ಲೇ ಆತ್ಮೀಯರಾದರು. ಖುಷಿ ಖುಷಿಯಿಂದ ತೇಜಸ್ವಿಯ ಜೊತೆಗಿನ ತಮ್ಮ ಒಡನಾಟವನ್ನು ಮೆಲುಕು ಹಾಕಿದರು. ನಾವು ಸಂಜೆ ತನಕ ಅವರ ಮನೆಯಲ್ಲಿದ್ದು ಮರಳಿದೆವು. ಶಾಮಣ್ಣನವರ ಮನೆಯಿಂದ ಮರಳಿದ ನನ್ನೆದುರು ಒಂದು ಲೋಕವಿತ್ತು; ಅದು ಶಾಮಣ್ಣ-ತೇಜಸ್ವಿಯವರ ಸ್ನೇಹಲೋಕ. ಕ್ಷಣಗಳು ಕಳೆದರೆ ನೆನಪು ಮಾಸಬಹುದೇನೋ ಎಂದು ಆತಂಕಿತಳಾಗಿ ಲಗುಬಗೆಯಿಂದ ಒಂದು ಚಿಕ್ಕ ಸಾಲು ಮರೆಯಾಗಬಾರದೆಂಬ ಕಾಳಜಿಯಿಂದ ಎಂದಿನ ದಿನಚರಿಯಾದ ಹಿಂದಿ ಟಿವಿ ಧಾರಾವಾಹಿಗಳ ವೀಕ್ಷಣೆಯನ್ನು ಸಂಪೂರ್ಣ ಮರೆತು ಶಾಮಣ್ಣ ಅವರ ನೆನಪುಗಳನ್ನು ದಾಖಲಿಸುತ್ತಾ ಹೋದೆ... ಬರೆಹವಾದ ಮೇಲೆ ಇದನ್ನು ಯಾರಿಗಾದರೂ ಒಮ್ಮೆ ತೋರಿಸಲೇಬೇಕು ಎನಿಸಿತು. ನನ್ನ ಬರಹದ ಮೇಲೆ ನನಗೆ ವಿಶ್ವಾಸವಿರಲಿಲ್ಲ. ಅದಕ್ಕೆ ಶಾಮಣ್ಣನವರೊಡನೇ ಬಹುಕಾಲದಿಂದ ಒಡನಾಟವಿದ್ದ ಜಿ.ಪಿ.ಬಸವರಾಜು ಸರ್ ಅವರನ್ನು ವಿನಂತಿಸಿದೆ. ಅವರು ಆಗ 'ಮಯೂರ' ದ

ಸಂಪಾದಕರಾಗಿದ್ದು ನಮ್ಮಂತಹ ಹೊಸಬರಿಗೆ ಬರೆಯಲು ಪ್ರೋತ್ಸಾಹಿಸುತ್ತಿದ್ದರು. ಆ ಬರೆಹವನ್ನು ಓದಿ ಬಸವರಾಜು ಸರ್ ಥ್ರಿಲ್ ಆದ ಪರಿ ನನಗೆ ಇವತ್ತಿಗೂ ನೆನಪಿದೆ... ಅದು ನನ್ನ ಬರವಣಿಗೆಯ ಮೊದಲ ದಿನಗಳಾದ್ದರಿಂದ ಅವರ ಒಂದೊಂದು ಮಾತೂ ನನ್ನ ಓದು ಮತ್ತು ಬರೆಹದ ಮೋಹವನ್ನು ಹೆಚ್ಚಿಸಲು ಕಾರಣವಾದವು. ಸರ್, ಅರೆಕ್ಷಣವೂ ತಡಮಾಡದೇ 'ಅಕ್ಷತಾ, ಶಾಮಣ್ಣನವರ ಆತ್ಮಕಥನ ನಾನು ನಿರೂಪಿಸಬೇಕೆಂದುಕೊಂಡಿದ್ದೆ; ಆಗಲಿಲ್ಲ. ನೀನು ಸಂಗ್ರಹಿಸು. ಮಯೂರದಲ್ಲಿ ಪ್ರಕಟಿಸೋಣ' ಎಂದರು. ಅದು ನನ್ನಿಂದ ಆಗಲಾರದು ಎನ್ನಿಸಿತು. ಮತ್ತೆ ಹಿರಿಯರೊಬ್ಬರು ನನ್ನ ಮೇಲೆ ವಿಶ್ವಾಸವಿಟ್ಟು ಇಂಥ ಅಪೂರ್ವ ಕೆಲಸ ವಹಿಸುತ್ತಿರುವಾಗ ಆಗುವುದಿಲ್ಲ ಎಂದು ಹೇಳಲು ಹೇಗೆ ಸಾಧ್ಯ?. ಅನುಮಾನದಿಂದಲೇ ಒಪ್ಪಿದೆ. ಬಸವರಾಜು ಸರ್, ಶಾಮಣ್ಣನವರ ಬಳಿ ಮಾತಾಡಿ ಅವರನ್ನು ಒಪ್ಪಿಸಿದರು. 'ಕಾಡತೊರೆಯ ಜಾಡು'(ಶಾಮಣ್ಣನವರ ಆತ್ಮಕಥನ) ರೂಪುಗೊಳ್ಳಲು ವೇದಿಕೆ ನಿರ್ಮಾಣವಾದದ್ದು ಹೀಗೆ.

ಅಂದಿನಿಂದ ಶಾಮಣ್ಣನವರ ಭಗವತಿಕೆರೆಗೆ ನನ್ನ ಪಯಣ ಪ್ರಾರಂಭವಾಯಿತು.. ಬೆಳಿಗ್ಗೆ ೮ ಗಂಟೆಗೆ ಶಾಮಣ್ಣನವರ ಊರಿಗೊಂದು ಬಸ್ಸಿದೆ. ವೀರಭದ್ರಸ್ವಾಮಿ ಎಂದದರ ಹೆಸರು. ಆ ಬಸ್ಸು ಹತ್ತಿದರೆ ನೇರ ಶಾಮಣ್ಣನವರ ಮನೆ ಮುಂದೆ ನಮ್ಮನ್ನು ಇಳಿಸುತ್ತದೆ. ಸಂಜೆ ಅದೇ ಬಸ್ಸು ವಾಪಸ್ಸು ಶಿವಮೊಗ್ಗಕ್ಕೆ... ಹೀಗೆ ಇಡೀ ದಿನ ಶಾಮಣ್ಣನವರ ಜೊತೆ ಮಾತುಕತೆ ಸಾಧ್ಯ ಆಗ್ತಿತ್ತು. ಅವರದು ಲಹರಿ ಬಂದ ಹಾಗೆ... ಬಾಲ್ಯದಿಂದ ಒಮ್ಮೆಗೆ ರೈತಸಂಘದ ದಿನಗಳಿಗೆ ಜಿಗಿಯುತ್ತಿದ್ದರು. ಅಲ್ಲಿಂದ ಕಾಲೇಜು ದಿನಗಳಿಗೆ ಬರ್ತಿದ್ದರು... ಕಾಲೇಜು ದಿನ ಮಾತಾಡ್ತ ಮಾತಾಡ್ತ ಮುಂದ್ಯಾವತ್ತೋ, ಇವರು ಮಾಡಿಸಿರುವ ಅಂತರ್ಜಾತೀಯ ಮದುವೆಯ ವಿವರಕ್ಕೆ ಜಾರುತ್ತಿದ್ದರು... ನನಗೆ ಮೊದ ಮೊದಲಿಗೆ ತುಸು ಗೊಂದಲವಾಗ್ತಿತ್ತು... ಆದರೆ ಬಹಳ ಬೇಗನೇ ಶಾಮಣ್ಣನವರ ಈ ರೀತಿಯ ಲಹರಿ ನನ್ನ ನಿರೂಪಣೆಗೆ ಅನುಕೂಲಕರವಾಗಿಯೇ ಪರಿಣಮಿಸುವಂತೆ ಮಾಡಿಕೊಳ್ಳುವ ದಾರಿ ಹುಡುಕಿದೆ. ಅವರು ಒಂದು ವಿಷಯ ಅರ್ಧಕ್ಕೆ ಬಿಟ್ಟು ಇನ್ಯಾವುದೋ ವಿವರಕ್ಕೆ ಜಾರಿದರೆ... ನಾನವರನ್ನ ವಾಪಸ್ಸು ಕರೆತರುವ ಪ್ರಯತ್ನವೇ ಮಾಡದೇ ಅವರ ಲಹರಿಗೆ ಅವರನ್ನು ಬಿಟ್ಟು ಆಗ ಹೇಳುವ ವಿವರವನ್ನು ಪಾಯಿಂಟ್ ಮಾಡಿಕೊಳ್ಳುತ್ತಿದ್ದೆ...ನಿರೂಪಣೆಯ ಮುಂದಿನ ದಿನಗಳಲ್ಲಿ ಇದು ನನಗೆ ಬಹಳ ಉಪಕಾರವಾಯಿತು. ಅವರು ಆ ಘಟನೆ ಹೇಳುವ ಸಂದರ್ಭದಲ್ಲಿ ಬಿಟ್ಟುಹೋದ ಸಾಲುಗಳಿದ್ದರೆ ನಾನು ಪಾಯಿಂಟ್ ಮಾಡಿಕೊಂಡ ಆಧಾರದ ಮೇಲೆ ಅವರಿಗೆ ನೆನಪಿಸುತಿದ್ದೆ...' ಓ ನಿಮಗೆ ನನಗಿಂತ ಚೆಂದ ನೆನಪಿದ್ಯಲ್ರಿ ಮಾರಾಯ್ರೆ' ಎಂದು ಶಾಮಣ್ಣ ಅವರಿಗಿಂತ ನಾಲಕ್ಕು ದಶಕಗಳ

ನಂತರ ಹುಟ್ಟಿರುವ ನನ್ನನ್ನು ಅವರ ಜೊತೆ ಜೊತೆಗೆ ಬೆಳೆದು, ಅವರ ಬದುಕು ಮತ್ತು ನೆನಪುಗಳಲ್ಲಿ ಭಾಗಿದಾರಳೇನೋ ಎಂಬಂತೆ ಕಾಣುತ್ತಿದ್ದುದ್ದು ವಿಶೇಷವಾಗಿತ್ತು. ಇದು ಎಲ್ಲಿ ತನಕ ಎಂದರೆ ಅವರ ಬಾಲ್ಯಕಾಲದ ಗೆಳೆಯರ ಹೆಸರು ನೆನಪು ಕಳೆದರೆ... ಅವರ ರೂಂ ಮೇಟ್ ಹೆಸರು ನೆನಪಾಗ್ದಿದ್ದರೆ.. ಕೊನೆಗೆ ಅವರು ಮೇಷ್ಟ್ರಾಗಿದ್ದಾಗ ಶಿಷ್ಯರಾಗಿದ್ದವರ ಹೆಸರು ನೆನಪಿನಿಂದ ಜಾರಿದರೆ... 'ನಿಮಗವರ ಹೆಸರು ನೆನಪಿಗೆ ಬರ್ತದೆಯೇ?' ಎಂದು ನನ್ನನ್ನೇ ಕೇಳುವಷ್ಟು...

ಶಾಮಣ್ಣನವರ ಮನೆ ಪ್ರಕೃತಿಯ ಮಡಿಲಲ್ಲಿದೆ. ನಗರದ ಯಾವ ಸೋಂಕೂ ಅದಕೆ ತಾಕಿಲ್ಲ. ಸುತ್ತ ಮುತ್ತ ಮಾವು. ಚಿಕ್ಕು, ಚಕ್ಕೆ, ಪನ್ನೇರಳೆ, ನೇರಳೆ, ದಿವಿ ಹಲಸು ಮತ್ತಿತರ ಮರಗಳು.. ಯಾವುದಾದರೊಂದು ಮರದ ನೆರಳಲ್ಲಿ ಕೂತು ಶಾಮಣ್ಣ ಕಥೆ ಹೇಳೋದು ನಾನು ಬರ್ಕೊಳ್ಳೋದು. ಎಷ್ಟೊಂದು ಶಾಂತತೆ ಪ್ರಕೃತಿಯಲ್ಲಿ... ಅದೇ ಕಥೆ ಹೇಳುತ್ತಿರುವ ಶಾಮಣ್ಣನವರಲ್ಲಿ ನೆನಪಿನ ಕೋಶಕ್ಕೆ ತಕ್ಕ ಭಾವ.. ನೋವು, ಹಾಸ್ಯ, ಭಾವುಕ, ನಿರ್ಲಿಪ್ತ, ಎಲ್ಲೋ ಅಪರೂಪಕ್ಕೆ ಕೆಲವೊಮ್ಮೆ ರೌದ್ರ... ಆ ಎಲ್ಲ ಭಾವಗಳನ್ನು ಧ್ವನಿಯಲ್ಲೇ ಗ್ರಹಿಸಿ ಹಾಗೆ ಹಾಗೆ ಬರಹಕ್ಕೆ ಮೂಡಿಸುವ ಜವಾಬ್ದಾರಿ ನನ್ನ ಮೇಲೆ. ಆ ದೃಶ್ಯವನ್ನು ಇಂದು ಕಲ್ಪಿಸಿಕೊಂಡರೂ ನನಗೆ ನನ್ನ ಬದುಕಿನ ಅತಿ ಸುಂದರ ದೃಶ್ಯಗಳಲ್ಲಿ ಇದು ಒಂದಾಗಿ ನನ್ನ ಭಾವಭಿತ್ತಿಯಲ್ಲಿ ನೆಲೆ ನಿಂತಿದೆ.

ಅಷ್ಟೇ ಅಲ್ಲ ಕಥೆಗಾರ ಶಾಮಣ್ಣ ತಮ್ಮ ಬದುಕಿನ ಕಥೆಯನ್ನು ತೆರೆದುಕೊಳ್ಳುತ್ತಿರುವ ಹೊತ್ತಲ್ಲಿ ಅವರೊಬ್ಬ ವ್ಯಕ್ತಿಯಾಗಿ, ಹಳ್ಳಿಗರಾಗಿ, ಗೃಹಸ್ಥರಾಗಿ, ಗೆಳೆಯರಾಗಿ, ರೈತರಾಗಿ ಹೇಗೆ ವರ್ತಿಸುತಿದ್ದರೆಂಬುದು ಅದೇ ಹೊತ್ತಲ್ಲಿ ನನ್ನ ಅನುಭವಕ್ಕೆ ಬರುತ್ತಿತ್ತು... ಆ ಚಿತ್ರಗಳು ನನಗೆ ಬಹಳ ಮುಖ್ಯ. ಅವು ನನ್ನನ್ನು ಬೆಳೆಸಿವೆ, ತೋಯಿಸಿವೆ, ನನ್ನನ್ನು ಮುಟ್ಟಿ ಪ್ರಶ್ನಿಸಿಕೊಳ್ಳುವಂತೆ ಮಾಡಿವೆ.

ಒಮ್ಮೆ ಶಾಮಣ್ಣ ನೆನಪಿನ ಪುಟಗಳನ್ನು ಹರವಿ ಕೂತಿದ್ದರು..ನಾನು ಬರೆದು ಕೊಳ್ಳುತಿದ್ದೆ. ಆ ದಿನ ಅವರು ಅಪರಿಚಿತರೊಬ್ಬರು ಅಚಾನಕ್ ಸಾವನ್ನಪ್ಪಿದಾಗ ಅವರ ಶವವನ್ನು ರಸ್ತೆ ಮೇಲೆ ಕೂತು ಇಡೀ ರಾತ್ರಿ ಕಾದ ಕಥೆ ಹೇಳುತಿದ್ದರು.. ಕೇಳುತ್ತಿದ್ದ ನನ್ನ ಕಣ್ಣಲ್ಲಿ ತೆಳು ಪಸೆ ಇತ್ತು. ಇನ್ನೂ ನೆನಪು ಮುಗಿದಿರಲಿಲ್ಲ. ಒಬ್ಬ ಯುವಕ ಅಯ್ನೋರೆ ಎಂದು ಕೂಗಿಕೊಳ್ಳುತ್ತಾ ಗೇಟು ತೆರೆದು ಒಳಗೋಡಿ ಬಂದ... ನೆನಪಿನ ಸಾಗರದಲ್ಲಿ ಮುಳುಗಿದ್ದ ಶಾಮಣ್ಣ , ಯುವಕನ ಧ್ವನಿ ಕೇಳಿದ್ದೆ ಕ್ಷಣಾರ್ಧದಲ್ಲಿ ಎದ್ದು ನಿಂತರು. 'ಅಕ್ಕನಿಗೆ ಹೆರಿಗೆ ನೋವಂತೆ ಶಿವಮೊಗ್ಗ ಆಸ್ಪತ್ರೆಗೆ ಕರ್ಕೊಂಡು ಹೋಗಬೇಕಂತೆ ಚೂರು ಕಾರು ತಗಂಡು ಬರಕ್ಕೇಳು' ಅಂತ ಅವ್ವ ಹೇಳಿದ್ಲು ಅನ್ನುವುದರೊಳಗೆ ಶಾಮಣ್ಣ ಕಾರಿನ ಕೀಲಿ ಚಾಲೂ ಮಾಡಿ ಆಗಿತ್ತು...

ಅಲ್ಲೇ ಇದ್ದ ಕೆಲಸದವನ ಜೊತೆ ತನ್ನ ಮೇಲಿದ್ದ ಭಾರವನ್ನು ಅಯ್ನೋರಿಗೆ ಮುಟ್ಟಿಸಿದ್ದೇನೆ ಎಂಬ ನಿರಾಳತೆಯಲ್ಲಿ ಮಾತಿಗೆ ಹಚ್ಚಿದ್ದ ಯುವಕನನ್ನು ಶಾಮಣ್ಣನವರೇ 'ಬೇಗ ಬಾರಪ್ಪ, ಮಾತಾಡ್ತಾ ಕೂರೋ ಸಮಯ ಅಲ್ಲ' ಎಂದು ಧಡಬಡಿಸಿ ಕರೆದೊಯ್ದರು. ಶಾಮಣ್ಣನವರು ಹೇಳುತಿದ್ದ ಕಥೆ... ಈಗ ನನ್ನೆದುರೆ ನಡೆದ ಘಟನೆ ಎರಡರ ನಡುವೆ ದಿಗ್ಭ್ರಮೆಯಿಂದ ನಿಂತಿದ್ದ ನನ್ನನ್ನು ಶಾಮಣ್ಣನವರ ಕಾರಿಂದೆದ್ದ ಧೂಳು ಎಚ್ಚರಿಸದೆ ಇದ್ದಲ್ಲಿ ಇನ್ನೆಷ್ಟು ಹೊತ್ತು ಸ್ತಂಭೀಭೂತಳಾಗಿ ಕೂತಿರುತ್ತಿದ್ದೆನೋ. ಅವರ ಮನೆಯ ಕೆಲಸದವಳು ಹೇಳಿದಳು 'ಇದೇನು ಮೊದಲಲ್ಲ, ಹಿಂಗಾಗ್ತ ಇರೋದು.. ಅಯ್ನೋರು ಇರೋದ್ರಿಂದ ಒಂದು ಧೈರ್ಯ... ಮೊನ್ನೆಯಂತೂ ಕಾರಲ್ಲೇ ಹೆರಿಗೆ ಆಗಿ ಇಡೀ ಕಾರು ರಕ್ತ ರಕ್ತ.. ಅಯ್ನೋರೆ ಪಾಪ ವಾಪಸ್ ಬಂದ್ಮೇಲೆ ತೊಳೆದ್ರು.. ಇನ್ಯಾರಾದ್ರೂ ಆಗಿದ್ರೆ ಇವತ್ತು ನೆಪ ಹೇಳಿ ತಪ್ಪಿಸ್ಕೋತಿದ್ರು. ಹತ್ತಿರದಲ್ಲೆಲ್ಲೂ ಆಸ್ಪತ್ರೆ ಇಲ್ಲ. ಕೊನೇ ಘಳಿಗೆವರೆಗೂ ಮನೇಲೆ ಹೆರಿಗೆ ಆಗತ್ತೆ ಅಂತ ಇಟ್ಕೋತಾರೆ. ಜೀವಕ್ಕೆ ಬಂದಾಗ ಅಯ್ನೋರೆ ಅಂತ ಓಡಿ ಬರ್ತಾರೆ. ಎಲ್ಲರೂ ಬಡವರು. ಊಟಕ್ಕೇ ಕಷ್ಟ. ಅಂತದ್ರಲ್ಲಿ ಬಾಡಿಗೆ ಕಾರು ಎಲ್ಲಿಂದ ತರ್ತಾರೆ?. ಅಯ್ಯನೋರಿಲ್ಲದಿದ್ದರೆ ಎಷ್ಟು ಹೆಣ್ಣುಮಕ್ಕಳು ಹೆರಿಗೆ ಹೊತ್ತಲ್ಲಿ ಪ್ರಾಣ ಬಿಡ್ತಿದ್ರೋ?'....

ಭಗವತಿಕೆರೆಯ ಸರ್ಕಾರಿ ಶಾಲೆಯ ಮಕ್ಕಳಿಗೆ ಶಾಮಣ್ಣನವರು ಪ್ರೀತಿಯ 'ಅಯ್ಯಾ'. ಅವರೆಲ್ಲರಿಗೂ ಶಾಮಣ್ಣನವರೆಂದರೆ ಬಹಳ ಅಚ್ಚುಮೆಚ್ಚು. ಇವರೇ ಒಬ್ಬ ಟೀಚರ್ ಹುಡುಕಿ ಸಂಗೀತ ಕಲಿಸುವುದು, ಯಾವುದೇ ಸಾಂಸ್ಕೃತಿಕ ವ್ಯಕ್ತಿ ಸುತ್ತಾ ಮುತ್ತಲ ಊರಿಗೆ ಬಂದ ಸುಳಿವು ಸಿಕ್ಕರೆ ಸಾಕು ಅವರನ್ನು ಹೋಗಿ ಕರೆತಂದು ತಮ್ಮೂರಿನ ಶಾಲೆಯ ಮಕ್ಕಳಿಗೆ ಅವರ ಪರಿಚಯ ಮಾಡಿಸಿ ಅವರಿಂದ ಭಾಷಣ ಮಾಡಿಸೋದು, ತಾವೇ ಊರಲ್ಲಿದ್ದ ಹೊತ್ತಲ್ಲಿ ಮತ್ತೆ ಮತ್ತೆ ಶಾಲೆಗೆ ಹೋಗಿ ಮಕ್ಕಳಿಗೆ ಹಾಡು ಹೇಳಿಕೊಡುವುದು, ಕವಿತೆ ಓದಿಸೋದು ಮಾಡುತ್ತಿರುತ್ತಾರೆ. ತಮ್ಮೂರಿನ ಶಾಲೆಯ ಬಗ್ಗೆ, ಅಲ್ಲಿನ ಮಕ್ಕಳ ಬಗ್ಗೆ ಬಹಳ ಕಾಳಜಿ ಅವರಿಗೆ. ಆ ಮಕ್ಕಳು ಶಾಮಣ್ಣನವರ ಬಗ್ಗೆ ಅಷ್ಟೇ ಪ್ರೀತಿ ವಿಶ್ವಾಸ ತೋರಿಸುತ್ತಾರೆ. ಊರಮೂಲೆಯಲ್ಲೆಲ್ಲೇ ಶಾಮಣ್ಣ ಕಂಡರೂ ಮಕ್ಕಳು ಬಂದು ಅಯ್ಯ ಅಯ್ಯ ಎಂದು ಮುತ್ತಿಗೆ ಹಾಕುವುದು ನಿತ್ಯ ದೃಶ್ಯ. ಬೊಮ್ಮನಹಳ್ಳಿಯ ಕಿಂದರಿಜೋಗಿಯ ಅಪರಾವತಾರ ಶಾಮಣ್ಣ. ಒಮ್ಮೆ ಆರೇಳು ಹುಡುಗ-ಹುಡುಗಿಯರ ದಂಡು ಶಾಮಣ್ಣ ಅವರನ್ನು ಹುಡುಕಿಕೊಂಡು ಬಂತು. ಹಾಡು ಕಲಿತು, ಚಿತ್ರ ಬರೆದು ಅದನ್ನೆಲ್ಲ ಅಯ್ಯನವರಿಗೆ ತೋರಿಸಲು ತಂದಿದ್ದರು. ಒಬ್ಬಳು ಹುಡುಗಿಯಂತೂ 'ನೋಡಲ್ಲಿ ಬಾನಿನಲಿ ಮೂಡಿಹುದು ಮಳೆಬಿಲ್ಲು' ಕವಿತೆಯನ್ನು ಲಂಬಾಣಿ ಭಾಷೆಗೆ ಅನುವಾದ

ಮಾಡಿದ್ದಳು. ಅದನ್ನು ಹಾಡಿದಳು. ಮಕ್ಕಳ ಜೊತೆ ಬೆರೆತು ಹುರಿದುಂಬಿಸಿ ಅವರಿಗೆ ತಿಂಡಿ ಕೊಟ್ಟು ಹೊಗಳಿ ಕಳಿಸಿಕೊಟ್ಟ ಶಾಮಣ್ಣ "ಅಲ್ಲಾ, ಎಂಥೆಂಥ ಪ್ರತಿಭಾವಂತರಿದ್ದಾರೆ ಹಳ್ಳಿಗಳಲ್ಲಿ... ಆದರೆ ಜಾಗತೀಕರಣದ, ಇಂಗ್ಲಿಷಿನ, ಇಂಟರ್‌ನ್ಯಾಷನಲ್ ಶಾಲೆಗಳ ಸ್ಪರ್ಧೆಯ ಈ ಕಾಲದಲ್ಲಿ ಹಳ್ಳಿಯ ಮಕ್ಕಳ ಇಂಥ ಪ್ರತಿಭೆಗಳು ಯಾರ ಕಣ್ಣಿಗೂ ಕಾಣದೇ ಮುರುಟಿಹೋಗುತ್ತವೆಯಲ್ಲ..". ಎಂದು ತಮ್ಮೊಳಗೆ ಮಾತಾಡಿಕೊಂಡು ನಿಟ್ಟುಸಿರೆಳೆದ ದೃಶ್ಯ ನನ್ನ ಕಣ್ಣಲ್ಲಿ ನಿಶ್ಚಲ ನಿಂತಿದೆ.

ಶಾಮಣ್ಣನವರ ಮನೆಯಲ್ಲಿ ಅಡಿಕೆ ಕೊಯ್ಲು ನಡೀತಿತ್ತು. ಮೀನು ಮಾರಾಟದ ಸಾಬರು ಸೈಕಲ್ಲೇರಿ ಬಂದರು. ಶಾಮಣ್ಣನವರ ಅಂಗಳ ಅವರ ವ್ಯಾಪಾರ ಕೇಂದ್ರ. ಅಡಿಕೆ ಹರವುತಿದ್ದ ಮೂರ್‍ನಾಲ್ಕು ಹೆಂಗೆಳೆಯರು ಕೊಟ್ಟೆ ಹಿಡಿದು ಮೀನು ಕೊಳ್ಳಲು ಬಂದರು. ಒಬ್ಬಳು ಹೆಂಗಸು ಮಾತ್ರ ಮೀನು ಕೊಳ್ಳದೇ ತನ್ನ ಪಾಡಿಗೆ ತಾನು ಕೆಲಸ ಮುಂದುವರೆಸಿದ್ದಳು. ಅಂಗಳದಲ್ಲಿ ನನಗೆ ಕಥೆ ಹೇಳುತಿದ್ದ ಶಾಮಣ್ಣ 'ಇಂದ್ರಂಗೂ ಕರಿ, ಮೀನು ತಗಳ್ಳೋಕೆ ಹೇಳು' ಎಂದರು. ಮೀನು ತಗೊಳ್ತಿದ್ದ ಹೆಣ್ಣುಮಕ್ಕಳು 'ಇಂದ್ರಂಗೆ ಬ್ಯಾಡ್ವಂತೆ' ಎಂದರು. 'ಯಾಕೆ ಬ್ಯಾಡ, ಶ್ರೀ(ಶ್ರೀದೇವಕ್ಕ) ದುಡ್ಡು ಕೊಡ್ತಾಳೆ. ಬಂದು ತಗಳಕ್ಕೆ ಹೇಳು' ಎಂದರು. 'ಹೇಳಿದ್ವಿ ಅಯ್ಯ, ಬ್ಯಾಡ ಅಂದ್ಲು' ಅನ್ನೋದು ಅವರ ಉತ್ತರ. 'ಇಂದ್ರನ ಕರಿ ಇಲ್ಲಿ' ಇವರ ಕರೆ ಹೋಯ್ತು. 'ಮೀನು ತಗೋ, ದುಡ್ಡು ಕೊಡಾಣ' ಇಂದ್ರಮ್ಮನವರಿಗೆ ಶಾಮಣ್ಣನವರ ಒತ್ತಾಯ. 'ಬ್ಯಾಡ ಅಯ್ಯ. ಇವತ್ತು ವಾರ' ಇಂದ್ರಮ್ಮನವರ ಮಾತು. 'ಪಕ್ಕದ ಮನೆಯವರಿಗಿಲ್ಲದ ವಾರ ನಿಮಗೇನು. ಪಕ್ಕದ ಮನೆಯವರು ಮಾಡಿದಾಗ ನಿಮ್ಮ ಮಕ್ಕಳು ಆಸೆ ಕಣ್ಣಿಂದ ಪಕ್ಕದ ಮನೆ ಸಾರಿನ ವಾಸ್ನೆ ಹೀರ್‍ಕೋತಾ ಬಾಯಲ್ಲಿ ನೀರು ತೆಗೀತಾ ಇರ್‍ತಾವೆ... ಮೀನು ತಗೋ. ಮಕ್ಕಳಿಗಾದ್ರು ಮಾಡಿ ಹಾಕು. ನಾಳೆ ಉಳಿದ್ರೆ ನೀವು ಗಂಡ ಹೆಂಡತಿ ಉಣ್ಣಿರಿ. ಪಾಪ ಮಕ್ಕಳು' ಶಾಮಣ್ಣನವರ ಚಿಂತನೆ. 'ವಾರದ ದಿನ ಮನೆಯಲ್ಲಿ ಮಾಡೋ ಹಾಗೆ ಇಲ್ಲ ಅಯ್ಯ' ಇಂದ್ರಮ್ಮನವರ ಕೊನೆ ಮಾತು. ಮೀನಿನ ಸಾಬ್ರು ಕಾಯ್ತಲೇ ಇದ್ದರು ಇನ್ನೊಂದು ಕೆ.ಜಿ ಮೀನು ಮಾರಾಟ ಆಗಬಹುದಂತ. 'ಹಾಗಿದ್ರೆ ಒಂದು ಕೆಲ್ಸ ಮಾಡ್ರಿ. ಚೂರು ಸಾರೋ ಪಲ್ಯಾನೋ ಮಾಡ್ತೀರಲ್ಲ ಇಂದ್ರನ ಮಕ್ಕಳಿಗೆ ಕೊಡ್ರಿ. ಅವಳು ಮಾಡಿದ ದಿನ ನಿಮಗೆ ಕೊಡ್ಲಿ' ಅಯ್ಯನೋರು ಪಕ್ಕದ ಮನೆಯ ಹೆಂಗಸರನ್ನು ಒಪ್ಪಿಸಿದರು. ನಂತರ ನನ್ ಕಡೆ ತಿರುಗಿ 'ಪಕ್ಕದ ಮನೆಯಲ್ಲಿ ಒಳ್ಳೆ ಪದಾರ್ಥ ಮಾಡಿ ನಮ್ಮನೇಲಿ ಬರಿ ಅನ್ನ ಮಜ್ಜಿಗೆ ಊಟ ಮಾಡಬೇಕು ಅಂದ್ರೆ ಪಾಪ ಮಕ್ಕಳು... ಬಾಯಲ್ಲಿ ನೀರು ತೆಗೀತಾ, ಪಕ್ಕದ ಮನೆ ಕಡೆನೇ ನೋಡ್ತಾ ... ಅಲ್ಲೇನ್ರಿ ಅಂದ್ರು. ಆ ಕ್ಷಣಕ್ಕೆ ಶಾಮಣ್ಣನವರ ಎದಿರು

ಇದ್ದ ದೊಡ್ಡ ಸಮಸ್ಯೆ ಅದೇ ಆಗಿತ್ತು. ಅವರದಕ್ಕೆ ಪರಿಹಾರ ಕಂಡುಹಿಡಿದಿದ್ದರು.

'ಏಯ್, ಇವತ್ತು ಸಹಜ ಕೃಷಿಯಲ್ಲಿ ಭತ್ತ ಬೆಳೆದಿರೋರೊಬ್ರ ಮನೆಗೆ ಹೋಗಾನ. ನೀವು ಅವರನ್ನು ನೋಡ್ಲೇಬೇಕು'. ಶಾಮಣ್ಣ ಕರೆದೊಯ್ದರು. ಆ ರೈತರಿಗೆ ಇಬ್ರ ಗಂಡುಮಕ್ಕಳು ... ಕೃಷಿಯಲ್ಲಿ ನಿಜವಾದ ಆಸಕ್ತಿ ಇದ್ದ ತರುಣರು. ರಸಗೊಬ್ಬರ ಹಾಕದೇ, ಕೀಟನಾಶಕವಿಲ್ಲದೇ ಬೆಳೆ ತೆಗಿತೀನಿ ಅನ್ನೋ ಅಪ್ಪನ ಬಗ್ಗೆ ಅವರಿಗೆ ಸಹಜ ಕೋಪ. ಯಾಕೆಂದರೆ ಪಕ್ಕದವರ ಜಮೀನಿನಲ್ಲಿ ಇವರಿಗಿಂತ ಎರಡರಷ್ಟು ಬೆಳೆ ತೆಗಿತಿರಬೇಕಾದ್ರೆ... ಸಹಜ ಕೃಷಿ ತಗಂಡು ಏನು ಮಾಡೋದು ಎನ್ನುವ ಧೋರಣೆ ಅವರದ್ದು. ಆದರೆ ಜೀವಾಮೃತ, ಹಟ್ಟಿ ಗೊಬ್ಬರ ಹಾಕಿಯೇ ಬೆಳೆ ಬೆಳಿತೀನಿ ಅನ್ನೋದು ಅಪ್ಪನ ಹಠ. ಆ ರೈತರಿಗೆ ಇಂಥದಕ್ಕೆಲ್ಲ ಸ್ಫೂರ್ತಿ ಶಾಮಣ್ಣನವರು. ಅವರ ಸಾವಯವ ಕೃಷಿ ಉತ್ಪನ್ನಗಳನ್ನು ಮಾರಿಸಿಕೊಡುವ ಜವಾಬ್ದಾರಿಯೂ ಶಾಮಣ್ಣನವರದೇ... ಆದರೆ ಇದು ಸರಾಗವಲ್ಲ. ಆದ್ದರಿಂದ ಆ ಹುಡುಗರ ಸಿಟ್ಟು ಬಹಳ ಸಹಜ. ಆದರೆ ಶಾಮಣ್ಣನವರ ವ್ಯಕ್ತಿತ್ವ ಹೇಗಿದೆಯೆಂದರೆ ನಿಮಗೆ ಅವರ ಮೇಲೆ ಸಿಟ್ಟು ಬರಬಹುದು, ನೀವು ಅದನ್ನು ವ್ಯಕ್ತಪಡಿಸಲಾರದಷ್ಟು ಅಸಹಾಯಕರಾಗಿಬಿಡುತ್ತೀರಿ. ಆ ದಿನವೂ ಹಾಗೆ ಶಾಮಣ್ಣನವರ ಮೇಲೆ ಆ ಹುಡುಗರಿಗೆ ನಮ್ಮ ಅಪ್ಪ ಇವರ ಮಾತು ಕೇಳ್ತಾರೆ, ಅಂತದ್ರಲ್ಲಿ ಎಲ್ಲರೂ ಹೇಗೆ ಕೃಷಿ ಮಾಡ್ತಾರೋ ಹಾಗೆ ನೀವು ಮಾಡಿ ಎನ್ನೋದನ್ನು ಬಿಟ್ಟು ನಮ್ಮಪ್ಪನ ಬೆನ್ನಿಗೆ ನಿಲ್ಲುವುದೇಕೆ ಎನ್ನುವ ಸಿಟ್ಟು ಇತ್ತು. ಆದರೆ ಶಾಮಣ್ಣ ಅವರ ಮನೆಗೆ ಹೋಗಿ ಅಲ್ಲಿ ಇರುವಷ್ಟು ಹೊತ್ತು ಅವರಿಬ್ರು ಅಣ್ಣ-ತಮ್ಮ ಒಂಚೂರು ತಮ್ಮೊಳಗಿನ ಅಸಹನೆ ತೋರಿಸದೇ ಶಾಮಣ್ಣ ಅವರನ್ನು ಮನೆಗೆ ದೇವರೇ ಬಂದಿದ್ದಾನೇನೋ ಎಂಬಂತೆ ಆದರಿಸಿದರು. ಆದರೆ ನಡು ನಡುವೆ ಅವರ ತಂದೆಯ ಸಹಜ ಕೃಷಿಯ ಮೋಹದ ಬಗ್ಗೆ ಬೇಸರ ವ್ಯಕ್ತವಾಗ್ತಿತ್ತು. ಆದರೆ ಅದಕ್ಕೆ ಕಾರಣಕರ್ತರಾದ ಶಾಮಣ್ಣನವರ ಬಗ್ಗೆ ಆರಾಧನೆ...

ಇಂಥ ದೃಶ್ಯಗಳು ಇನ್ನೆಷ್ಟೋ... ಅವೆಲ್ಲ ನನ್ನನ್ನು ರೂಪಿಸಿವೆ ಎಂದರೆ ಖಂಡಿತಾ ತಪ್ಪಲ್ಲ. ಶ್ರೀದೇವಕ್ಕ ಆಗಾಗ ಹೇಳುವುದಿದೆ... ಜಾತಿ, ಧರ್ಮದ ಹಂಗನ್ನು ಮೀರಿಕೊಂಡವರು, ಆಸ್ತಿ, ದುಡ್ಡು, ಒಡವೆ, ವಸ್ತ್ರದ ವ್ಯಾಮೋಹ ಅಷ್ಟಾಗಿ ಇಲ್ಲದೇ ಇರೋರು, ಚೂರು ಸಾಹಿತ್ಯ, ಸಂಗೀತ, ಹೋರಾಟ ಅಂತೆಲ್ಲ ಆಸಕ್ತಿ ಇರೋರು ಇವರದ್ದೇ ಒಂದು ಬಳಗ. ಅದು ನಮ್ಮ ಬಳಗ ಅಂತ. ಆ ಬಳಗದಲ್ಲಿ ನಾನು ಒಬ್ಬ ಖಾಯಂ ಸದಸ್ಯಳಾಗಿ ಕೊನೆವರೆಗೂ ಬದ್ಧತೆಯಿಂದಿರಲು ನನಗಿಷ್ಟ.

ಶಾಮಣ್ಣನವರ ಶೌಚಾಲಯ ಚಳವಳಿಯನ್ನು ಮೆಚ್ಚುವವರು ಕೂಡಾ ಶಾಮಣ್ಣ ನವರ ಊರಿನವರು ಅದನ್ನು ಬಳಸದೇ ಹಾಗೆ ಬಿಟ್ಟಿದ್ದನ್ನು, ಅದನ್ನು ಕಟ್ಟಿಗೆ

ತುಂಬುವುದಕ್ಕೆ ಬಳಸುತ್ತಿದ್ದದ್ದನ್ನು, ಅಲ್ಲಿ ಕೂತರೆ ನಮಗೆ ಬರುವುದೇ ಇಲ್ಲ ಎಂದು ಹೇಳುತ್ತಿದ್ದ ಹಳ್ಳಿಗರನ್ನು ವ್ಯಂಗ್ಯವಾಡಿ... 'ಏನು ಕೊಟ್ಟರೇನು? ಹಳ್ಳಿಗರಿರೋದೆ ಹಾಗೆ...' ಎನ್ನುವ ಧೋರಣೆಯಲ್ಲಿ ಮಾತಾಡೋದನ್ನು ನಾನು ಕೇಳಿದೀನಿ. ಇದಕ್ಕೆ ಸ್ವಲ್ಪ ಮಟ್ಟಿಗೆ ಶಾಮಣ್ಣನವರೂ ಕಾರಣರು. ಯಾಕೆಂದರೆ ಒಂದು ಅತಿರಂಜಿತ ಸ್ಥಿತಿಯಲ್ಲಿ ಇವರು ಎದಿರಿರುವವರಿಗೆ ಇದನ್ನೆಲ್ಲ ವಿವರಿಸುತ್ತಾರೆ. ಆದರೆ ಶಾಮಣ್ಣನಿಗೆ ಎಲ್ಲ ಬದಲಾವಣೆಗಳಿಗೂ ಸಮಯ ಹಿಡಿಯತ್ತೆ. ಅಷ್ಟು ತಾಳ್ಮೆ ನಮಗೂ ಬೇಕಾಗತ್ತೆ ಎನ್ನುವ ಸ್ಪಷ್ಟತೆ ಮನಸ್ಸೊಳಗೆ ಇದ್ದೇ ಇದೆ. ಅದಕ್ಕೆ ಇಂಥ ಬದಲಾವಣೆಗಳಿಗೆ ಸದಾ ಕಾಲ ಅವರು ತೆರೆದುಕೊಂಡಿರುತ್ತಾರೆ. ಯಾವತ್ತಿಗೂ ಸಿನಿಕರಾಗುವುದಿಲ್ಲ. ನಾನು ನೋಡಿದ ಹಾಗೆ ಮೊದಲಿಗೆ ಶೌಚಾಲಯ ಬಳಸಲು ಅಷ್ಟೆಲ್ಲ ಹಿಂಜರಿದರೂ ನಂತರದಲ್ಲಿ ಅಲ್ಲಿನ ಜನರು ಅದರ ಮಹತ್ವ ಅರಿತುಕೊಂಡಿದ್ದಾರೆ. ಅದರಲ್ಲೂ ಹೆಣ್ಣುಮಕ್ಕಳು ಶೌಚಾಲಯದ ಬಳಕೆ ಅವರ ಘನತೆಯನ್ನು ಉಳಿಸುತ್ತದೆಯಾದ್ದರಿಂದ ಅವರಂತೂ ಈ ವಿಷಯಕ್ಕೆ ಶಾಮಣ್ಣನವರಿಗೆ ಕೃತಜ್ಞರಾಗಿರುವುದನ್ನು ನಾನೇ ಕಣ್ಣಾರೆ ಕಂಡಿದ್ದೇನೆ. ಆದ್ದರಿಂದ ನಾನು ಯಾವುದೇ ಕಾರಣಕ್ಕೂ ಶಾಮಣ್ಣನವರ ಶೌಚಾಲಯ ಚಳವಳಿ ಕುರಿತು ವ್ಯಂಗ್ಯ ಅಥವಾ ಹಾಸ್ಯದಲ್ಲಿ ಮಾತಾಡುವುದಿಲ್ಲ. ಶಾಮಣ್ಣನವರ ಮುಂದಾಲೋಚನೆ ಭಗವತೀಕೆರೆ ಊರಿಗಷ್ಟೇ ಅಲ್ಲ. ಇಡೀ ರಾಜ್ಯದಲ್ಲೆ ಶೌಚಾಲಯ ಚಳವಳಿ ರೂಪುಗೊಳ್ಳಲು ಕಾರಣವಾಯಿತೆಂಬುದನ್ನು ನಾವು ಮರೆಯಬಾರದು. ಕರ್ನಾಟಕದ ದೊಡ್ಡ ಸ್ತ್ರೀವಾದಿ ಯಾರು ಎಂದು ಕೇಳಿದರೆ ನಾನು ಖಂಡಿತಾ ಶಾಮಣ್ಣನವರ ಹೆಸರನ್ನು ಉಲ್ಲೇಖಿಸಿಯೇ ಉಲ್ಲೇಖಿಸುತ್ತೇನೆ. ಶಾಮಣ್ಣನವರ ಶೌಚಾಲಯ ಚಳವಳಿ ನಾಡಿನ ಮಹಿಳೆಯರ ಘನತೆಯನ್ನು ವಾಸ್ತವದಲ್ಲಿ ಕಾದಿದೆ. ಹಳ್ಳಿಗ ಶಾಮಣ್ಣ ಮಾಡಿದ ಈ ಕ್ರಾಂತಿ ಯಾವ ಅಕ್ಯಾಡೆಮಿಶಿಯನ್ ಕಟ್ಟಿದ ಸ್ತ್ರೀವಾದದ ಸಿದ್ಧಾಂತಕ್ಕಿಂತ ಖಂಡಿತಾ ಸಣ್ಣದಲ್ಲ.

ಕಡಿದಾಳ್ ಶಾಮಣ್ಣನವರ ಭಗವತಿಕೆರೆಯಲ್ಲಿ ಕಳೆದ ಒಂದು ದಿನ

ಎಸ್.ಗಂಗಾಧರಯ್ಯ

ಕೆಲವು ದಿನಗಳ ಹಿಂದೆ ಕಡಿದಾಳ್ ಶಾಮಣ್ಣನವರ ಭಗವತಿಕೆರೆಗೆ ಹೋಗಿದ್ದೆ. ರೈತ ಚಳುವಳಿ ಕಾವನ್ನು ಕಂಡವರಿಗೆ, ತೇಜಸ್ವಿಯವರ ಬರಹಗಳನ್ನು ಓದಿ ದವರಿಗೆ ಕಡಿದಾಳ್ ಶಾಮಣ್ಣನವರ ಹೆಸರು ಗೊತ್ತಿರದೇ ಇರದು. ಒಂದು ಪಕ್ಷ ಹೀಗೆ ಗೊತ್ತಿರದೇ 'ಇದ್ದರೂ, ಅಪ್ಪಟ ಬಿಳಿ ತಲೆಕೂದಲು, ಬಿಳಿ ಗಡ್ಡದ, ದೇಸೀ ಉಡುಪಿನ ಜೊತೆಗೆ ಹೆಗಲ ಮೇಲೊಂದು ಹಸಿರು ಟವೆಲ್ಲಿನ, ನಗು ಮುಖದ, ಮೆಲು ಮಾತಿನ ಶಾಮಣ್ಣನವರನ್ನು ಕಂಡರೆ ಯಾರಿಗೇ ಆಗಲಿ ವಿಶೇಷ ಅನಿಸದೇ ಇರದು.

ಹುಟ್ಟಿದ್ದು ಕಡಿದಾಳಿನಲ್ಲಿಯಾದರೂ ಶಾಮಣ್ಣನವರು ಸದ್ಯಕ್ಕೆ ಬದುಕಿರುವುದು ಭದ್ರಾವತಿಯ ಹತ್ತಿರದ ಭಗವತಿಕೆರೆಯಲ್ಲಿ. ಮಲೆನಾಡಿನ ಸಕಲ ಗುಣಗಳುಳ್ಳ ಇಲ್ಲಿ ಶಾಮಣ್ಣನವರು ಒಂದಷ್ಟು ತೋಟವನ್ನು ಮಾಡಿಕೊಂಡು, ಅದರೊಳಗೆ ಹಕ್ಕಿಯ ಗೂಡಿನಂಥ ಚಂದದ ಮನೆಯನ್ನು ಕಟ್ಟಿಕೊಂಡು, ಅಪ್ಪಟ ರೈತಾಪಿ ಬಾಳನ್ನು ಬಾಳುತ್ತಿದ್ದಾರೆ. ಹತ್ತು ಹಲವು ಬಗೆಯ

ಹಣ್ಣಿನ ಗಿಡಗಳಿಂದಲೂ, ಥರಾವರಿ ಮರಗಿಡಗಳಿಂದಲೂ ಒಂದು ಪುಟ್ಟ ಕಾಡಿನಂತೆ ಕಾಣುವ ಈ ತೋಟವನ್ನು ಹೊಕ್ಕ ಕೂಡಲೆ ಥರಾವರಿ ಹಕ್ಕಿಗಳ ಉಲಿಯುವ ಸದ್ದು ಕಿವಿಗಳಿಗೆ ಬೀಳ ತೊಡಗಿತು. ಮನೆಯಿಂದ ಕೊಂಚ ದೂರದಲ್ಲಿದ್ದ ಬಿದಿರು ಮೆಳೆಯ ಮೇಲೆ ಬೆಳ್ಳಂಬೆಳ್ಳನೆಯ ಕೊಕ್ಕರೆಗಳು ಕೂತು ಬೆಳಗಿನ ಬಿಸಿಲಿನಲ್ಲಿ ಮತ್ತೂ ಹೊಳೆಯುತ್ತಿದ್ದವು. ಇವುಗಳ ಜೊತೆಗೆ, ಅಲ್ಲಿನ ಹಸಿರು, ಆ ಹಸಿರನ್ನು ಸವರಿಕೊಂಡು ಸರಿದಾಡುವ ತಂಗಾಳಿಯಿಂದಾಗಿ ಇಡೀ ವಾತಾವರಣವೇ ಆತ್ಮೀಯ ಭಾವದ ಬಂಧವೊಂದರಲ್ಲಿ ಪುಳಕಿತಗೊಳ್ಳುತ್ತಿರುವಂಥ ಅನುಭವವಾಗ ತೊಡಗಿತು. ಅದೇ ರೀತಿ ಶಾಮಣ್ಣನವರ ಪ್ರತಿಭೆಯ ವಿವಿಧ ಮುಖಗಳ ಪರಿಚಯವೂ ಆಗ ತೊಡಗಿತು. ಅವತ್ತು ಬೆಳಗಿನ ಅಷ್ಟು ಹೊತ್ತಿಗೇ ನಾನು ಮತ್ತು ಗೆಳೆಯ ಶ್ರೀಕಾಂತ್ ತಿಪಟೂರಿನಿಂದ ಹೊರಟು, ಭದ್ರಾವತಿಯಲ್ಲಿ ನಮ್ಮನ್ನು ಕೂಡಿಕೊಂಡ ಗೆಳೆಯರಾದ ಬಿ.ಚಂದ್ರೇಗೌಡ ಮತ್ತು ಬಿ.ಎಲ್.ರಾಜುವಿನೊಂದಿಗೆ ಭಗವತಿಕೆರೆ ತಲುಪಿದಾಗ ಗಂಟೆ ಹನ್ನೊಂದಾಗಿತ್ತು. ನಾವು ಬೆಳಿಗ್ಗೆಗೇ ಬರುತ್ತೇವೆಂದು ಹೇಳಿದ್ದರಿಂದ ಆ ಇಡೀ ದಿನ ಪುರುಸೊತ್ತು ಮಾಡಿಕೊಂಡು ಶಾಮಣ್ಣನವರು ನಮಗಾಗೇ ಕಾಯುತ್ತಿದ್ದರು. ನಮ್ಮೊಂದಿಗೆ ಮನೆಯ ವೆರಾಂಡದಲ್ಲಿ ಕೂತು ತಮ್ಮ ಎದುರಿಗೆ ಹಾರಾಡುವ, ಕೂಗುವ ಹಕ್ಕಿಗಳ ವಿವರಗಳನ್ನು ಹೇಳುತ್ತಾ ಹೋದ ಶಾಮಣ್ಣನವರು, ತಾವು ಈ ಹಿಂದೆ ಮಾಡಿದ ಹಕ್ಕಿಗಳ ಫೋಟೋಗಳನ್ನು ತೋರಿಸತೊಡಗಿದರು. ಕೊಕ್ಕರೆಗಳು, ಮರಕುಟುಕ, ಕಿಂಗ್‌ಫಿಶರ್‌ಗಳಿಂದ ಹಿಡಿದು ತಮ್ಮ ತೋಟದಲ್ಲಿ ಗೂಡು ಕಟ್ಟಿಕೊಂಡಿರುವ, ಆಗಾಗ ತಮ್ಮ ತೋಟಕ್ಕೆ ಭೇಟಿ ಕೊಡುವ ಥರಾವರಿ ಹಕ್ಕಿಗಳ ಬಗ್ಗೆ ವಿವರಿಸುತ್ತಾ ಹೋದರು.

ಶಾಮಣ್ಣನವರ ಮನೆಯ ಒಳಗೆ ಒಂದು ಸುತ್ತು ಸುತ್ತುವ ಹೊತ್ತಲ್ಲಿ ಅಲ್ಲಿ ಕೊಳಲು, ಹಾರ್ಮೋನಿಯಂ, ಸರೋದ್ ಮುಂತಾದ ಸಂಗೀತದ ಸಾಧನಗಳು ಕಣ್ಣಿಗೆ ಬಿದ್ದವು. ತೇಜಸ್ವಿಯವರು ಶಾಮಣ್ಣನವರು ಮೌತ್ ಆರ್ಗನ್ ನುಡಿಸುವುದರ ಬಗ್ಗೆ ಬರೆದುಕೊಂಡಿದ್ದರಿಂದ, ಅದನ್ನು ನುಡಿಸುವಂತೆ ಕೇಳಿಕೊಂಡೆವು. 'ಆಗ ನನಗೆ ಸ್ವಂತ ಹಲ್ಲುಗಳಿದ್ದವು, ಈಗ ನೋಡಿದ್ರೆ ಕಟ್ಟಿಸಿಕೊಂಡ ಹಲ್ಲುಗಳು, ಹಾಗಾಗಿ ಮೌತ್ ಆರ್ಗನ್ ನುಡಿಸೋದು ಕಷ್ಟ' ಅಂತ ನಗತೊಡಗಿದ ಶಾಮಣ್ಣನವರು ನಮ್ಮ ಈ ಮಾತುಗಳಿಂದ ಉತ್ತೇಜನಗೊಂಡವರಂತೆ, ಒಳಗಿದ್ದ ಕೊಳಲನ್ನು ಹುಡುಕಿ ತಂದು ನುಡಿಸ ಹತ್ತಿದರು. ನಾವೆಲ್ಲಾ ಇದನ್ನು ಯಾವಾಗ ಆಸ್ವಾದಿಸತೊಡಗಿದೆವೋ ಶಾಮಣ್ಣನವರ ಆಸಕ್ತಿ ಕೊಳಲಿನಿಂದ ಹಾರ್ಮೋನಿಯಂನತ್ತ ತಿರುಗಿತು. ಈ ಹಾರ್ಮೋನಿಯಂನ ವಿಶೇಷ ಅಂದರೆ, ಶಾಮಣ್ಣನವರು ಇದನ್ನು ಬಾಂಬೆಯ ಯಾವುದೋ ಸೆಕೆಂಡ್ ಹ್ಯಾಂಡ್ ಅಂಗಡಿಯಲ್ಲಿ ಖರೀದಿಸಿದ್ದು. ಇದಕ್ಕಿಂತ ಮುಖ್ಯವಾಗಿ ಇದು ಆಗಿನ ಸುಪ್ರಸಿದ್ಧ ಸಂಗೀತಗಾರ ಶೌಕತ್ ಆಲಿಖಾನ್ ಬಳಸುತ್ತಿದ್ದ ಹಾರ್ಮೋನಿಯಂ ಆಗಿತ್ತು. ಹಾರ್ಮೋನಿಯಂ ನುಡಿಸುತ್ತಾ ಒಂದೆರಡು ಹಾಡುಗಳನ್ನು

ಗುನುಗಿದ ಶಾಮಣ್ಣನವರನ್ನು ನಾವು ಅಷ್ಟಕ್ಕೇ ಬಿಡಲು ತಯಾರಿರಲಿಲ್ಲ. ಏಕೆಂದರೆ ಈ ಮುಂಚೆಯೇ ಮನೆಯ ರೂಮೊಂದರಲ್ಲಿದ್ದ ಸರೋದನ್ನು ನಾವು ನೋಡಿ ಬಿಟ್ಟಿದ್ದೆವು. ಸರಿ, ಅದೇ ಗುಂಗಿನಲ್ಲಿದ್ದ ಶಾಮಣ್ಣವರು ಇದಕ್ಕಾಗಿ ನಮ್ಮಿಂದ ಹೆಚ್ಚು ಹೇಳಿಸಿಕೊಳ್ಳದೆ ರೂಮಿನಲ್ಲಿದ್ದ ಸರೋದನ್ನು ಕೈಗೆತ್ತಿಕೊಂಡು ಕುಳಿತೇ ಬಿಟ್ಟರು. ಅದರಿಂದ ಅವರು ನುಡಿಸಿದ ಭೈರವಿ ರಾಗ, ಇದನ್ನು ಬರೆಯುತ್ತಿರುವ ಈ ಹೊತ್ತಲ್ಲೂ ನನ್ನ ಕಿವಿಗಳಲ್ಲಿ ರಿಂಗಣಿಸುತ್ತಿದೆ. ಅದರ ಮೇಲಿದ್ದ ಅವರ ಹಿಡಿತ ನಮ್ಮನ್ನು ಚಕಿತಗೊಳಿಸಿತ್ತು. ಹೀಗೆ ನಮ್ಮ ಸಂಗೀತ ಸುಧೆಯ ವಿವಿಧ ಮಜಲುಗಳು ಮುಗಿಯುವ ಹೊತ್ತಿಗೆ ಶ್ರೀದೇವಿ ಅಕ್ಕ ಅವರ ಊಟ ರೆಡಿಯಾಗಿತ್ತು. ಊಟ ಮಾಡಿ ಮತ್ತೆ ವೆರಾಂಡದಲ್ಲಿ ಕುಳಿತಾಗ ಶಾಮಣ್ಣನವರು ತುಂಬಾ ಲಹರಿಯಲ್ಲಿ ಇದ್ದುದರಿಂದ ತಮ್ಮ ಮತ್ತು ತೇಜಸ್ವಿಯವರ ನಡುವೆ ನಡೆದ ಅನೇಕ ಸಂಗತಿಗಳನ್ನು ನೆನಪಿಸಿಕೊಳ್ಳ ತೊಡಗಿದರು. ಅವುಗಳಲ್ಲಿ ಒಂದೆರಡನ್ನು ಮಾತ್ರ ನಾನಿಲ್ಲಿ ದಾಖಲಿಸುತ್ತೇನೆ.

ಕುವೆಂಪುರವರ ಫೋಟೋ ತೆಗೆದದ್ದು

ಆಗ ಕುವೆಂಪು ಮೈಸೂರು ವಿಶ್ವವಿದ್ಯಾನಿಲಯದ ವೈಸ್ ಚಾನ್ಸಲರ್ ಆಗಿದ್ದರಂತೆ. ಪತ್ರಿಕೆಯವರು ಅವರು ಅಲ್ಲಿ ಇಲ್ಲಿ ಭಾಗವಹಿಸಿದ ಸಮಾರಂಭಗಳ ವರದಿಯನ್ನು ಮಾಡುವಾಗ ಒಂದೇ ಥರದ, ಅಲ್ಲದೇ ಅಷ್ಟು ಚಂದವಿರದ ಫೋಟೋವನ್ನೇ ಹಾಕುತ್ತಿದ್ದರಂತೆ. ಇದನ್ನು ಕಂಡ ತೇಜಸ್ವಿಯವರು ಒಂದು ದಿನ, 'ಲೋ ಶಾಮಣ್ಣ ಈ ಪತ್ರಿಕೆಯವರು ಯಾವಾಗಲೂ ಅಣ್ಣನ ಇಂಥ ಕರಾಬು ಫೋಟೋನೇ ಹಾಕ್ತಾರೆ, ಏನಾದರೂ ಮಾಡಿ ನಾವೇ ಅಣ್ಣನ ಒಳ್ಳೆಯ ಫೋಟೋಗಳನ್ನು ತೆಗೆದು ಪತ್ರಿಕೆಯವರಿಗೆಲ್ಲಾ ಕೊಟ್ಟು ಬಿಡೋಣ,' ಅಂದರಂತೆ. ಇದಕ್ಕಾಗಿ ಇವರು ಮಾಡಬೇಕಿದ್ದ ಮೊಟ್ಟ ಮೊದಲ ಕೆಲಸ ಅಂದರೆ, ತಿಂಗಳಿಗೊಮ್ಮೆ ಒಂದು ದಿನವೂ ಹಿಂದು ಮುಂದಾಗದಂತೆ ಕರಾರುವಕ್ಕಾಗಿ ಕುವೆಂಪುರವರ ಕ್ಷೌರ ಮಾಡಲು ಬರುತ್ತಿದ್ದ ಕ್ಷೌರಿಕನನ್ನು ಒಂದೆರಡು ದಿನ ತಡವಾಗಿ ಬರುವಂತೆ ಮಾಡುವುದಾಗಿತ್ತು. ಯಾಕೆಂದರೆ ಅವನು ಸುತ್ತಲೂ ಇಲಿ ತಿಂದಂತೆ ತುಂಬಾ ಹತ್ತನಾಗಿ ಕ್ಷೌರ ಮಾಡಿ ಬಿಡುತ್ತಿದ್ದುದರಿಂದ, ಕುವೆಂಪುರವರ ಚಂದದ ಗುಂಗುರು ಸುರುಳಿಗಳು ಇದಕ್ಕೆ ಆಹುತಿಯಾಗಿ ಬಿಡುತ್ತಿದ್ದವು. ಅಂತೂ ಹೇಗೋ ಮಾಡಿ ಕ್ಷೌರಿಕನನ್ನು ತಡವಾಗಿ ಬರಲು ಒಪ್ಪಿಸಿ, ಈ ಬಗ್ಗೆ ಕುವೆಂಪುರವರನ್ನೂ ಒಪ್ಪಿಸಿ, ಒಂದು ದಿನ ಇವರು ಕುವೆಂಪುರವರ ಮನೆ 'ಉದಯರವಿ'ಯಲ್ಲಿ ತಮ್ಮ ಅಮೋಘ ಫೋಟೋ ಸೆಷನ್ ಇಟ್ಟುಕೊಂಡಿದ್ದಾರೆ. ಕೂತಲ್ಲೇ ಕೂರಿಸಿ ವಿವಿಧ ಕೋನಗಳಲ್ಲಿ ಫೋಟೋ ಕ್ಲಿಕ್ ಮಾಡುವುದನ್ನು ಕುವೆಂಪು ತುಂಬಾ ಸಾವಧಾನದಿಂದಲೂ, ಖುಷಿಯಿಂದಲೂ ಅನುಭವಿಸಿದ್ದಾರೆ.

ಸರಿ, ಫೋಟೋ ಸೆಷನ್ ಮುಗಿಯಿತು. ಆಗೆಲ್ಲಾ ಈಗಿನಂತೆ ಡಿಜಿಟಲ್ ಕ್ಯಾಮಾರಾಗಳ ಕಲ್ಪನೆಯೇ ಇರದಿದ್ದುದರಿಂದ, ಅದಕ್ಕಾಗಿ ಫಿಲ್ಮ್‌ಗಳನ್ನೇ ಬಳಸಬೇಕಾಗುತ್ತಿದ್ದುದರಿಂದ, ಆ ಕಾಲಕ್ಕೆ ಫೋಟೋಗ್ರಫಿ ಅನ್ನುವುದು ತುಂಬಾ ದುಬಾರಿಯ ಮತ್ತು ತುಂಬಾ ತ್ರಾಸಕರ ಹವ್ಯಾಸವಾಗಿತ್ತು.

ಫೋಟೋ ತೆಗೆದು ಮುಗಿದ ಮೇಲೆ ಅದನ್ನು ಡೆವೆಲಪ್ ಮಾಡುವ ಸಲುವಾಗಿ ತಮ್ಮ ಮನೆಯಲ್ಲಿಯೇ ಡಾರ್ಕ್ ರೂಮ್ ಮಾಡಿಕೊಂಡ ತೇಜಸ್ವಿಯವರು, ಅದೊಂದು ದಿನ ರಾತ್ರಿ ಮನೆಯವರೆಲ್ಲಾ ಊಟ ಮಾಡಿ ಮಲಗಿದ ಮೇಲೆ ಡಾರ್ಕ್ ರೂಂಗೆ ಹೋಗುವ ಮುನ್ನ ತೇಜಸ್ವಿಯವರು ಶಾಮಣ್ಣನವರಿಗೆ ಹೊರಗಡೆ ಕುಳಿತು ಕರಾರುವಕ್ಕಾಗಿ ಟೈಂನ್ನು ಸೂಚಿಸುವ ಕೆಲಸಕ್ಕೆ ಹಚ್ಚಿದ್ದಾರೆ. ಯಾಕೆಂದರೆ ಟೈಂ ಒಂಚೂರು ವ್ಯತ್ಯಾಸವಾದರೂ ಫೋಟೋಗಳು ಅಂಡರ್ ಡೆವೆಲಪ್ ಅಥವಾ ಓವರ್ ಡೆವಲಪ್ ಆಗಿ ಕೆಟ್ಟು ಹೋಗುವ ಸಾಧ್ಯತೆಗಳಿದ್ದುದರಿಂದ ತೇಜಸ್ವಿಯವರು ಇಂಥದ್ದೊಂದು ಕೆಲಸವನ್ನು ಶಾಮಣ್ಣನವರಿಗೆ ವಹಿಸಿದ್ದರಂತೆ.

ಇದಕ್ಕಾಗಿ ಆ ರಾತ್ರಿ ಶಾಮಣ್ಣನವರು ಎಲ್ಲರು ಊಟ ಮಾಡಿ ಮಲಗಿದ ಮೇಲೆ ಉದಯರವಿಯ ಅಂಗಳದಲ್ಲಿದ್ದ ಮರದ ಬುಡದಲ್ಲಿ ಕೈಯ್ಯಲ್ಲೊಂದು ಬ್ಯಾಟರಿಯನ್ನು ಹಿಡಿದು, ಬ್ಯಾಟರಿಯ ಬೆಳಕಿನಿಂದ ಮನೆಯೊಳಗಿನ ಗೋಡೆಯಲ್ಲಿದ್ದ ಗಡಿಯಾರ ಕಾಣುವಂಥ ಜಾಗದಲ್ಲಿ ಕುಳಿತಿದ್ದಾರೆ. ತೇಜಸ್ವಿಯವರು ಹೇಳಿದಂತೆ ಟೈಂ ಹೆಚ್ಚೂ ಕಡಿಮೆ ಆಗದಂತೆ, ಶಾಮಣ್ಣನವರು ಮರದ ಬುಡದಲ್ಲಿ ಕುಳಿತು ಆಗಾಗ ಗೋಡೆ ಗಡಿಯಾರಕ್ಕೆ ಬ್ಯಾಟರಿಯನ್ನು ಬಿಡುತ್ತಿದ್ದರಂತೆ. ಇಲ್ಲಿನ ಸ್ವಾರಸ್ಯಕರ ಸಂಗತಿ ಅಂದರೆ, ಆ ಗೋಡೆ ಗಡಿಯಾರದ ಮೇಲೆ ಬೀಳುತ್ತಿದ್ದ ಬೆಳಕು ಸೀದಾ ಕುವೆಂಪುರವರು ಮಲಗುತ್ತಿದ್ದ ರೂಮಿನಲ್ಲಿ ಪ್ರತಿಫಲಿಸುತ್ತಿತ್ತಂತೆ. ಶ್ರದ್ಧೆಯಿಂದ ಮಾಡುತ್ತಿರುವ ಹೊತ್ತಲ್ಲಿ ನಿಜಕ್ಕೂ ಗಾಬರಿಗೊಳಗಾಗಿದ್ದವರು ಕುವೆಂಪುರವರು. ಯಾಕೆಂದರೆ, ಒಂದೆರಡು ಸಲ ಹೀಗೆ ತಮ್ಮ ರೂಮಿನಲ್ಲಿ ಪ್ರತಿಫಲಿಸಿದ ಬೆಳಕು ಯಾವುದೋ ದಾರಿಯಲ್ಲಿ ಹೋಗುವ ವಾಹನದ್ದಿರಬೇಕು ಅಂದುಕೊಂಡ ಕುವೆಂಪುರವರಿಗೆ ಆ ಬೆಳಕು ಪದೇ ಪದೇ ಬೀಳತೊಡಗಿದಾಗ, ಇದು ಯಾವನೋ ಕಳ್ಳನದೇ ಕರಾಮತ್ತು ಇರಬೇಕು ಅನಿಸಿ, ಹಾಸಿಗೆಯಿಂದ ಎದ್ದವರೇ ಬಾಗಿಲನ್ನು ತೆಗೆದುಕೊಂಡು ಆಚೆ ಬಂದು, ಬ್ಯಾಟರಿಯ ಬೆಳಕು ಬರುತ್ತಿದ್ದ ಜಾಗದತ್ತ ದಿಟ್ಟಿಸುತ್ತಾ ಯಾರಲ್ಲಿ ಅಂತ ಕೂಗಿದ್ದಾರೆ. ಹೀಗೆ ಇದ್ದಕ್ಕಿದ್ದಂತೆ ಆಚೆ ಎದ್ದು ಬಂದ ಕುವೆಂಪುರವರನ್ನು ಕಂಡ ಶಾಮಣ್ಣನವರಿಗೆ ಭೂಮಿಗೆ ಇಳಿದು ಹೋದಂಥ ಅನುಭವವಾಗಿ ಬಿಟ್ಟಿತ್ತಂತೆ. ಕೂತಲ್ಲಿಂದಲೇ ಧೈರ್ಯ ಮಾಡಿ ನಾನು ಶಾಮಣ್ಣ ಅಂದರಂತೆ.'ಲೋ ಶಾಮಯ್ಯ ಅಲ್ಲೇನು ಮಾಡುತ್ತಿದ್ದೀಯೋ ಇಷ್ಟು ಹೊತ್ನಾಗೆ, ಅದೂ ಮನೆಯೊಳಕ್ಕೆಲ್ಲಾ ಬ್ಯಾಟರಿ

ಬಿಟ್ಟುಕೊಂಡು,'ಅಂದರಂತೆ ಕುವೆಂಪು. ಆಗ ಶಾಮಣ್ಣನವರು ಕೂತಲ್ಲಿಂದ ಎದ್ದು ಬಂದು ವಿಷಯವನ್ನೆಲ್ಲಾ ಹೇಳಿದ್ದಾರೆ.'ಇದನ್ನ ಹೇಳಿ ಮಾಡೊದಲ್ವೇನ್ರೋ ನಾನು ಯಾರೋ ಕಳ್ಳರಿರಬೇಕು ಅಂತ ಗಾಬರಿಯಾಗಿದ್ದೆ,'ಅಂದು ಒಳಗೆ ಹೋದರಂತೆ. ಇಷ್ಟೆಲ್ಲಾ ಆಗುವ ಹೊತ್ತಿಗೆ ಶಾಮಣ್ಣನವರಿಗೆ ತೇಜಸ್ವಿಯವರಿಗೆ ಸೂಚನೆ ನೀಡಬೇಕಾಗಿದ್ದುದು ಮರೆತು ಹೋಗಿ ಖುದ್ದು ತೇಜಸ್ವಿಯವರೇ ಆಚೆ ಬಂದು,'ಲೋ ಶಾಮಣ್ಣ ನಿನಗೇನಾಗಿತ್ತೊ ದಾಡಿ ಟೈಂ ಹೇಳಾಕೆ, ನೋಡು ಫೋಟೋಗಳೆಲ್ಲಾ ಕಪ್ಪಟ್ಟೆ ಕರ್ರಾಗಿ ಹೋಗಿದಾವೆ,'ಅಂತ ಸಿಡುಕತೊಡಗಿದ್ದಾರೆ. ಆಗ ಶಾಮಣ್ಣನವರು ನಡೆದ ಸಂಗತಿಯನ್ನು ವಿವರಿಸಿದ್ದಾರೆ. 'ಏನಣ್ಣ, ನೀನು ಇಷ್ಟಕ್ಕೆಲ್ಲಾ ಗಾಬರಿಪಟ್ಟು ಕೊಂಡರೆ ಹೆಂಗೆ, ಈಗ ನೋಡಿ ಎಲ್ಲಾ ಹಾಳಾಗಿ ಹೋಯ್ತು,'ಅಂತ ಕುವೆಂಪು ರವರಿಗೂ ದಬಾಯಿಸಿದ್ದಾರೆ. ಇದರಿಂದ ಆದ ಮುಂದಿನ ಪರಿಣಾಮ ಏನೆಂದರೆ, ಕ್ಷೌರಿಕನನ್ನು ಮತ್ತೊಂದೆರಡು ದಿನ ತಡವಾಗಿ ಬರಲು ಹೇಳಿ, ಮತ್ತೊಂದು ಫೋಟೋ ಸೆಷನ್ ಇಟ್ಟುಕೊಂಡಿದ್ದಾರೆ. ಆದರೆ ಈ ಸಾರ್ತಿ ಮಾತ್ರ ಫಿಲ್ಮ್ ಡೆವೆಲಪ್ ಮಾಡೋದನ್ನ ಹೇಳಿಯೇ ಶುರು ಮಾಡಿದ್ದಾರೆ.' ಆಗ ನಾವು ತೆಗೆದ ಫೊಟೋಗಳೆ ಕುವೆಂಪುರವರ ಅದ್ಭುತ ಫೊಟೋಗಳು, ನಗು ಮೊಗದ, ಅರೆ ಮುರಿದ ಹಲ್ಲಿನ, ಗುಂಗುರು ಕೂದಲಿನ, ಒಂದು ಸುಂದರ ಫೊಟೋ ಇದೆಯಲ್ಲಾ ಅದನ್ನ ಆವಾಗಲೇ ತೆಗೆದದ್ದು' ಅಂತ ನೆನಪಿಸಿಕೊಳ್ಳುತ್ತಾರೆ.

ಹಳ್ಳಿಯಲ್ಲಿ ಟಾಯ್ಲೆಟ್‌ಗಳನ್ನು ಕಟ್ಟಿಸಿದ್ದು

ಹಳ್ಳಿಗಳಲ್ಲಿ ಈಗಲೂ ರಸ್ತೆ ಬದಿಯಲ್ಲಿ ಕಕ್ಕಸ್ಸಿಗೆಂದು ಕೂರುವವರ ಸಂಖ್ಯೆ ಇದ್ದೇ ಇದೆ. ಕೆಲವರ ಮನೆಗಳಲ್ಲಷ್ಟೇ ಕಕ್ಕಸ್ಸು ರೂಮುಗಳಿದ್ದರೆ, ಉಳಿದವರು ಬಯಲನ್ನೇ ಅವಲಂಭಿಸಿದ್ದಾರೆ. ಇದರಿಂದ ಉಂಟಾಗಬಹುದಾದ ಅನಾಹುತಗಳ ಎಚ್ಚರವಿದ್ದರೂ, ಇದು ನಡೆಯುತ್ತಲೇ ಇದೆ. ಶಾಮಣ್ಣನವರು ಊರು ಹಿಂದೆ ಇರಲಿ ಈಗಲೂ ಪಕ್ಕಾ ಹಳ್ಳಿ. ಇಂಥ ಅವಾಂತರದ ಜೊತೆಗೆ ಶಾಮಣ್ಣನವರು ಇವರಿಗೆಲ್ಲಾ ಕಕ್ಕಸ್ಸು ಕಟ್ಟಿಸುವ ಬಗ್ಗೆ ಯೋಚಿಸಲೂ ಮತ್ತೊಂದು ಕಾರಣವಿತ್ತಂತೆ. ಅದೇನೆಂದರೆ, ರಸ್ತೆಯಲ್ಲಿ ಮಾಡುತ್ತಿದ್ದ ಕಕ್ಕಸ್ಸು ಇವರ ಸ್ಕೂಟರ್, ಕಾರಿನ ಚಕ್ರಗಳಿಗೆ ಸಿಕ್ಕಿ, ಅದು ಹಾಗೇ ಮನೆಯವರೆಗೂ ಬಂದು, ಗಾಡಿ ನಿಲ್ಲಿಸಿದರೇ ಸಾಕು ದುರ್ನಾತ ಹೊಡೆಯ ತೊಡಗುತ್ತಿತ್ತಂತೆ. ಇದಕ್ಕೆಲ್ಲಾ ಏನಾದರೂ ಮಾಡಲೇ ಬೇಕು ಅಂತ ಜನರಿಗೆ ಹೇಳಿ ನೋಡಿದ್ದಾರೆ, ಅವರು ಅದಕ್ಕೆ ಸೊಪ್ಪು ಹಾಕಿಲ್ಲ. ಕೆಲವರನ್ನು ಗದರಿಸಿಯೂ ನೋಡಿದ್ದಾರೆ. ಆಗಲೂ ಯಾರೂ ತಲೆ ಕೆಡಿಸಿಕೊಂಡಿಲ್ಲ. ಹಾಗಾಗಿ, ಹಳ್ಳಿಗಳಲ್ಲಿ ಕಕ್ಕಸ್ಸುಗಳನ್ನು ಕಟ್ಟಿಸಬೇಕಾದ ಅನಿವಾರ್ಯತೆಯ ಬಗ್ಗೆ ಅಲ್ಲಿ ಇಲ್ಲಿ ಮಾತನಾಡಿದ್ದಾರೆ. ಒಂದು ಸಲ ಆಗಿನ ಮುಖ್ಯಮಂತ್ರಿಯೂ, ತಮ್ಮ ಆಪ್ತ ಗೆಳೆಯರೂ ಆಗಿದ್ದ

ಜೆ.ಹೆಚ್.ಪಟೇಲರ ಹತ್ತಿರವೂ ಈ ಬಗ್ಗೆ ಪ್ರಸ್ತಾಪಿಸಿದ್ದಾರೆ. ಅವರಿಗೂ ಶಾಮಣ್ಣನವರ ಕಳಕಳಿ ಅರ್ಥವಾಗಿ ಅದಕ್ಕಾಗಿ ಒಂದಷ್ಟು ಹಣವನ್ನು ಸರ್ಕಾರ ಹಾಕಿದರೆ, ಮತ್ತೊಂದಷ್ಟನ್ನು ಬ್ಯಾಂಕುಗಳು ಸಾಲದ ರೂಪದಲ್ಲಿನ ಜಂಟಿ ಯೋಜನೆಯೊಂದನ್ನು ರೂಪಿಸುವ ಸಲುವಾಗಿ ಶಾಮಣ್ಣನವರನ್ನು ಒಳಗೊಂಡಂತೆ ಬ್ಯಾಂಕಿನ ಉನ್ನತ ಅಧಿಕಾರಿಗಳ ಸಭೆ ಕರೆದಿದ್ದಾರೆ. ಬ್ಯಾಂಕಿನವರು ಸಾಲ ಕೊಡುವುದು ಅಂದರೆ, ಅವರು ಮರು ಪಾವತಿಯ ಬಗ್ಗೆ ಕೇಳಿಯೇ ಕೇಳುತ್ತಾರೆ ಅನ್ನುವುದರ ಅರಿವಿದ್ದ ಶಾಮಣ್ಣನವರು, ಸಭೆಗೂ ಕೆಲದಿನ ಮುಂಚೆ, ತಮ್ಮದೇ ಕಕ್ಕಸ್ಸು ಗುಂಡಿಯಿಂದ ಒಂಚುರು ಶ್ಯಾಂಪಲ್ಲನ್ನು ತೆಗೆದುಕೊಂಡು ಹೈದರಾಬಾದಿನ ಪ್ರಯೋಗಾಲಯಕ್ಕೆ ಹೋಗಿ, ಅದರಲ್ಲಿ ಇರಬಹುದಾದ ಗೊಬ್ಬರದ ಅಂಶಗಳ ಬಗ್ಗೆ ಪರೀಕ್ಷೆ ಮಾಡಿಸಿ ನಿಖರ ಮಾಹಿತಿಯೊಂದಿಗೆ ಸಭೆಗೆ ಹೋಗಿದ್ದಾರೆ. ಸಭೆಯಲ್ಲಿ ಜೆ.ಹೆಚ್.ಪಟೇಲರೂ ಸೇರಿದಂತೆ ಬ್ಯಾಂಕಿನ ಉನ್ನತ ಅಧಿಕಾರಿಗಳು ಸೇರಿದ್ದರು.ಅದೂ ಇದೂ ಚರ್ಚೆಯಾದ ಮೇಲೆ ಬ್ಯಾಂಕ್ ಅಧಿಕಾರಿಗಳು ಸಾಲ ಕೊಡಲು ಒಪ್ಪಿದ್ದಾರೆ. ಆದರೆ ತಾವು ಕೊಡುವ ಸಾಲದ ಮರು ಪಾವತಿಯ ಬಗ್ಗೆ ಸ್ಪಷ್ಟನೆ ಕೇಳಿದ್ದಾರೆ.

ಆಗ ಶಾಮಣ್ಣನವರು ತಾವು ಹೈದರಾಬಾದಿನ ಪ್ರಯೋಗಾಲಯದಿಂದ ತಂದಿದ್ದ ವರದಿಯನ್ನು ಬ್ಯಾಂಕ್ ಅಧಿಕಾರಿಗಳಿಗೆ ತೋರಿಸಿ ಇದು ಅತ್ಯಂತ ಫಲಭರಿತ ಗೊಬ್ಬರ ಅನ್ನುವುದನ್ನು ಮನಗಾಣಿಸಿದ್ದಾರೆ. ಅಲ್ಲದೆ, ತಾವು ಕೊಡುವ ಸಾಲದಿಂದ ಜನರು ಕಕ್ಕಸ್ಸಿನ ಮನೆಗಳನ್ನು ಕಟ್ಟಿಸಿಕೊಳ್ಳುತ್ತಾರೆ ಹಾಗೂ ಎಲ್ಲರೂ ಅವುಗಳನ್ನು ಬಳಸುತ್ತಾರೆ, ಅಂತಲೂ ಹೇಳಿದ್ದಾರೆ. ಅದು ಸರಿ ಇದರಿಂದ ನಾವು ಕೊಟ್ಟ ಸಾಲ ಹೇಗೆ ವಾಪಸ್ಸು ಬರುತ್ತೆ ಅನ್ನೋದನ್ನ ಹೇಳಿ ಅಂದಿದ್ದಾರೆ ಬ್ಯಾಂಕಿನವರು. ಅದು ತುಂಬಾ ಸಿಂಪಲ್, ಪ್ರತಿಯೊಬ್ಬರ ಮನೆಯ ಕಕ್ಕಸ್ಸು ಪಿಟ್ಟುಗಳನ್ನು ಹರಾಜು ಹಾಕುವುದು, ಇಲ್ಲವೇ ಬ್ಯಾಂಕಿನವರೇ ಅವುಗಳನ್ನು ತೆಗೆಸಿ ಮಾರಾಟ ಮಾಡುವುದು, ಇದರಿಂದ ಬ್ಯಾಂಕಿನವರಿಗೆ ಕೊಟ್ಟ ಸಾಲವೂ ತಿರುಗಿ ಬರುತ್ತೆ, ಹಳ್ಳಿಗಳ ನೈರ್ಮಲ್ಯವೂ ಹೆಚ್ಚುತ್ತದೆ, ಸಾಲದ್ದಕ್ಕೆ ಒಳ್ಳೆಯ ಗೊಬ್ಬರವನ್ನೂ ಜನರಿಗೆ ತಲುಪಿಸಿದ ಹಾಗೆ ಆಗುತ್ತೆ, ಅಂದಿದ್ದಾರೆ. ಇದರಿಂದ ಬ್ಯಾಂಕ್ ಅಧಿಕಾರಿಗಳು ಕಕ್ಕಾಬಿಕ್ಕಿಯಾಗಿದ್ದು ಬಿಟ್ಟರೆ, ಬ್ಯಾಂಕಿನವರು ಇದಕ್ಕೆ ಬಿಲ್ ಕುಲ್ ಒಪ್ಪುವುದಿಲ್ಲ. ಹಾಗಾಗಿ ಆ ಯೋಜನೆ ಅಲ್ಲಿಗೇ ಬಿದ್ದು ಹೋಗುತ್ತದೆ.

ಆದರೂ ಇದನ್ನ ಅಷ್ಟಕ್ಕೇ ಬಿಡದ ಶಾಮಣ್ಣನವರು, ಮುಂದೆ ಅದೂ ಇದೂ ಯೋಜನೆಯಡಿಯಲ್ಲಿ ಹಳ್ಳಿಯವರಿಗೆ ಸಾಲ ಕೊಡಿಸಿ ಕಕ್ಕಸ್ಸು ರೂಮುಗಳನ್ನು ಕಟ್ಟಿಸಿಕೊಳ್ಳಲು ನೆರವಾಗಿದ್ದಾರೆ. 'ಆಗಲಾದರೂ ರಸ್ತೆಗಳಲ್ಲಿ ಕಕ್ಕಸ್ಸು ಮಾಡುವವರ ಸಂಖ್ಯೆ ಕಡಿಮೆಯಾಯ್ತು ಅಂದುಕೊಂಡಿರಾ, ಖಂಡಿತಾ ಇಲ್ಲ. ಒಂದಷ್ಟು ದಿನ ಹಾಗೂ ಹೀಗೂ ಅವುಗಳನ್ನು ಬಳಸಿದ ಅವರು ಕಡೆಗೊಂದು ದಿನ ಅವುಗಳನ್ನ

ಸೌದೆ ತುಂಬುವ ಮನೆಯಾಗಿಸಿಕೊಂಡು ಬಿಟ್ಟರು. ಕೇಳಿದರೆ, ಅದರೊಳಗೆ ಕೂತರೆ ಕಕ್ಕಸ್ಸು ಮಾಡಾಕೇ ಆಗಲ್ಲ, ಅಂತ ಸಮಜಾಯಿಶಿ ಬೇರೆ ಕೊಡ್ತಾರೆ' ಅನ್ನುತ್ತಾರೆ ಶಾಮಣ್ಣನವರು. ಶಾಮಣ್ಣನವರು ಮಾತುಗಳು ನಿಜವಾಗಿದ್ದವು. ಗೆಳೆಯ ಚಂದ್ರೇಗೌಡರು ತೋರಿಸಿದ ಶಾಮಣ್ಣನವರು ಕಟ್ಟಿಸಿಕೊಟ್ಟಿದ್ದ ಕಕ್ಕಸ್ಸು ರೂಮುಗಳಲ್ಲಿ ಕೆಲವು ಆಗಲೇ ಬಿದ್ದು ಹೋಗುವ ಸ್ಥಿತಿಯಲ್ಲಿದ್ದರೆ, ಮತ್ತೆ ಕೆಲವರಲ್ಲಿ ಸೌದೆ ಮುಂತಾದವುಗಳನ್ನು ತುಂಬಿಕೊಳ್ಳಲಾಗಿತ್ತು.

ಹೀಗೆ ಆ ಇಡೀ ದಿನ ಇಂಥ ಹತ್ತು ಹಲವು ಸ್ವಾರಸ್ಯಕರ ಘಟನೆಗಳನ್ನು ಮಾತನಾಡುತ್ತಾ ಹೋದ ಶಾಮಣ್ಣನವರೊಳಗಿನ ಮುಗ್ಧತೆ, ಬದುಕಿನ ತನ್ಮಯತೆ, ದಣಿವರಿಯದ ಕುತೂಹಲ, ಅಂತೆಯೇ ಚಳುವಳಿಕಾರನೊಬ್ಬನ ಹಠ, ಕಳಕಳಿ- ಹೀಗೆ ಎಲ್ಲವೂ ಒಬ್ಬರಲ್ಲೇ ಮಿಳಿತಗೊಂಡಂತೆ ಕಾಣುತ್ತಿದ್ದ ಶಾಮಣ್ಣನವರನ್ನು ಬೀಳ್ಕೊಂಡು ಹೊರಟಾಗ ಸಂಜೆಯಾಗತೊಡಗಿತ್ತು.

ಮರೆಯಲಾಗದ ಶಾಮಣ್ಣ ಮಾಸ್ತ್ರ

ಪೂರ್ಣಿಮಾ ಲಿಂಗದಹಳ್ಳಿ

"ವಿದ್ಯೆ, ಜ್ಞಾನ ಹೆಚ್ಚಾದಂತೆ ಬಾಗಬೇಕು ಮತ್ತು ವಿದ್ಯಾವಂತನ ಜ್ಞಾನ, ವಿದ್ಯೆ ಇನ್ನೊಬ್ಬರಿಗೆ ಸಿಗಬೇಕು ಮತ್ತು ಸಮಾಜದ ಒಳಿತಿಗೆ ಒದಗಬೇಕು."

ಹೈಸ್ಕೂಲಿನಲ್ಲಿ ೩ ವರ್ಷಗಳ ಕಾಲ ಶ್ಯಾಮಣ್ಣ ಮೇಷ್ಟ್ರ ಶಿಷ್ಯೆಯಾಗಿದ್ದ ನನಗೆ ಈ ಸುಭಾಷಿತವು ನೆನಪಾದಾಗಲೆಲ್ಲಾ ಶ್ಯಾಮಣ್ಣ ಮೇಷ್ಟ್ರ ಚಿತ್ರವು ನೆನಪಾಗುತ್ತದೆ. ಶಿಕ್ಷಕ ವೃತ್ತಿಯನ್ನು ಬಿಟ್ಟು ರೈತನಾಗಿ ಹೋರಾಟದ ಪರ್ವಕ್ಕೆ ಕಾಲಿಟ್ಟ ಅವರ ಬದುಕಿನಲ್ಲಿ ಇಲ್ಲಿಯವರೆಗೆ ನಡೆದ ಘಟನೆಗಳು ಇದನ್ನೇ ಸಾರುತ್ತವೆ. ವಿದ್ಯೆ, ಜ್ಞಾನದ ಜೊತೆಗೆ ಅವರ ಅನುಭವಗಳನ್ನು ಬೆರೆಸಿ ಸಾರ್ವಜನಿಕ ಜೀವನದಲ್ಲಿ ಬೆರೆತಿದ್ದಾರೆ, ಕಲಿತಿದ್ದಾರೆ, ಕಲಿಸಿದ್ದಾರೆ ಮತ್ತು ಜಯ ಸಾಧಿಸಿದ್ದಾರೆ.

ಅರವತ್ತರ ದಶಕದ ಕೊನೆಯಲ್ಲಿ ಮೇಷ್ಟ್ರು ತೀರ್ಥಹಳ್ಳಿ ತಾಲ್ಲೂಕಿನ ಬಸವಾನಿ ಸರ್ಕಾರಿ ಪ್ರೌಢಶಾಲೆ, ಕಟ್ಟೆಹಕ್ಲು–ಇಲ್ಲಿಗೆ ಮೇಷ್ಟ್ರಾಗಿ ಬಂದವರು. ಅವರ ಸಬ್ಜೆಕ್ಟ್–ಸಮಾಜಶಾಸ್ತ್ರ. ಹಾಗೇಂದರೇನೆಂದು ನಮಗಂತು ಆಗ ತಿಳಿದಿರಲಿಲ್ಲ, ಆದರೆ ಮೇಷ್ಟ್ರು ನಮಗೆ ಗಣಿತವೊಂದನ್ನು ಬಿಟ್ಟು ಎಲ್ಲಾ ವಿಷಯಗಳನ್ನು ತಿಳಿಸು

ತ್ತಿದ್ದರು. ಸಮಾಜಶಾಸ್ತ್ರವನ್ನು ಪಾಠ ಮಾಡುತ್ತಿದ್ದರು. ನಮಗೆ ಪಾಠವನ್ನು ಬಿಟ್ಟು ಉಳಿದದ್ದು ಬಹಳ ಇಷ್ಟವಾಗುತ್ತಿತ್ತು. ಸಾಂಸ್ಕೃತಿಕ ಚಟುವಟಿಕೆಗಳು, ಕವಿ-ಕಾವ್ಯದ ಸೊಗಸು, ಪ್ರಕೃತಿಯ ವರ್ಣನೆ, ಜೀವನವನ್ನು ಪ್ರೀತಿಸುವ ಕಲೆ ಇವುಗಳನ್ನು ಕಲಿಸಿದರು. ನಮಗೆ ಗೊತ್ತೆ ಇರದಿದ್ದ ಚಿತ್ರಕಲೆ, ಪಠ್ಯೇತರ ಪುಸ್ತಕಗಳನ್ನು ಓದುವುದು, ಸಾಧಕರ ವಿಚಾರಗಳನ್ನು ತಿಳಿಯುವುದು, ಪ್ರಸ್ತುತ ರಾಜಕಾರಣ ಅಂದರೆ ಜನಪ್ರತಿನಿಧಿಗಳ ಪರಿಚಯ, ಇವರ ಹೊಣೆಗಾರಿಕೆ, ಸಮಾಜದಲ್ಲಿ ನಮ್ಮ ಹೊಣೆಗಾರಿಕೆ ಇವುಗಳ ಪರಿಚಯ ಮಾಡಿಸಿದ್ದರು. ಅವುಗಳನ್ನು ಅರ್ಥ ಮಾಡಿಕೊಳ್ಳುವಷ್ಟು ಸೂಕ್ಷ್ಮಮತಿಗಳು ನಾವಾಗಿರಲಿಲ್ಲ. ಆದರೆ ಆ ಪಾಠಗಳು ನಮ್ಮ ಮನಸ್ಸಿನಿಂದ ಮರೆಯಾಗದಷ್ಟು ಬಿಗಿಯಾಗಿದ್ದವು. ನಾವು ಜೀವನದಲ್ಲಿ ಬೆಳೆಯುತ್ತಾ ಬಂದಂತೆ ಆ ವಿಚಾರಗಳೂ ನಮಗೆ ನಿಚ್ಚಳವಾಗತೊಡಗಿತು. ಹಾಗಂತ ಅವರೇನೂ ತುಂಬಾ ಸೀರಿಯಸ್ ಪ್ರವೃತ್ತಿ ಅಂತಲ್ಲ. ಬಹಳ ತಮಾಷೆ ಮಾಡುತ್ತಿದ್ದರು. ತರಗತಿಯಲ್ಲಿ ನಮಗೆ ಪ್ರತಿವಾರ ಟೆಸ್ಟ್ ಕೊಡುತ್ತಿದ್ದರು. ನಮ್ಮನ್ನು ಪರಿಣಿತರನ್ನಾಗಿ ಮಾಡಬೇಕೆಂಬುದು ಅವರ ಆಶಯ. ಒಂದು ದಿನ ಟೆಸ್ಟ್ ಕೊಟ್ಟು, ಬರೆಯಲು ತಿಳಿಸಿ ಶಿಕ್ಷಕರ ಕೊಠಡಿಗೆ ತೆರಳಿದ್ದರು. ನನ್ನ ಗೆಳತಿಯೊಬ್ಬಳು ನೋಡಿಕೊಳ್ಳಲು ಪುಸ್ತಕ ತೆರೆದಳು. ತಕ್ಷಣ ನಾವೆಲ್ಲಾ ಪುಸ್ತಕಕ್ಕೆ ಮುತ್ತಿಕೊಂಡೆವು. ಸ್ವಲ್ಪ ಹೊತ್ತಿಗೆ ಮೇಸ್ಟ್ರು ಬಂದಿದ್ದು ಗೊತ್ತಾಗಿ ಎಲ್ಲಾ ತಲೆಯೆತ್ತಿದೆವು. ಏನೂ ಹೇಳದೆ ಉತ್ತರ ಪತ್ರಿಕೆಗಳನ್ನು ತಂದು ಕೊಡಲು ತಿಳಿಸಿ ಹೋದರು. ನಂತರ ನಾನು ಎಲ್ಲಾ ಪತ್ರಿಕೆಗಳನ್ನು ತೆಗೆದುಕೊಂಡು ಕೊಡಲು ಹೋಗಿ ಕೊಠಡಿಯ ಬಾಗಿಲ ಬಳಿ ನಿಂತೆ. ಒಳಗಿನಿಂದ ಸಹಶಿಕ್ಷಕರೊಂದಿಗೆ "ನಾನು ನೋಡಿದ ತಕ್ಷಣ ಎಲ್ಲರೂ ಒಟ್ಟಿಗೆ ತಲೆಯೆತ್ತಿದ್ದು ಕಮಲದ ಹೂ ಅರಳಿದಂತೆ ಕಂಡಿತು" ಎಂದು ಹೇಳಿಕೊಳ್ಳುತ್ತಾ ಎಲ್ಲರೊಂದಿಗೆ ನಗುತ್ತಿದ್ದರು. ಹೀಗಿದೆ ಅವರ ಹಾಸ್ಯ ಪ್ರವೃತ್ತಿ.

ಕುವೆಂಪುರವರ "ಜಲಗಾರ" ನಾಟಕವನ್ನು ನಮಗೆ ಕಲಿಸಿ ವಾರ್ಷಿಕೋತ್ಸವದಲ್ಲಿ ನಮ್ಮನ್ನು ವೇದಿಕೆಗೆ ಕರೆತಂದು ಪರಿಚಯಿಸುವಾಗ ನಮ್ಮನ್ನು ಹೊಗಳಿದಾಗ ಆದ ಸಂತೋಷ ಇವತ್ತಿಗೂ ನೆನಪಿದೆ.

ವಿದ್ಯಾರ್ಥಿಗಳಿಗೆ ಇಂತಹ ಶಿಕ್ಷಕರು ದೊರಕಿದರೆ ವಿದ್ಯಾರ್ಥಿಗಳಿಗೆ ಬೇರೆ ಮಾರಲ್ ಸೈನ್ಸ್ ಎನ್ನುವ ವಿಷಯವೇ ಬೇಡ ಅವರ ಪಾಠದಲ್ಲೇ ಎಲ್ಲವೂ ಅಡಕವಾಗಿರುತ್ತದೆ ಎಂದು ಹೇಳಲು ನಾನು ಸಂತೋಷಿಸುತ್ತೇನೆ. ಮತ್ತು ಇಂತಹ ಶಿಕ್ಷಕರ ಬಳಿ ನಾನು ವಿದ್ಯಾಭ್ಯಾಸ ಮಾಡಿದೆ ಎಂದು ಹೆಮ್ಮೆ ಪಡುತ್ತೇನೆ.

ಶಾಮಣ್ಣ

ಅಂದು ವರ್ಷಗಳ ಹಿಂದೆ
ಕಂಡಾಗಲೂ
ಇಂದು ವರ್ಷಗಳಿಗೂ ಆಚೆ
ಕಂಡಾಗಲೂ
ನನಗೆ ಸಿಕ್ಕಿದ್ದು ಅದೇ ಶಾಮಣ್ಣ
ಅಣ್ಣ ಶಾಮಣ್ಣ

ಇಂಥ ಬಂಧುತ್ವವೊಂದು
ನಮ್ಮ ಮಧ್ಯೆ ಅಡಗಿ ಕೂತಿದೆ
ಎಂದು ಗೊತ್ತೇ ಇರದಷ್ಟು
ಅವರನ್ನು ಕಣ್ತುಂಬಿಕೊಂಡ ಕೂಡಲೇ
ಆವರಿಸುವ ಆರ್ದ್ರ ಭಾವ

ಯಾರು ಈ ಶಾಮಣ್ಣ?
ಯಾವುದರಿಂದ ಆದವರಿವರು?
ಹಸಿರು ಶಾಲುವಿನಿಂದಲೇ?
ಬಣ್ಣ ಹಚ್ಚದ ಅಚ್ಚ ಬಿಳಿಯ ಕೂದಲಿಂದಲೇ?
ದೇಸೀ ಹತ್ತಿ ಉಡುಪಿಂದಲೇ?
ಶ್ಯಾಮಲ ವರ್ಣದ ಮುಖದಲ್ಲಿ
ಚಿಮ್ಮುವ ಉತ್ಸಾಹದ ಬುಗ್ಗೆಯಿಂದಲೇ?

ಈ ಎಲ್ಲದರಿಂದಲೂ ಶಾಮಣ್ಣ ಆಗಿ
ಈ ನೆಲದ ರೈತನಾಗಿ ಯೋಗಿಯ ಧ್ವನಿಯೆತ್ತಿದ
ಶಾಮಣ್ಣ ನುಡಿಸುವ ಕೊಳಲು
ಹಾಡುವ ಹಾಡು
ಎತ್ತರಿಸುವ ಧ್ವನಿಯ ಕಮಾಲು
ಸೆರೆ ಹಿಡಿಯುವ ಭಾವಚಿತ್ರ
ಎಲ್ಲದರಲ್ಲೂ ಮಿಡಿಯುವುದು ಒಂದೇ
ಮಾನವತೆಯ ಜೀವನ ಸಂಗೀತ !
ಇದಕ್ಕೆ ಸಾಕ್ಷಿ
ನನ್ನ ಮಗನ ನಗುಮೊಗವನ್ನು
ಎಂದೂ ಅಳಿಯದಂತೆ ಸೆರೆಹಿಡಿದ
ಅವರ ಕ್ಯಾಮರಾ ಕಣ್ಣು;
ನನ್ನನ್ನು 'ತಂಗಿ' ಎಂದು ಕರೆದ
ಅವರ ಮಮತೆಯ ಕೊರಳು

ಎರಡೇ ಸಾಲುಗಳಲ್ಲಿ
ಅವರ ಕಿರುಪರಿಚಯ ನೀಡಬೇಕೆಂದರೆ
ಶಾಮಣ್ಣ ದ್ವೇಷವನ್ನು ಕಡಿದು
ಸ್ನೇಹವನ್ನು ಆಳುವ
ನಮ್ಮ ಪರಂಪರೆಯ ಸುಭದ್ರ ಕೊಂಡಿ;
ಕಾಡ ತೊರೆಯ ಹಸಿರ ಜಾಡು
ಪೂರ್ಣಚಂದ್ರ ತೇಜಸ್ವಿ ಇವರ ಸ್ನೇಹಿತರು
ಇವರ ಧರ್ಮಪತ್ನಿ ಸಿರಿದೇವಿ, ಶ್ರೀದೇವಿ....

–ಜ್ಯೋತಿ ಗುರುಪ್ರಸಾದ್

ಮನೆಯಂಗಳದಿಂದ...

ಶಾಮಣ್ಣನವರ ತಾಯಿ ನಾಗವೇಣಮ್ಮನವರೊಂದಿಗೆ ಒಂದು ಪುಟ್ಟ ಮಾತುಕತೆ

ಮಂಜುಳಾ ರಾಜು

ಗತಕಾಲದ ಪರಂಪರೆಯ ಕೊಂಡಿಗಳಂತೆ ನಮ್ಮೊಡನೆ ಬಾಳಿ ಬದುಕುತ್ತಿರುವ ಹಿರಿಯ ಜೀವಗಳೆಂದರೆ ನಮಗೆಲ್ಲಾ ಬಹಳ ಆದರ, ಆಸಕ್ತಿ, ಕುತೂಹಲ. ಅವರನ್ನು ಮಾತನಾಡಿಸಲು, ಅವರ ಅನುಭವ ಕೇಳಲು ಏನೋ ಒಂದು ರೀತಿಯ ಹೇಳಲಾಗದ ಸಂತಸ. ಅವರೊಂದಿಗೆ ಒಡನಾಟವಿದ್ದರೆ ನೆಮ್ಮದಿ. ಅಂತೆಯೇ ಹಲವು ಹಿರಿಯ ಜೀವಗಳನ್ನು ಹುಡುಕಿ ಹೋದದ್ದಿದೆ.

ನಮ್ಮೆಲ್ಲರ ಪ್ರೀತಿಯ ಶಾಮಣ್ಣರ ತಾಯಿಯನ್ನು ನೋಡುವ, ಮಾತನಾಡಿಸುವ ನಮ್ಮ ಆಸೆ ಬಹಳ ದಿನದ್ದು. ಹೀಗಿರುವಾಗ, ಡಿ.ಎಸ್. ನಾಗಭೂಷಣರವರು ಸಂಪಾದಿಸುತ್ತಿರುವ ಕಡಿದಾಳು ಶಾಮಣ್ಣನವರ ಅಭಿನಂದನಾ ಗ್ರಂಥದ ನೆಪವಾಗಿ ಅವರ ತಾಯಿಯನ್ನು ಮಾತನಾಡಿಸುವ ಅವಶ್ಯಕತೆ, ಅವಕಾಶ ಈಗ ಒದಗಿ ಬಂದಿತ್ತು.

ಕಡಿದಾಳು ಗೋಪಾಲರ ಮನೆಯಲ್ಲಿ ಇದ್ದಾರೆ ಎಂಬ ಸುದ್ದಿ ತಿಳಿದು, ಅವರ ಅನುಕೂಲದ ಸಮಯ

ತಿಳಿದುಕೊಂಡು ಇಳಿಮಧ್ಯಾಹ್ನ ಸುಮಾರು ೪.೩೦ರ ಸುಮಾರಿಗೆ ನಾನು, ಸವಿತಾ ಮತ್ತು ರೇಖಾಂಬ, ಅವರ ಮನೆಗೆ ಹೋದೆವು. ಶುಭ್ರವಸನಧಾರಿಯಾಗಿ, ಶುಭ್ರವಾದ ವಿಶಾಲ ಮಂಚದ ಮೇಲೆ ಆ ಹಿರಿಯ ಜೀವ ವಿಶ್ರಾಂತಿ ಪಡೆಯುತ್ತಿತ್ತು. ನಾವು ಬಂದ ಸುದ್ದಿಯನ್ನು ಸಹಾಯಕಿಯು ಅವರಿಗೆ ಕಿವಿಯಲ್ಲಿ ಕೂಗಿ ಹೇಳಿದರು. ಎದ್ದು ಕುಳಿತು ನಮ್ಮನ್ನು ಸ್ವಾಗತಿಸಿದರು. ಕಣ್ಣಿನಲ್ಲಿ ಹೊಳಪು, ಮುಖದ ತುಂಬಾ ನಗು, ತೊಂಬತ್ತನಾಲ್ಕು ದಾಟಿದರೂ ದೇಹ ಬಾಡಿರಲಿಲ್ಲ. ಮಧ್ಯಮ ವಯಸ್ಸಿನಲ್ಲಿ ತುಂಬು ಆರೋಗ್ಯದಿಂದ ಕಂಗೊಳಿಸುತ್ತಿದ್ದ ಕುರುಹಾಗಿ ಅಲ್ಲೊಂದು ಛಾಯಾಚಿತ್ರವೂ ಇತ್ತು. ದೊಡ್ಡಮನೆ, ಬಂದು ಹೋಗುವ ನೆಂಟರಿಷ್ಟರು, ಆಳುಕಾಳುಗಳು, ಮಕ್ಕಳು, ಮದುವೆ, ಮುಂತಾದ ಸಮಾರಂಭಗಳು, ಅಡಿಗೆ, ಕೊಟ್ಟಿಗೆ ಕೆಲಸ, ಅಡಿಕೆ ತೋಟ, ಗದ್ದೆಕೆಲಸಗಳಿಗೆ ಸಹಾಯ ಮಾಡುತ್ತ ದೊಡ್ಡ ಅಂಗಳದ ತುಂಬಾ ಓಡಾಡಿಕೊಂಡಿದ್ದದ್ದು ಆ ಹಿರಿಯ ಜೀವದ ಹಿನ್ನೆಲೆಯಾಗಿತ್ತು.

ನಾವು ಶಾಮಣ್ಣನವರನ್ನು ಕುರಿತು ಅವರನ್ನು ಮಾತನಾಡಿಸಿದೆವು. ಶಾಮಣ್ಣ, ಅವರ ತಾಯಿಯ ಪಡಿಯಚ್ಚು. ಅವರ ಚಹರೆ, ನೋಟ, ನಿರ್ಮಲ ನಗು ತಾಯಿಯನ್ನೇ ಹೋಲುತ್ತವೆ. "ನನಗೆ ಏನೂ ನೆನಪು ಉಳಿದಿಲ್ಲ. ಎಲ್ಲ ಮರೆವು. ನೀವು ಬೇರೆಯವರನ್ನು, ಉಳಿದ ಮಕ್ಕಳನ್ನು ಕೇಳಿದರೆ ಎಲ್ಲಾ ಹೇಳ್ತಾರೆ" ಎಂಬ ಪಲ್ಲವಿ ಅವರ ಮಾತಿನ ಮಧ್ಯೆ ಮಧ್ಯೆ ಬಂದು ಹೋಗುತ್ತಿತ್ತು. ಆದರೂ ಸಾಕಷ್ಟು ನೆನಪಿಸಿಕೊಂಡರು. "ಶಾಮಣ್ಣ ಬಾಲ್ಯದಲ್ಲಿ ತುಂಬಾ ಚೇಷ್ಟೆ ಮಾಡುತ್ತಿದ್ದ. ಹೊಡೆಸಿಕೊಂಡು ಅಳುತ್ತಿದ್ದ. ಮತ್ತೆ ಸಮಾಧಾನ ಮಾಡ್ತಿದ್ವು. ಆಗೆಲ್ಲ ತುಂಬಾ ಕೆಲಸ ಇರ್ತಿತ್ತು, ಕೆಲಸದ ಮಧ್ಯೆ ಮಕ್ಕಳು ಗಲಾಟೆ ಮಾಡಿದ್ರೆ ಏಟು ಕೊಡ್ತಿದ್ದೆವು." ಅಂತ ಹೇಳುವಾಗ ಅವರ ಕಣ್ಣ ಮುಂದೆ ನಿಂತ ಬಾಲ್ಯದ ಹುಡುಗ ಶಾಮಣ್ಣ, ನಮ್ಮ ಕಣ್ಣಿಗೂ ಕಂಡರು.

ಇನ್ನು ಶಾಮಣ್ಣ ಬೇರೆ ರೀತಿ ಸರಳವಾಗಿ ಮದುವೆಯಾದ್ರಲ್ಲ, ಅದಕ್ಕೆ ನಿಮಗೆ ಏನು ಅನ್ನಿಸ್ತು? ಎಂದು ನಾವು ಕೇಳಿದಾಗ "ನಂಗೆ ಜೋರಾಗಿ, ಅದ್ದೂರಿಯಾಗಿ ಮದುವೆ ಮಾಡಬೇಕು ಅಂತ ಆಸೆ ಇತ್ತು. ಹಿರೀಮಗ ಬೇರೆ. ಆದರೆ ಅವನು ಕೇಳ್ಲೇ ಇಲ್ಲ. ಮದ್ವೆಗೇ ಬರಲ್ಲ ಅಂತ ಕೂತಿದ್ದ. ಕೊನೆಗೆ ನಾನು ಒಪ್ಪಿಕೊಳ್ಳಬೇಕಾಯ್ತು" ಅಂತಲೂ, ಸೊಸೆ ಕಂಡರೆ ತುಂಬಾ ಖುಷಿ, ತುಂಬಾ ಉಪಚಾರ ಮಾಡ್ತಾಳೆ ಅಂತಲೂ ಸೇರಿಸಿದರು.

ಹಾಗೇ ಸಂಗೀತ ಕಲಿಯಲು ಬಾಂಬೆಗೆ ಹೋದಾಗಲೂ 'ಅಷ್ಟು ದೂರ ಕಳಿಸಲು ಆ ಕಾಲದಲ್ಲಿ ಇಷ್ಟ ಇರಲಿಲ್ಲ. ಆದ್ರೆ ಅವನು ಕೇಳ್ಬೇಕಲ್ಲ!' ಅಂತ ಶಾಮಣ್ಣನ ಹಠದ ಸ್ವಭಾವದ ಇನ್ನೊಂದು ಮಗ್ಗಲನ್ನು ನಮ್ಮ ಮುಂದಿಟ್ಟರು. ಶಾಮಣ್ಣನ

ಸಂಗೀತ, ಫೋಟೋಗ್ರಫಿ ಆಸಕ್ತಿ ಕುರಿತೂ ಖುಷಿಯನ್ನು ವ್ಯಕ್ತ ಪಡಿಸಿದರು. "ತುಂಬಾ ಪ್ರೀತಿಸುವ ಗುಣ ಅವನಿಗೆ. ನನ್ನನ್ನು ನೋಡಿ ಮಾತನಾಡಿಸದೇ ಹೋಗಲ್ಲ" ಅಂತ ಹೇಳ್ತಾ "ಅವನು ಬಂದಿದ್ದಾನಾ?" ಅಂತ ಸುತ್ತಾ ನೋಡುತ್ತಾ ಮತ್ತೆ ಮರೆವಿಗೆ ಜಾರಿದರು.

ಅವರಿಗೆ ೧೮ ವರ್ಷ ಆದಾಗ ಹುಟ್ಟಿದ್ದು ಹಿರಿಯ ಮಗ ಶಾಮಣ್ಣ ಅಂತಲೂ ನಂತರ ಉಳಿದೆಲ್ಲ ಮಕ್ಕಳ ಹೆಸರು, ಅವರೆಲ್ಲ ಎಲ್ಲೆಲ್ಲಿ ಇದ್ದಾರೆ ಅಂತಲೂ, ಎಲ್ಲರೂ ತಮಗೆ ಅಚ್ಚುಮೆಚ್ಚು ಎಂದೂ ಹೇಳಿದರು. ಕಣ್ಣು-ಕಿವಿ ದುರ್ಬಲಗೊಂಡರೂ ಕಣ್ಣಲ್ಲಿಯ ಮಿಂಚು ಹೊಳಪು ಹಳೆಯದನ್ನು ನೆನಪಿಸಿಕೊಳ್ಳುವಾಗ ಮತ್ತಷ್ಟು ಮಿನುಗುತ್ತಿತ್ತು.

ತಮ್ಮ ತಾಯಿ ಕೆಂಪಮ್ಮ ಆ ಕಾಲದಲ್ಲೇ ಎಲ್.ಎಸ್ ಓದಿದ್ದು, ಅವರು ಬೆಳ್ಳಗೆ ಎತ್ತರವಾಗಿ ಸುಂದರವಾಗಿ ಇದ್ದದ್ದು, ತಾನೇನು ಅಷ್ಟು ಸುಂದರಿಯಲ್ಲ, ತನ್ನ ಮೈಬಣ್ಣ ಕಪ್ಪು, ಈಗೀಗ ಮನೇಲೇ ಇದ್ದು ಸ್ವಲ್ಪ ಬೆಳ್ಳಗಾಗಿದ್ದೇನೆ ಎಂದೆಲ್ಲ ನಗುತ್ತಾ ಹೇಳಿದಾಗ, ಅಲ್ಲೆಲ್ಲ ನಗುವಿನ ಲಹರಿ ಎದ್ದಿತು. ಮಲೆನಾಡಿನ ಆ ದೊಡ್ಡಮನೆಯ ಎಲ್ಲಾ ಕೆಲಸ ಕಾರ್ಯಗಳನ್ನು ಇನ್ನುಳಿದ ಓರಗಿತ್ತಿಯರಿಗೂ ಬಿಡದೇ ತಾವೇ ಮುಂದಾಗಿ ಮಾಡುತ್ತಿದ್ದುದು, ಬಂದವರಿಗೆ ಉಪಚಾರ, ಬಾಳೆಹಣ್ಣು, ಎಲೆ ಅಡಿಕೆ, ಕಾಫಿ ಕೊಡದೆ ಕಳಿಸುತ್ತಲೇ ಇರಲಿಲ್ಲ ಎಂದು, ನನಗೀಗ ಯಾವ ಕೆಲಸಾನೂ ಮಾಡಲು ಆಗುತ್ತಿಲ್ಲ ಎಂದೆಲ್ಲ ಹೇಳಿಕೊಂಡರು.

"ನೀವೂ ಕಾಫಿ ಕುಡೀರಿ" ಎಂದು ಹೇಳಿ ಉಪಚಾರ ಮಾಡುವುದನ್ನು ಮರೆಯಲೇ ಇಲ್ಲ. ನಮಗೆ ಕಾಫಿ ಬಂತು. ಅವರೂ ಬಿಸಿ ಕಾಫಿಯನ್ನು ಸವಿದರು. ಈಗಾಗಲೇ ಆಯಾಸಗೊಂಡಿರುವ ಅವರನ್ನು ಮತ್ತಷ್ಟು ಆಯಾಸ ಪಡಿಸುವುದು ಬೇಡ ಎಂದು ತೀರ್ಮಾನಿಸಿ ನಾವು ಹೊರಡಲು ಸಿದ್ಧರಾದಾಗ ಕುಂಕುಮ ಕೊಡಲು ಹೇಳಿದರಲ್ಲದೇ "ಇನ್ನೊಮ್ಮೆ ಬನ್ನಿ, ಬಾಳೆಹಣ್ಣು ತಿನ್ನಿ" ಅಂತ ಮತ್ತೆ ಮತ್ತೆ ಹೇಳುತ್ತಾ ನಮ್ಮನ್ನು ಬೀಳ್ಕೊಟ್ಟರು. ಕಿವಿ-ಕಣ್ಣು-ನೆನಪು ದುರ್ಬಲವಾಗಿದ್ದರೂ ಧ್ವನಿ ಗಟ್ಟಿಯಾಗೇ ಇತ್ತು.

ಸಂದು ಹೋದ ಕಾಲವೊಂದರ ಕುರುಹಾಗಿ ಇರುವ ನಾಗವೇಣಮ್ಮ, ನಮ್ಮ ಪ್ರೀತಿಯ ಶಾಮಣ್ಣನವರ ವ್ಯಕ್ತಿತ್ವವನ್ನು ರೂಪಿಸಿದ ಅಮ್ಮ, ಎಲ್ಲರ ಅಮ್ಮನಾಗಿ ಕಂಡರು. ಅವರನ್ನು ಮಾತನಾಡಿಸಿದ ತೃಪ್ತಿಯಿಂದ ಬೀಳ್ಕೊಟ್ಟು ಬಂದೆವು.

ಅಣ್ಣ ಶಾಮಣ್ಣ

ಕೆ.ಆರ್ ದಯಾನಂದ

ಕಡಿದಾಳು ಶಾಮಣ್ಣ ನನ್ನ ದೊಡ್ಡಣ್ಣ. ನಮ್ಮ ತಂದೆ ಕಡಿದಾಳ್ ರಾಮಪ್ಪಗೌಡರು ತಾಯಿ ನಾಗವೇಣಮ್ಮ ನವರ ಏಳು ಜನ ಮಕ್ಕಳಲ್ಲಿ ಶಾಮಣ್ಣ ದೊಡ್ಡವನು. ನಂತರ ಲಕ್ಷ್ಮೀದೇವಿ, ಕಡಿದಾಳು, ಗೋಪಾಲ, ಚಂದ್ರಾವತಿ, ನಾನು, ಸದಾನಂದ ಹಾಗೂ ಕಡಿದಾಳ್ ಪ್ರಕಾಶ್. ಎಲ್ಲರಿಗೂ ಎರಡು ಮೂರು ವರ್ಷಗಳ ಅಂತರ. ನನಗೂ ಶಾಮಣ್ಣನಿಗೂ ಸುಮಾರು ಎಂಟು ವರ್ಷಗಳ ಅಂತರ. ಶಾಮಣ್ಣನ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣವಾದ ಸಮಯ ನನಗೆ ಅಷ್ಟಾಗಿ ನೆನಪು ಗಳಿಲ್ಲ. ಅವನು ಶಿವಮೊಗ್ಗದಲ್ಲಿ ಇಂಟರ್ ಮೀಡಿಯೆಟ್ ಕಾಲೇಜಿಗೆ ಸೇರಿದಾಗಲಿಂದ ನನಗೆ ಸುಮಾರಾಗಿ ಎಲ್ಲ ನೆನಪುಗಳೂ ಇವೆ.

ಶಾಮಣ್ಣ ಮತ್ತು ತೇಜಸ್ವಿಯವರು ಖಾಜಿ ಎಂಬ ಮುಸಲ್ಮಾನ್ ಗೆಳೆಯನೊಡನೆ ಕಡಿದಾಳಿಗೆ ಬರುತ್ತಿದ್ದದ್ದು, ಖಾಜಿಯವರು ಮುಸಲ್ಮಾನರಾಗಿದ್ದುದರಿಂದ ಅವರಿಗೆ ಬಿಸ್ಮಿಲ್ಲಾ ಮಾಡದೆ ಕೋಳಿ ಕೊಯ್ಯುವಂತಿರಲಿಲ್ಲ, ಅವರೇ ಬಿಸ್ಮಿಲ್ಲಾ ಮಾಡಿ ಕೋಳಿ ಕೊಯ್ದದ್ದನ್ನು ನಾನು ಕುತೂಹಲದಿಂದ ನೋಡಿದ್ದು, ಶಾಮಣ್ಣ ತೇಜಸ್ವಿಯ

ವರೊಡನೆ ಚಿನ್ನಿ ದಾಂಡು ಆಡಿದ್ದು, ಚಿನ್ನಿ ಬಂದು ನನ್ನ ಮುಖಕ್ಕೆ ಹೊಡೆದು ಮೂಗಿನ ಹೆಂಡೆ ಒಡೆದು ರಕ್ತ ಬಂದಿದ್ದು, ನಾನು ಅತ್ತಿದ್ದು ಎಲ್ಲ ನೆನಪಿದೆ. ಶಾಮಣ್ಣ ಚಿಕ್ಕಂದಿನಲ್ಲಿ ಬಹಳ ಹಠ ಮಾಡುತ್ತಿದ್ದ ಅಂತ ನಮ್ಮಮ್ಮ ಯಾವಾಗಲಾದರೂ ಹೇಳುತ್ತಿದ್ದದ್ದು ಬಿಟ್ಟರೆ ಚಿಕ್ಕವರಾದ ನಮಗೆ ಹೆಚ್ಚೇನೂ ನೆನಪಿಲ್ಲ. ಅವನು ರಜೆಯಲ್ಲಿ ಊರಲ್ಲಿ ಇದ್ದಷ್ಟು ದಿನವೂ ನಮಗೆಲ್ಲ ಏನಾದರೂ ತಮಾಷೆ ಮಾಡುತ್ತ ಖುಷಿ ಕೊಡುತ್ತಿದ್ದ. ನಾವೆಲ್ಲ ಅವನನ್ನು ಆಗಿನಿಂದಲೂ ಅಣ್ಣಯ್ಯ ಅಂತಲೇ ಕರೆಯುವುದು.

ಮುಂದೆ ಶಾಮಣ್ಣ ಮೈಸೂರು ಮಹಾರಾಜ ಕಾಲೇಜಿಗೆ ಬಿ.ಎ ಓದಲು ಸೇರಿಕೊಂಡ. ಅವನು, ತೇಜಸ್ವಿಯವರು ಮೈಸೂರಿನಿಂದ ರಜೆಯಲ್ಲಿ ಸೈಕಲ್ಲಿನಲ್ಲಿ ಕಡಿದಾಳಿಗೆ ಬಂದದ್ದು, ಮಾರ್ಗ ಮಧ್ಯದಲ್ಲಿ ಅರಸೀಕೆರೆ ಸ್ಕೂಲ್ ವರಾಂಡದಲ್ಲಿ ರಾತ್ರಿ ಮಲಗೆದ್ದು ಮಾರನೆಯ ಸಂಜೆಗೆ ಕಡಿದಾಳಿಗೆ ಬಂದ ಸಾಹಸ ಕೇಳಿ ನಮಗೆ ಖುಷಿಯೋ ಖುಷಿ. ಅವರ ಜೊತೆಯಲ್ಲಿ ತೋಟ ಗದ್ದೆಗಳಲ್ಲಿ ಓಡಾಡುವುದೇ ನಮಗೊಂದು ಸಂಭ್ರಮ.

ಒಂದು ರಜೆಯಲ್ಲಿ ತೇಜಸ್ವಿ ನನ್ನನ್ನು ನೋಡಿದವರೆ "ಚಿನ್ನಿದಾಂಡು ಆಡುವುದನ್ನು ಚೆನ್ನಾಗಿ ಕಲಿತಿದ್ದೀಯೇನೋ? ನಿನ್ನ ಸಹವಾಸವಲ್ಲ, ಮಾರಾಯ ಹೋದ ಸಾರಿ ಬಂದಾಗ ಚಿನ್ನಿದಾಂಡು ಆಡುವಾಗ ಚಿನ್ನಿ ನಿನ್ನ ಮುಖಕ್ಕೆ ಹೊಡೆದು ರಕ್ತ ಬಂದು ತಾಪತ್ರಯವಾಗಿತ್ತಲ್ಲ" ಎಂದು ಹೇಳಿ ನಕ್ಕರು. "ನಾಳೆ ಕುಪ್ಪಳಿಗೆ ಹೋಗುವಾಗ ಇವನೂ ನಮ್ಮ ಜೊತೆ ಬರಲಿ ಶಾಮಣ್ಣ" ಎಂದು. ಶಾಮಣ್ಣ, "ನೀವು ಇಷ್ಟು ಹೇಳಿದರೆ ಅವನು ಸ್ಕೂಲ್‌ಗೆ ಚಕ್ಕರ್ ಹೊಡೆದು ಬಂದೇ ಬಿಡುತ್ತಾನೆ" ಎಂದ. ಆ ದಿನ ಸ್ಕೂಲಿಗೆ ಟೈಯನ್ನು ನನ್ನ ಕುತ್ತಿಗೆಗೆ ಕಟ್ಟಿ ಸ್ಕೂಲಿಗೆ ಕಳಿಸಿದ್ದರು. ಈ ಖುಷಿಯಲ್ಲಿ ಮರುದಿನ ಕುಪ್ಪಳ್ಳಿಗೆ ಇವರುಗಳ ಜೊತೆ ಹೋಗಬೇಕು ಎಂದು ಅನಿಸುತ್ತಿತ್ತು. ಆದರೆ ತಂದೆಯವರು ಬೇಡವೆಂದರೆ ಏನು ಮಾಡುವುದೆಂದು ಹೆದರಿದ್ದೆ. ತೇಜಸ್ವಿಯವರು ತಂದೆಯವರ ಎದುರಿಗೇ 'ಶಾಮಣ್ಣ ಇರುತ್ತಾನಲ್ಲ, ಜೊತೆಗೆ ಹೊರಡೋ' ಎಂದರು. ಹೊರಟೇ ಬಿಟ್ಟೆ. ಮುಂದಿನ ೨–೩ ದಿನಗಳು ಕುಪ್ಪಳ್ಳಿಯಲ್ಲಿದ್ದು ವಾಪಾಸು ಶಾಮಣ್ಣನೊಂದಿಗೆ ಕಡಿದಾಳಿಗೆ ಬಂದೆ. ಕುಪ್ಪಳ್ಳಿಯಲ್ಲಿದ್ದ ಎರಡು ದಿನಗಳ ಸಮಯದಲ್ಲಿ ಆಗ ತಾನೇ ಸಾಹಿತ್ಯದಲ್ಲಿ ಹೊರಹೊಮ್ಮುತ್ತಿದ್ದ, ಜಿ.ಎಸ್. ಶಿವರುದ್ರಪ್ಪನವರು, ಯು.ಆರ್. ಅನಂತಮೂರ್ತಿಯವರು, ಸುಜನಾ, ತೇಜಸ್ವಿ, ಶಾಮಣ್ಣ ಇವರುಗಳು ಚರ್ಚಿಸುತ್ತಿದ್ದ ಕುವೆಂಪು ಸಾಹಿತ್ಯದ ವಿಚಾರಗಳನ್ನು ಕೇಳಿಸಿಕೊಳ್ಳುತ್ತಿದ್ದೆ. ಎಳೆಯ ಮನಸ್ಸಿನ ನನಗೆ ಸಾಹಿತ್ಯ ಅರ್ಥವಾಗದಿದ್ದರೂ ಮಾತಿನ ಘಟನೆಗಳು ಕುತೂಹಲ ಮೂಡಿಸುತ್ತಿದ್ದವು. ಅಂದಿನಿಂದ ಶಾಮಣ್ಣನೊಂದಿಗೆ ಎಲ್ಲಿಗೆ ಕರೆದರೂ ಹೋಗುವುದು ಬರುವುದು ರೂಢಿ ಮಾಡಿಕೊಂಡೆ. ಅಲ್ಲಿಯವರೆಗೆ ನಾನು ಅಮ್ಮನನ್ನು

ಬಿಟ್ಟು ಎಲ್ಲಿಗೂ ಹೋದವನಲ್ಲ; ಆಮೇಲೆ ಶಾಮಣ್ಣ ಕರೆಯುವುದನ್ನೇ ಕಾಯುತ್ತಿದ್ದೆ.

ಇನ್ನೊಮ್ಮೆ ಮೈಸೂರಿನಿಂದ ದಸರಾ ರಜೆಗೆ ಶಾಮಣ್ಣ ಊರಿಗೆ ಬಂದಿದ್ದಾಗ ಮೌತ್ ಆರ್ಗನ್ ಮತ್ತು ಬುಲ್ ಬುಲ್ ತರಂಗ್ ಎಂಬ ಎರಡು ಚಿಕ್ಕ ವಾದ್ಯಗಳನ್ನು ತಂದಿದ್ದ. ಆ ವಾದ್ಯಗಳಿಂದ ಧ್ವನಿ ಹೊರಡಿಸುವುದನ್ನು ನೋಡಿ ನಮಗೆ ಬೆರಗಾಗುತ್ತಿತ್ತು. ಅವನು ವಾದ್ಯ ನುಡಿಸುತ್ತಿದ್ದ ಸುತ್ತಲೇ ನಾವೆಲ್ಲ ಮಕ್ಕಳು ಸೇರಿಕೊಳ್ಳುತ್ತಿದ್ದೆವು. ಆಗಿನ ಕಾಲದ ಹಿಂದಿಯ ರಾಜ್‌ಕಪೂರ್ ಸಿನಿಮಾದ ಅತ್ಯಂತ ಜನಪ್ರಿಯ ಹಾಡಾಗಿದ್ದ 'ಆವಾರಾ ಹ್ಞೂಂ' ಮತ್ತು 'ಮೇರಾ ಜೂತಾ ಹೈ ಜಪಾನಿ' ಹಾಡಿನ ರಾಗಗಳನ್ನು ಬಾರಿಸುತ್ತಿದ್ದ. ಬೆಳಿಗ್ಗೆ ಎದ್ದಾಗ ಒಬ್ಬನೇ ಕೂತುಕೊಂಡು ಕುವೆಂಪು, ಬೇಂದ್ರೆ, ಶಿವರುದ್ರಪ್ಪನವರ ಕವನಗಳನ್ನು ಹಾಡುತ್ತಲಿದ್ದ. ಇದನ್ನು ನೋಡಿದ ನಮ್ಮಮ್ಮ – ನಮ್ಮ ತಂದೆಯವರು ಹಾರ್ಮೋನಿಯಂ ಕಲಿಯಬೇಕೆಂದು ಯಾರ ಹತ್ತಿರವೋ ಸ್ವಲ್ಪ ದಿವಸ ಹೇಳಿಸಿಕೊಳ್ಳುತ್ತಿದ್ದರಂತೆ. ಮತ್ತೆ ಮುಂದುವರಿಸಲಿಲ್ಲ. ಅಲ್ಲಿಗೇ ಬಿಟ್ಟು ಬಿಟ್ಟರು. ಹಾಗಾಗಿ ಅದೇ ಶಾಮೂಗೂ ಬಂದಿದೆ ಎನ್ನುತ್ತಿದ್ದರು.

ದಸರಾ ರಜೆಯ ಒಂದು ದಿನ ಮನೆಗೆ ಶಾಮಣ್ಣನನ್ನು ಕೇಳಿಕೊಂಡು ಪಂಚೆ ಶರಟು ತೊಟ್ಟ ಶ್ವೇತಧಾರಿಯೊಬ್ಬರು ಬಂದರು. ಶಾಮಣ್ಣನಿಗೆ ಅವರನ್ನು ನೋಡಿದ್ದೆ ಖುಷಿಯೋ ಖುಷಿ. ನಮ್ಮ ತಂದೆಯವರಿಗೆ ಅವರನ್ನು ನನ್ನ ಗುರುಗಳಾದ ಉ.ಕ.ಸುಬ್ಬರಾಯಾಚಾರ್ ಎಂದು ಪರಿಚಯಿಸಿದ. ಅವರು ಅವತ್ತಿನ ಸಂಜೆ ಕಡಿದಾಳು ಊರಿನ ಹತ್ತಿರದ ತೀರ್ಥಮುತ್ತೂರು ಮಠದಲ್ಲಿ ದಸರಾ ಸಂದರ್ಭದ ನವರಾತ್ರಿಯ ಕಾರ್ಯಕ್ರಮಕ್ಕೆ ಅತಿಥಿಗಳಾಗಿ ಬಂದಿದ್ದರು. ತೀರ್ಥಮುತ್ತೂರು ಮಠದಲ್ಲಿ ಆಗ ಪ್ರತಿವರ್ಷವೂ ದಸರಾದಲ್ಲಿ ನವರಾತ್ರಿಯ ಕಾರ್ಯಕ್ರಮಗಳನ್ನು ನಡೆಸುತ್ತಿದ್ದರು. ಈ ಸಾರಿ ಶಾಮಣ್ಣನ ಸಹಿತ ನಾವೆಲ್ಲರೂ ಅವನ ಗುರುಗಳ ಜೊತೆಯಲ್ಲಿ ಮಠದ ಕಾರ್ಯಕ್ರಮದಲ್ಲಿ ಭಾಗವಹಿಸಿದೆವು. ಉ.ಕ. ಸುಬ್ಬರಾಯಾಚಾರ್‌ರವರು 'ಶುಚಿತ್ವ'ದ ಬಗ್ಗೆ ಸರಳವಾಗಿ ಮನಮುಟ್ಟುವಂತೆ ಮಾತನಾಡಿದ್ದರು. ಶಾಮಣ್ಣನ ಸಂಗೀತಾಭ್ಯಾಸದ ಬಗ್ಗೆಯೂ ಹಾಗೂ ಅವನು ಬಾರಿಸುತ್ತಿದ್ದ ದಂತವಾದ್ಯದ ಬಗ್ಗೆಯೂ ಸಭೆಯಲ್ಲಿ ಹೇಳಿದ್ದರು. ಕಾರ್ಯಕ್ರಮದ ಸಂಘಟಕರು ಮಾರನೆಯ ದಿವಸದ ಕಾರ್ಯಕ್ರಮದಲ್ಲಿ ಶಾಮಣ್ಣನ ದಂತವಾದ್ಯ, ಮೌತ್‌ಆರ್ಗನ್ ಹಾಗೂ ಬುಲ್‌ಬುಲ್ ತರಂಗ್ ವಾದ್ಯಗಳ ಸಂಗೀತವನ್ನು ಹಮ್ಮಿಕೊಂಡರು. ದಂತವಾದ್ಯದ ಸವಿಯನ್ನು ಮೈಕ್‌ಸೆಟ್‌ನಲ್ಲಿ ನಾವೆಲ್ಲರೂ ಕೇಳಿದ್ದಾಯಿತು. ನಾನೂ ದಂತವಾದ್ಯ ಬಾರಿಸಲು ಪ್ರಯತ್ನಿಸಿ ಹಲ್ಲುಗಳು ಜುಮುಗುಟ್ಟಲು ಶುರುವಾಗಿ ಅಲ್ಲಿಗೇ ನಿಲ್ಲಿಸಿಬಿಟ್ಟೆ. ಮುಂದೆ ಮೈಸೂರಿನಲ್ಲಿ ನನಗೆ ಶಾಮಣ್ಣ ಸಂಗೀತದಲ್ಲಿ ಯಾವುದನ್ನಾದರೂ ಕಲಿಸಬೇಕೆಂದು ಬಹಳ ಪ್ರಯತ್ನಿಸಿದ. ಸ್ವಲ್ಪ ದಿನ ತಬಲಾ ಬಾರಿಸಲು ಪ್ರಯತ್ನಿಸಿ ಕೈ ಬಿಟ್ಟೆ. ಈಗ ಬರೇ ಸಂಗೀತ

ಕೇಳುಗನಾಗಿದ್ದೇನಷ್ಟೆ. ಶಾಮಣ್ಣನ ಪ್ರಯತ್ನದಿಂದ ನನ್ನ ಅಕ್ಕ ಚಂದ್ರಾವತಿ ಮೈಸೂರಿನಲ್ಲಿ ವೀಣೆ ಕಲಿಯುತ್ತಿದ್ದಳು. ಶಾಮಣ್ಣ ಆಗಲೇ ಸರೋದ್ ವಾದ್ಯವನ್ನು ನುಡಿಸುತ್ತಿದ್ದ.

೧೯೬೩ರ ಸುಮಾರಿನಲ್ಲಿ ಶಾಮಣ್ಣ – ತೇಜಸ್ವಿಯವರು ಸೇರಿ ಮೈಸೂರಿನಲ್ಲಿ ನೃಪತುಂಗಾ ಮುದ್ರಣಾಲಯವನ್ನು ನಡೆಸುತ್ತಿದ್ದರು. ನಾನು, ಅಕ್ಕ ಚಂದ್ರಾವತಿ ಹೈಸ್ಕೂಲ್ ವಿದ್ಯಾಭ್ಯಾಸವನ್ನು ಮುಗಿಸಿ ಮುಂದಿನ ಕಾಲೇಜು ವಿದ್ಯಾಭ್ಯಾಸಕ್ಕೆ ಎಲ್ಲಿ ಸೇರಿಸುವುದೆಂದು ತಂದೆಯವರು ಯೋಚಿಸುತ್ತಿರುವ ಹೊತ್ತಿಗೆ, ಶಾಮಣ್ಣ ಮೈಸೂರಿನಿಂದ ಬಂದವನು ಎಲ್ಲರೂ ಮೈಸೂರಿನಲ್ಲೇ ಮನೆ ಮಾಡಿ ಓದು ಮುಂದುವರಿಸೋಣ. ತಮ್ಮ ಸದಾನಂದನೂ ಅಲ್ಲಿಗೆ ಹೈಸ್ಕೂಲ್‌ಗೆ ಸೇರಲು ಬರಲಿ ಎಂದ. ತಂದೆಯವರು ಒಪ್ಪಿ ಮೈಸೂರಿನಲ್ಲಿ ಚಂದ್ರಾವತಿ ಮಹಾರಾಣಿ ಕಾಲೇಜಿಗೂ, ನಾನು ಯುವರಾಜ ಕಾಲೇಜಿಗೂ, ಸದಾನಂದ ಮಹಾಜನ ಹೈಸ್ಕೂಲ್‌ಗೂ ಸೇರಿದ್ದಾಯಿತು. ಬಿಡುವಿನ ವೇಳೆಯಲ್ಲೆಲ್ಲ ನೃಪತುಂಗಾ ಮುದ್ರಣಾಲಯದ ಕಡೆಗೆ ಹೋಗುತ್ತಿದ್ದ ನನಗೆ, ಅಲ್ಲಿಗೆ ಬರುತ್ತಿದ್ದ ಶಿವರುದ್ರಪ್ಪನವರು, ಚದುರಂಗರು, ಪ್ರಭುಶಂಕರ್, ತೀ.ನಂ. ಶ್ರೀಕಂಠಯ್ಯ, ದೇಜಗೌ, ಗೋಪಾಲಕೃಷ್ಣ ಅಡಿಗರು, ಯು.ಆರ್. ಅನಂತಮೂರ್ತಿ, ಸುಜನಾ ಹೀಗೆ ಬಹಳ ಜನ ಸಾಹಿತಿಗಳ ಪರಿಚಯವೂ ಶಾಮಣ್ಣನ ಮೂಲಕ ಆಯಿತು. ಅವರಲ್ಲಿ ಕೆಲವರ ಪುಸ್ತಕಗಳು ಇಲ್ಲಿ ಮುದ್ರಣವಾಗುತ್ತಿತ್ತು. ಕುವೆಂಪುರವರ ಪುಸ್ತಕಗಳೂ ಇಲ್ಲಿ ಅಚ್ಚಾಗುತ್ತಿದ್ದವು. ಪ್ರೆಸ್ಸಿನಲ್ಲಿ ಪ್ರೂಫ್ ನೋಡುವವರೊಬ್ಬರು ಕೆಲಸ ಬಿಟ್ಟು ಹೋಗಿದ್ದರು. ಶಾಮಣ್ಣ ನನಗೆ "ನಿನ್ನ ಬಿಡುವಿನ ವೇಳೆಯಲ್ಲಿ ಸ್ವಲ್ಪ ಪ್ರೂಫ್ ನೋಡಿ ಕೊಡುತ್ತೀಯಾ? ಬರೇ ಪ್ರೂಫ್ ನೋಡುವುದಷ್ಟೆ ಅಲ್ಲ, ಕುವೆಂಪುರವರ ಮನೆಗೆ ಕೊಟ್ಟು ಬರಬೇಕು. ಅವರು ಪ್ರೂಫ್ ತಿದ್ದಿದ ಮೇಲೆ ಮತ್ತೆ ಪ್ರೆಸ್ಸಿಗೆ ತೆಗೆದುಕೊಂಡು ಬಂದು ಕರೆಕ್ಷನ್ ಹಾಕಿಸಬೇಕು. ನಿನ್ನ ಹತ್ತಿರ ಹೇಗಿದ್ದರೂ ಸೈಕಲ್ಲಿದೆ ಹೇಗೆ" ಎಂದ. ನಾನು ಮರು ಮಾತಿಲ್ಲದೆ ಒಪ್ಪಿದೆ. ಆ ಕಾಲದಲ್ಲಿ ಮೈಸೂರಿನಲ್ಲಿ ಯಾವ ಸಾಹಿತಿಗಳ ಬಾಯಲ್ಲೂ ಕುವೆಂಪುರವರ ಸಾಹಿತ್ಯ ಕೇಳಿ ಬರುತ್ತಿತ್ತು. ಕೆಲವರು ಕುವೆಂಪುರವರ ತರವೇ ವೇಷಭೂಷಣ ಮಾಡಿಕೊಂಡು ಓಡಾಡುತ್ತಿದ್ದರು. ಕುವೆಂಪು ದರ್ಶನವಾಗುವುದೆಂದರೆ ಅದೊಂದು ದೊಡ್ಡ ಪವಾಡದಂತೆ ಕಾಯುತ್ತಿದ್ದ ದಿನಗಳು. ನಾನು ಮರುದಿನದಿಂದಲೆ ಡ್ಯೂಟಿಗೆ ಹಾಜರ್.

ಎರಡು–ಮೂರು ವರ್ಷಗಳು ಶಾಮಣ್ಣ, ತೇಜಸ್ವಿಯವರ ಮತ್ತು ಅವರ ಸ್ನೇಹಿತರ ಒಡನಾಟದಲ್ಲಿ ನಾನು ಶಕ್ತಿ ಮೀರಿ ಬೆಳೆಯಲು ಸಾಧ್ಯವಾಯಿತು. ವಿದ್ಯಾಭ್ಯಾಸದಲ್ಲಿ ನಾನು ಹಿಂದೆ ಬಿದ್ದರೂ ಶಾಮಣ್ಣ ನನಗೆ ಒಂದು ದಿನವೂ ಗದರಿದ್ದು ಇಲ್ಲ. ಆದರೆ ಓದು, ಸಾಹಿತ್ಯ, ಸಮಾಜವಾದ, ಸಂಗೀತದ ಅರಿವು ಮೂಡಿಸುತ್ತಲೇ ಇದ್ದ. ಮೈಸೂರಿನ ಕಾಫಿ ಹೌಸ್‌ನಲ್ಲಿ ಸೇರುತ್ತಿದ್ದ ಅಡಿಗರು, ಅನಂತಮೂರ್ತಿ,

ತೇಜಸ್ವಿಯವರು ಮುಂತಾದವರ ಸಾಹಿತ್ಯಕ ಚರ್ಚೆಗಳಿಗೆ, ಇಂಗ್ಲೀಷ್ ಕಾಮಿಡಿ ಸಿನಿಮಾಗಳಿಗೆ ಒಂದೊಂದು ಸಾರಿ ಮೈಸೂರಿನ ರಾಮಕೃಷ್ಣ ಆಶ್ರಮಕ್ಕೆ ಕರೆದೊಯ್ಯುತ್ತಿದ್ದ. ಇಲ್ಯಾಕೆ ಅಣ್ಣಯ್ಯ ಹೋಗುವುದೆಂದರೆ 'ಇಲ್ಲಿ ಪ್ರಾರ್ಥನೆ ಮುಗಿದ ಮೇಲೆ ದೊಡ್ಡ ದೊಡ್ಡ ಗಾತ್ರದ ಕಲ್ಲು ಸಕ್ಕರೆಗಳನ್ನು ಪ್ರಸಾದವಾಗಿ ಕೊಡುತ್ತಾರೆ. ಎರಡು ಕೈ ನೀಡಿದರೆ ಎರಡೂ ಕೈಗಳಿಗೂ ಕೊಡುತ್ತಾರೆ ಬಾ ನೋಡು' ಎಂದ. ಕಲ್ಲು ಸಕ್ಕರೆಯ ಅನುಭವವಾಯಿತು. ಆದರೆ ಮುಂದೆಂದೂ ಅವನು ಆಶ್ರಮದ ಕಡೆ ಹೋದದ್ದು ನಾನು ನೋಡಿಲ್ಲ. ಶಾಮಣ್ಣನ ಮೂಲಕ ಕಿರಿಯ ಸಾಹಿತಿಗಳೂ ಪರಿಚಯವಾದರು. ಅವರಲ್ಲಿ ಶ್ರೀಕೃಷ್ಣ ಆಲನಹಳ್ಳಿ, ದೇವನೂರು ಮಹಾದೇವ, ಸೂ. ರಮಾಕಾಂತ, ಬಿ.ಎನ್ ಶ್ರೀರಾಮ್, ಕೆ. ಎನ್. ಶಿವತೀರ್ಥನ್, ಕೆ. ರಾಮದಾಸ್ ಇವರುಗಳ ಒಡನಾಟದಲ್ಲಿ ಸಮಾಜವಾದಿ ಯುವಜನ ಸಭಾದ ಸಕ್ರಿಯ ಸದಸ್ಯನಾದೆ. ಚಟುವಟಿಕೆಗಳಲ್ಲಿಯೂ ಭಾಗವಹಿಸಿದೆ. ಒಂದು ರೀತಿಯಲ್ಲಿ ಶಾಮಣ್ಣ ಹೇಗೋ ಹಾಗೆಯೇ ನಾನು ನಡೆದುಕೊಳ್ಳಲು ಶುರುಮಾಡಿದೆ. ಸಮಾಜವಾದಿ ಹೋರಾಟಗಳು, ಭಾಷಾ ಚಳವಳಿ, ಅಂತರ್ ಜಾತೀಯ ಮದುವೆಗಳು, ಸರಳ ಮದುವೆಗಳು, ಜಾತಿ ವಿನಾಶ ಕಾರ್ಯಕ್ರಮಗಳು ಎಲ್ಲದರಲ್ಲಿಯೂ ತೊಡಗಿಕೊಂಡೆ.

ಶಾಮಣ್ಣ ಮುಂದೆ ಭಗವತಿಕೆರೆಯಲ್ಲಿ ಜಮೀನು ಕೊಂಡು ವ್ಯವಸಾಯ ಶುರುಮಾಡಿದ. ನಾನು ಕಡಿದಾಳಿನಲ್ಲಿ ತಂದೆಯವರ ಜೊತೆ ಜಮೀನು ನೋಡಿಕೊಳ್ಳುತ್ತಿದ್ದೆ. ಒಮ್ಮೊಮ್ಮೆ ನನಗೂ ತಂದೆಯವರಿಗೂ ಜಮೀನು ಮಾಡಿಸುವ ವಿಚಾರಗಳಲ್ಲಿ ಮತ್ತು ನಮ್ಮ ಸಾಮಾಜಿಕ ಚಟುವಟಿಕೆಗಳಲ್ಲಿಯೂ ಭಿನ್ನಾಭಿಪ್ರಾಯ ಬರಲು ಶುರುವಾಗುತ್ತಿತ್ತು. ಶಾಮಣ್ಣನೇ ಬಂದು ತಂದೆಯವರ ಜೊತೆ ಮಾತನಾಡಿ ಪರಿಹರಿಸುತ್ತಿದ್ದ. ಪದೇ ಪದೇ ಈ ರಗಳೆಯೇ ಬೇಡವೆಂದು ನನ್ನ ಇಚ್ಛೆಗನುಗುಣವಾಗಿ ಬದುಕಬೇಕೆಂದು ನಾನೀಗಿರುವಲ್ಲಿ ಬೀಳು ಜಮೀನು ಕೊಂಡು ವ್ಯವಸಾಯವನ್ನು ಶುರುಮಾಡಿದೆ.

೧೯೭೭ರ ನರಗುಂದ-ನವಲಗುಂದದಿಂದ ಶುರುವಾದ ರೈತ ಹೋರಾಟವು ಮುಂದೆ ಕರ್ನಾಟಕ ರಾಜ್ಯ ರೈತ ಸಂಘವು ಅಸ್ತಿತ್ವಕ್ಕೆ ಬಂದು ಅದರ ಅಡಿಯಲ್ಲಿ ರಾಜ್ಯಾದ್ಯಂತ ರೈತ ಹೋರಾಟ ಶುರುವಾಯಿತು. ತೀರ್ಥಹಳ್ಳಿಯಲ್ಲೂ ಸುಮಾರು ಮೂರು ವರ್ಷಗಳ ಕಾಲ ಶಾಮಣ್ಣನ ಮಾರ್ಗದರ್ಶನದಲ್ಲಿ ನಾನು ತಾಲೂಕು ರೈತ ಸಂಘದ ಸಂಚಾಲಕನಾಗಿ ಕೆಲಸ ಮಾಡಿದ್ದೆ. ರೈತ ಸಂಘವು ಅನೇಕ ನಿರ್ಧಾರಗಳನ್ನು ತೆಗೆದುಕೊಂಡಿತ್ತು. ಅದರಲ್ಲಿ ರೈತರು ಸರ್ಕಾರದಿಂದ ಬ್ಯಾಂಕ್, ಸೊಸೈಟಿಗಳಲ್ಲಿ ಪಡೆದ ಯಾವುದೇ ಸಾಲವನ್ನು ಕಟ್ಟಬಾರದೆಂದು ಕರೆ ಕೊಟ್ಟಿತು. ನನ್ನ ಜಮೀನಿನ ನಿರ್ವಹಣೆಗಾಗಿ ನಾನು ಪಿ.ಎಲ್.ಡಿ. ಬ್ಯಾಂಕಿನಿಂದ ಸಾಲ ಪಡೆದಿದ್ದೆ.

ವರ್ಷವರ್ಷವೂ ಸಾಲದ ಕಂತು ಕಟ್ಟುವುದು ತಪ್ಪದೇ ಮಾಡಿಕೊಂಡು ಬರುತ್ತಿದ್ದೆ ಆಗಲೂ ಸಾಲದ ಕಂತು ಕಟ್ಟಿದೆ. ಶಾಮಣ್ಣ 'ನೀನು ರೈತ ಸಂಘದಲ್ಲಿದ್ದು, ಪದಾಧಿಕಾರಿಯೂ ಆಗಿದ್ದು ಸಾಲದ ಕಂತು ಕಟ್ಟಿದ್ದು ಸರಿಯಲ್ಲ' ಎಂದ. ನಾನು ಶಾಮಣ್ಣನಿಗೆ ಹೇಳಿದೆ: 'ಕಡಿಮೆ ಬಡ್ಡಿಯ ಸಹಕಾರಿ ಸಾಲಗಳನ್ನು ಮುಂದುವರಿಸದೇ ಹೋದರೆ ನಾವು ಖಾಸಗಿ ಸಾಲಕ್ಕೆ ಹೋಗಬೇಕಾಗುತ್ತೆ. ಬಡ್ಡಿ ಜಾಸ್ತಿ ತೆರಬೇಕಾಗುತ್ತೆ. ಯಾವತ್ತೋ ಒಂದು ದಿನ ಸಾಲ ಮನ್ನಾ ಆಗುತ್ತೆ ಎಂದು ಕುಳಿತರೆ ನಮ್ಮ ಕೃಷಿ ಅಭಿವೃದ್ಧಿ ಕುಂಠಿತಗೊಳ್ಳುತ್ತದೆ, ನಮ್ಮ ವ್ಯವಹಾರಗಳು ಹಾಳಾಗುತ್ತೆ, ಸಾಲ ಮನ್ನಾ ಒಂದೇ ರೈತರಿಗೆ ಪರಿಹಾರವಲ್ಲ, ಬೇರೆ ರೀತಿಯ ಪರ್ಯಾಯ ಯೋಜನೆಗಳ ಬಗ್ಗೆ ಆಲೋಚಿಸಬೇಕಷ್ಟೆ' ಎಂದೆ. ನಾನು ಪದಾಧಿಕಾರಿಯಾಗಿದ್ದು ರೈತ ಸಂಘಕ್ಕೆ ತೊಂದರೆಯಾಗುವುದು ಬೇಡವೆಂದು ರೈತಸಂಘದ ಸಕ್ರಿಯ ಚಟುವಟಿಕೆಗಳಿಂದ ಹಿಂದೆ ಸರಿದೆ. ಆದರೆ ರೈತಸಂಘವೇ ನನಗೆ ಕಲಿಸಿದ "ರೈತರು ಉತ್ಪಾದಿಸಿದ ಉತ್ಪನ್ನಗಳಿಗೆ ರೈತರೇ ಬೆಲೆ ನಿರ್ಧರಿಸಿ ಮಾರಾಟ ಮಾಡುವಂತಾಗಬೇಕು ಆಗಲೇ ರೈತರ ಉದ್ಧಾರ" ಎಂಬ ಪಾಠವೊಂದನ್ನು ಮಾತ್ರ ಮರೆಯಲಿಲ್ಲ. ಮುಂದೆ ನಾನು ವಿಹಂಗಮ ನರ್ಸರಿ ಹೆಸರಿನಲ್ಲಿ ತೋಟಗಾರಿಕೆ ಬೆಳೆಗಳು, ಅಮೂಲ್ಯ ಕಾಡುತ್ಪನ್ನಗಳ ಬೆಳೆಗಳು, ಆಲಂಕಾರಿಕಾ ಗಿಡಗಳ ಸಸ್ಯೋತ್ಪಾದನೆ ಮಾಡಿ ನನ್ನ ಉತ್ಪಾದನೆಯ ಗಿಡಗಳಿಗೆ ನಾನೇ ಬೆಲೆ ಕಟ್ಟಿ ರಾಜ್ಯಾದ್ಯಂತ ಮಾರಾಟ ಮಾಡಿದೆ. ನನ್ನ ಅಭಿವೃದ್ಧಿಯನ್ನು ನೋಡಿದ ಶಾಮಣ್ಣ, ಅವನ ಸ್ನೇಹಿತರು, ರೈತರು, ಹೋರಾಟಗಾರರನ್ನು ನನ್ನ ವಿಹಂಗಮ ಫಾರಂಗೆ ಕರೆದುಕೊಂಡು ಬಂದು ನಾನು ಮಾಡುತ್ತಿರುವ ಹೊಸ ಆವಿಷ್ಕಾರಗಳನ್ನು ತೋರಿಸಿ ಸಂತೋಷಪಡುತ್ತಿದ್ದ. ಶಾಮಣ್ಣ ಆಗಲೇ ಅವನ ಕಾರ್ಯಕ್ಷೇತ್ರದಲ್ಲಿ ಕೆಲಸ ಮಾಡುತ್ತ ಕರ್ನಾಟಕ ರಾಜ್ಯಾದ್ಯಂತ ಕಡಿದಾಳು ಶಾಮಣ್ಣನೆಂದು ಗುರುತಿಸಲ್ಪಟ್ಟಿದ್ದ.

ನಮ್ಮ ಮನೆಗಳಲ್ಲಿಯೇ ಕುಟುಂಬದ ಬೇರೆಲ್ಲರ ಅಭಿಪ್ರಾಯಗಳಿಗೆ ಸೈದ್ಧಾಂತಿಕ ಭಿನ್ನಾಭಿಪ್ರಾಯ ವ್ಯಕ್ತಪಡಿಸುತ್ತಿದ್ದವರು ಶಾಮಣ್ಣ ಮತ್ತು ನಾನು. ಸಮಾಜವಾದ, ಅದ್ದೂರಿ ಮದುವೆ, ವೈಚಾರಿಕತೆ ಇಂತಹ ಯಾವುದೇ ವಿಚಾರಗಳಲ್ಲಿ ತೀವ್ರತರವಾಗಿ ನಮ್ಮ ಭಿನ್ನಾಭಿಪ್ರಾಯವನ್ನು ವ್ಯಕ್ತಪಡಿಸುತ್ತಿದ್ದೆವು. ವರ್ಣಾಶ್ರಮ ಧರ್ಮವನ್ನು ಒಪ್ಪಿಕೊಂಡು ನಡೆಯುವ ಯಾವ ಕಾರ್ಯಕ್ರಮಗಳಿಗೂ ಅಂದಿನಿಂದ ಇಲ್ಲಿಯವರೆಗೂ ಶಾಮಣ್ಣ, ನಾನು ಭಾಗವಹಿಸಿಲ್ಲ. ಕುಟುಂಬದ ಬಹಳಷ್ಟು ಸದಸ್ಯರು ಮಂತ್ರ ಮಾಂಗಲ್ಯ ಮೂಲಕ ಮದುವೆಗಳಾದರು. ಸಾಕಷ್ಟು ಸುಧಾರಣೆಗಳು ಅನುಷ್ಠಾನಗೊಂಡವು. ನಮ್ಮ ತಂದೆಯವರೇ ಮುಂದೆ ನಿಂತು ಮಂತ್ರ ಮಾಂಗಲ್ಯ ಮದುವೆಗಳನ್ನು ನಡೆಸುತ್ತಿದ್ದರು.

ಹೀಗಿರುವಂತಹ ಸಂದರ್ಭದಲ್ಲಿ ನನಗೂ ಶಾಮಣ್ಣನಿಗೂ ನಾವು ಆಗುಂಬೆಯಲ್ಲಿ ಮೇಘ ರಿಸಾರ್ಟ್ಸ್ ಹೆಸರಿನಲ್ಲಿ ಪ್ರಾರಂಭಿಸುತ್ತಿರುವ ಪ್ರವಾಸೋದ್ಯಮದ ವಿಚಾರವಾಗಿ ಭಿನ್ನಾಭಿಪ್ರಾಯ ಬಂದು ಇಬ್ಬರೂ ಮುಖಾಮುಖಿಯಾದದ್ದು ಇತಿಹಾಸ. ಈ ವಿಚಾರವನ್ನು ನಾನು ಇಲ್ಲಿ ಪ್ರಸ್ತಾಪಿಸಲೇಬಾರದೆಂದುಕೊಂಡಿದ್ದೆ. ಆದರೆ ಶಾಮಣ್ಣನಿಗೂ ನನಗೂ ಆಪ್ತರಾಗಿರುವ ವಿಚಾರವಂತ ಗೆಳೆಯರು ನೀವು ಇದನ್ನು ದಾಖಲು ಮಾಡುವುದು ಒಳ್ಳೆಯದು ಎಂದರು. ಶಾಮಣ್ಣನ ಅಭಿವ್ಯಕ್ತಿಯ ವಿವಿಧ ಆಯಾಮಗಳಲ್ಲಿ ಇದೂ ಕೂಡ ಒಂದಾದ್ದರಿಂದ ಬರೆಯುತ್ತಿರುವೆನು.

೧೯೯೫ನೆ ಇಸವಿ, ಶಿವಮೊಗ್ಗದಲ್ಲಿ ತ್ಯಾನಂದೂರು ವೈ.ಎಸ್.ಪುಟ್ಟಣ್ಣನವರ ಮನೆಯಲ್ಲಿ ಶಾಮಣ್ಣ ಸಿಕ್ಕಿದ್ದ. ಪುಟ್ಟಣ್ಣನವರು ಕಾಡು ಹಕ್ಕಿಗಳ ಧ್ವನಿಗಳನ್ನು ಟೇಪ್ ರಿಕಾರ್ಡ್ ಮಾಡಿದ್ದು ಬಹಳ ಚೆನ್ನಾಗಿದೆಯೆಂದು ಮಾತನಾಡುತ್ತಿದ್ದರು. ನಾನು ಮಧ್ಯದಲ್ಲಿ ಬಾಯಿ ಹಾಕಿ ಆಗುಂಬೆಯಲ್ಲಿ ನಾವೊಂದು ಜಾಗವನ್ನು ಖರೀದಿ ಮಾಡಿದ್ದೇವೆ. ಒಂದು ರಾತ್ರಿ ಅಲ್ಲಿ ವಾಸ್ತವ್ಯವನ್ನೂ ಮಾಡಿದ್ದೇನೆ. ರಾತ್ರಿಯೆಲ್ಲ ವಿವಿಧ ಕೀಟಗಳ ಶಬ್ದ, ಚಟುವಟಿಕೆಗಳು ಬೆಳಗ್ಗೆ ೫ ಗಂಟೆಗೆಲ್ಲ ತರತರದ ಹಕ್ಕಿಗಳ ಕೂಗು ಕಲರವ ಶುರುವಾಗುತ್ತದೆ. ಬಹಳ ಅದ್ಭುತ ಅನುಭವವಾಯಿತೆಂದೆ. ಕೂಡಲೇ ಶಾಮಣ್ಣ ಮತ್ತು ಪುಟ್ಟಣ್ಣನವರು ನಾವೂ ಬರುತ್ತೇವೆ, ಆಗುಂಬೆಗೆ ಹೋಗೋಣವೆಂದರು. ಒಂದು ದಿನ ಬೆಳಗ್ಗೆ ೫ ಗಂಟೆಗೆಲ್ಲ ಆಗುಂಬೆಯ ಆ ಜಾಗದಲ್ಲಿದ್ದೆವು. ಪುಟ್ಟಣ್ಣನವರು ಟೇಪ್ ರಿಕಾರ್ಡರ್ ಆನ್ ಮಾಡಿಕೊಂಡು ಹಕ್ಕಿಗಳ ಧ್ವನಿಗಳನ್ನು ರಿಕಾರ್ಡ್ ಮಾಡಿಕೊಳ್ಳುತ್ತಿದ್ದರು. ನಿತ್ಯಹರಿದ್ವರ್ಣದ ಕಾಡುಗಳಲ್ಲಿನ ಕೆಲವು ಹಕ್ಕಿಗಳು ನಮ್ಮ ಪ್ರದೇಶದಲ್ಲಿಲ್ಲ. ಹಾಗಾಗಿ ಆ ದಿನ ಪುಟ್ಟಣ್ಣನವರಿಗೆ ಕೆಲವು ವಿಶೇಷ ಹಕ್ಕಿಗಳ ಹೊಸ ಧ್ವನಿಗಳನ್ನು ರಿಕಾರ್ಡ್ ಮಾಡಿಕೊಳ್ಳಲು ಅನುಕೂಲವಾಯಿತು. ಬೆಳಗ್ಗೆ ೭ ಗಂಟೆಯವರೆಗೂ ಅಲ್ಲಿದ್ದು ಹೊರಡುವ ಹೊತ್ತಿಗೆ ಪುಟ್ಟಣ್ಣನವರು ಕೇಳಿದರು. 'ಏತಕ್ಕಾಗಿ ಈ ಜಾಗವನ್ನು ತೆಗೆದುಕೊಂಡಿದ್ದೀರೆಂದು'. ಪ್ರವಾಸೋದ್ಯಮದ ಉದ್ದೇಶಕ್ಕಾಗಿ ೩ ಎಕರೆ ಖಾಸಗಿ ಜಮೀನನ್ನು ಕೊಂಡಿರುವುದಾಗಿ ತಿಳಿಸಿದೆ. 'ಈ ಜಾಗದಲ್ಲಿ ಪ್ರವಾಸೋದ್ಯಮ ಮಾಡಿದರೆ ಪ್ರವಾಸಿಗಳೇನೋ ಬರುತ್ತಾರೆ. ಆದರೆ ಈ ಪ್ರದೇಶಕ್ಕೆ ಧಕ್ಕೆ ತರುತ್ತಾರೋ ಹೇಗೆ' ಎಂದ ಶಾಮಣ್ಣ. ಅದು ನಾವು ನಿರ್ವಹಿಸುವುದರ ಮೇಲಿದೆ. ಜಮೀನನ್ನು ಕೊಂಡುಕೊಳ್ಳುವ ಮುಂಚೆ ಅದರ ಸಾಧಕ ಬಾಧಕಗಳನ್ನು ಯೊಚಿಸಿದ್ದೇವೆ ಮತ್ತು ಈಗಾಗಲೇ ದೇಶದ ಇಂತಹ ಪ್ರದೇಶಗಳಲ್ಲಿ ಮಾಡಿರುವ ಸ್ಥಳಗಳಲೆಲ್ಲ ಪ್ರವಾಸ ಮಾಡಿ ಅಧ್ಯಯನ ಮಾಡಿದ್ದೇವೆ. ಊರಿಗೂ ತೊಂದರೆಯಾಗಬಾರದೆಂದು ೩.ಕಿ.ಮೀ ದೂರದಲ್ಲಿ ಪ್ರಾರಂಭಿಸುತ್ತಿರುವುದು. ಕಾಡಿಗೂ ಧಕ್ಕೆ ಬರಬಾರದೆಂದು ಕಾಡಂಚಿನಲ್ಲಿ ಆಗುಂಬೆ– ತೀರ್ಥಹಳ್ಳಿ

ಮುಖ್ಯ ರಸ್ತೆಯಿಂದ ಕೇವಲ ೩೦೦ ಮೀಟರ್ ದೂರದಲ್ಲಿ ಮಾಡುತ್ತಿರುವುದು. ಈ ಜಾಗದಲ್ಲಿರುವ ಒಂದೇ ಒಂದು ಮರಗಿಡವನ್ನೂ ಕಡಿಯದೇ ಹಾಗೇ ೩ ಹೆಂಚಿನ ಕಟ್ಟಡಗಳನ್ನು ಕಟ್ಟುವುದಷ್ಟೆ. ಮುಖ್ಯ ರಸ್ತೆಯಿಂದ ಈ ಜಾಗಕ್ಕೆ ಬರುವ ಈ ಗಾಡಿ ರಸ್ತೆಯನ್ನು ಸಹ ಹೀಗೇ ಮುಂದುವರಿಸಿಕೊಂಡು ಹೋಗುತ್ತೇವೆ. ಈ ಉದ್ಯಮದ ಜೊತೆಗಿರುವವರು ಎಲ್ಲರೂ ತೀರ್ಥಹಳ್ಳಿ ತಾಲೂಕಿನ ವ್ಯವಸಾಯಗಾರರು, ಪರಿಸರಾಸಕ್ತರು, ನಮ್ಮ ಉದ್ಯಮದ ಬಗ್ಗೆ ಸ್ಥಳೀಯ ನಾಗರಿಕರನ್ನು ಭೇಟಿ ಮಾಡಿ ಚರ್ಚಿಸಿ ತೀರ್ಮಾನ ಕೈಗೊಂಡಿರುವುದಾಗಿ ತಿಳಿಸಿದೆ. ಮತ್ತೇನೂ ಹೆಚ್ಚಿಗೆ ಮಾತನಾಡದೆ ಹೊರಟು ಬಂದೆವು. ಸುಮಾರು ಎರಡು ವರ್ಷಗಳು ಕಳೆದಿರಬಹುದು. ಈ ಮಧ್ಯದಲ್ಲಿ ನಾವು ಕೊಂಡಿರುವ ಕೃಷಿ ಭೂಮಿಯನ್ನು ಪ್ರವಾಸೋದ್ಯಮದ ಉದ್ದೇಶಕ್ಕೆ ಭೂ ಪರಿವರ್ತನೆಯನ್ನು ಮಾಡಿಸಿಕೊಂಡು ಪಂಚಾಯ್ತಿ ಅನುಮತಿಯನ್ನು ಪಡೆದು ೧೩ ಚದರದ ಮತ್ತು ೬ ಚದರದ ಎರಡು ಹೆಂಚಿನ ಕಟ್ಟಡಗಳನ್ನು ಕಟ್ಟಿ ನಂತರ ೮ ಚದರದ ಕಟ್ಟಡವನ್ನು ಕಟ್ಟುತ್ತಿದ್ದೆವು. ಒಟ್ಟು ನಮ್ಮ ಕಟ್ಟಡಗಳು ಇವು ಮೂರು.

೧೯೯೭ರ ಒಂದು ದಿನ ಶಾಮಣ್ಣ ಫೋನ್ ಮಾಡಿ "ನಮ್ಮ ಕರ್ನಾಟಕ ವಿಮೋಚನಾ ರಂಗದ ಸುಂದರ್, ರೈತ ಸಂಘದ ಕೆ.ಟಿ. ಗಂಗಾಧರ್, ಬಸವರಾಜಪ್ಪ ಮುಂತಾದವರು. ನಿಮ್ಮ ಮೇಘ ರಿಸಾರ್ಟ್ಸ್‌ನವರ ಜೊತೆ ಮಾತನಾಡಲು ತೀರ್ಥಹಳ್ಳಿಗೆ ಬರುತ್ತಿದ್ದಾರೆ, ನೀವುಗಳು ಸ್ವಲ್ಪ ಬಿಡುವು ಮಾಡಿಕೊಂಡು ಭೇಟಿಯಾಗಬೇಕಲ್ಲ" ಎಂದ. 'ಆಗಬಹುದು ಬನ್ನಿ' ಎಂದೆವು. ಹೇಳಿದಂತೆ ಒಂದು ದಿನ ಬಂದರು. ಕೆ.ಟಿ. ಗಂಗಾಧರ್ "ನೋಡಿ ದಯಾನಂದ್, ನೀವು ಮೊದಲಿನಿಂದಲು ನಮ್ಮ ಚಳವಳಿ ಜೊತೆ ಇದ್ದವರು. ಹಾಗಾಗಿ ನಿಮ್ಮ ಜೊತೆ ಮಾತನಾಡಿ ಮುಂದುವರಿಯೋಣ ವೆಂದು ಬಂದಿದ್ದೇವೆ, ನೀವು ಮೇಘ ರಿಸಾರ್ಟ್ಸ್ ಹೆಸರಿನಲ್ಲಿ ಆಗುಂಬೆಯಲ್ಲಿ ಮಾಡುತ್ತಿರುವ ಪ್ರವಾಸೋದ್ಯಮ ಪರಿಸರದ ಸಂಸ್ಥೆಯ ದೃಷ್ಟಿಯಿಂದ ಬೇಡವೆಂದು ನಾವೆಲ್ಲ ಭಾವಿಸಿದ್ದೇವೆ. ನೀವು ಆ ಯೋಜನೆಯನ್ನು ಕೈ ಬಿಡಬೇಕು' ಎಂದರು. ಶಾಮಣ್ಣನವರು ಕೂಡ ಹೀಗೆ ಬಯಸುತ್ತಾರೆಂದರು. 'ನೋಡಿ ಗಂಗಾಧರ್, ಈ ಜಮೀನನ್ನು ನಾವು ಕೊಂಡ ಸಮಯದಲ್ಲೇ ಎರಡು ವರ್ಷಗಳ ಹಿಂದೆ ಶಾಮಣ್ಣ ಮತ್ತು ತ್ಯಾನಂದೂರು ಪುಟ್ಟಣ್ಣನವರು ನಮ್ಮ ಈ ಜಾಗಕ್ಕೆ ಬಂದಿದ್ದರು. ಆವಾಗಲೇ ನಾವು ಅಲ್ಲಿ ಪ್ರವಾಸೋದ್ಯಮ ಮಾಡುವ ಉದ್ದೇಶವನ್ನು ತಿಳಿಸಿದ್ದೆ. ಆ ಸಮಯ ದಲ್ಲಾಗಲಿ ಅಥವಾ ನಂತರದ ದಿನಗಳಲ್ಲಾಗಲಿ ನಮಗೆ ಏನೂ ತಿಳಿಸದೆ ಈಗ ನಾವು ಪ್ರವಾಸೋದ್ಯಮದ ಉದ್ದೇಶಕ್ಕೆ ಭೂಮಿಯನ್ನು ಪರಿವರ್ತಿಸಿ, ಪಂಚಾಯ್ತಿ ಅನುಮತಿಯನ್ನು ಪಡೆದು ಕಟ್ಟಡಗಳನ್ನು ಕಟ್ಟಿದ ಸಮಯದಲ್ಲಿ ಶಾಮಣ್ಣನೂ ಹೀಗೆ ಅಭಿಪ್ರಾಯಿಸುತ್ತಾನೆಂದರೆ ನನಗೆ ಅರ್ಥವೇ ಆಗುತ್ತಿಲ್ಲ. ನಮ್ಮದು ಕಂಪೆನಿ.

ನಾನೊಬ್ಬ ತೀರ್ಮಾನ ತೆಗೆದುಕೊಳ್ಳಲು ಈ ಸಂದರ್ಭದಲ್ಲಿ ಆಗದು. ಕಂಪೆನಿಯ ಜೊತೆ ಮಾತನಾಡಿ ನಿಮಗೆ ತಿಳಿಸುತ್ತೇನೆಂದೆ.' ಆಗಬಹುದು ಎಂದು ಹೊರಟು ಹೋದರು. ನಂತರ ಕೆಲ ದಿನಗಳಲ್ಲಿ ಕೆ.ಟಿ. ಗಂಗಾಧರ್ ಶಿವಮೊಗ್ಗದಲ್ಲಿ ಸಿಕ್ಕವರು 'ಒಂದು ಕೆಲಸ ಮಾಡೋಣ ದಯಾನಂದ್, ನಮ್ಮ ಪೂರ್ಣಚಂದ್ರ ತೇಜಸ್ವಿಯವರನ್ನು ಮಧ್ಯದಲ್ಲಿಟ್ಟುಕೊಂಡು ನಿಮ್ಮ ಸಮಸ್ಯೆಯನ್ನು ಬಗೆಹರಿಸೋಣ'. ಈ ಬಗ್ಗೆ ಶಾಮಣ್ಣ, ಸುಂದರ್ ಅಭಿಪ್ರಾಯ ಕೇಳೋಣವೆಂದು ನಾವು ಶಾಮಣ್ಣ, ಸುಂದರ್‌ರನ್ನು ಭೇಟಿಯಾದೆವು. ಶಾಮಣ್ಣ-ಸುಂದರ್ ಇಬ್ಬರೂ ತೇಜಸ್ವಿ ಮಧ್ಯಸ್ಥಿಕೆಗೆ ಒಪ್ಪಿಕೊಂಡರು. ನಾನು ತೇಜಸ್ವಿಯವರಲ್ಲಿಗೆ ಹೋಗಿ, ಮಾತನಾಡಿದೆ, ತೇಜಸ್ವಿಯವರು ತಮಾಷೆಯಾಗಿ 'ಈ ಚಳವಳಿಗಾರರು ಬೆನ್ನತ್ತಿದಾಗ ಸ್ವಲ್ಪ ಕಾಲ ಸುಮ್ಮನಿದ್ದು ಬಿಡು. ಏನೂ ಮಾಡಬೇಡ, ನಿಧಾನ ಒಂದು ಮಳೆಗಾಲ ಕಳೆದರೆ ಈ ಚಳವಳಿಗಳು ನಾಪತ್ತೆಯಾಗಿ ಬಿಡುತ್ತವೆ. ನಿನ್ನ ಸಮಸ್ಯೆ ಬಗೆ ಹರಿಯುತ್ತದೆ' ಎಂದರು. ತೇಜಸ್ವಿಯವರ ಕಾದಂಬರಿ ಮಾಯಾಲೋಕದಲ್ಲಿ ಈ ಅಭಿಪ್ರಾಯ ನಿರೂಪಿಸಿದ್ದಾರೆ. ಬರೆ ಜಮೀನಾಗಿದ್ದರೆ ಹಾಗೆ ಮಾಡಬಹುದಿತ್ತು. ಕಟ್ಟಡಗಳನ್ನು ಅರ್ಧ ಕಟ್ಟಿ ನಿಲ್ಲಿಸಿದ್ದು, ಅವು ಆಗುಂಬೆ ಮಳೆಗೆ ಪೂರ್ಣ ಕೊಚ್ಚಿಕೊಂಡು ಹೋಗುತ್ತವೆಯೆಂದೆ. ಹಾಗಾದರೆ ಇದು ತಾಂತ್ರಿಕ ಸಮಸ್ಯೆ. ನಮ್ಮಲ್ಲೊಬ್ಬರು ಪೊಲ್ಯುಷನ್ ಬೋರ್ಡ್ ಮೆಂಬರಿದ್ದಾರೆ. ಕೃಷಿ ವಿಜ್ಞಾನಿ ಕೆಂಜಿಗೆ ಪ್ರದೀಪನಿದ್ದಾನೆ. ಇವರಿಬ್ಬರನ್ನೂ ಕಳಿಸಿಕೊಡುತ್ತೇನೆಂದು ತಿಳಿಸಿದರು. ಅಲ್ಲೇ ಇದ್ದ ಕೆಂಜಿಗೆ ಪ್ರದೀಪ್, ಇದು ನಾನು ಹೋಗಿ ತೀರ್ಮಾನಿಸುವ ಕೆಲಸವಲ್ಲವೆಂದರು. ಒಟ್ಟಿನಲ್ಲಿ ತೇಜಸ್ವಿಯವರು ಬರಲಿಲ್ಲ. ಇದು ಹೀಗೆಯೇ ಮುಂದುವರಿಯುತ್ತಿರಬೇಕಾದರೆ ಇಂಡಿಯನ್ ಎಕ್ಸ್‌ಪ್ರೆಸ್ ಪತ್ರಿಕೆಯಲ್ಲಿ "ಆಗುಂಬೆಯಲ್ಲಿ ಪ್ರವಾಸೋದ್ಯಮ ಬಂದಲ್ಲಿ ಪಶ್ಚಿಮ ಘಟ್ಟದ ಕಾಡುಗಳು ಹಾಳಾಗುತ್ತದೆ, ಆಗುಂಬೆಯೂ ಕೇರಳದ ಕೊವಲಂ ತರವೇ ಹಾಳಾಗುತ್ತದೆ" ಎಂಬ ಶೀರ್ಷಿಕೆಯಲ್ಲಿ ಪಶ್ಚಿಮ ಘಟ್ಟದ ಫೋಟೋ ಒಂದನ್ನು ಹಾಕಿ ಲೇಖನ ಪ್ರಕಟಿಸಿತ್ತು. ಬೆಂಗಳೂರಿನ ಕೃಷ್ಣಭಟ್ಟ ಎಂಬುವವರು ಈ ಇಂಡಿಯನ್ ಎಕ್ಸ್‌ಪ್ರೆಸ್ ಪತ್ರಿಕೆಯಲ್ಲಿ ಬಂದ ಸುದ್ದಿಯನ್ನಾಧರಿಸಿ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ಸಾರ್ವಜನಿಕ ಹಿತಾಸಕ್ತಿಯ ಅರ್ಜಿಯನ್ನು ಹಾಕಿ ಮೇಘ ರಿಸಾರ್ಟ್ಸ್‌ನವರು ಮಾಡುತ್ತಿರುವ ಪ್ರವಾಸೋದ್ಯಮ ಚಟುವಟಿಕೆಗಳನ್ನು ನಿಲ್ಲಿಸಬೇಕೆಂದು ಕೇಳಿಕೊಂಡು, ಈ ದಾವೆಗೆ ಮೇಘ ರಿಸಾರ್ಟ್ಸ್ ಮತ್ತು ಅರಣ್ಯ ಇಲಾಖೆಯನ್ನು ಪ್ರತಿವಾದಿಗಳನ್ನಾಗಿ ಮಾಡಿತ್ತು. ಅರಣ್ಯ ಇಲಾಖೆಯವರು ಹಾಕಿದ ಅಫಿಡವಿಟ್‌ನ ಮಾಹಿತಿಗಳ ಅನುಸಾರ ಕೋರ್ಟ್ ಕೃಷ್ಣಭಟ್‌ರವರ ಸಾರ್ವಜನಿಕ ಹಿತಾಸಕ್ತಿಯ ಅರ್ಜಿಯನ್ನು ವಜಾಗೊಳಿಸಿತು. ನಾವು ನಮ್ಮ ಕಟ್ಟಡಗಳ ಕಾಮಗಾರಿಯನ್ನು ಮುಂದುವರೆಸಿದೆವು. ಒಂದು ವರ್ಷ ಬಿಟ್ಟು ರಾಜ್ಯ ಹೈಕೋರ್ಟ್‌ಗೆ

ಕೆ.ವಿ. ಸುಬ್ಬಣ್ಣರವರನ್ನು ಮುಂದಿಟ್ಟುಕೊಂಡು ಕರ್ನಾಟಕ ವಿಮೋಚನಾ ರಂಗ, ಕರ್ನಾಟಕ ರಾಜ್ಯ ರೈತ ಸಂಘ ಮತ್ತು ಕೆಲವು ಸ್ಥಳೀಯ ಸಂಘಟನೆಗಳ ವತಿಯಿಂದ ಮತ್ತೆ ಮೇಘ ರಿಸಾರ್ಟ್ಸ್ ಪ್ರಾರಂಭಿಸುತ್ತಿರುವ ಪ್ರವಾಸೋದ್ಯಮವನ್ನು ನಿಲ್ಲಿಸಬೇಕೆಂದು ಸಾರ್ವಜನಿಕ ಹಿತಾಸಕ್ತಿಯ ಅರ್ಜಿಯನ್ನು ಹಾಕಿತು. ಒಂದು ಸಾರಿ ಇದೇ ವಿಚಾರವಾಗಿ ಹೈಕೋರ್ಟ್‌ನಲ್ಲಿ ಸಾರ್ವಜನಿಕ ಅರ್ಜಿ ಬಂದು ವಜಾಗೊಂಡಿರುವುದರಿಂದ ಮತ್ತೆ ಹಾಕಿದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯು ಮಾನ್ಯವಾಗದೆ ವಜಾಗೊಂಡಿತು.

ಕೆಲವು ತಿಂಗಳುಗಳ ನಂತರ ಶಾಮಣ್ಣನೇ ನನಗೊಂದು ಪತ್ರ ಬರೆದು "ನಿಮ್ಮ ಆಗುಂಬೆ ಪ್ರವಾಸೋದ್ಯಮದ ವಿಚಾರವಾಗಿ ಕೆ.ವಿ.ಸುಬ್ಬಣ್ಣರವರ ಜೊತೆ ಮಾತನಾಡಿದ್ದೇನೆ. ಒಂದು ದಿನ ಕೆ.ವಿ. ಸುಬ್ಬಣ್ಣನವರು, ಯು.ಆರ್. ಅನಂತಮೂರ್ತಿಯವರು ಹಾಗೆ ಮುದೆನೂರು ಸಂಗಣ್ಣ, ಡಿ.ವಿ.ಎಸ್ ಕಾಲೇಜು ಪ್ರಾಂಶುಪಾಲರಾದ ವೆಂಕಟೇಶ್ ಮೊದಲಿಯಾರ್‌ರವರೊಂದಿಗೆ ನಾನೂ ಬರುತ್ತೇನೆ. ನಿಮ್ಮ ಸ್ಥಳದಲ್ಲಿಯೇ ಚಿಂತಿಸಿ ನಿಮ್ಮ ವ್ಯವಸ್ಥೆಯನ್ನೂ ಉಳಿಸಿಕೊಂಡು ಏನಾದರೊಂದು ಮಾರ್ಗ ಹುಡುಕೋಣ, ಆ ದಿನದ ತೀರ್ಮಾನವೇ ನಮ್ಮ ಕಡೆಯವರಿಗೆ ಅಂತಿಮವೆಂದ್ರೆ ಅದನ್ನು ತಿಳಿಸು. ನಮ್ಮ ಪ್ರಯತ್ನ ನಿಲ್ಲಿಸಿ ಬಿಡುತ್ತೇವೆ" ಎಂದು ತಿಳಿಸಿದ್ದ. ನಾನು ನಮ್ಮವರನ್ನೆಲ್ಲ ಕೇಳಿ ಆಗಬಹುದು, ನಾವು ಬಗೆಹರಿಸಿಕೊಳ್ಳಲು ಸಿದ್ಧರಿದ್ದೇವೆಂದು ತಿಳಿಸಿದೆ. ತಿಳಿಸಿದಂತೆಯೇ ಅನಂತಮೂರ್ತಿಯವರು, ಕೆ.ವಿ. ಸುಬ್ಬಣ್ಣನವರು, ಶಾಮಣ್ಣನೊಂದಿಗೆ ಆಗುಂಬೆಯ ನಮ್ಮ ಸ್ಥಳಕ್ಕೆ ಬಂದರು. ಶಾಮಣ್ಣನೇ ಅವರಿಗೆ ಮನವರಿಕೆ ಮಾಡಿದ. ಇವರು ತಮ್ಮ ಜಾಗವಲ್ಲದೆ ಸರ್ಕಾರಿ ಜಾಗವನ್ನಾಗಲಿ, ಅರಣ್ಯ ಇಲಾಖೆಯ ಜಾಗವನ್ನಾಗಲಿ ಒತ್ತುವರಿ ಮಾಡಿಲ್ಲ, ಹೇಳಿದಂತೆ ಒಂದೇ ಒಂದು ಮರ ಗಿಡಗಳನ್ನೂ ಕಡಿದಿಲ್ಲ. ಅವರ ಜಾಗಕ್ಕೆ ಬೇಲಿ ಹಾಕಿಕೊಂಡಿದ್ದಾರೆ. ಊರಿಗೆ ೩ಕಿ.ಮೀ ದೂರದಲ್ಲಿದೆ, ಜನರೂ ಕೂಡಾ ನಾವು ತಿಳಿದಂತೆ ಅವರಿಗೆ ವಿರೋಧ ಮಾಡುತ್ತಿಲ್ಲ. ಇದು ನನ್ನ ಗಮನಕ್ಕೂ ಬಂದಿದೆ ಎಂದ. ಕೆ.ವಿ. ಸುಬ್ಬಣ್ಣನವರು ನಿಮ್ಮಿಂದ ಕಾಡಿಗೆ ಧಕ್ಕೆಯಾಗಬಾರದು, ಸಂಸ್ಕೃತಿಯೂ ಹಾಳಾಗಬಾರದೆಂದರು. 'ಖಂಡಿತ ಭರವಸೆ ಕೊಡುತ್ತೇನೆ, ನಾವೆಲ್ಲರೂ ಒಳ್ಳೆಯ ಸಂಸ್ಕೃತಿಯಿಂದಲೇ ಬಂದವರು. ನೈತಿಕತೆ ಎಂಬುದು ನಮ್ಮಲ್ಲಿಯೂ ಇದೆ, ಅಂತಹ ಪರಿಸ್ಥಿತಿಗೆ ಹೋದರೆ ಆವಾಗ ನಮ್ಮನ್ನು ಕೇಳಿ. ನಮಗೆ ನೀವುಗಳು ಹೇಳಿದರೆ ಸಾಕು. ಆ ಹಕ್ಕು ನಿಮಗೆ ಇದ್ದೇ ಇದೆ' ಎಂದೆ. ಅನಂತಮೂರ್ತಿಯವರು 'ಪ್ರವಾಸೋದ್ಯಮವೆಂದು ನೀವು ದಾರಿ ಹೋಕರಿಗೆಲ್ಲ ಆಹ್ವಾನಿಸಬೇಡಿ, ಸದಸ್ಯತ್ವ ಮಾಡಿ ನಿಯಂತ್ರಿಸಿರಿ' ಎಂದರು. 'ನೀವು ತಿಳಿಸುವಂತೆ ನಾನು ಸದಸ್ಯರಿಗೆ ಮಾತ್ರ ಕೊಡುವುದು, ಮುಖ್ಯ ರಸ್ತೆಯಿಂದ ಯಾವ ವಾಹನವನ್ನೂ ಒಳಗೆ ತರುವುದಿಲ್ಲ, ಇದಕ್ಕಾಗಿ ಮುಖ್ಯ ರಸ್ತೆಯ ಬದಿಯಲ್ಲಿ

ಒಂದು ಎಕರೆ ಜಾಗವನ್ನು ಕೊಂಡಿದ್ದೇವೆ. ಅಲ್ಲಿಯೇ ಬಂದ ವಾಹನಗಳನ್ನು ನಿಲ್ಲಿಸುವುದು. ಈಗಿರುವಂತೆಯೇ ಮೊದಲಿನಿಂದಲೂ ಇರುವ ಗಾಡಿ ರಸ್ತೆಯನ್ನು ಇಟ್ಟುಕೊಳ್ಳುತ್ತೇವೆ. ಹಳ್ಳಕ್ಕೆ ಮೋರಿಯಾಗಲಿ, ಏನನ್ನೂ ಮಾಡುವುದಿಲ್ಲವೆಂದು ಆಶ್ವಾಸನೆಯನ್ನು ನೀಡಿದೆವು. ನಾವು ಮಾಡುತ್ತಿರುವ ಒಂದು ಸಣ್ಣ ಉದ್ಯಮಕ್ಕೆ ರಿಸಾರ್ಟ್ಸ್ ಎಂದು ಹೆಸರಿಸಿದ್ದೇ ತಪ್ಪಾಯಿತೇನೊ ಎಂದು ನಮ್ಮ ಭಾವನೆಯಾಗಿದೆ" ಎಂದೆ. ಸುಬ್ಬಣ್ಣನವರು, ಅನಂತಮೂರ್ತಿಗಳು, ಶಾಮಣ್ಣ ಎಲ್ಲರೂ ಆಗಬಹುದೆಂದು ಒಪ್ಪಿ ಹೊರಟು ಹೋದರು.

ಎಲ್ಲವೂ ಬಗೆ ಹರಿಯಿತಲ್ಲ ಎಂದು ಮೇಘ ರಿಸಾರ್ಟ್ಸ್‌ನ ಉದ್ಘಾಟನೆಯನ್ನು ನೆರವೇರಿಸಿದೆವು. ಇದಾಗಿ ಸ್ವಲ್ಪ ದಿನಗಳಲ್ಲಿಯೇ ನಮಗೆ ಸ್ಪೆಷಲ್ ಲೀವ್ ಪಿಟಿಷನ್ ಮೂಲಕ ಕೆ.ವಿ. ಸುಬ್ಬಣ್ಣನವರ ಹೆಸರಿನಲ್ಲಿ ೧೯೮೦ರ ಅರಣ್ಯ ಸಂರಕ್ಷಣೆಯ ಕಾಯಿದೆ ಉಲ್ಲಂಘನೆಯಾಗಿದೆಯೆಂದು ಸುಪ್ರೀಂಕೋರ್ಟ್‌ಗೆ ಮನವಿ ಮಾಡಿದ ಪ್ರಯುಕ್ತ ಮೇಘ ರಿಸಾರ್ಟ್ಸ್ ಚಟುವಟಿಕೆಗಳನ್ನು ನಿಲ್ಲಿಸಿ ವಿಚಾರಣೆ ನಡೆಸುವುದೆಂದು ಸುಪ್ರೀಂಕೋರ್ಟ್‌ನಿಂದ ನಮಗೆ ನೋಟೀಸ್ ಜಾರಿಯಾಯಿತು. ಇದರಿಂದ ಆಶ್ಚರ್ಯಗೊಂಡ ನಾನು ತಕ್ಷಣ ಶಾಮಣ್ಣನನ್ನು ಭೇಟಿಯಾಗಿ "ಇದೇನಿದು? ಮಾತುಕತೆಯೆಲ್ಲವೂ ಮಗಿಸಿ ಈಗ ಈ ರೀತಿ ಮಾಡಿದಿರಲ್ಲ!" ಎಂದು ಕೇಳಿದೆ. ಯಾರು ಸುಪ್ರೀಂಕೋರ್ಟಿಗೆ ಹೋಗಿದ್ದು ಎಂದಾಗ ಕೆ.ವಿ. ಸುಬ್ಬಣ್ಣನವರು ಎಂದೆ! ಆ ದಿನ ಸುಬ್ಬಣ್ಣನವರು ಅನಂತಮೂರ್ತಿಯವರು ಮಾತನಾಡಿ ಮುಗಿಸಿದಾಗಲೇ ಎಲ್ಲವೂ ಮುಗಿಯಿತೆಂದು, ನಮ್ಮವರಿಗೂ ಈ ವಿಷಯವನ್ನು ತಿಳಿಸಿದ್ದು, ಎಲ್ಲವೂ ಮುಗಿಯಿತೆಂದುಕೊಂಡಿದ್ದೆ. ಆದರೆ ಮುಂದೆ ಕೋರ್ಟ್‌ಗೆ ಹೋದ ವಿಚಾರ ಏನೂ ಗೊತ್ತಿಲ್ಲ. ನೀನು ಸುಬ್ಬಣ್ಣನವರನ್ನೇ ಕೇಳು ಎಂದ. ಯು.ಆರ್. ಅನಂತಮೂರ್ತಿಯವರನ್ನು ವಿಚಾರಿಸಿದಾಗ 'ಯಾವ ಸುಬ್ಬಣ್ಣ' ಎಂದರು. ಕೆ.ವಿ. ಸುಬ್ಬಣ್ಣನವರಂತೆ ಎಂದಾಗ "ನೀನು ಇನ್ನು ಯಾರ ಬಳಿಯೂ ಮಾತನಾಡಬೇಡ, ನಿನ್ನ ಕೇಸನ್ನು ಸುಪ್ರೀಂ ಕೋರ್ಟ್‌ನಲ್ಲಿ ಮುಂದುವರಿಸು" ಎಂದರು. ಆದರೂ ನಾವು ಸುಬ್ಬಣ್ಣನವರ ಬಳಿಗೆ ಹೋಗಿ ಕೇಳಿದೆವು. ನಾನು ಇದರಲ್ಲಿ ನೆಪ ಮಾತ್ರವೆಂದು ತಿಳಿಸಿದ ಸುಬ್ಬಣ್ಣನವರು, ಅ.ನ. ಯಲ್ಲಪ್ಪ ರೆಡ್ಡಿಯವರೊಂದಿಗೆ ಮಾತನಾಡಿ, ಅವರ ಸಹಾಯವನ್ನು ಪಡೆದುಕೊಳ್ಳಲು ಸೂಚಿಸಿದರು. ನಾವು ಯಲ್ಲಪ್ಪ ರೆಡ್ಡಿಯವರನ್ನು ಭೇಟಿಯಾಗಿ ಅವರ ಸಲಹೆಯನ್ನು ಪಡೆದು ಸುಪ್ರೀಂಕೋರ್ಟ್‌ನಲ್ಲಿ ಕೇಸ್ ನಡೆಸಿದೆವು. ಸ್ಥಳ ಪರಿಶೀಲನೆ ಮಾಡಿ ತಿಳಿದುಕೊಳ್ಳಬೇಕೆಂದು ಕಮಿಷನ್ ರಚಿಸಲು ಕೇಳಿದೆವು. ಕೋರ್ಟ್ ನಿರ್ದೇಶನದಂತೆ ಅರಣ್ಯ ಸಚಿವಾಲಯವು ಕೇಂದ್ರದಿಂದ ಕಮಿಷನ್‌ನ್ನು ಸ್ಥಳ ಪರಿಶೀಲನೆಗೆ ಕಳಿಸಿಕೊಟ್ಟಿತು. ಕಮಿಷನ್ ರಿಪೋರ್ಟ್‌ನಲ್ಲಿ ಈ ಸ್ಥಳವು

೧೯೮೦ರ ಅರಣ್ಯ ಸಂರಕ್ಷಣಾ ಕಾಯಿದೆಯ ವ್ಯಾಪ್ತಿಯಲ್ಲಿ ಬರುವುದಿಲ್ಲ, ರಿಸಾರ್ಟ್ಸ್‌ನ ಸುತ್ತಲೂ ಕಾಯ್ದಿರಿಸಿದ ಅರಣ್ಯವಿರುವುದರಿಂದ ಆ ಅರಣ್ಯಕ್ಕೆ ಧಕ್ಕೆ ಬರಬಹುದ್ದಾರಿಂದ ಈ ರಿಸಾರ್ಟ್ಸ್ ಮಾಡುತ್ತಿರುವ ಪ್ರದೇಶವನ್ನು ಕರ್ನಾಟಕ ಅರಣ್ಯ ಇಲಾಖೆಯು ಭೂಸ್ವಾಧೀನಪಡಿಸಿಕೊಂಡು ಅರಣ್ಯವೆಂದು ಘೋಷಿಸುವುದು ಒಳ್ಳೆಯದು ಎಂದು ವರದಿಯಲ್ಲಿ ತಿಳಿಸಿತು. ಅದರ ಸೂಚನೆಯಂತೆ ಕರ್ನಾಟಕ ಅರಣ್ಯ ಇಲಾಖೆಯು ರಿಸಾರ್ಟ್ಸ್ ಮಾಡಿರುವ ಪ್ರದೇಶದ ಒಟ್ಟೂ ಜಮೀನನ್ನು ಮೇಘ ರಿಸಾರ್ಟ್ಸ್‌ನವರ ಖಾತೆಯಿಂದ ರದ್ದುಪಡಿಸಿಕೊಡಬೇಕಾಗಿ ಕಂದಾಯ ಇಲಾಖೆಯನ್ನು ಕೇಳಿಕೊಂಡಿತು. ಯಾವುದೇ ಮಂಜೂರಾದ ಜಮೀನುಗಳನ್ನು ರದ್ದುಪಡಿಸಲು ಆಗುವುದಿಲ್ಲ. ಅದನ್ನು ಭೂಸ್ವಾಧೀನ ಪ್ರಕ್ರಿಯೆ ಮೂಲಕವೇ ಸ್ವಾಧೀನ ಪಡಿಸಿಕೊಳ್ಳಬೇಕೆಂದು ಕಂದಾಯ ಇಲಾಖೆ ತಿಳಿಸಿತು. ಕೊನೆಗೆ ಭೂಸ್ವಾದೀನ ಪ್ರಕ್ರಿಯೆಯ ಮೂಲಕ ನಮ್ಮ ಜಾಗವನ್ನು ವಶಪಡಿಸಿಕೊಳ್ಳತ್ತೇವೆಂದು ಅರಣ್ಯ ಇಲಾಖೆಯು ನಮಗೆ ತಿಳುವಳಿಕೆ ಕೊಟ್ಟ ಮೇರೆಗೆ ಎಲ್ಲದಕ್ಕೂ ಪರಿಹಾರ ಬರುವುದರಿಂದ ನಮ್ಮ ಸಮಸ್ಯೆಯು ಬಗೆಹರಿಯುತ್ತೆ ಎಂದೂ ಸುಪ್ರೀಂಕೋರ್ಟ್‌ನಲ್ಲಿ ಕೇಸು ನಡೆಸುವ ಅವಶ್ಯಕತೆಯಿಲ್ಲವೆಂದು ತೀರ್ಮಾನಕ್ಕೆ ಬಂದೆವು.

ಈ ಮಧ್ಯೆ ಕೆ.ವಿ. ಸುಬ್ಬಣ್ಣನವರು ತೀರ್ಥಹಳ್ಳಿಯ ಡಾ. ಬಿ.ಎನ್ ರಂಗಪ್ಪನವರ ಅಭಿನಂದನಾ ಕಾರ್ಯಕ್ರಮದ ಅತಿಥಿಗಳಾಗಿ ಬಂದವರು ವೇದಿಕೆಯಿಂದ ಮಾತನಾಡುತ್ತ ಮಾತಿನ ಮಧ್ಯದಲ್ಲಿ ಹೋರಾಟದ ವಿಷಯ ಬಂದಾಗ ಮೇಘ ರಿಸಾರ್ಟ್ಸ್‌ನ ಪ್ರವಾಸೋದ್ಯಮವನ್ನು ನಾನು ವಿರೋಧಿಸಬೇಕಿದ್ದರೆ ದಯಾನಂದನ ಮನೆಯ ಮುಂದೆ ಕೂತು ಪ್ರತಿಭಟಿಸಬೇಕಿತ್ತು. ಈಗ ಮಾಡಿರುವುದು ಸರಿಯಲ್ಲವೆನ್ನುವ ಅಭಿಪ್ರಾಯದಲ್ಲಿ ಹೇಳಿದ್ದರು. ಆ ಸಭೆಯಲ್ಲಿ ಶಾಮಣ್ಣನೂ ಉಪಸ್ಥಿತನಿದ್ದ. ಕೆಲ ಹೋರಾಟಗಾರರೂ ಇದ್ದರು. ಮುಂದೆ ಸುಪ್ರೀಂಕೋರ್ಟ್‌ನ ವಿಚಾರಣೆಯಲ್ಲಿ ರಿಸಾರ್ಟ್ಸ್‌ನವರು 'ಯಾವುದೇ ಅರಣ್ಯ ಕಾಯಿದೆಯ ವಿರುದ್ಧವಾದ ಯಾವ ಚಟುವಟಿಕೆಯನ್ನು ಆ ಜಾಗದಲ್ಲಿ ಮಾಡಬಾರದು, ಮಾಡುವ ಸಂದರ್ಭದಲ್ಲಿ ಸಂಬಂಧ ಪಟ್ಟವರಿಂದ ಅನುಮತಿ ಪಡೆದಿರಬೇಕು' ಎಂದು ಹೇಳಿ ಕೇಸನ್ನು ಮುಕ್ತಾಯ ಮಾಡಲಾಯಿತು. ಈ ತೀರ್ಪು ಹೊರ ಬಂದಿದ್ದು ೨೦೦೩ರಲ್ಲಿ. ಕರ್ನಾಟಕ ಅರಣ್ಯ ಇಲಾಖೆಯು ಭೂ ಸ್ವಾಧೀನ ಪ್ರಕ್ರಿಯೆಗೆ ಅನೇಕ ತೊಂದರೆಗಳನ್ನು ಒಡ್ಡುತ್ತ ಬಂದು ಕೊನೆಗೆ ೨೦೦೮ರಲ್ಲಿ ಭೂ ಸ್ವಾಧೀನಕ್ಕೆ ಚಾಲನೆ ನೀಡಿತು. ಭೂಸ್ವಾಧೀನ ಪ್ರಕ್ರಿಯೆಯು ೪೧ ಹಾಗೂ ೬೧ ಆದ ನಂತರವೂ ಪರಿಹಾರದ ಹಣ ಜಾಸ್ತಿಯಾಗುತ್ತೆ ಎಂದು ಇಡೀ ಭೂಸ್ವಾಧೀನ ಪ್ರಕ್ರಿಯೆಯನ್ನೇ ರದ್ದು ಗೊಳಿಸಿತು. ಮತ್ತೆ ನನ್ನ ಮನವಿಯ ಮೇರೆಗೆ ಮಾತುಕತೆಯ ಮೂಲಕ ಬೆಲೆಯೊಂದು

ತೀರ್ಮಾನಿಸಿಕೊಂಡು ನನ್ನಿಂದ ೨೦೧೫ರಲ್ಲಿ ಕ್ರಯ ಪತ್ರದ ಮೂಲಕ ಅರಣ್ಯ ಇಲಾಖೆ ಸಮಸ್ಯೆಯನ್ನು ಬಗೆ ಹರಿಸಿತು. ಸುಮಾರು ೧೯೯೭ರಿಂದ ಶುರುವಾದ ಈ ಹೋರಾಟ ೨೦೧೫ಕ್ಕೆ ಮುಗಿಯಿತು.

ಈ ಹೋರಾಟದ ಘಟನೆಗಳನ್ನೆಲ್ಲ ಪುನರ್ ವಿಮರ್ಶಿಸಿದಾಗ ಈ ತರದ ಪ್ರವಾಸೋದ್ಯಮ ಚಟುವಟಿಕೆಗಳು ಕರ್ನಾಟಕದ ಇಂತಹದೇ ಪರಿಸರ ವಲಯದ ಬೇರೆ ಕಡೆ ನಡೆಯುತ್ತಿದ್ದರೂ (ಖಾಸಗಿಯಾಗಿ ಇರಬಹುದು, ಸರ್ಕಾರದ ಅರಣ್ಯ ಇಲಾಖೆಯ ಜಂಗಲ್ ಲಾಡ್ಜಗಳ ಮೂಲಕ ಇರಬಹುದು) ಕರ್ನಾಟಕ ವಿಮೋಚನಾ ರಂಗ ಮತ್ತು ಕರ್ನಾಟಕ ರಾಜ್ಯ ರೈತ ಸಂಘ ಯಾವೊಂದು ಹೋರಾಟವನ್ನು ಮಾಡದೆ ಬರೇ ಆಗುಂಬೆಯ ಮೇಘ ರಿಸಾರ್ಟ್ಸ್‌ನ ಪ್ರವಾಸೋದ್ಯಮ ಚಟುವಟಿಕೆಯನ್ನು ವಿರೋಧಿಸಿದ್ದರ ಹಿನ್ನೆಲೆ ಅರ್ಥವಾಗದು. ಶಾಮಣ್ಣ ನನ್ನ ಅಣ್ಣನಾಗಿರುವುದರಿಂದ ಅವನನ್ನು ಮುಂದಿಟ್ಟುಕೊಂಡು ಹೋರಾಟಕ್ಕಿಳಿದರೆ ಈ ಚಟುವಟಿಕೆಯನ್ನು ನಿಲ್ಲಿಸುವುದು ಸುಲಭವೆಂದು ಹೋರಾಟಗಾರರು ತಿಳಿದಂತಿದೆ. ಹೋರಾಟದ ಎಲ್ಲ ಸಂದರ್ಭಗಳಲ್ಲೂ ಶಾಮಣ್ಣ, ಕೆ.ಟಿ. ಗಂಗಾಧರ್ ಮುಂದೆ ಕೆ.ವಿ. ಸುಬ್ಬಣ್ಣ, ಡಾ.ಯು ಆರ್ ಅನಂತಮೂರ್ತಿ ಎಲ್ಲರೂ ಮಾತುಕತೆಯ ಮೂಲಕ ಬಗೆಹರಿಸಿಕೊಳ್ಳೋಣ ಎಂಬ ಪ್ರಯತ್ನಗಳನ್ನು ಮಾಡಿ ಬಗೆಹರಿಸಿದ್ದರು. ಮತ್ತೆ ಸುಪ್ರಿಂಕೋರ್ಟ್‌ಗೆ ತೆಗೆದುಕೊಂಡು ಹೋದವರ ಮನೋಸ್ಥಿತಿ ಅರ್ಥವಾಗದು. ಸುಪ್ರಿಂಕೋರ್ಟ್ ಹೇಳಿದ್ದಾದರೂ ಏನು? ಶಾಮಣ್ಣ, ಕೆ.ವಿ ಸುಬ್ಬಣ್ಣ, ಡಾ. ಯು.ಆರ್. ಅನಂತಮೂರ್ತಿಯವರು ಹೇಳಿದ ಮಾತುಗಳೇ. ಈ ಎಲ್ಲ ಘಟನೆಗಳಿಂದ ನಾನಂತೂ ಸರಿಯಾದ ಪಾಠವನ್ನು ಕಲಿತಿದ್ದೇನೆ. ಸುಮಾರು ೧೯ ವರ್ಷಗಳ ಈ ಹೋರಾಟದಲ್ಲಿ ಹೋರಾಡಿದವರಾರೆಂದು ಕಾಲವೇ ನಿರ್ಧರಿಸಬೇಕು.

ನಮ್ಮ ಅಣ್ಣಯ್ಯ ಕಡಿದಾಳು ಶಾಮಣ್ಣ

ಚಂದ್ರಾವತಿ ರಮೇಶ್

ನಾವು ಎಂದರೆ ಕಡಿದಾಳು ಶಾಮಣ್ಣ, ಲಕ್ಷ್ಮೀದೇವಿ, ಗೋಪಾಲ, ನಾನು, ದಯಾನಂದ, ಸದಾನಂದ ಮತ್ತು ಪ್ರಕಾಶ. ಮಲೆನಾಡಿನಲ್ಲಿ ತಂದೆಯವರನ್ನು ಅಪ್ಪಯ್ಯ ಎಂದು ಕರೆಯುವುದು, ಹಿರೇ ಅಣ್ಣನನ್ನು ಅಣ್ಣಯ್ಯ ಎಂದು ಕರೆಯುವುದು ಪದ್ಧತಿ. ನಮ್ಮ ಅಣ್ಣಯ್ಯನ ಜೊತೆ ಕಳೆದ ನೆನಪುಗಳನ್ನು ನಿಮ್ಮೊಂದಿಗೆ ಹಂಚಿಕೊಳ್ಳಲು ಇಷ್ಟಪಡುತ್ತೇನೆ.

ಅಣ್ಣಯ್ಯ ಅವರ ಮೊದಲ ವ್ಯಾಸಂಗವನ್ನು ಹಾರೋಗೊಳಿಗೆ ಸ್ಕೂಲಿನಲ್ಲಿ ಮಾಡಿ ಹೈಸ್ಕೂಲು ಓದಲು ಮೇಗರವಳ್ಳಿಗೆ ಹೋಗಿ ಅಲ್ಲಿ ಮುಡುವಳ್ಳಿ (ನಮ್ಮ ದೊಡ್ಡಮ್ಮನ ಮನೆ)ಯಲ್ಲಿ ವಾಸ್ತವ್ಯ ಹೂಡಿ ವ್ಯಾಸಂಗ ಮಾಡುತ್ತಿದ್ದರು. ನಾವೆಲ್ಲ ಚಿಕ್ಕವರು. ಊರಿನಲ್ಲೆ ಓದುತ್ತಿದ್ದೆವು. ಅಣ್ಣಯ್ಯ ರಜಕ್ಕೆ ಬರುತ್ತಿದ್ದರು. ಅಣ್ಣಯ್ಯ ಬಂದಾಗ ನಮಗೆಲ್ಲ ಸಂತೋಷವೋ ಸಂತೋಷ. ಕಿತ್ತಳೆ ಸೋಳೆ ಪೆಪ್ಪರ್‌ಮೆಂಟ್ ತಂದು ಎಲ್ಲರಿಗೂ ಹಂಚುತ್ತಿದ್ದರು. ನಾವೆಲ್ಲ ತಿಂಡಿಗೆ ಒಟ್ಟಿಗೆ ಕುಳಿತಾಗ ಅಮ್ಮ ಬೆಣ್ಣೆ ಬಡಿಸಿದರೆ ಸ್ವಲ್ಪ ಹೊತ್ತಿಗೆ ನಮ್ಮ ತಟ್ಟೆಯಲ್ಲಿ ಬೆಣ್ಣೆ ಉಂಡೆ ಮಾಯ ಆಗ್ತಾ ಇತ್ತು. ನಾವು ಆ ಕಡೆ

ಈ ಕಡೆ ನೋಡ್ತಾ ಇದ್ದಾಗ ಅಣ್ಣಯ್ಯ ತಗೊಂಡು ಬಿಡೋರು. ಆಮೇಲೆ ಗೊತ್ತಾದ ಕೂಡಲೇ ವಾಪಾಸು ನಮ್ಮ ತಟ್ಟೆಗೆ ಇಡ್ತಾ ಇದ್ದರು. ಎಲ್ಲರು ಒಟ್ಟಿಗೆ ಕೇರಂ ಆಡ್ತಾ ಇದ್ದರೆ, ನಮ್ಮದು ಒಂದು ಕಾಯಿನ್ ಮಾಯ ಆಗಿ ಬಿಡೋದು. ಅರೆ ಎಲ್ಲಿಹೋಯ್ತು ಕಾಯಿನ್ ಎಂದು ಹುಡುಕಿದರೆ, ಅಣ್ಣಯ್ಯನ ಹತ್ತಿರ ಇರೋದು. ಹೀಗೆ ಎಲ್ಲದರಲ್ಲು ತಮಾಷೆ ಮಾಡಿ ನಗಿಸುತ್ತಿದ್ದರು. ನಮಗೆಲ್ಲ ಅವರ ಜೊತೆ ರಜಾದಿನಗಳನ್ನು ಕಳೆದಿದ್ದೆ ಗೊತ್ತಾಗುತ್ತಿರಲಿಲ್ಲ.

ಸಾಯಂಕಾಲ ಎಲ್ಲರು ಕೈಕಾಲು ಮುಖ ತೊಳೆದು ದೇವರಿಗೆ ದೀಪಹಚ್ಚಿ ಪ್ರಾರ್ಥನೆ ಮಾಡುವ ಅಭ್ಯಾಸ ಇತ್ತು. ಆಗ ಅಣ್ಣಯ್ಯ "ಬಾಗಿಲೊಳು ಕೈಮುಗಿದು ಒಳಗೆ ಬಾ ಯಾತ್ರಿಕನೆ' ಕುವೆಂಪುರವರ ಕವನಗಳನ್ನು ಹೇಳುತ್ತಿದ್ದರು. ನಾವೆಲ್ಲ ಕಲಿತು ಹಾಡುತ್ತಿದ್ದೆವು. "ನಿನ್ನ ಪದ ಕಮಲದಲಿ ಮನೆ ಮಾಡಿರುವ ನನಗೆ ಆ ಸ್ಥಾನ ಈ ಸ್ಥಾನ ಎಲ್ಲವಾಸ್ಥಾನ" ಈ ಹಾಡನ್ನು ಸಹ ಹೇಳಿಕೊಡುತ್ತಿದ್ದರು. ಆಗಲೇ ಭಾವಗೀತೆಗಳನ್ನು ಅಷ್ಟು ಚೆನ್ನಾಗಿ ಹಾಡುತ್ತಿದ್ದರು. ಬೇಂದ್ರೆಯವರ "ಪಾತರಗಿತ್ತಿ ಪಕ್ಕ ನೋಡಿದೇನೆ ಅಕ್ಕ" ಈ ಕವನವನ್ನು ಯಾವುದಾದರೂ ಮೇಜು, ಕುರ್ಚಿ ಮೇಲೆ ತಬಲ ಬಾರಿಸಿಕೊಂಡು ಹಾಡುತ್ತಿದ್ದರು. ನಮ್ಮ ಗೋಪಾಲಣ್ಣ "ರಾಮನ ಬಂಟ ಹನುಮಂತ, ಈಶನ ಬಂಟ ನಂದೀಶ, ರಘುಪತಿರಾಘವ ರಾಜಾರಾಂ, ಪತಿತ ಪಾವನ ಸೀತಾರಾಂ" ಈ ಭಜನೆಯನ್ನು ಚಪ್ಪಾಳೆ ಹೊಡೆಯುತ್ತಾ ಹೇಳಿಕೊಡುತ್ತಿದ್ದರು. ಒಟ್ಟಿನಲ್ಲಿ ಪ್ರಾರ್ಥನೆಯ ಸಮಯದಲ್ಲಿ ಸಂಗೀತದಲ್ಲಿ ಮುಳುಗಿ ಹೋಗುತ್ತಿದ್ದೆವು.

ನಂತರ ನಾನು ಸಂಗೀತ ಕಲಿಯಲು ಹಾರ್‌ಮೋನಿಯಮ್ ಪೆಟ್ಟಿಗೆಯನ್ನು ಅಪ್ಪಯ್ಯ ಕೊಡಿಸಿ, ಒಬ್ಬರು ಮೇಷ್ಟ್ರು ನನಗೆ ಕಲಿಸಲು ಬರುತ್ತಿದ್ದರು. ಅಲ್ಲಿಂದಲೆ ನನ್ನ ಸಂಗೀತ ಅಭ್ಯಾಸ ಪ್ರಾರಂಭವಾಯ್ತು. ನನ್ನ ಸಂಗೀತ ಮೇಷ್ಟ್ರ ಹತ್ತಿರ ಅಪ್ಪಯ್ಯ ಕೊಳಲು ಕಲಿಯುತ್ತಿದ್ದರು. ನವರಾತ್ರಿ ರಜೆಯಲ್ಲಿ ಶಾರದಾ ಪೂಜೆ ಮೂರು ದಿನ ಮಾಡುತ್ತಿದ್ದೆವು. ಬಣ್ಣದ ಕಾಗದದಿಂದ ಮಂಟಪ ಮಾಡಿ ಶಾರದಾದೇವಿ ಫೋಟೋ ಇಟ್ಟು ನಾನು ನಮ್ಮ ಅಕ್ಕ ರಂಗೋಲಿ ಬಿಡಿಸಿ ಹೂವಿನ ಹಾರಗಳಿಂದ ಸಿಂಗರಿಸುತ್ತಿದ್ದೆವು. ಗೋಪಾಲಣ್ಣಂದು ಪೂಜೆ. ದಯ, ಸದ, ಪ್ರಕಾಶ ಶಂಕ ಊದುವುದು, ಜಾಗಟೆ ಬಾರಿಸುವುದು, ಅಣ್ಣಯ್ಯ ಎಲ್ಲರಿಗೂ ಹಾಡು ಹೇಳಿ ಕೊಡುತ್ತಿದ್ದರು. ಹೀಗೆ ಅಣ್ಣಯ್ಯನ ಜೊತೆ ನಮ್ಮ ರಜ ಕಳೆದು ಹೋಗಿದ್ದೆ ಗೊತ್ತಾಗುತ್ತಿರಲಿಲ್ಲ.

ನಂತರ ಅಣ್ಣಯ್ಯ ಶಿವಮೊಗ್ಗದಲ್ಲಿ ಓದುತ್ತಿದ್ದರು. ಅಲ್ಲಿ ಮುಗಿದ ಮೇಲೆ ಮೈಸೂರಿನಲ್ಲಿ ಮುಂದುವರಿಸಿದರು. ನಂತರದಲ್ಲಿ ನಾನು, ದಯಾನಂದ, ಸದಾನಂದ, ಪ್ರಕಾಶ ನಮ್ಮ ವಿದ್ಯಾಭ್ಯಾಸವನ್ನು ಮೈಸೂರಿನಲ್ಲಿ ಮುಂದುವರಿಸಿದೆವು. ನಮ್ಮ ಅಕ್ಕ

ವಿವಾಹ ಆಗಿ ಶಿವಮೊಗ್ಗದಲ್ಲಿ ವಾಸಿಸುತ್ತಿದ್ದರು. ಗೋಪಾಲಣ್ಣ ಬೆಂಗಳೂರಿನಲ್ಲಿ ಪಾಲಿಟೆಕ್ನಿಕ್ ಓದುತ್ತಿದ್ದರು. ನಾವುಗಳೆಲ್ಲ ಮೈಸೂರಿನಲ್ಲಿ ಓದಲು ನಮ್ಮ ಅಪ್ಪಯ್ಯ ಒಂದು ಮನೆ ಮಾಡಿ, ಒಬ್ಬ ಅಡಿಗೆಯವನನ್ನು ನೇಮಿಸಿ ನಮಗೆಲ್ಲ ಓದಿಗೆ ಅನುಕೂಲ ಮಾಡಿದ್ದರು.

ಅಣ್ಣಯ್ಯ ಆಗ ಒಂದು ಪ್ರಿಟಿಂಗ್‌ಪ್ರೆಸ್ ಇಟ್ಟಿದ್ದರು. ಅವರ ಸ್ನೇಹಿತರಾದ ತೇಜಸ್ವಿಯವರು, ಶ್ರೀರಾಂರವರು, ರಾಮದಾಸ್‌ರವರು, ಎನ್.ಡಿ.ಸುಂದರೇಶಣ್ಣನವರು, ಲಂಕೇಶ್‌ರವರು, ಸಿಪಿಕೆಯವರು ಮತ್ತು ಅನಂತಮೂರ್ತಿಯವರು ಇನ್ನು ಕೆಲವರೆಲ್ಲ ನಮ್ಮ ಮನೆಗೆ ಆಗಾಗ ಬಂದುಹೋಗುತ್ತಿದ್ದರು. ಇವರೆಲ್ಲರ ಸಲಹೆ, ಸಹಕಾರ ಅಣ್ಣಯ್ಯನ ಬದುಕಿಗೆ ಸಾಕಷ್ಟು ನೆರವಾಗಿತ್ತು. ಅವರ ಪ್ರಿಂಟಿಂಗ್‌ಪ್ರೆಸ್‌ನಲ್ಲಿ ಪುಸ್ತಕಗಳ ಪ್ರಕಟಣೆ ಸಾಕಷ್ಟು ನಡೆಯುತ್ತಾ ಇತ್ತು. ಎಷ್ಟೋ ಸಾರಿ ನಾನು ಪ್ರೂಫ್ ಓದುತ್ತಾ ಇದ್ದೆ. ಅಣ್ಣಯ್ಯ ತಪ್ಪುಗಳನ್ನು ತಿದ್ದುತ್ತಾ ಇದ್ದರು. ಇದರ ಜೊತೆಗೆ ಸರೋದ್ ಅಭ್ಯಾಸ ಮಾಡುತ್ತಿದ್ದರು. ನಾನು ಎಸ್.ಎಸ್.ಎಲ್.ಸಿ ಓದೋವಾಗಲೆ ಅಣ್ಣಯ್ಯ ಬಾಂಬೆಗೆ ಹೋಗಿ ಅಲಿ ಅಕ್ಬರ್‌ಖಾನ್‌ರವರ ಹತ್ತಿರ ಸರೋದ್ ಕಲಿತು ಬಂದಿದ್ದರು. ರಾತ್ರಿ ಹೊತ್ತು ಜಾಸ್ತಿ ಅಭ್ಯಾಸ ಮಾಡುತ್ತಿದ್ದರು. ನಾನು ಸಹ ಸಂಗೀತದಿಂದ ಪ್ರಭಾವಿತಳಾಗಿ ವೀಣೆ ಕಲಿಯಲು ಪ್ರಾರಂಭಿಸಿದೆ. ಅಣ್ಣಯ್ಯ ನನ್ನನ್ನು ಒಳ್ಳೆಯ ಸಂಗೀತ ಕಛೇರಿಗೆ ಕರೆದುಕೊಂಡು ಹೋಗುತ್ತಿದ್ದರು. ಹೀಗೆ ಸಂಗೀತ, ಸಾಹಿತ್ಯ, ಕನ್ನಡ ಭಾಷೆಯ ಅಭಿಮಾನ ಇವೆಲ್ಲ ನನ್ನ ಮತ್ತು ನನ್ನ ಸಹೋದರರ ಮೇಲೆ ಅಣ್ಣಯ್ಯನಿಂದ ಸಾಕಷ್ಟು ಪ್ರಭಾವ ಬೀರಿದೆ. ನಂತರ ನಾನು ಮಹಾರಾಣಿ ಕಾಲೇಜು ಹಾಸ್ಟೆಲ್‌ನಲ್ಲಿ ವಿದ್ಯಾಭ್ಯಾಸ ಮುಂದುವರಿಸಿದೆ. ಅಲ್ಲಿ ನನಗೆ ವೀಣೆ ಕಲಿಯಲು ಅವಕಾಶ ಇರಲಿಲ್ಲ. ಆಗ ಅಣ್ಣಯ್ಯ ನಮ್ಮ ಪ್ರಿನ್ಸಿಪಾಲ್‌ರವರಾದ ಶ್ರೀಮತಿ ಜಯಲಕ್ಷಮ್ಮಣ್ಣಿಯವರ ಅಪ್ಪಣೆ ಪಡೆದು ವೀಣೆ ಕಲಿಯಲು ಸಹಾಯಮಾಡಿದರು.

ನನ್ನ ಬಿ.ಎ. ಪದವಿಯನ್ನು ಮುಗಿಸಿ ನಾನು ಊರಿಗೆ ಬಂದೆ. ಅಣ್ಣಯ್ಯ ಎಂ.ಎ ಮುಗಿಸಿ ಊರಿಗೆ ಬಂದರು. ಅವರು ಬಸವಾನಿ ಹೈಸ್ಕೂಲಿನಲ್ಲಿ ಶಿಕ್ಷಕರಾಗಿ ಕಾರ್ಯ ನಿರ್ವಹಿಸುತ್ತಿದ್ದರು. ಅಲ್ಲಿ ಅವರು ವಿವಿಧ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿದ್ದರು. ಮಕ್ಕಳದ್ದೆ ಒಂದು ಯಕ್ಷಗಾನ ಮೇಳ ಕಟ್ಟಿ ಮನೆ ಮನೆಗೆ ತಿರುಗಿ ಅವರ ಕಲೆಯನ್ನು ಪ್ರದರ್ಶಿಸುತ್ತಿದ್ದರು. ಸ್ವಲ್ಪ ಸಮಯದ ನಂತರ ನನ್ನ ಮದುವೆ ಎ.ಯು. ರಮೇಶ್‌ರವರ ಜೊತೆ ನಿಶ್ಚಯವಾಯಿತು. ಆಗ ಅಣ್ಣಯ್ಯನ ಮದುವೆನೂ ಅವರು ಪ್ರೀತಿಸಿದ ನನ್ನ ಆತ್ಮೀಯ ಸ್ನೇಹಿತೆ, ಸಹಪಾಠಿಯಾದ ಶ್ರೀದೇವಿ ಜೊತೆ ನಿಶ್ಚಯವಾಗಿ ಒಂದೇ ದಿನ ಮದುವೆ ಏರ್ಪಡಿಸಲು ದಿನಾಂಕವನ್ನು ಇಟ್ಟರು. ಅಣ್ಣಯ್ಯ ಕುವೆಂಪುರವರ ವ್ಯಕ್ತಿತ್ವ ಮತ್ತು ಪ್ರಭಾವಕ್ಕೆ ಒಳಗಾಗಿ ಸರಳ ವಿವಾಹ ಮಂತ್ರ ಮಾಂಗಲ್ಯ ರೀತಿಯಲ್ಲಿ

ಮದುವೆಯಾಗಲು ನಮ್ಮ ಮೂರು ಕುಟುಂಬವನ್ನು ಒಪ್ಪಿಸಬೇಕಾಗಿತ್ತು. ರಮೇಶ್‌ರವರ ತಾಯಿ ತುಂಬ ಸಂಪ್ರದಾಯಸ್ಥರು. ಅವರು ಜಾತಕ, ಜ್ಯೋತಿಷ್ಯ, ರಾಹುಕಾಲ ಇದನ್ನೆಲ್ಲ ನಂಬಿದವರು. ಅವರನ್ನ ಅಣ್ಣಯ್ಯ ಪುರೋಹಿತರಿಲ್ಲದ ಸರಳ ವಿವಾಹಕ್ಕೆ ಒಪ್ಪಿಸಿದ್ದು ಅವರ ದೊಡ್ಡ ಸಾಹಸ ಎಂದು ಹೇಳಬಹುದು. ವಿವಾಹ ಪತ್ರಿಕೆ ಸಹ ಮೂರು ಕುಟುಂಬದಿಂದ ಒಂದೆ ಆಗಿತ್ತು. ವಡವೆ, ವಸ್ತ್ರ ಎಲ್ಲದರಲ್ಲು ಸರಳತೆ ಇರಬೇಕು. ಮದುವೆಗೆ ಆಗುವ ಖರ್ಚುವೆಚ್ಚ ನಮ್ಮ ಪೋಷಕರಿಗೆ ಹೊರೆ ಆಗಬಾರದು. ಜನಜಂಗುಳಿ, ಗಲಾಟೆ ಬೇಡ. ಹೀಗೆ ವೇದಿಕೆ ಸಿದ್ಧವಾಯಿತು. ಇದರ ಜವಾಬ್ದಾರಿ ಎನ್.ಡಿ. ಸುಂದರೇಶಣ್ಣನವರದ್ದಾಗಿತ್ತು. ನನಗೂ ಆ ದಿನ ಆ ವೇದಿಕೆ ನೋಡಿ ಅತ್ಯಂತ ಸಂತೋಷವಾಗಿತ್ತು. ಡಾ॥ ಪ್ರಭುಶಂಕರ್, ತೇಜಸ್ವಿ ಮತ್ತು ಶ್ರೀರಾಂರವರು ಕುವೆಂಪುರವರ ಮಂತ್ರಮಾಂಗಲ್ಯ ಓದಿ ಮದುವೆಯನ್ನು ನೆರವೇರಿಸಿದರು. ಆನಂತರದಲ್ಲಿ ಅಣ್ಣಯ್ಯ ಅಂತರಜಾತಿ ವಿವಾಹಗಳನ್ನು ಮತ್ತು ಸರಳ ವಿವಾಹಗಳನ್ನು ಸಾಕಷ್ಟು ನೆರವೇರಿಸಿದ್ದಾರೆ

ನಂತರ ಶಾಮಣ್ಣ ಶ್ರೀದೇವಿ ಭಗವತಿಕೆರೆ ಎಂಬಲ್ಲಿ ನಮ್ಮ ತಂದೆಯವರ ಸಹಾಯದಿಂದ ಸ್ವಲ್ಪ ಜಮೀನು ಕೊಂಡು ಕೃಷಿಕರಾಗಿ ಅಲ್ಲಿ ವಾಸ್ತವ್ಯ ಹೂಡಿದರು. ನನ್ನ ಯಜಮಾನರು ವರ್ಗಾವಣೆ ಆಗುವ ಉದ್ಯೋಗದಲ್ಲಿ ಇದ್ದು, ನಮ್ಮ ರಾಜ್ಯದ ಕೆಲವು ಊರುಗಳಲ್ಲಿ ಸೇವೆ ಸಲ್ಲಿಸುತ್ತಿದ್ದರು. ತೀರ್ಥಹಳ್ಳಿಗು ವರ್ಗವಾಯಿತು. ಆಗ ಅಣ್ಣಯ್ಯ ರೈತ ಚಳುವಳಿಯಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಿದ್ದರು. ನಮ್ಮ ಮನೆಗೆ ಎಷ್ಟೋ ಸಾರಿ ಅವರು ಮತ್ತು ಅವರ ಜೊತೆ ರೈತ ಮುಖಂಡರು ಬಂದು ಹೋಗಿದ್ದಾರೆ. ರೈತರ ಚಳುವಳಿಗಳು ನಡೆಯುತ್ತಲೇ ಇದ್ದವು. ನಾಗಸಮುದ್ರದಲ್ಲಿ ಗೋಲಿಬಾರ್ ಆದಾಗ ಮೂರು ಜನ ರೈತರು ಗುಂಡೇಟಿಗೆ ಸತ್ತು ಹೋಗಿದ್ದರು. ಅದನ್ನು ಕಣ್ಣಾರೆ ನೋಡಿದ ಅಣ್ಣಯ್ಯನ ಆರೋಗ್ಯ ತುಂಬಾ ಹದಗೆಟ್ಟು ಸೊರಗಿ ಹೋಗಿದ್ದರು. ಆದರೂ ಹೋರಾಟ, ಚಳುವಳಿಗಳಲ್ಲಿ ಭಾಗವಹಿಸುತ್ತಾ ಇದ್ದರು. ವೈದ್ಯರ ನೆರವಿನಿಂದ ಸ್ವಲ್ಪ ಗುಣಮುಖರಾದರು. ನಿದ್ದೆ ಇಲ್ಲದೆ ಎಷ್ಟೋ ರಾತ್ರಿ ಕಳೆದದ್ದು ಇದೆ. ಆ ಸಮಯದಲ್ಲಿ ನಮ್ಮ ಕುಟುಂಬದವರಿಗೆಲ್ಲ ತುಂಬಾ ಆತಂಕವಾಗಿತ್ತು.

ಒಮ್ಮೆ ಅಣ್ಣಯ್ಯನ ಮನೆಗೆ ಹೋದಾಗ ಅಲ್ಲೆ ಸುತ್ತಾಡಿ ಬರಲು ಹನುಮಂತಾಪುರದ ಕಡೆ ನಾನು ಅಣ್ಣಯ್ಯ ಹೊರಟೆವು. ಅವರ ಕ್ಯಾಮರ ಯಾವಾಗಲೂ ಜೊತೆಯಲ್ಲೆ ಇರುತ್ತದೆ. ಅಲ್ಲಿ ಕೆಲವು ಲಂಬಾಣಿಗರ ಮನೆ ಇದ್ದವು. ಒಬ್ಬ ಮಹಿಳೆ ಮಗನನ್ನು ಕಳೆದುಕೊಂಡು ದುಃಖದಲ್ಲಿ ಇದ್ದಳು. ಅವಳ ಸೊಸೆ, ಮೊಮ್ಮಗಳು ಇದ್ದರು. ಆ ಮೊಮ್ಮಗಳು ಕುವೆಂಪುರವರ 'ಮಳೆಬಿಲ್ಲು' ಕವನವನ್ನು ಲಂಬಾಣಿ ಭಾಷೆಗೆ ಅನುವಾದಿಸಿದ್ದಳು. ಅದನ್ನು ತುಂಬಾ ಚೆನ್ನಾಗಿ ಹಾಡಿದಳು. ಆಗ ಅಣ್ಣಯ್ಯ 'ಹೀಗೆ

ಹತ್ತು ಹದಿನೈದು ಮಕ್ಕಳನ್ನು ಸೇರಿಸಿ ಹಾಡು ಕಲಿಸಿ ಆರ್ಕೆಸ್ಟ್ರಾ ಮಾಡಿ ಹೊಸಪೇಟೆಯಲ್ಲಿ ಹಾಡಿಸಿದ್ದು ಅದ್ಭುತವಾಗಿತ್ತು' ಎಂದು ಹೇಳಿದರು. ಆ ಹಳ್ಳಿಯ ಮಕ್ಕಳಿಗೆ ಸಂಗೀತದ ಬಗ್ಗೆ ಆಸಕ್ತಿ ಹುಟ್ಟಿಸಿ ಕಲಿಸಿದ್ದು ನಿಜವಾಗಿ ದೊಡ್ಡ ಸಾಹಸ. ಒಂದು ದಿನ ನನ್ನ ಮಗ ನಮ್ಮ ಮನೆ ಹತ್ತಿರ ಉಯ್ಯಾಲೆ ಮೇಲೆ ಕುಳಿತು ಕೊಳಲು ಬಾರಿಸುತ್ತಾ ಇದ್ದ. ನನಗೆ ಎಲ್ಲೊ 'ಲಂಬೋದರ ಲಕುಮಿಕರ' ಮತ್ತೆ 'ವರವೀಣಾ ಮೃದುಪಾಣಿ' ಈ ಗೀತೆಗಳನ್ನು ಕೊಳಲಿನಲ್ಲಿ ಬಾರಿಸುವುದು ಕೇಳಿಸಿತು. ನೋಡಿದರೆ ನನ್ನ ಮಗ ಬಾರಿಸುತ್ತಾ ಕೂತಿದ್ದ. 'ಎಲ್ಲಿ ಕಲಿತೆ ನೀನು ಮಗನೆ' ಎಂದೆ. ಅದಕ್ಕೆ ಅವನು 'ಮೊನ್ನೆ ಅಣ್ಣಯ್ಯನ ಮನೆಗೆ ಹೋಗಿದ್ದೆನಲ್ಲ ಅಣಯ್ಯ ಕೊಳಲು ಬಾರಿಸುತ್ತಿದ್ದರು. ನಾನು ಸರಿಗಮಪದನಿಸ ಕಲಿತೆ. ಅಮ್ಮ ನೀನು ಈ ಗೀತೆಗಳ ಸ್ವರ ಹೇಳಿಕೊಂಡು ವೀಣೆ ಬಾರಿಸುತಿದ್ದೆ. ನಾನು ಅದೇ ಸ್ವರಗಳನ್ನು ಕೊಳಲಿನಲ್ಲಿ ಬಾರಿಸುತ್ತಿದ್ದೀನಿ. ಅಷ್ಟೆ' ಎಂದ 'ಆಯ್ತು. ಆಯ್ತು. ಹಾಗೇ ಅಭ್ಯಾಸ ಮಾಡು' ಎಂದೆ. ಇದೆಲ್ಲ ಅಣ್ಣಯ್ಯನ ಪ್ರಭಾವ ಅಂದುಕೊಂಡೆ.

ಅಣ್ಣಯ್ಯ ತೀರ್ಥಹಳ್ಳಿ ಕಡೆ ಹೋಗುವಾಗ ಎಷ್ಟೋ ಸಾರಿ ಮಂಡಗದ್ದೆಯಲ್ಲಿ ನಮ್ಮ ಮನೆಗೆ ಬಂದು ಹೋಗುತ್ತಾರೆ. ಅವರಿಗೆ ಬಾಳೆಹಣ್ಣು, ತುಪ್ಪ, ಸಿಹಿತಿಂಡಿಗಳು ತುಂಬಾ ಇಷ್ಟ. ಅವರ ಜೊತೆ ಸ್ನೇಹಿತರು, ಗುರುಗಳು, ಸಾಹಿತಿಗಳು, ಯಾರಾದ್ರು ಇದ್ದರೆ ಅವರನ್ನು "ಇಲ್ಲೆ ನನ್ನ ತಂಗಿಮನೆ ಇದೆ' ಎಂದು ನಮ್ಮ ಮನೆಗೆ ಕರಕೊಂಡು ಬಂದು ಸ್ವಲ್ಪ ಹೊತ್ತು ಇದ್ದು ಹೋಗುತ್ತಾರೆ. ಜಿ.ಎಸ್. ಶಿವರುದ್ರಪ್ಪ, ಕೋ.ಚನ್ನಬಸಪ್ಪ, ಜಿ.ಪಿ. ಬಸವರಾಜು, ರಾಜೀವ್ ತಾರಾನಾಥ್, ನಾಗವೇಣಿ, ಸವಿತಾ ನಾಗಭೂಷಣ್. ಶ್ರೀ ಡಿ.ಎಸ್. ನಾಗಭೂಷಣ್. ಡಾ.ಸಿ.ಆರ್. ಚಂದ್ರಶೇಖರ್, ಪದ್ಮ ಮತ್ತು ಶ್ರೀರಾಂ, ಕಾರ್ಲೆ ಶಿವಪ್ರಸಾದ್ ಇನ್ನು ಮುಂತಾದವರೆಲ್ಲ ಬಂದಾಗ ನನಗೆ ಅದೆಷ್ಟು ಸಂತೋಷ ಎಂದರೆ ಹೇಳಕ್ಕೆ ಸಾಧ್ಯವಿಲ್ಲ. ಅವರ ಜೊತೆ ಕಾಲ ಕಳೆಯುವ ಒಂದು ಅವಕಾಶ ಸಿಕ್ಕಿದ್ದು ನಮ್ಮ ಅದೃಷ್ಟ ಎಂದೇ ಹೇಳಬಹುದು.

ನಾ ಕಂಡ ಗಾಂಧಿ

ಡಾ. ಸಿ. ವಿನಯ್

ನಾ ಹೇಳಹೊರಟಿರುವುದು ಹೋದ ಶತಮಾನದ ನಾವೆಲ್ಲರೂ ಬಲ್ಲ ಮಹಾತ್ಮ ಗಾಂಧಿಯವರ ಬಗ್ಗೆ ಅಲ್ಲ. ಈ ಶತಮಾನದ ಅದೇ ಸ್ವರೂಪದ ನಾ ಕಂಡ ಮತ್ತೊಬ್ಬ ನಿಜವಾದ ಗಾಂಧೀವಾದಿಯಾದ ಶಾಮಣ್ಣ ನವರ ಬಗ್ಗೆ.

ವಿದ್ಯಾರ್ಥಿ ಜೀವನದಲ್ಲಿ ನಾನು ಪಠ್ಯಪುಸ್ತಕದಿಂದ ಓದಿ ತಿಳಿದುಕೊಂಡ ಗಾಂಧೀ ವಿಚಾರಗಳನ್ನು ನೆನಪಿಸಿ ಕೊಂಡಾಗ ಬಹುತೇಕ ಅದೇ ಆದರ್ಶ ಹಾಗೂ ವಿಚಾರಗಳನ್ನು ಹೊಂದಿದ ಹಾಗೂ ನಾನು ಬಹಳ ಹತ್ತಿರದಿಂದ ಬಲ್ಲ ಮತ್ತೊಬ್ಬ ವ್ಯಕ್ತಿ ಎಂದರೆ ಶಾಮಣ್ಣ ನವರು ಮಾತ್ರ.

ಬಹಳಷ್ಟು ಜನಕ್ಕೆ ಸರಳವಾಗಿ ಬದುಕುವ ಆಸೆ. ಆದರೆ ಅದನ್ನು ಅಳವಡಿಸಿಕೊಳ್ಳುವ ದಾರಿ ಸರಳ ವಾಗಿರುವುದಿಲ್ಲ. ನಾನೂ ಕೂಡ ಪ್ರಯತ್ನಿಸಿ ವಿಫಲ ವಾಗಿದ್ದೇನೆ. ಸರಳ ಜೀವನ ಬರೀ ತೋರುಗಾಣಿಕೆಗಾಗಿ ಇರದೇ ನಿಜವಾದ ಅರ್ಥದ್ದಾಗಿರಬೇಕು. ಅದನ್ನು ಶಾಮಣ್ಣನವರ ಬದುಕಿನುದ್ದಕ್ಕೂ ಕಾಣಬಹುದಾಗಿದೆ.

ವೈಯಕ್ತಿಕ ಆಗುಹೋಗುಗಳಿಗಿಂತ, ಸಮಾಜದ ಆಗುಹೋಗುಗಳು ಇವರ ಮೇಲೆ ಅತ್ಯಂತ ತೀವ್ರವಾದ ಪರಿಣಾಮ ಬೀರುತ್ತವೆ. ಭಾವನಾತ್ಮಕ ಹಾಗೂ ಸೂಕ್ಷ್ಮಜೀವಿಯಾದ ಇವರು ಅವುಗಳ ಬಗ್ಗೆ ದೀರ್ಘ ಹಾಗೂ ಆಳವಾದ ಆಲೋಚನೆಯ ಜೊತೆಗೆ ಚರ್ಚೆಯನ್ನು ಜೊತೆಯಲ್ಲಿರುವವರೊಂದಿಗೆ ಮಾಡುತ್ತಾರೆ. ಅವರ ಸೂಕ್ಷ್ಮತೆಗೆ ಇನ್ನೊಂದು ಉದಾಹರಣೆ ದೀರ್ಘಕಾಲದ ಸಾಕುಪ್ರಾಣಿಗಳೊಂದಿಗಿನ ಒಡನಾಟ.

ತಾಳ್ಮೆಯ ವಿಚಾರದಲ್ಲಿ ಯಾರಿಗಾದರೂ ಉದಾಹರಣೆ ಕೊಡುವುದಾದರೆ ಅದು ನಿಸ್ಸಂಶಯವಾಗಿ ಶಾಮಣ್ಣನವರೇ. ಎಂಥಾ ಸಂದರ್ಭದಲ್ಲೂ ತಾಳ್ಮೆಯನ್ನು ಕಳೆದುಕೊಳ್ಳದೆ ವ್ಯವಹರಿಸುವ ವ್ಯಕ್ತಿಯೆಂದರೆ ಅತಿಶಯೋಕ್ತಿಯಾಗದು. ನಾನು ಕಂಡ ಹಾಗೆ ಅವರು ಯಾರ ಮನಸ್ಸನ್ನೂ ನೋಯಿಸಿದವರಲ್ಲ. ಹಾಗೂ ತಮ್ಮ ಮನಸ್ಸು ನೋಯಿಸಿದವರ ಬಗ್ಗೆ ಯಾವ ಕಹಿಯನ್ನು ಉಳಿಸಿಕೊಳ್ಳದೆ ಸರಾಸಗಟಾಗಿ ಕ್ಷಮಿಸುವ ಸ್ವಭಾವ.

ಒಬ್ಬ ವ್ಯಕ್ತಿಯ ವಯಸ್ಸು, ಅಂತಸ್ತು ಅಥವಾ ಸ್ಥಾನಮಾನಗಳನ್ನು ಆದರಿಸದೆ ಎಲ್ಲರನ್ನೂ ಸಮನಾಗಿ ಗೌರವಿಸುವ ವ್ಯಕ್ತಿ. ಇವರ ಅತ್ಯಂತ ಸಮತೋಲನದ ವ್ಯಕ್ತಿತ್ವಕ್ಕೆ ಪುಷ್ಟಿಕೊಡುವ ಇನ್ನೊಂದು ಅಂಶವೆಂದರೆ ಹಾಸ್ಯ ಪ್ರವೃತ್ತಿ. ಎಲ್ಲಾ ಸಂದರ್ಭದಲ್ಲೂ ತಮ್ಮದೇ ಆದ ಹಾಸ್ಯಲೇಪಿತ ವರ್ಣನೆ ಇವರದ್ದಾಗಿರುತ್ತದೆ. ಹಾಸ್ಯದ ತೀವ್ರತೆ ಎಷ್ಟಿತ್ತೆಂದರೆ ಎಂಥಾ ಗಂಭೀರ ಸ್ವಭಾವದವರನ್ನೂ ನಿರಾಯಾಸವಾಗಿ ಸಡಿಲಗೊಳಿಸುತ್ತದೆ.

ಅವರ ಸಾಮಾಜಿಕ ಕಳಕಳಿ ನೈಜ ಸಮಾಜವಾದದ ನೆಲೆಯದ್ದಾಗಿರುತ್ತದೆ. ಹೋರಾಟದ ಮನೋಭಾವ ಈ ವಯಸ್ಸಿನಲ್ಲೂ ಯುವಕರನ್ನು ನಾಚಿಸುವಂತಿದೆ. ಸಾಮಾಜಿಕ ಹೋರಾಟದಲ್ಲಿ ಯಾವತ್ತೂ ಪ್ರಚಾರ ಹಾಗೂ ಸ್ಥಾನಮಾನಗಳನ್ನು ಬಯಸಿದವರಲ್ಲ. ಇತ್ತೀಚಿನ ದಿನಗಳಲ್ಲಿ ಕಾಣದ ನಿಸ್ವಾರ್ಥ ಸಾಮಾಜಿಕ ಹೋರಾಟ ಇವರ ಜೀವನಕ್ಕೆ ಹಿಡಿದ ಕನ್ನಡಿಯಾಗಿದೆ. ಜೀವನದಲ್ಲಿ ಅಳವಡಿಸಿಕೊಂಡ ಶಿಸ್ತು ಮತ್ತು ಸ್ವಚ್ಛಮನಸ್ಸು ಇವರನ್ನು ಬೇರೆಯವರಿಂದ ಬೇರ್ಪಡಿಸಿದೆ. ಅವರು ನಿಜವಾದ ಅರ್ಥದಲ್ಲಿ ಪರಿಸರದೊಂದಿಗೇ ಬೆಳೆದವರು. ಅದರ ಬಗ್ಗೆ ಅತ್ಯಂತ ಕಾಳಜಿ ಹೊಂದಿದವರು.

ಸಾಮಾನ್ಯವಾಗಿ ಒಬ್ಬೊಬ್ಬ ಮನುಷ್ಯರಲ್ಲಿ ಒಂದೊಂದು ವಿಶೇಷ ಹವ್ಯಾಸಗಳನ್ನು ಕಾಣುತ್ತೇವೆ. ಆದರೆ ಶಾಮಣ್ಣನವರ ವಿಚಾರದಲ್ಲಿ ಹಾಗಲ್ಲ, ಇವರು ಎಲ್ಲಾ ಸಂಗೀತ ವಾದ್ಯಗಳನ್ನು ನುಡಿಸಬಲ್ಲರು. ಛಾಯಾಗ್ರಹಣ ಎನ್ನುವುದು ಇವರ ಅವಿಭಾಜ್ಯ ಅಂಗ. ಇವರ ಪುಸ್ತಕದ ಹವ್ಯಾಸ ಎಷ್ಟರ ಮಟ್ಟಿಗೆಂದರೆ ಮನೆಯಲ್ಲಿ ಮನುಷ್ಯರಿಗಿಂತ ಪುಸ್ತಕಗಳೇ ಹೆಚ್ಚಿನ ಸ್ಥಳವನ್ನು ಆಕ್ರಮಿಸಿಕೊಂಡಿವೆ.

ಈ ಮೊದಲು ಪ್ರಸ್ತಾಪಿಸಿದ ಎಲ್ಲಾ ಸಕಾರಾತ್ಮಕ ಗುಣಗಳ ಬಗ್ಗೆ ನಾನು ಓದಿ ತಿಳಿದದ್ದು ಮಹಾತ್ಮಗಾಂಧಿಯವರಲ್ಲಿ ಮಾತ್ರ. ಆದರೆ ನೇರವಾಗಿ ಕಂಡಿದ್ದು ಶಾಮಣ್ಣನವರಲ್ಲಿ ಮಾತ್ರ. ನನ್ನ ಈ ಹೋಲಿಕೆಯ ಅನಿಸಿಕೆ ಹತ್ತಿರದಿಂದ ಶಾಮಣ್ಣನನ್ನು ಬಲ್ಲವರಿಗೆ ಒಪ್ಪಿಗೆಯಾಗಬಹುದೆಂದು ನಂಬಿರುತ್ತೇನೆ.

ಅಪ್ಪನ ವಾಹನಾಯಣ

ಕೆ.ಎಸ್.ಉಲೂಪಿ

ಕಾಲೇಜಿನಲ್ಲಿ ಓದುತ್ತಿದ್ದಾಗಿನಿಂದ ಅಪ್ಪನ ಬಳಿ ಯಾವುದಾದರೂ ದ್ವಿಚಕ್ರ ವಾಹನ ಇರುತ್ತಿತ್ತು. ಅವುಗಳು ಸದಾ ಏನಾದರೂ ಒಂದು ತೊಂದರೆ ಕೊಡುತ್ತಿದ್ದ ಕಾರಣಕ್ಕೆ ಸ್ನೇಹಿತರ ವಲಯದಲ್ಲಿ ಮನೆಮಾತಾಗಿದ್ದವು. ಆದರೆ ಅಪ್ಪನಿಗೆ ಮಾತ್ರ ಅದು ಯಾವುದೂ ತೊಂದರೆಯೇ ಅನ್ನಿಸುತ್ತಿರಲಿಲ್ಲ. ಅವನ್ನು ಕುತೂಹಲ ಹಾಗೂ ಸಮಾಧಾನದಿಂದ ರಿಪೇರಿ ಮಾಡಿಕೊಂಡು ಮುಂದೆ ಹೋಗುತ್ತಿದ್ದರಂತೆ 'ತೊಂದರೆ' ಎನ್ನುವ ಪದ ಒಬ್ಬೊಬ್ಬರಿಗೆ ಒಂದೊಂದು ರೀತಿಯ ಅರ್ಥ ಕೊಡುತ್ತದೆ. ನಾವು ಇಷ್ಟಪಡುವ ಕೆಲಸ ನಮಗೆ ಯಾವ ಕಾರಣಕ್ಕೂ ತೊಂದರೆ ಅನಿಸುವುದಿಲ್ಲ. ಹಾಗೆಯೇ ಅವರಿಗೆ ಸಣ್ಣಪುಟ್ಟ ರಿಪೇರಿ ಮಾಡಿಕೊಂಡು ವಾಹನಗಳನ್ನು ಓಡಿಸುವುದೆಂದರೆ ಬಹಳ ಇಷ್ಟ. ದೊಡ್ಡ ರಿಪೇರಿ ಕೂಡ ಆಗೊಮ್ಮೆ–ಈಗೊಮ್ಮೆ ಇದ್ದೇ ಇರುತ್ತಿತ್ತು. ರಿಪೇರಿಗೆ ಎಂದೂ ವಾಹನವನ್ನು ಗ್ಯಾರೇಜ್‌ನಲ್ಲಿ ಬಿಟ್ಟು ಬರುತ್ತಿರಲಿಲ್ಲ. ಆಸ್ಪತ್ರೆಗೆ ರೋಗಿಗಳೊಂದಿಗೆ ಹೋಗಿ ಚಿಕಿತ್ಸೆ ಪಡೆದು ಬರುವ ಹಾಗೆ, ಅಲ್ಲೇ ನಿಂತಿದ್ದು, ತಾವೂ ಕೈ ಜೋಡಿಸಿ, ರಿಪೇರಿ ಮಾಡಿಸಿಕೊಂಡು ಬರುತ್ತಿದ್ದರು.

ತಮಗೆ ಹೊಸಾ ವಾಹನವನ್ನು ಖರೀದಿಸುವ ಸಾಮರ್ಥ್ಯವಿದ್ದರೂ, ಮನಸ್ಸು ಇಲ್ಲದ ಕಾರಣ ಅದೇನೋ ಹಳೇ ವಾಹನಗಳ ಸಹವಾಸವನ್ನೇ ಬಹಳ ಇಷ್ಟ ಪಡುತ್ತಿದ್ದರು.

ಅಪ್ಪನ ದ್ವಿಚಕ್ರ ವಾಹನಗಳ ಬಗ್ಗೆ ಈ ಮೊದಲು ಹಲವಾರು ಕಡೆ ಪ್ರಸ್ತಾಪವಾಗಿದೆ. ಹಾಗಾಗಿ ಅವರ ನಾಲ್ಕು ಚಕ್ರದ ವಾಹನಗಳ ಬಗ್ಗೆ ಪ್ರಸ್ತಾಪವಾಗದಿದ್ದರೆ, ದೊಡ್ಡ ಅನ್ಯಾಯವನ್ನೇ ಮಾಡಿದ ಹಾಗಾಗುತ್ತದೆ. ನಾನು ಹುಟ್ಟಿದಾಗಿನಿಂದಲೂ ಯಾವಾಗಲೂ ಮನೆಯಲ್ಲಿ ಯಾವುದಾದರೂ ನಾಲ್ಕು ಚಕ್ರದ ವಾಹನ, ಕಾರು ಇಲ್ಲವೇ ಜೀಪು ಇದ್ದೇ ಇರುತ್ತಿತ್ತು. ಆದರೆ ಅವು ಯಾವುದೂ ಹೊಸ ವಾಹನಗಳಾಗಿರಲಿಲ್ಲ. ಎರಡೋ, ಮೂರೋ ಕೈ ಬದಲಾಗಿ ಬಂದು ಅಪ್ಪನ ಕೈ ಸೇರಿರುತ್ತಿದ್ದವು. ಅವು ಬೇರೆಯವರ ವಾಹನಗಳಿಗಿಂತ ಭಿನ್ನ. ಒಮ್ಮೊಮ್ಮೆ ತಕ್ಷಣ ಸ್ಟಾರ್ಟ್ ಆಗುತ್ತಿದ್ದ ವಾಹನ, ಕೆಲವೊಮ್ಮೆ ಗಂಟೆಗಟ್ಟಲೆ ಸತಾಯಿಸಿದ್ದ ನೆನಪು. ಅಪ್ಪನ ಅನುಭವೀ ಸ್ಪರ್ಶವಿಲ್ಲದೆ ಸುತಾರಾಂ ಜೀವ ಪಡೆಯುತ್ತಿರಲಿಲ್ಲ – ಮುಂದೆ ಚಲಿಸುತ್ತಿರಲಿಲ್ಲ. ಮನೆಯಿಂದ ಆರಾಮಾಗಿಯೇ ಹೊರಟು ಶಿವಮೊಗ್ಗದ ಮುಖ್ಯರಸ್ತೆಯಲ್ಲೋ ಅಥವಾ ನಮ್ಮ ಶಾಲೆಯ ಮುಂದೋ ಹೋಗುತ್ತಿರುವಾಗಲೇ ಏಕಾಏಕೀ ಗಕ್ಕನೆ ನಿಂತು ಬಿಡುತ್ತಿದ್ದವು. ಕೆಲವು ಸಲ ಚಳುವಳಿ–ಸತ್ಯಾಗ್ರಹದ ಕಾರಣ ಇಂಧನ ತುಂಬಿಸಲು ಸಾಧ್ಯವಾಗದೆ ನಿಂತುಬಿಟ್ಟರೆ, ಇನ್ನೂ ಹಲವಾರು ಸಲ ವಿವರಣೆಗೆ ಸಿಗದ ಕಾರಣಗಳಿರುತ್ತಿದ್ದವು. ಹತ್ತು–ಹನ್ನೆರಡು ವರ್ಷದ ಚಿಕ್ಕ ಮಕ್ಕಳಾದ ನಮಗೆ ಯಾವಾಗಲೂ ಶಾಲೆಯ ಮುಂದೇ ನಿಲ್ಲುತ್ತದೆ ಎಂದು ಅನ್ನಿಸುತ್ತಿದ್ದುದು ಸಹಜ. ಆ ಸಂದರ್ಭದಲ್ಲಿ ಆತಂಕ. ನಮ್ಮ ಗುರುಗಳು, ಸಹಪಾಠಿಗಳು, ಸ್ನೇಹಿತರು ನೋಡಿದರೆ ಎಂದು ನಾನಂತೂ ತಕ್ಷಣ "ಏನಪ್ಪಾ? ನಿಮ್ಮ ಕಾರು ಮತ್ತೆ...!" ಎನ್ನುತ್ತಿದ್ದಂತೇ ಅಪ್ಪ ತಮ್ಮ ಪ್ರೀತಿಯ ವಾಹನವನ್ನು ಸಮರ್ಥಿಸಿಕೊಂಡು ಚಳಿಗೋ, ಮಳೆಗೋ ತಾಳೆ ಹಾಕಿ "ಛೆ! ಛೇ! ಛೇ! ನೀವು ತಪ್ಪು ತಿಳಿದಿದ್ದೀರಾ ಇದು ಎಂಥಾ ಒಳ್ಳೆ ಎಂಜಿನ್ ಗೊತ್ತಾ, ಚೂರು ಕೈಹಾಕಿದರೆ ಸಾಕು.... ಎಂದು ಪುಸಲಾಯಿಸಿ ನಮ್ಮನ್ನು ಹುರಿದುಂಬಿಸುತ್ತಿದ್ದರು. ನಾನು, ತಂಗಿ ಲಾಜವಂತಿ ಹಾಗೂ ಅಮ್ಮ ಕೂಡ, ಅಜ್ಜಿಯಿಂದ ಉಚಿತವಾಗಿ ಬಳುವಳಿಯಾಗಿ ಪಡೆದ ಕಾಲು ನೋವೂ ಲೆಕ್ಕಿಸದೆ, ಅಪ್ಪನಿಗೆ ಏನೂ ಹೇಳದೆ, ಅದು ಅವರ ಕರ್ತವ್ಯಗಳಲ್ಲಿ ಒಂದು ಎನ್ನುವ ಹಾಗೆ ತಳ್ಳಲು ಮುಂದಾಗುತ್ತಿದ್ದರು. ಬೇರೆ ಯಾರೇ ಆಗಿದ್ದರೂ ಪದೇ ಪದೇ ಈ ತೊಂದರೆಗಳನ್ನು ಸಹಿಸುತ್ತಿರಲಿಲ್ಲ. ಅಮ್ಮ, ಅಪ್ಪನ ವಾಹನಗಳನ್ನು ಸಮರ್ಥಿಸದಿದ್ದರೂ ಸಿಟ್ಟನಂತೂ ತೋರಿಸುತ್ತಿರಲಿಲ್ಲ. ಆ ಸಂದರ್ಭದಲ್ಲಿ ಅಪ್ಪ ಕಾರಿನ ಬಗ್ಗೆ, ಅದರ ಎಂಜಿನ್ ವಿನ್ಯಾಸದ ಬಗ್ಗೆ ವಿವರಿಸುತ್ತಿದ್ದದ್ದನ್ನು ನಾವೇನಾದರೂ ಗಮನವಿಟ್ಟು ಕೇಳಿಸಿಕೊಂಡಿದ್ದೇ

ಆದರೆ, ಮುಂದೆ ದೊಡ್ಡ ಆಟೋಮೊಬೈಲ್ ಎಂಜಿನಿಯರ್‌ಗಳಾಗಿರುತ್ತಿದ್ದೆವೇನೋ. ಆದರೆ ನಮ್ಮ ಗಮನ, ಮನಸ್ಸು ಎಲ್ಲಾ ಯಾವಾಗ ಈ ವಾಹನ ಜೀವ ಪಡೆದು, ಎಲ್ಲರ ಕಣ್ತಪ್ಪಿಸಿ ವೇಗವಾಗಿ ಇಲ್ಲಿಂದ ಮಾಯವಾಗಿ ಬಿಡುತ್ತೋ ಎನ್ನುವ ತವಕದಲ್ಲಿ ಅಪ್ಪನ ವರ್ಣನೆಯನ್ನು ತುಸುವೂ ಕೇಳಿಸಿಕೊಂಡಿರುತ್ತಿರಲಿಲ್ಲ. ಮನೆಗೆ ಹೋದ ಮೇಲೆ ನಾವು ಯಾರೂ ಒತ್ತಡ ಹೇರಿ, ಅಪ್ಪನಿಗೆ ಹೊಸ ಕಾರು ಕೊಳ್ಳಲು ಹೇಳದ ಕಾರಣ ಮತ್ತದೇ ಕಾರಿನಲ್ಲಿ ಪ್ರಯಾಣ, ಮತ್ತದೇ ನಿಲ್ಲುವಿಕೆ, ದೂಡುವಿಕೆ.

ನಂತರ ಕೆಲವು ವರ್ಷಗಳು ಮನೆಯಲ್ಲಿ ಕಾರು ಹೋಗಿ ಜೀಪು ಬಂದಿತ್ತು. "ಓಲ್ಡ್ ಈಸ್ ಗೋಲ್ಡ್" ಎನ್ನುವ ಹಾಗೆ ಜೀಪು ತಳ್ಳುವುದನ್ನು ಹೋಲಿಸಿದರೆ ಕಾರು ತಳ್ಳುವುದು ಬಹಳ ಸುಲಭವಾಗಿತ್ತು. ಡೀಸೆಲ್ ಜೀಪಾಗಿದ್ದರಿಂದ ಬೆಳಿಗ್ಗೆ ಸ್ವಲ್ಪ 'ಹೀಟ್' ಮಾಡಬೇಕು ಅಂತ ಅಪ್ಪ ಹೇಳುತ್ತಿದ್ದದ್ದು ಮರೆತಿಲ್ಲ. ಬೆಳಿಗ್ಗೆ ಎಲ್ಲಾದರೂ ಹೊರಡುವ ಕಾರ್ಯಕ್ರಮವಿದ್ದರೆ, ಮೊದಲು ಜೀಪು ಹೊರಡಬೇಕು. ನಂತರ ನಾವುಗಳು ಬಟ್ಟೆ ಹಾಕಿಕೊಂಡು ಹೊರಡುತ್ತಿದ್ದೆವು. ತಳ್ಳಿ ತಳ್ಳಿ ಸಾಕಾಗಿ ಎಲ್ಲಿಗೂ ಹೋಗುವುದು ಬೇಡ ಎಂದು ಅನ್ನಿಸಿದ್ದೂ ಉಂಟು ನಮಗೆ. ಆದರೆ ಅಪ್ಪನಿಗೆ ಮಾತ್ರ ಎಂದೂ ಹಾಗೆ ಅನ್ನಿಸಿಲ್ಲ. ಏಕೆಂದರೆ ತಳ್ಳುವ ಕೆಲಸದಲ್ಲಿ ಅವರು ಭಾಗಿಯಾಗಿರುತ್ತಿರಲಿಲ್ಲ ಎಂದು ನಾವು ನಮ್ಮನ್ನು ಸಮರ್ಥಿಸಿಕೊಳ್ಳುತ್ತಿದ್ದೆವು.

ಉಡುಪಿಯಲ್ಲಿ ನಾನು ಪಿಯುಸಿ ಓದುತ್ತಿದ್ದಾಗ, ಹಾಸ್ಟೆಲ್‌ಗೆ ಬಿಡಲು ಇದೇ ಜೀಪಲ್ಲಿ ಅಮ್ಮ, ಅಪ್ಪ, ಲಾಜವಂತಿ ಬರುತ್ತಿದ್ದರು. ಅಪ್ಪನ ಪ್ರಕಾರ ಅದು ಬಹಳ ಒಳ್ಳೆಯ ಜೀಪು, ಘಾಟಿಯಲ್ಲಿ ಕೂಡ ಯಾವ ತೊಂದರೆ ಇಲ್ಲದೆ ಓಡುತ್ತದೆ ಎಂದು. ಯಾವುದೇ ವಾಹನವನ್ನು ಇನ್ನೊಬ್ಬರಿಂದ ಕೊಳ್ಳುವಾಗ ಅದರ ಸಂಪೂರ್ಣ ಮಾಹಿತಿ ಪಡೆದಿರುತ್ತಿದ್ದರು. ವಾಹನದ ನಕಾರಾತ್ಮಕ–ಸಕಾರಾತ್ಮಕ ಗುಣಗಳನ್ನು ತಿಳಿದಿರುತ್ತಿದ್ದರು. ಹಾಗಾಗಿ ಹಠಾತ್ತನೆ ತೊಂದರೆ ಕೊಟ್ಟಾಗ ನಮಗೆ ಗಾಬರಿಯಾಗುತ್ತಿತ್ತೇ ವಿನಹ, ಅಪ್ಪ ಮಾತ್ರ ಕಿಂಚಿತ್ತೂ ವಿಚಲಿತರಾಗದೆ ಮೊದಲೇ ನಿರೀಕ್ಷಿಸಿದ್ದ ಫಲಿತಾಂಶ ದೊರೆತಂತೆ ಆರಾಮಾಗಿಯೇ ಇರುತ್ತಿದ್ದರು. ಶಿವಮೊಗ್ಗದಿಂದ ಉಡುಪಿಗೆ ಹೋಗುವಾಗ ಆಗುಂಬೆ ಘಾಟಿಯನ್ನು ಇಳಿಯಬೇಕು. ಆಗ ಮಾತ್ರ ಜೀಪಿನ ಕಾರ್ಯಕ್ಷಮತೆಯ ಪ್ರತ್ಯಕ್ಷದರ್ಶಿಯಾಗಿರುತ್ತಿದ್ದೆ. ನನ್ನನ್ನು ಹಾಸ್ಟೆಲಿನಲ್ಲಿ ಇಳಿಸಿ ವಾಪಾಸ್ಸಾಗುವಾಗ ಘಾಟಿಯನ್ನು ಹತ್ತಬೇಕು. ಅದರ ಬಗ್ಗೆ ನಾನು ಏನೂ ಹೇಳಲಾರೆ. ಇದೇ ಜೀಪಿನಲ್ಲಿ ನನಗೆ ವಾಹನ ಚಲಾಯಿಸುವುದನ್ನು ಅಪ್ಪ ಹೇಳಿಕೊಟ್ಟಿದ್ದರು. ನಾನು ಇನ್ನೂ ೧೪ ವರ್ಷದವಳಾಗಿದ್ದ ಕಾರಣ ರಸ್ತೆಗೆ (ಸಾರ್ವಜನಿಕ) ಬಿಡದೆ, ನಮ್ಮ ತೋಟದಲ್ಲಿಯೇ ಹಿಂದೆ–ಮುಂದೆ ಓಡಿಸಲು ಬಿಡುತ್ತಿದ್ದರು. ವಿಶೇಷವಾದ ವಾಹನದಲ್ಲಿ ಡ್ರೈವಿಂಗ್ ಕಲಿತಿದ್ದರಿಂದ ನಂತರ ಯಾವುದೇ

ವಾಹನ ಓಡಿಸಲೂ ಕಷ್ಟವಾಗಲಿಲ್ಲ. ೧೮ ವರ್ಷದವಳಾಗುವ ಹೊತ್ತಿಗೆ ಸರಾಗವಾಗಿ ರಸ್ತೆಯಲ್ಲಿ ವಾಹನ ಓಡಿಸುತ್ತಿದ್ದೆ. ನನಗೆ ಡ್ರೈವಿಂಗ್ ಮಾತ್ರವಲ್ಲ, ಸಂಗೀತ ಹಾಗೂ ಛಾಯಾಗ್ರಹಣ ಕಲಿಸಿದ್ದೂ ಅಪ್ಪನೇ.

ಅಪ್ಪ ತಾವು ಮಾಡುವ ಹಾಸ್ಯದಲ್ಲಿ ತಮ್ಮನ್ನೇ ಬಳಸಿಕೊಳ್ಳುವುದು ಸಾಮಾನ್ಯ. ಅವರ ಪ್ರಕಾರ ಹಾಗೆ ಮಾಡಿದಾಗ ಬೇರೆಯವರು ನಮ್ಮ ಬಗ್ಗೆ ಹಾಸ್ಯ ಮಾಡುವ ಪ್ರಮೇಯವೇ ಬರಲ್ಲ ಅಥವಾ ಹಾಸ್ಯ ಮಾಡಿದರೂ ಮನಸ್ಸಿಗೆ ಬೇಜಾರಾಗಲ್ಲ ಎಂದು. ಅದು ಎಷ್ಟು ಸತ್ಯ ಎಂಬುದರ ಅರಿವು ಈಗಾಗಿದೆ. ಅಪ್ಪನ ಈ ಹಳೇ ವಾಹನಗಳು ನಮಗೆ ಜೀವನದಲ್ಲಿ ತಾಳ್ಮೆಯ ಪಾಠವನ್ನಂತೂ ನಿಜವಾದ ಅರ್ಥದಲ್ಲಿ ಕಲಿಸಿವೆ. ಬೇರೆಯವರ ದೃಷ್ಟಿಯಲ್ಲಿ ತೊಂದರೆಗಳ ಖಜಾನೆಗಳಾದ ಈ ಹಳೇ ವಾಹನಗಳು ಅಪ್ಪನಿಗೆ ಮಾತ್ರ ಬಹಳ ಆತ್ಮೀಯ ಹಾಗೂ ಪ್ರೀತಿಪಾತ್ರದವಾಗಿದ್ದವು.

ಅಪ್ಪನ ಪ್ರಕಾರ ಬೀಗ ಹಾಕುವ ಪ್ರವೃತ್ತಿ ಒಳ್ಳೆಯದಲ್ಲ. ಮನೆಯಿಂದ ಹೊರಗೆಲ್ಲಾದರೂ ಹೋಗುವಾಗಲೂ ಅವರು ಹೇಳುವುದು ಬೀಗ ಹಾಕಿ ಅಲ್ಲೇ ಬಾಗಿಲ ಪಕ್ಕದಲ್ಲಿ ಸಿಕ್ಕಿಸಿ ಬಿಡಬೇಕು. ವಿನಾಕಾರಣ ಕಳ್ಳರು ಬೀಗ ಒಡೆದು, ಒಳಗೆ ಹೋಗಿ ಏನೂ ದಕ್ಕದೆ ಕಂಗಾಲಾಗಿ, ದಿನದ ಕೂಲಿಯೂ ಗೀಟದೆ ತತ್ತರಿಸಿ ಹೋಗುವ ಪರಿಸ್ಥಿತಿ ಬಾರದು. ಏಕೆಂದರೆ ಮನೆಯಲ್ಲಿ ಹೇರಳವಾಗಿ ದೊರೆಯುವ ಪುಸ್ತಕಗಳು, ಸಂಗೀತವಾದ್ಯಗಳು, ಛಾಯಾಚಿತ್ರಗಳು, ಹಳೇ ಕ್ಯಾಮರಾಗಳನ್ನು ಹೊರತು ಪಡಿಸಿ ಬೇರೇನೂ ಸಿಗುವುದಿಲ್ಲ. ಹಾಗಾಗಿ ಬೀಗ ಹಾಕಿ ಅಲ್ಲೇ ಸಿಕ್ಕಿಸಿಬಿಡುವುದು ಉತ್ತಮ ಎನ್ನುತ್ತಾರೆ. ಒಡೆದ ಬೀಗದ ರಿಪೇರಿಗೆ ಸುಮ್ಮನೆ ಕಷ್ಟ ಪಡಬೇಕಾಗುತ್ತದೆ ಎಂದು ತಮಾಷೆ ಮಾಡುತ್ತಾರೆ. ಹಾಗೇ ಅವರ ವಾಹನಗಳಿಗೂ ಸಹ ಬೀಗ ಹಾಕುವ ಅನಿವಾರ್ಯತೆ ಎಂದೂ ಬರುತ್ತಿರಲಿಲ್ಲ. ಏಕೆಂದರೆ ಅವರ ವಾಹನಗಳನ್ನು ಬೇರೆಯವರು ಯಾವುದೇ ಕಾರಣಕ್ಕೂ ಮುಟ್ಟುತ್ತಿರಲಿಲ್ಲ, ಮುಟ್ಟಿದರೂ ಓಡಿಸುವ ಸಾಹಸ ಮಾಡುತ್ತಿರಲಿಲ್ಲ ಆದ್ದರಿಂದ ಕಾರು, ಜೀಪನ್ನು ಬೀಗ ಜಡಿಯದೇ ಎಲ್ಲಿ ಬೇಕಾದರೂ ನಿಲ್ಲಿಸಿ ನಿಶ್ಚಿಂತೆಯಿಂದ ಹೋಗಬಹುದಿತ್ತು. ಆದರೆ ಅಂತಹ ವಾಹನಗಳು ಅವರಿಂದ ಸಾಕಷ್ಟು ಸೇವೆ ಮಾಡಿಸಿವೆ. ಕೆಲವೊಮ್ಮೆ ಶಿವಮೊಗ್ಗಕ್ಕೆ ಮನೆಯಿಂದ ವಾಹನದಲ್ಲಿ ಒಬ್ಬರೇ ಹೊರಡುತ್ತಿದ್ದ ಅಪ್ಪ, ಶಿವಮೊಗ್ಗ ತಲುಪಿದಾಗ ಕಷ್ಟದಿಂದ ಕೂತು ವಾಹನ ಚಲಾಯಿಸುವ ಪರಿಸ್ಥಿತಿ ಬಂದಿರುತ್ತಿತ್ತು. ಮನೆಯಿಂದ ಶಿವಮೊಗ್ಗಕ್ಕೆ ೩೩ ಕಿ.ಮೀ ದಾರಿಯಲ್ಲಿ ಯಾರೇ ಕೈ ಅಡ್ಡ ಹಾಕಿದರೂ ನಿಲ್ಲಿಸುತ್ತಿದ್ದರು. ಅವರಿಗೊಂದು ಜಾಗ ವಾಹನದಲ್ಲಿ ಖಾಯಂ. ಗಂಡಸರು, ಹೆಂಗಸರು, ಮಕ್ಕಳೂ, ವಯಸ್ಸಾದವರು, ಕೋಳಿ, ಸಂತೆಚೀಲ ಇತ್ಯಾದಿಗಳೆಂಬ ಭೇದವಿಲ್ಲದೆ ತುಂಬಿ ತುಳುಕುವ ವಾಹನಕ್ಕೆ ಕೆಲವರು "ಸ್ವಇಚ್ಛೆ"ಯಿಂದಲೇ ಕೈ ಅಡ್ಡ ಹಾಕದೆ ಹಿಂದೆ

ಬರಬಹುದಾದ ಬಸ್ಸಿನ ಮೊರೆ ಹೋಗುತ್ತಿದ್ದರು. ನಾನು ಚಿಕ್ಕವಳಾಗಿದ್ದಾಗ ಭಗವತಿಕೆರೆಯಲ್ಲಿ ಶಾಲೆಯಿರದ ಕಾರಣ ಶಿವಮೊಗ್ಗದಲ್ಲಿ ಚಿಕ್ಕಪ್ಪನ ಮನೆಯಲ್ಲಿದ್ದು ಶಾಲೆಗೆ ಹೋಗುತ್ತಿದ್ದ ನಾನು ಬಹಳಷ್ಟು ಬಾರಿ ಈ ದೃಶ್ಯವನ್ನು ಕಣ್ಣಾರೆ ಕಂಡಿದ್ದೇನೆ. ಈ ಮೇಲೆ ವರ್ಣಿಸಿದ ಪ್ರಯಾಣಿಕರನ್ನು ಶಿವಮೊಗ್ಗದ ಯಾವುದೋ ಒಂದು ಜಾಗದಲ್ಲಿ ಇಳಿಸದೇ, ಯಾರು ಎಲ್ಲಿ ಇಳಿಯಬೇಕೋ ಅಲ್ಲಿ, ಆಸ್ಪತ್ರೆಯೋ, ಡಿ.ಸಿ. ಕಛೇರಿಯೋ, ಅಡಿಕೆ ಮಂಡಿಯೋ ಅವರವರ ಇಚ್ಛೆಯಂತೆ ಎಲ್ಲರನ್ನೂ ಇಳಿಸಿ ತಮ್ಮ ಕೆಲಸಕ್ಕೆ ಹೋಗುತ್ತಿದ್ದರು. ಹಾಗಾಗಿ ನಿಗದಿತ ಸಮಯದಲ್ಲಿ ತಲುಪುವ ಸಾಧ್ಯತೆ ಇರುತ್ತಿರಲಿಲ್ಲ. ಶಾಲೆಗೆ, ಕಛೇರಿಗೆ ಹೋಗುವ ಮಕ್ಕಳು ಬೆಳಗಿನ ಹೊತ್ತು ಅದರಲ್ಲಿ ಹೋಗುವ ಧೈರ್ಯ ಮಾಡುತ್ತಿರಲಿಲ್ಲ. ಸಾಯಂಕಾಲ ಮನೆಗೆ ಹಿಂದಿರುಗುವಾಗ ಏನಾದರೂ ಅಪ್ಪ ವಾಪಾಸ್ಸಾಗುತ್ತಿದ್ದರೆ ಒಂದು ಕೈ ನೋಡುತ್ತಿದ್ದರು.

೩೦–೩೫ ವರ್ಷಗಳ ಹಿಂದೆ ಭಗವತೀಕೆರೆಯ ಸುತ್ತಮುತ್ತ ಸ್ವಂತ ವಾಹನಗಳನ್ನು ಇಟ್ಟುಕೊಂಡವರು ಬಹಳ ಕಡಿಮೆ. ದಿನಕ್ಕೆ ಒಂದೇ ಸಾರಿ ವೀರಭದ್ರಸ್ವಾಮಿ ಹೆಸರಿನ ಬಸ್ಸು ಶಿವಮೊಗ್ಗದಿಂದ ಬಂದು ಒಂದು ಗಂಟೆಯ ನಂತರ ಶಿವಮೊಗ್ಗಕ್ಕೆ ವಾಪಾಸ್ಸಾಗುತ್ತಿತ್ತು. ಈಗಲೂ ಅದೇ ಬಸ್ಸಿದೆ. ಆದರೆ ದಿನಕ್ಕೆ ಎರಡು ಸಾರಿ ಬರುತ್ತದೆ. ಬಸ್ಸು ಹೋದ ನಂತರ ಏನಾದರೂ ತುರ್ತು ಕಾರಣಗಳಿಗೆ ವಾಹನದ ಅವಶ್ಯಕತೆ ಬಂದರೆ ಸುತ್ತಮುತ್ತಲಿನ ಜನ ಅಪ್ಪನನ್ನೇ ಹೊತ್ತುಗೊತ್ತು ನೋಡದೆ, ರಾತ್ರಿಯ ಸಮಯವೇ ಜಾಸ್ತಿ ಸಂಪರ್ಕಿಸುತ್ತಿದ್ದರು. ಸಂದರ್ಭಗಳೂ ಸಹ ಹಾಗೇ ಇರುತ್ತಿದ್ದವು. ಅತೀವ ಭೇದಿ, ವಾಂತಿ, ಹೆರಿಗೆ ನೋವು, ಹಾವು ಕಚ್ಚಿದಾಗ ಮುಂತಾದವು ಯಾರಿಗೂ, ಎಂದೂ 'ಆಗಲ್ಲ' ಎಂದು ಹೇಳಿದ ನೆನಪಿಲ್ಲ. ವಾಹನ ಮನೆಯಲ್ಲಿದ್ರೆ ಅಪ್ಪ ಇರುತ್ತಾರೆ, ಅಪ್ಪ ಇದ್ದರೆ ಖಂಡಿತಾ ಸಹಾಯ ಮಾಡ್ತಾರೆ ಎನ್ನುವ ಬಲವಾದ ನಂಬಿಕೆಯಿಂದ ಸಹಾಯ ಕೇಳಿ ಬರುತ್ತಿದ್ದರು. ಮನೆಯವರಿಗೆ ಕಿರಿಕಿರಿ ಮಾಡುತ್ತಿದ್ದ ವಾಹನಗಳು ರೋಗಿಗಳಿಗೆ ಮಾತ್ರ ಎಂದೂ ಮೋಸ ಮಾಡದೇ ಸಮಯಕ್ಕೆ ಸರಿಯಾಗಿ ಆಸ್ಪತ್ರೆಗೆ ಸೇರಿಸುತ್ತಿದ್ದವು. ಆದರೆ ಅದೆಷ್ಟೋ ಮಕ್ಕಳು ನಮ್ಮ ವಾಹನಗಳಲ್ಲೇ ಪ್ರಪಂಚಕ್ಕೆ ಬಂದಿವೆ ಎನ್ನುವುದನ್ನು ಮಾತ್ರ ಮರೆಯುವ ಹಾಗಿಲ್ಲ.

ರೈತ ಚಳುವಳಿ ಹಾಗೂ ಚುನಾವಣೆಗಳ ಸಂದರ್ಭದಲ್ಲಿ ಅಪ್ಪ ಹಾಗೂ ಅವರ ಸಂಗಡಿಗರಿಗೆ ಇವುಗಳು ಸ್ಮರಣಾರ್ಹ ಸೇವೆಯನ್ನು ಮಾಡಿವೆ. ಬಹು ಚಟುವಟಿಕೆಗಳ ಕೇಂದ್ರವಾಗಿ ಕೆಲಸ ಮಾಡಿವೆ. ಊಟ ತಿಂಡಿ ಸೇವಿಸಲು, ಬಟ್ಟೆ ಬದಲಾಯಿಸಲು, ಬಟ್ಟೆ ಒಣಗಿಸಲು, ಆರಾಮಿಸಲು, ನಿದ್ರೆ ಮಾಡಲು, ಬಿಸಿಲು, ಮಳೆ ಚಳಿಯಿಂದ ರಕ್ಷಣೆ ಪಡೆಯಲು ಕೆಲವೊಮ್ಮೆ ಕಛೇರಿಯಾಗಿ ಸಹ ಕಾರ್ಯನಿರ್ವಹಿಸಿವೆ. ಬೇರೆಯವರ ವಾಹನಗಳಲ್ಲಿ ಈ ಎಲ್ಲಾ ಅನುಕೂಲಗಳು ಸಾಧ್ಯವಾಗದ ಕಾರಣ

ಅಪ್ಪನ ಜೊತೆ ಚಳುವಳಿ ಹಾಗೂ ಚುನಾವಣಾ ಪ್ರಚಾರದ ಸಂದರ್ಭದಲ್ಲಿ ಕೆಲವರಂತೂ ಇದ್ದೇ ಇರುತ್ತಿದ್ದರು. ಅಂತಹ ಸಮಯ ಅಪ್ಪ ಹಗಲು, ರಾತ್ರಿಯೆನ್ನದೆ ವಾರಗಟ್ಟಲೇ ಮನೆಗೆ ಬರದೆ ತಿರುಗುತ್ತಿದ್ದಾಗ, ಒಂಟಿಯಾಗಿ ಮನೆಯಲ್ಲಿ ಇರುತ್ತಿದ್ದ ಅಮ್ಮನಿಗೂ ಸಮಾಧಾನ ಅಪ್ಪನ ಜೊತೆಯಲ್ಲಿ ಯಾರಾದರೂ ಇದ್ದೇ ಇರುತ್ತಾರೆ ಎಂದು.

ಅಪ್ಪ ಒಬ್ಬರೇ ಹೋಗುತ್ತಿದ್ದಾಗ ಅನಿಯಮಿತ ಪ್ರಯಾಣಿಕರಿಂದ ತುಂಬಿರುತ್ತಿತ್ತು. ಹಾಗೆಂದು ನಾವುಗಳು, ಅಮ್ಮ ಇದ್ದಾಗ ಯಾರನ್ನೂ ಕರೆದುಕೊಂಡು ಹೋಗುತ್ತಿರಲಿಲ್ಲ ಎಂದಲ್ಲ, ಆವಾಗಲೂ ನಿಯಮಿತ ರೀತಿಯಲ್ಲಿ ಬೇರೆಯವರನ್ನು ಹತ್ತಿಸಿಕೊಂಡು, “ಸ್ವಲ್ಪ ಹೆಚ್ಚು ಕಮ್ಮಿ ಹೋಗೋಣ” ಎನ್ನುತ್ತಿದ್ದರು. ಆದರೆ ಯಾರು ಎಲ್ಲಿಗೆ ಹೋಗಬೇಕೋ ಅಲ್ಲಿಗೆ ಕರೆದೊಯ್ದು ಬಿಡುತ್ತಿದ್ದರು. ದಾರಿಯಲ್ಲಿ ಬೇರೆಯವರ ಕೆಲಸಗಳಿಗೂ ನಿಲ್ಲಿಸಿ ಸಹಾಯ ಮಾಡುತ್ತಿದ್ದರು. ಅಪ್ಪ ನಮಗೆ ಎಲ್ಲಿಗೆ ಕೇಳಿದರೂ ‘ಇಲ್ಲ’ ಎನ್ನದೆ ಕರೆದುಕೊಂಡು ಹೋಗುತ್ತಿದ್ದರು. ಎಷ್ಟು ಹೊತ್ತಾದರೂ ಕಾದು ತಾಳ್ಮೆಯಿಂದ ಕೇಳಿದ್ದನ್ನು ಕೊಡಿಸುತ್ತಿದ್ದರು. ನಾವು ಎಂದೂ ಅವರ ಈ ಗುಣಗಳ ದುರುಪಯೋಗ ಮಾಡಿಕೊಳ್ಳಲಿಲ್ಲ. ಅಪ್ಪ ನನಗಾಗಲಿ, ತಂಗಿಗಾಗಲಿ ಒಮ್ಮೆಯೂ ಹೊಡೆಯುವುದಿರಲಿ, ಬೈಯ್ದದ್ದು ಕೂಡ ಇಲ್ಲ. ನಮ್ಮನ್ನು ಚಿಕ್ಕವರಿದ್ದಾಗಿನಿಂದಲೇ ಸ್ವತಂತ್ರವಾಗಿ ಆಲೋಚಿಸುವಂತೆ ಮಾಡಿದ್ದಾರೆ. ನಮ್ಮ ಅನಿಸಿಕೆಗಳನ್ನು ಗಂಭೀರವಾಗೇ ಪರಿಗಣಿಸುತ್ತಿದ್ದರು. ನಮ್ಮ ಸಹಪಾಠಿಗಳಿಗೆ ಹೋಲಿಸಿದಾಗ ನಮ್ಮ ಆಲೋಚನೆಗಳು ಎಷ್ಟು ಭಿನ್ನ ಎನ್ನಿಸುತ್ತಿತ್ತು. ಅದರ ಬಗ್ಗೆ ಈಗಲೂ ಹೆಮ್ಮೆ ಅನ್ನಿಸುತ್ತದೆ.

ಇತ್ತೀಚಿನ ವರ್ಷಗಳ ತನಕ ಈ ಹಳೇ ವಾಹನಗಳ ಸಹವಾಸದಲ್ಲೇ ಇದ್ದರು. ಕೊನೆಗೂ ಹೊಸದೊಂದು ಕಾರು ಕೊಳ್ಳುವ ಸಂದರ್ಭ ಬಂತು. ಅದು ಯಾವಾಗೆಂದರೆ ನನ್ನ ಮೊದಲ ಮಗಳು ಹುಟ್ಟಿದಾಗ, ಮೊಮ್ಮಗಳನ್ನು ಶಿವಮೊಗ್ಗದ ಆಸ್ಪತ್ರೆಯಿಂದ ಮನೆಗೆ ಭಗವತಿಕೆರೆಗೆ ಕರೆತರುವಾಗ ವಿಪರೀತ ಪೆಟ್ರೋಲ್ ವಾಸನೆಯಿಂದ ಕಂಗಾಲಾದ ನಾವು ಏನೂ ಹೇಳದೆ ಸಹಿಸಿಕೊಂಡೆವು. ಆದರೆ ಅಪ್ಪ ಮಾತ್ರ ಚಿಕ್ಕ ಮಗುವಿನ ಬಗ್ಗೆ ಯೋಚಿಸಿ ತುಂಬಾ ನೊಂದುಕೊಂಡರು. ನಮ್ಮನ್ನು ಮನೆಯಲ್ಲಿ ಇಳಿಸಿ ತಕ್ಷಣ ಶಿವಮೊಗ್ಗಕ್ಕೆ ರಿಪೇರಿ ಮಾಡಿಸಲು ಹೋದರು. ಆದರೆ ನಮ್ಮ ಅದೃಷ್ಟಕ್ಕೋ ಅಪ್ಪನ ದುರಾದೃಷ್ಟಕ್ಕೋ ಸಂಪೂರ್ಣವಾಗಿ ಪೆಟ್ರೋಲ್ ವಾಸನೆಯನ್ನು ನಿರ್ಬಂಧಿಸಲು ವಿಫಲರಾದರು. ಹಾಗಾಗಿ ವಾಹನ ಬದಲಾಯಿಸಲು ತೀರ್ಮಾನಿಸಿದರು. ಹೊಸದಲ್ಲ ಬೇರೆಯ ಹಳೆ ವಾಹನಕ್ಕೇ. ಅಪ್ಪ ಯಾವಾಗಲೂ ಪರಿಚಯದವರಿಂದಲೇ ವಾಹನ ಖರೀದಿಸುತ್ತಿದ್ದರು. ಹಾಗಾಗಿ ವಾಹನದ ಬಗ್ಗೆ ಸಂಪೂರ್ಣ ಮಾಹಿತಿ ಇರುತ್ತಿತ್ತು. ಈ ಸಲ ಅಪ್ಪನ ಮೇಲಿನ ಕಾಳಜಿಯಿಂದ

ಯಾರೂ ಅವರಿಗೆ ಹಳೆ ಕಾರು ಕೊಡಲು ತಯಾರಾಗಲಿಲ್ಲ. ಈ ಕಾರು ಆಗಲೇ ಬೇರೆಯವರಿಗೆ ಮಾತಾಗಿದೆ ಎಂದೋ, ಇಲ್ಲ ಇಲ್ಲ ಈ ಕಾರು ಈಗ ಮಾರುತ್ತಿಲ್ಲ ಎಂದೋ ಹೇಳಿದ ಉದಾಹರಣೆಗಳಿವೆ. ಈ ವಯಸ್ಸಿನಲ್ಲಿ ಶಾಮಣ್ಣ ಇನ್ನೂ ರಸ್ತೆಯ ಮೇಲೆ ನಿಂತು ರಿಪೇರಿ ಮಾಡಿಕೊಳ್ಳುತ್ತಾ ಇರುವುದು ಬೇಡ ಎಂಬ ಕಾಳಜಿಯಿಂದ ಹಾಗೆ ಹೇಳಿದೆವೆಂದು ನಮಗೆ ಸಿಕ್ಕಾಗ ಖುದ್ದಾಗಿ ಕೆಲವರು ಹೇಳಿದ್ದಾರೆ. ಮನೆಯಲ್ಲಿ ಪುಟ್ಟ ಮಗುವಿದ್ದ ಕಾರಣ, ಹಳ್ಳಿ ಬೇರೆ, ಕಾರಿನ ಅವಶ್ಯಕತೆಯನ್ನು ಅರಿತ ಅಪ್ಪ ಹೋಗಲಿ, ಹೊಸ ಕಾರು ನೋಡಬಹುದಿತ್ತೇನೋ ಎಂದರು. ಅವರ ಈ ಮಾತನ್ನು ಹೆಚ್ಚು ದಿನ ತಡ ಮಾಡದೇ, ಚಾಚೂ ತಪ್ಪದೇ ಪಾಲಿಸಲು ತೀರ್ಮಾನಿಸಿದ್ದರಿಂದ ಅಪ್ಪನ ಮೊದಲ ಹೊಸ ಕಾರು ಬಂದೇ ಬಿಡ್ತು. ಆದರೆ ಎಲ್ಲರಂತೆ ಸಂತೋಷವಾಗಲಿ, ಉತ್ಸಾಹವಾಗಲಿ ಅಪ್ಪ ಹೊಸ ಕಾರು ಓಡಿಸುವಾಗ ಎಂದೂ ಕಾಣಲಿಲ್ಲ. ಈಗಲೂ ಯಾವುದಾದರೂ ಹಳೇ ಕಾರು, ಜೀಪು ರಸ್ತೆಯಲ್ಲಿ ಕಂಡರೆ, ಯಾರೋ ಆತ್ಮೀಯರು ಬಹಳ ದಿನಗಳ ನಂತರ ಸಿಕ್ಕ ಹಾಗೆ ಕುತೂಹಲ ಭರಿತ ಆಸೆಯ ಕಣ್ಣುಗಳಿಂದ ನೋಡುತ್ತಾರೆ. ಅವಕಾಶ ಸಿಕ್ಕರೆ ಹತ್ತಿರ ಹೋಗಿ ಕೂಲಂಕುಶವಾದ ಪರೀಕ್ಷೆ ನಡೆಸಿ ವಿವರಣೆ ಪಡೆದು ಬರುತ್ತಾರೆ.

ನಿನ್ನಂಥ ಅಪ್ಪ ಎಲ್ಲೂ ಇಲ್ಲ!

ಲಾಜವಂತಿ

ನಾನು ಚಿಕ್ಕವಳಿರುವಾಗಿನಿಂದಲೂ ಅಪ್ಪ ಹೋರಾಟ, ಚಳುವಳಿಗಳಲ್ಲಿಯೇ ಹೆಚ್ಚಾಗಿ ತೊಡಗಿರುತ್ತಿದ್ದುದರಿಂದ ಅವರು ಮನೆಯಲ್ಲಿ ಇರುತ್ತಿದ್ದುದೇ ಕಡಿಮೆ. ಮನೆಯಲ್ಲಿ ಇದ್ದರೂ ಕೂಡ ಅವರ ಸ್ನೇಹಿತರು ಮತ್ತು ಅವರ ಚಟುವಟಿಕೆಗಳಲ್ಲಿಯೇ ತೊಡಗಿರುತ್ತಿದ್ದರು. ಈಗಲೂ ಕೂಡ ಅವರು ಹಾಗೆಯೇ! ಆದ್ದರಿಂದ ಅವರಿಗೆ ಮನೆ, ತೋಟ ನನ್ನ ಮತ್ತು ಅಕ್ಕನ ವಿದ್ಯಾಭ್ಯಾಸದ ಬಗ್ಗೆ ಹೆಚ್ಚು ಗಮನವಿಟ್ಟು ನೋಡಿಕೊಳ್ಳಲು ಆಗುತ್ತಿರಲಿಲ್ಲ. ಆದ್ದರಿಂದ ಅವರು ಆ ಎಲ್ಲಾ ಜವಾಬ್ದಾರಿಯನ್ನು ಸಂಪೂರ್ಣವಾಗಿ ಅಮ್ಮನಿಗೆ ವಹಿಸಿಬಿಟ್ಟಿದ್ದರು. ಜವಾಬ್ದಾರಿ ಎನ್ನುವುದಕ್ಕಿಂತ ಸಂಪೂರ್ಣವಾದ ಸ್ವಾತಂತ್ರ್ಯ ಕೊಟ್ಟಿದ್ದಾರೆ ಎನ್ನುವುದೇ ಸೂಕ್ತ ಅನ್ನಿಸುತ್ತದೆ. ಏಕೆಂದರೆ ಅಪ್ಪ ಹಾಗೆ ಮಾಡದೇ ಎರಡರ ಜವಾಬ್ದಾರಿಯನ್ನು ಅವರೇ ನೋಡಿಕೊಂಡಿದ್ದರೆ ಎರಡೂ ಕಡೆಯು ನಿಭಾಯಿಸಲು ಆಗದೇ ಗೊಂದಲದಲ್ಲಿ ಸಿಕ್ಕಿಕೊಳ್ಳುತ್ತಿದ್ದರು. ಅಪ್ಪ ಆ ವಿಷಯದಲ್ಲಿ ಸರಿಯಾಗಿಯೆ ತೀರ್ಮಾನ ತೆಗೆದು ಕೊಂಡು ಅಮ್ಮನೆ ಅವುಗಳನ್ನು ಚೆನ್ನಾಗಿ ನಿಭಾಯಿಸಿ ಕೊಂಡು ಹೋಗುತ್ತಾರೆಂಬ ನಂಬಿಕೆಯಿಂದ ಅಮ್ಮನಿಗೆ

ವಹಿಸಿರಬೇಕು! ಅಮ್ಮ ಸಹ ಅವುಗಳೆಲ್ಲವನ್ನು ಅಪ್ಪನಿಗಿಂತ ಚೆನ್ನಾಗಿಯೆ ನಿಭಾಯಿಸುತ್ತಿರುವುದಿಂದ ಅಪ್ಪನಿಗೆ ಅವುಗಳ ಬಗ್ಗೆ ತಲೆಕೆಡಿಸಿಕೊಳ್ಳುವ ಪ್ರಸಂಗ ಬರಲೆ ಇಲ್ಲ. ಅಮ್ಮ ಇವುಗಳ ಬಗ್ಗೆ ಮಾತ್ರ ಜವಾಬ್ದಾರಿ ತೆಗೆದುಕೊಳ್ಳದೆ ಅಪ್ಪನ ಬಗ್ಗೆಯೂ ತೆಗೆದುಕೊಂಡಿದ್ದಾರೆ. ಅದು ಅಪ್ಪನ ಚಳುವಳಿ ಇರಬಹುದು ಅಥವಾ ಹೋರಾಟವಾಗಿರಬಹುದು ಅಥವಾ ಅಪ್ಪನ ಹವ್ಯಾಸಗಳಾಗಿರಬಹುದು, ಪ್ರತಿಯೊಂದು ವಿಚಾರದಲ್ಲಿಯೂ ಅಪ್ಪನಿಗೆ ಅಮ್ಮನ ಸಹಕಾರ ಸಂಪೂರ್ಣವಾಗಿ ಇದೆ. ಇಲ್ಲಿಯವರೆಗೂ ಅಪ್ಪ, ತಾವು ಇಷ್ಟಪಟ್ಟಂತೆ ಜೀವನ ನಡೆಸಿಕೊಂಡು ಬಂದಿದ್ದಾರೆಂದರೆ ಅಮ್ಮನ ಸಹಕಾರವೆ ಮುಖ್ಯ ಕಾರಣ.

ಅಪ್ಪ ಎಲ್ಲರಿಗಿಂತ ಭಿನ್ನ ಎಂದು ಖಂಡಿತವಾಗಿಯೂ ಹೇಳಬಹುದು. ಅದು ಅವರು ಹಾಕುವ ಬಟ್ಟೆಯಿಂದ ಹಿಡಿದು ಅವರ ತಾಳ್ಮೆ ಮತ್ತು ಅವರ ಅಚ್ಚುಮೆಚ್ಚಿನ ಹವ್ಯಾಸಗಳಲ್ಲಿಯೂ ಭಿನ್ನತೆಯನ್ನು ಕಾಣಬಹುದು. ಒಟ್ಟಾರೆ ಅವರ ಅಲೋಚನೆ ಹಾಗೂ ಜೀವನ ಶೈಲಿಯೇ ಭಿನ್ನ. ಅಪ್ಪ ಹಾಕುವ ಬಟ್ಟೆ ನಾನು ಚಿಕ್ಕವಳಿದ್ದಾಗನಿಂದಲೂ ಒಂದೇ ರೀತಿಯದ್ದಾಗಿದೆ. ಅದು ಖಾದಿ ಜುಬ್ಬಾಗಳು ಮತ್ತು ಬಿಳಿಯ ಪೈಜಾಮ. ಇದು ಅವರ ಪ್ರತಿನಿತ್ಯದ ಉಡುಪು. ಮನೆಯಲ್ಲಿ ಇದ್ದಾಗ ಕೆಲವೊಮ್ಮೆ ಬಿಳಿ ಪಂಚೆಯನ್ನು ಉಟ್ಟುಕೊಳ್ಳುತ್ತಾರೆ. ಆದ್ರೆ ಅದಕ್ಕಿಂತ ಪೈಜಾಮವೇ ಆರಾಮ ಎಂದು ಹೆಚ್ಚಾಗಿ ಅದನ್ನೇ ಹಾಕಿ ಕೊಳ್ಳುತ್ತಾರೆ. ಆ ಬಟ್ಟೆಗಳಿಗೆ ಇಸ್ತ್ರಿ ಇಲ್ಲದೆ ಅವರು ಹಾಕುವುದೇ ಇಲ್ಲ. ಯಾವುದಾದರು ಕಾರ್ಯಕ್ರಮಕ್ಕೆ ಹೋಗಲು ತಡವಾಗಿದ್ದರೂ ಅವರು ಅಂದುಕೊಂಡ ಬಟ್ಟೆಯನ್ನು ಕೂಡ ಇಸ್ತ್ರಿ ಮಾಡಿಕೊಂಡೆ ಹಾಕಿಕೊಳ್ಳಬೇಕು! ಹಳೆಯ ಬಟ್ಟೆ ಆದ್ರು ಒಗೆದು ಇಸ್ತ್ರಿ ಆಗಿರಬೇಕು ಅಷ್ಟೆ. ಅವರ ಮದುವೆಯ ದಿನವೂ ಕೂಡ ಅವರು ಹಳೆಯ ಬಟ್ಟೆಯನ್ನೆ ಇಸ್ತ್ರಿ ಮಾಡಿಸಿಕೊಂಡು ಹಾಕಿಕೊಂಡಿದ್ದನ್ನು ಈಗಲೂ ನೆನಪಿಸಿಕೊಳ್ಳುತ್ತಾರೆ ಇವರು ಚಿಕ್ಕವರಿರುವಾಗಿ ನಿಂದಲೂ ಬೆಳೆದು ಬಂದ ಅಭ್ಯಾಸ ಎಂದೂ, ಅದೂ 'ಜುಬ್ಬಾ ಪೈಜಾಮ ಎರಡು ಬಿಳಿಯ ಬಣ್ಣದ್ದೆ ಆಗಿರಬೇಕೆಂದು ಇಷ್ಟಪಡುತ್ತಿದ್ದ ಈ ಶಾಮು' ಎಂದು ಸಂದರ್ಭ ಬಂದಾಗ ಅಜ್ಜಿ ಹೇಳುತ್ತಿರುತ್ತಾರೆ.

ಅಪ್ಪ ಸ್ವಲ್ಪ ವರ್ಷಗಳ ಹಿಂದೆ ನನ್ನ ಭಾವನ ಹತ್ತಿರ "ರೀ ವಿನಯ್, ಈ ಪೈಜಾಮ ಹಾಕಿಕೊಂಡು ತೋಟಕ್ಕೆ ಹೋಗಿ ಬಂದ್ರೆ ಬಿಳಿ ಬಣ್ಣ ಹೋಗಿ ಕೆಂಪು ಬಣ್ಣ ಆಗುತ್ತೆ ಮಾರಾಯ್ರೆ. ಅದನ್ನು ತೊಳಯೋದೆ ಕಷ್ಟದ ಕೆಲಸ. ನೀವು ಹಾಕೊತರ ಜೀನ್ಸ್ ಪ್ಯಾಂಟ್ ಹಾಕಿದ್ರೆ ಹೇಗಿರುತ್ತೆ? ನೀವು ಮುಂದಿನ ಸಾರಿ ಬರುವಾಗ ನನಗೊಂದು ತಂದು ಕೊಡಿ ನೋಡೋಣ, ಇಲ್ಲ ನಿಮ್ಮದೇ ಯಾವುದಾದ್ರು ಹಾಕದೇ ಇರುವುದು ಇದ್ರೆ ಕೊಡಿ ನೋಡೋಣ" ಅಂದಿದ್ರು. ಅವರು ಅದನ್ನೆ

ಗಮನದಲ್ಲಿ ಇಟ್ಟುಕೊಂಡು ಮುಂದಿನ ಸಾರಿ ಬರುವಾಗ ತಂದರು. ಆದ್ರೆ ಈ ಅಪ್ಪ ಒಂದು ದಿನ ಸ್ವಲ್ಪ ಹೊತ್ತು ಹಾಕಿಕೊಂಡು(ಕೆಲವು ಕ್ಷಣ) 'ರೀ ವಿನಯ್ ನೀವುಗಳು ಇದನ್ನು ಹೇಗೆ ಹಾಕಿ ಕೊಳ್ಳುತ್ತಿರಾ ಮಾರಾಯ್ರೆ! ನನಗೆ ಇದು ಕಾಲಿಗೆ ಅಂಟಿಕೊಂಡ ಹಾಗೆ ಅನಿಸುತ್ತೆ. ನನಗೆ ನನ್ನ ಪೈಜಾಮನೆ ಸರಿ... ನಾನು ಬಹಳ ವರ್ಷಗಳಿಂದ ಈ ಪೈಜಾಮವನ್ನೆ ಹಾಕಿದ್ದು ನೋಡಿ... ಈಗ ಬೇರೆಯದನ್ನು ರೂಢಿಸಿಕೊಳ್ಳುವುದು ಕಷ್ಟವಾಗುತ್ತೆ ಬೇಜಾರು ಮಾಡಿಕೊಳ್ಳಬೇಡಿ' ಅಂದರು. ಮತ್ತೆ ಎಂದೂ ಅದನ್ನು ಹಾಕುವ ಪ್ರಯತ್ನ ಮಾಡಲಿಲ್ಲ! ನಮಗೂ ಬೇರೆ ಬಟ್ಟೆಯಲ್ಲಿ ಅವರನ್ನು ನೋಡುವುದು ಅಗಲಿಲ್ಲ. ಇನ್ನು ನಾವು ಹಾಕಿರುವ ಬಟ್ಟೆಯ ಬಣ್ಣ ಇಷ್ಟ ಆದರೆ ಅದನ್ನು ನೋಡಿ 'ನನಗೂ ಈ ರೀತಿ ಬಣ್ಣದ ಜುಬ್ಬದ ಬಟ್ಟೆ ತಂದುಕೊಡ್ರೆ' ಅಂತ ಕೇಳುತ್ತಾರೆ. 'ಇದೇ ಬಣ್ಣದ್ದು ಎಲ್ಲಿ ಸಿಗುತ್ತೆ ಅಪ್ಪ?' ಅಂತ ನಾವು ಹೇಳಿದರೆ 'ನೋಡಿ ಸಿಕ್ಕಾಗ, ನನಗೆ ಅವಸರ ಏನು ಇಲ್ಲ'ವೆನ್ನುತ್ತಾರೆ. ಇವರು ಹಾಕುವ ಟೋಪಿಯನ್ನು ಅವರ ಹತ್ತಿರವೆ ಕೇಳಿ ತೆಗೆದುಕೊಳ್ಳುತ್ತಾರೆ. ಕೆಲವೊಮ್ಮೆ ಇವರೇ ಅವರ ಹತ್ತಿರ ಹೇಳಿ ತರಿಸಿಕೊಳ್ಳುತ್ತಾರೆ. ಇವರು ಹಾಕುವ ಹಸಿರು ಟವಲ್ ಕಥೆಯು ಅಷ್ಟೆ. ಅವುಗಳನ್ನು ಇವರು ತೆಗೆದುಕೊಂಡಿರುವುದಕ್ಕೆ ಲೆಕ್ಕವೆ ಇಲ್ಲ! ಹೋದಲ್ಲಿಯೇ ಮರೆತು ಬರುವುದೋ, ಇಲ್ಲ ಉಳಿದುಕೊಂಡ ಮನೆಯಲ್ಲಿ ಒಂದು ಜೊತೆ ಇಲ್ಲಿಯೆ ಇರಲಿ ಎಂದು ಬಿಟ್ಟು ಬರುವುದೊ ಮಾಡುತ್ತಾರೆ. ಇವರಿಗೆ ಹಸಿರು ಟವಲ್ ಇಷ್ಟ ಅಂತ ಇವರ ಆತ್ಮೀಯರು ತಂದು ಕೊಡುತ್ತಾರೆ.

ಅಪ್ಪನ ತಾಳ್ಮೆಯನ್ನು ನನ್ನ ಚಿಕ್ಕವಯಸ್ಸಿನಿಂದಲೂ ಇಲ್ಲಿಯವರೆಗೂ ಒಂದೇ ರೀತಿಯಲ್ಲಿ ಕಂಡಿದ್ದೇನೆ. ಈ ರೀತಿಯ ತಾಳ್ಮೆಯನ್ನು ನೊಡುವುದು ತುಂಬಾ ಕಡಿಮೆ. ಮತ್ತೆ ಅವರು ಎಷ್ಟೇ ಕಷ್ಟ ಮತ್ತು ತೊಂದರೆಗೆ ಸಿಲುಕಿದರೂ ಅದೆಲ್ಲಾ ಅವರಿಗೆ ತೊಂದರೆಯ ವಿಷಯಗಳೆ ಅಗುವುದಿಲ್ಲ. ಉದಾಹರಣೆಗೆ ಈ ವಯಸ್ಸಿನಲ್ಲಿಯೂ ಅವರು ಶಿವಮೊಗ್ಗದಿಂದ ಬೆಂಗಳೂರಿಗೆ ಬಸ್ಸಿನಲ್ಲಿ ಅಥವಾ ರೈಲಿನಲ್ಲಿ ನಿಂತುಕೊಂಡೆ ಬಂದರೂ ಮನೆಗೆ ಬಂದಾಗ ನಾವು 'ಯಾಕೆ ಅಷ್ಟು ತೊಂದರೆ ತೆಗೆದುಕೊಂಡು ಬಂದ್ರಿ ಬೇರೆ ಬಸ್ಸಿಗೆ ಬರಬಹುದಿತ್ತಲ್ಲಾ?' ಅಂದ್ರೆ 'ತೊಂದರೆ ಏನು ಆಗಲಿಲ್ಲ. ನಾನು ಆರಾಮಾಗಿಯೇ ಬಂದೆ. ನಾನು ಒಬ್ಬನೇ ನಿಂತು ಬಂದದ್ದಲ್ಲ. ನನ್ನ ಹಾಗೆ ಅನೇಕರು ನಿಂತೇ ಬಂದಿದ್ದು. ಅವರಿಗೆಲ್ಲಾ ತೊಂದರೆಯಾಗದ್ದು ನನಗೇಕೆ ಆಗಬೇಕು? ನನಗೆ ಖಂಡಿತಾ ತೊಂದರೆ ಅಗಿಲ್ಲಾ. ಬೇಜಾರು ಮಾಡಿಕೊಳ್ಳಬೇಡಿ' ಅಂತ ಹೇಳುತ್ತಾರೆ.

ಅವರ ಆತ್ಮೀಯರ ಮನೆಗೆ ಕೆಲವೊಮ್ಮೆ ಹೊತ್ತು ಗೊತ್ತಿಲ್ಲದೇ ಹೋಗಿ ಬಿಡುತ್ತಾರೆ. ಅವನ್ನು ಕುರಿತು ನಾವುಗಳು, ಹಾಗೆ ಹೋಗಿ ತೊಂದರೆ ಕೊಡಬೇಡಿ ಎಂದು

ಹೇಳಿದರೆ 'ಇಲ್ಲಪ್ಪ! ನಾನು ಅವರಿಗೇನು ತೊಂದ್ರೆ ಕೊಡಲಿಲ್ಲ...' ಎಂದು ಇವರೇ ಹೇಳಿಬಿಡುತ್ತಾರೆ! ಯಾಕಂದ್ರೆ ಅದೆಲ್ಲಾ ಅಪ್ಪನಿಗೆ ತೊಂದರೆಯ ವಿಷಯವೇ ಅಲ್ಲ!! ಅದಕ್ಕೆ ಇರಬೇಕು ಕುವೆಂಪುರವರು ತುಂಬಾ ವರ್ಷಗಳ ಹಿಂದೇಯೆ ಅಪ್ಪ ಮತ್ತು ತೇಜಸ್ವಿ ಮಾಮನನ್ನು ಕುರಿತು 'ತೊಂದರೆ ಎಂದರೆ ನಿಮಗೆ ಬೇರೆ ಅರ್ಥ, ನಮಗೆ ಬೇರೆ ಅರ್ಥ!' ಎಂದು ಹೇಳಿದ್ದರಂತೆ. ಹಾಗೆಯೆ ಅಜ್ಜಿ ಹೇಳುವ ಪ್ರಕಾರ 'ಅವನು ಚಿಕ್ಕವನಿದ್ದಾಗಿನಿಂದಲೂ ಹಾಗೇ!'

ಅದೇ ರೀತಿ ನಮ್ಮ ಮನೆಗೆ ಯಾರಾದ್ರು ಎಷ್ಟು ಹೊತ್ತಿಗೆ ಬಂದರೂ ಅವರಿಗೆ ತೊಂದರೆ ಅನಿಸುವುದೇ ಇಲ್ಲ. ಮನೆಗೆ ಯಾರೆ ಬಂದರೂ ಅವರನ್ನು ಒಂದೇ ರೀತಿ ಕಾಣುತ್ತಾರೆ. ಬಂದವರೆಲ್ಲರನ್ನೂ ಒಂದೇ ರೀತಿ ಉಪಚರಿಸುತ್ತಾರೆ. ಬಂದವರಿಗೆ ಏನಾದರೂ ತುರ್ತು ಕೆಲಸವಿದ್ದರೆ ಅಪ್ಪನಿಂದ ತಪ್ಪಿಸಿಕೊಂಡು ಹೋಗುವುದು ಸ್ವಲ್ಪ ಕಷ್ಟದ ಕೆಲಸವೆ. ಅವರ ಕಷ್ಟವನ್ನು ಅಮ್ಮ ಅರಿತು ಅವರಿಗೆ ಹೊಗಲು ದಾರಿ ಮಾಡಿಕೊಡಬೇಕಾಗಿರುತ್ತದೆ. ಮತ್ತೆ ಅವರನ್ನು ಕುರಿತು 'ಏನ್ರಿ ಮಾರಾಯ್ರೆ ಇಷ್ಟು ಅವಸರ, ಈ ಕೆಲಸಗಳನ್ನೆಲ್ಲಾ ಇಟ್ಟುಕೊಂಡು ನಮ್ಮ ಮನೆಗೆ ಬರಬೇಡಿ. ಇನ್ನೊಮ್ಮೆ ಅರಾಮಾಗಿ ಖಂಡಿತಾ ಬನ್ನಿ' ಎನ್ನುತ್ತಾರೆ. ಅಮ್ಮನೇ ಮನೆಯಲ್ಲಿ ಬೆಳೆದ ಹಣ್ಣನ್ನು ಕೊಟ್ಟು ಕಳಿಸಲು ತಯಾರಿ ಮಾಡಿಕೊಂಡಿದ್ದರೂ ಅಪ್ಪ ಅಮ್ಮನನ್ನು ಕರೆದು 'ಶ್ರೀ, ಇವರಿಗೆ ಬಾಳೆಹಣ್ಣನ್ನೋ ಅಥವಾ ಸಪೋಟವನ್ನು ಪ್ಯಾಕ್ ಮಾಡಿ ಕೊಡು' ಎಂದೂ ಹೇಳುತ್ತಾರೆ. ಹಾಗೆ ಬಂದವರಿಗೆ ಏನನ್ನಾದರೂ ಕೊಟ್ಟು ಕಳಿಸಿದರೆ ಇವರಿಗೆ ಸಮಾಧಾನ. ಮನೆಯಲ್ಲಿ ಏನೂ ಇಲ್ಲದೆ, ಹಾಗೆ ಕಳಿಸಿದರೆ ಏನೂ ಕೊಟ್ಟು ಕಳಿಸಲಿಲ್ಲವಲ್ಲ ಎಂದು ಚಿಂತಿಸುತ್ತಿರುತ್ತಾರೆ. ಇನ್ನೊಮ್ಮೆ ಅವರು ಬಂದಾಗಲೋ ಅಥವಾ ಇವರೆ ಅವರ ಮನೆಗೆ ಹೋಗಿ ಕೊಟ್ಟು ಬಂದ ಮೇಲೆ ಇಬ್ಬರಿಗೂ ಸಮಾಧಾನ.

ಇನ್ನೂ ಯಾರಾದರೂ ಸ್ವಲ್ಪ ಬಿಡುವು ಮಾಡಿಕೊಂಡು ಬಂದರೆ ಇವರ ಹತ್ತಿರ ಇರುವ ಎಲ್ಲಾ ಸಂಗೀತ ವಾದ್ಯಗಳನ್ನು ನುಡಿಸಿ ಅವುಗಳ ಬಗ್ಗೆ ವಿವರಣೆಯನ್ನು ನೀಡುತ್ತಾರೆ. ಅಂದ್ರೆ ಅವುಗಳನ್ನು ಕೊಂಡುಕೊಂಡಿದ್ದರಿಂದ ಹಿಡಿದು ಅದನ್ನು ಕಲಿಸಿದ ಗುರುಗಳ ಬಗ್ಗೆ, ಆ ಸಂದರ್ಭದಲ್ಲಿ ನಡೆದಂತಹ ವಿಶೇಷ ಘಟನೆಗಳ ಬಗ್ಗೆ ಎಲ್ಲಾವನ್ನು ತಾಳ್ಮೆಯಿಂದ ಮತ್ತು ಪ್ರೀತಿಯಿಂದ ವಿವರಿಸುತ್ತಾರೆ. ಅದರ ಬಗ್ಗೆ ಸ್ವಲ್ಪವೂ ಗೊತ್ತಿಲ್ಲದೆ ಇದ್ದವರು ಬಂದರೂ ಕೂಡ ಅದರ ಬಗ್ಗೆ ಸ್ವಲ್ಪನಾದ್ರು ಆಸಕ್ತಿ ಬೆಳೆಸಿಕೊಂಡು ಹೋಗುವಷ್ಟರ ಮಟ್ಟಿಗೆ ವಿವರಿಸುತ್ತಾರೆ. ಅದರ ಬಗ್ಗೆ ಅಪ್ಪನಿಗಿಂತ ಹೆಚ್ಚು ತಿಳಿದುಕೊಂಡವರು ಬಂದ್ರೆ ಅವರಿಂದ ಕೇಳಿ ಹೇಳಿಸಿಕೊಂಡು ಕಲಿಯುತ್ತಾರೆ. ಅದು ಅವರಿಗಿಂತ ಚಿಕ್ಕವರಿರಬಹುದು ಅಥವಾ ದೊಡ್ಡವರಿರಬಹುದು. ನಾನು ಈ

ವಯಸ್ಸಿನಲ್ಲಿ ಅವರಿಂದ ಏನು ಕಲಿಯುವುದು ಎಂದು ಸ್ವಲ್ಪವೂ ಅಂದುಕೊಳ್ಳದೆ ಕಲಿತುಕೊಳ್ಳಲು ಪ್ರಯತ್ನಿಸುತ್ತಾರೆ.

ಇನ್ನೂ ಇವರ ಫೋಟೋಗ್ರಫಿ ವಿಷಯವೂ ಅಷ್ಟೆ. ಬಂದವರಿಗೆ ಇವರ ಎಲ್ಲಾ ಕ್ಯಾಮರಗಳು, ಅವುಗಳ ಲೆನ್ಸ್‌ಗಳ ಬಗ್ಗೆಯು ವಿವರಣೆ ನಡೆಯುತ್ತದೆ. ಅವರು ಮೊದಲು ತೆಗೆದುಕೊಂಡ ಕ್ಯಾಮರಾದಿಂದ ಈಗ ಉಪಯೋಗಿಸುತ್ತಿರುವ ಕ್ಯಾಮರಾದವರೆಗಿನ ಕಥೆಗಳನ್ನು ವಿವರಿಸುತ್ತಾರೆ. ಅದರ ಪ್ರಾಯೋಗಿಕ ತರಗತಿಯೂ ಜೊತೆ ಜೊತೆಗೆ ನಡೆಯುತ್ತದೆ! ಕ್ಯಾಮರದ ಬಗ್ಗೆ ಏನು ಗೊತ್ತಿಲ್ಲದವರು ಬಂದರೂ ಈ ವಿವರಣೆಯನ್ನೆಲ್ಲಾ ಕೊಟ್ಟು ಅವರ ಹತ್ತಿರವೆ ಕೆಲವು ಚಿತ್ರಗಳನ್ನು ತೆಗೆಸಿ ಪ್ರಿಂಟ್ ಆದ ಮೇಲೆ ಅದನ್ನು ಕಳಿಸುವುದಾಗಿ ತಿಳಿಸುತ್ತಾರೆ. ಅಪ್ಪ ಕಳಿಸಲು ಮರೆತರೆ ಅವು ಮತ್ತೆ ಅಮ್ಮನ ಸಹಕಾರದಿಂದ ಅವರ ಕೈ ಸೇರುತ್ತವೆ.

ಈ ಫೋಟೋಗ್ರಫಿ ವಿಚಾರ ಅಲ್ಲಿಗೆ ನಿಲ್ಲದೆ, ಇವರು ಮೊದಲು 'ಅರಿವು' ಸಂಸ್ಥೆಯ ಮೂಲಕ ತಯಾರಿಸುತ್ತಿದ್ದ ಕನ್ನಡದ ಶುಭಾಶಯ ಪತ್ರದವರೆಗೂ ಹೋಗುತ್ತದೆ. ಅವರಿಗೆ ಆ ಶುಭಾಶಯ ಪತ್ರಗಳನ್ನು ತೋರಿಸಿ ಅವುಗಳನ್ನು ತಯಾರಿಸುವ ಬಗೆಯನ್ನು ವಿವರಿಸಿ. ನೀವು ಒಳ್ಳೆಯ ಚಿತ್ರಗಳನ್ನು ತೆಗೆದು ಈ ರೀತಿ ಶುಭಾಶಯ ಪತ್ರವನ್ನು ತಯಾರಿಸಿ ಎಂದೂ, 'ನಿಮಗೆ ಬೇಕಾದಷ್ಟು ಮಾತ್ರವಾಗಿರದೇ ಮಾರಾಟದ ದೃಷ್ಟಿ ಇಟ್ಟುಕೊಂಡು ಮಾಡಿ. ಅದು ಕನ್ನಡದ ಶುಭಾಶಯ ಪತ್ರ; ಕನ್ನಡದ ಕೆಲಸ' ಎಂದು ಒತ್ತಿ ಹೇಳುತ್ತಾರೆ. 'ನನಗೆ ವ್ಯವಹಾರದ ಜ್ಞಾನ ಕಡಿಮೆ. ಲಾಭ ಬರುವುದಿರಲಿ, ನನ್ನ ಕೈಯಿಂದಲೆ ಹಾಕಬೇಕಾಗುತ್ತದೆ. ಆದ್ರೆ ನೀವು ಸ್ವಲ್ಪ ಯೋಚನೆ ಮಾಡಿ ಮಾಡಿದರೆ ಒಳ್ಳೆಯದಾಗುತ್ತದೆ. ನೀವಾದ್ರು ಮಾಡಿ ಮಾರಾಯ್ರೆ' ಎಂದು ಕಾಳಜಿಯಿಂದ ಹೇಳುತ್ತಾರೆ. ಈ ರೀತಿ ಫೋಟೋಗ್ರಫಿಯ ಬಗ್ಗೆ ಕೇಳಿಸಿಕೊಂಡ ಕೆಲವರು ಇದನ್ನು ಒಂದು ಹವ್ಯಾಸವನ್ನಾಗಿ ಮಾಡಿಕೊಂಡಿದ್ದಾರೆ. ಇನ್ನೂ ಕೆಲವರು ತಮ್ಮ ವೃತ್ತಿಯನ್ನಾಗಿಯೇ ಮಾಡಿಕೊಂಡಿದ್ದಾರೆ. ಅವರುಗಳನ್ನೆಲ್ಲಾ ನೋಡಿ ಸಂತೋಷ ಪಡುತ್ತಾರೆ ಅಪ್ಪ.

ಈ ಶುಭಾಶಯ ಪತ್ರವನ್ನು ಮೊದಲು ಮನೆಯಲ್ಲಿ ಮಾಡುತ್ತಿದ್ದ ಸಂದರ್ಭದಲ್ಲಿ ಮನೆ ಒಂದು ಚಿಕ್ಕ ಕಾರ್ಖಾನೆಯೇ ಆಗಿರುತ್ತಿತ್ತು! ಬೇರೆ ಬೇರೆಯವರು ತೆಗೆದ ಚಿತ್ರಗಳು, ತೆಗೆದವರ ಹೆಸರು ಇರುವ ಕಾರ್ಡುಗಳು, ಅವುಗಳನ್ನು ಹಾಕುವ ಕವರುಗಳು... ಹೀಗೆ ಅವುಗಳನ್ನು ತಯಾರಿಸುವುದು ಅಂದ್ರೆ ಫೋಟೋ ತೆಗೆದವರ ಹೆಸರು ಇರುವ ಕಾರ್ಡಗೆ ಅವರು ತೆಗೆದ ಫೋಟೋವನ್ನೆ ನೋಡಿ ಹಚ್ಚುವುದು, ಅವುಗಳನ್ನು ಮಡಿಸಿ ಕವರ್‌ಗೆ ಹಾಕುವುದು –ಈ ರೀತಿಯ ಕೆಲಸಗಳನ್ನು ನಮ್ಮನ್ನು ಸೇರಿಸಿಕೊಂಡು ಮಾಡುತ್ತಿದ್ದರು. ಅಪ್ಪ ಹೀಗೆ ಯಾವ ವಿಚಾರವನ್ನಾದರೂ

ಹೊರಗಿನವರಿಗೆ ಮಾತ್ರ ವಿವರಿಸದೆ ಮಕ್ಕಳಾದ ನಮಗೂ, ಈಗ ಅಳಿಯಂದಿರಿಗೆ ಮತ್ತು ಮೊಮ್ಮಕ್ಕಳಿಗೆ ಕೂಡ ಅದೇ ರೀತಿಯ ತಾಳ್ಮೆಯಿಂದ ವಿವರಿಸುತ್ತಾರೆ. ಈ ವಿವರಣೆಗಳೆಲ್ಲಾ ಹಲವಾರು ಬಾರಿ ನನ್ನ ಕಿವಿಯ ಮೇಲೆ ಬಿದ್ದರೂ ಅದನ್ನು ಹೆಚ್ಚು ಗಂಭೀರವಾಗಿ ತೆಗೆದುಕೊಂಡು ಕಲಿಯಲಿಲ್ಲವಲ್ಲ, ಕಲಿತಿದ್ದರೆ ಇಂದು ಒಳ್ಳೆಯ ಸಂಗೀತಗಾರ್ತಿಯೊ ಅಥವಾ ಒಳ್ಳೆಯ ಫೋಟೋಗ್ರಾಫರ್ ಆಗಿಯೋ ಇರಬಹುದಿತ್ತು ಅಂತ ಈಗ ಯೋಚಿಸಿದರೆ ಬೇಜಾರಾಗುತ್ತೆ. ಅಪ್ಪ ಮೊದಲಿನಿಂದಲೂ ಕಲಿಯಲೇ ಬೇಕು ಎಂದು ಒತ್ತಡ ಹಾಕಿ ಕಲಿಸಿದ್ದರೆ ಕಲಿಯುತ್ತಿದ್ದೆನೊ ಏನೋ! ಅವರು ಯಾವ ವಿಷಯಕ್ಕೂ ಒತ್ತಡ ಹಾಕದಿದ್ದುದೇ ಕಾರಣವಾಯಿತೇನೋ. ಆದರೆ ಅವರು ಎಂದೂ ನಾನು ಹಾಗೆ ಕಲಿಯಲಿಲ್ಲ ಎಂದು ಬೇಜಾರು ಮಾಡಿಕೊಂಡಿಲ್ಲ. ನನಗೆ ಈ ಸಂದರ್ಭದಲ್ಲಿ ಹಾಗೆ ಅನ್ನಿಸಿತ್ತು ಅಷ್ಟೆ. ಆದ್ರೆ ಅವುಗಳ ಬಗ್ಗೆ ಖಂಡಿತವಾಗಿಯೂ ಒಳ್ಳೆಯ ಅಸಕ್ತಿಯಂತೂ ಇದೆ. ಅಸಕ್ತಿ ಬರುವಷ್ಟಾದರು ಅವರ ಮಾತು ಪರಿಣಾಮ ಬೀರಿದೆ ಎಂಬುದೆ ಸಮಾಧಾನ.

ಅಪ್ಪನ ಸರಳತೆಯ ವಿಚಾರಕ್ಕೆ ಬಂದ್ರೆ ಅವರು ಬಾಯಿಯಲ್ಲಿ ಮಾತ್ರ ಹೇಳದೇ ಅವರು ಬದುಕುತ್ತಿರುವ ರೀತಿಯು ಅದೇ ಆಗಿದೆ. ಇದು ಅವರನ್ನು ಹತ್ತಿರದಿಂದ ಬಲ್ಲ ಪ್ರತಿಯೊಬ್ಬರಿಗೂ ತಿಳಿದ ವಿಚಾರವೇ ಆಗಿದೆ. ನಮಗೂ ಸಂದರ್ಭ ಸಿಕ್ಕಾಗ ಹೇಳುತ್ತಿರುತ್ತಾರೆ : "ನಾವು ಯಾವಾಗಲು ಮೇಲಿನವರನ್ನು ನೋಡಿ ಬದುಕಬಾರದು ನಮಗಿಂತ ಕೆಳಗಿರುವವರನ್ನು ನೋಡಿ ಬದುಕಬೇಕು. ಕೆಳಗಿರುವವರನ್ನು ಮೇಲೆ ತರಲು ಸಾಧ್ಯವಾದಷ್ಟು ಪ್ರಯತ್ನಿಸಬೇಕು. ಅವರೂ ಮೇಲೆ ಬಂದು ಅವರಿಗೆ ಒಳ್ಳೆಯದಾದಾಗ ಸಂತೋಷಪಡಬೇಕು. ಮೇಲಿನವರನ್ನು ನೋಡಿ ಅವರಿಂದ ಕಲಿಯುವ ಒಳ್ಳೆಯ ವಿಚಾರವಿದ್ರೆ ಕಲಿಯಬೇಕು. ಅದು ಬಿಟ್ಟು ಅವರ ಹತ್ತಿರ ಯಾವುದೋ ವಸ್ತುವು ಇದೆ ಎಂದು ತೆಗೆದುಕೊಳ್ಳಬಾರದು. ನಮಗೆ ಅದರ ಅವಶ್ಯಕತೆ ಖಂಡಿತಾವಾಗಿಯೂ ಇದೆ ಅನ್ನಿಸಿದರೆ ತೆಗೆದುಕೊಳ್ಳಬೇಕೇ ವಿನಃ ಅನವಶ್ಯಕವಾಗಿ ಯಾವ ವಸ್ತುವನ್ನು ಕೊಳ್ಳಬಾರದು. ನಮಗೆ ಅವಶ್ಯಕತೆ ಇಲ್ಲದೆ ಇರುವ ವಸ್ತು ನಮ್ಮ ಹತ್ತಿರ ಇದೆ ಎಂದರೆ ಅದು ಯಾರೋ ತೀರಾ ಅವಶ್ಯಕತೆ ಇರುವರಿಗೆ ಸಿಕ್ಕಿಲ್ಲಾ ಎಂದರ್ಥ. ಆದ್ದರಿಂದ ಏನಾದರೂ ಕೊಳ್ಳುವಾಗ ಯೊಚಿಸಿ ಕೊಳ್ಳಬೇಕು." ಹಾಗೆಯೇ "ಏನಾದ್ರು ಮಾಡುವಾಗಲು ಅದರ ಮುಂದಿನ ಪರಿಣಾಮವನ್ನು ಅರಿತು, ಯೋಚಿಸಿ ಮಾಡಬೇಕು" ಎನ್ನುತ್ತಾರೆ.

ಅಪ್ಪ ಪ್ರಾಣಿ ಪಕ್ಷಿ ಗಿಡ ಮರಗಳ ಬಗ್ಗೆ ಅಪಾರವಾದ ಪ್ರೀತಿಯನ್ನು ಹೊಂದಿದ್ದಾರೆ. ಮೊದಲಿನಿಂದಲೂ ನಮ್ಮ ಮನೆಯಲ್ಲಿ ಒಂದಲ್ಲ ಒಂದು ಜಾತಿಯ ನಾಯಿಗಳು ತಪ್ಪಿಲ್ಲ. ಮೊದಲೆಲ್ಲ ಮೂರು-ನಾಲ್ಕು ನಾಯಿಗಳು ಇರುತ್ತಿದ್ದವು. ಅವುಗಳು ಇದ್ದಾಗ

ಅವುಗಳನ್ನು ಮಕ್ಕಳ ಹಾಗೆ ಹಚ್ಚಿಕೊಳ್ಳುವುದು, ಅವು ವಯಸ್ಸಾಗಿಯೊ, ಹುಷಾರಿಲ್ಲದೆಯೇ ತೀರಿಹೋದಾಗ ದುಃಖ ಪಡುವುದು, 'ಇವುಗಳನ್ನು ಸಾಕುವುದು ಬೇಡ ದುಃಖ ಪಡುವುದು ಬೇಡ... ಇನ್ನು ನಾಯಿ ತರುವುದೇ ಬೇಡ' ಅನ್ನುವುದು, ಅವುಗಳಿಲ್ಲದೆ ಅವರಿಗೆ ಇರಲು ಆಗದೇ ಮತ್ತೆ ತರುವುದು ನಮ್ಮ ಮನೆಯಲ್ಲಿ ನಡೆದ ಪ್ರತೀತಿ. ಈಗ ಮುಧೋಳ್ ಜಾತಿಯ ಮರಿಯಣ್ಣನೆ ಅವರ ಮಗನಾಗಿ ಪ್ರೀತಿ ಪಡೆಯುತ್ತಿದ್ದಾನೆ. ಅಪ್ಪ ಮನೆಯಲ್ಲಿ ಇದ್ದಾಗ ಅವರೇ ಅವನಿಗೆ ತಿಂಡಿಯನ್ನು ಹಾಕಬೇಕು. ಅವನು ಕೂಡ ಅಪ್ಪನೇ ಹಾಕಲು ಬರಲಿ ಎಂದು ಪ್ರೀತಿಯಿಂದ ಕಾಯುತ್ತಿರುತ್ತಾನೆ. ರಜೆಯಲ್ಲಿ ಮೊಮ್ಮಕ್ಕಳಾದ ಊರ್ವಿ, ಮಂದ್ರ, ತಾನ ಮನೆಯಲ್ಲಿ ಸೇರಿಕೊಂಡಾಗ 'ಏನು ತಾತ ನೀವು ನಮಗೆ ಮಾತ್ರ ತಿಂಡಿ ತಿನ್ನಿಸುವುದಿಲ್ಲ ಮರಿಯಣ್ಣನಿಗೆ ಮಾತ್ರ ದಿನಾ ನೀವೇ ಕೊಡುತ್ತೀರಾ!' ಎಂದು ತಾತನಿಗೆ ತಮಾಷೆ ಮಾಡುತ್ತಿರುತ್ತಾರೆ!

ಈಗ ಒಂದು ವರ್ಷದ ಹಿಂದೆ ಈ ಮರಿಯಣ್ಣನಿಗೆ ರಕ್ತ ವಾಂತಿ ಭೇದಿ ಶುರುವಾಗಿತ್ತು. ಅಮ್ಮ ಫೋನ್‌ನಲ್ಲಿ ಡಾಕ್ಟರ್ ಹತ್ತಿರ ಔಷಧಿ ಕೇಳಿ ಹಾಕಿದರು. ಅದು ಹತೋಟಿಗೆ ಬಂದಿರಲಿಲ್ಲ. ಅದೇ ಸಮಯದಲ್ಲಿ ನಮಗೆ ಒಂದು ದಿನ ರಜೆ ಇದ್ದ ಕಾರಣ, ನಾನು, ತಾನ ಮತ್ತು ಸತೀಶ್ ಮನೆಗೆ ಹೋಗಿದ್ದೆವು. ಯಾವಾಗಲೂ ನಾವು ಹೋದಾಗ ಸಂಭ್ರಮದಲ್ಲಿ ಇರುತ್ತಿದ್ದ ಅಪ್ಪ, ಅಮ್ಮ ಈ ನಾಯಿ ಮರಿಯಣ್ಣನಿಗೆ ಹುಷಾರಿಲ್ಲದೆ ಬೇಜಾರಿನಲ್ಲಿದ್ದರು. ಅಪ್ಪ 'ಶಿವಮೊಗ್ಗಕ್ಕೆ ಡಾಕ್ಟರ ಕ್ಲಿನಿಕ್‌ಗೆ ಕರೆದುಕೊಂಡು ಹೋಗೋಣ' ಎಂದಾಗ ಅಮ್ಮ 'ತಾಳಿ, ಸಂಜೆಯವರೆಗೆ ನೋಡೋಣ. ಹೊಸ ಮಾತ್ರೆ ಯಾವುದೋ ಡಾಕ್ಟರ ಹತ್ತಿರ ಕೇಳಿ ಹಾಕಿದ್ದೇನೆ. ಸಂಜೆಯ ತನಕ ನೋಡಿ ಹೋಗೋಣ' ಎಂದ್ರು. ಅಪ್ಪ ಸುಮ್ಮನಾದ್ರು. ಆದ್ರೆ ಮರಿಯಣ್ಣ ಸಂಜೆಯಾದ್ರು ಸ್ವಲ್ಪವೂ ಸುಧಾರಿಸದೆ ಗಂಭೀರ ಸ್ಥಿತಿ ತಲುಪಿದಾಗ ಶಿವಮೊಗ್ಗಕ್ಕೆ ಕರೆದುಕೊಂಡು ಹೋಗುವ ತೀರ್ಮಾನ ಮಾಡಿ ಹೊರಟರು.

ಅಪ್ಪ ಮರಿಯಣ್ಣನಿಗೆ ಆದ ಸ್ಥಿತಿಯನ್ನು ನೋಡುತ್ತಾ 'ಬೆಳಿಗ್ಗೆಯೇ ಕರೆದುಕೊಂಡು ಹೋಗೋಣವೆಂದ್ರೆ ಈ ಶ್ರೀದೇವಿನೇ ಕೇಳಲಿಲ್ಲ' ಅಂತ ಅಮ್ಮನಿಗೆ ಜೋರು ಮಾಡುತ್ತಾ, ಸತೀಶ್ ಮತ್ತು ತೋಟ ನೋಡಿಕೊಳ್ಳುವ ಸೋಮ್ಲನನ್ನು ಕರೆದುಕೊಂಡು ಮರಿಯಣ್ಣನನ್ನು ಡಿಕ್ಕಿಯಲ್ಲಿ ಕೂರಿಸಿಕೊಂಡು ಹೊರಟರು. ಹೀಗೆ ಹೋಗುವಾಗ ಅಪ್ಪ ಮರಿಯಣ್ಣನ್ನು ಆದಷ್ಟು ಬೇಗ ಡಾಕ್ಟರ ಹತ್ತಿರ ಕರೆದುಕೊಂಡು ಹೋಗಬೇಕೆನ್ನುವ ಮನಃಸ್ಥಿತಿ ಹೇಗಿತ್ತೆಂದು ಮನೆಗೆ ಬಂದ ತಕ್ಷಣವೇ ಸತೀಶ್ ಹೇಳಿದರು. ಅದನ್ನು ಈಗಲೂ ನೆನಪಿಸಿಕೊಂಡು ನಗುತ್ತಿರುತ್ತಾರೆ, ಆದೇನೆಂದರೆ ಆ ಸಂಜೆಯ ಸಮಯದಲ್ಲಿ ನಮ್ಮ ಮನೆಯಿಂದ ಶಿವಮೊಗ್ಗಕ್ಕೆ ಹೋಗುವಾಗ ಮನೆಗೆ ವಾಪಸ್ಸು ಹೋಗುವ

ದನ, ಕುರಿ ಮತ್ತು ಎಮ್ಮೆಯ ಹಿಂಡುಗಳು ಸಿಕ್ಕುವುದು ಸಾಮಾನ್ಯ. ಅವು ಸಾಧಾರಣಕ್ಕೆ ದಾರಿ ಬಿಡುವುದಿಲ್ಲ. ಅವುಗಳನ್ನು ನೋಡಿಕೊಳ್ಳುವವರು ಸುಲಭಕ್ಕೆ ದಾರಿ ಮಾಡಿಕೊಡುವುದಿಲ್ಲ. ಆ ದಿನವೂ ಅವುಗಳು ಸಿಕ್ಕಿವೆ, ಅವುಗಳು ಸುಲಭದಲ್ಲಿ ದಾರಿ ಬಿಡುವುದಿಲ್ಲ ಎಂದು ಅರಿತ ಅಪ್ಪ ಕಾರಿನ ಕಿಟಕಿಯಿಂದ ತಲೆ ಹೊರಗೆ ಹಾಕಿ ಬೇಗ ಅವುಗಳನ್ನು ಸರಿಸಿ 'ನಮ್ಮ ನಾಯಿ ಮರಿಯಣ್ಣನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗುತ್ತಿದ್ದೇವೆ ಅವನ ಸ್ಥಿತಿ ಗಂಭೀರವಾಗಿದೆ' ಎಂದು ಜೋರಾಗಿ ಕೂಗಿ ಹೇಳುತ್ತಿದ್ದರಂತೆ. ಅದಕ್ಕೆ ಸತೀಶ್ 'ಹಾರ್ನ್ ಮಾಡೋಣ. ಸುಮ್ಮನೆ ಇರಿ ಅಪ್ಪ' ಎಂದು ಹೇಳಿದರೂ ಕೇಳದೆ ಶಿವಮೊಗ್ಗ ತಲುಪುವವರೆಗೂ ಹಾಗೆ ಮಾಡುತ್ತಿದ್ದರಂತೆ. ನಂತರ ಮರಿಯಣ್ಣನಿಗೆ ಡ್ರಿಪ್ ಹಾಕಿಸಿ ಅವನು ಸುಧಾರಿಸಿಕೊಂಡ ಮೇಲೆ ತಡವಾಗಿ ರಾತ್ರಿ ಮನೆಗೆ ಬಂದರು.

ಮರಿಯಣ್ಣ ಹುಷಾರಾದ ಮೇಲೆ ಈ ವಿಷಯ ನೆನಪಿಸಿಕೊಂಡು ನಗಾಡಿದ್ದೆ ನಗಾಡಿದ್ದು! ಮರಿಯಣ್ಣ ಪೂರ್ತಿ ಹುಷಾರಾದ್ರು ಅಪ್ಪ ಅಷ್ಟು ಸಮಾಧಾನಗೊಂಡಿರಲಿಲ್ಲ. ಏಕೆಂದರೆ 'ಹೋಗುವಾಗ ದನ ಎಮ್ಮೆ ಕುರಿಗಳನ್ನು ಹೊಡೆದುಕೊಂಡು ಹೋಗುವವರಿಗೆ ಜೋರು ಧ್ವನಿಯಲ್ಲಿ ಮಾತಾಡಿದೆ ಪಾಪ ಅವರು ಏನು ಅಂದುಕೊಂಡ್ರೆನೋ ಸದ್ಯದಲ್ಲಿಯೇ ಒಂದು ದಿನ ಅದೇ ಸಮಯಕ್ಕೆ ಶಿವಮೊಗ್ಗಕ್ಕೆ ಹೊರಟರೆ ಅವರು ದಾರಿಯಲ್ಲಿ ಸಿಗುತ್ತಾರೆ ಅವರಿಗೆ ಆ ದಿನದ ಪರಿಸ್ಥಿತಿಯನ್ನು ಹೇಳಬೇಕು ಇಲ್ಲದಿದ್ದರೆ ತಪ್ಪು ತಿಳಿದುಕೊಳ್ಳುತ್ತಾರೆ' ಎಂದು ಪೇಚಾಡಿಕೊಳ್ಳುತ್ತಿದ್ದರು. ನಂತರದಲ್ಲಿ ಹೋಗಿ ಹೇಳಿಬಂದಿರಬಹುದು. ಮಾರನೆಯ ದಿನವೇ ನಾವು ಬೆಂಗಳೂರಿಗೆ ಬಂದೆವು.

ಇನ್ನೂ ಬೆಕ್ಕುಗಳ ಬಗ್ಗೆಯೂ ಅಷ್ಟೆ ಪ್ರೀತಿ ಅಪ್ಪನಿಗೆ. ಅಪ್ಪನಿಗೆ ಬೆಳಿಗ್ಗೆ ಎದ್ದೊಡನೆ ಕಾಫಿ ಜೊತೆ ಬಿಸ್ಕತ್ ತಿನ್ನುವ ಅಭ್ಯಾಸ. ಆದ್ರೆ ಇವರು ತಿನ್ನುವ ಮೊದಲು ಬೆಕ್ಕುಗಳಿಗೆ ಹಾಕಿ ನಂತರ ಇವರು ತಿಂದರೇನೆ ಅಪ್ಪನಿಗೆ ಸಮಾಧಾನ. ಕೊಡದೆ ತಿನ್ನಲು ಅವೂ ಬಿಡುವುದಿಲ್ಲ! 'ಮ್ಯಾವ್ ಮಿಯಾವ್' ಅಂತ ಅಪ್ಪನ ಕಾಲು ಸುತ್ತುತ್ತವೆ. ಅಮ್ಮ ಅಪ್ಪನಿಗಿಂತ ಒಂದು ಪಟ್ಟು ಜಾಗ್ರತೆ ವಹಿಸುವುದರಿಂದ ಮನೆಯ ಮಕ್ಕಳಿಗಿಂತ ಹೆಚ್ಚು ಪ್ರೀತಿಯಲ್ಲಿ ಬೆಳೆಯುತ್ತಿವೆ.

ಮತ್ತೆ ಕೊಟ್ಟಿಗೆಯಲ್ಲಿ ಇರುವ ದನಕರುಗಳ ಬಗ್ಗೆಯೂ ಪ್ರೀತಿ ಇಟ್ಟುಕೊಂಡಿದ್ದಾರೆ. ಮೊದಲೆಲ್ಲ ಕೊಟ್ಟಿಗೆ ತುಂಬಾ ದನಕರುಗಳು ಇರುತ್ತಿದ್ದವು. ಈಗ ನೋಡಿಕೊಳ್ಳುವವರು ಸರಿಯಾಗಿ ಇಲ್ಲದೆ ಎರಡು ಹಸುಗಳು ಮಾತ್ರ ಇವೆ. ಈ ಸಾರಿ ದೀಪಾವಳಿಯ ಗೋಪೂಜೆಯಲ್ಲಿ, 'ನೋಡು ಈಗ ಎರಡೆ ದನಗಳು ಇರುವುದು. ಮೊದಲೆಲ್ಲ ಕೊಟ್ಟಿಗೆ ತುಂಬಿರುತ್ತಿತ್ತು. ಮೊದಲೆಲ್ಲ ಅಮ್ಮ ಎಷ್ಟು ಸಂತೋಷದಲ್ಲಿ ಕೊಟ್ಟಿಗೆಗೆ

ಹೋಗುತ್ತಿದ್ದಳು! ಈಗ ದನಗಳೇ ಇಲ್ಲದೆ ಅವಳಿಗೆ ಹೋಗುವುದಕ್ಕೆ ಬೇಜಾರು. ಮತ್ತೆ ಮೊದಲಿನಂತೆ ಈಗ ಅವಳಿಗೆ ಆಗುವುದಿಲ್ಲ. ಮೊದಲೆಲ್ಲ ಅಷ್ಟು ದನದ ಹಾಲನ್ನು ಅಮ್ಮನೆ ಕರಿಯುತ್ತಿದ್ದಳು. ಈಗ ಅವಳ ಕಾಲು ನೋವಿನಿಂದ ಕಷ್ಟವಾಗುತ್ತದೆ' ಎಂದು ಬೇಜಾರಿನಿಂದ ಹೇಳಿದರು.

ಹಕ್ಕಿ ಪಕ್ಷಿಗಳ ಬಗ್ಗೆಯೂ ಅತಿಯಾದ ಕಾಳಜಿ ವಹಿಸುತ್ತಾರೆ. ಅಪ್ಪನ ಮನೆಯ ಹತ್ತಿರ ಹಲವಾರು ಜಾತಿಯ ಹಕ್ಕಿಗಳು ವಾಸಿಸುತ್ತವೆ. ಅವುಗಳಿಗೆ ಮನೆಯ ಹತ್ತಿರ ಹಬ್ಬದ ವಾತಾವರಣವೆ ಯಾವಾಗಲೂ! ಏಕೆಂದ್ರೆ ಅಲ್ಲಿ ಬಿಡುವ ಹಣ್ಣುಗಳನ್ನು ನಾವು ಉಪಯೋಗಿಸಿ ಉಳಿದುದನ್ನು ಮಾರುವುದೇ ಇಲ್ಲ. ಅದೆಲ್ಲಾ ಅವುಗಳಿಗೇ. ಅದ್ದರಿಂದ ಅವುಗಳಿಗೆ ಅಹಾರದ ಚಿಂತೆ ಇಲ್ಲ. ಇನ್ನೂ ಆ ಹಕ್ಕಿಗಳಲ್ಲಿ ಯಾವುದಾದರು ಹಕ್ಕಿ ಗೂಡು ಕಟ್ಟುತ್ತಿರುವುದರ ಸೂಕ್ಷ್ಮ ಅಪ್ಪನಿಗೆ ತಿಳಿದರೆ ಸಾಕು, ಆ ಕ್ಷಣದಿಂದ ಅದು ಎಲ್ಲಿ ಎಂದು ಪತ್ತೆ ಹಚ್ಚುತ್ತಾರೆ. ನಂತರ ಕ್ಯಾಮರ ಹೆಗಲಿಗೆ ಬಿತ್ತು ಎಂದೇ ಅರ್ಥ. ಅವು ಗೂಡು ಕಟ್ಟುವ ಹಂತದಿಂದ ಹಿಡಿದು ಅವು ಮೊಟ್ಟೆ ಇಟ್ಟು ಕಾವು ಕೊಟ್ಟು ಮರಿಮಾಡಿ ಹಕ್ಕಿ ಮರಿಗೆ ಆಹಾರ ತಂದು ಕೊಡುವುದು. ನಂತರದಲ್ಲಿ ಹಾರಲು ಕಲಿಸುವುದು, ಆ ಹಕ್ಕಿ ಮರಿಗಳು ಸಂಪೂರ್ಣವಾಗಿ ಹಾರಲು ಕಲಿತು ಹಾರಿ ಹೋಗುವವರೆಗೂ ಅವುಗಳನ್ನು ನೋಡಿಕೊಂಡು ಪ್ರತಿ ಹಂತದಲ್ಲಿಯೂ ಫೋಟೋ ತೆಗೆದು ಸಂಭ್ರಮ ಪಡುತ್ತಾರೆ. ಅವುಗಳು ಗೂಡು ಕಟ್ಟುವ ಸಂದರ್ಭದಲ್ಲಿ ಯಾರಾದರು ಬಂದರೆ, ಇವರೇ ಒಂದು ಹೊಸಮನೆಯನ್ನು ಕಟ್ಟಿದ್ದಾರೆ ಎನ್ನುವಷ್ಟು ಸಂತೋಷದಲ್ಲಿ ಅವು ಗೂಡು ಕಟ್ಟಿದ ರೀತಿಯನ್ನು ವಿವರಿಸುತ್ತಾರೆ. ಆ ಮರಿಗಳು ಹಾರಲು ಕಲಿಯುವಾಗಲಂತೂ ಇವರ ಸಂಭ್ರಮ ಹೇಳತೀರದು! ನಾವುಗಳು ಆ ಸಮಯದಲ್ಲಿ ಇದ್ದರೆ ನಮ್ಮನ್ನು ಬಿಡದೆ ಕರೆದುಕೊಂಡು ಹೋಗಿ ತೋರಿಸುತ್ತಾರೆ. ಮೊದಲು ಅಪ್ಪನನ್ನು ನೋಡಿ ಹಕ್ಕಿ ಹೆದರಿದರೂ ನಂತರದಲ್ಲಿ ಇವರನ್ನು ಅವುಗಳ ಮನೆಯ ಒಬ್ಬ ಸದಸ್ಯನಂತೆ ಭಾವಿಸುತ್ತವೆ. 'ಒಂದು ದಿನ ಹೋಗುವುದು ಹೆಚ್ಚು ಕಡಿಮೆ ಆದರೆ ಯಾಕೆ ಬಂದಿಲ್ಲ ಅಂತ ಆ ಕಡೆ ಈ ಕಡೆ ಹಾರಿ ಚಡಪಡಿಸುತ್ತವೆ. ಮತ್ತೆ ನನ್ನನ್ನು ನೋಡಿದ ಮೇಲೆ ಸಮಾಧಾನ ಅವುಗಳಿಗೆ' ಎಂದು ಅವುಗಳನ್ನು ಸೂಕ್ಷ್ಮವಾಗಿ ಗಮನಿಸಿ ಹೇಳುತ್ತಾರೆ. ಹಾಗೇ, 'ನೋಡಿ ಇಷ್ಟು ಚಿಕ್ಕ ಹಕ್ಕಿಗಳಿಗೆ ಎಷ್ಟೊಂದು ಬುದ್ಧಿ! ಎಷ್ಟು ಬೇಗ ಇನ್ನೊಬ್ಬರನ್ನು ಹಚ್ಚಿಕೊಳ್ಳುತ್ತವೆ. ಆದ್ರೆ ಈ ಮನುಷ್ಯರು ಜಾತಿ, ಧರ್ಮ, ಅಂತಸ್ತು ಅಂತ ಮಾತಾಡಿಸುವುದಕ್ಕೆ ಹಿಂದೆ ಮುಂದೆ ನೋಡುತ್ತಾರೆ, ಯಾವಾಗ ಅವರಿಗೆಲ್ಲಾ ಬುದ್ಧಿ ಬರುತ್ತದೆಯೊ' ಎಂದು ನೋವಿನಿಂದ ಹೇಳುತ್ತಾರೆ. ಕೆಲವೊಮ್ಮೆ ಹಕ್ಕಿಗಳು ಗೂಡುಕಟ್ಟುವ ಸಂದರ್ಭದಲ್ಲಿಯೇ ಏನಾದರೂ ತೊಂದರೆಯಾಗಿ ನಿಲ್ಲಿಸಿ ಬಿಟ್ಟರೆ ಅಥವಾ ಮೊಟ್ಟೆಯನ್ನು ಯಾವುದಾದರು ಹಕ್ಕಿ

ಬಂದು ಕದ್ದು ತಿಂದರೆ ಅಥವಾ ಮರಿಗಳೇ ಹಾರಲು ಕಲಿಯುವ ಮೊದಲೇ ಏನಾದರು ಆಗಿ ಸತ್ತು ಹೋದರೆ ಅಪ್ಪ ತುಂಬಾ ದುಃಖ ಪಡುತ್ತಾರೆ.

ಮೊದಲೆಲ್ಲ ಅಪ್ಪ ತೆಗೆದ ಫೋಟೋಗಳು ಮನೆಯಲ್ಲಿಯೇ ಪ್ರಿಂಟ್ ಆಗುತ್ತಿದ್ದವು. ತೆಗೆದು ಆದ ತಕ್ಷಣವೆ ಅ ರೋಲನ್ನು ಡೆವೆಲಪ್ ಮಾಡಿ ಅದನ್ನು ಒಣಗಿಸಿ ನೆಗೆಟಿವ್ ತಯಾರಿಸಿಕೊಂಡೂ ಅವುಗಳನ್ನು ಪ್ರಿಂಟ್ ಮಾಡುವ ಪೇಪರ್‌ಗಳನ್ನು ಮನೆಯಲ್ಲಿಯೆ ತಂದು ಇಟ್ಟುಕೊಂಡಿರುತ್ತಿದ್ದರು. ಹಾಗಾಗಿ ಪ್ರಿಂಟ್ ಕೂಡ ಅದೇ ದಿನ ರಾತ್ರಿ ಹಾಕಿಬಿಡುತ್ತಿದ್ದರು. ಆ ಎಲ್ಲಾ ಚಿತ್ರಗಳು ಮನೆಯಲ್ಲಿಯೇ ತಯಾರಾಗುತ್ತಿದ್ದ ಆ ದಿನಗಳನ್ನು ನೆನಪಿಸಿಕೊಂಡರೆ ಎಷ್ಟು ಖುಷಿ ಎನ್ನಿಸುತ್ತೆ! ಹಾಗೇ ಬೇಜಾರು ಆಗುತ್ತೆ. ಏಕೆಂದರೆ ಈಗ ನಮ್ಮ ಮಕ್ಕಳಿಗೆ ಅದನ್ನೆಲ್ಲ ನೋಡುವ ಅವಕಾಶ ಸಿಗಲಿಲ್ಲವಲ್ಲ ಎಂದು.

ಅಪ್ಪನಿಗೂ ಈ ಫೋನ್‌ಗೂ ಸ್ವಲ್ಪ ದೂರವೇ ಸರಿ. ಇವರು ಫೋನಿನಲ್ಲಿ ಮಾತಾಡಲು ಸಿಗುವುದು ತುಂಬಾ ಅಪರೂಪ. ಬೇರೆಯವರ ಹತ್ತಿರವಿರಲಿ, ನನ್ನ ಮತ್ತು ಅಕ್ಕನ ಹತ್ತಿರವೂ ತುಂಬಾ ಅಪರೂಪ. ಫೋನ್ ರಿಂಗ್ ಆಗುತ್ತಿದ್ದರೂ ಹತ್ತಿರದಲ್ಲೇ ಇದ್ದರೂ ಅಪ್ಪ ಫೋನ್ ತೆಗೆದುಕೊಳ್ಳುವುದೇ ಇಲ್ಲ. ಅಮ್ಮ ಬಂದೇ ತೆಗೆದುಕೊಳ್ಳಬೇಕು. ಅವರ ವಿಷಯವಾಗಿಯೇ ಯಾರಾದರೂ ಮಾಡಿದ್ರೂ ಕೂಡ ಅಮ್ಮನೆ ಮೊದಲು ಮಾತಾಡಿ ಎಲ್ಲಾ ವಿಷಯ ತಿಳಿದುಕೊಂಡು ಅಪ್ಪನಿಗೆ ಕೊಡಬೇಕು. ಅಪ್ಪ ಕೂಡ ಮಾತಾಡುವುದನ್ನು ತಪ್ಪಿಸಿಕೊಳ್ಳಲು ಹೀಗೆ ಮಾಡುವುದಿಲ್ಲ, ಅಪ್ಪನೇ ಹೇಳುತ್ತಿರುತ್ತಾರೆ, ತಮಗೆ ಫೋನ್ ಎಂದರೆ ಸ್ವಲ್ಪ ಅಲರ್ಜಿ ಎಂದು. ಅಪ್ಪನ ಈ ಸ್ವಭಾವ ಇತ್ತೀಚೆಗೆ ಎಲ್ಲರಿಗೂ ಗೊತ್ತಾಗಿದೆ. ಆದರೆ ಕೆಲವರು ಅಮ್ಮನೇ ಕೊಡದೇ ಹೀಗೆ ಮಾಡುತ್ತಾರೆಂದು ತಪ್ಪು ತಿಳಿಯಲೂಬಹುದು.

ಆದರೆ ಅಪ್ಪ ಪತ್ರ ಬರೆಯುವ ಕೆಲಸವನ್ನು ಸಂತೋಷದಿಂದ ಮಾಡುತ್ತಾರೆ. ಅನೇಕ ಮದುವೆ ಪತ್ರಿಕೆಗಳು ಬರುತ್ತಿರುತ್ತವೆ. ಅವುಗಳಲ್ಲಿ ಅಪ್ಪ ಹೋಗುವ ರೀತಿಯ ಮದುವೆಗಳು ತುಂಬಾ ಕಡಿಮೆ ಇರುತ್ತವೆ. ಹಾಗಾಗಿ ಅವರ ವಿಳಾಸವನ್ನು ಇಟ್ಟುಕೊಂಡು ಕಾರ್ಡ್‌ನಲ್ಲಿ ಮದುಮಕ್ಕಳಿಗೆ ಶುಭಾಶಯವನ್ನು ಕೋರಿ ಪತ್ರ ಬರೆದು ಹಾಕುತ್ತಾರೆ. ವೈಕುಂಠ ಸಮಾರಾಧನೆಯ ಪತ್ರವಾಗಿದ್ದರೆ ಆ ಮನೆಯವರಿಗೆ ಸಂತಾಪ ಸೂಚಿಸಿ ಪತ್ರವನ್ನು ಬರೆಯುತ್ತಾರೆ. ಪತ್ರ ಬರೆಯುವ ಅಭ್ಯಾಸವನ್ನು ಬಿಡಬೇಡಿ ಎಂದು ನಮಗೂ ಮತ್ತು ಮೊಮ್ಮಕ್ಕಳಿಗೂ ಹೇಳುತ್ತಾರೆ ಮತ್ತು ರಜೆಯಿಂದ ವಾಪಸ್ ಬರುವಾಗ ಮೊಮ್ಮಕ್ಕಳ ಹತ್ತಿರ ಕಾರ್ಡ್ ಅಥವಾ ಇನ್‌ಲ್ಯಾಂಡ್ ಲೆಟರ್ ಕೊಟ್ಟು ಮನೆಗೆ ಹೋದ ಮೇಲೆ ಪತ್ರ ಬರೆಯಿರಿ ಎಂದು ಹೇಳಿಕಳಿಸುತ್ತಾರೆ.

ಅಪ್ಪನ ಪ್ರೀತಿ, ಗಿಡ ಮರಗಳನ್ನು ಬಿಟ್ಟಿಲ್ಲ ಅದು ನಮ್ಮ ಮನೆಗೆ ಬಂದು ನೋಡಿದವರಿಗೆ ಚೆನ್ನಾಗಿ ಅರ್ಥವಾಗುತ್ತೆ. ಮನೆಯ ಸುತ್ತ ಮರಗಿಡ ಬೆಳೆದು

ಅಡಿಕೆ ಒಣಗಿಸಲು ನೆರಳಾಗಿ ತೊಂದರೆಯಾದ್ರು ಪರವಾಗಿಲ್ಲ ಅಪ್ಪನಿಗೆ. ಇನ್ನೂ ತೀರ ತೊಂದರೆಯಾಗಿ ಕಡಿಸುವ ಪ್ರಮೇಯ ಬಂದರೆ ಅವುಗಳ ರೆಂಬೆ ಕೊಂಬೆಗಳನ್ನು ತೆಗೆಸಿ ಮರ ಹಾಗೆ ಇರುವ ಹಾಗೆ ನೋಡಿಕೊಳ್ಳುತ್ತಾರೆ. ನಂತರ ಒಂದೆರೆಡು ದಿನ ಬೇಜಾರಿನಲ್ಲಿ ಇರುತ್ತಾರೆ. ನಮ್ಮ ಮನೆಗೆ ಅಜ್ಜಿ ಬಂದಾಗ ಹೇಳುತ್ತಾರೆ "ಈ ಶಾಮು ಮರಗಿಡಗಳನ್ನು ಕಡಿಸದೆ ಮನೆಪೂರ್ತಿ ಅವೇ ಮುಚ್ಚಿ ಹೋಗಿದೆ. ಮನೆ ಪೂರ್ತಿ ಕತ್ತಲು" ಅಂತ. 'ಶಾಮು, ಈ ಮರಗಳನ್ನೆಲ್ಲಾ ತೆಗೆದು ಬಯಲು ಮಾಡು' ಎಂದು ಅಪ್ಪನ ಹತ್ತಿರ ಹೇಳುತ್ತಾರೆ. ಅಪ್ಪ ಆ ಕ್ಷಣದಲ್ಲಿ ಅಜ್ಜಿಯ ಸಮಾಧಾನಕ್ಕೆ 'ಆಯ್ತು ಅಮ್ಮ ತೆಗೆಸುತ್ತೇನೆ' ಎಂದು ಹೇಳುತ್ತಾರೆ. ಆದ್ರೆ ಹಾಗೆ ಮಾಡದೆ ಸುಮ್ಮನೆ ಆಗಿಬಿಡುತ್ತಾರೆ. ಅಜ್ಜಿ ಮತ್ತೊಮ್ಮೆ ಮನೆಗೆ ಬಂದಾಗಲೂ ಈ ಸಂಭಾಷಣೆ ಪುನರಾವರ್ತಿತವಾಗುತ್ತದೆ!

ಕೆಲವು ವರ್ಷಗಳ ಹಿಂದೆ ಮನೆಯ ಗೇಟಿನ ಹತ್ತಿರ ಇರುವ ನೇರಳೆ ಮರದ ತೊಗಟೆಯನ್ನು ಯಾರೋ ನಮಗೆ ಗೊತ್ತಿಲ್ಲದ ಹಾಗೆ ಕೆತ್ತುತ್ತಿದ್ದರು. ಇದನ್ನು ತಿಳಿದ ಅಪ್ಪ ಹತ್ತಿರ ಹೋಗಿ ಕೇಳಿದಾಗ ಅಡಿಕೆ ಬೇಯಿಸುವ ಚೊಗರು ಮಾಡಲು ಬೇಕಾಗಿದೆ ಎಂದು ತಿಳಿಸಿದರು. ಅಲ್ಲಿಗೆ ಹೋಗುವಾಗ ಸ್ವಲ್ಪ ಹೆಚ್ಚಿನ ಜಾಗದ ತೊಗಟೆಯನ್ನು ತೆಗೆದು ಬಿಟ್ಟಿರುವುದನ್ನು ನೋಡಿ ದುಃಖಗೊಂಡ ಅಪ್ಪ ಅವರನ್ನು ಕುರಿತು 'ನನ್ನ ಚರ್ಮದಿಂದ ಏನಾದ್ರು ಉಪಯೋಗ ಇದ್ರೆ ಅದನ್ನು ಸುಲಿದು ತೆಗೆದುಕೊಂಡು ಹೋಗಿ ಬೇಕಾದ್ರೆ ಆದರೆ ಅದರ ತೊಗಟೆಯನ್ನು ಮುಟ್ಟಿದರೆ ಸರಿ ಇರುವುದಿಲ್ಲ ನೋಡಿ' ಎಂದು ಅವರಿಗೆ ಗದರಿಸಿದರು. ಅದರೆ ತುಂಬಾ ದಿನಗಳವರೆಗೆ ಅದನ್ನು ಮರೆಯದೆ ಎಂಥ ಕೆಲಸವಾಗಿ ಹೋಯಿತು ಎಂದು ನೋವು ಪಡುತ್ತಿದ್ದರು.

ಅಪ್ಪನ ಹಾಸ್ಯಕ್ಕೆ ಬಂದರೆ ಅದನ್ನು ನಾವು ಹೇಳಲು ಅಗುವುದಿಲ್ಲ. ಹೆಚ್ಚು ಕಡಿಮೆ ಅವರು ಮಾತಾಡುವ ಎಲ್ಲಾವೂ ಕೇಳುವವರಿಗೆ ಹಾಸ್ಯಮಯವಾಗಿಯೇ ಇರುತ್ತದೆ. ಇವುಗಳನ್ನು ತೇಜಸ್ವಿ ಮಾಮನ 'ಅಣ್ಣನ ನೆನಪುಗಳು'ನಲ್ಲಿ ಓದಿರಬಹುದು. ಅಥವಾ ಅಪ್ಪನ 'ಕಾಡ ತೊರೆಯ ಜಾಡು' ಓದಿರುವವರು ಗಮನಿಸಿರಬಹುದು.

'ಅಣ್ಣನ ನೆನಪು' ಪುಸ್ತಕ ಅಂದ ತಕ್ಷಣ ಮುನೀರ್ ಸರ್ ನೆನಪಾಗುತ್ತಾರೆ. ಇವರು ಡಿ.ವಿ.ಎಸ್. ಕಾಲೇಜಿನ ಕನ್ನಡ ಅಧ್ಯಾಪಕರಾಗಿದ್ದವರು. ಇವರು ಅಪ್ಪನ ಸ್ನೇಹಿತರೂ ಹೌದು. ನಾನು ಕಾಲೇಜಿಗೆ ಸೇರಿದ ಮೊದಲ ದಿನವೇ ಇವರ ತರಗತಿಯೂ ಇತ್ತು. ನನ್ನ ಪರಿಚಯವೂ ಇವರಿಗೆ ಮೊದಲೆ ಇದ್ದುದರಿಂದ ಪಾಠ ಮಾಡುತ್ತಾ ಮಧ್ಯದಲ್ಲಿ 'ಅಣ್ಣನ ನೆನಪು' ಪುಸ್ತಕದ ವಿಚಾರವನ್ನು ತೆಗೆದುಕೊಂಡು ಅಪ್ಪನ ಹಾಸ್ಯಮಯವಾದ ಒಂದು ಘಟನೆಯನ್ನು ವಿವರಿಸುತ್ತಾ ಆ ಶಾಮಣ್ಣನವರ ಮಗಳು ಇಲ್ಲೆ ನಿಮ್ಮ ಜೊತೆ ಇದ್ದಾಳೆಂದು ನನ್ನನ್ನು ಪರಿಚಯಿಸಿದರು. ನಂತರದಲ್ಲಿ

ಮತ್ತು ತೇಜಸ್ವಿ ಮಾಮನ ಹಾಸ್ಯ ಪ್ರಸಂಗಳು ತಪ್ಪದೆ ಬರುತ್ತಿದ್ದವು. ಹೆಚ್ಚು ಕಡಿಮೆ ಎಲ್ಲಾ ವಿದ್ಯಾರ್ಥಿಗಳು ಆ ಪುಸ್ತಕ ಕೊಂಡು ಓದುವ ಹಾಗೆ ಮಾಡಿದರು. ಅಪ್ಪನ ಹಾಸ್ಯ ಪ್ರಸಂಗಗಳ ವರ್ಣನೆ ತರಗತಿಯಲ್ಲಿ ಕೆಲವೊಮ್ಮೆ ನನಗೆ ಮುಜುಗರವನ್ನೆ ತರಿಸಿಬಿಡುತ್ತಿದ್ದವು 'ಇದನ್ನು ಬರೀ ಹಾಸ್ಯ ಎಂದು ಅವನ್ನು ನಿರ್ಲಕ್ಷಿಸಬೇಡಿ. ಅದರ ಹಿಂದೆ ಗಂಭೀರ ವಿಚಾರವು ಇರುತ್ತದೆ. ಈ ಶಾಮಣ್ಣ ಮತ್ತು ಅವರ ಕೆಲವು ಸ್ನೇಹಿತರು ಸಮಾಜಕ್ಕೆ ಗಂಭೀರವಾದ ವಿಚಾರವನ್ನು ಹಾಸ್ಯದ ಮೂಲಕ ತಿಳಿಸುವ ರೀತಿ' ಎಂದು ಮುನೀರ್ ಸರ್ ಹೇಳಲು ಮರೆಯುತ್ತಿರಲಿಲ್ಲ..

ಅಪ್ಪನ ಚಳವಳಿ ಮತ್ತು ರೈತ ಹೋರಾಟಕ್ಕೆ ಬಂದರೆ, ಅಮ್ಮನನ್ನು, ನನ್ನನ್ನು, ಅಕ್ಕನನ್ನು ಎಲ್ಲಾ ಕಡೆ ಕರೆದುಕೊಂಡು ಹೋಗುತ್ತಿದ್ದರು. ಅದು ನಾವು ಚಿಕ್ಕವರಿರುವಾಗ. ನಾವುಗಳು ದೊಡ್ಡವರಾಗ್ತ ಸ್ವಲ್ಪ ಕಡಿಮೆಯಾಯಿತು. ರೈತ ಸಭೆಗಳಲ್ಲಿ ಅಕ್ಕನ ಹತ್ತಿರ ಹಾಡುಗಳನ್ನು ಹಾಡಿಸ್ತಾ ಇದ್ರು. ಹಾಗೆ ನಾವು ಹೋಗುವಾಗ ಮನೆಯಲ್ಲಿ ನಮ್ಮದೇ ವಾಹನ ಇದ್ದರೂ ಕೂಡ ಎಲ್ಲರ ಜೊತೆ ಸೇರಿ ಹೋಗುತ್ತಿದ್ದುದೇ ಜಾಸ್ತಿ. ಇನ್ನೂ ಕೆಲವೊಮ್ಮೆ ನಮ್ಮ ವಾಹನದಲ್ಲಿ ಹೋದರೂ ಅದರಲ್ಲಿ ಯಾರಾದ್ರು ಅಪ್ಪನ ಸ್ನೇಹಿತರು ಇರುತ್ತಿದ್ದರು. ಹೀಗೆ ಹೋಗುವಾಗ ಅಪ್ಪ ಯಾವುದಾದರೊಂದು ಗಂಭೀರ ವಿಷಯವನ್ನು ಚರ್ಚಿಸುತ್ತಾ ಅಥವಾ ಮೈಸೂರಿನಲ್ಲಿ, ಶಿವಮೊಗ್ಗದಲ್ಲಿ ಕಳೆದ ಕಾಲೇಜು ದಿನಗಳೋ, ಅಪ್ಪನ ಮತ್ತು ಅವರ ಸ್ನೇಹಿತರ ನಡುವೆ ನಡೆದ ಹಾಸ್ಯಮಯವಾದ ಘಟನೆಗಳನ್ನೋ ನೆನಪಿಸಿಕೊಂಡು ಹೇಳುತ್ತಿದ್ದರು. ಡ್ರೈವಿಂಗ್ ಸಹ ಅಪ್ಪನ ಇಷ್ಟವಾದ ಕೆಲಸ. ಹಾಗಾಗಿ ಯಾರಾದ್ರು ಯಾವ ಸಮಯದಲ್ಲಿಯಾದರು ಎಲ್ಲಿಗೆ ಹೋಗಬೇಕೆಂದರೂ ಕೂಡ ಸ್ವಲ್ಪವೂ ಬೇಸರಿಸದೇ ಸಂತೋಷದಿಂದ ಕರೆದುಕೊಂಡು ಹೋಗುತ್ತಾರೆ. ಅಪ್ಪನ ಜೊತೆ ಪ್ರಯಾಣಿಸುವಾಗ ದಾರಿ ಸಾಗಿದ್ದು ಗೊತ್ತಾಗುವುದೇ ಇಲ್ಲ.

ರೈತ ಸಮಾರಂಭಗಳಿಗೆ ಹೋದಾಗ ಅಲ್ಲಿ ಎಲ್ಲರೊಂದಿಗೆ ಎಲ್ಲರೂ ತಂದ ಊಟ ತಿಂಡಿಯನ್ನೆ ಹಂಚಿಕೊಂಡು ತಿನ್ನುತ್ತಿದ್ದೆವು. ಹೀಗೆ ಹೋದಾಗ ಅಥವಾ ಬೇರೆ ಯಾವ ಸಂದರ್ಭದಲ್ಲಿ ಎಲ್ಲಿಗೆ ಹೋದರೂ ಅಪ್ಪ ನಮ್ಮನ್ನು ಹೋಟಲ್‌ನಲ್ಲಿ ಉಳಿಸಿದ್ದು ಮತ್ತು ಊಟಕ್ಕೆ ಕರೆದುಕೊಂಡು ಹೋಗಿದ್ದು ತುಂಬಾ ಅಪರೂಪ. ಅವರ ಸ್ನೇಹಿತರ ಮನೆಗೆ, ಕೆಲವೊಮ್ಮೆ ನೆಂಟರಿಷ್ಟರ ಮನೆಗೆ ಹೋಗುತ್ತಿದ್ದುದೇ ಜಾಸ್ತಿ. ಆದರೆ ಅಪ್ಪ ನಮ್ಮನ್ನು ಹಾಗೆ ಕರೆದುಕೊಂಡು ಹೋಗಲಿಲ್ಲ ಅಂತ ಅನ್ನಿಸಲೆ ಇಲ್ಲ. ಏಕೆಂದ್ರೆ ಅಪ್ಪನ ಸ್ನೇಹಿತರ ಮನೆಯಲ್ಲಿಯೂ ಕೂಡ ತುಂಬಾ ಪ್ರೀತಿ ವಿಶ್ವಾಸದಿಂದ ಕಾಣುತ್ತಿದ್ದರು. ಮತ್ತು ಅಲ್ಲಿ ಅವರು ಮಾತಾಡುತ್ತಿದ್ದ ಮತ್ತು ಚರ್ಚಿಸುತ್ತಿದ್ದ ವಿಚಾರಗಳು ಚಿಕ್ಕವರಾದ ನಮ್ಮನ್ನು ಆಲೋಚನೆಯಲ್ಲಿ ತೊಡಗಿಸುವಂತಹ ತುಂಬಾ ಉಪಯುಕ್ತವಾಗಿರುತ್ತಿದ್ದವು. ಅಪ್ಪನ ಎಲ್ಲಾ ಸ್ನೇಹಿತರಿಂದ ಅನೇಕ ಹೊಸ ಹೊಸ

ವಿಚಾರಗಳನ್ನು ಕಲಿತಿದ್ದೇವೆ. ಇನ್ನೂ ಕಲಿಯುವುದು ಬಹಳಷ್ಟಿದೆ.

ಅಪ್ಪನ ಎಷ್ಟೊಂದು ಜನ ಸ್ನೇಹಿತರು ಮನೆಗೆ ಬಂದು ಉಳಿದು ಹೋಗುತ್ತಿದ್ರು! ಈಗ ಅವರವರ ಕೆಲಸದ ಒತ್ತಡದಿಂದ ಕಡಿಮೆಯಾಗಿದೆ. ನಾವು ಕೂಡ ಅವರೆಲ್ಲರ ಮನೆಗೆ ಅನೇಕ ಸಾರಿ ಹೋಗಿ ಉಳಿದು ಬಂದಿದ್ದೇವೆ. ಅಪ್ಪನ ಜೊತೆ ಹೋಗುವುದೆಂದ್ರೆ ಅದಕ್ಕೆ ಹೊತ್ತು ಗೊತ್ತೂ ಏನು ಇರುತ್ತಿರಲಿಲ್ಲ. ಈಗ ಯೋಚಿಸಿದರೆ, ಅವರಿಗೆಲ್ಲಾ ಎಷ್ಟು ತೊಂದರೆ ಕೊಟ್ಟಿದ್ದೇವೆ ಅನ್ನಿಸುತ್ತೆ. ಈ ಸಂದರ್ಭದಲ್ಲಿ ಪ್ರತಿಯೊಬ್ಬರ ಹೆಸರನ್ನು ಹೆಸರಿಸದೆ ಆ ಎಲ್ಲಾ ಸ್ನೇಹಿತರನ್ನು ಪ್ರೀತಿಯಿಂದ ನೆನಪಿಸಿಕೊಳ್ಳುತ್ತೇನೆ. ಅಪ್ಪನ ಕೆಲವು ಆತ್ಮೀಯ ಸ್ನೇಹಿತರು ಈಗ ನಮ್ಮೊಂದಿಗೆ ಇಲ್ಲ. ಅವರುಗಳು ಇನ್ನೂ ಬದುಕಿರಬೇಕಿತ್ತು. ಅವರೆಲ್ಲರಿಂದ ಇನ್ನೂ ತಿಳಿದುಕೊಳ್ಳುವುದು ಬಹಳಷ್ಟು ಇತ್ತು. ಅಪ್ಪನ ಬಗ್ಗೆ ಬರೆಯತ್ತಿರುವ ಈ ಸಂದರ್ಭದಲ್ಲಿ ಆ ಎಲ್ಲಾ ಸ್ನೇಹಿತರನ್ನು ನೆನಪಿಸಿಕೊಳ್ಳದೆ ಇದ್ದರೆ ಅದಕ್ಕೆ ಅರ್ಥವೇ ಇಲ್ಲದಂತೆ ಆಗುತ್ತದೆ. ಏಕೆಂದ್ರೆ ಈಗ ನಮ್ಮೊಂದಿಗೆ ಇರುವ, ಇಲ್ಲದೆ ಇರುವ ಎಲ್ಲರೂ ಕೂಡ ಅಪ್ಪನ ಜೀವನದ ಒಂದು ಭಾಗವಾಗಿದ್ದಾರೆ. ಆ ಎಲ್ಲಾ ಸ್ನೇಹಿತರ ಜೊತೆ ಸೇರಿ ನಡೆಸಿದ ಹೋರಾಟ ಮತ್ತು ಚಟುವಟಿಕೆಗಳು ತುಂಬಾ ವಿಶೇಷವಾದುವುಗಳೇ.

ರೈತರು ಬೆಂಗಳೂರಿಗೆ ಪಾದಯಾತ್ರೆ ಹೋದ ಸಂದರ್ಭದಲ್ಲಿ ನಾನು ತುಂಬಾ ಚಿಕ್ಕವಳು. ಹಾಗಾಗಿ ನನಗೆ ಅಷ್ಟೊಂದು ಸರಿಯಾಗಿ ನೆನಪಿಲ್ಲ. ಆದ್ರೆ ಅಪ್ಪ ಪಾದಯಾತ್ರೆ ಹೊರಟ ಮಾರನೆಯ ದಿನದಿಂದ ತಪ್ಪದೆ ಪತ್ರ ಬರೆಯುತ್ತಿದ್ದರು. ಅಲ್ಲಿ ನಡೆದ ಮುಖ್ಯ ಘಟನೆ, ಉಳಿದು ಕೊಂಡ ಜಾಗ, ನಡೆದು ನಡೆದು ಕಾಲಿನ ಕಥೆ ಏನಾಗಿದೆ, ಹೀಗೆ ಅನೇಕ ವಿಚಾರಗಳನ್ನು ಬರೆಯುತ್ತಿದ್ದರು. ಅದರೆ ನಾವು ತಿರುಗಿ ಅವರಿಗೆ ಬರೆಯಲು ಆಗುತ್ತಿರಲಿಲ್ಲ. ಅವರು ಒಂದೊಂದು ದಿನ ಒಂದೊಂದು ಊರಿನಲ್ಲಿ ಉಳಿಯುತ್ತಿದ್ದರಲ್ಲ ಹಾಗಾಗಿ. ಆಗ ಫೋನ್ ಕೂಡ ಮನೆಯಲ್ಲಿ ಇರಲಿಲ್ಲ. ಅದ್ದರಿಂದ ಕಾಗದ ಬರುವುದನ್ನೆ ಕಾಯುತ್ತಿದ್ದೆವು. ಪಾದಯಾತ್ರೆ ಬೆಂಗಳೂರು ತಲುಪಿದ ಮೇಲೆ ನಾವುಗಳು ಬೆಂಗಳೂರಿಗೆ ಹೋಗಿ ಅವರೆಲ್ಲರನ್ನು ಸೇರಿಕೊಂಡೆವು. ಆ ಸಂದರ್ಭದಲ್ಲಿ ನಾನು ಅಲ್ಲಿ ಕಂಡ ಚೆಂಡು ಒಂದನ್ನು ಕೊಡಿಸಿ ಅಂತ ಕೇಳಿದ್ದೆನಂತೆ! ಆದ್ರೆ ಆ ಗಡಿಬಿಡಿಯಲ್ಲಿ ಅಪ್ಪ ಕೊಡಿಸಿರಲಿಲ್ಲವಂತೆ. ನಂತರ ನಾನೂ ಮರೆತು ಅವರೂ ಮರೆತುಬಿಟ್ಟಿದ್ದರಂತೆ. ನಾನು ಕಾಲೇಜಿನಲ್ಲಿ ಓದುವ ಒಂದು ಸಂದರ್ಭದಲ್ಲಿ ಅಪ್ಪ ಒಂದು ದಿನ ಶಿವಮೊಗ್ಗ ಪೇಟೆಯಲ್ಲಿ ನಡೆದು ಹೋಗುವಾಗ ಒಂದು ಪುಟ್ಟ ಮಗು ಅಂಗಡಿಯಲ್ಲಿ ಹಠಮಾಡಿ ಅವರ ಅಪ್ಪನ ಹತ್ತಿರ (ನಾನು ಹಿಂದೆ ಕೇಳಿದ ರೀತಿಯ) ಬಣ್ಣದ ಚೆಂಡು ಕೊಡಿಸಿಕೊಳ್ಳುತ್ತಿತ್ತಂತೆ. ತಕ್ಷಣ ಅಪ್ಪನಿಗೆ ಪಾದಯಾತ್ರೆ ಹೋದ ಸಂದರ್ಭದಲ್ಲಿ ನಾನು ಅವರ ಹತ್ತಿರ ಚೆಂಡು ಆಸೆ ಪಟ್ಟು ಕೇಳಿದ್ದು ನೆನಪಾಗಿ, 'ಅವಳು ಏನನ್ನೂ ಆಸೆಪಟ್ಟು ಕೊಡಿಸಿ ಎಂದು ಕೇಳುತ್ತಿರಲಿಲ್ಲ; ಆದ್ರೆ ಆ

ಒಂದು ಕ್ಷಣ ದುಃಖವಾಯಿತಂತೆ. 'ಆನಂತರವೂ ನಾನು ಕೊಡಿಸಲು ಮರೆತೆ. ಅವಳು ಮತ್ತೆ ಕೇಳಲಿಲ್ಲ. ಈಗಲಾದ್ರು ನೆನಪಿಗೆ ಇಟ್ಟುಕೊಳ್ಳುತ್ತಾಳೆ' ಎಂದು ಕೊಂಡು ತಂದಿದ್ದರು. ಮನೆಗೆ ಬಂದಾಗ 'ಈ ಚೆಂಡು ಯಾರಿಗೆ ಏನಕ್ಕೆ ತಂದಿದ್ದೀರಾ!' ಎಂದು ಕೇಳಿದಾಗ ಎಲ್ಲ ವಿವರಿಸಿದರು. ನನಗೆ ಮಾತ್ರ ಆ ದಿನ ಕೊಡಿಸಿ ಅಂತ ಕೇಳಿದ್ದು ನೆನಪಿಗೆ ಬರಲಿಲ್ಲ. ಆದರೆ ಅಪ್ಪನ ಈ ಸೂಕ್ಷ್ಮ ಮನಸ್ಸನ್ನು ನೋಡಿ ಸಂತೋಷದ ಜೊತೆ ದುಃಖವನ್ನು ತಡೆಯಲು ಆಗಿರಲಿಲ್ಲ.

ಅತಿಯಾದ ತಾಳ್ಮೆ ಸಹನೆಯನ್ನು ಹೊಂದಿರುವ ಅಪ್ಪ ಕೆಲವೊಮ್ಮೆ ಅವರ ಮನಸ್ಸಿಗೆ ತೀರ ನೋವಾಗುವ ಘಟನೆಗಳು ನಡೆದಾಗ ಅಥವಾ ಅದನ್ನು ನೆನಪಿಸಿಕೊಂಡಾಗ ಕೆಲವು ಕ್ಷಣ ಆ ತಾಳ್ಮೆಯನ್ನು ಕಳೆದುಕೊಂಡು ಬಿಡುತ್ತಾರೆ. ನಾಗಸಮುದ್ರದ ಗೋಲಿಬಾರ್ ಅವರ ಜೀವನದಲ್ಲಿ ಮಾನಸಿಕ ಆರೋಗ್ಯದ ಮೇಲೆ ತುಂಬಾ ಪರಿಣಾಮ ಬೀರಿದೆ. ಈಗಲೂ ಆ ದಿನವನ್ನು ನೆನಪಿಸಿಕೊಂಡರೆ ಕಿಡಿಕಾರುತ್ತಾರೆ. ಅವರ 'ಕಾಡ ತೊರೆಯ ಜಾಡು'ವಿನಲ್ಲಿ ಆ ಘಟನೆಯನ್ನು ವಿವರಿಸುವಾಗ ಅವರೇ ಹೇಳಿದಂತೆ 'ಅಂದು ಹೋದ ನೆಮ್ಮದಿಯ ನಿದ್ರೆ ಇವತ್ತಿಗೂ ಬಂದಿಲ್ಲ. ಮುಂದೆಯೂ ಬರಲಾರದು' ಎಂಬ ಮಾತು ಖಂಡಿತವಾಗಿಯೂ ಹೌದು ಅನ್ನಿಸುತ್ತೆ, ತೀರ ಹತ್ತಿರದಿಂದ ನೋಡಿದ ನಮಗೆ ನಿದ್ರೆ ಬಂದರೂ ಕೂಡ ಅದು ನೆಮ್ಮದಿಯ ನಿದ್ರೆ ಆಗಿರಲಾರದು ಅನ್ನಿಸುತ್ತದೆ. ರಾತ್ರಿ ಸರಿಯಗಿ ನಿದ್ದೆ ಬರದಿರುವುದನ್ನೆ ಕಾರಣವಾಗಿಸಿಕೊಂಡು ಯಾವ ರೀತಿಯ ದುಷ್ಟ ಚಟಗಳನ್ನು ರೂಢಿಸಿಕೊಳ್ಳದೆ ಅದನ್ನು ಹೆಚ್ಚು ಚಿಂತಿಸದೆ ಆ ಸಮಯದಲ್ಲಿ ಸಂಗೀತವಾದ್ಯ ನುಡಿಸುವುದೋ, ಹಾಡು ಹೇಳುವುದೋ ಪುಸ್ತಕ ಓದುವುದರಲ್ಲಿಯೋ ಕಳೆಯುತ್ತಾರೆ. ಅವರು ವಾಸವಿರುವುದು ಹಳ್ಳಿಯಾಗಿರುವುದರಿಂದ ಒಳ್ಳೆಯದೆ ಆಗಿದೆ ಈ ರೀತಿಯ ಚಟುವಟಿಕೆಗಳಿಗೆ. ಬೆಂಗಳೂರಿಗೆ ನನ್ನ ಮನೆಗೆ ಬಂದಾಗ ಕೆಲವೊಮ್ಮೆ ನಿದ್ರೆ ಬಾರದೆ ಹೋದ್ರೆ ಕೊಳಲು ನುಡಿಸುವುದೋ ಹಾಡು ಹೇಳುವುದೋ ಮಾಡುತ್ತಾರೆ. ನಾನು ರಾತ್ರಿ ಪಕ್ಕದವರಿಗೆ ತೊಂದ್ರೆ ಆಗುತ್ತೆ ಅಪ್ಪ ಎಂದ ಮೇಲೆ 'ಹೌದಲ್ಲ ನಾನು ಮರೆತೆ ಬಿಟ್ಟೆ. ತಾಳು ಯಾವುದಾದ್ರು ಪುಸ್ತಕ ಓದುತ್ತೇನೆ' ಎಂದು ಪುಸ್ತಕದ ಮೊರೆ ಹೋಗುತ್ತಾರೆ. ಹೀಗೆ ತೀರ ಮನಸ್ಸಿಗೆ ನೋವಾಗುವ ಘಟನೆಗಳು ನಡೆದಾಗ ಅದನ್ನು ಮನಸ್ಸಿಗೆ ತುಂಬಾ ಹಚ್ಚಿಕೊಂಡು ಬಿಡುತ್ತಾರೆ. ಇತ್ತೀಚೆಗೆ ನಡೆಯುತ್ತಿರುವ ಕೆಲವು ಘಟನೆಗಳನ್ನು ಮನಸ್ಸಿಗೆ ತುಂಬಾ ಹಚ್ಚಿಕೊಂಡಿದ್ದಾರೆ.

ಅಪ್ಪನಿಗೆ ಮಕ್ಕಳೆಂದರೆ ತುಂಬಾ ಪ್ರೀತಿ. ಅದು ನಮ್ಮ ಮನೆಯ ಮಕ್ಕಳೇ ಆಗಬೇಕೆಂದು ಏನು ಇಲ್ಲ. ಅದು ಸ್ನೇಹಿತರ ಮಕ್ಕಳಾಗಿರಬಹುದು, ನೆಂಟರಿಷ್ಟರ ಮಕ್ಕಳಾಗಿರಬಹುದು ಅಥವಾ ಮನೆಯ ಹತ್ತಿರವಿರುವ ಕೂಲಿ ಕಾರ್ಮಿಕರ ಮಕ್ಕಳಾಗಿರಬಹುದು. ಎಲ್ಲರನ್ನು ಒಂದೇ ರೀತಿ ಸಮಾನವಾಗಿ ನೋಡುತ್ತಾರೆ. ಆ

ಕೂಲಿಕಾರ್ಮಿಕರ ಮಕ್ಕಳನ್ನು ಸ್ವಲ್ಪ ಹೆಚ್ಚಾಗಿಯೆ ಪ್ರೀತಿಸುತ್ತಾರೆ ಎನ್ನಬಹುದು. ಆ ಮಕ್ಕಳಿಗೆ ಸಂಗೀತಾಭ್ಯಾಸ ಮಾಡಿಸಿ ಹಾಡು ಹೇಳಿಕೊಟ್ಟು ಬೇರೆ ಬೇರೆ ಊರುಗಳಿಗೂ ಅವರನ್ನು ಕರೆದುಕೊಂಡು ಹೋಗುತ್ತಾರೆ. ಅದು ಸ್ವಂತ ವಾಹನವಾದ್ರು ಅಯಿತು ಬಾಡಿಗೆ ವಾಹನವಾದ್ರು ಆಯಿತು. ಒಟ್ಟಿನಲ್ಲಿ ಆ ಮಕ್ಕಳನ್ನೆಲ್ಲಾ ಕೂರಿಸಿಕೊಂಡು ಸಂಗೀತ ವಾದ್ಯಗಳನ್ನೂ ತುಂಬಿಕೊಂಡು, ಆ ಮಕ್ಕಳಲ್ಲಿ ಯಾರಿಗಾದ್ರು ಚಪ್ಪಲಿ ಇಲ್ಲದಿದ್ದರೆ ಹೊಸ ಚಪ್ಪಲಿ ಕೊಡಿಸಿ, ಯಾವುದಾದರು ಮಗುವಿನ ಬಟ್ಟೆ ಸರಿ ಇಲ್ಲದಿದ್ದರೆ ಒಂದು ಜೊತೆ ಬಟ್ಟೆಯನ್ನು ಕೊಡಿಸಿ, ಆ ಮಕ್ಕಳ ಪೋಷಕರು ಜೊತೆಯಲ್ಲಿ ಬಂದಿಲ್ಲದೇ ಇರುವುದರಿಂದ ಕೆಲವರ ತಲೆಯನ್ನು ಬಾಚಿ ಮುಖಕ್ಕೆ ಸ್ವಲ್ಪ ಪೌಡರ್ ಹಾಕಿ, ಅವರನ್ನೆಲ್ಲಾ ತಯಾರು ಮಾಡಿ ಕಾರ್ಯಕ್ರಮದಲ್ಲಿ ಭಾಗವಹಿಸಿ, ಊಟ ತಿಂಡಿ ಕೊಡಿಸಿ ಮನೆಗೆ ತಂದು ಬಿಡುತ್ತಾರೆ. ಇದನ್ನೆಲ್ಲಾ ನೋಡಿದರೆ, ಇದೆಲ್ಲಾ ಸಾಧಾರಣವಾದ ತಾಳ್ಮೆ ಇದ್ದವರಿಗೆ ಆಗದ ಕೆಲಸ ಅನ್ನಿಸುತ್ತದೆ.

ಇನ್ನು ಅವರ ಮೊಮ್ಮಕ್ಕಳ ಹತ್ತಿರ ಹೊಸ ರೀತಿಯ ಪೆನ್ನು, ಪೆನ್ಸಿಲ್, ಸ್ಕೇಲ್ ಅಥವಾ ಪುಸ್ತಕ ಏನಾದ್ರು ನೋಡಿದರೆ, ಅಸೆಪಟ್ಟು ಅದರ ಬಗ್ಗೆ ವಿಚಾರಿಸಿ "ಮುಂದಿನ ಸಾರಿ ಬರುವಾಗ ನಮ್ಮ ಶಾಲೆಯ ಮಕ್ಕಳಿಗೂ ತಂದುಕೊಡಿ. ಎಷ್ಟು ಜನ ಮಕ್ಕಳಿದ್ದಾರೆಂದು ತಿಳಿದು ಹೇಳುತ್ತೇನೆ. ಮರೆಯದೆ ಮುಂದಿನ ಸಾರಿ ಬರುವಾಗ ತನ್ನಿ" ಎಂದು ಹೇಳುತ್ತಾರೆ.

ಅಪ್ಪ, ಮಕ್ಕಳ ವಿಚಾರದಲ್ಲಿ ಮಾತ್ರ ಅಲ್ಲ, ದೊಡ್ಡವರ ವಿಚಾರದಲ್ಲೂ ಅಷ್ಟೆ. ಅವರಿಗೆ ಎಲ್ಲರೂ ಸಮಾನ. ಕೃಷಿ ಕಾರ್ಮಿಕರಿಂದ ಹಿಡಿದು ದೊಡ್ಡ ಅಧಿಕಾರದಲ್ಲಿ ಇರುವವರು ಒಂದೇ ಸಮಾನ. ಬೆಂಗಳೂರಿನಲ್ಲಿ ನಾನು ವಾಸವಿರುವ ಅಪಾರ್ಟಮೆಂಟ್‌ಗೆ ಬರುವಾಗಲೂ ಮೊದಲು ಸಿಗುವ ಸೆಕ್ಯೂರಿಟಿಗಳ ಯೋಗಕ್ಷೇಮ ವಿಚಾರಿಸಿ, ಪರಿಚಯವಿಲ್ಲದ ಸೆಕ್ಯೂರಿಟಿಗಳಾದರೂ ಮಾತನಾಡಿಸಿ, ಕನ್ನಡ ಬಾರದ ಉತ್ತರ ಭಾರತದ ಸೆಕ್ಯೂರಿಟಿಗಳನ್ನೂ ಕನ್ನಡದಲ್ಲೆ ಮಾತಾಡಿಸಿ ಮುಂದಿನ ಸಾರಿ ಬರುವಾಗ ಕನ್ನಡ ಸ್ವಲ್ಪನಾದ್ರು ಕಲಿತಿರಬೇಕು ಎಂಬ ಬುದ್ಧಿಮಾತನ್ನು ಹೇಳಿಬರುತ್ತಾರೆ.

ಅಮ್ಮ ಜೊತೆಗಿದ್ದರೆ ಮನೆಯಿಂದ ತಂದ ಹಣ್ಣು ಹಂಪಲು, ತಿಂಡಿಗಳು ನಮ್ಮ ಮನೆಯ ಒಳಗೆ ಸೇರುವ ಮೊದಲು ಅಮ್ಮ ಅವರಿಗೆ ಕೊಟ್ಟು ಅವರ ಹೊಟ್ಟೆ ಸೇರಿರುತ್ತವೆ! ಇದನ್ನೆಲ್ಲಾ ಗಮನಿಸಿದರೆ ಎಂಥಹ ಜೊತೆ ಅಪ್ಪ ಅಮ್ಮನದು! ಈ ರೀತಿಯ ವಿಷಯಗಳಲ್ಲಿ ಒಬ್ಬರಿಗಿಂತ ಒಬ್ಬರು ಮುಂದು ಅನ್ನಿಸುತ್ತೆ. ಇನ್ನು ಅಪಾರ್ಟ್‌ಮೆಂಟ್ ಸ್ವಚ್ಛಮಾಡುವ ಕೆಲಸಗಾರರ ಯೋಗಕ್ಷೇಮವನ್ನೆಲ್ಲಾ ವಿಚಾರಿಸಿ ಆ ಮೇಲೆ ನನ್ನ ಮನೆಯ ಒಳಗೆ ಕಾಲಿಡುವುದು. ಬಂದು ಸ್ವಲ್ಪ ಹೊತ್ತು ಕಳೆದ ಮೇಲೆ ನನ್ನ ಮನೆಗೆ ಹತ್ತಿರವಿರುವ ಅವರ ಆಪ್ತರನ್ನು ಭೇಟಿ ಮಾಡುವುದು ನೆನಪಿಸಿಕೊಂಡು "ರೀ ಸತೀಶ್ ಬನ್ರಿ, ರವಿ(ರವಿವರ್ಮ ಕುಮಾರ್) ಮನೆಗೆ ಹೋಗೋಣ"; ಅಂತಾನೋ ಇಲ್ಲ "ಮೇಷ್ಟ್ರು (ಯು.ಆರ್.ಅನಂತಮೂರ್ತಿ)

ಮನೆಗೆ ಹೋಗೋಣ"; ಅಂತಾನೋ ಹೇಳುತ್ತಾರೆ. ಬೇರೆಯವರ ಮನೆಯನ್ನು ಹೇಳುತ್ತಾರೆ. ಆದ್ರೆ ಇವರ ಮನೆಗಳು ನಮ್ಮ ಮನೆಗೆ ಹತ್ತಿರವಿರುವುದರಿಂದ ಬೇಗ ಹೋಗಿ ಬರಬಹುದೆಂದು ಯಾವ ಸಮಯದಲ್ಲಿಯಾದ್ರು ನೆನಪಿಸಿಕೊಳ್ಳುತ್ತಾರೆ. ಈಗ ಅನಂತಮೂರ್ತಿ ಮಾಮ ಇಲ್ಲದೆ ಇದ್ದರು ಎಸ್ತರ್ ಆಂಟಿಯನ್ನು ಮಾತನಾಡಿಸಲು ಹೋಗೋಣವೆಂದು ನೆನಪಿಸುತ್ತಾರೆ. ಸತೀಶ್ ಸ್ವಲ್ಪ ಬಿಡುವಾಗಿ ಸಿಕ್ಕಿದರೆ ಆಗ ಬೇರೆ ಮನೆಗಳು ಹಾಗೂ ದೂರವಿರುವ ಮನೆಗಳನ್ನು ನೆನೆಪಿಸಿಕೊಳ್ಳುತ್ತಾರೆ. ಅನಂತಮೂರ್ತಿ ಮಾಮ ಇದ್ದಾಗ, ಅವರ ಮನೆಗೆ ಹೋಗುವಾಗ ಫೋನ್ ಮಾಡಿ ಎಸ್ತರ್ ಆಂಟಿಯ ಹತ್ತಿರ ಸಮಯವನ್ನು ಕೇಳಿಕೊಂಡು ಹೋಗುತ್ತಿದ್ದರು. ಏಕೆಂದ್ರೆ ಕೊನೆಯಲ್ಲಿ ಅವರಿಗೆ ಆರೋಗ್ಯದ ಸಮಸ್ಯೆ ಇದ್ದುದರಿಂದ ಹೊತ್ತು ಗೊತ್ತು ಇಲ್ಲದೆ ಹೋದರೆ ತೊಂದರೆಯಾಗುತ್ತದೆ ಎಂದು ಕೇಳಿಕೊಂಡು ನೋಡಲು ಹೋಗಿಬರುತ್ತಿದ್ದರು. ಆದ್ರೆ ರವಿ ಮಾಮನ ಮನೆಗೆ ಮಾತ್ರ ಬೆಳಿಗ್ಗೆ ಅಥವಾ ರಾತ್ರಿ ಎನ್ನದೆ ನಮ್ಮ ರವಿಗೆ ತೊಂದರೆಯಾಗುವುದಿಲ್ಲ ಎಂದೂ, ಅವರಿಗೆ ಮಾತ್ರ ಅಲ್ಲದೆ ಅವರ ಮನೆಯವರಿಗೂ ತೊಂದರೆಯಾಗುವುದಿಲ್ಲ ಎಂದು ಅಪ್ಪನೇ ತೀರ್ಮಾನ ತೆಗೆದು ಕೊಂಡು, ಬನ್ರಿ ಸತೀಶ್ ಹೋಗಿ ಬರೋಣ ಎಂದು ದಂಬಾಲು ಬೀಳುತ್ತಾರೆ. ನಾನು ಮದುವೆಯಾಗಿ ಬೆಂಗಳೂರಿಗೆ ಬರುವ ಮೊದಲು ಅಪ್ಪ ಬೆಂಗಳೂರಿಗೆ ಬಂದ್ರೆ ನನ್ನ ಮಾವನ ಮನೆಗೋ ಇಲ್ಲ ನನ್ನ ದೊಡ್ಡಮ್ಮನ ಮಗಳ ಮನೆಗಳಿಗೆ ಹೋಗಿ ಅಲ್ಲಿಯೂ ಇದೇ ರೀತಿ ಚಟುವಟಿಕೆಗಳನ್ನು ನಡೆಸುತ್ತಿದ್ದರು. ಈ ರೀತಿ ನನ್ನ ಮನೆಗೆ ಬರುವಾಗ ಮಾತ್ರ ಮಾಡದೆ ಆಂಧ್ರಪ್ರದೇಶದಲ್ಲಿ ವಾಸವಿರುವ ನನ್ನ ಅಕ್ಕನ ಮನೆಗೆ ಹೋದಾಗಲೂ ಇದೇ ಕ್ರಮವೇ ನಡೆಯುತ್ತದೆ. ಭಾಷೆ ಸರಿಯಾಗಿ ಬಾರದಿದ್ದರು ಹೇಗಾದರು ಮಾಡಿ ಮಾತನಾಡಿಸಿ ಆತ್ಮೀಯರನ್ನಾಗಿ ಮಾಡಿಕೊಳ್ಳುತ್ತಾರೆ.

ಇದೇ ರೀತಿ ಕೆಲಸದ ಮೇಲೆ ಯಾವ ಊರಿಗೆ ಹೋದರೂ ಹೋಟೇಲ್‌ನಲ್ಲಿ ಉಳಿಯದೇ ಗೊತ್ತಿರುವವರ ಮನೆಯಲ್ಲಿಯೇ ಉಳಿಯುವುದು. ಈ ರೀತಿ ಉಳಿದುಕೊಂಡಾಗ ಕೂಡ ಅಲ್ಲಿರುವ ಅವರಿಗೆ ಗೊತ್ತಿರುವ ಇತರರನ್ನು ನೋಡಲು ಕರೆದುಕೊಂಡು ಹೋಗುವಂತೆ ಉಳಿದುಕೊಂಡ ಮನೆಯವರಿಗೆ ಒತ್ತಾಯಿಸುತ್ತಾರೆ. ಮನೆಗೆ ಬಂದಮೇಲೆ 'ಎಲ್ಲರಿಗೂ ಯಾಕೆ ತೊಂದರೆ ಕೊಡುತ್ತಿರಾ ಅಪ್ಪ? ಅವರಿಗೆ ಏನಾದರೂ ಕೆಲಸಗಳಿರುವುದಿಲ್ಲವಾ? ನಿಮ್ಮನ್ನು ಎಲ್ಲಾ ಕಡೆ ಕರೆದುಕೊಂಡು ಹೋಗಲು' ಅಂದ್ರೆ 'ನಾನು ತೊಂದರೆ ಏನೂ ಕೊಟ್ಟಿಲ್ಲಪ್ಪ. ಅವರು ಕೂಡ ಅವರನ್ನು ನೋಡಬೇಕಿತ್ತಂತೆ. ಹಾಗಾಗಿ ಜೊತೆಯಲ್ಲಿ ಸಂತೋಷದಿಂದ ಹೋಗಿ ಬಂದೆವು' ಅಂತ ಆರಾಮಾಗಿ ಹೇಳುತ್ತಾರೆ!

ಅಪ್ಪನ ಈ ಸ್ವಭಾವ ಸ್ನೇಹಿತರ ಮನೆಗಷ್ಟೆ ಸೀಮಿತವಾಗಿರದೆ, ಅವರ ಅಣ್ಣ ತಮ್ಮಂದಿರು ಅಕ್ಕ ತಂಗಿಯರು ಮತ್ತು ಅವರ ಮಕ್ಕಳ ಮನೆಗೆ; ಹಾಗೇ ಅಮ್ಮನ

ಅಣ್ಣ ತಮ್ಮಂದಿರು ಅಕ್ಕ ತಂಗಿಯರು ಮತ್ತು ಅವರ ಮಕ್ಕಳ ಮನೆಗೂ; ಮತ್ತೆ ಅಪ್ಪನ ಬೀಗರ ಮನೆಗಳಿಗೂ ವಿಸ್ತರಿಸಿತ್ತು. ಇವರೆಲ್ಲರ ಮನೆಗಳಿಗೆ ಅಪ್ಪ ಒಬ್ಬರೆ ಹೋಗದೆ ಅವರ ಸ್ನೇಹಿತರನ್ನು ಕರೆದುಕೊಂಡು ಹೊತ್ತು ಗೊತ್ತು ಇಲ್ಲದೇ ಹೋಗಿಬಿಡುತ್ತಾರೆ. ಅದರೆ ಅವರು ಹಾಗೂ ಅವರ ಮನೆಯವರೆಲ್ಲ ಅಪ್ಪನ ಈ ಸ್ವಭಾವವನ್ನು ಚೆನ್ನಾಗಿ ಅರಿತಿರುವುದರಿಂದ ಅಪ್ಪ ಹೊತ್ತು ಗೊತ್ತಿಲ್ಲದೇ ಅವರು ತಮ್ಮ ಪಟಾಲಂನ್ನೂ ಕರೆದುಕೊಂಡು ಹೋದರೂ ಸ್ವಲ್ಪವೂ ಬೇಸರಿಸದೇ ಉಪಚರಿಸುತ್ತಲೇ ಬಂದಿದ್ದಾರೆ. ಅಪ್ಪನ ಈ ಎಲ್ಲಾ ಗುಣಗಳನ್ನು ಸಹಿಸಿಕೊಂಡು ಬಂದಿರುವ ಇವರೆಲ್ಲರನ್ನು ಪ್ರೀತಿಯಿಂದ ನೆನಪಿಸಿಕೊಳ್ಳುತ್ತೇನೆ. ಇದು ಕೆಲವರಿಗೆ ಚಿಕ್ಕ ವಿಷಯ ಎನ್ನಿಸಬಹುದು. ಆದರೆ ಈ ರೀತಿಯ ವಿಷಯಗಳೆ ಕೆಲವು ಕುಟುಂಬದಲ್ಲಿ ಮನಸ್ತಾಪಕ್ಕೆ ಕಾರಣವಾಗಬಹುದು. ಆದ್ರೆ ಇಲ್ಲಿ ಹಾಗೆ ಆಗದೇ ಒಬ್ಬರಿಗೊಬ್ಬರು ಹೊಂದಿಕೊಂಡು ಹೋಗುತ್ತಿರುವುದು ನೋಡಿದರೆ ಸಂತೋಷವಾಗುತ್ತದೆ. ಈಗಿನ ಜೀವನಶೈಲಿಯಲ್ಲಿ ಹೊಂದಾಣಿಕೆಗಳೇ-ಕೂಡುಬಾಳ್ವಿಕೆಗಳೇ ಮಾಯವಾಗುತ್ತಿವೆ. ಒಬ್ಬರು ಇನ್ನೊಬ್ಬರ ಮನೆಗೆ ಹೋಗುವುದೇ ಕಡಿಮೆಯಾಗುತ್ತಿದೆ. ಆದ್ದರಿಂದ ಈ ಹೊಂದಾಣಿಕೆ ಕೊನೆಯವರೆಗೂ ಉಳಿಯಲಿ ಎಂದು ಆಸೆ ಪಡುತ್ತೇನೆ. ಅಪ್ಪ ಕೂಡ ಅದನ್ನೆ ಬಯಸುತ್ತಿರುತ್ತಾರೆ.

ತಾತ ಈಗ ಇಲ್ಲ. ಅವರು ಇದ್ದಾಗ ಯಾವಾಗಲೂ 'ನಮ್ಮ ಶಾಮು ಮನೆಗೆ ಬರ್ತಾನೆ ಅಂದರೆ ಅವನು ಒಬ್ಬನೇ ಖಂಡಿತಾ ಯಾವಾಗಲೂ ಬರಲ್ಲ. ಅವನ ಜೊತೆ ಅವನ ಬಳಗ ಇದ್ದೇ ಇರುತ್ತೆ. ಆದ್ದರಿಂದ ಅವನು ಬರುತ್ತಾನೆ ಎಂದ್ರೆ ಇನ್ನೂ ೪-೫ ಜನರ ಲೆಕ್ಕ ಜಾಸ್ತಿ ಇಟ್ಟುಕೊಳ್ಳಬೇಕು' ಎಂದು ಮನೆಯಲ್ಲಿರುವವರಿಗೆ ಹೇಳುತ್ತಿದ್ದರು.

ಇನ್ನು ಅಪ್ಪನ ಊಟ ತಿಂಡಿಯ ವಿಚಾರಕ್ಕೆ ಬಂದ್ರೆ ಯಾವ ರೀತಿಯ ಆಹಾರವನ್ನೆ ಆದ್ರು ಇಷ್ಟಪಟ್ಟು ತಿನ್ನುತ್ತಾರೆ. ಅದು ಆಗಲ್ಲ ಇದು ಆಗಲ್ಲ ಅಂತ ಹೇಳಿದ್ದು ಕೇಳಿಯೇ ಇಲ್ಲ. ಸಿಹಿ ಅಂದ್ರೆ ತುಂಬನೇ ಇಷ್ಟ. ಈ ವಿಚಾರ ಗೊತ್ತಿರುವವರ ಮನೆಗೆ ಹೋದರಂತೂ ಖಂಡಿತಾ ಏನಾದರೊಂದು ಸಿಹಿ ತಿಂಡಿ ತಯಾರಾಗಿರುತ್ತದೆ. ಇವರು ಸಹ ಸಂಕೋಚವಿಲ್ಲದೆ ತಿಂದು ಬಿಡುತ್ತಾರೆ. ಕೆಲವೊಮ್ಮೆ ಮನೆಯವರಿಗೆ ಖುಷಿ ಪಡಿಸುವ ಸಲುವಾಗಿ ಸ್ವಲ್ಪ ಜಾಸ್ತಿನೇ ತಿಂದು ಬೀಡುತ್ತಾರೆ. ಇವರು ಯಾರ ಮನೆಗಾದ್ರು ಹೋಗುತ್ತಿರುವುದು ತಿಳಿಸದೆ ಊಟದ ಸಮಯಕ್ಕೆ ಹೋದರೆ ಮನೆಯವರಿಗಿಂತ ಮೊದಲೆ ಇವರೇ ಹೇಳುತ್ತಾರೆ, "ಊಟದ ಬಗ್ಗೆ ಏನು ಚಿಂತಿಸಬೇಡಿ. ನನಗೆ ಅನ್ನ ಮಜ್ಜಿಗೆ ಇದ್ದರೆ ಸಾಕು. ಅದಕ್ಕೆ ಬೇಕಾದ್ರೆ ಒಂದು ಚಮಚ ಸಕ್ಕರೆ ಹಾಕಿ ಅದೇ ಅದ್ಭುತವಾಗಿರುತ್ತೆ. ಅದೂ ಇಲ್ಲ ಅಂದರೂ ಪರವಾಗಿಲ್ಲ, ಒಂದು ಲೋಟ ನೀರು, ಸ್ವಲ್ಪ ಬೆಲ್ಲ ಕೊಟ್ಟು ಬಿಡಿ." ಎಂದು. ಹೋದಲ್ಲಿ ಮಾತ್ರವಲ್ಲ

ಮನೆಯಲ್ಲಿ ಕೆಲವೊಮ್ಮೆ ಏನು ಇಲ್ಲದಿದ್ದರು ಇರುವುದನ್ನೆ ಸುಮ್ಮನೆ ತಿನ್ನುತ್ತಾರೆ.

ಮತ್ತೆ ಅಪ್ಪನಿಗೆ ಮೊಮ್ಮಕ್ಕಳ ಜೊತೆ ಐಸ್‌ಕ್ರೀಮ್ ತಿನ್ನುವುದೆಂದರೆ ಸಂಭ್ರಮ. ರಜೆಯಲ್ಲಿ ಎಲ್ಲಾ ಸೇರಿದಾಗ ನನ್ನ ಭಾವ ಅಪ್ಪನನ್ನು ಕುರಿತು 'ಅಪ್ಪ, ಐಸ್‌ಕ್ರೀಮ್ ತಿನ್ನಲು ಹೋಗೋಣವಾ?' ಅಂತ ಮಕ್ಕಳಿಗಿಂತ ಮೊದಲು ಅಪ್ಪನನ್ನು ಕೇಳುವುದು. ಏಕೆಂದರೆ ಅವರಿಗೆ ಗೊತ್ತು, ಮಕ್ಕಳಿಗಿಂತ ಹೋಗಲು ಖುಷಿ ಪಡುವವರು ಅಪ್ಪ ಎಂದು. ನಾವುಗಳೆಲ್ಲಾ ಹೊರಡುವ ಮೊದಲೇ ಇವರು ಕಾರಿನ ಹತ್ತಿರ ಹೋಗಿರುತ್ತಾರೆ. ಅಲ್ಲಿಯೂ ಕೂಡ ಮಕ್ಕಳಿಗಿಂತ ಖುಷಿಯಾಗಿಯೇ ತಿನ್ನುತ್ತಾರೆ. ಅದರೆ ಅಲ್ಲಿಯೂ ಕೂಡ ಅವರ ಶಾಲೆಯ ಮಕ್ಕಳನ್ನು ನೆನಪಿಸಿಕೊಳ್ಳುತ್ತಾರೆ. ಒಂದು ಸಾರಿ ನಮ್ಮ ಶಾಲೆಯ ಮಕ್ಕಳಿಗೂ ತೆಗೆದುಕೊಂಡು ಹೋಗಬೇಕು ಎಂದು ಅಂಗಡಿಯವರ ಹತ್ತಿರ ಇದು ಕರಗದೆ ಎಷ್ಟು ಹೊತ್ತು ಇರದಹುದು ಎಂದು ವಿಚಾರಿಸುತ್ತಾರೆ. ಹೀಗೆ ಒಟ್ಟಿನಲ್ಲಿ ಪ್ರತಿಯೊಂದು ವಿಚಾರದಲ್ಲಿಯೂ ಆ ಮಕ್ಕಳು ನೆನಪಾಗುತ್ತಾರೆ ಅಪ್ಪನಿಗೆ.

ಈ ರೀತಿ ವಿಶೇಷ ಗುಣಗಳನ್ನು ಹೊಂದಿರುವ ಅಪ್ಪ ನಮಗೆ ಸಿಗಲು ಮೊದಲ ಕಾರಣಕರ್ತರಾದ ನಮ್ಮೊಂದಿಗೆ ಈಗ ಇಲ್ಲದ ತಾತನನ್ನು ಮತ್ತು ನಮ್ಮೆಲ್ಲರೊಂದಿಗೆ ಇರುವ ಅಜ್ಜಿಯನ್ನು ನೆನಪಿಸಿಕೊಳ್ಳಲೇಬೇಕು. ಏಕೆಂದ್ರೆ ತಾತ ಅಜ್ಜಿ ಅಪ್ಪನನ್ನು ಬೆಳೆಸಿದ ರೀತಿ ಇರಬಹುದು ಅಥವಾ ಅವರ ಮನೆಯ ವಾತಾವರಣ ಇರಬಹುದು. ಅದೇ ಕಾರಣ ಅಂತ ಅಂದುಕೊಳ್ಳುತ್ತೇನೆ. ಏಕೆಂದರೆ ನಾನು ತಿಳಿದ ಪ್ರಕಾರ ಇವೆಲ್ಲವೂ ಕೂಡ ಅವರ ಚಿಕ್ಕವಯಸ್ಸಿನಿಂದಲೇ ಬಂದವುಗಳಾಗಿವೆ.

ಅಪ್ಪನ ಬಗ್ಗೆ ಒಂದು ಲೇಖನವನ್ನು ಬರೆದು ಕಳಿಸುವಂತೆ ಒಂದು ತಿಂಗಳ ಸಮಯವನ್ನೂ ಕೊಟ್ಟು ಪುಸ್ತಕ ಸಮಿತಿಯವರಿಂದ ಒಂದು ಪತ್ರ ಬಂದಿತ್ತು. ಅದರೆ ನಾನು ಬರೆಯುವುದು ಬೇಡವೆಂದು ಸುಮ್ಮನಾಗಿಬಿಟ್ಟಿದ್ದೆ. ಆದರೆ ಒಂದು ತಿಂಗಳ ನಂತರ ನಾಗಭೂಷಣ ಮಾಮನವರಿಂದ ಫೋನ್ ಬಂದೇಬಿಟ್ಟಿತ್ತು. 'ಯಾಕೆ ಲೇಖನ ಕಳಿಸಲಿಲ್ಲ? ಈ ಪುಸ್ತಕಕ್ಕೆ ಮಕ್ಕಳಾದ ನಿಮ್ಮ ಲೇಖನವೂ ಬೇಕು. ಹಾಗಾಗಿ ಬರೆಯಲೇಬೇಕು. ಇಲ್ಲದಿದ್ದರೆ ನಿಮ್ಮಿಂದಲೇ ಪುಸ್ತಕ ಬರುವುದು ತಡವಾಗುತ್ತದೆ' ಎಂಬ ಎಚ್ಚರಿಕೆಯನ್ನು ಕೊಟ್ಟರು. ಮತ್ತೆ ಅವರ ಪ್ರೀತಿಯ ಒತ್ತಾಯ ಹಾಗೂ ನಂತರ ಮೂರು ನಾಲ್ಕು ಸಾರಿ ಮಾಡಿದ ಫೋನ್ ಕರೆಯೇ ಈ ಲೇಖನ ಬರೆಯಲು ಕಾರಣವಾಯಿತು.

ಒಕ್ಕಲಗಿತ್ತಿಯ ಒಡಲಾಳ: ಶ್ರೀದೇವಿಯವರೊಡನೆ ಒಂದು ಮಾತುಕತೆ

ಮಾತುಕತೆ ನಡೆಸಿರುವವರು: ಅಕ್ಷತಾ ಹುಂಚದಕಟ್ಟೆ

(ಕಡಿದಾಳು ಶಾಮಣ್ಣನವರ ವರ್ಣರಂಜಿತ ವ್ಯಕ್ತಿತ್ವ ಮತ್ತು ಹೋರಾಟದ ಬದುಕಿನ ಹಿಂದಿನ ಚೈತನ್ಯಶಕ್ತಿ ಎಂದರೆ ಅವರ ಬಾಳ ಸಂಗಾತಿ ಶ್ರೀದೇವಿಯವರು. ಪರಸ್ಪರ ಪ್ರೀತಿಸಿ ಮದುವೆಯಾದ ಇವರ ದಾಂಪತ್ಯದ ಅನ್ಯೋನ್ಯತೆ ಅವರ ಬಂಧು-ಬಾಂಧವರು ಮತ್ತು ಗೆಳೆಯರ ಬಳಗದ ನಡುವೆ ಒಂದು ದಂತಕಥೆಯೇ ಆಗಿದೆ. ಶಿವಮೊಗ್ಗ ಜಿಲ್ಲೆಯ ಹೊಳೆಹೊನ್ನೂರು ಬಳಿಯ ಭಗವತಿಕೆರೆ ಎಂಬ ಒಂದು ಸಣ್ಣ ಹಳ್ಳಿಯಲ್ಲಿ ಶಾಮಣ್ಣನವರ ಕೃಷಿ ಬದುಕಿನಲ್ಲಿ ಹೆಗಲಿಗೆ ಹೆಗಲುಕೊಟ್ಟು ದುಡಿದು ಕುಟುಂಬ ಕಟ್ಟಿ ಸಾಗಿಸುತ್ತಿರುವ, ಶ್ರೀದೇವಿಯಕ್ಕ ಎಂದೇ ತಮ್ಮ ಆತ್ಮೀಯರ ಮಧ್ಯೆ ಪ್ರಸಿದ್ಧರಾದ ಅಪ್ಪಟ ರೈತ ಮಹಿಳೆ ಶ್ರೀದೇವಿಯವರು ಶಾಮಣ್ಣನವರೊಡನೆಯ ತಮ್ಮ ಗ್ರಾಮೀಣ ಬದುಕಿನ ಹಲವು ತೆರೆನ ಅನುಭವಗಳನ್ನು ಈ ಮಾತುಕತೆಯಲ್ಲಿ ಬಿಚ್ಚಿಟ್ಟಿದ್ದಾರೆ)

ನೀವು ಮಲೆನಾಡಿನ ಕೃಷಿಕ ಕುಟುಂಬದಲ್ಲಿ ಹುಟ್ಟಿ ಬೆಳೆದವರಾದರೂ ಹೈಸ್ಕೂಲ್‌ನಿಂದ ಹಿಡಿದು ಪದವಿ ಶಿಕ್ಷಣ ಪಡೆಯುವವರೆಗೂ ಮೈಸೂರಿನಲ್ಲಿ ನಿಮ್ಮ ಸಹೋದರ ಹಾ.ಮಾ. ನಾಯಕರ ಮನೆಯಲ್ಲಿದ್ರಿ. ಹೆಚ್ಚಿನ ಹೆಣ್ಣುಮಕ್ಕಳು

ನಗರ ಜೀವನವನ್ನೇ ಇಷ್ಟ ಪಡ್ತಾರೆ. ನಿಮಗೂ ಅಂಥ ಹಲವು ಅವಕಾಶಗಳಿದ್ದವು. ಹಾಗಿರುವಾಗಲೂ ಹಳ್ಳಿಯ ಕೃಷಿ ಬದುಕನ್ನು ಆರಿಸಿಕೊಂಡ ಶಾಮಣ್ಣನವರನ್ನು ಮೆಚ್ಚಿ ಮದುವೆಯಾಗಿ ಬಂದ ನೀವು ಎಲ್ಲ ಅರ್ಥದಲ್ಲೂ ಅವರಿಗೆ ಸಹಭಾಗಿನಿ ಆಗಿದ್ದೀರಿ. ಶಾಮಣ್ಣನವರ ಬಗೆಗಿದ್ದ ನಿಮ್ಮ ಪ್ರೇಮವೇ ಇಂಥ ನಿರ್ಧಾರಕ್ಕೆ ಕಾರಣವೇ?

ಪ್ರೀತಿ-ಪ್ರೇಮಕ್ಕೆ ಸಾಟಿ ಯಾವುದು ಇಲ್ಲ. ಅದಿದ್ದರೆ ಎಲ್ಲಿಯಾದರೂ ಬದುಕು ಸಾಗಿಸಲು ಸಿದ್ಧರಾಗುತ್ತೇವೆ. ಶಾಮಣ್ಣನವರು ನನ್ನನ್ನು ಮದುವೆಯಾಗುವುದಕ್ಕೆ ಎರಡು ವರುಷ ಮೊದಲೇ ಭಗವತೀಕೆರೆಯಲ್ಲಿ ಜಮೀನು ತೆಗೆದುಕೊಂಡು ಕೃಷಿ ಪ್ರಾರಂಭಿಸಿದ್ದರಿಂದ ಮದುವೆಗೆ ಮುಂಚೆಯೇ ಇಲ್ಲಿಯೇ ನನ್ನ ಮುಂದಿನ ಬದುಕು ಎಂಬುದು ನನಗೆ ತಿಳಿದಿತ್ತು. ನಾನು ನನ್ನ ವಿದ್ಯಾಭ್ಯಾಸವನ್ನು ಮೈಸೂರಿನಲ್ಲಿ ಮಾಡಿದ್ದರೂ ನನಗೆ ಹಳ್ಳಿಯ ಬದುಕೇ ಇಷ್ಟವಾಗುತ್ತಿತ್ತು. ನನ್ನ ಸ್ವಭಾವಕ್ಕೆ ಹಳ್ಳಿಯ ಜೀವನವೇ ಸರಿ ಎನಿಸುತ್ತಿತ್ತು. ಆದ್ದರಿಂದ ಬೇರೆ ಯಾವ ಯೋಚನೆಗೂ ಅವಕಾಶ ಕೊಡದೇ ಸಂತೋಷವಾಗಿಯೇ ಈ ಹಳ್ಳಿಯಲ್ಲಿ ನಾನು ಮೆಚ್ಚಿದ ಶಾಮಣ್ಣನವರೊಡನೇ ನನ್ನ ಕೌಟುಂಬಿಕ ಬದುಕನ್ನು ಪ್ರಾರಂಭಿಸಿದೆ. ಇಲ್ಲಿ ಕಳೆದ ದಿನಗಳು ಅರ್ಧ ಶತಮಾನಕ್ಕೆ ಹತ್ತಿರವಿದೆಯಾದರೂ ಇಂದಿಗೂ ನಮ್ಮ ಹಳ್ಳಿಯ ಬದುಕು ರುಚಿ ಕಳೆದುಕೊಂಡಿಲ್ಲ. ಆದ್ದರಿಂದಲೆ ನಾವು ನಗರ ಸೇರಿಲ್ಲ.

ಮಲೆನಾಡಿನ ಕೃಷಿ ಕುಟುಂಬದಲ್ಲಿ ಹುಟ್ಟಿ ಬೆಳೆದ ನೀವು ನಿಮ್ಮ ಪತಿಯೊಂದಿಗೆ ಕೃಷಿ ಬದುಕನ್ನು ಆರಂಭಿಸಿದ್ದು, ಅರೆ ಬಯಲುಸೀಮೆಯ ಭಗವತೀಕೆರೆಯಲ್ಲಿ, ನೀರಾವರಿ ಪ್ರದೇಶವಾದರೂ ಮಲೆನಾಡಿನ ಕೃಷಿ ಮತ್ತು ನಮ್ಮ ಬದುಕಿಗೂ, ಇಲ್ಲಿನ ಕೃಷಿ ಮತ್ತು ಬದುಕಿಗೂ ಅಜಗಜಾಂತರ ವ್ಯತ್ಯಾಸಗಳಿವೆ... ನೀವು ಎದುರಿಸಿದ ಸವಾಲುಗಳೇನು? ಅದು ಕೃಷಿಗೆ ಸಂಬಂಧ ಪಟ್ಟಂತೆ ಆಗಿರಬಹುದು ಅಥವಾ ಸ್ವಂತ ಬದುಕಿಗೆ ಸಂಬಂಧ ಪಟ್ಟಂತೆ ಇರಬಹುದು.

ನಿಜ, ನಮ್ಮ ಮಲೆನಾಡಿನ ಕೃಷಿ ಬದುಕಿಗೂ ಇಲ್ಲಿನ ಕೃಷಿ ಬದುಕಿಗೂ ಬಹಳಷ್ಟು ವ್ಯತ್ಯಾಸಗಳಿವೆ. ಮಣ್ಣಿನಿಂದ ಹಿಡಿದು ಬೆಳೆಯವರೆಗೆ ಹಲವು ವ್ಯತ್ಯಾಸಗಳಿವೆ. ನಾವು ಅವೆಲ್ಲಕ್ಕೂ ಹೊಂದಿಕೊಳ್ಳಲು, ಹೊಸ ಹೊಸದನ್ನು ಅನ್ವೇಷಿಸಲು ಸದಾ ಕಾತುರರಾಗಿದ್ದೆವು. ನಾವಿಬ್ಬರೂ ನಮ್ಮ ಜಮೀನಿನಲ್ಲಿ ಸಹಾಯಕರ ಜೊತೆ ಸ್ವತಃ ಕೆಲಸದಲ್ಲಿ ತೊಡಗಿಕೊಳ್ಳುತ್ತಿದ್ದೆವು. ಇದು ನೀರಾವರಿ ಪ್ರದೇಶವಾದ್ದರಿಂದ ಎರಡು ಬೆಳೆ ಭತ್ತ ಬೆಳೆಯುತ್ತಿದ್ದೆವು. ಆದ್ದರಿಂದ ಮಲೆನಾಡಿನಲ್ಲಿ ದೊರೆತಂತೆ ಕೃಷಿ ಕೆಲಸದಲ್ಲಿ ಬಿಡುವು ದೊರೆಯುತ್ತಿರಲಿಲ್ಲ. ವರ್ಷವಿಡೀ ಕೆಲಸ ಇದ್ದೇ ಇರುತ್ತಿತ್ತು. ನಮ್ಮ ಹೊಸ ಬದುಕನ್ನು ಸಮರ್ಪಕವಾಗಿ ನಡೆಸಬೇಕೆಂಬ ಕನಸು ಮತ್ತು ಉಮೇದಿನಲ್ಲಿ ನಾವಿಬ್ಬರೂ ಸಮಯದ ಪರಿವೇ ಇಲ್ಲದೇ ಗದ್ದೆ, ತೋಟದಲ್ಲಿ ದುಡಿಯುತ್ತಿದ್ದೆವು. ಆಗ ಬೆಳೆ ಚೆನ್ನಾಗಿ ಬರುತ್ತಿತ್ತು. ಕೆಲಸಗಾರರು ಪ್ರಾಮಾಣಿಕರು, ಶ್ರಮಜೀವಿಗಳು ಆಗಿದ್ದರು. ಆದರೆ ಬೆಳೆದ ಬೆಳೆಗೆ ಸರಿಯಾದ ಪ್ರತಿಫಲ ಅಂದರೆ ಬೆಲೆ ದೊರೆಯುತ್ತಿರಲಿಲ್ಲ.

ನಮ್ಮ ಮುಂದಿದ್ದ ದೊಡ್ಡ ಸವಾಲು ಇದೇ ಆಗಿತ್ತು. ಹಾಗಾಗಿಯೇ ಇಲ್ಲಿ ರೈತರು ಲೆವಿ ಪದ್ಧತಿ ವಿರುದ್ಧ ಸಿಡಿದೆದ್ದು ಹೋರಾಟಕ್ಕೆ ತೊಡಗಿದ್ದು... ಮತ್ತದೇ ರೈತ ಚಳವಳಿಗೆ ಬುನಾದಿಯಾಯ್ತು.

ಇನ್ನು ಮಲೆನಾಡಿನ ಜನಕ್ಕೂ ಬಯಲುಸೀಮೆಯ ಜನಕ್ಕೂ ಏನು ವ್ಯತ್ಯಾಸ ಎಂದು ಕೇಳಿದರೆ ಯಾವ ಮನುಷ್ಯರ ಜೊತೆಗೂ ನಮ್ಮ ವರ್ತನೆ ಅವರ ಜೊತೆ ಹೇಗಿರುತ್ತದೆಯೋ, ನಾವು ಅವರನ್ನು ಹೇಗೆ ನೋಡುತ್ತೇವೆಯೋ ಅದನ್ನು ಅವಲಂಬಿಸಿಯೇ ಅವರ ವರ್ತನೆ ಮತ್ತು ನೋಟ ಇರುತ್ತದೆ ಅನ್ನಿಸುತ್ತದೆ ಬಿಟ್ಟರೆ, ಅಲ್ಲಿನವರಿಗೂ ಇಲ್ಲಿನವರಿಗೂ ಸ್ವಭಾವದಲ್ಲಿ ಎಂಥ ವ್ಯತ್ಯಾಸವು ನನಗಂತೂ ಕಾಣಿಸುವುದಿಲ್ಲ.

ಶಾಮಣ್ಣನವರು ರೈತ ಸಂಘದ ಮುಂಚೂಣಿ ಹೋರಾಟಗಾರರು. ನೀವು ರೈತ ಹೋರಾಟಗಳಲ್ಲಿ ಪ್ರತ್ಯಕ್ಷ, ಪರೋಕ್ಷವಾಗಿ ಭಾಗವಹಿಸಿದ್ದೀರಿ. ಆ ಕೆಲವು ಅನುಭವಗಳನ್ನು ಹಂಚಿಕೊಳ್ಳೀರಾ?

ರೈತಹೋರಾಟ ಎಂದ ಕೂಡಲೇ ಒಂದರ ಹಿಂದೊಂದು ನೆನಪುಗಳು ಸುರಳಿ ಬಿಚ್ಚುತ್ತವೆ. ಯಾವುದನ್ನು ಹೇಳಲಿ ಯಾವುದನ್ನು ಬಿಡಲೀ ಎಂದಾಗುತ್ತದೆ. ರೈತ ಹೋರಾಟಗಳಲ್ಲಿ ಪ್ರತ್ಯಕ್ಷವಾಗಿ ಭಾಗಿಯಾಗಲು ದೂರದೂರದ ಊರುಗಳಿಗೂ ಹೋಗುತ್ತಿದ್ದೆ. ಮಕ್ಕಳು ಬಹಳ ಚಿಕ್ಕವರಿದ್ದರು. ಅವರನ್ನು ಕರೆದುಕೊಂಡು ಹೋಗುತ್ತಿದ್ದೆ. ಮಕ್ಕಳು ಸಹ ಏನೂ ತೊಂದರೆ ಮಾಡದೇ ನಮ್ಮೊಡನೆ ಸಹಕರಿಸುತ್ತಿದ್ದರು. ಲಾಜವಂತಿ ಆಗ ತುಂಬಾ ಚಿಕ್ಕವಳು. ರೈತ ಘೋಷಣೆಗಳನ್ನು ಕೂಗುವುದು, ರೈತ ಧ್ವಜ ಹಿಡಿದು ನಡೆಯುವುದು ಅವಳಿಗೆ ಆಟದಂತೆ ಸಂತೋಷ ಕೊಡುತ್ತಿತ್ತು. ಉಲೂಪಿಯಂತೂ ಹಿ.ಶಿ.ರಾಮಚಂದ್ರೇಗೌಡರು ಬರೆದ ರೈತಗೀತೆಗಳನ್ನು ರೈತ ಸಭೆ, ಸಂಘಟನೆಗಳಲ್ಲಿ ಹಾಡುತ್ತಿದ್ದಳು. ಕಬ್ಬನ್ ಪಾರ್ಕ್‌ನಲ್ಲಿ ಲಕ್ಷಗಟ್ಟಲೆ ರೈತರು ಸಮಾವೇಶ ಸೇರಿದಾಗ ನಾನು ಉಳಿದ ರೈತ ಮಹಿಳೆಯರೊಂದಿಗೆ ನಮ್ಮೂರಿನಿಂದ ಲಾರಿಯಲ್ಲಿ ಮಕ್ಕಳನ್ನು ಕರೆದುಕೊಂಡು ಸಮಾವೇಶಕ್ಕೆ ಹೋಗಿದ್ದೆ. ಲಾರಿಯಲ್ಲಿ ಬಿಸಿಲು– ಚಳಿ ಏನನ್ನು ಲೆಕ್ಕಿಸದೇ ಗಂಟೆಗಟ್ಟಲೆ ಪ್ರಯಾಣ ಮಾಡಿದೆವು. ಬೆಂಗಳೂರು ತಲುಪಿದಾಗ ಅಲ್ಲಿನ ಜನರು ದಾರಿಯುದ್ದಕ್ಕೂ ಹಣ್ಣು, ನೀರಿನ ಬಾಟಲ್, ಚಾಕೋಲೆಟ್‌ಗಳನ್ನು ನೀಡಿ ತಮ್ಮ ಬೆಂಬಲ ವ್ಯಕ್ತಪಡಿಸುತ್ತಿದ್ದರು. ಅವರ ಸಹೃದಯತೆಗೆ ತಲೆಬಾಗಲೇಬೇಕು.

ಇಪ್ಪತ್ತೆಂಟು, ಮೂವತ್ತು ವರ್ಷದ ಹಿಂದೊಮ್ಮೆ ಭಾರಿ ಆಲಿಕಲ್ಲು ಮಳೆ ಎಡಬಿಡದೇ ಸುರಿದು ಫಸಲು ಸರ್ವನಾಶವಾಯಿತು. ಆಗ ಪರಿಹಾರಕ್ಕೆ ಒತ್ತಾಯಿಸಿ ಹೊಳೆಹೊನ್ನೂರಿನಿಂದ ಶಿವಮೊಗ್ಗ ಜಿಲ್ಲಾಧಿಕಾರಿ ಕಛೇರಿವರೆಗೆ ಕಾಲ್ನಡಿಗೆ ಜಾಥ ಹೊರಟಿದ್ದೆವು. ಹಿರಿಯ ರೈತ ನಾಯಕರಾದ ರುದ್ರಪ್ಪನವರು 'ತಾಯಿ, ನೀವು

ಅಷ್ಟೆಲ್ಲ ದೂರ ನಡೆಯಲು ಕಷ್ಟ. ಉಳಿದವರನ್ನು ಹೊರಡಿಸಿ ನಂತರ ನೀವು ಮನೆಗೆ ಮರಳಿ' ಎಂದರು. ನನಗವರ ಮಾತು ಸರಿ ಬರಲಿಲ್ಲ. ನಾನು ಜಾಥದಲ್ಲಿ ನಡೆಯಲು ನಿರ್ಧರಿಸಿದೆ. ಉಳಿದವರಿಗೆಲ್ಲ ಆಗುತ್ತದೆ ಎಂದರೆ ನನಗ್ಯಾಕೆ ಆಗುವುದಿಲ್ಲ ಎಂದು ಅನ್ನಿಸಿತು. ಹೊಳೆಹೊನ್ನೂರಿನಿಂದ ೩೦ ಕಿ.ಮೀ ಎಡಬಿಡದೇ ನಡೆದು ಶಿವಮೊಗ್ಗೆ ತಲುಪಿದೆವು. ಆದರೆ ಅಲ್ಲಿ ಸೇತುವೆ ಮೇಲೆ ಹೋಗುವಾಗ ಜೋರಾದ ಬಿರುಗಾಳಿ ಬೀಸಿ ಮುಂದೆ ಹೆಜ್ಜೆಯಿಡಲೇ ಹರಮಕಷ್ಟವಾಯಿತು. ಬಿರುಗಾಳಿಗೆ ಮೇಲೇಳುತಿದ್ದ ಬಟ್ಟೆಗಳನ್ನು ಹಿಡಿದುಕೊಳ್ಳುವುದೇ ಇನ್ನೂ ಹರಸಾಹಸವಾಯಿತು. ಅಂತೂ ಇಂತೂ ಇದನ್ನೆಲ್ಲ ಎದುರಿಸಿ ಜಿಲ್ಲಾಧಿಕಾರಿ ಕಛೇರಿ ತಲುಪಿದರೆ. 'ಎಲ್ಲರೂ ಕೂತುಕೊಳ್ಳಿ' ಎಂದು ಧ್ವನಿವರ್ಧಕದ ಮೂಲಕ ಹೇಳುತ್ತಿದ್ದಾರೆ. ಕೂರಲಿಕ್ಕೆ ಆಗುತ್ತಿಲ್ಲ. ಕಾಲುಗಳು ನಡಗುತ್ತಿದೆ. ಏನು ಮಾಡಬೇಕೆಂದು ದಿಕ್ಕು ತೋಚದಂತಾಗಿತ್ತು. ಸ್ವಲ್ಪ ಹೊತ್ತಿನ ನಂತರ ಕಾಲುಗಳು ಸಹಜ ಸ್ಥಿತಿಗೆ ಬಂದು ಸರಿ ಹೋದವು.

ಇನ್ನೊಂದು ಮರೆಯಲಾರದ ಘಟನೆ ಎಂದರೆ ಬೀದರ್‌ನಲ್ಲಿ ವಿಷ ಪೂರಿತ ನೀರನ್ನು ನದಿಗಳಿಗೆ ಬಿಡುತ್ತಿದ್ದು, ಅದನ್ನು ಕುಡಿದು ಜನರಿಗೂ, ಪ್ರಾಣಿಗಳಿಗೂ ಅನಾರೋಗ್ಯವುಂಟಾಗಿತ್ತು. ಅದನ್ನು ಹೇಗಾದರೂ ಕೊನೆಗಾಣಿಸಬೇಕೆಂದು ಮಿತ್ರರಾದ ಬಂಜಗೆರೆ ಜಯಪ್ರಕಾಶ ಅವರು ಅದರ ವಿರುದ್ಧ ಪ್ರತಿಭಟನೆಗೆ ಶಾಮಣ್ಣನವರನ್ನು ಕರೆದಿದ್ದರು. ನಾವಿಬ್ಬರು ರಾತ್ರಿ ಹೊರಟು ಬೆಳಿಗ್ಗೆ ಅಲ್ಲಿಗೆ ಸೇರಿದೆವು. ಅಲ್ಲಿನ ವಾತಾವರಣ ನೋಡಿದರೆ ಬಹಳ ಗಲಾಟೆ ನಡೆಯುವಂತೆ ಕಾಣಿಸುತ್ತಿತ್ತು. ಪೊಲೀಸ್ ವ್ಯವಸ್ಥೆ ನಮ್ಮನ್ನು ಸುತ್ತುವರೆದಿದ್ದ ಪರಿ ನೋಡಿದರೆ ನಾವು ಇಲ್ಲಿಂದ ವಾಪಾಸ್ ಹೋಗುವುದಿಲ್ಲ ಎಂದು ಅನ್ನಿಸತೊಡಗಿತು. ಆಗ ಈಗಿನಂತೆ ಫೋನ್ ವ್ಯವಸ್ಥೆಯೂ ಇರಲಿಲ್ಲ. ನನ್ನ ಮಕ್ಕಳ ನೆನಪಾಗತೊಡಗಿತು. ಎರಡು ಪೋಸ್ಟ್ ಕಾರ್ಡ್ ತೆಗೆದುಕೊಂಡು ಲಾಜವಂತಿಗೊಂದು, ಉಲೂಪಿಗೊಂದು ಪತ್ರ ಬರೆದೆ. ನನ್ನ ಭಯವನ್ನು ಬಿಚ್ಚಿಡದೇ ಇಲ್ಲಿನ ವಾತಾವರಣ ತುಂಬಾ ಚೆನ್ನಾಗಿದೆಯೆಂದೂ, ಇನ್ನೊಮ್ಮೆ ನಾವೆಲ್ಲ ಒಟ್ಟಿಗೆ ಇಲ್ಲಿಗೆ ಬರೋಣವೆಂದೂ.. ಏನೇನೋ ಬರೆದೆ. ಆದರೆ ನನ್ನೊಳಗೆ ಅನ್ನಿಸುತ್ತಿದ್ದುದು ಇದು ಬಹುಶಃ ನನ್ನ ಕೊನೆಯ ಕಾಗದ ಆಗಬಹುದೆಂದು. ಜಯಪ್ರಕಾಶ್ ಅವರು ಸರ್ಕಾರದ ವಿರುದ್ಧ, ವ್ಯವಸ್ಥೆಯ ವಿರುದ್ಧ ಖಂಡತುಂಡವಾಗಿ ಮಾತನ್ನಾಡುತ್ತಿದ್ದರೆ ಅವರ ಸುತ್ತ ಕೋಟೆ ಕಟ್ಟಿ ನಿಂತಿದ್ದ ಪೋಲೀಸರು ಯಾವ ಘಳಿಗೆಯಲ್ಲಿ ಏನೂ ಮಾಡುವಂತಹ ಸ್ಥಿತಿಯಿತ್ತು... ಆದರೆ ನಮ್ಮೆಲ್ಲರ ಸಂಘಟಿತ, ಸಂಯಮದ ಹೋರಾಟದೆದುರು ಪೊಲೀಸರು ಮೆತ್ತಗಾದರು.

ಹೀಗೆ ಹೇಳುತ್ತಾ ಹೋದರೆ ನೂರಾರು ಅನುಭವಗಳಿವೆ. ರೈತಹೋರಾಟದಲ್ಲಿ ಭಾಗವಹಿಸಿದ್ದು ನನ್ನ ಬದುಕಿನ ಧನ್ಯತೆಯ ಘಳಿಗೆಗಳು. ಅದಕ್ಕೆ ಸಂಪೂರ್ಣ ಕಾರಣ ಮತ್ತು ಪ್ರೇರಣೆ ಎರಡೂ ಶಾಮಣ್ಣನವರೆ.

ನಾನು ನಿಮ್ಮ ತೋಟದಲ್ಲಿ ಒಂದು ವಿಶೇಷತೆಯನ್ನು ನೋಡಿದ್ದೇನೆ. ಒಂದು ರೀತಿ ಸರ್ಕಾರಿ ಕಛೇರಿ ರೀತಿ ಅಥವಾ ಶಾಲೆಯ ರೀತಿ ಎಂದು ನನಗೆ ಅನಿಸತ್ತೆ. ಬೆಳಿಗ್ಗೆ ೧೦ ಗಂಟೆಗೆ ಒಂದು ಬೆಲ್ಲು ಹೊಡೆಯತ್ತೆ ಆಗ ಕೆಲಸಗಾರರು ಕೆಲಸದಲ್ಲಿ ತೊಡಗುತ್ತಾರೆ. ಮತ್ತೆ ಮಧ್ಯಾಹ್ನ ೧ ಗಂಟೆಗೆ ಊಟದ ಬೆಲ್. ೨ ಗಂಟೆಗೆ ಊಟ ಮುಗಿಸಿ ಮತ್ತೆ ಕೆಲಸದಲ್ಲಿ ತೊಡಗಬೇಕು ಎಂದು ಸೂಚಿಸುವ ಬೆಲ್. ಸಂಜೆ ಐದು ಗಂಟೆಗೆ ಕೆಲಸ ಬಿಡಿ ಎಂದು ಸೂಚಿಸುವ ಬೆಲ್. ಪ್ರತಿ ಶುಕ್ರವಾರ ಕೆಲಸಗಾರರಿಗೆ ಸಂಬಳ. ಇಂಥ ಶಿಸ್ತುಬದ್ಧ ಆಲೋಚನೆಗಳೆಲ್ಲ ನಿಮ್ಮವೇ ಅದರಲ್ಲಿ ನನಗೆ ಅನುಮಾನವಿಲ್ಲ. ಆದರೆ ನೀವು ನಿಮ್ಮ ತೋಟ, ಗದ್ದೆಯಲ್ಲಿ ಅಳವಡಿಸಿಕೊಂಡ ಈ ರೀತಿಯ ಶಿಸ್ತುಗಳ ಹಿಂದಿನ ಪ್ರೇರೇಪಣೆ ಯಾರದು?

ಹೌದು. ಇದೊಂದು ತರಹ ಸರ್ಕಾರಿ ವ್ಯವಸ್ಥೆ ಅನ್ನುವುದಕ್ಕಿಂತಲೂ ಹೆಚ್ಚಾಗಿ ಶಾಲೆಯಲ್ಲಿನ ರೀತಿ ಎನ್ನಬಹುದು. ಆದರೆ ಈ ಬೆಲ್ ಹೊಡೆಯುವ ಪರಿಪಾಠ ನನ್ನಿಂದ ಶುರುವಾದದ್ದಲ್ಲ. ಇದಕ್ಕೆ ಪೂರ್ಣವಾಗಿ ಶಾಮಣ್ಣನವರೇ ಕಾರಣಕರ್ತರು. ನಾನಿಲ್ಲಿಗೆ ಶಾಮಣ್ಣನವರನ್ನು ಮದುವೆಯಾಗಿ ಬರುವಾಗಲೇ ಈ ಜಮೀನು ಕೊಂಡು ಸಾಗುವಳಿ ಪ್ರಾರಂಭಿಸಿ ಎರಡು ವರ್ಷವಾಗಿತ್ತು. ಆಗ ಶಾಮಣ್ಣನವರು ಶಾಲೆಯಲ್ಲಿ ಕೆಲಸ ಮಾಡುತ್ತಿದ್ದು, ಶನಿವಾರ, ಭಾನುವಾರ ಜಮೀನು ಕೆಲಸ ಮಾಡಿಸುತ್ತಿದ್ದರು. ಶಾಲೆಯ ಘಂಟೆಯ ವ್ಯವಸ್ಥೆಯನ್ನು ಜಮೀನಿನಲ್ಲೂ ತಂದಿದ್ದರು. ನಾವದನ್ನು ನಂತರದಲ್ಲಿ ಬಿಡದೇ ಅದೇ ವ್ಯವಸ್ಥೆ ಮುಂದುವರೆಸಿಕೊಂಡು ಬಂದ್ವಿ. ನಮ್ಮ ಅಕ್ಕಪಕ್ಕದ ಜಮೀನಿನವರು ಸಹ ಈ ವ್ಯವಸ್ಥೆಯನ್ನೆ ಅವಲಂಬಿಸಿದ್ದಾರೆ. ಶುಕ್ರವಾರ ಸಂಬಳದ ದಿನ ಅಲ್ಲ. ಪ್ರತಿ ಸೋಮವಾರ ಸಂಬಳ ಹಾಗೂ ಅಂದು ಕೆಲಸಗಾರರಿಗೆ ರಜಾದಿನ. ಏಕೆಂದರೆ ಹತ್ತಿರದ ಮಲ್ಲಾಪುರದಲ್ಲಿ ಅಂದು ಸಂತೆ.

ನಿಮಗೆ ಹಾ.ಮಾ.ನಾಯಕರ ಮೂಲಕ ಒಂದು ಅಕೆಡೆಮಿಕ್ ಆದ ಪರಿಸರ ಸಿಕ್ಕರೆ, ಶಾಮಣ್ಣ ಅವರ ಮೂಲಕ ರೈತ ಹೋರಾಟಗಾರರ, ಲೇಖಕರ, ಸಂಗೀತಗಾರರ ಸಾಂಗತ್ಯ ಸಿಕ್ಕಿತು. ಉಳಿದ ರೈತ ಮಹಿಳೆಯರಿಗೆ ಇಂಥ ಭಾಗ್ಯ ಇರೋದಿಲ್ಲ. ಈ ಬಗ್ಗೆ ನಿಮಗೆ ಏನು ಅನ್ನಿಸತ್ತೆ.?

ನನ್ನ ದೊಡ್ಡಣ್ಣ ಹಾ.ಮಾ. ನಾಯಕರಿಂದ ನಾನು ಸರಳತೆ ಕಲಿತೆ. ಇವತ್ತಿಗೂ ನಮ್ಮ ದುಡಿಮೆ ಹೊಟ್ಟೆ–ಬಟ್ಟೆಗೆ ವ್ಯಯವಾಗಿ ಪುಸ್ತಕ–ಸಂಗೀತ–ಅಗತ್ಯ ಇರುವವರಿಗೆ ಸಣ್ಣಪುಟ್ಟ ಸಹಾಯ ನೀಡಲು– ಮತ್ತು ತಿರುಗಾಟ ಇಷ್ಟಕ್ಕೆ ಆದರೆ ಹಣದ ಉಪಯೋಗ ಮುಗಿದಂತೆ. ತುಂಬಾ ಹಣ ಉಳಿಸಬೇಕು, ಬಂಗಾರ ಮಾಡಿಸಬೇಕು, ಐಷಾರಾಮಿಯಾಗಿ ಬದುಕಬೇಕೆಂಬ ಆಸೆ ಎಂದಿಗೂ ಇಲ್ಲ. ಇಂದಿಗೂ ನಾವಿಬ್ಬರೂ ಎಲ್ಲಿಗೆ ಹೋಗಬೇಕಾದರೂ ಹೆಚ್ಚಾಗಿ ಆಶ್ರಯಿಸುವುದು ಕೆಂಪು ಸರ್ಕಾರಿ ಬಸ್ಸನ್ನು. ಇಂಥ ಸರಳ ಬದುಕನ್ನು ಕಲಿಸಿದ್ದು ನನ್ನ ದೊಡ್ಡಣ್ಣ.

ಇನ್ನು ಇಲ್ಲಿ ಇಷ್ಟು ವರ್ಷ ನಾನು–ಶಾಮಣ್ಣ ಸಂತೋಷದಿಂದ ರೈತಾಪಿ ಬದುಕು ಮಾಡಿದ್ದೀವಿ ಅಂದ್ರೆ ಅದಕ್ಕೆ ನಮಗೆ ಸ್ಫೂರ್ತಿ ತೇಜಸ್ವಿ ಮತ್ತು ರಾಜೇಶ್ವರಿ. ಅವರು ನಮಗೆ ಗೆಳೆಯರಾಗಿ ದೊರೆತದ್ದು ನಮ್ಮ ಬದುಕಿನ ಸೌಭಾಗ್ಯ. ಭಗವತೀಕೆರೆಯಲ್ಲಿ ನೆಲೆಯಾದ ಹೊಸತರಲ್ಲೇ ನನ್ನನ್ನು ಮೊದಲಿಗೆ ಶಾಮಣ್ಣ ಕರೆದುಕೊಂಡು ಹೋಗಿದ್ದು ತೇಜಸ್ವಿಯವರ ಮನೆಗೆ. ಟಿಲ್ಲರ್ ಓಡಿಸೋದಿರಲಿ, ಭತ್ತ ತೂರುವುದಿರಲೀ, ಹೊರೆ ಕಟ್ಟುವುದಿರಲೀ ಎಲ್ಲವನ್ನು ಸ್ವತಃ ನಿಭಾಯಿಸುತ್ತಾ ತೇಜಸ್ವಿ–ರಾಜೇಶ್ವರಿ ಒಟ್ಟಾಗಿ ಜಮೀನಿನಲ್ಲಿ ಎಡಬಿಡದೇ ದುಡಿಯೋದು ನೋಡಿದ ನನಗೆ ನಾನು ಮತ್ತು ಶಾಮಣ್ಣ ನಮ್ಮ ಬದುಕನ್ನು ಸಮರ್ಪಕವಾಗಿ ಕಟ್ಟಿಕೊಳ್ಳಬೇಕು ಅಂದ್ರೆ ಇವರ ರೀತಿನೇ ದುಡೀಬೇಕು ಅನ್ನೋದು ಮನದಟ್ಟಾಯಿತು. ರಾಜೇಶ್ವರಿ ಸ್ವಂತ ಅಕ್ಕನ ರೀತಿ ನನಗೆ ಪ್ರತಿಯೊಂದರಲ್ಲೂ ಸಹಾಯ ಮಾಡಿದ್ದಾರೆ. ಒಂದು ವಸ್ತು ಅವರು ಕೊಂಡರೆ ಅಂಥದ್ದೇ ವಸ್ತುವನ್ನ ನನಗಾಗಿ ಕೊಂಡು ಕಳಿಸುತ್ತಿದ್ದರು. ಅಷ್ಟು ಪ್ರೀತಿಯ ಜೀವ ಅವರದು. ತೇಜಸ್ವಿ–ರಾಜೇಶ್ವರಿ ನಮ್ಮ ಬದುಕಿಗೆ ಸ್ಫೂರ್ತಿಯ ಸೆಲೆಯಾಗಿ ಒದಗಿಬಂದವರು ಅನ್ನೋದು ನನ್ನ ನಂಬಿಕೆ. ಒಂದು ಸಣ್ಣ ಘಟನೆ ಹೇಳ್ತೀನಿ. ಒಮ್ಮೆ ಶಾಮಣ್ಣನವರು ತೇಜಸ್ವಿ ಮನೆಗೆ ಹೊರಟಿದ್ದರು. ನಮ್ಮ ಅಂಗಳದ ಮಲ್ಲಿಗೆ ಚಪ್ಪರದಲ್ಲಿ ಅಂದು ನಾಲ್ಕಾರು ಮಲ್ಲಿಗೆ ಹೂವಷ್ಟೇ ಅರಳಿದ್ದವು ಅದನ್ನೇ ಹೆಣೆದು ರಾಜೇಶ್ವರಿ ಅವರಿಗೆ ಶಾಮಣ್ಣನ ಬಳಿ ಕಳಿಸಿದ್ದೆ. ಅದೊಂದು ಕಿರುಬೆರಳಿನಷ್ಟು ಸಣ್ಣ ಮಲ್ಲಿಗೆಯ ಮಾಲೆಯಾಗಿತ್ತು. ಶಾಮಣ್ಣನವರು 'ಶ್ರೀದೇವಿ ನಿಮಗೆ ಕೊಟ್ಟಿದ್ದಾಳೆ' ಎಂದು ರಾಜೇಶ್ವರಿಯವರಿಗೆ ತಲುಪಿಸಿದ್ದಾರೆ. ಅವರ ಜೊತೆಗಿದ್ದವರು ಇಷ್ಟು ಸಣ್ಣ ಮಾಲೆಯನ್ನು ಇಲ್ಲಿಂದ ಅಲ್ಲಿಗೆ ಕಳಿಸುವ ಅಗತ್ಯವೇನಿತ್ತು ಎಂಬಂತೆ ನೋಡಿದಾಗ ರಾಜೇಶ್ವರಿ ಹೇಳಿದ್ರಂತೆ 'ಈ ಹೂವಿನ ಮಾಲೆಯನ್ನು ಅಲ್ಲಿಂದಿಲ್ಲಿಗೆ ಹೆಣೆದು ಕಳಿಸಿದ್ದರ ಹಿಂದೆ ಶ್ರೀದೇವಿಯ ಪ್ರೀತಿ ಇದೆ. ಅದನ್ನು ನೋಡಬೇಕು. ಹೂವಿನ ಮಾಲೆ ಚಿಕ್ಕದೋ, ದೊಡ್ಡದೋ ಅನ್ನೋದು ಮುಖ್ಯ ಅಲ್ಲ'. ಅಷ್ಟು ಪ್ರೀತಿ, ವಿಶ್ವಾಸದಲ್ಲಿ ರಾಜೇಶ್ವರಿ ಮತ್ತು ತೇಜಸ್ವಿ ಇಬ್ಬರೂ ನಮ್ಮನ್ನು ಕಂಡಿದ್ದಾರೆ.

ರೈತ ಹೋರಾಟಗಾರರು, ಸಂಗೀತಗಾರರು, ಸಾಹಿತಿಗಳ ಒಡನಾಟದಲ್ಲಿ ಬದುಕಿನ ಸಾರ್ಥಕತೆಯಿದೆ. ಅದಕ್ಕೆಲ್ಲ ಕಾರಣಕರ್ತರು ಶಾಮಣ್ಣನವರು. ಅವರ ಹೆಂಡತಿಯಾಗಿದ್ದು ನನ್ನ ಬದುಕಿನ ದೊಡ್ಡ ಭಾಗ್ಯ.

ಇತ್ತೀಚಿನ ಒಂದೆರಡು ವರ್ಷಗಳಲ್ಲಿ ಒಂದೆರಡು ರೀತಿಯ ಬೆಳೆಗಳನ್ನು ಮಾತ್ರ ಬೆಳೆಯೋದಕ್ಕೆ ಸೀಮಿತ ಮಾಡಿಕೊಂಡಿದ್ದೀರಿ. ಆದರೆ ಹಿಂದೆ ಹತ್ತು ಹಲವು ಬೆಳೆಗಳಿಗೆ ನಿಮ್ಮ ಈ ಭೂಮಿ ಪ್ರಯೋಗ ಸ್ಥಳವಾಗಿದೆ. ಶಾಮಣ್ಣ ಅವರು ತಮ್ಮ ಜಮೀನಿನಲ್ಲಿ ಏನೇನು ಬೆಳಿತಿದ್ವಿ ಅಂತ ಒಮ್ಮೆ ಹೇಳುತ್ತಿದ್ದಾಗ ನಾನು ಹೇಳಿದೆ 'ಶಾಮಣ್ಣ ಅವರೇ ನೀವು ಯಾವ ಬೆಳೆ ಬೆಳೆದಿಲ್ಲ ಅಂತ ಹೇಳೋದೆ ಸುಲಭ ಆಗಬಹುದು' ಅಂತ. ಹಾಗಿರುವಾಗ ಇಷ್ಟು ವರ್ಷಗಳ ಕೃಷಿ

ಬದುಕಿನಲ್ಲಿ ನೀವು ಬೆಳೆದ ಬೆಳೆಗಳಲ್ಲಿ ನಿಮಗೆ ತುಂಬಾ ಖುಷಿ ಕೊಟ್ಟ ಬೆಳೆ ಯಾವುದು? ಯಾಕೆ?

ಹೇಳಿದ್ರೆ ನಂಬ್ತೀರೋ ಇಲ್ವೋ.. ನಮ್ಮ ಜಮೀನಿನಲ್ಲಿ ನಾವು ಬೆಳೆಯದ ಬೆಳೆಯೇ ಇಲ್ವೇನಪ್ಪ. ಹರೆಯದ ದಿನದಲ್ಲಂತೂ ನಾವಿಬ್ರು ಯಾರ ಜಮೀನಿನಲ್ಲಿ ಏನು ಬೆಳೆ ನೋಡಿದ್ರೂ ಅದನ್ನು ನಮ್ಮ ಜಾಗದಲ್ಲಿ ಬೆಳೆಯುವ ಪ್ರಯೋಗಕ್ಕೆ ಕೈ ಹಾಕ್ತಿದ್ವಿ. ಅಷ್ಟೊಂದು ಉತ್ಸಾಹ ನಮಗಿತ್ತು. ರಾಗಿ, ಜೋಳ, ಅವರೆ, ಹೆಸರು, ಉದ್ದು, ಕಡ್ಲೆ, ಹುರುಳಿ, ಶೇಂಗಾ, ಕೊತ್ತುಂಬರಿ ಇತ್ಯಾದಿ ಇತ್ಯಾದಿ. ಜೊತೆಗೆ ಹಲವು ತರದ ತರಕಾರಿಗಳನ್ನು ಬೆಳೆದುಕೊಳ್ಳುತ್ತಿದ್ದೆವು. ತೇಜಸ್ವಿ ಒಮ್ಮೆ ಅರ್ಧ ಚೀಲ ಬೀಜದ ಆಲೂಗೆಡ್ಡೆ ಕೊಟ್ಟಿದ್ದರು. ಅದನ್ನು ಬಿತ್ತಿ ಇಪ್ಪತ್ತು ಮೂಟೆ ಆಲೂಗೆಡ್ಡೆ ಬೆಳೆದಿದ್ವಿ. ಚೀನಿಕಾಯಿಯಂತೂ ನಮ್ಮ ಜಮೀನಿನಲ್ಲಿ ಸೊಗಸಾಗಿ ಬೆಳಿತಿತ್ತು. ಶಿವಮೊಗ್ಗದ ಆಗಿನ ಫೇಮಸ್ ಬೃಂದಾವನ ಹೋಟೆಲ್‌ಗೆ ನಮ್ಮ ಹೊಲದಿಂದ ಚೀನಿಕಾಯಿ ಸಪ್ಲೈ ಆಗ್ತಿತ್ತು. ಒಂದು ಚೀನಿಕಾಯಿಗೆ ಐವತ್ತು ಪೈಸೆ ದರ. ಒಂದಷ್ಟು ದಿನದ ನಂತರ ಶಾಮಣ್ಣ ಅವರು ಬೃಂದಾವನ ಹೊಟೇಲ್ ಕಡೆಗೆ ಸುಳಿದರೆ ಪರಿಚಯ ಇದ್ದ ಗಿರಾಕಿಗಳು 'ಶಾಮಣ್ಣ, ನೀವು ಚೀನಿಕಾಯಿ ತಂದು ತಂದು ಕೊಡಿ. ಅವರು ಅಗ್ಗಕ್ಕೆ ಸಿಕ್ತು ಅಂತ ಸಾರು, ಕೂಟು, ಪಲ್ಯ ಎಲ್ಲ ದಿನಾ ಚೀನಿಕಾಯಿದೇ ಮಾಡಿ ಹಾಕಿ ಹಾಕಿ ನಮ್ಮಂತಹ ಖಾಯಂ ಗಿರಾಕಿಗಳ ಕೈ ಕಾಲು ಹಿಡ್ಕಂಡುಬಿಟ್ಟಿವೆ'. ಎಂದು ತಮಾಷೆ ಮಾಡೋ ಹಾಗಾಯ್ತು. ಚೀನಿಕಾಯಿ ಜಾಸ್ತಿ ತಿಂದ್ರೆ ವಾತ ಭಾದಿಸತ್ತೆ.

ಶೇಂಗಾ ಬೆಳೆಯದು ಮತ್ತೊಂದು ರೀತಿ ಮಜಾ. ಶೇಂಗಾವನ್ನು ಹಾಗೆ ಸಿಪ್ಪೆ ಸಹಿತವಾಗಿ ಮಾರಬಹುದು. ಆದರೆ ನಾವು ಹಾಗೆ ಮಾಡ್ತಿರಲಿಲ್ಲ. ಸಿಪ್ಪೆ ಒಡೆಸಿ ಶೇಂಗಾ ಬೀಜ ಮಾರ್ತಿದ್ವಿ. ಆದರೆ ಬೀಜ ಒಡೆಯುವಾಗ ಅರ್ಧದಷ್ಟು ಸಿಪ್ಪೆ ಒಡೆಯುತ್ತಿದ್ದವರ ಹೊಟ್ಟೆ ಸೇರುತ್ತಿತ್ತು. ಆದರೆ ಎಲ್ಲರೂ ಸೇರಿ ಸಿಪ್ಪೆ ಬಿಡಿಸುತ್ತಾ ಬಾಯಿಗೂ ಹಾಕಿಕೊಂಡು ಚಪ್ಪರಿಸುತ್ತಾ ಕಥೆ, ಹರಟೆಯ ಜೊತೆಗೆ ಒಟ್ಟಿಗೆ ಕೆಲಸ ಮಾಡುವ ಆ ಖುಷಿಗೆ ಸಮ ಯಾವುದು ಇಲ್ಲ. ರೇಷ್ಮೆಯ ಬೆಳೆಯಂತೂ ಅದ್ಭುತ. ಒಂದು ಕಾಸಗಲದಷ್ಟು ಮೊಟ್ಟೆಗಳಿಂದ ಲಕ್ಷಾಂತರ ಹುಳುವಾಗುವುದು. ಹಿಪ್ಪೆ ನೇರಳೆ ಸೊಪ್ಪು ತಿಂದು ಅವು ಬೆಳೆಯುವುದು. ಆ ಹುಳುಗಳಿಂದ ರೇಷ್ಮೆ ತೆಗೆಯುವುದು..

ನನಗೆ ಇಷ್ಟೆಲ್ಲ ನಾವು ಬೆಳೆದಿದ್ರೂ ತುಂಬಾ ಇಷ್ಟದ ಬೆಳೆ ಯಾವುದು ಎಂದರೆ ನಮ್ಮ ಬದುಕಿನಾಧಾರವಾದ ಭತ್ತ ಎಂದೆ ನಾನು ಹೇಳ್ತೀನಿ. ಭತ್ತ ಬೆಳೆಯುವುದೆಂದರೆ ಬೀಜ ಬಿತ್ತಿ, ಸಸಿ ಮಾಡಿ, ನಂತರ ನಾಟಿ ಮಾಡಿ, ಭತ್ತ ಬೆಳೆದಾಗ ಕೊಯ್ಲು ಮಾಡಿ, ಅದನ್ನು ಒಕ್ಕಿ ನಂತರ ತೂರಿ ಮನೆಗೆ ವರ್ಷಕ್ಕಾಗುವಷ್ಟು ಭತ್ತವನ್ನು ಇರಿಸಿಕೊಂಡು

ಉಳಿದುದನ್ನು ಮಾರುವ ತನಕದ ಪ್ರಕ್ರಿಯೆ ಅದು. ಭತ್ತದ ನಾಟಿ ಹಚ್ಚುವಾಗ ಒಂದೊಂದು ಏರಿ ಒಬ್ಬೊಬ್ಬರಿಗೆ ವಹಿಸುತ್ತಿದ್ದೆವು. ಯಾರು ಹೆಚ್ಚು ಸಸಿಯನ್ನು ಹಚ್ಚುತ್ತಾರೆ ಎಂದು ಸ್ಪರ್ಧೆ ಇಡುತ್ತಿದ್ದೆವು. ಸ್ಪರ್ಧೆಯಲ್ಲಿ ಗೆದ್ದವರಿಗೆ ಬಹುಮಾನ ಇರ್ತಿತ್ತು. ಭತ್ತ ಒಕ್ಕಲು ಮಾಡಿದ ನಂತರ ನಾನು ಶಾಮಣ್ಣ ಇಬ್ರೂ ಬೆಳಿಗ್ಗೆ ನಾಲಕ್ಕು ಗಂಟೆಗೆ ಎದ್ದು ಎಂಟು ಗಂಟೆ ಒಳಗೆ ಅಷ್ಟೂ ಭತ್ತವನ್ನು ತೂರಿ ಹಸನು ಮಾಡ್ತಿದ್ವಿ... . ಭತ್ತ ನಾಟಿ ಹಚ್ಚೋದು, ಕೊಯ್ಲು, ಒಕ್ಕಲು ಮಾಡೋ ದಿನಗಳಲ್ಲಿ ಒಂದು ರೀತಿಯ ಹಬ್ಬದ ವಾತಾವರಣ ಇರುತ್ತಿತ್ತು.

ರೈತರ ಆತ್ಮಹತ್ಯೆ ದಿನೇ ದಿನೇ ಹೆಚ್ಚುತ್ತಿದೆ. ಆದರೆ ಮಹಿಳೆಯರು ಕೌಟುಂಬಿಕ ಹಿಂಸೆ ಮತ್ತಿತ್ತರ ಕಾರಣಕ್ಕೆ ಆತ್ಮಹತ್ಯೆಯ ಮೊರೆ ಹೋಗುವ ದುರಂತಗಳು ಇದೆಯೇ ಹೊರತಾಗಿ ಯಾವ ರೈತ ಮಹಿಳೆಯೂ ಆತ್ಮಹತ್ಯೆಗೆ ಮೊರೆ ಹೋದ ಪ್ರಸಂಗಗಳಿಲ್ಲ. ಹಾಗೆ ನೋಡಿದರೆ ಕೃಷಿಯಾಧಾರಿತ ಕುಟುಂಬದಲ್ಲಿ ಹೆಚ್ಚಿನ ಕೆಲಸದ ಹೊಣೆ ಹೆಂಗಸರ ಮೇಲೆಯೇ ಇರುತ್ತದೆ. ಇಂಥದೊಂದು ಸಂಧಿಗ್ಧತೆಯನ್ನು ನೀವು ಹೇಗೆ ನೋಡುತ್ತೀರಿ?

ಹೌದು ರೈತರ ಪರಿಸ್ಥಿತಿ ಕಷ್ಟ... ಎಷ್ಟೋ ಸರ್ತಿ ಬೆಳೆದ ಬೆಳೆಗೆ ಬೆಲೆ ಸಿಗಲ್ಲ. ಬೆಳೆ ಬೆಳಿತಾನೆ ಹುಳು ಹಿಡಿದು ಹಾಳಾಗತ್ತೆ... ಮಳೆ ಸಮಸ್ಯೆ. ಎಲ್ಲ ಇದೆ ಒಪ್ತೀನಿ. ಆದರೆ ಇವ್ಯಾವೂ ರೈತರನ್ನು ಆತ್ಮಹತ್ಯೆ ಮಾಡಿಕೊಳ್ಳೋ ಹಂತಕ್ಕೆ ತಲುಪಿಸೋದಕ್ಕಿಂತ ಅವನು ತನ್ನ ಮನೆ ಮಂದಿಯ ಹತ್ತಿರ ಅದರಲ್ಲೂ ತನ್ನ ಬದುಕನ್ನು ಹಂಚಿಕೊಂಡ ಹೆಂಡತಿಯ ಹತ್ರಾನೂ ತನ್ನ ಕಷ್ಟ, ದುಃಖವನ್ನು ಹಂಚಿಕೊಳ್ಳದೇ ಹೋಗ್ತಾನೆ. ಅದು ಅವನನ್ನು ಒಂಟಿಯಾಗಿ ನೋಯೋ ಹಾಗೆ ಮಾಡ್ತದೆ. ಆಗ ಇಂಥ ನಿರ್ಧಾರಕ್ಕೆ ಬರ್ತಾರೆ. ತನ್ನ ಸಂಸಾರದ ಕಷ್ಟಕ್ಕೆ ತಾನೇ ಹೊಣೆ ಅನ್ನೋ ಪಶ್ಚಾತ್ತಾಪದಲ್ಲಿ ಇಂಥ ಅವಘಡಕ್ಕೆ ಕೈ ಹಾಕ್ತಾರೆ. ಆದರೆ ಇದಕ್ಕೆ ಬದಲಾಗಿ ರೈತ ಕಷ್ಟಕ್ಕೆ ಸಿಲುಕಿದಾಗ ತನ್ನ ಸಂಕಷ್ಟದ ಸ್ಥಿತಿಯನ್ನು ಹೆಂಡತಿಗೆ ತಿಳಿಸಿದ್ರೆ ಅವಳು ಅದರಿಂದ ಹೊರಬರುವ ಯಾವುದಾದ್ರೂ ದಾರಿಯನ್ನು ತೋರಿಸಿಯೇ ತೋರಿಸುತ್ತಾಳೆ. ರೈತ ಮಹಿಳೆಯರು ಅಷ್ಟು ಶಕ್ತರಿದ್ದಾರೆ. ಆದರೆ ನಮ್ಮ ಸಮಾಜದ ದುರಂತ ಎಂದರೆ ದುಡಿಮೆಯಲ್ಲಿ ಸಮಭಾಗಿಯಾಗಿ ದುಡಿದ ನಂತರವೂ ಬಹಳಷ್ಟು ರೈತ ಕುಟುಂಬದಲ್ಲಿ ಅವಳ ದುಡಿಮೆಯ ಮೇಲೆ ಅವಳಿಗೆ ಏನೂ ಹಕ್ಕಿರುವುದಿಲ್ಲ. ಹಣಕಾಸಿನ ಯಾವ ವ್ಯವಹಾರವನ್ನು ಆಕೆಗೆ ತಿಳಿಸುವುದಿಲ್ಲ. ಅದೆಲ್ಲ ಮನೆಯ ಗಂಡಸರ ಕೈಯಲ್ಲೇ ಇರುತ್ತದೆ. ಇದಕ್ಕೆ ಬದಲಾಗಿ ರೈತ ಮಹಿಳೆಗೆ ಕೃಷಿಯಿಂದ ಬರುವ ವರಮಾನದ ಮೇಲೆ ಸಮಾನ ಹಕ್ಕು ದೊರೆತರೆ... ಕೃಷಿಯಿಂದ ಉಂಟಾಗುವ ನಷ್ಟಕ್ಕೂ ಆಕೆ ಸಮಾನವಾಗಿ ಭಾದ್ಯಸ್ಥಳಾಗುತ್ತಾಳೆ. ಎಷ್ಟೋ ಹೆಣ್ಣುಮಕ್ಕಳಿಗೆ ತಮ್ಮ ಮನೆಯ ಆರ್ಥಿಕ ಸ್ಥಿತಿ ಗೊತ್ತಿರುವುದಿಲ್ಲ. ಗಂಡಸರು ಕಷ್ಟ ತಡೆಯಲಾಗದೆ ಆತ್ಮಹತ್ಯೆ

ಮಾಡಿಕೊಂಡಾಗ ಹೆಂಗಸರು ದಿಕ್ಕು ತಪ್ಪುತ್ತಾರೆ. ಗಂಡ–ಹೆಂಡತಿ ಅನ್ಯೋನ್ಯವಾಗಿ ಕಷ್ಟ–ಸುಖಗಳನ್ನು ಮುಕ್ತ ಮನಸ್ಸಿನಿಂದ ಪರಸ್ಪರ ಹಂಚಿಕೊಳ್ಳುವ ಹಾಗಾದರೆ ಇಂಥ ದುಸ್ಥಿತಿ ಬರಲಾರದೆಂದು ನನ್ನ ಅನಿಸಿಕೆ.

ಮಲೆನಾಡಿನ ಕೃಷಿಕರ ಬದುಕು ಅಂದ್ರೆ ಹಸು ಸಾಕೋದು, ಕೋಳಿ ಸಾಕೋದು ಮತ್ತು ನಾಯಿ ಸಾಕೋದು ಮೂರರ ಜೊತೆಗೆ ಹೆಣೆದುಕೊಂಡಿರತ್ತೆ. ನಿಮ್ಮನೆಯಲ್ಲಿ ನಾಯಿಗಳಂತೂ ತಪ್ಪಿಯೇ ಇಲ್ಲ. ದನಕರುಗಳು ಇವತ್ತಿಗೂ ಇವೆ. ಕೋಳಿ ವಿಷಯ ಗೊತ್ತಿಲ್ಲ. ಮತ್ತೆ ಇದ್ಯಾವುದು ಸುಲಭ ಸಾಧ್ಯವೂ ಅಲ್ಲ. ಹೆಂಗಸರನ್ನಂತೂ ಮನೆ ಬಿಟ್ಟು ಅಲುಗದಂತೆ ಕಟ್ಟಿ ಹಾಕೋದೆ ಈ ಪ್ರಾಣಿಗಳು. ಈ ಅನುಭವ ಕುರಿತು ಹೇಳಿ.

ಕೋಳಿ, ಕುರಿ, ಹಸು, ನಾಯಿ, ಬೆಕ್ಕು ಎಲ್ಲ ರಾಶಿಗಟ್ಟಲೆ ಸಾಕಿದ್ವಿ. ನಮ್ಮ ಕೊಟ್ಟಿಗೆಯಲ್ಲಿ ಮೂವತ್ತರಿಂದ ನಲವತ್ತು ಹಸು–ಕರುಗಳಿದ್ದವು. ಮೈದೊಳಲು ಡೈರಿಗೆ ದಿನಾ ಹದಿನೈದು ಲೀಟರ್‌ನಷ್ಟು ಹಾಲು ಹಾಕುತ್ತಿದ್ದೆವು. ತುಂಬಾ ಕೋಳಿಗಳನ್ನು ಸಾಕಿದ್ದೆ. ಆದರೆ ಕೋಳಿ ಕಳ್ಳರು ಹೆಚ್ಚಾಗಿ...ಕೋಳಿಗಳು ಮಾಯವಾಗತೊಡಗಿದವು. ಒಮ್ಮೆಯಂತೂ ನಾವು ಊರಲ್ಲಿ ಇಲ್ಲದಿದ್ದಾಗ ಒಬ್ಬ ನಮ್ಮನೆ ಕೋಳಿ ಗೂಡಿಗೆ ಕೈ ಹಾಕಿ ಕೋಳಿ ಕದಿಯುತ್ತಿದ್ದಾಗ ಇಡೀ ಊರು ಸೇರಿ ಅವನನ್ನು ಹಿಡಿದು ಪೊಲೀಸ್ ಸ್ಟೇಷನ್‌ಗೆ ಕೊಟ್ಟಿದ್ದರು. ಆಮೇಲೆ ನಾವು ಹೋಗಿ ಮುಚ್ಚಳಿಕೆ ಪತ್ರ ಬರೆಸಿ ಅವನನ್ನು ಬಿಡಿಸಬೇಕಾಯಿತು. ಬಹಳಷ್ಟು ಕುರಿಗಳನ್ನು ಸಾಕಿದ್ವಿ. ನಾವು ಊರಲ್ಲಿ ಇಲ್ಲದಾಗ ಒಮ್ಮೆ ನಮ್ಮನೆ ಕೆಲಸದವನೇ ತುಪ್ಪಳ ಕೊಳ್ಳೋರು ಬಂದ್ರು ಅಂತ ಎಲ್ಲ ಕುರಿಗಳ ತುಪ್ಪಳ ತೆಗೆದು ಮಾರಾಟ ಮಾಡಿದ್ದ. ಆಗ ಚಳಿಗಾಲ ಬೇರೆ. ಚಳಿಗಾಲದಲ್ಲಿ ಯಾರೂ ಕುರಿ ಮೇಲಿನ ತುಪ್ಪಳ ತೆಗೆಯುವುದಿಲ್ಲ. ನಾವು ಊರಿಗೆ ಬಂದು ನೋಡಿದ್ರೆ, ತುಪ್ಪಳ ತೆಗೆಸಿಕೊಂಡು ಕುರಿಗಳು ಸಾಯೋ ಸ್ಥಿತಿಯಲ್ಲಿದ್ವು, ಕೊನೆಗೆ ಅಡ್ಡಾದಿಡ್ಡಿ ರೇಟಿಗೆ ಅವನ್ನು ಮಾರಿ ಹಾಕಬೇಕಾಯಿತು. ಇಂಥ ಕೆಲವು ಘಟನೆಗಳ ನಂತರ ಕುರಿ, ಕೋಳಿ ಸಾಕೋದು ಬಿಟ್ವಿ. ಈಗ ಐದಾರು ಹಸುಗಳಿವೆ, ನಾಯಿ, ಬೆಕ್ಕುಗಳೂ ಜೊತೆಗಿವೆ.

ಎಲ್ಲ ಹಳ್ಳಿಗಳಂತೆ ನಿಮ್ಮ ಭಗವತೀಕೆರೆಯೂ ಬದಲಾವಣೆಯ ಜಾಡಿನಲ್ಲಿದೆ. ಇಲ್ಲಿನ ಕೃಷಿಕರು ತೋಟ, ಗದ್ದೆಯನ್ನು ಗುತ್ತಿಗೆ ಕೊಟ್ಟು ಸಮೀಪದ ಶಿವಮೊಗ್ಗೆಯಲ್ಲಿ ಮನೆ ಮಾಡಿ ನೆಲೆಸಿ ವಾರಕ್ಕೊಮ್ಮೆ ತೋಟಕ್ಕೆ ಬಂದು ಕಣ್ಣಾಡಿಸಿಕೊಂಡು ಹೋಗ್ತಾರೆ. ಅಂತದ್ರಲ್ಲಿ ೭೫ ದಾಟಿರುವ ಶಾಮಣ್ಣನವರು, ಎಪ್ಪತ್ತರ ಸಮೀಪ ಇರುವ ನೀವು ಇಬ್ಬರೇ ಮನೆಯಲ್ಲಿ. ಬಸ್ ವ್ಯವಸ್ಥೆ ಇಲ್ಲ, ಆಳು ಕಾಳು ಸಮಸ್ಯೆ, ಲ್ಯಾಂಡ್ ಫೋನ್ ಕೆಟ್ಟಿರತ್ತೆ, ಮೊಬೈಲ್ ಕನೆಕ್ಟ್ ಆಗೋದಿಲ್ಲ ಅಂತದ್ರಲ್ಲೂ ಮಕ್ಕಳು ಕರೆದರೂ ಹೋಗದೇ ಇಲ್ಲಿಯೇ ಇದ್ದೀರಿ ಮತ್ತು ಅಡಿಕೆ ಕೊಯ್ಲಿನಿಂದ ಹಿಡಿದು ಪ್ರತಿಯೊಂದು ಜವಾಬ್ದಾರಿಯನ್ನು ನೀವೇ ನಿರ್ವಹಿಸುತ್ತೀರಿ. ಈ ವಯಸ್ಸಿನಲ್ಲಿ ಇದೆಲ್ಲ ಬಹಳ ಕಷ್ಟ ಆಗೋದಿಲ್ವಾ?

ಹೌದು ಕಷ್ಟ ಆಗುತ್ತಿದೆ. ಹೊಳೆಹೊನ್ನೂರು ಭಾಗದಲ್ಲಿ ಹಲವು ರೈತರು ಮನೆಗಳನ್ನು ಖಾಲಿ ಮಾಡಿಕೊಂಡು ಹೋಗಿ ಶಿವಮೊಗ್ಗೆಯಲ್ಲಿ ನೆಲೆಸಿ ಅಡಿಕೆ ಚೇಣಿಗೆ ಕೊಟ್ಟು ಅಲ್ಲಿಂದಿಲ್ಲಿಗೆ ಓಡಾಡಿಕೊಂಡು ಉಸ್ತುವಾರಿ ನೋಡಿಕೊಳ್ಳುತ್ತಿದ್ದಾರೆ. ನಮ್ಮ ಕೈ ಕಾಲು ಓಡುವಾಗ ತೋಟವನ್ನು ಚೇಣಿಗೆ ಕೊಟ್ಟು, ದುಡ್ಡು ಇಸಿದುಕೊಳ್ಳುವ ವ್ಯವಹಾರಕ್ಕೆ ನಮ್ಮಿಬ್ಬರ ಮನಸ್ಸು ಒಪ್ಪುವುದಿಲ್ಲ. ನಾವಿದ್ದೂ ವೇಸ್ಟ್ ಅನ್ನೋ ಮನೋಭಾವ ಬಂದುಬಿಡತ್ತೆ. ಅದಕ್ಕೆ ಸ್ವಲ್ಪ ಕಷ್ಟ ಆದ್ರೂ ಅಡಿಕೆ ಸುಲಿತದ ಇಡೀ ಪ್ರಕ್ರಿಯೆ ನಮ್ಮ ತೋಟದಿಂದ ಶುರುವಾಗಿ ನಮ್ಮನೆ ಅಂಗಳ ಮತ್ತು ಹಿತ್ತಲಿನಲ್ಲೇ ನಮ್ಮ ಕಣ್ಣೆದುರೇ ನಮ್ಮ ಮೇಲುಸ್ತುವಾರಿ ಮತ್ತು ನಮ್ಮ ಪಾಲ್ಗೊಳ್ಳುವಿಕೆಯಲ್ಲೇ ನಡೆಯತ್ತೆ... ವಿನಯ್ ಮತ್ತು ಸತೀಶ್ ಇಬ್ರೂ ಅಡಿಕೆ ಸುಲಿತದ ಮಿಶೀನ್ ತರಲು ತುದಿಗಾಲಲ್ಲೇ ನಿಂತಿದ್ದಾರೆ. ಆದರೆ ನಮ್ಮ ಮನಸ್ಸಿಗೆ ಅದು ಹಿತ ಅನ್ನಿಸೋಲ್ಲ. ಕೈಯಲ್ಲಿ ಸುಲಿದಾಗಲೇ ಅಡಿಕೆ ಚೆನ್ನಾಗಿ ಆಗೋದು. ಅಡಿಕೆ ಕೊಯ್ಲು ಪ್ರಾರಂಭ ಆಗೋದಕ್ಕೆ ಮೊದಲೇ ಕೆಲಸಗಾರರಿಗೆ ಅಡ್ವಾನ್ಸ್ ಕೊಟ್ಟು ಮಾತಾಡಿಕೊಂಡಿರ್ತೀವಿ. ಈ ವರ್ಷವೂ ಅಳಿಯಂದಿರಿಗೆ 'ಕೆಲಸಗಾರರಿಗೆ ಅಡ್ವಾನ್ಸ್ ಕೊಟ್ಟಾಗಿದೆ ಮುಂದಿನ ವರ್ಷ ಅಡಿಕೆ ಸುಲಿತದ ಯಂತ್ರ ಕೊಳ್ಳುವುದರ ಬಗ್ಗೆ ಯೋಚಿಸೋಣ' ಎಂದು ಹೇಳಬೇಕಾಯಿತು. ನಾವೇ ಕೃಷಿ ಚಟುವಟಿಕೆಯಲ್ಲಿ ಪಾಲ್ಗೊಂಡಾಗ ನಮ್ಮ ಹಳ್ಳಿಯ ಬದುಕಿಗೊಂದು ಅರ್ಥ ಇರತ್ತೆ. ಅದು ಬಿಟ್ಟು ಎಲ್ಲ ಚೇಣಿಗೆ ಕೊಟ್ಟು ಕೈ ಕಟ್ಟಿ ಕೂರೋ ಕೃಷಿಕರ ಹಳ್ಳಿ ಬದುಕಿಗೆ ಅರ್ಥ ಇರಲ್ಲ ಅನ್ನೋದು ನಮ್ಮಿಬ್ರ ನಂಬಿಕೆ. ಭಗವತೀಕೆರೆಯ ಬದುಕು ನಮಗೇನೂ ಬೇಸರ ತಂದಿಲ್ಲ. ನೋಡೋಣ ಎಷ್ಟು ದಿನ ದೂಕುವುದಕ್ಕೆ ಸಾಧ್ಯವೋ ಅಷ್ಟು ದಿನ ಹೀಗೆ ದೂಕೋಣ...

ಅರೆ ಬಯಲುಸೀಮೆಯ ಈ ನೆಲದಲ್ಲಿ ನೆಲೆ ನಿಂತು ಕೃಷಿ ಮಾಡುತ್ತಾ ಇಲ್ಲಿಯೇ ಅರ್ಧ ಶತಮಾನ ಕಳೆದ ನಿಮಗೆ ಒಮ್ಮೆ ತಿರುಗಿ ನೋಡಿದಾಗ ತಮ್ಮದೇ ಆಯ್ಕೆಯ ಬದುಕಿನ ಬಗ್ಗೆ ಯಾವ ಭಾವನೆ ಹುಟ್ಟುತ್ತದೆ?

ಆಯ್ಕೆಯ ಬದುಕು ತುಂಬಾನೇ ಚೆನ್ನಾಗಿತ್ತು. ಏನಕ್ಕೂ ಕೊರತೆ ಅನ್ನಿಸಿಲ್ಲ. ಅಕ್ಷರ ತುಂಗಾ ಕಾರ್ಯಕ್ರಮ ಜಾರಿ ಆದಾಗ ನಾನು-ಶಾಮಣ್ಣ ಲಾಟೀನು ಬೆಳಕಲ್ಲಿ ನಮ್ಮೂರಿನ ಜನಕ್ಕೆ ಅಕ್ಷರ ಕಲಿಸಿದ್ದು, ಸಾರಾಯಿ ನಮ್ಮೂರಿಗೆ ಬೇಡ ಎಂದು ಇಲ್ಲಿನ ಹೆಣ್ಣುಮಕ್ಕಳನ್ನು ಸಂಘಟಿಸಿ ಹೋರಾಟ ಮಾಡಿದ್ದು ತಾತ್ಕಾಲಿಕವಾಗಿಯಾದರೂ ಸೈ ಸಾರಾಯಿಯನ್ನು ನಮ್ಮೂರಿಗೆ ಪ್ರವೇಶಿಸದಂತೆ ತಡೆದಿದ್ದು, ನಿರ್ಮಲ ಕರ್ನಾಟಕ ಯೋಜನೆ ಜಾರಿಯಾಗುವಲ್ಲಿ ನಮ್ಮೂರು ಭಗವತೀಕೆರೆ ಇಡೀ ರಾಜ್ಯಕ್ಕೆ ಮಾದರಿಯಾಗಿದ್ದು, ಮೊದಲು ಶೌಚಾಲಯ ಆಮೇಲೆ ದೇವಾಲಯ ಎಂಬ ಪರಿಕಲ್ಪನೆಯನ್ನು ಮೊತ್ತಮೊದಲು ನಮ್ಮೂರಿನಲ್ಲಿ ಮೊಳಗಿಸಿದ್ದು, ರೈತಹೋರಾಟದ

ದಿನಗಳಲ್ಲಿ ನಮ್ಮನೆ ಹೋರಾಟಗಾರರ ನೆಲೆ ಆಗಿದ್ದು, ಇವೆಲ್ಲವುದರ ಬಗ್ಗೆ ತೃಪ್ತಿ ಇದೆ... ಇದರಾಚೆಗೂ ಇನ್ನೇನೋ ಮಾಡಬಹುದಿತ್ತು ಮಾಡಲಿಲ್ಲ ಅನ್ನೋ ಕೊರಗು ಇದೆ ನನ್ನ ಮನಸ್ಸಲ್ಲಿ.. ಅದು ದುಡ್ಡು, ಆಸ್ತಿ, ಬಂಗಾರ ಇದ್ಯಾವುದಕ್ಕೂ ಸಂಬಂಧ ಪಟ್ಟಿದ್ದಲ್ಲ.. ಮತ್ತೆ ಇನ್ನೇನದರ ಬಗ್ಗೆ ಕೊರಗಿದೆ ನನಗೆ ಎನ್ನುವ ಪ್ರಶ್ನೆ ನಾನೇ ಕೇಳಿಕೊಳ್ಳುತ್ತೇನೆ. ಉತ್ತರ ಅಷ್ಟು ಸುಲಭವಲ್ಲ.

('ರೈತ ಸಂಗಾತಿ' ಪಾಕ್ಷಿಕ ಪತ್ರಿಕೆಯಲ್ಲಿ ಪ್ರಕಟಿತ)

ಶಾಮಣ್ಣನವರೊಂದಿಗೆ ಮಾತುಕತೆ...

ಸಂದರ್ಶನ: ಕಡಿದಾಳು ಶಾಮಣ್ಣ ಅವರ ಜತೆ

ರಹಮತ್ ತರೀಕೆರೆ

(ಹಿರಿಯ ರೈತನಾಯಕರಾದ ಕಡಿದಾಳು ಶಾಮಣ್ಣನವರದು ವರ್ಣರಂಜಿತ ವ್ಯಕ್ತಿತ್ವ. ಜೀವನದಲ್ಲಿ ಆಕರ್ಷಣೆಗೆ ಒಳಗಾದ ಅನೇಕ ವಿದ್ಯೆಗಳನ್ನು ಕಲಿಯಲು ಹಾತೊರೆದಿರುವ ಶಾಮಣ್ಣನವರು ವಿಶಿಷ್ಟ ಅನುಭವಗಳ ಒಂದು ಕಣಜ. ಅವರೊಬ್ಬ ಅದ್ಭುತ ಮಾತುಗಾರ. ತಮಾಶೆ ಮಾಡಿ ನಗಿಸುವವರು. ಕನ್ನಡದಲ್ಲಿ ಹಾಸ್ಯ ಎಂದರೆ ಜೀವನದ ಸಮಸ್ಯೆಗಳನ್ನು ಹಗುರವಾಗಿ ನೋಡುವುದೂ ಯಾವುದರ ಬಗ್ಗೆಯೂ ಗಂಭೀರತೆ ಇಲ್ಲದಿರುವುದೂ ಎಂಬ ಗ್ರಹಿಕೆ ಇದ್ದಂತಿದೆ. ಆದರೆ ತೇಜಸ್ವಿ, ಶಾಮಣ್ಣ, ದೇವನೂರು ಮುಂತಾದವರ ಮಾತು ಮತ್ತು ಬರೆಹದಲ್ಲಿರುವ ಹಾಸ್ಯವು ಜೀವನಪ್ರೀತಿಯ ಭಾಗವಾಗಿದೆ. ಅದು ಸಾಮಾಜಿಕ ಕಾಳಜಿ, ರಾಜಕೀಯ ಚಿಂತನೆ ತರುವ ಜಡತೆ ಮತ್ತು ಭಾರವನ್ನು ಸಮತೋಲನ ಮಾಡಲೆಂದೇ ಹುಟ್ಟಿರುವ ಉಪಾಯವೂ ಆಗಿರುವಂತಿದೆ. ಮೂಲತಃ ಸಂಕೋಚ ಸ್ವಭಾವದ ಶಾಮಣ್ಣನವರು, ತಾತ್ವಿಕವಾದ ಭಿನ್ನಾಭಿಪ್ರಾಯಗಳನ್ನು ದಾಕ್ಷಿಣ್ಯ ವಿಲ್ಲದೆ ಹೇಳಬಲ್ಲರು. ಅವರ ಮೇಲೆ ಬಹಳ ಪ್ರಭಾವ ಬೀರಿದ ವ್ಯಕ್ತಿತ್ವ ಮತ್ತು ಚಿಂತನೆಗಳು ಲೋಹಿಯಾ ಹಾಗೂ ಕುವೆಂಪು ಅವರವು. ಹಾಗೆ ಕಂಡರೆ ೨೦ನೇ ಶತಮಾನದ ಬಹುತೇಕ ಚಳುವಳಿಗಾರರಿಗೆ ಕುವೆಂಪು ಚಿಂತನೆಗಳು ಪ್ರೇರಕವಾಗಿವೆ. ಗಣಪತಿಯಪ್ಪ, ದೇವನೂರ ಮಹಾದೇವ, ಎಂ.ಡಿ. ನಂಜುಂಡ ಸ್ವಾಮಿ, ಚನ್ನವೀರ ಕಣವಿ, ನಿಸಾರ್ ಅಹಮದ್ ಎಲ್ಲರೂ ಕುವೆಂಪು ಅವರನ್ನು ನೆನೆಯುತ್ತಾರೆ. ಶಾಮಣ್ಣನವರ ಪ್ರಸ್ತುತ ಸಂದರ್ಶನದಲ್ಲಿ ಬಾಲ್ಯದಲ್ಲಿ ದೊರೆಯುವ ಶಾಲಾಶಿಕ್ಷಣದ ಪ್ರಭಾವವು ವ್ಯಕ್ತಿಯ ಬದುಕಿನ ದೃಷ್ಟಿಕೋನ ರೂಪಿಸುವ ಬಗ್ಗೆ ಮಹತ್ವದ ಮಾಹಿತಿಗಳಿವೆ. ಕನ್ನಡದ ಸಾಮಾಜಿಕ ಚಿಂತನೆ ಶುಷ್ಕವೂ ಶೈಕ್ಷಣಿಕವೂ

ಆಗದೆ ಇರುವುದಕ್ಕೆ ಒಂದು ಕಾರಣ ಎಂದರೆ ಅದಕ್ಕೆ ಚಳುವಳಿಗಳ ಸಂಬಂಧ. ಎರಡನೆಯ ಕಾರಣವೆಂದರೆ ಅದಕ್ಕೆ ಇರುವ ಸಾಹಿತ್ಯದ ಸಂಪರ್ಕ. ಸಮಾಜದಲ್ಲಿ ಚಳುವಳಿಗಳ ಅಗತ್ಯದ ಬಗ್ಗೆ, ಅವು ಅಧಿಕಾರ ರಾಜಕಾರಣದ ಜತೆ ಇರಿಸಿಕೊಳ್ಳಬೇಕಾದ ಸಂಬಂಧದ ಬಗ್ಗೆ, ಅವು ಒಳಗೊಳ್ಳಬೇಕಾದ ಜನಸಮುದಾಯಗಳ ಬಗ್ಗೆ ಶಾಮಣ್ಣನವರು ಬಹಳ ಮುಖ್ಯವಾದ ಮಾತುಗಳನ್ನು ಇಲ್ಲಿ ಆಡಿದ್ದಾರೆ. ಫೆಬ್ರವರಿ ೨೦೦೦ ಇಸವಿಯಲ್ಲಿ ಈ ಸಂದರ್ಶನವನ್ನು ಹಂಪಿಯಲ್ಲಿ ಮಾಡಲಾಯಿತು.)

ತೇಜಸ್ವಿಯವರೂ ನೀವೂ ಗಾಢ ಸ್ನೇಹಿತರು. ಅವರ 'ಅಣ್ಣನ ನೆನಪು' ಪುಸ್ತಕದಲ್ಲಿ ಕುವೆಂಪು ಅವರಿಗಿಂತ ನಿಮ್ಮ ಬಗ್ಗೇನೇ ಹೆಚ್ಚು ಪ್ರಸ್ತಾಪ ಇದೆ. ನೀವಿಬ್ಬರೂ ಎಲ್ಲಿ ಸ್ನೇಹಿತರಾದ್ರಿ?

ನಾನು ಪ್ರೈಮರಿ ಸ್ಕೂಲು ಓದಿದ್ದು ಹಾರೋಗೊಳಿಗಿ ಅಂತ ಊರಲ್ಲಿ ಕಡಿದಾಳ್ ಹತ್ರ. ಆಗುಂಬೆ ಹತ್ರ ಇರೋ ಮೇಗರವಳ್ಳೀಲಿ ಮಿಡ್ಲ್‌ಸ್ಕೂಲು ಹೈಸ್ಕೂಲು ಓದಿದೆ. ಅಲ್ಲಿ ಹೈಸ್ಕೂಲ್ ಮುಗೀತು. ಇಂಟರ್‌ಮಿಡಿಯಟ್ಟಿಗೆ ಶಿವಮೊಗ್ಗಕ್ಕೆ ಬಂದು ಸೇರಿಕೊಂಡೆ. ಅಲ್ಲಿಗೆ ತೇಜಸ್ವೀನೂ ಬಂದು ಸೇರ್ಕೊಂಡಿದ್ರು. ಅಲ್ಲೇ ಅವರ ಪರಿಚಯ, ಕುವೆಂಪು ಪರಿಚಯ ಆಗಿದ್ದು. ಆಮೇಲೆ ಎಲ್ಲಾರು ಮಾತಾಡ್ತಿದ್ದರಲ್ಲಾ, ಕುವೆಂಪು ಕುಪ್ಪಳಿಯವ್ರು ಅಂತ. ಕುಪ್ಪಳಿ ಕಡಿದಾಳು ಅಕ್ಕಪಕ್ಕದ ಹಳ್ಳಿಗಳು. ಒಂದ್ಸಲ ತೇಜಸ್ವಿ ಅವರು 'ಏ ನಾನು ಕುಪ್ಪಳಿಗೆ ಹೋಗಬೇಕಲ್ಲ' ಅಂದ್ರು. 'ನಡೀರಿ, ಅಲ್ಲೆಲ್ಲ ಓಡಾಡನ' ಅಂದೆ. ಇಬ್ರೂ ಸ್ನೇಹಿತರಾಗಿಬಿಟ್ವಿ.

ತೇಜಸ್ವಿ ಮೈಸೂರಲ್ಲಿದ್ದವರು. ಮೈಸೂರು ಬಿಟ್ಟು ಶಿವಮೊಗ್ಗಕ್ಕೆ ಓದಕೆ ಬಂದದ್ದು ಯಾಕೆ?

(ನಗುತ್ತಾ) ಅಯ್ಯೋ ಅದೊಂದ್ ದೊಡ್ಡಕತೆ. ಅವ್ರಿಗೆ ಮೈಸೂರಲ್ಲಿ, ಎಂಬಿಬಿಎಸ್‌ಗೆ ಕಳಿಸ್ಬೇಕು ಅಂತೇಳಿ ಸೈನ್ಸ್ ಕೊಡಿಸ್ಬಿಟ್ಟಿದ್ರು. ಸೈನ್ಸ್ ಇವರಿಗೆ ಹತ್ತಂಗಿಲ್ಲ. ಅದರಲ್ಲಿ ಫೇಲಾಗಿ, ರಗಳೆ ಬೇಡ ಅಂತ ಕಡೆಗೆ ಇಲ್ಲಿ ಶಿವಮೊಗ್ಗಕ್ಕೆ ಬಂದು, ಆರ್ಟ್ಸ್ ತೊಗೊಂಡು ಓದಿ ಪಾಸ್ ಮಾಡ್ಕೊಂಡ್ ಹೋಗಿದ್ದು.

ಶಾಮಣ್ಣ, ಆಗಿನ ಕಾಲದಲ್ಲಿ ಕುವೆಂಪು ಬಗ್ಗೆ, ಮಲೆನಾಡಿನ ಜನರ ಅದರಲ್ಲೂ ಒಕ್ಕಲಿಗರ ಭಾವನೆ ಹ್ಯಾಗಿತ್ತು?

(ನಗುತ್ತಾ) ನಮ್ ಮಾವ ಒಬ್ರಿದ್ರು, ಸುಂಟಿಕಟ್ಟೆ ಅದೆಂಥದೋ ಗೌಡ್ರು ಅಂತ್ಹೇಳಿ. ಅವರೊಂದ್ ಮಾತ್ ಬಹಳ ಚೆನ್ನಾಗಿ ಹೇಳೋರು. 'ಅವೊನೊಬ್ಬ ಪುಟ್ಟಪ್ಪ ಅಂತೆ ಪುಟ್ಟಪ್ಪ. ಒಂದ್ ಆಮಲ್ದಾರಿಕೀನೊ ಸೇಕದಾರಿಕೀನೊ ಮಾಡ್ಕೊಂಡ್ ಇರೋದ್ ಬಿಟ್ಕಂಡು, ಬರೀತಾನಂತೆ. ಎಂತದ್ ಬರೀತಾನೆ? ಯಾವನ್ ಕೇಳ್ತಾನ ಅದುನ್ನ?' ಈ ರೀತಿಯಾಗಿ ಮಾತಾಡ್ಕಳ್ತಿದ್ರು ಆವಾಗ ಜನ. ಪುಟ್ಟಪ್ಪನೋರು ಅಂದ್ರೆ ಬೆಲೇನೇ ಇಲ್ಲ!

ಅವರ ಸಾಹಿತ್ಯ ಓದಿದ ವಿದ್ಯಾವಂತ ಒಕ್ಕಲಿಗರ ಪ್ರತಿಕ್ರಿಯೆ ಕೂಡ ಹೀಗೇ ಇತ್ತಾ?

ಈ 'ಕಾನೂರು ಸುಬ್ಬಮ್ಮ ಹೆಗ್ಗಡತಿ'ಯಲ್ಲಿ ಸುಬ್ಬಮ್ಮ ಸೇರೆಗಾರರ ಸಹವಾಸ ಮಾಡಿದ್ದು ಈ ರೀತಿ ಆದಂಥವೆಲ್ಲ ಇದ್ವಲ್ಲ, ಇದಕ್ಕೆ ಒಂದು ವರ್ಗ ಪ್ರತಿಭಟನೆಯನ್ನು ತೋರಸ್ತು. ಆದರೆ ಅದರ ಸಂಖ್ಯೆ ಬಹಳ ಕಡಿಮೆಯಾದ್ರಿಂದ ಏನ್ ಮಾಡಕಾಗಲಿಲ್ಲ.

ಕುವೆಂಪು ಬರೆಹಗಳಲ್ಲಿ ಆಗಿನ ಮಲೆನಾಡಿನ ಶಾಲೆಗಳಲ್ಲಿದ್ದ ಸಾಮಾಜಿಕ ಭೇದಭಾವದ ಚಿತ್ರ ಇದೆ. ಅದು ನಿಮ್ಮ ಕಾಲದಲ್ಲಿ ಏನಾದರೂ ಬದಲಾಗಿತ್ತಾ?

ಬದಲಾವಣೆ ಆಗಷ್ಟೆ ನಮ್ಮಲ್ಲಿ ಶುರುವಾಗಿತ್ತು- ದಲಿತ್ರು ಬರಬೇಕು. ಅವ್ರೂ ನಾವೆಲ್ಲ ಒಟ್ಟಿಗೇ ಕೂತ್ಕೊಂಬೇಕು. ಅವ್ರನ್ ಹಿಂದುಕ್ ಕೂತ್ಕೊಳದುಕ್ಕೆ ಬಿಡಬಾರ್ದು. ಅವರ ಜೊತೆ ಸೇರ್ಕೊಬೇಕು ಇದೆಲ್ಲಾ..

ನಿಮ್ಮ ಬಾಲ್ಯದ ಯಾವ ಸಂಗತಿಗಳು ಈಗಲೂ ಗಾಢವಾಗಿ ಉಳಿದಿವೆ?

ನನ್ನ ಬಾಲ್ಯದ ದಿನಗಳು ಹೆಚ್ಚು ನೆನಪಿರೋದಂದ್ರೆ, ಮಿಡ್ಲುಸ್ಕೂಲ್ ಹೈಸ್ಕೂಲ್ ದಿನಗಳು ಕಂಡ್ರಿ. ಅವೆಲ್ಲ ಆ ಮೇಗರವಳ್ಳೀಲೆ ಕಳೆದಿರೋದ್ ನಾನು. ಆಗ ನನ್ನನ್ನ ಅಣ್ಣಯ್ಯ ಹೆಗ್ಗಡೆ ಅನ್ನೋರ ಮನೇಲಿ ತೊಗೊಂಡ್ಹೋಗಿ ಬಿಟ್ಟಿದ್ರು ಓದದುಕ್ಕೋಸ್ಕರ. ಸುಮಾರು ನಾಕ್ ಕಿಲೋಮೀಟರ್ ಪ್ರತೀದಿನಾ ನಡದು ಶಾಲೆಗ್ ಬರಬೇಕಾಗಿತ್ತು. ಏಳುವರ್ಷ, ಅದ್ಯಾಕ್ ಹೇಳ್ತಿರಾ ಮಜಾ..(ನಗುತ್ತಾ) ನಮ್ ಜತೀಗೆ ಒಂದೆಲ್ಡ್ ಮೂರ್ ಜನ ಹೆಣ್ಮಕ್ಳು ಇರೋರು. ಗಂಡ್ಮಕ್ಳೂ ಇರೋರು. ಒಂದ್ಯೆದಾರ್ ಜನದ್ ಟೀಮು. ಬಾಳ ಖುಷಿ ಇರ್ತಿತ್ತು ಜೀವನ. ಆಂ.. ದಾರಿಯುದ್ದುಕ್ಕೂ ಖರ್ಜೂರದಣ್ಣು, ಮಾವಿನಹಣ್ಣು, ಬೆಂಬರ್ಲಹಣ್ಣು, ಆಂ.. ಯಾವ್ಯಾವ್ ಹಣ್ಣು ಯಾವ್ಯಾವ್ ಸೀಸನ್ನಲ್ಲಿ ಸಿಕ್ತದೆ ಅನ್ನೋದ್ ಅಷ್ಟು ಚೆನ್ನಾಗ್ ಗೊತ್ತಿರೋದ್ ನಮಗೆ. ಆಮೇಲ್ ಹಳ್ಳದಲ್ಲಿ ಗಾಳ ಹಾಕ್ಕೊಂಡು ಏಡಿ ಹಿಡಿಯೋದು, ಮೀನು ಹಿಡಿಯೋದು. ಓದೋದು ಅಂದ್ರೆ ಸುಮ್ನೆ ಒಂದ್ ನೆಪ. ಎಕ್ಸ್‌ಟ್ರಾ ಕರಿಕ್ಯುಲರ್ ಆಕ್ಟಿವಿಟೀಸ್ ಅಂತೀರಲ್ಲ, ಇವೇ ಜಾಸ್ತಿ. ಸ್ಕೂಲಿಗೆ ಹೋಗ್ದಿದ್ರೆ ಬೈತಿದ್ರಲ್ಲಾ ಕರೆಕ್ಟಾಗ್ ಹೋಗ್ತಿದ್ದೊ. ಕ್ಲಾಸಲ್ ಮಾತ್ರ ಕರೆಕ್ಟಾಗ್ ಕೇಳ್ತಿದ್ವಿ ನೋಡಿ, ಹಂಗಾಗಿ ಪಾಸೊಂದ್ ಮಾಡಿಬಿಡ್ತಿದ್ರು.

ಸ್ಕೂಲಿನ ಹೊರಗೆ ಖುಶಿ ಇತ್ತು. ಒಳಗಿರಲಿಲ್ಲವಾ?

ಸ್ಕೂಲೂ ಖುಶಿ ಕೊಡೋದು. ಎಲ್ಲೋ ಒಬ್ಬಿಬ್ರು ಗೊಡ್ಡುಮೇಷ್ಟ್ರು ಇದ್ರು, ನಾವು ಸೈನ್ಸ್ ಕೇಳಾಕ್ ಹೋದ್ರೆ, 'ಏಯ್ ನಿಮ್ಮಂಥ ದಡ್ಡಗೌಡರಿಗೆಲ್ಲ ಸೈನ್ಸ್ ಎಂತಕೋ' ಅಂತ ಸಿಟ್ ಬರಸಿದ ಒಂಚೂರ್ ಕಹಿ ಅನುಭವ ಬಿಟ್ರೆ, ನಮ್ ಅದೃಷ್ಟಕ್ಕೆ ಎಂತೆಂಥಾ ಮೇಷ್ಟ್ರು ಇದ್ರೂ ಅಂತೀರಾ? ಒಬ್ರು ವೆಂಕಟಶಾಮರಾವ್ ಅಂತ ಇದ್ರು. ಹಿಂದೀ ಪಾಠ ಮಾಡ್ತಿದ್ರು. ಹಿಂದೀ ಪದ್ಯ ಹೇಳೋ ಹೊತ್ತಿಗೆ, ಆ 'ಟುವ್ವಿ ಟುವ್ವಿ' ಅನ್ನೋ ಪದ್ಯಾನ, ಸ್ವಾತಂತ್ರ್ಯಗೀತೆಗಳನ್ನ, ಬೇಂದ್ರೆಯವರ ಗೀತೆಗಳನ್ನ, ಕನ್ನಡದ ಎಲ್ಲಾ ಪದ್ಯಗಳನ್ನ ಹೇಳ್ಬಿಡೋರು. ನನಗೆ ಹೇಳ್ಕೊಟ್ಟ ಪುಟ್ಟಪ್ಪನೋರ ಒಂದ್ಹಾಡು ಈಗಲೂ ಹೇಳಬಲ್ಲೆ ಬೇಕಾರೆ. ಕಾಮನ್‌ಬಿಲ್ ಮೇಲೆ ಒಂದ್ ಪದ್ಯ ಇದೆ ನೋಡಿ..(ರಾಗದಲ್ಲಿ ಹಾಡುತ್ತಾ) 'ನೋಡಲ್ಲಿ ಮೂಡಿಹುದು ಮುಗಿಲಿನಲಿ ಮಳೆಬಿಲ್ಲು..' ಹೇಳ್ತೀನಲ್ಲ, ಹೈಸ್ಕೂಲಿನ ಆ ಮೂರು ವರ್ಷದಲ್ಲಿ ಕನ್ನಡದ ಸುಮಾರಷ್ಟು ಕವಿಗಳನ್ನ, ಅಡಿಗರನ್ನ ನವ್ಯ ಕವಿಗಳಂತ

ನೀವೇನ್ ಹೇಳ್ತೀರಿ ಇವರನೊಂದಷ್ಟ್ ಜನರನ್ನ ಬಿಟ್ಟು, ಉಳಿದೋರ ಮೇಲೆಲ್ಲಾ ಹುಚ್ ಹಚ್ಚಿಸಿಬಿಟ್ಟಿದ್ದರು ಆ ಪಂಡಿತ್ರು. ಬೇಂದ್ರೆಯವರ 'ಕುಣಿಯೋಣು ಬಾರಾ' ಪದ್ಯ ಹೇಳಿ, ಜೇಬಲ್ಲಿ ಅನಾವಶ್ಯಕವಾಗಿ ನಾಕ್ ರುಪಾಯ್ ಇದ್ರೆ ನಮ್ಮನ್ನ ಹೆಂಗೆ ಕುಣಸ್ತದೆ ಅನ್ನೋದನ್ನ ಅವರು ಎಷ್ಟ್ ಚೆನ್ನಾಗಿ ಇಂಪ್ರೆಸ್ ಮಾಡಿದ್ರು ಅಂದ್ರೆ, ಇವತ್ತಿಗೂ ಮರೆಯಕ್ಕಾಗಿಲ್ಲ. ಆಮೇಲೆ ಈ ಸೋಶಿಯಲಿಸ್ಟ್ ಪಾರ್ಟಿಯಿಂದ ಅಥವಾ ಗೋಪಾಲ್ ಗೌಡರಿಂದ ಅಂತ ಕಾಣಸ್ತದೆ, ಅಡಿಗರು ಮತ್ತು ಅನಂತಮೂರ್ತಿ ತುಂಬಾ ಆಮೇಲೆ ಹಿಡಿಸ್ಬಿಟ್ಟಿದ್ರು ನಮಗೆ. (ನಗುತ್ತಾ) ಅದರಲ್ಲೂ ಅನಂತಮೂರ್ತಿಯವರ ಗದ್ಯ ಇದೆಯಲ್ಲ, ಅದು ಭಾಳಾ ವಶಪಡಿಸಿಕೊಂಡಿತ್ತು ನಮ್ಮನ್ನ.

ಇಷ್ಟೊಂದು ಸಾಹಿತ್ಯಾನ ಹಚ್ಚಿಕೊಂಡಿದ್ದ ನೀವು, ಡಿಗ್ರಿ ಮಾಡುವಾಗ ಸಮಾಜಶಾಸ್ತ್ರ ತಗೊಂಡ್ರಿ ಯಾಕೆ?

ಕನ್ನಡಾನ ಬಿಟ್ಟು ಸೋಶಿಯಾಲಜಿ ತೊಗೊಂಡಿದ್ದಕ್ಕೆ ಕಾರಣ ಅಂದ್ರೆ, ನಮ್ಮ ಹಳ್ಳಿಗಳೆ ಅನ್ಸುತ್ತೆ. ಯಾವುದೇ ಒಂದು ಹಳ್ಳೀ ತಗೊಳ್ಳಿ. ಕೊನೇಕೇರಿಲಿ ಅತ್ಯಂತ ಕನಿಷ್ಠದವನು ಇರೋದು. ಅದಾದಕೂಡ್ಲೆ ಇನ್ನೊಬ್ಬ ಅದಾದಕೂಡ್ಲೆ ಇನ್ನೊಬ್ಬ ಇನ್ನೊಬ್ಬ. ಉತ್ತಮನಾದೋನು ಕೊನೀಗೆ. ಇದೂ ಒಂದು ಶೋಷಣೆ. ಇದರ ಮುಖಾಂತರ ಹೆಂಗೆ ಶೋಷಣೆ ನಡೀತದೆ? ಆ ಕೊನೆಯವನು ಪಾಪ ಬಚ್ಚಲು ಗುಂಡೀಲಿದಾನೆ ಅವನು. ಇವರೆಲ್ಲಾ ಕಕ್ಸ್ ಮಾಡಾಕ್ ಹೋಗೋದು ಅಲ್ಲಿಗೆ. ಅಲ್ಲಿ ಅಂವ ಬದುಕಬೇಕು. ಇದು ಹುಡುಗರಾಗಿದ್ದೋರಿಗೆ ಎಷ್ಟ್ ಚೆನ್ನಾಗಿ ಅರ್ಥಾಗ್ತದೆ ಗೊತ್ತಾ? 'ಯಾಕಿದು? ಹ್ಯಂಗ್ ಬದಲಾವಣೆ ಆಗ್ಬೇಕು ಇದು?' ಅಂತ್ಹೇಳಿ, ಹಠದಿಂದ ನಾವು ಹೋಗಿ ಅವರ ಮನೆಯೊಳಾಗ್ ಕುತ್ಕೊಂಡು ಊಟ ಮಾಡೋದು, 'ಅಲ್ಲೆ ಹೋಗಿ ಯಾಕಾಗದಿಲ್ಲ ನೋಡಣ' ಅಂತ್ಹೇಳಿ ಅವರ ಜೊತೆಯಲ್ಲಿ ಬದುಕೋದು. ಇಲ್ಲಿಂದ ಪ್ರಾರಂಭವಾಯ್ತು ನೋಡಿ ನಮಗೆ ಸಮಾಜವಾದದ ಪಾಠ.

ಇಂಥಾ ಆಲೋಚನೆಗಳು ಹುಟ್ಟೋದಕ್ಕೇ ಗೋಪಾಲಗೌಡರ ಪ್ರೇರಣೆ ಇತ್ತಾ?

ಖಂಡಿತಾ ಹೌದು. ಯಾಕೇಂದ್ರೆ, ಗೋಪಾಲಗೌಡರ ಎಲೆಕ್ಷನ್ ಭಾಷಣಗಳನ್ನ ಕೇಳಿ ತುಂಬ ಪ್ರಭಾವಕ್ಕೆ ಒಳಗಾದವರಲ್ಲಿ ನಾನೂ ಒಬ್ಬ. ಗೋಪಾಲಗೌಡ್ರು ಓಟ್ ಕೊಡು ಅಂತ ಕೇಳ್ತಿರ್ಲಿಲ್ಲ ಕಂಡ್ರಿ. ಇವು ಎಂತೆಂಥವೊ ಕತೆ ಹೇಳೋರು. 'ಅಲ್ರೀ ಗೋಪಾಲ್ ಗೌಡರೆ, ಏನ್ ಹುಡ್ಗಾಟಿಕೇನಾ. ಮುಂದಿನ ಊರಿಗೆ ಹೋಗಬೇಕಂದ್ರೆ ಟೈಂ ಇಲ್ಲ' ಅಂದರೆ, 'ಏ.. ಒಂದ್ನಾಕ್ ಮಾತ್ ಹೇಳ್ಕೊಡಬೇಕಿಪ್ರಿಗೆ' ಅಂತಿದ್ರು.

ಮಲೆನಾಡಿನಲ್ಲಿ ಚಳುವಳಿಗೆ ಕಾರಣವಾದ ಗೇಣೀದಾರರ ಸಮಸ್ಯೆ ನಿಮ್ಮೂರಲ್ಲಿ ಹ್ಯಾಗಿತ್ತು?

ನಮ್ಮನೇ ಒಳಗೇ ಗೇಣಿ ಅಳಸ್ತಾ ಇದ್ರು! ನನಗೆ ನಮ್ಮಪ್ಪ 'ಅಲ್ಲೋಗಿ ಬತ್ತ ಅಳಸಕೊಂಬಾ, ಇಲ್ಲೋಗಿ ಅಡಕೆ ಅಳಸ್ಕೊಂಬಾ' ಅಂತ ಕಳಸೋರು. ಹಾಳಾದ್,

ಹೋದಾಗೆಲ್ಲಾ ಕಹಿ ಅನುಭವವೇ ಕಂಡ್ರಿ. ನಮ್ಮಪ್ಪನ ಜತೆಗಂತೂ 'ನಾ ಇನ್ ಹೋಗಲ್ಲ. ಶೋಷಣೆ ಇದು. ಒಳ್ಳೇದಲ್ಲ ಇದು. ಅರೆ! ಗದ್ದೆ ಮಾಡೋನು ಅವ್ನು. ಗೋಪಾಲ್ ಗೌಡ್ರು ಹೇಳೋದರಲ್ಲಿ ತಪ್ಪೇನಿದೆ? ಇವತ್ತಲ್ಲ ನಾಳೆ ಯಾವತ್ತಿದ್ರೂ ಘರ್ಷಣೆ ಆಗ್ತದೆ ಇದು. ಬಿಟ್ಬಿಡಿ ಇದ್ನ' ಅಂತ ಜಗಳ ಮಾಡ್ತಿದ್ದೆ ನಾನು. ಕೊನೀಗ್ ಸುಮಾರು ಜಮೀನನ್ನ ಬಿಟ್ರು ನಮ್ ತಂದೆ.

ಕಾಗೋಡು ಸತ್ಯಾಗ್ರಹದ ಪರಿಣಾಮ ಶುರುವಾಗಿತ್ತಾ ಆಗಲೇ?

ಕಾಗೋಡು ಸತ್ಯಾಗ್ರಹದ ಸಂದರ್ಭಾನೆ ಇದು. ಕಡಿದಾಳು ಮಂಜಪ್ಪಗೌಡ್ರು ಬೇರೆ ಇದ್ರಲ್ಲ ಅಲ್ಲೆ. ಅವ್ರೂ ಈ ಗೇಣಿದಾರರ ಸುಧಾರಣೆ ಆಗ್ಬೇಕು ಅನ್ನೋರು. ಅವರು ನಮಗೆ ದೊಡ್ಡಪ್ಪ ಬೇರೆ. ಅವರು ನಮ್ಮೂರಲ್ಲಿ ಎಲ್ಲರನ್ನ ಕರದು 'ಇದು ನ್ಯಾಯವೇನ್ರೋ? ನೀವು ಇದರ ವಿರುದ್ಧ ನಿಲ್ಬಾರ್ದು. ಇದುನ್ ಅರ್ಥ ಮಾಡ್ಕೊಬೇಕು. ಏನಿದೆ ಅದ್ರಲ್ಲಿ? ಯಾವತ್ತಿದ್ರೂ ಬಿಟ್ಟುಕೊಡಬೇಕು' ಅಂತ ತಣ್ಣಗೆ ಹೇಳೋರು. ಗೇಣಿಭೂಮಿ ಬಿಟ್ರೆ ಅವರಿಗೂ ಏನೂ ಇರಲಿಲ್ಲ!

ಸೋಶಿಯಲಿಸ್ಟರನ್ನು ಕುರಿತ ಅವರ ನಿಲುವು ಹೇಗಿತ್ತು?

ಅವರು ಕಾಂಗ್ರೆಸಲ್ಲಿದ್ದವರು. ಸೋಶಿಯಲಿಸ್ಟ್ ಪಾರ್ಟಿಗೆ ಸೇರೋಕ್ ತಯಾರಿರಲಿಲ್ಲ. ನಮಿಗೆ ಕರಕರದು ಬಯ್ಯೋರು: 'ನೀನ್ಯಾಕೊ ಕಾಂಗ್ರೆಸ್ ಆಗ್ಲಿಲ್ಲ? ಅದೆಂಥದೋ, ಈ ಬೀಡಿ ಸೇದ್ಕೊಂಡು ಹೆಂಡ ಕುಡ್ಕೊಂಡು ಇರೋರ ಹತ್ರ ಹೋಕ್ಕಂಡು ಇರ್ತೀರಲ್ಲ' ಅನ್ನೋರು. ಆವಾಗ ನಮಿಗೇನ್ ಖುಶಿ ಕೊಡೋದು ಅಂದ್ರೆ, ಈ ಕಾಂಗ್ರೆಸು ಅಂದ್ರೆ, ಪ್ರವಾಹದ ಜೊತೀಲಿ ಹೋಗೋ ಪಕ್ಷ. ಈ ಸೋಶಿಯಲಿಸ್ಟ್ ಪಾರ್ಟಿ ಪ್ರಭಾವದ ವಿರುದ್ಧ ಈಜುವಂತಹದ್ದು. ವಿರುದ್ಧ ಈಜೋದರಲ್ಲೇ ಮಜಾ ಇರೋದು ಅಂತನ್ನಸೋದು.

ಗೋಪಾಲಗೌಡರ ಜತೆಗೆ ಒಡನಾಟ ಮಾಡಿದೀರಿ. ಅವರ ವ್ಯಕ್ತಿತ್ವದ ವಿಶೇಷತೆಯೇನು?

ಗೋಪಾಲ್ ಗೌಡ್ರ ಜೊತೇಲಿ ಇರೋದೇ ಬಹಳ ಖುಷಿ ಕಂಡ್ರಿ. ನನಗೆ ಎಷ್ಟು ಪರಿಣಾಮ ಆಗಿತ್ತಂದ್ರೆ, ಅವರು ಕೊನೇ ದಿನಗಳಲ್ಲಿ ತೀರ್ಥಳ್ಳಿಗೆ ಬಂದಿದ್ರು. ಬಂದಾಗ, ನಮ್ಮನೆಗೆ ನೀವು ಊಟಕ್ ಬರ್ಬೇಕು ಅಂತಂದ್ ಕರ್ಕೊಂಡ್ ಹೋಗಿದ್ದೆ ಅವರನ್ನ, ಒಂದ್ ಸಣ್ಣಕಾರಲ್ಲಿ. ದಾರೀಲಿ ಹೋಗ್ತಾ 'ಏ ಶಾಮಣ್ಣ ಈ ಕಾರಿಗೆ ಎಷ್ಟಾಗ್ತದೊ?' ಅಂತ ಕೇಳಿದ್ರು. 'ನಿಮಿಗೆಂತಕ್ಕೆ ಸಮಾಜವಾದಿಗಳಿಗೆ ಕಾರು?' ಅಂತಂದೆ ನಾನು. 'ಏ ಹಂಗಲ್ಲ ಕಣೊ, ಎಲ್ಲಿಗಾರು ಹೋಗೋದಾದ್ರೆ ಬೇರೆಯವರನ್ನ ಕೇಳಿಕೇಳಿ ಸಾಕಾಗ್ ಹೋಗಿದೆ. ನಮ್ದೆ ಅಂತ ಒಂದು ಇಟ್ಕೊಂಡಿದ್ರೆ ಒಳ್ಳೇದಿತ್ತು ಕಣೋ' ಅಂತಂದ್ರು. ಪಾಪ, ಅವರ ಆರೋಗ್ಯ ಸರಿಯಿರಲಿಲ್ಲ ಆವಾಗ. ನಾನು ಇಷ್ಟು ಖರ್ಚ್ ಬರ್ತದೆ ಅಂತೆಲ್ಲ ಹೇಳಿದ್ಮೇಲೆ 'ಏ... ಬ್ಯಾಡಾ ಮಾರಾಯಾ, ಇದೆಲ್ಲಾ ಆಗೋದಲ್ಲ. ಇಷ್ಟ್

ದಿನಾನೇ ಇಲ್ಲಂತೆ. ಇನ್ಯಾಕ್ ಇಟ್ಕೊಳ್ಳೋದು' ಅಂದ್ರು. ಹಂಗಂದಾಗ ನನಿಗೆ ಒಂಥರಾ ಅನಿಸ್ಬಿಡ್ತು. 'ಛೇ! ಒಬ್ ಮನುಷ್ಯ ಇಷ್ಟೆಲ್ಲ ಹೋರಾಟ ಮಾಡಿ ಎಲ್ಲಾ ಮಾಡಿ, ಕಡೆಗೂ ತನ್ನ ಅವಶ್ಯಕತೆಗಾಗಿ ತಗೋಬೇಕಂದ್ರೂನು ಆಗದೆ ಹೋಯ್ತಲ್ಲಾ, ಪಾಪ' ಅಂತೆಲ್ಲಾ ಅನಿಸ್ಬಿಡ್ತು. ಜತಿಗೆ ನನಿಗೆ ಗೋಪಾಲ್ ಗೌಡ್ರು ಹೊಸಾಬಟ್ಟೆ ತಂದು ಹೊಲಿಸ್ತಿರ್ಲಿಲ್ಲ ಅನ್ನೋದು ಗೊತ್ತಾಗಿದ್ದು ಆವಾಗ್ಲೆ. ನಾನೇನಂದೆ 'ಈ ರೀತಿ ಜುಬ್ಬಾನ ಎಲ್ಲಿ ಹೊಲಿಸ್ತೀರಿ, ಚೆನ್ನಾಗಿದೆ, ನಾನೂ ಹೊಲಿಸಬೇಕು'. 'ನಾನೆಲ್ಲಿ ಹೊಲಿಸೋದೋ? ಯಾರಾದ್ರು ರೆಡಿಮೇಡು ತಂದು ಕೊಡ್ಬೇಕು ನನಿಗೆ. ಅವು ಉದ್ದ ಇರ್ತಾವೆ ನೋಡು. ಅದಿಕ್ಕೆ ನಾನು ಹಿಂಗೆ ಮಡಚೋದು. ಶೋಕಿ ಅಂತ ತಿಳಿಬ್ಯಾಡ' ಅಂದ್ರು. ಅವಾಗ್ ನನಗನಿಸ್ತು 'ಹೌದಪ್ಪ. ನಾವು ಇದ್ರೆ ಇಷ್ಟೆ ಸರಳವಾಗಿರಬೇಕು. ಮುಖ್ಯವಾಗಿ ವ್ಯಕ್ತಿತ್ವ ಬೆಳೆಸಿಕೊಳ್ಳಬೇಕು ಅಂತನ್ನೋದು ಆ ಹುಡುಗ ವಯಸ್‌ನಲ್ಲಿ ಬಹಳ ಪರಿಣಾಮ ಮಾಡ್ತು.

ಶಿವಮೊಗ್ಗಕ್ಕೆ ಲೋಹಿಯಾ ಬಂದಿದ್ರು.

ಆವಾಗ ನಾನು ಹೈಸ್ಕೂಲ್ ಮುಗ್ಸಿ ಯಾವದೋ ಸೇವಾದಳದ್ದು ಟ್ರೈನಿಂಗು ಅಂತ ಬಂದಿದ್ದೆ ಶಿವಮೊಗ್ಗಕ್ಕೆ. ಶಿವಮೊಗ್ಗದಾಗೆ ಅವರು ಅರೆಸ್ಟಾಗಿದ್ದು, ಅರೆಸ್ಟಾಗಿ ರೈಲ್ವೇ ಸ್ಟೇಷನ್‌ಗೆ ಹೋಗಿದ್ದು, ಇದೆಲ್ಲ ನೆನಪಿದೆ ನನಗೆ.

ನಿಮಗೆ ಸಮಾಜವಾದಿ ಸಂಪರ್ಕ ಬಂದಿದ್ದು ಈ ಶಿವಮೊಗ್ಗಕ್ಕೆ ಬಂದ್ಮೇಲೇ. ಆದರೆ ಗೇಣಿದಾರರ ಸಮಸ್ಯೆ ನೀವು ಕಂಡ ಹಾಗೆ ಹೇಗಿತ್ತು ಶಾಮಣ್ಣ?

ನಾನು ಮೇಗರವಳ್ಳೀಲಿ ಹೈಸ್ಕೂಲಲ್ಲಿ ಓದ್ತಾ ಇದ್ದೆ ಅಂತ್ಹೇಳಿದ್ನಲ್ಲ, ಆವಾಗಲೇ ಈ ಗೇಣಿ ವಿವಾದ ನಡೀತಾ ಇತ್ತು. ಒಂದಿನ ಅಣ್ಣಯ್ಯ ಹೆಗ್ಗಡೆಯೋರು ನಾನು ಯಾರ ಮನೇಲಿ ಓದ್ತಾ ಇದ್ನೋ ಅವರು, ಬತ್ತ ಅಳಸ್ಕೊಂಬಾ ಅಂತ ಒಬ್ಬ ಭಟ್ರು ಮನೆಗೆ ಕಳಸಿದ್ರು ನನ್ನನ್ನ. ಆ ಭಟ್ರು ಮನೆಗೆ ಹೋದರೆ, ಅಷ್ಟ್ ಬತ್ತ ಕೊಡೋಕ್ ಅವ್ರಿಗ್ ಶಕ್ತಿ ಇಲ್ಲ. ಹಳೇ ಬಾಕೀನೆ ಇತ್ತು ಅವ್ರಿಗೆ. 'ಕೊಡೋಕಾಗಲ್ಲ' ಅಂತ ಅವರು. ಅಣ್ಣಯ್ಯ ಹೆಗ್ಗಡೇರು 'ನೀನ್ ವಸೂಲ್ ಮಾಡ್ಕಂಡೇ ಬರ್ಬೇಕು. ಗಾಡಿ ತೊಗೊಂಡ್ಹೋಗು' ಅಂತ ಮತ್ತೆ ಕಳಸಿದ್ರು ನನಗೆ. ಮತ್ತೆ ಗಾಡಿ ತಕ್ಕೊಂಡ್ ಜನಾ ಕರ್ಕೊಂಡ್ ಭಟ್ಟರ ಮನೆಗೆ ಹೋದೆ. ಆಗ ನನ್ ಕ್ಲಾಸಲ್ಲಿ ಓದ್ತಿರೊ ಹುಡುಗಿ ಇದ್ಲು ಅಲ್ಲಿ. ಅವಳು 'ಇಲ್ಲ ಇವತ್ತು ಅವರು. ಎತ್ಲಾಗೋ ಹೋಗಿದಾರೆ' ಅಂತ ಹೇಳಿದ್ಲು. ಕ್ಲಾಸ್‌ಮೇಟ್ ನಾನು. ಇನ್ನೊಬ್ಬರ ಪರವಾಗಿ ವಸೂಲಿಗೆ ಹೋಗಿದೀನಿ. ನನಿಗೆ ಸುಳ್ ಹೇಳ್ಬೇಕಾದ ಆವಶ್ಯಕತೆ ಅವಳಿಗೆ ಇರಲಿಲ್ಲ. ಮನಸ್ ಬಿಚ್ಚಿ ಅವಳು ಹೇಳಿದ್ದು ನನಗೆ ಚೆನ್ನಾಗಿ ನೆನಪಿದೆ: 'ಎಷ್ಟಂತ ಕೊಡ್ತಾರೆ ಗೇಣಿನಾ? ನ್ಯಾಯವಾಗ್ ಕೊಡಬೇಕಾದ್ ಕೊಟ್ರುನೂ ಪ್ರತೀಸಾರಿ ಎಲ್ಡೆಡ್ ಲೆಕ್ಕ ಬರ್ದಿಟ್ಕೊಂಡು ವಸೂಲ್ ಮಾಡ್ತಾರೆ ಇವ್ರು. ನೀನ್ಹೋಗ್ ನೋಡು ಬೇಕಾದ್ರೆ' ಅಂದ್ಲು. ನನಿಗೆ ತುಂಬ ಮನಸಿನ ಮೇಲೆ ಪರಿಣಾಮ ಆಗಿ, ಮನೀಗ್

ಬಂದು ಅಣ್ಣಯ್ಯ ಹೆಗ್ಗಡೇರಿಗೆ ಹೇಳ್ದೆ. 'ಇನ್ ನಾ ವಸೂಲಿ ಮಾಡಾಕ್ ಹೋಗಲ್ಲ. ಆ ಹುಡಗಿ ಹಿಂಗ್ ಹೇಳ್ತು' ಅಂತಂದ್ಮೇಲೆ ಅವ್ರಿಗೂ ಪರಿಣಾಮ ಆಗಿ, 'ಹೋಗ್ಲಿ ಬಿಡತ್ಲಾಗೆ ಬ್ಯಾಡ' ಅಂತ ಬಿಟ್ಬಿಟ್ರು.

ಬ್ರಾಹ್ಮಣರಲ್ಲೂ ಗೇಣಿದಾರರು ಇದ್ರಾ? ಅವರೂ ಒಕ್ಕಲಿಗರೂ ಸಾಮಾನ್ಯವಾಗಿ ಜಮೀನ್ದಾರರಾಗಿದ್ರು ಅಂತ ಓದಿದೀವಿ.

ಬೇರೆಯವರಿಗೆ ಜಮೀನು ಕೊಟ್ಟು ಗೇಣಿವಸೂಲು ಮಾಡ್ತಾ ಇದ್ದಿದ್ದು ಹೆಚ್ಚಾಗಿ ಬ್ರಾಮಣ್ರೆ. ಅವರಿರೋದು ಪೇಟೆ. ಉದಾಹರಣೆ ಅಂತಂದ್ರೆ ಅಲ್ಲೇ ಶೀರ್ನಾಳಿ ಅಂತ ಒಂದ್ ಊರಿತ್ತು. ಅಲ್ಲಿನ ಎಲ್ಲ ಬ್ರಾಮಣರು ಗೇಣಿಗೆ ಕೊಟ್ಟು ಶಿವಮೊಗ್ಗದಲ್ಲಿದ್ರು.

ನಿಮ್ಮ ತಲೆಮಾರಿನವರಿಗೆ ವೈಚಾರಿಕ ವ್ಯಕ್ತಿತ್ವ ಕಟ್ಟಿಕೊಳ್ಳಲು ಇನ್ನೂ ಏನೇನು ರಾಜಕೀಯ ಸಾಮಾಜಿಕ ಪ್ರಭಾವಗಳಿದ್ದವು?

ನನಗೆ ಅನ್ಸುತ್ತೆ. ಸೋಷಿಯಲಿಸ್ಟ್ ಪಾರ್ಟಿಯೇ ನಮ್ಮೆಲ್ಲರಿಗೂನೂ ಗಟ್ಟಿಯಾಗಿ ಆ ದಿಕ್ಕಲ್ಲಿ ಕೆಲ್ಸ ಮಾಡೊಂಗೆ ಮಾಡಿದ್ದು. ಇದು ಮಾತ್ರ ಅಲ್ಲದೆ, ಸರಳ ವಿವಾಹದ ಬಗ್ಗೆ ಕುವೆಂಪುರವರು ಹೇಳ್ತಾ ಇದ್ದಂತದ್ದು, ಆಮೇಲೆ ವಿವೇಕಾನಂದರ ಆಲೋಚನೆಗಳು...

ನಿಮ್ಮ ಕಾಲದ ಸೋಶಿಯಲಿಸ್ಟ್ ಪಾರ್ಟಿಯ ಕೆಲಸಗಳು ನೋಡಿದ್ರೆ ಗೌರವ ಹುಟ್ಟುತ್ತೆ. ಆದರೆ ಆಮೇಲಾಗಿದ್ದು ಬೇರೆ. ಹೆಚ್ಚಿನವರು ಚಳುವಳಿ ಬಿಟ್ಟು ಬೇರೆಬೇರೆ ರಾಜಕೀಯ ಪಕ್ಷಗಳನ್ನ ಸೇರಕೊಂಡು ಡಿಮಾರಲೈಸ್ ಆದರು. ಈ ಪಲ್ಲಟಗಳಿಗೆ ಕಾರಣ ಎಲ್ಲಿದೆ ಅಂತೀರಿ? ತತ್ವದಲ್ಲೇ?

ತತ್ವದಲ್ಲಿ ಹ್ಯಂಗಿರೋಕಾಗ್ತದೆ? ತತ್ವದಲ್ಲಿದೆ ಅಂತ ಅನಿಸೋದಿಲ್ಲ. ಹೆಚ್ಚಿನೋರು ಅವಕಾಶವಾದಿಗಳಾಗಿ ಕಾಂಗ್ರೆಸ್‌ನಲ್ಲಿ ಸೇರಿಹೋಗಿದ್ದು ನಿಜ. ಅಲ್ಲದೆ ಯಾವ್ದೂ ಬಹಳ ವರ್ಷ ಇರಲ್ಲ. ಚರಿತ್ರೆಯ ತಿರುಗು ಚಕ್ರದಲ್ಲಿ ಜನ ಹಳತು ಅಂತ ಅನಿಸಿದ್ದನ್ನ ಬಿಟ್ಟು ಬೇರೆ ಹೊಸತು ರೂಪಿಸಿಕೊಳ್ತಾರೆ. ಮೂಲ ಸಿದ್ಧಾಂತದಲ್ಲಿ ಐಬು ಇದ್ದು ಹಿಂಗೆಲ್ಲ ಆಗ್ತಿರೋದಲ್ಲ. ಗೋಪಾಲ್ ಗೌಡ್ರು 'ನೀನೊಂದು ಒಂದ್ ನೋಟು, ಒಂದ್ ಓಟು ಕೊಡ್ಬೇಕು. ಚುನಾವಣೆಗೆ ಹಾಕಾಕೆ ನನ್ಹತ್ರ ದುಡ್ಡಿಲ್ಲ' ಅಂತ ಹೇಳ್ತಿದ್ರು. ಅವತ್ತಿನ್ ದಿನ ಎರಡೇ ಸಾವಿರ ರೂಪಾಯ್ ಚುನಾವಣೆಗೆ ಸಾಕಾಗ್ತಿತ್ತು. ಆಗ ಅವರ ಸ್ಲೋಗನ್ ಸರಿಯಿತ್ತು. ಲಕ್ಷಾಂತರ ರೂಪಾಯಿ ಬೇಕು ಇವತ್ತು.

ಶಾಮಣ್ಣಾ, ಕಾಲೇಜಲ್ಲಿ ನಿಮ್ಮ ಮೇಷ್ಟ್ರುಗಳು ಯಾರ್‍ಯಾರು?

ಇಂಟರ್ ಮಿಡಿಯಟ್ಟಿನಲ್ಲಿ ನನಗೆ ಅನಂತ್‌ಮೂರ್ತಿಯವರು ಮೇಷ್ಟ್ರಾಗಿದ್ರು. ನಾನ್‌ಡಿಟೇಲ್ ಆಗಿ ಮಹಾಭಾರತ ತೊಗೊಂತಿದ್ರು. ಭಾಳ ಖುಶಿಯಾಗಿ ರೋದು...(ನಗು) ಅವರೇನ್ ಮಾಡ್ತಿದ್ರಂದ್ರೆ ಟೆಕ್ಸ್ಟ್ ಹೇಳೋದು ಮಾತ್ರ ಅಲ್ಲ, ಅದ್ರಾಚೆಗೂ ಹೇಳೋರು; ಹುಡುಗುರನೆಲ್ಲ 'ಏಯ್ ಇಲ್ ಬಾರೋ' ಅಂತ ಹೆಗಲ್ಮೇಲೆ ಕೈಹಾಕಿ ಮಾತಾಡಿಸ್ತಿದ್ರು. ಅದು ಭಾಳ ಹತ್ರಾಗಿಬಿಟ್ತು. ಆಮೇಲೆ ಮೈಸೂರಲ್ಲಿ ನಮ್ಮ ಗುರುಗಳು ಯಾರ್‍ಯಾರು?

(ಅಭಿಮಾನದಿಂದ) ಶಿವರುದ್ರಪ್ಪನೋರು, ಪ್ರಭುಶಂಕರ್ರು, ಚಿದಾನಂದಮೂರ್ತಿ, ಸುಜನಾ, ತೀ ನಂ ಶ್ರೀಕಂಠಯ್ಯ, ಡಿ ಎಲ್ ನರಸಿಂಹಾಚಾರ್, ಎಸ್ ವಿ ಪರಮೇಶ್ವರಭಟ್ಟರು ಅದ್ಯಾಕ್ ಹೇಳ್ತೀರಿ.

ಕುವೆಂಪು?

ನಾವ್ ಹೋಗೋ ಹೊತ್ತಿಗೆ ಅವರು ವೈಸ್ ಛಾನ್ಸಲರ್ ಆಗಿಬಿಟ್ಟಿದ್ರು. ಹಂಗಾಗಿ ನಮಿಗೆ ಕ್ಲಾಸ್ ತಗಾತಿರ್ಲಿಲ್ಲ. ಇನ್ನೊಂದ್ ವಿಷಯ ಕೇಳ್ರಿ. ಕನ್ನಡ ಓದಬೇಕೂ ಅಂತ ನನಿಗೆ. ಇಂಟರ್ ಮಿಡಿಯಟ್ಟಿನವರಗೆ ನಾನೋದಿದ್ದು ಹಿಂದಿ. ಪರಮೇಶ್ವರ ಭಟ್ರ ಹತ್ರ ಹೋಗಿ 'ಸಾರ್ ನಾನು ಬಿಎನಲ್ಲಿ ಕನ್ನಡ ಓದ್ಬೇಕು ಅಂತ ಇದೀನಿ' ಅಂತ ಕೇಳ್ದೆ. 'ನೀನಲ್ಲಿ ಕನ್ನಡ ಓದ್ದೇ ಇರೋದ್ರಿಂದ ನಿನಿಗಿಲ್ಲಿ ಕೊಡಕಾಗಲ್ಲಾ' ಅಂದ್ರು. 'ಇಲ್ಲಾ ಸಾರ್, ನೀವು ನನಿಗೆ ಏನಾರೂ ಸಹಾಯ ಮಾಡ್ಬೇಕು' ಅಂದೆ. ಅವರು ತೀನಂಶ್ರೀ ಹತ್ರ ಕರ್ಕೊಂಡೋದ್ರು. ತೀನಂಶ್ರೀ ಹತ್ರ ಅವರು ಇಟ್ಟ ವಾದವೇನಪ್ಪ ಅಂತ್ಹೇಳಿದ್ರೆ: 'ನೋಡಿ ಸಾರ್, ಆನರ್ಸ್ ಓದೋ ಹುಡುಗ್ರು, ಆನರ್ಸ್ ಮುಗಿಸಿ ಎಂಎ ಮಾಡಿ ಡಿಪಾರ್ಟ್‌ಮೆಂಟ್ ಒಳಗೇ ಇದ್ ಬಿಡ್ತಾರೆ. ಇವ್ರಂತೋರು ಬಿಎನಲ್ಲಿ ಒಂದು ವರ್ಷ ಮೇಜರ್ ಕನ್ನಡ ಓದಿದ್ರೆ, ಸಾರ್ವಜನಿಕ ಜೀವನಕ್ಕೋಗಿ ಬಿಡ್ತಾರೆ. ಸಾರ್ವಜನಿಕ ಜೀವನಕ್ಕೆ ಹೋಗೋರಿಗೆ ನಾವು ಭಾಷೆಗೀಷೆ ಬಗ್ಗೆ ಕಲಿಸಿದ್ರೆ, ಅವ್ರು ನಮ್ ಪರವಾಗಿ ಹೋರಾಟ ಮಾಡ್ತಾರೆ. ಆದ್ರಿಂದ ಇವನಿಗೆ ಮೇಜರ್ ಕನ್ನಡ ಕೊಡಿಸ್ಬಿಡೋಣ, ಪಾಪ ಕೇಳ್ತಿದ್ದಾನೆ' ಅಂದ್ರು. 'ಆಯ್ತಪ್ಪ, ನಂದೇನು ಅಡ್ಡಿ ಇಲ್ಲ. ಪ್ರಿನ್ಸಿಪಾಲರನ್ನ ಕೇಳೋಣ' ಅಂತ ಅವ್ರಿಬ್ರು ಬಂದು ಸಿಡಿ ನರಸಿಂಹಯ್ಯನವರ ಹತ್ರ ಕೇಳಿದ್ರು. ಆಗ ಸಿಡಿಎನ್ ಇದ್ದೋರು 'ಏನಯ್ಯಾ? ಒಳ್ಳೇ ವಕೀಲರನ್ನ ಹಿಡಿದು ಬಿಟ್ಟಿದೀಯಾ!' ಅಂತಂದು ಕನ್ನಡ ಮೇಜರ್ ಕೊಟ್ರು.

ಮೈಸೂರಲ್ಲಿ ನೀವು ಬೇರೆ ಯಾವ ಚಟುವಟಿಕೆಗಳಲ್ಲಿ ತೊಡಗಿಕೊಂಡಿರಿ?

ಊಂ.. ಅಂತಾದೇನ್ ಇಲ್ಲ. ಮೈಸೂರಿಗೆ ಬಂದ್ಮೇಲೆ, ಮೊದಲನೇ ನಮ್ ಕಿತಾಪತಿ ಅಂತಂದ್ರೆ ಒಂದ್ ಸ್ಥಳದಲ್ಲಿ ಕೂತ್ಕೊಂಡ್ ಕಾಗದಾ ಬರೆಯೋದು. ಏನು ಕನ್ನಡ ಬೆಳಸ್ಬೇಕು ಅಂತ ನಾವು ಕೋಣಂದೂರು ಲಿಂಗಪ್ಪ ಎಲ್ಲಾ ಸೇರಕೊಂಡು ಕಾಗದ ಬರೆಯೋದು. ನಾನ್ಹತ್ ಕಾಗದ ಬರೆಯೋದು. ಅವನ್ಹತ್ ಬರೆಯೋದು. ಆಮೇಲೆ 'ಸಮಾಜವಾದಿ ಯುವಜನ ಸಭಾ' ಅಂತ ಪ್ರಾರಂಭ ಮಾಡಿದ್ವಿ, ಸೋಶಲಿಸ್ಟ್ ಪಾರ್ಟಿಯ ಯೂತ್‌ವಿಂಗ್ ಇದು. ಈ ನಂಜುಂಡಸ್ವಾಮಿ ನಾವೆಲ್ಲಾ ಸೇರಿ, ಯುವಜನಸಭಾನ್ನ ಕಟ್ಕೊಂಡು ಕರ್ನಾಟಕದ ಉದ್ದಗಲಕ್ಕೂ ಕಾರ್ಯಕ್ರಮಗಳು ಹಮ್ಮಿಕೊಳ್ಳೋದು, ಮಾಡೋದು ಇವೆಲ್ಲಾ ಪ್ರಾರಂಭವಾಯ್ತು. ನಾವೇ ಮಾಡಿದ್ದು. ಆವಾಗ ನಾವು ಬಿಎ ಮುಗಿಸಿದ್ದಿವಿ ಅಷ್ಟೇನೆ. 'ಬೂಸಾಸಾಹಿತ್ಯ ಪ್ರಕರಣ' ಆವಾಗ

ತಾನೇ ಆಗಿತ್ತು. ಲಂಕೇಶ್ ಎಲ್ಲ ಬಂದಿದ್ರು. ಕುವೆಂಪು ಅವರೇ ಅದನ್ನ ಉದ್ಘಾಟನೆ ಮಾಡಿದ್ರು.

ಶಾಮಣ್ಣಾ, ನಿಮಗೆ ಹಿಂದೂಸ್ತಾನಿ ಸಂಗೀತದ ಹುಚ್ಚು ಹತ್ತಿತ್ತು ಅಂತ ತೇಜಸ್ವಿ ಬರೀತಾರೆ. ಇದು ಹೆಂಗೆ ಬಂತು?

ಒಂದಿನ ಮೈಸೂರಿನ ಕ್ರಾಫರ್ಡ್ ಹಾಲಲ್ಲಿ ಜುಗಲ್ ಬಂದಿ ಆಯ್ತು, ರವಿಶಂಕರ್–ಅಲೀ ಅಕಬರ್ ಖಾನರದು. ನಾನೂ ತೇಜಸ್ವಿ ಹೋಗಿದ್ವಿ. ಉ ಕಾ ಸುಬ್ಬರಾಯಾಚಾರ್ ಅಂತ ನಮ್ಮ ಮೇಷ್ಟ್ರು 'ಏ..ಸಂಗೀತಾ ಇದೆ ಬನ್ನಿ ಕೇಳಿ' ಅಂತ್ಹೇಳಿ ಕರ್ಕೊಂಡೋಗಿದ್ರು. ಆ ಜುಗಲ್‌ಬಂದಿ ಕೇಳಿದ ಮೇಲೆ 'ತೇಜಸ್ವೀ, ಕಲಿತರೆ ಈ ಸರೋದ್ ವಾದ್ಯ ಕಲೀಬೇಕು' ಅಂತಂದೆ ನಾನು. ತೇಜಸ್ವಿಯಿದ್ದೋರು 'ಹಂಗಾರೆ ನಾನು ಸಿತಾರ್ ಕಲೀತೀನಿ' ಅಂದ್ರು. ಅವರು ಸಿತಾರ್ ಕಲತ್ರು ಸ್ವಲ್ಪದಿನ. ನಾನು ಸರೋದ್ ಹೊತ್ಕೊಂಡು ಬೊಂಬಾಯಿಗೆ ಹೋಗೇಬಿಟ್ಟೆ ಅತ್ಲಾಗೆ ಅಲೀಅಕಬರಖಾನ್ ಮನೇಗೆ. ಕಳಿಸ್ಕೊಟ್ಟಿದ್ದು ಯಾರಪ್ಪ ಅಂತ್ಹೇಳಿದ್ರೆ ರವಿಶಂಕರ್. ರವಿಶಂಕರ್ ಅಲೀ ಅಕಬರ್ ಖಾನರ ಭಾವ. ಅಲ್ಲಾವುದ್ದೀನ್ ಖಾನರ ಮಗ ಅಲೀ ಅಕಬರ್‌ಖಾನ್. ಅಲ್ಲಾವುದ್ದೀನ್ ಖಾನರ ಮಗಳು ಅನ್ನಪೂರ್ಣಾದೇವಿಯವರನ್ನೇ ರವಿಶಂಕರ್ ಮದುವೆಯಾಗಿದ್ದು. ಅಲೀಅಕಬರ್ ಖಾನ್ ಅಂತ್ಹೇಳಿದ್ರೆ ಇವತ್ತು ಜಗತ್ತಿನ ಮಟ್ಟದಲ್ಲಿರುವ ಒಬ್ಬ ಸರೋದ್ ವಾದಕ. ಅವರು ಗುರುಗಳಾಗಿ ಸಿಕ್ಕಿದ್ದು ನನ್ ಅದೃಷ್ಟ ನೋಡ್ರಿ. ಬೊಂಬಾಯಿಯಲ್ಲಿ ತಮ್ಮ ಮನೇಲೇ ಇಟ್ಕೊಂಡು ನನಗೆ ಪಾಠ ಹೇಳಿಕೊಟ್ರು ಅವರು. ಅವರ ಮನೇಗೆ ರಾಜೀವ್ ತಾರಾನಾಥ್ ನನಗಿಂತ ಮೊದ್ಲು ಹೋಗಿದ್ರು. ಅವರು ಹೋಗಿ ವಾಪಸ್ ಬಂದಿದ್ರು ಮೈಸೂರಿಗೆ. ನಾನು ಒಂದು ವರ್ಷ ಅಭ್ಯಾಸ ಮಾಡ್ದೆ. ನನ್ ಗ್ರಹಚಾರಕ್ಕೆ ಏನಾಗಿಬುಡ್ತು ಅಂದ್ರೆ, ಅಲೀಅಕಬರ್ ಮತ್ತು ರವಿಶಂಕರ್ ಇಬ್ಬರೂ ಅಮೇರಿಕಕ್ಕೆ ಹೋಗ್ತಾ ಇದ್ರು, ಇಂಡಿಯನ್ ಮ್ಯೂಸಿಕ್ ಪಾಠ ಹೇಳೋದಿಕ್ಕೆ. ಹೋದವರು ಬರಲೇ ಇಲ್ಲ ವಾಪಸ್. ಅಲೀ ಅಕಬರ್ ಹೆಂಡ್ತೀನೂ ಸಂಗೀತ್‌ಗಾರ್ತಿ. ಅವ್ರು ನನಗೆ ಪಾಠ ಹೇಳಿಕೊಡ್ತಿದ್ದವರು ಒಂದಿನ 'ನೀನ್ ಮೈಸೂರಿಗೆ ಹೋಗಿ ಓದು. ನೀ ಓದ್ಕೊಂಡ್ ಆಮೇಲ್ ಬಂದ್ರೆ ಕಲ್ಕತ್ತಾಕ್ಕೆ ಹೋಗಿ, ಅಲ್ಲಿ ಕಾಲೇಜೆಲ್ಲಾ ಇದೆ, ಚೆನ್ನಾಗಿ ಕಲೀಬಹುದು' ಅಂತ ಹೇಳಿದರು. ಮೈಸೂರಿಗೆ ಬಂದು ನಾನು ಸೋಶಿಯಾಲಜಿ ಎಂಎಗೆ ಸೇರಿಕೊಂಡೆ.

ಮೈಸೂರಿಗೆ ಬಂದ್ಮೇಲೆ ಸಂಗೀತ ಮುಂದುವರೆಸಲಿಲ್ಲವಾ?

ಒಂದು ಪ್ರೆಸ್ಸಿಟ್ಟಿದ್ವಲ್ಲಾ, ಅದರ ಗಲಾಟೇಲಿ ಸಂಗೀತ ನಿಂತೇ ಹೋಗಿಬಿಡ್ತು. ಆಮೇಲೆ 'ರಾಜೀವ್ ತಾರಾನಾಥ್ ಅಲ್ಲೇ ಮೈಸೂರಲ್ಲಿ ಇದಾನೆ. ಅವನ್ಹತ್ರ ಕಲೀ ನೀನು' ಅಂತ ಅಲೀ ಅಕಬರಖಾನ್ ಹೇಳಿಕಳಿಸಿದ್ರು. ರಾಜೀವ್ ಚೆನ್ನಾಗಿ ಸರೋದ್ ಬಾರಿಸ್ತಾರೆ. ಆದ್ರೆ ಒಳ್ಳೇ ಮೇಷ್ಟ್ರಲ್ಲ. ನಮ್ ಗುರುಗಳು ಅಮೇರಿಕಾದಲ್ಲೇ ಸೆಟಲ್ ಆಗಿಬಿಟ್ಟರು.

ನೀವು ಪ್ರೆಸ್ ಇಟ್ಟದನ್ನು ಹೇಳಿದ್ರಿ. ಏನೇನು ಪ್ರಕಟಿಸಿದಿರಿ?

ನನಗೂ ತೇಜಸ್ವೀಗೂ ಒಂದು ದೊಡ್ಡಪ್ರೆಸ್ ಇಡಬೇಕು. ಮ್ಯಾಗಜೈನ್ ತರಬೇಕು ಅಂತ ಯೋಚನೆ ಬಂತು. ಪ್ರೆಸ್ ಇಡೋ ಸಲಹೆ ಕೊಟ್ಟೋರು ಗೋಪಾಲಕೃಷ್ಣ ಅಡಿಗರು. ನೃಪತುಂಗ ಮುದ್ರಣಾಲಯ ಅಂತ ಅದರ ಹೆಸರು. ಎರಡು ವರ್ಷಾ ಹೆಂಗೋ ನಡಿಸಿದಿವಿ. 'ಲಹರಿ' ಪತ್ರಿಕೆ ತಂದಿದ್ದು ಆವಾಗ್ಲೆ. ಕಂಬಾರರ 'ಹೇಳತೇನ ಕೇಳಾ' ಮೊದಲು ನಾವೇ ಪಬ್ಲಿಶ್ ಮಾಡಿದ್ದು. ಕಡೆಗೂ ನಮಗೆ ಅದಾಗ್ಲೇ ಇಲ್ಲ. ಯಾಕಂದ್ರೆ ವ್ಯವಹಾರ ಮನೋಭಾವ ಇಬ್ರಿಗೂ ಇರಲಿಲ್ಲ. ಸಿಕ್ಕಾಪಟ್ಟೆ ಲುಕ್ಸಾನ್ ಮಾಡ್ಕೊಂಡು, ಪ್ರೆಸ್ಸ್‌ನೆಲ್ಲ ಮಾರಿ, ತೇಜಸ್ವಿ ತಮ್ಮ ಪಾಲ್ ತಗೊಂಡು ಮೂಡಿಗೆರೇಲಿ ಒಂದು ಎಸ್ಟೇಟ್ ತಗೊಂಡು ಹೋಗಿಬಿಟ್ರು.

ಕುವೆಂಪು ಲೋಹಿಯಾ ಪ್ರಭಾವದಲ್ಲಿದ್ದ ನೀವು ಅಡಿಗರ ಜತೇಲೂ ಇರತಿದ್ದಿರಿ. ಆಗ ತಾತ್ವಿಕ ಭಿನ್ನಾಭಿಪ್ರಾಯಗಳು ಬರತಾ ಇದ್ದವಾ?

ಅಡಿಗರು ಸೆಂಟ್ ಫಿಲೋಮಿನಾ ಕಾಲೇಜಲ್ಲಿ ಇಂಗ್ಲೀಶ್ ಪ್ರೊಫೆಸರು. ಅವರ ಜತೆ ಇಡೀ ಮೈಸೂರಿನ ಸಾಹಿತ್ಯ ಪ್ರೇಮಿಗಳೆಲ್ಲರೂ ಕಾಫೀಹೌಸಲ್ಲಿ ಕೂತ್ಕೊಂಡು ಚರ್ಚೆ ಮಾಡ್ತಿದ್ರು. ಆಮೇಲೆ ನಮ್ಮಂತೋರೆಲ್ಲಾ ಹ್ಯಂಗೋ ಹೋಗಿ ಸೇರತಿದ್ವಿ. ನಾನ್ ನೋಡಿದಂಗೆ ಅಡಿಗರ ಸ್ವಭಾವ ಏನಂದ್ರೆ, ಎಲ್ಲಿ ಹೊಸ ಆಲೋಚನೆ ಇದೆ ಅದನ್ನ ಬಹಳ ಗೌರವಿಸ್ತಿದ್ರು ಅವರು. ಮಡಿವಂತಿಕೆ ಇರಲಿಲ್ಲ ಅವ್ರಿಗೆ. ಅದ್ರಿಂದೀಚೆಗೆ ಬರೋದಿಕ್ ತುಡಿತ ಇತ್ತು ಅವ್ರಿಗೆ. ಯುವಕರ ಬಗ್ಗೆ ಅವರಿಗೆ ತುಂಬ ಭರವಸೆ ಇತ್ತು.

ನಿಮ್ಮ ಗುರುಗಳೆಲ್ಲ ೨೦ನೇ ಶತಮಾನದ ದೊಡ್ಡ ವಿದ್ವಾಂಸರು. ಅವರು ವಿದ್ಯಾರ್ಥಿಗಳ ಜತೆ ಹೆಂಗಿರತಿದ್ರು?

ಪ್ರಭುಶಂಕರ್, ಚಿದಾನಂದಮೂರ್ತಿ, ಶಿವರುದ್ರಪ್ಪನವರು ಇವ್ರೆಲ್ಲ ಇದ್ದಿದ್ದು ಮಹಾರಾಜಾಸ್ ಕಾಲೇಜ್ ಹಾಸ್ಟೆಲ್‌ನಲ್ಲಿ. ಅಲ್ಲಿ ಇದ್ದಾಗ ಅವರಿಗೆ ನನ್ನ ಬಗ್ಗೆ ಇದ್ದ ಭಾವನೆ ಅಂದ್ರೆ 'ಇವನು ಕುವೆಂಪು ಊರಿನವ. ಕುವೆಂಪುಗೆ ಹತ್ತಿರದವನು. ಸಂಗೀತದ ಅಭಿರುಚಿ ಇದೆ ಇವನಿಗೆ' ಹಿಂಗೆ ಏನೋ ಒಂಥರ ಪ್ರೀತಿ. ನಮಗೂನೂ 'ಇವರು ಒಳ್ಳೇ ಗುರುಗಳು. ಇವರಿಂದ ನಾವು ಏನಾರು ನಾವು ಸಂಪಾದಿಸ್ಕೋಬೇಕು. ಒಳ್ಳೇರು ಅಂತನಿಸ್ಕಬೇಕು' ಹಿಂಗೆ. ಆಮೇಲೆ ಸಂಗೀತ ಕಛೇರಿಗಳನ್ನ ಏರ್ಪಡಿಸ್ತಿದ್ವಿ ನಾವು. ಇವರನೆಲ್ಲ ಕರೀತಿದ್ವಿ, ಅವ್ರೆಲ್ಲರೂ ಬರೋರು. ಏನೋ ಒಂಥರ ವಿಶೇಷವಾದದ್ದು ಇತ್ತಪ್ಪ(ನಗು).

ಮೇಷ್ಟ್ರುಗಳ ಜತೆ ಭಿನ್ನಾಭಿಪ್ರಾಯ ಜಗಳ ಏನೂ ಇರಲಿಲ್ಲವಾ?

ಜಗಳಾ! ನನಿಗಂತೂ ಯಾರ ಜತೇಲೂ ಜಗಳ ಇರಲೇ ಇಲ್ಲ(ನಗು).

ನಿಮ್ಮ ಹಾಗೂ ತೇಜಸ್ವಿಯವರ ಚಟುವಟಿಕೆಗಳನ್ನ ಕುವೆಂಪು ಹ್ಯಾಗೆ ನೋಡ್ತಾ ಇದ್ರು?

(ನಗುತ್ತಾ) ಅಯ್ಯೋ .. ಬಯ್ಯೋದು ಯಾಕ್ ಹೇಳ್ತೀರಿ ಮನೆಯೊಳಗೆ. ಒಂದಿನ ಅವರು 'ನೀವು ಹ್ಯಂಗ್ ತಿರುಗ್ತೀರೋ ಮಾರಾಯರಾ, ಬೆಳಿಗಿಂದ ಸಾಯಂಕಾಲ್ದವರೆಗೆ.

ನಿಮ್ಮಿಬ್ಬರ ಕಾಲಿಗೆ ದಾರಕಟ್ಟಿ ಬಿಟ್ ಬಿಟ್ರೆ, ದಿನಕ್ಕೊಂದ್ ರಗ್ ನೇಯ್ಬುಬಿಡ್ತೀರಿ ಅಂತ್ಹೇಳೋರು ನಮ್ಗೆ.

ಮೈಸೂರು ಸೀಮೆಯ ಒಕ್ಕಲಿಗರು ಕುವೆಂಪು ಅವರ ಚಿಂತನೆಗೆ ಪ್ರತಿಕ್ರಿಯಿಸ್ತಾ ಇದ್ದರಾ? ಮಂಡ್ಯದಲ್ಲಿ ಶಂಕರೇಗೌಡರು ಮುಂತಾದವರೆಲ್ಲ ಕುವೆಂಪು ವಿಚಾರಗಳಿಂದ ಪ್ರಭಾವಿತ ರಾಗಿದ್ದೋರು.

ನೋಡಿ, ಪುಟ್ಟಪ್ನೋರನ್ನ ನಮ್ಮ ನೆಂಟರಿಷ್ಟರು ಅಂತ ಗುರುತಿಸಿದ್ದು ಬಿಟ್ರೆ, ಅವರ ಸಾಹಿತ್ಯ ಓದಿಯಾಗಲಿ, ಅವರ ವಿಚಾರದಿಂದ ಪ್ರಭಾವಕ್ಕೆ ಒಳಗಾದಂತಹವರು ನನಗೆ ಒಬ್ರೂ ಕಾಣ್ಸಲ್ಲ. ಶಂಕರೇಗೌಡ್ರು ಅವ್ರೆಲ್ಲ ಒಂದ್ ನಾಕಾರ್ ಜನ ಇರಬಹುದು ಅಷ್ಟೇನೆ. ತೇಜಸ್ವೀದು, ನಂದು ಸರಳ ವಿವಾಹ ಮಂತ್ರಮಾಂಗಲ್ಯ ಆದವಲ್ಲ, ಆಗ ಪುಟ್ಟಪ್ಪನೋರೆ ಒಮ್ಮೆ ಹೇಳಿದ್ದೇನು ಅಂದ್ರೆ, 'ನೋಡೀ, ಇಷ್ಟು ವರ್ಷ ಬೇಕಾಯ್ತು. ನಾನು ವಿದ್ಯಾರ್ಥಿಯಾಗಿ ಇದ್ದಾಗ್ಲಿಂದಲೂ ನನ್ ಜೊತೆಗೆ ಇರ್ದ್ದೋರಿಗೆಲ್ಲ ಹೇಳಿದ್ರೂ, ಒಬ್ನೇ ಒಬ್ಬ ಇದುನ್ ತಲೆಗೆ ಹಾಕ್ಕೊಳ್ಳಿಲ್ಲ. ಈ ಸುಧಾರಣೆ ಎಷ್ಟು ನಿಧಾನ ಅನ್ನೋದಿಕ್ಕೆ ಈಗ ನೀವು ಒಂದು ಗುಂಪು ತಯಾರಾಗಿದ್ದೀರಿ. ಇಷ್ಟು ಸಹನೆ ಇರಬೇಕು. ಈಗಾದ್ರೂ ನೀವಾಗಿದೀರಲ್ಲ ನನಗೆ ಬಹಳ ಸಂತೋಷ' ಅಂತ ಕೂತ್ಕೊಂಡು ಬರೆದು ಎಲ್ಲಾ ರೆಡಿ ಮಾಡಿಕೊಟ್ರು.

ಕುವೆಂಪು ಬಿಟ್ರೆ ನಿಮ್ಮ ಮೇಲೆ ಪ್ರಭಾವ ಮಾಡಿದ ಇತರ ಕನ್ನಡದ ಲೇಖಕರು ಯಾರು?

ನನಿಗೆ ತೇಜಸ್ವೀದು ಇಷ್ಟಾ ಆಗ್ತದೆ. ಬೇಂದ್ರೆ ಪದ್ಯಾ ಬಹಳ ಖುಷಿ ಕೊಡ್ತದೆ. ಕುವೆಂಪು ಗದ್ಯ ತುಂಬಾ ಖುಷಿ ಕೊಡುತ್ತೆ. ಆದರೆ ಪದ್ಯಗಳಲ್ಲಿ ನರಸಿಂಹಸ್ವಾಮಿಗಳದ್ದು ಮುಗಿಲುಗಳ ಮೇಲೆ ಒಂದು ಹಾಡಿದೆಯಲ್ಲ...ಭಾಳ ಹಿಂದೇನೂ ನಾವು ಅದನ್ನ ಹಾಡ್ತಿದ್ದೊ. ಎಷ್ಟು ಚೆನ್ನಾಗಿದೆ ಅದು ಅಂತೀರಾ?(ರಾಗವಾಗಿ ಪದ್ಯವನ್ನು ಹಾಡುತ್ತಾ) 'ಕೃಷ್ಣನಂತೊಂದು ಮುಗಿಲೂ ರಾಧೆಯದಿನ್ನೊಂದು ಮುಗಿಲೂ..'

ನೀವೊಬ್ಬ ಒಳ್ಳೇ ಫೋಟೋಗ್ರಾಫರ್ ಕೂಡ ಆಗಿದೀರಿ. ಇದು ಹೆಂಗೆ ಸಾಧ್ಯ ಆಯಿತು?

ನನಗೆ ಫೋಟೋಗ್ರಫಿಯಲ್ಲಿ ಆಸಕ್ತಿ ಹುಟ್ಟಿದ್ದು, ಒಬ್ರು ಫಿಜಿಕ್ಸ್ ಮೇಷ್ಟ್ರಿಂದ ಕಂಡ್ರಿ. ಭಗವಾನ್ ಅಂತ. ಅವರು ಕ್ಯಾಮರಾನ ಎಷ್ಟು ಚೆನ್ನಾಗಿ ಪಾಠ ಮಾಡಿದ್ರು ಅಂದ್ರೆ, ನನಿಗೆ ಅವತ್ತೇ ಆ ಕ್ಯಾಮರಾದ ಹುಚ್ಚತ್ತಿ ಬಿಡ್ತು. ಸಿಗರೇಟ್ ಟಿನ್ ಬರತಿತ್ತು ಆವಾಗ. ಅದರಲ್ಲೊಂದ್ ಕ್ಯಾಮರಾ ತಯಾರ್ ಮಾಡಿ ಎಕ್ಸಿಬಿಶನ್ನಿಗೆ ಇಟ್ಟಿದ್ದೆ ನಾನು. ಅವರು ಅವತ್ತು ಮಾಡಿದ ಪಾಠ, ಇವತ್ತು ನಾನು ಫೋಟೋಗ್ರಾಫರ್ ಆಗಾಕೆ ಕಾರಣಾ ನೋಡ್ರಿ.

ಫೋಟೋಗ್ರಫಿಯಿಂದ ಜೀವನಾ ನೋಡೋ ದೃಷ್ಟಿಯಲ್ಲಿ ಏನಾದರೂ ಬದಲಾವಣೆ ಆಯ್ತಾ?

ಸಂದರ್ಶನ: ಕಡಿದಾಳು ಶಾಮಣ್ಣ ಅವರ ಜತೆ ೪೯

ಮುಖ್ಯವಾದದ್ದು, ನಾನು ಕ್ಯಾಮರಾ ಹಿಡಿದು ಫೋಟೊ ತಗೆಯೋದು ಶುರು ಆದ್ಮೇಲೆ ಕೋವೀಲಿ ಪ್ರಾಣಿ ಹೊಡೆಯೋದ್ ಬಿಟ್ಟೆ. ತೇಜಸ್ವೀನೂ ಮೊದಲು ಬಾಳ ಶಿಕಾರಿ ಮಾಡೋರು. ಯಾವಾಗ ಕ್ಯಾಮರಾ ಹಿಡಿದು ಒಳ್ಳೆ ಫೋಟೋಗ್ರಾಫರ್ ಆದ್ರೋ, ಕಂಡಿದ್ನೆಲ್ಲ ಸೆರೆ ಹಿಡಿಬೇಕು ಅಂತಾಗಿ ಹೊಡೀಬಾರ್ದು ಅನ್ನೊ ಪ್ರಜ್ಞೆ ಬಂತು ನೋಡ್ರಿ. ಯಾಕಂದ್ರೆ ಕ್ಯಾಮರಾ ಹಿಡಿದ ತಕ್ಷಣ ಒಂದ್ ಚೌಕಟ್ನಲ್ಲಿ ನೋಡ್ತೀವಿ ಜಗತ್ತನ್ನ. ನಾವು ತೆಗೆಯೊ ಸಬ್ಜೆಕ್ಟು, ಅದು ನಿಧಾನಕ್ಕೆ ನಮ್ಮ ಜೀವನಕ್ಕೇ ಒಂದ್ ಚೌಕಟ್ ಹಾಕ್ಕೊಟ್ ಬಿಡುತ್ತೆ. ನಮಿಗ್ ಗೊತ್ತೇ ಆಗಲ್ಲ ಅದು. ಹಿಂಗಾಗಿ ಕ್ಯಾಮರಾ ಬರೇ ಕ್ಯಾಮರಾ ಅಲ್ಲ ಅದು.

ಫೋಟೋಗ್ರಾಫರ್ ಆಗಿ ಯಾವ ಅನುಭವ ನಿಮ್ಮನ್ನು ಈಗಲೂ ಹಾಂಟ್ ಮಾಡ್ತಿದೆ?

ಫೋಟೋಗ್ರಫೀಲಿ ನಾನು ಟೆಲಿ ಫೋಟೋಲೆನ್ಸ್ ಹೆಚ್ಚು ಬಳಸಲ್ಲ. ಟೆಲಿ ಫೋಟೋಲೆನ್ಸ್ ಯೂಸ್ ಮಾಡಿದಷ್ಟೂ ದೂರದಲ್ಲಿರೋ ಸಬ್‌ಜೆಕ್ಟನ್ನ ಹತ್ತಿರಕ್ಕೆ ತಗೊಂಬಿಟ್ ಫೋಟೋ ತಗೀತೀವಿ. ಮನುಷ್ಯರಾಗಿ ಅಬ್ಸರ್‌ವೇಶನ್ ಕಡಿಮೆ ಆಗಿಬಿಡುತ್ತೆ. ಆದರೆ ಹೈಡ್ ಮಾಡ್ಕೊಂಡು ಆದಷ್ಟು ಹತ್ರಕ್ಕೋಗಿ, ಅದರ ಗುರತಾ ಪರಿಚಯ ಮಾಡಕೊಂಡು ಫೋಟೋ ತಗುದ್ರೆ, ಅದರ ಹ್ಯಾಬಿಟ್ಸ್ ಇತ್ಯಾದಿಗಳೆಲ್ಲ ಪರಿಚಯ ಆಗ್ತದೆ. ಒಂದ್ ಘಟನೆ ಹೇಳ್ತೀನಿ. ನಮ್ ಗದ್ದೆಮನೆ ಎದ್ರುಗಡೆನೇ ನಡಿದಿದ್ದು. ಒಂದ್ ತಾಯಿಹಕ್ಕಿ, ಸನ್‌ಬರ್ಡ್ ಸೂರಕ್ಕಿ ಅಂತೀವಲ್ಲ ಅದು, ತನ್ನ ಮರೀನ ಗೂಡ್‌ಕಟ್ಟಿ ಇನ್ನೇನು ಹಾರಿಸ್ಬೇಕು, ಇನ್ನೆರಡ್ಮೂರು ದಿನದಲ್ಲಿ ಹಾರಿಸಿಬಿಡುತ್ತೆ ತಾಯಿ. ನಾನು ಅದರ ಫೋಟೋ ತಗೀಬೇಕಂತ ಹೇಳಿಕೊಂಡು ದಿನಾ ಕಾಯ್ತಿದ್ದೆ. ನೋಡ್ತೀನಿ, ಆ ಮರಿ ಒದ್ದಾಡ್ತಾ ಇದೆ. ಇದು ಎಂತದ್ನೋ ಹಿಡ್ಕಂಡು ಗುಟುಕು ಕೊಟ್ಟಂಗೆ ಮಾಡ್ತಾ ಇದೆ. ಆದರೆ ಮರಿ ಒದ್ದಾಡ್ತಾ ಇದೆ. ಏನಕ್ಕೆ ಹಿಂಗಾಗಿದೆ ಅಂತ ಹೇಳ್ಬಿಟ್ಟು ನೋಡಿದ್ರೆ ಮರಿಗಳಿಗೆ ಇರುವೆಗಳು ಹತ್ತಿಬಿಟ್ಟಿವೆ. ತಂದೆ ತಾಯಿ ಎರಡೂನು, ಒಂದೈದು ನಿಮಿಷದೊಳಗೆ ಎಂಥದೊ ಈ ಹಾವಿನ್ ಪೊರೆತರಹ ಬಿಳೀ ಪುಡಿ ತಗೋಬಂದು ಗೂಡು ತುಂಬ ಹಚ್ಚಿಬಿಟ್ವು ಕಂಡ್ರಿ. ಇರುವೆಗಳು ಬರೋವು ಟೊಂಯ್ ಅಂತ ವಾಪಸ್ ಹೋಗೋವು! ಅದು ಯಾವ ಸಂಜೀವಿನಿನೋ ಯಾವ್ ಗಿಡಮೂಲಿಕೇನೋ ನಮ್ಗೇನ್ ಗೊತ್ತು? ಇರುವೆಗಳಿಗೆ ಗೂಡ್ಹತ್ರ ಹೋಗಾಕ್ಕಾಗಲೇ ಇಲ್ಲ ನೋಡ್ರಿ. ಮರಿ ಉಳುಸ್ಕೊಂಬಿಟ್ವು. ಇದು ನಾನು ಹತ್ರದಿಂದ ಫೋಟೋ ತೆಗೀತಾ ಕಂಡಂತಹ ಒಂದು ವಿಚಿತ್ರ. ಎಷ್ಟೋ ಸಾರಿ ನಮಗೆ ಈ ಫೋಟೋಗಿಂತ ಇಂಥದೆಲ್ಲ ಅಬ್ಸರ್ವ್ ಮಾಡಕ್ಕೆ ಸಿಗುತ್ತಲ್ಲ, ಅದು ಖುಶಿ ಕೊಡುತ್ತೆ.

ಸಾಹಿತ್ಯ ಮತ್ತು ಫೋಟೋಗ್ರಫಿ ಇವೆರಡರಲ್ಲಿ ಜೀವನ ನೋಡೋ ವಿಧಾನದಲ್ಲಿ ಏನು ವ್ಯತ್ಯಾಸ?

ಸಾಹಿತ್ಯದಲ್ಲಿ ಭಾಷೆಯ ಮುಖಾಂತರ ಒಂದು ಅನುಭವವನ್ನ ಹೇಳ್ಕೊಂಡ್ ಹೋಗ್ತಾರೆ. ಅದೇ ಅನುಭವವನ್ನ ಒಂದು ಚಿತ್ರ ನೋಡಿ ಹಂಗೇ ಎಂಜಾಯ್ ಮಾಡ್ಬೇಕು. ಅದೇ ಬೇರೆ ಇದೇ ಬೇರೆ ಅಂತ ಅನಿಸ್ತದೆ. ಎಲ್ಲವನ್ನ ಸುಮ್ನೆ ಓದ್ಕೊಂಡ್ ಖುಶಿ ಪಟ್ಕೊಂಡ್ ಹೋಗಿದೀನಿ ಹೊರತು, ವಿಮರ್ಶಾತ್ಮಕವಾಗಿ ಹ್ಯಂಗೇಳಲಿ ನಾನು?

ಈಗ ನೀವಿರೋ ಹಳ್ಳಿಲಿ ಅನೇಕ ಪ್ರಯೋಗಗಳನ್ನ ಮಾಡ್ತಾ ಇದೀರಿ. ಅವುಗಳ ಬಗ್ಗೆ ವಿವರಿಸಿ.

ಮೊದಲ್ನೇದು ನಮ್ಮ ಊರನ್ನ ಕ್ಲೀನ್ ಮಾಡ್ಬೇಕು ಅಂತ, ಗ್ರಾಮನೈರ್ಮಲ್ಯ ಚಳುವಳಿ ಪ್ರಾರಂಭ ಮಾಡಿದ್ವಿ. ಗ್ರಾಮನೈರ್ಮಲ್ಯ ಅಂದಾಕ್ಷಣ, ಮೊದಲು ಮಲಮೂತ್ರಗಳದ್ದು ಬರ್ತದೆ. ಪ್ರತಿಯೊಂದು ಮನೆಗೂ ಶೌಚಾಲಯ ಇರಬೇಕು. ಕಕ್ಕಸ್‌ಗೆ ಬರೋರಿಗೆಲ್ಲ ಶೌಚಾಲಯ ಇರಬೇಕು ತಾನೆ? ಹಂಗೆ ನಮ್ಮೂರಲ್ಲಿ ಎಲ್ಲ ಮನೆಗಳಲ್ಲೂ ಶೌಚಾಲಯ ಸಾಲಾಗೀಲಾ ಮಾಡಿ ಕಟ್ಸಿದಿವಿ. ಕಡೀಗೆ 'ಅಲ್ ಕೂತ್ರೆ ನಮಗ್ ಬರೋದೇ ಇಲ್ಲ' ಅಂತ್ಹೇಳಿ ಕೆಲವರು, 'ಇನ್ ಕೂರೋದೆ ಇಲ್ಲ' ಅಂತ ಕೆಲವರು, ಹಿಂಗೆಲ್ಲ ಏನೇನೋ ಆಗಿದಾವೆ.(ನಗು) ನಮ್ಮ ಈ ರೀತಿಯಾದಂಥಾ ಪ್ರಯೋಗಗಳನ್ನ ಸರ್ಕಾರ ಗಮನಿಸಿ, ಎಂ. ಪಿ. ಪ್ರಕಾಶ್ ಅವರೂ ನಾವೂ ಕೂತು ಆಲೋಚನೆ ಮಾಡಿ, 'ನಿರ್ಮಲ ಕರ್ನಾಟಕ' ಅಂತ ಯೋಜನೆ ತಯಾರಿಸಿದಿವಿ.

ರೈತರಿಗೆ ಇದರ ಪ್ರಯೋಜನ ಬೇರೆ ಏನಾದರೂ ಇದೆಯಾ?

ಹೌದು ನಾಕೈದು ಜನರ ಕುಟುಂಬುದ್ ಒಂದ್ ಕಕ್ಕಸ್ಸುಗುಂಡಿ ೧೦-೧೫ ವರ್ಷಕ್ಕೆ ತುಂಬುತ್ತಾ? ತುಂಬಿದ ಮೇಲೆ ಕರೆಕ್ಟಾಗಿ ನಾಕು ಕ್ವಿಂಟಾಲ್ ಸುಫಲಾದಷ್ಟು ಗೊಬ್ಬರಾ ಆಗ್ತದಾ? ನಾಕು ಕ್ವಿಂಟಾಲ್ ಸುಫಲಾ ಬೆಲೆಯೆಷ್ಟು? ಅಷ್ಟ್ ದುಡ್ಡನ್ನ ಸರಕಾರದೋರು ಯಾಕ್ ಕೊಡುಬಾರ್ದು ಅಡ್ವಾನ್ಸಾಗಿ? ನೀವು ಅದುನ್ನ ಸುಫಲಾ ಕಂಪನಿಗೆ ಹರಾಜಿಗೆ ಹಾಕಿ. ಅವ್ರು ಹರಾಜಿಗೆ ತೊಗೊಂಡೋಗಿ ಗುಳಿಗೆ ಮಾಡಿ ನಮಿಗೇ ಮಾರ್ಲಿ. ನಮ್ಮ ಪ್ರಗತಿಪರ ರೈತರಾದ ದೇವಂಗಿ ಪ್ರಫುಲ್ಲಚಂದ್ರ ಅವರು 'ಶಿವಮೊಗ್ಗಾ ಜಿಲ್ಲೆ ಪೂರ್ತಿ ಹರಾಜಿಗೆ ನಾ ಹಿಡಿತೀನಿ ಕಣಯ್ಯ. ನಂಗೊತ್ತು ಅದುನ್ ತಗೊಂಡೋಗಿ ಹ್ಯಂಗ್ ಗುಳಿಗಿ ಮಾಡ್ಬೇಕಂತೇಳಿ' ಅಂದ್ರು. ಹೌದೋ ಅಲ್ಲೋ ಕೇಳಿ ನೋಡ್ರಿ.

ಈಗ ಗ್ರಂಥಾಲಯ ಚಳುವಳಿ ಮಾಡ್ತಾ ಇದೀರಿ ಅಂತ ಕೇಳಿದೀನಿ. ಅದರ ಸ್ವರೂಪ ಏನು?

ಪ್ರತೀ ಗ್ರಾಮಕ್ಕೆ ಅಥವಾ ಒಂದು ಗ್ರಾಮಪಂಚಾಯ್ತಿ ಒಳಗೆ ಒಂದು ಲೈಬ್ರರಿ ಇರಬೇಕು ಅಂಬೋದು ಈ ಚಳುವಳಿಯ ತತ್ವ. ನಮ್ಮ ರಾಜ್ಯದಲ್ಲಿ ಒಟ್ಟು ೫೦೦೦ ಗ್ರಾಮ ಪಂಚಾಯ್ತಿ ಇದಾವೆ. ೫೦೦೦ ಗ್ರಾಮಪಂಚಾಯ್ತಿಗೆ ಒಂದೊಂದ್ ಲೈಬ್ರರಿ

ಕೊಟ್ರೆ, ೫ ಸಾವಿರ ಲೈಬ್ರರಿಗಳಾದ್ವು, ೫೦೦೦ ಪುಸ್ತಕ ಖರ್ಚಾಗ್ತವೆ. ನಿಮ್ಮ ಭಾಷೆ ಬೆಳೀತದೆ. ಓದೋರ್ ಸಂಖ್ಯೆ ಜಾಸ್ತಿಯಾಗ್ತದೆ. ಇವತ್ತು ಹಳ್ಳಿಗಳಲ್ಲಿ ಹೋಗಿ ನೋಡಿ. ಸುಮ್ನೆ ಕೂತಿರ್ತಾರೆ ಕೆಲ್ಸಿಲ್ದೆ. ಪೇಪರ್ ಗೀಪರ್ ಬಂದ್ರೆ ಅವ್ರು ಓದ್ಕೊಂಡ್ ಮಾಡ್ಕೊಂಡು ಒಂಚೂರ್ ಜೀವಂತವಾಗಿ ಇರ್ತಾರೆ.

ಕಾಲೇಜು ಓದಿ ಹೊರಗಡೆ ಕೆಲಸಾನೂ ಸಿಗದೆ, ಇತ್ತ ಮನೇಯೊಳಗೆ ಬೇಸಾಯದ ಕೆಲಸ ಮಾಡೋಕಾಗದೆ ಇರೋ ಒಂದು ತಲೆಮಾರೇ ಹಳ್ಳಿಗಳಲ್ಲಿ ಸೃಷ್ಟಿಯಾಗಿರಬೇಕು.

ನಿಜ. ಜಮೀನು ಸಾಕಷ್ಟಿಲ್ದೆನೆ ಒಂದು ಅದೊಂದು ವರ್ಗ ಸೃಷ್ಟಿಯಾಗಿಬಿಟ್ಟಿದೆ ಹಳ್ಳಿಗಳಲ್ಲಿ. ಅದಕ್ಕೆ ಈ ಕೈಗಾರಿಕೆ ವ್ಯಾಪಾರ ಈ ತರದವ್ ಏನಾರುನೂ ಹಚ್ಕೊಡಬೇಕು ಕಂಡ್ರಿ. ಎಷ್ಟ್ ಜನಕ್ಕೆ ಅಂತ್ಹೇಳಿ ಮಾಡ್ತೀರಿ? ಆದರೆ ನಾನು ನೋಡ್ದಂಗೆ ಹಂಗ್ ಓದ್ಕೊಂಡ್ ಬಂದವರೆಲ್ಲಾನೂ ತಮಗಿರಾ ಭೂಮೀಲಿ ತೃಪ್ತಿಯಿಂದ ಕೆಲ್ಸ ಮಾಡ್ಕೊಂಡಿರೋ ಹಂಗೆ ಕಾಣಸ್ತದಪ್ಪಾ.

ಶಾಮಣ್ಣಾ, ನೀವು "ಮನೆ ಮದ್ಯ" ಅಂತ ಒಂದು ಸಿದ್ಧಾಂತ ಥಿಯರಿ ಮಂಡಿಸಿದ್ರಿ ಅಂತ ಕೇಳಿದಿನೀ. ಏನದು?

ಹಿಂದೆ ದೇಸಾಯಿ ಕಮಿಶನ್ ಅಂತ ಕಳ್ಳಭಟ್ಟಿ ಕುಡದು ಜನ ಸತ್ರು ಅಂತ ವಿಚಾರಣೆ ಮಾಡೋಕೆ ನೇಮ್ಸಿದ್ರಲ್ಲ, ಅದು ಬಂದಾಗ ರೈತ್ ಸಂಘದ ಪರವಾಗಿ ಇಟ್ಟ ವಾದ ಅದು. ಎಲ್ಲಾ ತರದ ನಿಶೆ ಪದಾರ್ಥಗಳನ್ನ ಮೋಸಂಬಿ ಹಣ್ ಹಾಕಿ, ಕಿತ್ತಲೆಹಣ್ ಹಾಕಿ, ಗೇರ್ ಹಣ್ ಹಾಕಿ, ಬತ್ತದ ಮೊಳಕೆ ಹಾಕಿ, ಅಕ್ಕೀಬೋಜಾ ಅಂತ, ಮನೇಲೆ ತಯಾರ್ ಮಾಡಿದ್ದೆ. ಬತ್ತಾನ ಮೊಳಕೆ ಬರಿಸಿ ಕುಟ್ಟಿ ಮಾಡ್ತಾರೆ, ಗಂಜಿ ಥರಾ. ಇದನ್ನು ಎರಡು ಲೋಟ ಕುಡುದ್ರೆ ಊಟಾನೆ ಬ್ಯಾಡ. ಆಹಾರವೂ ಆಗ್ತದೆ. ಸ್ವಲ್ಪ ತಲೆಗೂ ಹತ್ತದೆ. ಇವೆಲ್ಲಾ ತಯಾರ್ ಮಾಡಿ 'ಸರ್ಕಾರದ್ದೇನು ನಮ್ದೇನು? ಅವ್ರಿಗೆ ಖರ್ಚ್ ಬರೋದೆಷ್ಟು, ನಮಿಗ್ ಖರ್ಚ್ ಬರೋದೆಷ್ಟು' ಅಂತ ದೇಸಾಯಿ ಕಮಿಶನ್ ಮುಂದೆ ಇಟ್ವಿ ನಾವು. "ಇದು ಒಂದ್ ಅಡಿಗೆ ಮನೆಯ ವ್ಯವಹಾರ. ಇದು ಒಂದ್ ಪಾನೀಯ ಇದು. ಇದನ್ ನೀವು ಟೆಂಡರ್ ಸಿಸ್ಟಮ್ ಮಾಡಿ ಹರಾಜು ಕೂಗಿ ಯಾಕ್ ಇವೆಲ್ಲ ಮಾಡ್ತೀರಿ? ಇಂಡಸ್ಟ್ರಿ ಮಾಡ್ಬೇಡಿ ನೀವು. ಅದರ ಪಾಡಿಗ್ ಅದುನ್ ಬಿಟ್ಬಿಡಿ. ಬೇಕಾದಾಗ ಮಾಡ್ಕೋತಾರೆ ಕುಡೀತಾರೆ. ಮಾರಾಟ ಆಗದಂಗೆ ಮಾತ್ರ ನೋಡ್ಕೋಬೇಕು ನೀವು. ಇದೇ ಕಳ್ಳಭಟ್ಟಿ ಪ್ರಕರಣಕ್ಕೇ ಮದ್ದೇ ಹೊರ್ತು, ನೀವು ಈಗಿನ ಸಿಸ್ಟಂನಲ್ಲಿ ನೋಡಿದ್ರೆ ಏನು ಮಾಡಿದ್ರೂ ರಿಪೇರಿ ಮಾಡಕ್ಕಾಗಲ್ಲ. ಇನ್ನೂ ವಿಕೋಪಕ್ಕೆ ಹೋಗುತ್ತೆ. ನೀವು ವರಮಾನ ಇಲ್ಲ ಸರ್ಕಾರಕ್ಕೆ ಅಂತ ಹೇಳೋದಿದೆಯಲ್ಲ ಅದು ತಪ್ಪು. ಅನೈತಿಕ ರೀತಿಯಿಂದ ಬರುವಂಥ ವರಮಾನವನ್ನ ಸರ್ಕಾರಿ ಖಜಾನೆ ವರಮಾನ ಅಂತ ಕರೀಬಾರದು ಯಾವಾಗ್ಲೂ. ಇದೆಲ್ಲ ರಾಜಾದಾಯ ಆಗೋದಂದ್ರೆ, ನಾಳೆ ಸೂಳೆಗಾರಿಕೆಯಿಂದ ಆದಾಯ ಬರಲಿ ಅಂತ ಮಾಡ್ತಿರಿ ನೀವು.

ಇದು ಸರಿ ಅಲ್ಲ. ಆದ್ದರಿಂದ ಮನೇಮದ್ಯ ಬೇಕಾದಾಗ ಮಾಡ್ಕೊಳೋದಕ್ಕೆ ಬಿಡೋದೇ ಉತ್ತಮವಾದ ಮಾರ್ಗ" ಅಂತ ಹೇಳಿದಿವಿ.

ವಾದ ಏನೋ ಚೆನ್ನಾಗಿದೆ. ಆದರೆ ಈ ಆಧುನಿಕ ಬದುಕಿನಲ್ಲಿ ಇದು ಸಾಧ್ಯ ಅಂತ ಅನಸುತ್ತಾ? ಮಲೆನಾಡಿನಲ್ಲಿ ಇದು ಸಾಧ್ಯ ಇರಬಹುದು. ಆದರೆ..

ಸಾಧ್ಯ, ನಮ್ಮ ಹಿಂದಿನೋರ್ ಬದುಕಿರ್ಲಿಲ್ವಾ ಹಂಗಾರೆ? ಈ ವಿಕೋಪಕ್ಕೆ ಹೋಗಿತ್ತಾ ಅವಾಗ? ಎಲ್ಲ ಏರಿಯಾಗಳಲ್ಲೂ ಸಾಧ್ಯ. ಇದನ್ನ ಸರಿಯಾಗಿ ಕೂತ್ಕೊಂಡ್ ವಿಚಾರ ಮಾಡಿ ಒಂದು ತೀರ್ಮಾನಕ್ ಬರ್ರಿ. ಯಾಕಂದ್ರೆ ಪ್ರಗತಿ ಅನ್ನೋದನ್ನ ನಾವು ಈಗ ಅದಿರೋ ದಾರಿಯಲ್ಲೇ ತಿಳ್ಕೊಂಡಾಗ ಬೇರೆ ಅರ್ಥ. ನಮಗೆ ಬೇಕಾದಂತೆ ತಿಳ್ಕೊಂಡಾಗ ಬೇರೆ ಅರ್ಥ.

ನೀವು ಮಲೆನಾಡಿನ ಅನೇಕ ಪರಿಸರ ಚಳುವಳಿಗಳಲ್ಲಿ ಇದೀರಿ. ಅಲ್ಲಿ ನಿಜವಾಗಲೂ ಏನಾಗ್ತಾ ಇದೆ?

ಸರಳವಾಗಿ ಹೇಳ್ಬೇಕು ಅಂದ್ರೆ ಒಂದ್ ಗಿಡ ನೆಡ್ತೀವಿ. ಮೂರು ಮಾಯ ಆಗ್ತಾ ಇವೆ. ಮೂರು ಮಗು ಹುಟ್ತವೆ. ಒಂದು ಮಗುವಿಗೆ ಮಾತ್ರ ಸಾಲ್ವೇಷನ್ ಅಂತ ನೀಡ್ತಾ ಇದೀರಿ ನೀವು. ಸರ್ಕಾರದಿಂದ ಕಾಡನ್ನ ನೀಲಗಿರಿ ಬೆಳೆಯೋಕೆ ಇಂಡಸ್ಟ್ರಿಗೆ ಕೊಡೋದು, ಟೂರಿಸಂಗೆ ಕೊಡೋದು, ಗಣಿಗಾರಿಕೆಗೆ ಕೊಡೋದು, ಇವೆಲ್ಲಾ ದೊಡ್ಡ ಹೊಡ್ತಾ ಕಂಡ್ರಿ.

ಕಾಫಿ ಎಸ್ಟೇಟ್‌ಗಳಿಗೆ ಕೊಡೋದು?

ಚಿಕ್ಕೋನಿದ್ದಾಗಿಂದ ನೋಡ್ದಂತೆ ಕಾಫಿ ಪ್ಲಾಂಟೇಶನ್ ಇದಾವಲ್ಲ, ಅಲ್ಲಿ ಪೂರ್ತಿ ಕಾಡು ನಾಶಾ ಆಗೋಲ್ಲ. ಕಾಫಿ ಬೆಳೀಬೇಕಾದ್ರೆ ಶೇಡ್ ಬೇಕೇಬೇಕು. ಅವರು ಅಷ್ಟೊಂದು ಹಾನಿ ಮಾಡಲ್ಲ...

ಆದರೂ ಸಾರ್ವಜನಿಕವಾಗಿದ್ದ ಕಾಡು ಖಾಸಗೀ ಆಸ್ತಿಯಾಗಿ ಬಿಡುತ್ತಲ್ವಾ ನೀವು ಹಳ್ಳೀಲಿ ಇರೋರು. ಆದ್ದರಿಂದ ಈ ಪ್ರಶ್ನೆ ಕೇಳ್ತೀದೀನಿ. ಈ ತಾಲೂಕು ಪಂಚಾಯಿತಿ ಜಿಲ್ಲಾ ಪಂಚಾಯಿತಿ ವ್ಯವಸ್ಥೆ ಬಂದಮೇಲೆ ಹಳ್ಳಿಗಳಲ್ಲಿ ಉಂಟಾಗಿರೋ ಬದಲಾವಣೆಗಳು ಎಂಥವು?

ಹೌದು, ಪ್ರೈವೇಟ್ ಪ್ರಾಪರ್ಟಿಯಾಗಿ ಬಿಡುತ್ತೆ. ಗೆದ್ದುಬಂದಂತಹ ಈ ಮಹಿಳೆಯರನ್ನ ಅಥವಾ ದಲಿತರನ್ನ ಕಂಡಾಗ, ಇವರು ಗೆದ್ದು ಬಂದಿದ್ರಿಂದ ಗಂಡಸರೂ ಮೇಲ್ಜಾತಿಯವರೂ ಹ್ಯಂಗ್ ಹೆದರತಾರೆ ನೋಡು ಅಂತ ಖುಶೀನೆ ಆಗ್ತದೆ. ಈ ಗೆಲವು ಸಿಂಬಾಲಿಕ್ಕಾಗಿದೆ. 'ನೋಡಪ್ಪಾ ಅವ್ರೂ ಎಲೆಕ್ಷನ್‌ಗೆ ನಿಂತು ನಾಳೆ ಗೆದ್ದು ಬರ್ತಾರೆ. ಅವರೇ ನಮಿಗೆಲ್ಲ ಜಮೀನ್ ಸ್ಯಾಂಕ್ಷನ್ ಮಾಡೋರಾಗ್ತಾರೆ' ಅನ್ನೋ ಒಂದ್ ಭಯ ಶೋಷಣೆ ಮಾಡಿದಂತಹ ಜನಕ್ಕೆ ಉಂಟಾಗಿದೆ. ಕೆಳವರ್ಗದವರಿಗೂ ಒಂದ್ ಆತ್ಮವಿಶ್ವಾಸ ಬಂದಿದೆ ಕೆಲವ್ ಕಡೆ. ಆದರೆ ಈ ಚುನಾವಣೆಯಲ್ಲಿ ವಂಚನೆ ಮಾಡಿ ಓಟು ತಗೋಳೋದಿದೆಯಲ್ಲ, ಸರಾಯಿ ಕುಡಿಸಿ ಇನ್ನೊಂದ್ ಮಾಡಿದ್ದಲ್ದೆ ನಾವು ಗೆಲ್ಲಕೇ ಆಗಲ್ಲ ಅನ್ನೋದಿದೆಯಲ್ಲಾ, ಅದನ್ನ ನೋಡ್ದಾಗ ದುಃಖ ಆಗುತ್ತೆ.

ಕಡಿಗೂ ಇವರನ್ನ ಗೆಲ್ಲೋರು ಸೋಲಸೋರು ಬೇರೆಯವರೆ. ಇವರತಾಗ್ ತಮ್ಮ ಕೆಲ್ಸಕಾರ್ಯ ಮಾಡ್ಸೋರು ಬೇರೆಯವರೆ. ಹಿಂಗಿದ್ದಾಗ ಹ್ಯಂಗ್ ಪರಿಪೂರ್ಣ ವ್ಯಕ್ತಿ ಆಗ್ತಾರೆ ಇವರು ಅನ್ನೋ ಗುಮಾನಿ ಇದೆ. ನನಗನಿಸುತ್ತೆ, ಇದರ ಜೊತ್ ಜೊತೆಗೇನೆ ಅವರಿಗೆ ಸಾಕಷ್ಟು ಲೀಡರ್‌ಶಿಪ್ ಟ್ರೈನಿಂಗೂ ಕೊಡಬೇಕು ಅಂತ.

ನೀವು ಸಮಾಜವಾದಿಗಳ ಭೂಹೋರಾಟವನ್ನ ನೋಡಿದೀರಿ. ದಲಿತ ಸಂಘರ್ಷ ಸಮಿತಿ ಭೂಹೋರಾಟವನ್ನ ನೋಡಿದೀರಿ. ಈಗ ನಕ್ಸಲೈಟರು ಮಾಡ್ತಾ ಇರೋ ಹೋರಾಟವನ್ನೂ ನೋಡ್ತಿದೀರಿ. ಯಾವುದು ಅರ್ಥಪೂರ್ಣವಾಗಿ ತೋರುತ್ತೆ?

ಒಳ್ಳೇ ಪ್ರಶ್ನೆ ಇದು. ಮಂಡಲ ಪಂಚಾಯತಿ ಲೈಬ್ರರಿಗಳ ಬಗ್ಗೆ ಒಂದು ಸೆಮಿನಾರಲ್ಲಿ ಮಾತಾಡ್ತಾ ಅಲ್ಲಿದ್ದ ಮಂತ್ರಿಗಳಿಗೆ ನಾನು ಹೇಳಿದ ಮೊದಲಮಾತೇ ಇದು. ಬೆಳಿಗ್ಗೆಯಿಂದ ಸಾಯಂಕಾಲದವರೆಗೆ ಲೈಬ್ರರಿ ಕೆಲಸ ಮಾಡೋರ್ಗೆ ಪಾರ್ಟ್‌ಟೈಂ ಜಾಬ್ ಅಂತ ೩೦೦-೫೦೦ ರೂಪಾಯಿ ಕೊಡ್ತೀರಿ. ಆದರೆ ಕಂಪ್ಯೂಟರ್ ಸೈನ್ಸ್ ಪಾಸಾದವರಿಗೆ ೫೦ ಸಾವಿರ ಕೊಡ್ತೀರಿ. ಈ ರೀತಿಯಾದ ಅಸಮಾನತೆ ನೀವಿಟ್ಟಿದ್ದೇ ಆದರೆ ಈ ಎರಡೂವರೆ ಸಾವಿರ ಜನ ಮಂಡಲ ಪಂಚಾಯತಿ ಲೈಬ್ರರಿ ಕೆಲಸಗಾರರು ನಕ್ಸಲೈಟ್ಸ್ ಆಗ್ತಾರೆ. ಅವರಿಗೆ ಬೇರೆ ಮಾರ್ಗಾನೇ ಇಲ್ಲ.

ಸರಿಪಡಸೋಕೆ ಆಗದ ಅಸಮಾನತೆಗಳೇ ನಕ್ಸಲಿಸಂಗೆ ಕಾರಣ..?

ಹೌದೌದು. ಕೆಲವು ಸಾರಿ ಸರಿಪಡ್ಸೋಕೆ ಆಗೋದಿಲ್ಲ. ಅಂಥ ಕಡೆ ಕ್ಷಮಿಸಬೌದು. ಸರಿಪಡ್ಸೋಕೆ ಸಾಧ್ಯ ಇದೆ ಅನ್ನೋ ಕಡೆ? ಈಗ ಪಿಡಬ್ಲ್ಯೂಡಿನಲ್ಲಿ ೪೦ ಪರ್ಸೆಂಟ್ ಲಂಚಕ್ಕೆ ಸೋರಿಹೋಗುತ್ತೆ. ಇನ್ನುಳಿದಿದ್ರಲ್ಲಿ ಕೆಲ್ಸ ಮಾಡಿಸ್ಬೇಕು. ಇದು ಎಲ್ಲರಿಗೆ ಗೊತ್ತಿರೋ ವಿಚಾರ. ಇದು ಗೊತ್ತಿದ್ರೂನು ಬಿಟ್ಕೊಂಡು ನಮಿಗ್ ಮಾತ್ರ ಉಪವಾಸ ಕೆಡುವತಾರಲ್ಲ ಇವರು ಅಂತೇಳಿ ಸಿಟ್ ಬರಲ್ವಾ? ಯಾರೂ ಸುಮ್ ಸುಮ್ನೆ ನಕ್ಸಲೈಟ್ ಆಗಲ್ಲ. ಅದರ ಹಿಂದೆ ಒಂದ್ ಸಿದ್ಧಾಂತ ಇದ್ದೇ ಇರುತ್ತೆ. ಅಸಮಾನತೆ ಹಿಂಗೆ ಮುಂದುವರಿದ್ರೆ ಇದು ಸಹಿಸಲಾರದ ಹಿಂಸೆಗೆ ದಾರಿ ಮಾಡಿಕೊಡ್ತದೆ ಅಂತನಿಸ್ತದೆ ನನಗೆ.

ಅನೇಕ ಥರದ ಚಳುವಳಿಗಳನ್ನು ಕಲ್ಪಿಸಿಕೊಳ್ಳೋಕೆ ಮತ್ತು ಹಮ್ಮಿಕೊಳ್ಳೋಕೆ ನಿಮಗೆ ಏನು ಪ್ರೇರಣೆ? ರೈತಸಂಘ? ನಂಜುಂಡಸ್ವಾಮಿ?

ನಂಜುಂಡಸ್ವಾಮೀನ? ಅವರನ್ನ ನಾವೇ ನಮ್ ಚಳುವಳಿಗಳಿಗೆ ಹೋಗಿ ಕರಕೊಂಡ್ ಬಂದಿದ್ದು. ನಮಗೆಲ್ಲ ನಿಜವಾಗ್ಲೂ ಈ ಸೋಶಿಯಲಿಸ್ಟ್ ಮೂವ್‌ಮೆಂಟೇ ಕಾರಣ. ಶಿವಮೊಗ್ಗ ಜಿಲ್ಲೆಯೊಳಗೆ ಈಗ್ಲೂನೂ ಸಾವಿರಾರ್ ಜನಕ್ಕೆ ಇನ್‌ಸ್ಪೈರ್ ಮಾಡೋ ಅಂಡರ್ ಕರೆಂಟ್ ಇದ್ದೇ ಇದೆ ನೋಡಿ.

ರುದ್ರಪ್ಪ, ಸುಂದರೇಶ್...

ಇವರೆಲ್ಲ... ಈ ಕರೆಂಟಿನ ಫಲವೇ! ರುದ್ರಪ್ಪನೋರನ್ನೂ ನಾವೇ ಹೋಗ್ ಕರಕೊಂಡ್ ಬಂದಿದ್ದು. ಸುಂದರೇಶ್‌ನೂ ನಾವಾಗಿ ಎಳ್ಕೊಂಡ್ ಬಂದಿದ್ದು. ದಕ್ಷಿಣ ಭಾರತದ ಸಣ್ಣ ಬೆಳೆಗಾರರ ಒಕ್ಕೂಟ ಅಂತ್ಹೇಳಿ, ನಾನು, ತೇಜಸ್ವಿ ಎಲ್ಲಾ ನಡಿಸ್ತಾ ಇರಬೇಕಾದ್ರೆ, ಸುಂದರೇಶ್ ಬರತಾನೇ ಇರಲಿಲ್ಲ. ಅವರನ್ನ ಕರಕೊಂಬಂದು 'ಈ ಲೆವಿ ಚೀಟಿ ಸುಡ್ರಿ ಸುಂದರೇಶ್ ಇವತ್ತು' ಅಂತ್ಹೇಳಿ ನೂರಾರು ಲೆವಿ ಚೀಟಿ ಅವರ ಕೈಲಿ ಸುಡ್ಸಿದಿವಿ. ಆ ಬೆಂಕಿ ನೋಡಿದ್ಮೇಲೆ ರೈತ ಚಳುವಳಿಗೆ ಬಂದಿದ್ದು ಅವ್ರು. ಲೆವಿ ಗೇಟ್ ಮುರಿಯೋದು ಇಂತವೆಲ್ಲ ಹೋರಾಟ ಮಾಡಿದ್ವಿ. ಆಮೇಲೇನೇ ರೈತಸಂಘದ ಕಾರ್ಯಕ್ರಮಗಳು ಶುರುವಾಗಿದ್ದು.

ಕಾಗೋಡು ಸತ್ಯಾಗ್ರಹದಲ್ಲಿ ಕಾಣಿಸಿಕೊಂಡಿದ್ದ ಸಮಾಜವಾದಿ ಚೈತನ್ಯ ಮತ್ತೆ ಕಾಣಿಸಿಕೊಂಡಿದ್ದು ಈ ರೈತ ಚಳುವಳಿಯಲ್ಲಿ ಅನ್ಸುತ್ತಾ?

ಖಂಡಿತಾ ಹೌದು. ಮತ್ತೆ ಸಮಾಜವಾದಿ ಚಳುವಳೀನ ಇನ್ನೂ ಶಕ್ತಿಯುತವಾಗಿ ನಡ್ಸೋಕೆ ಸಾಧ್ಯವಾಗ್ತಾ ಇದೆ ಅಂತಾನೇ ಅನಿಸ್ತಿತ್ತು ನಮಿಗೆ.

ಆದರೆ ಕಾಗೋಡು ಸತ್ಯಾಗ್ರಹ ಗೇಣಿ ರೈತರ ಕೇಂದ್ರದಲ್ಲಿದ್ದಂತೆ, ಈ ರೈತ ಚಳುವಳಿ ಆಗಲಿಲ್ಲ. ಇದು ದೊಡ್ಡ ರೈತರ ಚಳುವಳಿ.

ಹ್ಞೂ, (ನಿಟ್ಟುಸಿರು ಬಿಡುತ್ತಾ) ನಿಜ ನಿಜ. ನಮ್ಮ ಗ್ರಹಚಾರಕ್ಕೆ ಎಲ್ಲಾ ಅವರೇ ಸೇರಕೊಂಡ್ರು. ಯಾಕಂದ್ರೆ ಲಾಭ ಮಾಡ್ಕೋಬೇಕಾಗಿತ್ತು. ಹೋರಾಟದಲ್ಲಿ ಇದೆಲ್ಲ ಇದ್ದದ್ದೇ. ಸಾಲಮನ್ನಾ, ವೈಜ್ಞಾನಿಕವಾದ ಬೆಲೆ ನೀತಿ ಇವೆಲ್ಲವೂ ಹೌದು. ಜತೆಜತೆಗೆ ಕೃಷಿಕಾರ್ಮಿಕರಿಗೆ ನ್ಯಾಯವಾದ ವೇತನ, ಅವರಿಗೂ ಜಮೀನ್ ಕೊಡಬೇಕು ಅನ್ನೋ ಹೋರಾಟಾನ, ಸೋಶಿಯಲಿಸ್ಟ್ ಪಾರ್ಟಿ ಮಾಡಿದಷ್ಟು ಪ್ರಾಮಾಣಿಕವಾಗಿ ನಾವು ಮಾಡ್ಲಿಲ್ಲ. ಆದ್ದರಿಂದ ದೊಡ್ಡ ಭೂಮಾಲಿಕರು ಇಲ್ಲಿ ಹೆಚ್ಚಿದ್ದಾರೆ ಅನ್ನೋ ಮಾತು ಇದೆಯಲ್ಲಾ, ಸತ್ಯ ಅದು. ನಮಗೆ ಇದು ಅನಿಸ್ತಾನೇ ಇತ್ತು. ಏನಾಯ್ತು ಅಂತ್ಹೇಳಿದ್ರೆ, ಜನಾನ್ ತಗೊಂಡು ಹೋಗೋಕೆ ಒಂದೋ ಒಕ್ಕಲಿಗರು ಇಲ್ಲಾ ಲಿಂಗಾಯತರು ಬಿಟ್ರೆ ಬೇರೆ ಯಾರೂ ಇಲ್ಲ. ಬೇರೆಯವರು ನಮ್ಮ ಜತೆ ಬರಲೇ ಇಲ್ಲ ಕಂಡ್ರಿ.

ದಲಿತ ಸಂಘರ್ಷ ಸಮಿತಿ ಜತೇನೂ ಯಾವುದೇ ಸಂಬಂಧ ಆಗಲಿಲ್ಲ.

ಊಹೂಂ.. ಪ್ರತಿಯೊಂದು ಊರಲ್ಲೂನೂ ಕೃಷಿ ಕಾರ್ಮಿಕರು ಇವರೆಲ್ಲ ಯಾರ್ಹೇಳಿ? ದಲಿತ್ರು ಹೌದಾ? ಅದೆಂಗ್ ಬರತಾರೆ ನಮ್ ಜತಿಗ್ ಅವ್ರು? ಅದಿಕ್ಕೇ ಹೇಳಿದ್ದು ಆಯಾ ವರ್ಗದಿಂದಲೇ ಲೀಡರ್ಸ್‌ಗಳನ್ನ ತಗೋಬೇಕು ನಾವು ಅಂತ. ರೈತ ಸಂಘದ ಅಧ್ಯಕ್ಷರು, ಕಾರ್ಯದರ್ಶಿ ಎಲ್ಲಾ ದಲಿತರನ್ನ ತಗೋಬೇಕು. ಒಬ್ಬ ಮುಸ್ಲಿಂನ ತಗೋಬೇಕು.. ಇವೆಲ್ಲ ನಮ್ಮಲ್ಲಿ ಇಲ್ವೇ ಇಲ್ಲ.

ಅಲ್ಲಾ ಮುಖಂಡರು ಯಾವ ಜಾತಿಯವರು ಅನ್ನೋದಕ್ಕಿಂತ ಮುಖ್ಯವಾದದ್ದು, ಒಟ್ಟು ಸಂಘದ ಅಜೆಂಡಾನೇ.

ಅಜೆಂಡಾನ ಅವರನ್ನಿಟ್ಕೊಂಡೇ ಡಿಸೈನ್ ಮಾಡಬೇಕು. ನಿಜಸ್ಥಿತಿ ಹೇಳಬೇಕು ಅಂದ್ರೆ, ರೈತಸಂಘ ಗ್ರಾಮಾಂತರ ಪ್ರದೇಶದ ರೈತ ಕೂಲಿಕಾರರಿಂದ ಹುಟ್ಲೇ ಇಲ್ಲ. ಅಲ್ಲಿನ ಕಬ್ಬು ಬೆಳೆಗಾರರ ಸಂಘಗಳೇ ರೈತಸಂಘ ಆದವು. ನೋಡಿ, ಅದೇ ಆಗಿರೋದು ತಪ್ಪು. ಎಲ್ಲೆಲ್ಲಿ ಶುಗರ್ ಫ್ಯಾಕ್ಟರಿಗಳು ಇದಾವೊ, ಎಲ್ಲೆಲ್ಲಿ ಕಬ್ಬು ಬೆಳೀತಿದಾರೊ ಅಲ್ಲಿ ಮಾತ್ರ ಇವತ್ತಿಗೂ ರೈತಸಂಘಗಳಿರೋದು. ಮಂಡ್ಯ, ಶಿವಮೊಗ್ಗ ಬೆಳಗಾವಿ. ಬೇರೆ ಬೆಳೆಗಳ ಜನ ಸೇರಲೇ ಇಲ್ಲ. ಎಲ್ಲೋ ಒಂದು ಚೂರ್‌ಚೂರು ಅಲ್ಲಲ್ಲಿ ಸೇರಿರಬಹುದು ಅಷ್ಟೇನೆ. ಅದಕ್ಕೆ ಪ್ರತೀಸಾರಿ ನಾನು ಹೇಳೋದು, ಒಂದ್ ಸಾರಿ ಇದನ್ನ ಡಿಸಾಲ್ವ್ ಮಾಡಿ ನಾವು ಹೊಸ ಮ್ಯಾನಿಫೆಸ್ಟೊ ಬರೀಬೇಕು ಅಂತ. ಅಧ್ಯಕ್ಷರನ್ನ ಮೊದಲು ದಲಿತರನ್ನ ಇಟ್ಕೋಬೇಕು. ಮುಸ್ಲಿಮರು, ಅವರನಾ ಇವರನಾ ಪದಾಧಿಕಾರಿಗಳನ್ನ ಮಾಡಬೇಕು. ಮಾಡ್ಕೊಂಡು ಅವರ ಹಿಂದೆ ನಾವು ಕೂತ್ಕೊಂಡು ರೈತಸಂಘ ಮ್ಯಾನಿಫೆಸ್ಟೊ ರೆಡಿಯಾಗ್ಬೇಕು. ಆಮೇಲೆ ಹೋರಾಟ.

ಇದ್ಯಾಕೆ ಸಾಧ್ಯವಾಗಲಿಲ್ಲ ಶಾಮಣ್ಣಾ?

ನಂಜುಂಡ್‌ಸ್ವಾಮಿ ಹೇಳೋದೇನು ಅಂದ್ರೆ 'ಅದು ನಾಟಕ ಆಗ್ತದೆ. ಪ್ರಾಮಾಣಿಕವಾಗಿ ಅನಿಸಿದ್ರೆ ಅವರೇ ಬಂದ್ ಸೇರಕೋಬೇಕು ಅಂತ'. ಆದರೆ ಅವರು ಹ್ಯಂಗ್ ಬಂದು ಸೇರತಾರೆ? ಊರಲ್ಲಿ ಶೋಷಣೆ ಮಾಡೋ ಒಬ್ಬ ವ್ಯಕ್ತೀನೇ ಇದರ ಮುಖಂಡ ಆಗಿದ್ದಾಗ ಅವರು ಬರತಾರೇನ್ರಿ? ಅವರ್‍ಯಾಕ್ ಬರತಾರೆ? ಗುಮಾನಿಯಿಂದಾನೆ ನೋಡ್ತಾರೆ. ಇದು ನಂಜುಂಡಸ್ವಾಮಿಗೆ ಅರ್ಥವಾಗಲ್ಲ. ಯಾಕಂದ್ರೆ ಅವರು ಹಳ್ಳೀಲಿ ಬೆಳೀಲೇ ಇಲ್ಲ. ಹಳ್ಳಿ ಗೊತ್ತಿಲ್ಲ ಅವ್ರಿಗೆ.

ಈಗ ಎರಡನೇ ಸಲ ರೈತಸಂಘ ಒಡೆದಿದೆ... ಎರಡೂ ಸಲ ಒಡೆಯೋದಕ್ಕೆ ಕಾರಣ ಎಲ್ಲಿದೆ? ಅದರ ವರ್ಗ ಸ್ವರೂಪದಲ್ಲಿ..?

(ತೀಕ್ಷ್ಣವಾದ ದನಿಯಲ್ಲಿ) ಏನಿಲ್ಲಾ. ಎಲ್ಲಾ ವ್ಯಕ್ತಿಗತವಾಗಿ ತೆವಲುಗಳು. ಈಗ ಒಡದಿರೋದಕ್ಕೂ ನಂಜುಂಡಸ್ವಾಮಿಯವರ ತೆವುಲುಗಳೇ ಕಾರಣ; ಬಸವರಾಜ್, ಪುಟ್ಟಣ್ಣಯ್ಯ, ನಂಜುಂಡಸ್ವಾಮಿ ಈ ಮೂರು ಜನರ ಮಧ್ಯ ನಡೆದಂಥಾ ಭಿನ್ನಾಭಿಪ್ರಾಯಗಳೇ. ಮೊದಲನೇ ಸಲ ಒಡೆದಿದ್ದಕ್ಕೆ ಕಾರಣ ನಂಜುಂಡಸ್ವಾಮಿಗೂ ಬಾಬಾಗೌಡರಿಗೂ ನಡೆದಂತಹ ಪರ್ಸನಲ್ ಜಗಳ ಅಷ್ಟೆ.

ರೈತಸಂಘದ ಕಾರ್ಯಕ್ರಮಗಳಿಗೆ ನಂಜುಂಡಸ್ವಾಮಿಯವರು ಸಾಮ್ರಾಜ್ಯಶಾಹಿ ವಿರೋಧಿ ಹೋರಾಟದ ಆಯಾಮ ಕೊಡ್ತಾ ಇದ್ರು.

ನಿಜ. ಯಾರಿಲ್ಲ ಅಂತ್ಹೇಳ್ತಾರೆ. ಆದರೆ, ನಿಜವಾದ ರೈತಸಂಘ ಕಟ್ಟೋಕೆ ನಮ್ಗೆ ಇನ್ನೂ ಯಾಕಾಗಿಲ್ಲ? ಇದಾಗದೆ ಸಾಮ್ರಾಜ್ಯಶಾಹಿ ವಿರುದ್ಧ ಹೋರಾಟ ತಗೊಂಡು ಹೋಗ್ತಾ ಇರೋದಿದೆಯಲ್ಲ, ಅದು ಗಿಮಿಕ್ಸ್ ಆಗಿಬಿಡ್ತದೆ. ಅದಕ್ಕಿಂತ ಹೆಚ್ಚು ಇಲ್ಲಿ ನಡೀಬೇಕಾಗಿತ್ತು. ಇಲ್ಲೀದನ್ನ ಕಂಪ್ಲೀಟಾಗಿ ಬಿಟ್ ಬಿಡ್ತಾರವ್ರು. ಅದನ್ ಬಿಟ್ಟು ಪಬ್ಲಿಸಿಟಿ

ಸಿಗುತ್ತಲ್ಲ ಅದನ್ನ ಮಾತ್ರ ಅವರು ಮಾಡೋದು. ಚುನಾವಣೆ ಬ್ಯಾಡ ರೈತಸಂಘಕ್ಕೆ ಅಂದಿವಿ. ಏನು ಹೇಳಿದ್ರೂನೂ ಕೇಳಲಿಲ್ಲ. ಚುನಾವಣೆ ಬೇಕು ಅಂತ ಹೋಗಿ ಕಷ್ಟಾಪಟ್ಟು ಸಂಪಾದಿಸಿದ ಎನರ್ಜಿನೆಲ್ಲ ಹಾಳ್ ಮಾಡಿದರು.

ರೈತಸಂಘ ಹೋಳಾಗೋದರಲ್ಲಿ ಶಕ್ತಿರಾಜಕಾರಣದ ಪಾತ್ರ ಇದೆಯಾ?

ಪಾತ್ರ ಇದೆ. ಯಾಕಿಲ್ಲ? ಇದೆಲ್ಲ ಇಲ್ದೇನೆ ನಾವು ಹೋರಾಟ ಮಾಡ್ತಿದ್ರೆ ನಮ್ ಸಂಘಟನೇನ ಚಳುವಳಿಯಾಗಿ ಇನ್ನೂ ಚೆನ್ನಾಗಿ ಬೆಳಸಬಹುದಾಗಿತ್ತು. ಇಲ್ಲಿ ಹೋರಾಟ ಮಾಡದೆ ಪ್ರಾಮಾಣಿಕವಾಗಿ ನೀವು ಉಳಿಯೋಕೆ ಸಾಧ್ಯಾನೇ ಇಲ್ಲ. ಇಲ್ಲದಿದ್ದರೆ ಎಲ್ಲ ಕರಪ್ಷನ್‌ಗಳನ್ನ ಮಾಡಬೇಕಾಗ್ತದೆ.

ಯಾವುದೇ ಚಳುವಳಿ ಚುನಾವಣಾ ರಾಜಕೀಯಕ್ಕೆ ಇಳಿದರೆ ಅದು ಚಳುವಳಿಯಾಗಿ ಇರೋಕೆ ಸಾಧ್ಯವಿಲ್ಲ. ಆದರೆ ಬರೀ ಚಳುವಳಿಯಾಗಿದ್ರೆ ಪವರ್ ಸಿಗೋಲ್ಲ ಅನ್ನೋ ತರಹ ಇದೆಯಾ? ದಲಿತ ಸಂಘರ್ಷ ಸಮಿತಿಗೂ ...

ಇಲ್ಲಿ ಪವರ್ ಇಲ್ದೆ ಏನೂ ಮಾಡೋಕಾಗಲ್ಲ ಅನ್ನೋದು ಒಂದು ನಿಜ ಇರಬಹುದು. ಆದರೆ ಇಷ್ಟು ವರ್ಷದ ಅನುಭವದಂತೆ ಪ್ರಾಮಾಣಿಕವಾದ ಚುನಾವಣೆ ನಡೆಸೋಕೆ ನಮಗೆ ಆಗದೇ ಇರೋದ್ರಿಂದ, ನಮಗೆ ಹೋರಾಟಾನೇ ಅನಿವಾರ್ಯ. ಅದನ್ನ ಬಿಟ್ರೆ ಕಳ್ಕೊಂಬುಡ್ತಿವಿ ನಾವು. ಇದೇನೆ ಆಗಿದ್ದು. ಯಾರು ಚುನಾವಣೆಗೆ ಇಳುದ್ರೂನೂ ಗೆಲ್ಲೋಕೆ ಈ ಭ್ರಷ್ಟಾಚಾರ ಮಾಡಲೇಬೇಕಲ್ಲ? ಹಂಗಂದ್ಮೇಲೆ ನಿಮ್ ವಿಶ್ವಾಸ ಹೋಯ್ತು ಜನರಲ್ಲಿ.

ಮುಂದೆ ರೈತಸಂಘದ ದಿಕ್ಕು ಯಾವುದು?

ಸದ್ಯಕ್ಕೆ ರೈತಸಂಘದ ಸ್ಥಿತಿ ಏನಂದ್ರೆ ಎರಡು ಹೋಳಾಗಿರೋದು. ಏನಾರ ಮಾಡಿ ನಾವು ಮತ್ತೆ ಅದುನ್ ಸರಿಮಾಡ್ಕೋಬೇಕು. ಸರಿಮಾಡ್ಕೊಂಡು ಚುನಾವಣೆಗೆ ಇಳೀದಿದ್ದ ಹಾಗೆ ಕೆಲ್ಸ ಮಾಡ್ಬೇಕು.

ಜಾಗತೀಕರಣದ ಪರಿಣಾಮಗಳು ಬಿರುಸಾಗ್ತಾ ಇರೋ ಈ ದಿನಗಳಲ್ಲೇ ಚಳುವಳಿಗಳು ದುರ್ಬಲ ಆಗ್ತಾಯಿವೆ. ಛಿದ್ರ ಆಗ್ತಾಯಿವೆ. ಮುಂದಿನ ದಿನಗಳಲ್ಲಿ ರೈತರ ಮೇಲೆ ಈ ಎರಡೂ ಬೆಳವಣಿಗೆಗಳು ಯಾವ ಪರಿಣಾಮ ತರಬಹುದು?

ಮೊನ್ನೆ ತೇಜಸ್ವಿ ಹೇಳ್ತಾ ಇದ್ರು. 'ರೈತಸಂಘ ರೈತಸಂಘ ಅಂತೀದೀರಿ ನೀವು. ಎಲ್ಲಿದ್ದಾರೆ ರೈತರು? ಹಳ್ಳೀಲಿ ರೈತರು ಎಲ್ಲಿ ಉಳಿತಾರೆ? ಇಡೀ ಪ್ಯಾಟರ್ನೆ ಬದಲಾವಣೆ ಆಗ್ತಾ ಇದೆ. ನಿಮಗೇನಾರ ತಲೆಗಿಲೆ ನೆಟ್ಟಗೆ ಇದೆಯೇನ್ರಿ?' ಅಂತ. ಅವರು ಹೇಳಿದ ಮೇಲೆ ಯೋಚ್ನೆ ಮಾಡಿ ನೋಡಿದ್ರೆ, ಈಗ ಕೂಲಿಬೆಲೆ ದಿನಾ ಜಾಸ್ತಿಯಾಗ್ತಾಯಿದೆ. ಅದಾಗ್ಲೇಬೇಕು. ಹಾರ್ವೆಸ್ಟ್ ಮಿಶನ್ ಬಂದ್ರೆ ಜನರ ಕೈಗೆ ಕೆಲ್ಸ ಸಿಗೋದಿಲ್ಲ ಅಂತ ನಾವು ಹಿಂದೆ ಚಳುವಳಿ ಮಾಡ್ತಾ ಇದ್ವಿ. ಮೆಕನೈಸ್ಡ್ ಕಲ್ಟಿವೇಶನ್ನು ಎಲ್ಲೆಲ್ಲಿ ಆಗಿದೆಯೋ ಅಲ್ಲೆಲ್ಲ ಕೈಗೆ ಕೆಲ್ಸ ಇಲ್ದಂಗೆ ಆಗಿರೋವಂಥದ್ದನ್ನ ನೋಡಿದ್ದೀವಿ ನಾವು. ಈಗ

ನೋಡಿದ್ರೆ ಹಾರ್ವೆಸ್ಟ್ ಮಾಡೋಕೆ ಜನಾ ಇಲ್ದೆ ಬತ್ತ ಉದುರಿ ಹೋಗ್ತಿದೆ! ವಿಪರ್ಯಾಸ ಅಂದ್ರೆ, ನೀವು ಬೇಕು ಅನ್ನಂಗಿಲ್ಲ ಬ್ಯಾಡ ಅನ್ನಂಗಿಲ್ಲ. ಪರಿಸ್ಥಿತಿ ನೋಡಿದ್ರೆ ಮಿಶನ್ನು ಅನಿವಾರ್ಯ ಆಗ್ಬಿಟ್ಟಿದೆಯಪ್ಪ. ಹಂಗಾಗಿ ಹಳ್ಳಿ ಒಳಗಡೆ ನಾನು ಮಾಡಿದಂತಹ ಸರ್ವೇ ಪ್ರಕಾರ ಏನಾಗಿದೆ ಅಂದ್ರೆ, ಒಂದು ಗೂಡಂಗಡಿ ಇಟ್ಕೊಂಡವನು 'ನಾ ರೈತ ಅಲ್ಲ, ನಾ ರೈತಸಂಘಕ್ಕೆ ಬರಲ್ಲಾ' ಅಂತಾನೆ. 'ಕೃಷಿಕಾರ್ಮಿಕ ನಾನಲ್ಲ' ಅಂತ್ಹೇಳ್ತಾನೆ. ರೈತ ಯಾರಪ್ಪ ಅಂತೇಳಿದ್ರೆ ಭೂಮಿ ಇದ್ದಂವ ಮಾತ್ರ. ಇವರು ನಿಮಗೊಂದ್ ೩೦ಪರ್ಸೆಂಟ್ ಸಿಗ್ತಾರೆ. ಇನ್ನುಳಿದವರು ಯಾರೂ ರೈತಸಂಘಕ್ಕೆ ಸೇರೋಕೆ ಸಾಧ್ಯವೇ ಇಲ್ಲ. ಜನರೇ ಇಲ್ಲದೆ ಸಂಘಟನೆ ಏನ್ಮಾಡ್ತೀರಿ?

ಬೇವು, ಅರಿಸಿಣ, ತುಳಸಿ ಇವುಗಳ ಪೇಟೆಂಟ್ ವಿರುದ್ಧ ರೈತಸಂಘದ ವಿರೋಧ ಇದೆ. ಜಾಗತೀಕರಣದಿಂದ ರೈತರ ಮೇಲೆ ನಿಜವಾಗಿಯೂ ಎಂಥಾ ಪರಿಣಾಮ ಆಗ್ತಿದೆ?

ನಮಗೆ ಅನಿಸ್ತಾ ಇರೋದು ಇಷ್ಟೇನೆ. ನಿಮ್ಮನೆ ಭತ್ತಾನೊ, ಜೋಳಾನೊ ಬೀಜಕ್ಕೆ ನಾನು ನಿಮ್ಮತ್ರ ಇಸ್ಕೊಂತಿದ್ದೆ. ನನ್ ಹತ್ರ ನೀವ್ ಇಸ್ಕೊಂತಾಯಿದ್ರಿ. ಪ್ರತಿಯೊಬ್ಬ ರೈತರೂ ಬೀಜಾನ ಮನೆಯಲ್ಲಿ ಹಿಡಿದಿಡ್ತಾ ಇದ್ರು. ಈಗೇನಾಗಿದೆ? ಒಬ್ಬನೇ ಒಬ್ಬ ರೈತ ಬೀಜಾನ ಹಿಡಿದಿಡೋದು ಇದೆಯಾ? ಅವರು ಕೊಡೋ ಬೀಜ ಉತ್ತಮ ಇಲ್ಲ ಅಂದಾಗ ಸಾರಾಸಗಟ್ ನಾವು ಹಾಳಾಗಿ ಹೋಗ್ತೀವಿ. ಈ ಪೇಟೆಂಟ್ ವ್ಯವಹಾರಾನೂ ಹಂಗೆ ಆಗ್ತದೆ. ಇದುನ್ ನಾವೀಗ ಬಳಸ್ತಾ ಇದೀವಿ ಹೌದಾ? ನಿಧಾನಕ್ಕೆ ಅವ್ರೇ ಎಲ್ಲ ಸಪ್ಲೇ ಮಾಡೋಕೆ ಶುರುಮಾಡ್ತಾರೆ ನಾಳೆ. ಸಿದ್ಧವಸ್ತುಗಳನ್ನ ಅವರು ಕೊಡೋಕ್ ಶುರುಮಾಡ್ತಾರೆ. ಆಗ ನಾವು ನಮ್ಮ ಬೆಳೆಗಳ ಕಡೆ ನಿಗಾ ಬಿಟ್ ಬಿಡ್ತೀವಿ. ಆಮೇಲೆ ಇದು ನಮ್ದು ಅಂತ ಹೇಳ್ತಾರೆ. ಆಗ ಸಹಜವಾಗಿ ಬೆಳ್ದಿರೋ ಬೀಜವೆಲ್ಲ ಹೋಗಿಬಿಡ್ತಾವೆ. ಈಗ ಅವಿಲ್ವೇ ಇಲ್ಲ. ಯಾಕಂತಂದ್ರೆ, ಅವ್ರು ಕೊಟ್ಟದ್ದನ್ನ ತಂದ್ ಅಭ್ಯಾಸವಾಗಿದೆ ನಮಗೆ. ಮೊದಲು ಎಲ್ಲದ್ನು ಕೊಟ್ಟಂಗ್ ಮಾಡಿದ್ರು. ಆಮೇಲೆ ಬರ್‌ಬರತಾ ಅವರಿಗ್ ಬೇಕಾದ್ನೆ ಕೊಡಂಗ್ ಮಾಡಿದ್ರು. ಈಗ ನೋಡಿ ಈ ಮುಸ್ಕಿನಜೋಳ ಇದೆಯಲ್ಲ ಇವನ್ನೆ ಯಾಕ್ ಬೆಳಿಸ್ಕೊಂಡ್ ಹೋಗ್ತಿದಾರೆ? ಅವರಿಗೆ ಅದು ಬೇಕಾಗಿದೆ. ತಿನ್ನೋ ಜೋಳದ ತಳೀಗಳೇ ಇಲ್ಲಾರಿ ಇವತ್ತು! ವಾಣಿಜ್ಯ ಬೆಳೆ ವಾಣಿಜ್ಯ ಬೆಳೆ ಅಂತ ಹೇಳ್ತಾರೆ ಅಷ್ಟೇ ಹೊರತು, ನಿಜವಾಗ್ಲೂ ಅದು ಲಾಭದಾಯಕ ಅಲ್ಲ. ಹಿಂದೆ ಏನಾಗಿತ್ತು? ರೈತರು ಒಂದೇ ಬೆಳೆ ಬೆಳೀತಿರ್ಲಿಲ್ಲ. ಭತ್ತ, ರಾಗಿ, ಜೋಳ, ನವಣೆ ತಮ್ಮ ಕುಟುಂಬಕ್ ಬೇಕಾದ್ದು ಎಲ್ಲಾನೂ ಬೆಳ್ಕೋತಿದ್ದರು. ಮಾರಾಟ ಆಗ್ದೇ ಇದ್ರೂನು ತಿನ್ನೋದಕಾದ್ರು ಸಮೃದ್ಧಿಯಾಗಿ ಸಿಗತಿತ್ತು. ಈಗ ತಾನು ಬೆಳ್ದಿದ್ದನ್ನು ತಿನ್ನೋಕೆ ಆಗೋದಿಲ್ಲ. ಮಾರಬೇಕು. ಬಂದ ರೊಕ್ಕದಲ್ಲಿ ತಿನ್ನೋದನ್ನ ಕೊಂಡ್ಕೋಬೇಕು. ನೋಡ್ತಿರಿ, ಲಾಭದಾಯಕ ಬೆಲೆ ಸಿಗ್ತದೆ ಅಂತ ತಿಳ್ಕೊಂಡೋರೆಲ್ಲ ದಿವಾಳಿ ಆಗೋಯ್ತರೆ. ಇದರಲ್ಲಿ ಸಣ್ಣ ರೈತರಂತೂ ಉಳಿಯೋದೇ ಇಲ್ಲ.

ರೈತ ಚಳುವಳಿಗೆ ಈ ಹೊತ್ತು ಜಗತ್ತಿನ ರೈತರ ಸಂಪರ್ಕ ಬೇಕು, ಅದಕ್ಕೆ ಅಂತಾರಾಷ್ಟ್ರೀಯ ಆಯಾಮ ಬೇಕು ಅಂತ ನಂಜುಂಡಸ್ವಾಮಿಯವರು ಹೇಳ್ತಾರೆ.

ನಾವ್ ಹೇಳೋದು ಅಂತಾರಾಷ್ಟ್ರೀಯ ಆಯಾಮ ಮುಖ್ಯವೇ. ಆದ್ರೆ ಅದಕ್ಕೆ ಎಷ್ಟ್ ಗಮನ ಕೊಡ್ಬೇಕೋ ಅಷ್ಟ್ ಕೊಡ್ಬೇಕು. ಅದಬಿಟ್ಟು 'ಫಾರಿನ್ನಿಗೆ ೫೦೦ ಜನ ಕರಕೊಂಡು ಹೋದೆ, ೧೦೦೦ ಜನ ಕರಕೊಂಡ್ ಹೋದೆ' ಅಂದ್ರೆ? ಅದಕ್ಕೇ ನಮ್ ಶಕ್ತಿ ಪೂರಾ! ಇಲ್ಲಿ ಗ್ರಾಮಮಟ್ಟದಲ್ಲಿ ಸಂಘಟನೆಯಿಲ್ಲ. ಒಂದು ಮೆಂಬರ್‌ಶಿಪ್ ಇಲ್ಲ. ೭೫ ಭಾಗ ಇಲ್ಲಿ ಕೊಡ್ಬೇಕು. ೨೫ ಭಾಗ ಅಲ್ಲಿ ಕೊಡ್ಬೇಕು. 'ರೈತಸಂಘದ ಕೂಪಮಂಡೂಕಗಳಿಗೆ ರಿಪೇರಿ ಮಾಡೋಕಾಗಿ ವಿದೇಶ ತೋರಿಸಬೇಕಾಗಿದೆ ..ಅದಕ್ಕೇ ನಾನು ಕರ್ಕೋಹೋಗ್ತೀನಿ' ಅಂತ ಹೇಳಿದ್ರು. ಅದಕ್ಕೆ ನಾ ಬರದೆ: 'ನಾನು ಕೂಪಮಂಡೂಕ ಅಲ್ಲ. ನನಗೆ ವಿದೇಶ ಪ್ರವಾಸದ ಅವಶ್ಯಕತೆ ಇಲ್ಲ'. ಅಂತ

ನಂಜುಂಡಸ್ವಾಮಿಯವರ ವ್ಯಕ್ತಿವಾದಿ ಹಠಮಾರಿತನದಿಂದ ಹಿಂಗಾಗ್ತಾ ಇದೆ ಅನ್ನೋ ಅಭಿಪ್ರಾಯವಿದೆ.

ನನ್ನ ಅವರ ೪೨ ವರ್ಷದ ಸ್ನೇಹದಿಂದ ಹೇಳ್ತಿದೀನಿ ನಾನು, ಇದು ಸೆಂಟ್ ಪರ್ಸೆಂಟ್ ನಿಜ. ನೀವ್ ಯಾರನಾರ ಕೇಳಿ. ತೇಜಸ್ವಿ ಅಂತ್ಹೋರನ್ನ ಬೇಕಾರೆ ಕೇಳಿ. 'ನಂಜುಂಡಸ್ವಾಮಿನಾ? ಮಾರಾಯರಾ. ನಾ ಕೈ ಮುಗೀತೀನಿ' ಅಂತಾರೆ.

ರೈತಸಂಘ ತನ್ನ ದೋಷಗಳನ್ನ ತಿಳಕೊಂಡು ತಿದ್ಕೊಂಡು ಮತ್ತೊಮ್ಮೆ ಹೊಸರೂಪದೊಂದಿಗೆ ಎದ್ದು ಬರೋದು ಸಾಧ್ಯ ಇದೆ ಅನ್ನೋದಾದರೆ ಅದು ಹೇಗೆ?

ನನಗೆ ರೈತಸಂಘ ಮತ್ತೆ ಹೊಸ್ತಾಗಿ ಒಂದು ಫೋರ್ಸಾಗಿ ಬೆಳೀತದೆ ಅಂತ ವಿಶ್ವಾಸ ಇಲ್ಲ. ಅದರ ಆಯಸ್ಸು ಇಷ್ಟೇ ಅಂತ ಅನ್ನುತ್ತೆ. ಇತ್ತೀಚಿಗೆ ಎಲ್ಲ ವಿಶ್ಲೇಷಣೆ ಮಾಡಿ ನಾವು ಒಪ್ಕೊಂಡಿರೊ ಸತ್ಯ ಇದು. ಭೂಮಿ ಇರೋವರು ತಮ್ಮ ಒಳಗಿರೋ ತಪ್ಪುಗಳ್ನ ಒಪ್ಕೊಂತಾ ಹೋಗಬೇಕು. ಕಾರ್ಮಿಕರ ಸುಖ-ಕಷ್ಟಗಳನ್ನ ರಿಪೇರಿ ಮಾಡೋದು ನನ್ನ ಕರ್ತವ್ಯ ಅಂತ ಅನ್ಸಿದ್ರೆ ಮಾತ್ರ ಈ ಸಂಘಟನೆ ಬೆಳೀತದೆ. 'ಅವನ ಕೂಲಿಗಾಗಿ ನಾನೆಂಗ್ ಹೋರಾಟ ಮಾಡ್ಲಿ? ಅವನ್ ಮಾಡ್ಬೇಕು. ನನಗೆ ವೈಜ್ಞಾನಿಕವಾದ ಬೆಲೆ ಬಂದ್ರೆ ಮಾತ್ರ ನಾ ಅವನಿಗೆ ವೈಜ್ಞಾನಿಕ ಕೂಲಿ ಕೊಡ್ತೀನಿ. ಇಲ್ದಿದ್ದೆ ಇಲ್ಲ' ಅಂದ್ರೆ ಮತ್ತೆ ಎರಡ್ ಯೋಚ್ನೆ ಮಾಡ್ದಂಗಾಯ್ತಾ ನಾವು? 'ನಮ್ಮಿಬ್ಬರ ಸಮಸ್ಯೆಗೆ ಒಟ್ಟಿಗೆ ಹೋರಾಟ ಮಾಡೋಣ' ಅಂತ್ಹೇಳಿ ಹೋಗ್ಬೇಕು. ಇದಕ್ಕೆ ನಮ್ಮಲ್ಲಿ ಯಾರೂ ತಯಾರಿಲ್ಲ. ಹ್ಯಂಗ್ ಬೆಳೀತದೆ ಸಂಘಟನೆ? ನನಗನಸುತ್ತೆ ರೈತಸಂಘದಿಂದ ಎಷ್ಟ್ ಕೆಲ್ಸಾ ಆಗಬೇಕಾಗಿತ್ತೊ ಅಷ್ಟು ಆಗ್ಹೋಗಿದೆ. ಇನ್ನು ಈ ಸಂಘದ ರಿಪೇರಿಯಿಂದ ಉಪಯೋಗ ಇಲ್ಲ. ಅದಕ್ಕೇ 'ಇದು ಸತ್ಹೋಗ್ ಬಿಡ್ಲಿ' ಅಂತ ನನಗೆ ಅನ್ಸೋದು. ಯಾರಾದ್ರು ಬಂದು ಹೊಸ್ತು ಹುಟ್ಟಾಕಿದ್ರೆ ಒಳ್ಳೇದಲ್ಲವಾ? ಒಂದು ಚೈತನ್ಯಶೀಲ ಹೋರಾಟ ಹುಟ್ಟೋದಿಕ್ಕೆ ನಾವು ಅಡ್ಡ ಬರಬಾರದು. ಸಮಸ್ಯೆಗಳು ಇದ್ದೇ ಇವೆಯಲ್ಲಪ್ಪ

ಈಗ. ಪರಿಸರದ್ದು ಸಮಸ್ಯೆ ಇದೆ. ಬಹುರಾಷ್ಟ್ರೀಯರ ಶೋಷಣೆ ಸಮಸ್ಯೆ ಇದೆ. ದಲಿತರನ್ನ ಮುಸಲ್ಮಾನರನ್ನ ರೈತರನ್ನ ವ್ಯಾಪಾರಸ್ಥರನ್ನ ಅನ್ಯಾಯದಲ್ಲಿರೋ ಎಲ್ಲ ವರ್ಗದವರನ್ನ ಒಟ್ಟಿಗೆ ತಗೊಂಡು, ಒಂದು ಹೊಸ ಹೋರಾಟ ಹುಟ್ಟಬೇಕು. ಅದಕ್ಕೆ ಅಡ್ಡ ನಿಲ್ಲಬಾರ್ದು ಯಾರೂವ. ರೈತಸಂಘ ಸತ್ತು ಹೋದ್ರೆ ಹೋಗ್ಲಿ ಬೇಕಾದ್ರೆ, ಅಡ್ಡಿಯಿಲ್ಲ. ಚರಿತ್ರೇಲಿ ನಾವು ಅದುನ್ನಾರ ಆಸೆ ಪಡಬೇಕು ಅಂತ ನಾ ಹೇಳೋದು.

(‘ಲೋಕವಿರೋಧಿಗಳ ಜತೆಯಲ್ಲಿ’ ಕೃತಿಯಿಂದ)

ರೈತರ ಈ ಸರಣಿ ಆತ್ಮಹತ್ಯೆ ಏಕೆ?: ಶಾಮಣ್ಣನವರೊಂದಿಗೆ ಒಂದು ಸಂವಾದ

ಡಿ.ಎಸ್.ನಾಗಭೂಷಣ

ನಗರೀಕರಣವೇ ನಿಜವಾದ ಅಭಿವೃದ್ಧಿಯೆಂದು ನಂಬಿದ ಈ ಆರ್ಥಿಕತೆ ಹುಟ್ಟಿಸುತ್ತಿರುವ ಜೀವನ ಆಶೋತ್ತರಗಳಿಗೆ, ಜೀವನ ಕ್ರಮಗಳಿಗೆ, ಜೀವನಮೌಲ್ಯಗಳಿಗೆ ರೈತರೂ ತಮ್ಮನ್ನು ಒಪ್ಪಿಸಿಕೊಂಡುಬಿಟ್ಟದ್ದಾರೆ. ಹೊರಗಿನ 'ಅಭಿವೃದ್ಧಿ'ಯ ವಾತಾವರಣದ ಒತ್ತಡ ಅಷ್ಟು ದಟ್ಟವಾಗಿದೆ. ಇಲ್ಲದಿದ್ದರೆ ಇಂದಿನ ಹಳ್ಳಿಗಳು ಈಗ ಕಾಣತೊಡಗುತ್ತಿರುವಂತೆ ನಮ್ಮ ನಗರಗಳ ಬಡ ಅಣಕುಗಳಂತೆ ಕಾಣತೊಡಗುತ್ತಿರಲಿಲ್ಲ. ರೈತರ ಮನೆಗಳು, ಆಚರಣೆಗಳು, ಖರ್ಚುಗಳು ಈ ಪರಿ–ಕೃಷಿ ಸಂಸ್ಕೃತಿಯ ಪರಿಧಿಗಳಾಚೆಗೆ– ಬದಲಾಗುತ್ತಿರಲಿಲ್ಲ. ಸರ್ಕಾರ ಕೃಷಿಯನ್ನು ಇನ್ನೂ ಕೈಗಾರಿಕೆಯೆಂದು ಘೋಷಿಸಿಲ್ಲವಾದರೂ ನಮ್ಮ ಹಳ್ಳಿಗಳ ವ್ಯವಹಾರಗಳೆಲ್ಲ ಕೈಗಾರಿಕಾ ಸಮಾಜದ ವ್ಯವಹಾರಗಳಂತಾಗಿ ಅವು ಕುರೂಪಿ ಕೈಗಾರಿಕಾ ಕಾಲೋನಿಗಳಂತೆ ಕಾಣತೊಡಗಿವೆ.

ಈ ಸಾಲುಗಳನ್ನು ಬರೆಯುತ್ತಿರುವ ಹೊತ್ತಿನಲ್ಲಿ(ಜುಲೈ ೨೫, ೨೦೧೫) ಕಳೆದ ವಾರವೊಂದರಲ್ಲೇ ರಾಜ್ಯದಲ್ಲಿ ನೂರಕ್ಕೂ ಹೆಚ್ಚು ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಒಂದು ತಿಂಗಳ ಹಿಂದೆ ಅಲ್ಲೊಂದು ಇಲ್ಲೊಂದೆಂಬಂತೆ ವರದಿಯಾಗುತ್ತಿದ್ದ ಈ ಆತ್ಮಹತ್ಯೆ ಈಗ ಸಾಂಕ್ರಾಮಿಕ ರೋಗ

ದಂತೆ–ನಮ್ಮ ಸರ್ಕಾರ, ವಿರೋಧ ಪಕ್ಷಗಳು, ವಿವಿಧ ರೈತಸಂಘಗಳು ಕೈಮುಗಿದು ಬೇಡಿಕೊಳ್ಳುತ್ತಿದ್ದರೂ ಲೆಕ್ಕಿಸದೆ–ಹರಡಿದೆ. ಸರ್ಕಾರ, ಬ್ಯಾಂಕುಗಳಿಗೆ ಸಾಲ ವಸೂಲಾತಿಗೆ ಒತ್ತಡ ಹೇರದಂತೆ ಸೂಚಿಸುತ್ತಿದೆ. ಮೀಟರ್ ಬಡ್ಡಿ ದಂಧೆಕೋರರನ್ನು ಬಂಧಿಸುತ್ತಿದೆ. ವಿರೋಧ ಪಕ್ಷವೊಂದು ಸಹಾಯವಾಣಿ ತೆರೆದಿದೆ. ರೈತಸಂಘಗಳು ಸಾಂತ್ವನ ಮತ್ತು ಶಿಕ್ಷಣ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿವೆ. ಆದರೆ ಇವಾವುವೂ ರೈತರ ಆತ್ಮಹತ್ಯೆ ಸರಣಿಯನ್ನು ಸದ್ಯಕ್ಕಂತೂ ತುಂಡರಿಸಲು ಸಾಧ್ಯವಾಗುತ್ತಿಲ್ಲ. ಇಡೀ ನಾಡು ಏನೂ ತೋಚದಂತೆ ಅಸಹಾಯಕವಾಗಿ, ಗಾಬರಿಯಾಗಿ ಕೂತುಬಿಟ್ಟಿದೆ. ರೈತ ಬಂಧುಗಳಿಗೆ ಆತ್ಮಹತ್ಯೆಯೇ ತಮ್ಮ ಕಷ್ಟ ಪರಂಪರೆಯನ್ನು ಕೊನೆಗಾಣಿಸುವ ಏಕೈಕ ಮಾರ್ಗವೆನ್ನಿಸಿಬಿಟ್ಟಿದೆಯಲ್ಲಾ, ಏಕೆ?

ಈ ಆತ್ಮಹತ್ಯೆ ಒಂದು ದಿನ ನಿಲ್ಲುವುದು; ನಿಲ್ಲಲೇಬೇಕು. ಏಕೆಂದರೆ ಅದು ಯಾವುದಕ್ಕೂ ಸಹಜ ಮಾರ್ಗವಲ್ಲ. ಜೊತೆಗೆ ಅದೇನೂ ಸುಲಭ, ನಿರಾಳ ಮಾರ್ಗವೇನೂ ಅಲ್ಲ. ಏಕೆಂದರೆ ತನ್ನ ಮತ್ತು ತನ್ನ ಕುಟುಂಬದ ಸುಖ–ನೆಮ್ಮದಿಗಾಗಿ ಬದುಕು ಕಟ್ಟಿಕೊಂಡವರು ಅದನ್ನೇ ಇಷ್ಟು ಸುಲಭವಾಗಿ ಮುಗಿಸಿ ಹೊರಡಲಾರರು. ಯಾರಿಗೂ ಅದು ಬದುಕುವ ಎಲ್ಲ ಮಾರ್ಗಗಳೂ ಮುಚ್ಚಿಹೋದ ನಂತರದ ಕೊಟ್ಟಕೊನೆಯ ಆಯ್ಕೆ. ಆದರೂ ನಮ್ಮ ರೈತರೇಕೆ ಈ ಮಾರ್ಗ ಹಿಡಿದಿದ್ದಾರೆ? ಇದು ಮೊದಲಬಾರಿಗೆ ಏನೂ ಅಲ್ಲ, ಇದ್ದಕ್ಕಿದ್ದಂತೆ ಆಗುತ್ತಿರುವುದೂ ಅಲ್ಲ. ಆದರೆ ರಾಜ್ಯದ ರೈತರೆಂದೂ ಈ ಪರಿಯಲ್ಲಿ ಹೀಗೆ ಇದ್ದಕ್ಕಿದ್ದಂತೆ ಇಷ್ಟು ನಿಷ್ಠುರವಾಗಿ ಈ ಕೊಟ್ಟಕೊನೆಯ ಆಯ್ಕೆಗೆ ಮುಗಿಬೀಳುತ್ತಿದ್ದಾರೆ? ಇದಕ್ಕೆ ಏನು ಕಾರಣ? ನಿಜವಾಗಿ ಅವರಿಗೆ ಬದುಕುವ ಎಲ್ಲ ಮಾರ್ಗಗಳೂ ಮುಚ್ಚಿಹೋಗುತ್ತಿವೆಯೇ?

ಒಬ್ಬೊಬ್ಬರು ಒಂದೊಂದು ಕಾರಣ ಹೇಳುತ್ತಿದ್ದಾರೆ. ಒಬ್ಬರು ಬೆಳೆನಾಶ ಅವನನ್ನು ಕಂಗಾಲಾಗಿಸಿದೆ ಎಂದರೆ, ಇನ್ನೊಬ್ಬರು ಸಾಲಬಾಧೆಯಿಂದ ಸುಸ್ತಾಗಿದ್ದಾನೆ ಎನ್ನುತ್ತಾರೆ. ಮತ್ತೊಬ್ಬರು ರೈತರು ಬದುಕುವ ಕಲೆಯನ್ನೇ ಮರೆತಿದ್ದಾರೆ ಎನ್ನುತ್ತಿದ್ದಾರೆ. ಆದರೆ ಪ್ರಶ್ನೆ ಇವು ಇಂದಿನ ಹೊಸ ಸಂಗತಿಗಳೇ ಎಂಬುದು. ಈ ಬುಡದ ಪ್ರಶ್ನೆಯನ್ನು ಹಾಕಿಕೊಳ್ಳಲು ನಿರಾಕರಿಸುತ್ತಿರುವ ನಮ್ಮ ಸರ್ಕಾರಗಳು, ವಿರೋಧ ಪಕ್ಷಗಳು, ರೈತಸಂಘಗಳು ಮತ್ತೆ ಅದೇ ತತ್ಕಾಲೀನ ಪರಿಹಾರಗಳ ಮಾತುಗಳನ್ನಾಡುತ್ತಿವೆ: ಬೆಳೆ ಪರಿಹಾರದ, ಕುಟುಂಬ ಸಹಾಯದ, ಸಾಲ ಮನ್ನಾದ, ವೈಜ್ಞಾನಿಕ ಬೆಲೆಗಳ ಮಾತು. ಇದಕ್ಕೆ ಕಾರಣ ಎಲ್ಲರೂ ಇಂದಿನ ಆರ್ಥಿಕತೆಯ ಸ್ವರೂಪವನ್ನು ಒಪ್ಪಿಕೊಂಡುಬಿಟ್ಟಿದ್ದಾರೆ. ಈ ಉದಾರ, ಮುಕ್ತ ಮಾರುಕಟ್ಟೆ ನೀತಿ ನಮ್ಮ ಕೃಷಿ ಚಟುವಟಿಕೆಗಳ ಕೇಂದ್ರಗಳಾದ ಹಳ್ಳಿಗಾಡನ್ನು, ಅದರ ಆರ್ಥಿಕತೆಯನ್ನು ಹೇಗೆ ವಾರೆಗಣ್ಣಿಲ್ಲಷ್ಟೇ ನೋಡುತ್ತಿದೆ ಎಂಬುದನ್ನು ಇವರಾರೂ ಗಂಭೀರವಾಗಿ ಪರಿಶೀಲಿಸುತ್ತಿಲ್ಲ. ಸಾಲಮನ್ನಾಗಳನ್ನು ಆಗ್ರಹಿಸುವ ಜನ ಈ ಸಾಲಗಳ ನಿಜವಾದ ಸ್ವರೂಪದ–ಪಡೆದದ್ದು ಯಾಕೆ, ಖರ್ಚು ಮಾಡಿದ್ದು ಯಾವುದಕ್ಕೆ, ಹೇಗೆ–ಅಧ್ಯಯನ ಮಾಡಿದಂತಿಲ್ಲ. ಸಾಲದ ದುರುಪಯೋಗದ ಬಗ್ಗೆ ನಾನು ಮಾತನಾಡುತ್ತಿಲ್ಲ. (ಅದು ಎಲ್ಲ ವಲಯಗಳ ಸಾಮಾನ್ಯ ಲಕ್ಷಣ) ಆದರೆ ಆ ಸೌಲಭ್ಯವನ್ನು ಬಳಸುವಲ್ಲಿನ ವಿವೇಕ ಯಾವ ತೆರನದ್ದು ಎಂಬುದನ್ನು ಪರಿಶೀಲಿಸಬೇಕಿದೆ. ಈ ದಿಸೆಯಲ್ಲಿ ಮಾರ್ಗದರ್ಶನ ಮಾಡಬಹುದಾಗಿದ್ದ ಕೃಷಿ ಇಲಾಖೆ ಮತ್ತು ನಮ್ಮ

ವಿಶ್ವವಿದ್ಯಾಲಯಗಳೂ ರೈತರಿಗಿಂತ ಬಹು ಮುನ್ನವೇ ಹೊಸ ಆರ್ಥಿಕತೆಯ ಏಜೆಂಟರುಗಳಾಗಿ ಪರಿವರ್ತಿತವಾಗಿಬಿಟ್ಟಿವೆ.

ಹೊಸ ಆರ್ಥಿಕತೆಯಿಂದ ಆಕರ್ಷಿತನಾಗಿರುವ ರೈತ ಅದು ಹುಟ್ಟು ಹಾಕಿರುವ ಜೀವನಕ್ರಮ ಮತ್ತು ಗುರಿಗಳೊಳಕ್ಕೆ ಪ್ರವೇಶಿಸುವ ಯತ್ನ ಮಾಡುತ್ತಾ ಅದರೊಳಗೆ ಸಿಕ್ಕಿಹಾಕಿಕೊಂಡು ಈಚೆಗೆ ಬರದವನಾಗುತ್ತಿದ್ದಾನೆ. ಕಾರಣ ಈ ಆರ್ಥಿಕತೆಯೇ ಹಳ್ಳಿಯ ನಾಶಕ್ಕೆ ಬದ್ಧವಾಗಿದೆ. ಹಾಗಾಗಿ ರೈತ ಪರೋಕ್ಷವಾಗಿ–ದೂರದ ಪರಿಣಾಮವಾಗಿ–ತಾನು ನಿಂತ ನೆಲವನ್ನೇ–ಅಕ್ಷರಶಃ–ಬುಡಮೇಲು ಮಾಡುವ ಕೆಲಸದಲ್ಲಿ ತೊಡಗಿದ್ದಾನೆ. ಇದನ್ನು ಹೇಳಿದರೆ ನಮ್ಮ ಕೆಲ ರೈತನಾಯಕರು–ನಮ್ಮ ಕೆಲ ದಲಿತ ನಾಯಕರಂತೆಯೇ–ಏಕೆ, ರೈತರು ಮುಂದುವರೆಯಬಾರದೇ? ಒಳ್ಳೆಯ ಬದುಕು ನಡೆಸಬಾರದೇ? ಅವರ ಮಕ್ಕಳು ವಿದೇಶಗಳಿಗೆ ಹೋಗಬಾರದೆ? ಎಂದೆಲ್ಲ ಪ್ರಶ್ನೆಗಳನ್ನು ಹಾರಿಸುತ್ತಾರೆ. ಆದರೆ ಒಳ್ಳೆಯ ಬದುಕು ಎಂದರೇನು ಎಂಬ ಪ್ರಜ್ಞೆಯನ್ನೇ ನಾಶ ಮಾಡಲಾಗುತ್ತಿರುವ ಕಾರ್ಯಕ್ರಮದೊಳಕ್ಕೆ ಅವರೂ ಪ್ರವೇಶಿಸಿಬಿಟ್ಟಿದ್ದಾರೆ. ಇದೇ ಮತ್ತೆ ಮರುಕಳಿಸುತ್ತಿರುವ ಮತ್ತು ಮರುಕಳಿಸಲಿರುವ ರೈತರ ಸರಣಿ ಆತ್ಮಹತ್ಯೆಯ ಹಿಂದಿನ ನಿಜವಾದ ದುರಂತ. ಇದನ್ನು ನಮ್ಮ ರೈತಸಂಘಗಳೂ ಅರ್ಥ ಮಾಡಿಕೊಳ್ಳದಿರುವುದು ಇನ್ನೂ ದೊಡ್ಡ ದುರಂತ. ಅವು ಮೊದಲಿಂದಲೂ ಹೋರಾಟದ ಹೆಸರಿನಲ್ಲಿ ಬರೀ ಘೋಷಣೆ, ಆಗ್ರಹ, ಆರೋಪ, ಬೇಡಿಕೆಗಳ ರಾಜಕಾರಣವನ್ನೇ ಮಾಡುತ್ತಾ ಬಂದಿವೆ. ಹಾಗಾಗಿಯೇ ಇಂದು ಕೂಡ ಅವುಗಳ ಸಾಂತ್ವನದ, ಶಿಕ್ಷಣದ ಮಾತುಗಳು ರೈತರ ಮನಕ್ಕೆ ಬೀಳುತ್ತಿಲ್ಲ. ಹಾಗೆ ನೋಡಿದರೆ, ಇಂದು ಶಿಕ್ಷಣ ಬೇಕಾಗಿರುವುದು ಈ ರೈತಸಂಘಗಳಿಗೇ, ಈ ರೈತ ನಾಯಕರಿಗೇ. ಅವರ ಒಡಕು, ದುಡುಕು, ದ್ವೇಷ, ಪುಢಾರಿತನಗಳನ್ನು ನೋಡಿದರೇ ಇದು ಸಾಬೀತಾಗುವಂತಿದೆ.

ಈ ಎಲ್ಲ ಹಿನ್ನೆಲೆಯಲ್ಲಿ, ಸದ್ಯದ ರೈತರ ಆತ್ಮಹತ್ಯೆ ಬಗ್ಗೆ ಪತ್ರಿಕೆ ಹಿರಿಯ ಸಮಾಜವಾದಿಯೂ, ಸ್ವತಃ ರೈತರೂ ಮತ್ತು ಸ್ವಲ್ಪ ಸ್ವತಂತ್ರವಾಗಿ ಯೋಚಿಸುವ ರೈತ ಮುಖಂಡರೂ ಆದ ಕಡಿದಾಳು ಶಾಮಣ್ಣನವರನ್ನು ಮಾತನಾಡಿಸಿತು. ಆರಂಭದಲ್ಲಿ ಇವರೂ ಆ ಹಳೆಯ ವರಸೆಯಲ್ಲೇ– ಹವಾಮಾನ ವೈಪರೀತ್ಯ, ಬೆಳೆ ನಾಶ, ಕಾರ್ಖಾನೆಗಳಿಂದ ಕಬ್ಬು ಹಣ ಪಾವತಿಯ ವಿಳಂಬ, ಸಕ್ಕರೆ ಹರಾಜೆಂಬ ಸರ್ಕಾರದ ನಾಟಕ, ವೈಜ್ಞಾನಿಕ ಬೆಲೆ, ಸಾಲಬಾಧೆ–ಮಾತನಾಡತೊಡಗಿದರು. ಪತ್ರಿಕೆಗೆ ತಲೆ ಕೆಟ್ಟಂತಾಗಿ, ಸರ್ಕಾರವನ್ನೇ ಬೈದುಕೊಂಡು ಎಷ್ಟು ವರ್ಷ ಕೂತಿರುತ್ತೀರಿ. ಹಾಗಾದರೆ ಬೇಸಾಯವನ್ನು ಸರ್ಕಾರಕ್ಕೆ ಒತ್ತೆ ಇಟ್ಟುಬಿಟ್ಟಿದ್ದೀರಾ? ಹಾಗಾದರೆ ನೀವೇಕೆ ಆತ್ಮಹತ್ಯೆ ಮಾಡಿಕೊಂಡಿಲ್ಲ?' ಎಂದು ಕೇಳಿದೊಡನೆ ಶಾಮಣ್ಣ ಸ್ವಲ್ಪ ತಬ್ಬಿಬ್ಬಾಗಿ ಎಚ್ಚೆತ್ತುಕೊಂಡವರಂತೆ, ಆಲೋಚಿಸಿ ಮಾತನಾಡತೊಡಗಿದರು:

'ನಾನೇಕೆ ಆತ್ಮಹತ್ಯೆಯ ಆಲೋಚನೆ ಎಂದೂ ಮಾಡಿಲ್ಲ ಅಂದ್ರೆ, ನಾನೆಂದೂ ಸಾಲ ಮಾಡಲು ಹೋಗಿಲ್ಲ. ಕಾರಣ, ನಾನೆಂದೂ ನನ್ನ ಮಿತಿ ಅರಿತೇ ಬೇಸಾಯ ಮಾಡಿದ್ದೇನೆ, ಬದುಕು ನಡೆಸಿದ್ದೇನೆ. ನಾನು ರೈತನೆಂಬ, ಹಳ್ಳಿಗನೆಂಬ ಹೆಮ್ಮೆ ಇದೆ.'

'ಹಾಗೆಂದರೆ?' ಪತ್ರಿಕೆ ಪ್ರಶ್ನೆ.

'ನಾನು ಗೊಬ್ಬರ, ಕೀಟನಾಶಕ, ಟಿಲ್ಲರ್, ಟ್ರ್ಯಾಕ್ಟರ್ ಎಂದು ಹೋಗಲಿಲ್ಲ. ಅಧಿಕ ಇಳುವರಿಯ ಬೆನ್ನು ಹತ್ತಲಿಲ್ಲ. ನನಗೆ ಬೇಕಾದುದನ್ನೆಲ್ಲ ನಾನೇ ಬೆಳೆದುಕೊಂಡು, ಮಿಕ್ಕದ್ದನ್ನು ಮಾರಿ ಬದುಕುತ್ತಿದ್ದೇನೆ. ನನ್ನದು ಅಡಿಕೆ ಬೆಳೆಯೂ ಸೇರಿ ಸಾವಯವ ಕೃಷಿ. ಎರಡು ಕುಟುಂಬಗಳ ಸಹಾಯ ಪಡೆದು ನಾವೂ ಅವರೊಂದಿಗೆ ದುಡಿಯುತ್ತಾ ಅವರ ಕುಟುಂಬಗಳನ್ನೂ ಸಾಕುತ್ತಾ, ಪ್ರಕೃತಿಯ ಮಧ್ಯೆ ಯಾವ ತರಲೆ–ತಾಪತ್ರಯಗಳೂ ಇಲ್ಲದೆ ಆರಾಮವಾಗಿ, ನೆಮ್ಮದಿಯಿಂದ ಬದುಕುತ್ತಿದ್ದೇವೆ. ನಗರದ ಯಾವ ಆಕರ್ಷಣೆಯೂ ನಮಗಿಲ್ಲ'

'ತರಲೆ ತಾಪತ್ರಯಗಳು ಅಂದರೆ?'

ಅದೇ ಮದುವೆ–ಮುಂಜಿ–ಹಬ್ಬ– ಹರಿದಿನ–ದೇವರು–ದಿಂಡಿರು–ಜಾತ್ರೆ–ವಾಸ್ತು–ಹರಕೆ ಇತ್ಯಾದಿಗಳ ಹೆಸರಿನಲ್ಲಿ ಹುಡಿ ಹಾರಿಸಿ ಸಾಲಕ್ಕೆ ಸಿಕ್ಕಿ ಹಾಕಿಕೊಳ್ಳುವುದು'

'ಈ ಬಗ್ಗೆಯೆಲ್ಲಾ ನಿಮ್ಮ ರೈತಸಂಘ ಶಿಕ್ಷಣ ನೀಡಲಿಲ್ವಾ? ಬಹಳ ಅಧ್ಯಯನ ಶಿಬಿರಗಳು ನಡೆದವಲ್ಲಾ ಆಗ?'

'ಸಾಕಷ್ಟು ನಾವು ಕೆಲವರು ಹೇಳಿದ್ದೇವೆ. ಕೇಳುವವರು ಕೇಳಿದ್ದಾರೆ. ಅಳವಡಿಸಿಕೊಂಡವರು ಕಡಿಮೆ. ಬೆಳೆ ಬೆಲೆಯದ್ದೇ ಗಲಾಟೆ ಹೆಚ್ಚಾಯಿತೇನೋ!'

'ಹೋಗಲಿ ಅದನ್ನಾದರೂ ಸರಿಯಾಗಿ ಮಾಡಿದಿರಾ? ಇಷ್ಟು ಹೊತ್ತಿಗೆ ನೀವು ಹೋಬಳಿ, ತಾಲ್ಲೂಕು ಜಿಲ್ಲಾ ಮಟ್ಟಗಳ ರೈತರ ಸಹಕಾರಿ ಜಾಲ ಮಾಡಿಕೊಂಡು, ಕೃಷಿಯನ್ನು ನೀವೇ ಸಾಕಷ್ಟು –ಯಾವುದನ್ನು ಯಾರು ಎಲ್ಲಿ ಎಷ್ಟು ಬೆಳೆಯಬೇಕೆಂದು ತೀರ್ಮಾನಿಸಿಕೊಂಡು– ಒಂದು ಯೋಜಿತ ವ್ಯವಸ್ಥೆ ಮಾಡಿಕೊಂಡು, ಮಧ್ಯವರ್ತಿಗಳ ಕಾಟವಿಲ್ಲದೆ ನೇರವಾಗಿ ನಿಮ್ಮ ಬೆಳೆಯನ್ನು ಗ್ರಾಹಕರಿಗೆ ಒದಗಿಸುವ ಮೂಲಕ ಸರ್ಕಾರಕ್ಕೇ ಸೆಡ್ಡು ಹೊಡೆಯಬಹುದಿತ್ತು. ಅಂತಹ ಸಂಘಟನೆ ಇತ್ತು ನಿಮ್ಮ ಹತ್ರ. ರಾಷ್ಟ್ರದಲ್ಲೇ ಬಲಿಷ್ಠವಾದ ಚಳುವಳಿ ಎಂಬ ಹೆಗ್ಗಳಿಕೆಗೆ ಪಾತ್ರವಾಗಿತ್ತು ನಿಮ್ಮ ರೈತಸಂಘ...'

ಶಾಮಣ್ಣ ಏನೋ ತಮಗೆ ತಾವೇ ಗೊಣಗಿಕೊಂಡರು. ಅವರು ರೈತಸಂಘದ ವರ್ತನೆ ಬಗ್ಗೆ ಹಿಂದೊಮ್ಮೆ ಇದೇ ಸಂದರ್ಶಕನ ಬಳಿ ಮುಕ್ತವಾಗಿ ಮಾತನಾಡಿ ರೈತಸಂಘದಿಂದಲೇ ಹೊರಹಾಕಲ್ಪಟ್ಟಿದ್ದರು. ಅದನ್ನು ನೆನೆದು ಪತ್ರಿಕೆ ಮಾತು ಮುಂದುವರೆಸಲಿಲ್ಲ. ಬದಲಿಗೆ ಕೆಲವು ಪ್ರಶ್ನೆಗಳನ್ನು ಬರೆದು ಉತ್ತರಿಸಲು ಹೇಳಿತು. ಆ ಪ್ರಶ್ನೋತ್ತರದ ಸಂಕ್ಷಿಪ್ತ ರೂಪ ಇಲ್ಲಿದೆ

೧. ರಾಜ್ಯದಲ್ಲಿ ಹಿಂದೆಂದೂ ಇಲ್ಲದಷ್ಟು ನಿರಂತರತೆಯಿಂದ ರೈತರು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ, ಇದನ್ನು ಗಮನಿಸಿದಾಗ ನಿಮಗೆ ಏನನ್ನಿಸುತ್ತದೆ? ಈ ಆತ್ಮಹತ್ಯೆಗಳಿಗೆ ನಿಜವಾದ ಕಾರಣಗಳೇನಿರಬಹುದು?

ಸರಳವಾಗಿ ಹೇಳಬೇಕೆಂದರೆ ಇವತ್ತಿನ ಜೀವನಶೈಲಿಯೇ ಅದಕ್ಕೆ ಕಾರಣವಾಗಿರ ಬಹುದು. ಅಂದರೆ ಸಾವಯವ ಕೃಷಿ ಪದ್ಧತಿಯಿಂದ ವ್ಯವಸಾಯ ಮಾಡಿ ಸೀಮೆಗೊಬ್ಬರ, ಕಳೆನಾಶಕವನ್ನು ಬಳಸದೆ ಖರ್ಚು ಕಡಿಮೆಯಿಂದ ಸಾಲ ಇಲ್ಲದಂತೆ

ಸರಳ ಜೀವನ ನಡೆಸುತ್ತಿದ್ದ ರೈತರು ಕೃಷಿ ಇಲಾಖೆಯವರು ಹೇಳಿದರೆಂದು ಅಧಿಕ ಇಳುವರಿ ತೆಗೆದು ಪ್ರಗತಿಪರ ರೈತನಾಗುವ ಉಮೇದುಗಾರಿಕೆಯಿಂದ ತನಗಿರುವ ಜಮೀನನ್ನು ಸಾಗುವಳಿ ಮಾಡಲು ಟಿಲ್ಲರ್, ಟ್ರ್ಯಾಕ್ಟರ್ ಬೇಕೋ ಬೇಡವೋ ಎಂದು ಪರಿಶೀಲಿಸದೆ, ಪಕ್ಕದ ಮನೆಯವರೆಲ್ಲ ಬಳಸಿದಂತೆ ದುಬಾರಿ ವಾಹನಗಳನ್ನು ಕೊಳ್ಳುವುದು. ಪ್ರತೀ ವಾರದ ಸಂತೆಯಿಂದ ತರಕಾರಿ, ಹಣ್ಣು ಹಂಪಲು ಮುಂತಾದ ಆಹಾರ ಪದಾರ್ಥ ಕೊಂಡು ತಂದು ದುಂದುವೆಚ್ಚ ಮಾಡಿ ಸಾಲಗಾರರಾಗಿದ್ದವರು ಆ ಸಾಲ ತೀರಿಸಲಿಕ್ಕಾಗದೆ ಮಾನ, ಮರ್ಯಾದೆಗೆ ಅಂಜಿ ಆತ್ಮಹತ್ಯೆ ಮಾಡಿಕೊಳ್ಳುತ್ತಿರುವವರ ಸಂಖ್ಯೆಯೇ ಜಾಸ್ತಿಯಾಗಿದೆ ಎಂದೆನ್ನಿಸುತ್ತದೆ. ರೈತರಿಗೆ ಸಾಲ ಸಿಗುವ ವ್ಯವಸ್ಥೆ ಜಾಸ್ತಿಯಾಗಿದ್ದೂ ಒಂದು ಕಾರಣ. ಅನಾವಶ್ಯಕವಾಗಿ ದುಬಾರಿ ಮನೆ ಕಟ್ಟಿಸುವುದು, ದುಬಾರಿ ಮದುವೆ ಮಾಡುವುದೂ ರೈತರ ಸಾಲಕ್ಕೆ ಕಾರಣವಾಗುತ್ತಿದೆ. ಈ ವಿಚಾರಗಳನ್ನು ರೈತರು ಅರಿತುಕೊಂಡರೆ ಉತ್ತಮ.

ರೈತರ ಅನುಮತಿಯಿಲ್ಲದೆ ರೈತರ ಜಮೀನನ್ನು ಸರ್ಕಾರ ಯಾವಾಗ ಬೇಕಾದರೂ ವಶಪಡಿಸಿಕೊಳ್ಳಬಹುದೆಂಬ ಮೋದಿ ಸರ್ಕಾರದ ಭೂಸ್ವಾಧೀನ ಮಸೂದೆಯೂ ಸಹ ರೈತರ ಆತ್ಮಹತ್ಯೆಗೆ ಕಾರಣವಾಗಿದೆ.

ಗೋಮಾಳಗಳು ಕಾಣೆಯಾಗುತ್ತಿರುವುದೂ ಮತ್ತೊಂದು ಕಾರಣ. ಏಕೆಂದ್ರೆ ಹಿಂದಿನಂತೆ ತಾನೇ ಜಾನುವಾರು ಸಾಕಿ ಕೊಟ್ಟಿಗೆ ಗೊಬ್ಬರವನ್ನು ತನ್ನ ಜಮೀನಿಗೆ ಹಾಕಿ ಬೆಳೆ ಬೆಳೆಯಲು ಸಾಧ್ಯವಾಗುತ್ತಿಲ್ಲವಾದ್ದರಿಂದ.

೨. ಸಾಲಬಾಧೆಯ ವಿಷಯಕ್ಕೆ ಬಂದರೆ ರೈತ ಸರ್ಕಾರವನ್ನು ನಂಬಿಯೇ ವ್ಯವಸಾಯವನ್ನು ಮಾಡುತ್ತಾನೆಯೇ?

ಈಗ ರೈತರು ಸರ್ಕಾರದ ಅಥವಾ ಬೇರಾವುದೋ ಮೂಲದ ಸಾಲವನ್ನೇ ನಂಬಿ ವ್ಯವಸಾಯ ಮಾಡಲು ಪ್ರಾರಂಭಿಸಿದ್ದಾರೆ. ಉದಾಹರಣೆಗೆ, ಹೂವಿನ ಕೃಷಿ, ಹಣ್ಣುಗಳ ಕೃಷಿ, ಕೋಳಿ, ಹಂದಿ ಫಾರಂಗಳು, ಪಾಲಿ ಹೌಸ್ ಮುಂತಾದವು.. ಈ ಗ್ರೀನ್ ಹೌಸ್, ಪಾಲಿ ಹೌಸ್‌ಗಳು ಲಕ್ಷಗಟ್ಟಲೆ ಬಂಡವಾಳವನ್ನು ರೈತನಿಂದ ಖರ್ಚು ಮಾಡಿಸುತ್ತದೆ. ಇಂತವುಗಳನ್ನು ಸಣ್ಣ ಸಣ್ಣ ರೈತರುಗಳೂ ಮಾಡುತ್ತಿದ್ದಾರೆ. ಇದರಿಂದ ಬರುವ ಹೂವು, ಹಣ್ಣು, ಸೀಗಡಿ ಮುಂತಾದವನ್ನು ಖರೀದಿಸಿ ಮಾರುಕಟ್ಟೆಗೆ ತರುವವರು ತಮ್ಮ ಲಾಭಕ್ಕೆ ಅನುಗುಣವಾಗಿ ಉತ್ಪಾದಿಸುವ ರೈತನಿಗೆ ಸಾಲವನ್ನು ಕೊಡುತ್ತಾರೆ ಅಥವಾ ತಾವು ಜಾಮೀನಾಗಿ ನಿಂತು ಸಾಲ ಕೊಡಿಸುತ್ತಾರೆ. ಈ ರೀತಿಯ ಕೃಷಿ ಮಾಡುವವರಲ್ಲಿ ಶೇಕಡಾ ೯೦% ರೈತರು ಸಾಲ ಕೊಡಿಸಿದ ಜವಾಬ್ದಾರಕರ ಮುಷ್ಠಿಯಲ್ಲಿ ಸಿಕ್ಕಿಕೊಂಡಿರುತ್ತಾರೆ. ಇಂತಹ ರೈತರು ನನಗೆ ತುಂಬಾ ಜನ ಪರಿಚಿತರಿದ್ದಾರೆ. ಮಧ್ಯವರ್ತಿಗಳ ಅಂಗೈಯಲ್ಲೇ ರೈತರ ಭವಿಷ್ಯ ನಿಂತಿರುತ್ತದೆ.

ವಸೂಲಿಗೆ ಗೂಂಡಾಗಳನ್ನಿಟ್ಟು ರೈತನಿಂದ ವಸೂಲು ಮಾಡಿಸುವುದರಿಂದ ಮಾನ ಮರ್ಯಾದೆಗೆ ಅಂಜಿ ರೈತ ನೇಣಿಗೆ ಒಳಗಾಗುತ್ತಿದ್ದಾನೆ. ಉತ್ಪಾದನಾ ವೆಚ್ಚಗಳಿಗನುಗುಣವಾಗಿ ಬೆಲೆ ನಿಗದಿಯಾಗುವ ಪದ್ಧತಿ ಬರುವವರೆಗೂ ರೈತರ ಆತ್ಮಹತ್ಯೆ ನಿಲ್ಲುವುದಿಲ್ಲ.

ಇನ್ನು ಹಳ್ಳಿಗಳಲ್ಲಿ ಸ್ತ್ರೀಶಕ್ತಿ ಸಂಘದ ಅವ್ಯವಹಾರದಿಂದಲೂ ಸಾವುಗಳು ಸಂಭವಿಸಲು ಪ್ರಾರಂಭವಾಗಿದೆ. ವಾರದ ಹಿಂದೆ ದಾವಣಗೆರೆಯಲ್ಲಿ ರಾಜ್ಯ ರೈತ ಸಂಘದ ಸ್ಟೇಟ್ ಕಮಿಟಿ ಸದಸ್ಯರುಗಳ ಸಮಾವೇಶ ನಡೆಯುತ್ತಿದ್ದಾಗ ಆಗತಾನೆ ಸ್ತ್ರೀಶಕ್ತಿ ಸಂಘದಲ್ಲಿ ಆತ್ಮಹತ್ಯೆ ನಡೆದ ಸುದ್ದಿಗಳು ಬಂದಿದ್ದವು.

೩. ಕರ್ನಾಟಕದ ರೈತ ಚಳುವಳಿ ನಮ್ಮ ರಾಷ್ಟ್ರದಲ್ಲೇ ಹೆಸರು ಮಾಡಿದ ಚಳುವಳಿ. ಆದರೂ ಕರ್ನಾಟಕದ ರೈತ ಅತ್ಯಂತ ಅಸಹಾಯಕನಾಗಿ ಕಾಣುತ್ತಿದ್ದಾನೆ. ಇದು ರೈತಸಂಘದ ವೈಫಲ್ಯ ಅಲ್ಲವೇ?

ನೀವು ಹೇಳುತ್ತಿರುವುದು ನಿಜ. ರೈತಸಂಘ ಎರಡು ಮೂರು ಹೋಳುಗಳಾದ ನಂತರದಲ್ಲಿ ತನ್ನ ಮೊದಲಿನ ಶಕ್ತಿ ಕಳೆದುಕೊಂಡಿದೆ. ಈಗಲೂ ರೈತಸಂಘಗಳು ಒಂದಾಗಿ ಕೆಲ್ಸ ಮಾಡಿದರೆ ಮೊದಲಿನ ಶಕ್ತಿ ಪಡೆಯುವುದು ಕಷ್ಟವೇನಲ್ಲ.

೪. ಈಗ ನಡೆಯುತ್ತಿರುವ ರೈತರ ಆತ್ಮಹತ್ಯೆಗಳಾದರೂ ಒಡೆದು ಹೋದ ರೈತ ಸಂಘಟನೆಗಳ ಪುನರ್ ಸಂಘಟನೆಗೆ ಕಾರಣವಾಗಬೇಕಲ್ಲವೇ?

ಈ ಪ್ರಶ್ನೆ ಸರಿಯಾಗಿದೆ. ಆತ್ಮಹತ್ಯೆ ಮಾಡಿಕೊಳ್ಳುವ ರೈತರು, ಯಾವಾಗ ಕರ್ನಾಟಕದಲ್ಲಿ ರೈತಸಂಘಟನೆಗಳು ಒಗ್ಗಟ್ಟು ಕಳೆದುಕೊಳ್ಳುತ್ತಿದ್ದಾರೋ ಅದನ್ನು ನೋಡಿ, ಆತ್ಮವಿಶ್ವಾಸವನ್ನೇ ಕಳೆದುಕೊಂಡು ಯಾರೂ ತಮ್ಮ ಕಷ್ಟಕ್ಕೆ ಬರುವವರಿಲ್ಲ ಎಂದು ಭಾವಿಸಿ ಈ ಲೋಕವನ್ನೇ ಬಿಡುವುದೊಂದೇ ದಾರಿ ಎಂದು ತೀರ್ಮಾನಿಸುತ್ತಿದ್ದಾರೆ. ಈಗಲೂ ರೈತರೆಲ್ಲರೂ ನಾವು ಒಂದೇ ಕುಲದವರೆಂದು ಭಾವಿಸಿ ಈಗ ಅವರಿಗೆ, ನಾಳೆ ನಮಗೂ ಈ ಸ್ಥಿತಿ ಕಾದಿದೆ ಎಂದು ಅರಿತುಕೊಂಡು ಒಡೆದು ಹೋಗಿರುವ ರೈತರೆಲ್ಲ ಒಂದೇ ಸಂಘಟನೆಯಡಿ ಬರುವ ದೃಢವಾದ ತೀರ್ಮಾನ ಮಾಡಿದರೆ ರೈತಸಂಘಕ್ಕೂ ಶಕ್ತಿ ಬರುತ್ತದೆ. ರೈತ ಸಂಘಟನೆಗಳು ಇದೇ ರೀತಿ ನಾವು ಬೇರೆ ನಾವು ಬೇರೆ ಎಂದು ಭಾವಿಸಿಕೊಂಡರೆ ಸಾವಿಗೆ ಆಹುತಿಯಾಗುವವರ ಸಂಖ್ಯೆಯೂ ಜಾಸ್ತಿಯಾಗುತ್ತದೆ. ಇದನ್ನು ರೈತ ಮುಖಂಡರು ಅರ್ಥಮಾಡಿಕೊಳ್ಳಲೇಬೇಕಾಗಿದೆ.

('ಹೊಸ ಮನುಷ್ಯ' ಸಮಾಜವಾದಿ ಮಾಸಿಕದ ಆಗಸ್ಟ್ ೨೦೧೫ರ ಸಂಚಿಕೆಯಲ್ಲಿ ಪ್ರಕಟವಾಗಿದೆ)

ಲೇಖಕರ ವಿಳಾಸ

ಡಾ.ಪ್ರಭುಶಂಕರ್, ನಂ-೧೦೦೬, ಈ-ಎಫ್ ಬ್ಲಾಕ್, ಕುವೆಂಪುನಗರ, ಮೈಸೂರು-೨೩.

ರಾಜೀವ ತಾರಾನಾಥ, ನಂ-೧೫೪, ೧೧ ನೇ ಮುಖ್ಯರಸ್ತೆ, ಸರಸ್ವತಿ ಪುರಂ, ಮೈಸೂರು-೯.

ಎಸ್.ಎಲ್. ಭೈರಪ್ಪ ನಂ -೧೦೦೭, ಉದಯರವಿ ರಸ್ತೆ, ಮೈಸೂರು-೨೩.

ನ್ಯಾ. ಎನ್.ಡಿ. ವೆಂಕಟೇಶ್, ನಂ-೪೧೨, ೧೨ ನೇ ಮುಖ್ಯರಸ್ತೆ, ೫ ನೇ ಅಡ್ಡರಸ್ತೆ, ರಾಜಮಹಲ್ ವಿಲಾಸ್ ಬಡಾವಣೆ, ಬೆಂಗಳೂರು-೮೦.

ನ್ಯಾ. ಎ.ಜೆ. ಸದಾಶಿವ, ೧೩೮೫, 'ಭೈರವಿ', ೯ ನೇ ಮುಖ್ಯರಸ್ತೆ, ನ್ಯಾಯಾಂಗ ಬಡಾವಣೆ, ಯಲಹಂಕ, ಬೆಂಗಳೂರು-೬೫.

ಬಿ.ಎಸ್. ವಿಶ್ವನಾಥ್, ಚೇರ್ಮನ್, ರೀಜನಲ್ ಇನ್ಸಿಟ್ಯೂಟ್ ಆಫ್ ಕೋ ಆಪರೇಟಿವ್ ಮ್ಯನೇಜ್‌ಮೆಂಟ್, ಪದ್ಮನಾಭನಗರ, ಬಿಎಸ್‌ಕೆ ೨ನೇ ಹಂತ, ಬೆಂಗಳೂರು-೭೦

ಬಿ.ವಿ.ಮೂರ್ತಿ, ಮೇಗರವಳ್ಳಿ, ತೀರ್ಥಹಳ್ಳಿ (ತಾ), ಶಿವಮೊಗ್ಗ (ಜಿ).

ಸಿ.ಪಿ.ಕೆ, ೨೨೬೫/೧೧೯, ಭಾರತಿ, ೯ ನೇಕ್ರಾಸ್, ೪ನೇ ಮೇನ್, ವಿನಾಯಕನಗರ, ಮೈಸೂರು-೧೨.

ಬಿಳಿಮಲೆ ರಾಮದಾಸ್, ನಂ-೧೪೮೦೧, ೨೨ ಬಿ ಕ್ರಾಸ್, ೧೧ನೇ ಮೇನ್, ೪ ಟಿ ಬ್ಲಾಕ್, ಜಯನಗರ, ಬೆಂಗಳೂರು-೪೧

ನಾ. ಡಿಸೋಜಾ, ೨ನೇ ಕ್ರಾಸ್, ನೆಹರೂ ನಗರ, ಸಾಗರ, ಶಿವಮೊಗ್ಗ(ಜಿ).

ಬಿ.ಎನ್.ಶ್ರೀರಾಮ್, ಪುಸ್ತಕ ಪ್ರಕಾಶನ, ೯ ನೇ ಮೇನ್, ಸರಸ್ವತಿಪುರಂ, ಮೈಸೂರು-೯.

ಎಚ್.ಎಲ್.ಕೇಶವಮೂರ್ತಿ, ಹೌಸಿಂಗ್ ಬೋರ್ಡ್ ವಸತಿ ಗೃಹ, ಗುತ್ತಲು(ಅಂಚೆ) ಮಂಡ್ಯ-೩

ವೈದೇಹಿ, ಇರುವಂತಿಗೆ, ಅನಂತನಗರ, ೨ ನೇ ಹಂತ, ಮಣಿಪಾಲ್, ಉಡುಪಿ(ಜಿ)

ಸಿ.ಪ್ರೇಮಾನಂದ್, ೨೬೪, ಆರ್.ಜಿ-೨೮೪-ಇ, ೧ನೇ ಮಹಡಿ, ೧೦ ನೇ ಮೇನ್, ೫ ನೇ ಬ್ಲಾಕ್, ಜಯನಗರ, ಬೆಂಗಳೂರು.

ಸೈಯದ್ ಅಬ್ದುಲ್ ಖಾಜಿ, ೨೧ /ಎ, ಮೊದಲನೇ ಮುಖ್ಯರಸ್ತೆ , ಚಿನ್ನಪ್ಪ ಗಾರ್ಡನ್, ಬೆನ್ಸನ್ ಟೌನ್, ಬೆಂಗಳೂರು-೦೪೬

ಕೆ.ಟಿ.ಮೋಹನ್, ವಕೀಲರು, ನಂ-೧೪, ಬಸಪ್ಪ ರೋಡ್, ಶಾಂತಿನಗರ, ಬೆಂಗಳೂರು-೨೭

ಶಿವಮೊಗ್ಗ ಸುಬ್ಬಣ್ಣ, ವಕೀಲರು, **'ಶ್ರೀ ಗಣೇಶ್'**, ೩೦೬೩, ೯ ನೇ ಮೇನ್, ಬನಶಂಕರಿ ೨ನೇ ಹಂತ, ಬೆಂಗಳೂರು-೭೦

ಕಿಮ್ಮನೆ ರತ್ನಾಕರ, ಮಾನ್ಯ ಪ್ರಾಥಮಿಕ ಪ್ರೌಢಶಿಕ್ಷಣ ಸಚಿವರು, ಕರ್ನಾಟಕ ಸರ್ಕಾರ, ವಿಧಾನಸೌಧ, ಬೆಂಗಳೂರು ೫೬೦ ೦೧

ಸತ್ಯನಾರಾಯಣ ರಾವ್ ಅಣತಿ, 'ರಚನಾ', ೩ ನೇ ತಿರುವು, ಶರಾವತಿ ನಗರ, ಬಿ ಬ್ಲಾಕ್, ಶಿವಮೊಗ್ಗ.
ಇಂದಿರಾ ಕೃಷ್ಣಪ್ಪ, ಹೌಸ್ ನಂ-೨೫, ಸಂತೋಷ ನಗರ, ೨ ನೇ ಹಂತ, ೩ ನೇ ತಿರುವು, ಅಟ್ಟೂರು, ಬೆಂಗಳೂರು-೬೪.
ವಿಜಯಾ ಶ್ರೀಧರ್, ೬ನೇ ಕ್ರಾಸ್, ರಾಜೇಂದ್ರ ನಗರ, ಶಿವಮೊಗ್ಗ-೫೭೭೨೦೪
ಪ್ರಸನ್ನ, 'ಚರಕ', ಭೀಮನಕೋಣೆ, ಹೆಗ್ಗೋಡು, ಸಾಗರ (ತಾ),
ಡಾ. ಶ್ರೀಕಂಠ ಕೂಡಿಗೆ, ನಂ-೧೨, 'ತಕ್ಷಶಿಲಾ', ಜೈಲುರಸ್ತೆ, ೨ ನೇಕ್ರಾಸ್, ಶಿವಮೊಗ್ಗ-೧
ಲೈಬ್ರರಿ ವಿಶ್ವನಾಥ, ಅಗರದಹಳ್ಳಿ, ಭದ್ರಾವತಿ(ತಾ), ಶಿವಮೊಗ್ಗ(ಜಿ)
ಎ.ವಿ.ಶೇಷಾಚಲ, ನಿವೃತ್ತ ಪ್ರಾಂಶುಪಾಲರು, ಆಜಾದ್ ರಸ್ತೆ, ತೀರ್ಥಹಳ್ಳಿ.
ಕೆ.ಜಿ.ವೆಂಕಟೇಶ್, ನಂ.೫೧೪, ೫ನೇ ಕ್ರಾಸ್, ೧ನೇ ಬ್ಲಾಕ್, ಕಲ್ಯಾಣನಗರ, ಬೆಂಗಳೂರು-೫೬೦೦ ೦೪೩
ಜಿ.ಕೆ.ಗೋವಿಂದರಾವ್, 'ಗುರುಕೃಪ', ೩೬ನೇ ಕ್ರಾಸ್, ಜಯನಗರ , ೭ನೇ ಬ್ಲಾಕ್, ಬೆಂಗಳೂರು-೮೨
ಎಚ್.ಆರ್. ಬಸವರಾಜಪ್ಪ, ರೈತ ನಾಯಕರು, ಹನುಮಂತಾಪುರ, ಭದ್ರಾವತಿ (ತಾ)
ಬಿ.ಅನಸೂಯಮ್ಮ, ಅರಳಾಳುಸಂದ್ರ, ಚನ್ನಪಟ್ಟಣ (ತಾ), ರಾಮನಗರ(ಜಿ).
ಕೋಡಿಹಳ್ಳಿ ಚಂದ್ರಶೇಖರ್, ಅಧ್ಯಕ್ಷರು, ಕರ್ನಾಟಕ ರಾಜ್ಯ ರೈತಸಂಘ, ಬೆಂಗಳೂರು.
ಜಿ.ಎಸ್.ರಾಜೇಂದ್ರ, ಕಂಬಳಿಗೆರೆ, ಕೋಣಂದೂರು(ಅಂಚೆ), ತೀರ್ಥಹಳ್ಳಿ (ತಾ).
ರವಿವರ್ಮಕುಮಾರ್, ನಂ-೨೨೫, 'ನಳಂದ', ಕಾಫಿನಗರ, ಹೆಬ್ಬಾಳ, ಕೆಂಪಾಪುರ, ಬೆಂಗಳೂರು-೫೬೦ ೦೨೪.
ಹಿ.ಶಿ.ರಾಮಚಂದ್ರೇಗೌಡ, ನಂ-೨೨೨, ಮುಖ್ಯರಸ್ತೆ, ಬಾಪೂಜಿ ಬಡಾವಣೆ, ಮೈಸೂರು-೨೬.
ಕೃಪಾಕರ-ಸೇನಾನಿ, ನಂ-೧, ೧೨ನೇ ಕ್ರಾಸ್, ಎ.ವಿ.ಮೊಹಲ್ಲ, ಮೈಸೂರು-೨.
ಜಿ.ಪಿ.ಬಸವರಾಜು, 'ಬಿಯಾಸ್', ವಾಸು ಲೇಔಟ್, ರಾಮಕೃಷ್ಣ ನಗರ, ಕೆ ಬ್ಲಾಕ್, ಮೈಸೂರು-೫೭೦ ೦೨೨.
ಡಾ. ರಾಜೇಂದ್ರ ಚೆನ್ನಿ, ನಂ-೧೩೭, ಆಲ್ ಹಲೀಂ ಬಡಾವಣೆ, ಗೋಪಾಳ, ಶಿವಮೊಗ್ಗ-೫
ಚಂದನಗೌಡ, ನಂ.೫೦, ೩ನೇ ಕ್ರಾಸ್, ೩ನೇ ಘಟ್ಟ (ಕೆಫೆ ಕಾಫಿ ಡೇ ಬಳಿ) ರಾಜರಾಜೇಶ್ವರಿ ನಗರ, ಬೆಂಗಳೂರು-೫೬೦ ೦೯೮
ಡಾ. ಜೆ.ಕೆ.ರಮೇಶ್, 'ಚಕೋರ', ೧೨ನೇ ಅಡ್ಡರಸ್ತೆ, ಸೊಪ್ಪುಗುಡ್ಡೆ, ತೀರ್ಥಹಳ್ಳಿ .
ಡಾ. ಎಲ್.ಸಿ.ಸುಮಿತ್ರಾ, ನಿವೃತ್ತ ಪ್ರಾಂಶುಪಾಲರು, ಸೊಪ್ಪುಗುಡ್ಡೆ, ತೀರ್ಥಹಳ್ಳಿ.
ಕೆ.ಎಸ್. ಗೋಪಿನಾಥ್, ನಂ-೨೩, ಆರ್.ವಿ. ಅಪಾರ್ಟ್ ಮೆಂಟ್ಸ್, ವೆಸ್ಟ್ ಪಾರ್ಕ್ ರಸ್ತೆ, ಮಲ್ಲೇಶ್ವರಂ, ಬೆಂಗಳೂರು-೫೬೦ ೦೦೩
ಕಲ್ಕುಳಿ ವಿಠಲ ಹೆಗ್ಡೆ, ಪರಿಸರ ಹೋರಾಟಗಾರ, ಶೃಂಗೇರಿ, ಚಿಕ್ಕಮಗಳೂರು ಜಿಲ್ಲೆ
ನೆಂಪೆ ದೇವರಾಜ್, ಹಾರೋಗೊಳಿಗೆ ಅಂಚೆ, ತೀರ್ಥಹಳ್ಳಿ(ತಾ).
ಸರ್ಜಾಶಂಕರ ಹರಳೀಮಠ, ದೇಶಿ ಸಂಸ್ಕೃತಿ ಅಂಗಡಿ, ಬಿ ಎಚ್ ರಸ್ತೆ, ಶಿವಮೊಗ್ಗ-೧.
ಕೆ.ಪಿ.ಶ್ರೀಪಾಲ್, ವಕೀಲರು, ರೇಣುಕಾಂಬ ಕಾಂಪ್ಲೆಕ್ಸ್, ದುರ್ಗಿಗುಡಿ, ಶಿವಮೊಗ್ಗ-೧.
ಗೌರಿ ಲಂಕೇಶ್, ನಂ-೯, ೧ನೇ ಮಹಡಿ, ಈಐಟಿ ರಸ್ತೆ, ಬಸವನಗುಡಿ, ಬೆಂಗಳೂರು-೪.

ಎನ್.ಆರ್.ಸ್ನೇಹಾ, ನಂ-೯೮೬, 'ಚಾರ್ವಾಕ', ಪಂಚಮಂತ್ರ ರಸ್ತೆ, ಕುವೆಂಪು ನಗರ, ಮೈಸೂರು-೫೭೦ ೦೨೩.

ಅ.ಮ.ಶಿವಮೂರ್ತಿ, 'ಅವ್ವ', ಅರಹತೊಳಲು (ಅಂಚೆ), ಭದ್ರಾವತಿ (ತಾ), ಶಿವಮೊಗ್ಗ(ಜಿ).

ಎಂ. ರಾಘವೇಂದ್ರ, 'ಚಿಗುರು', ೩ನೇ ತಿರುವು, ಶಿವಪ್ಪನಾಯಕ ಬಡಾವಣೆ, ಸಾಗರ, ಶಿವಮೊಗ್ಗ(ಜಿ).

ಪ್ರತಿಭಾ ರಾಘವೇಂದ್ರ, 'ಚಿಗುರು', ೩ನೇ ತಿರುವು, ಶಿವಪ್ಪನಾಯಕ ಬಡಾವಣೆ, ಸಾಗರ, ಶಿವಮೊಗ್ಗ(ಜಿ).

ಬಿ.ವಿ.ಸುರೇಂದ್ರ, ಮ್ಯಾನೇಜರ್, ಕರ್ನಾಟಕ ಬ್ಯಾಂಕ್, ಗೋಪಾಲಪುರ ಶಾಖೆ, ಮಾಳಮಡ್ಡಿ, ಧಾರವಾಡ-೧.

ಹೊನ್ನಾಳಿ ಚಂದ್ರಶೇಖರ್, ನಂ-೧೫೯, ಅಂಬರ, ೧ ನೇ ತಿರುವು, ಎಲ್.ಬಿ.ನಗರ, ಶಿವಮೊಗ್ಗ.

ಶೃಂಗೇಶ್, 'ಜನ ಹೋರಾಟ' ದಿನಪತ್ರಿಕೆ, ಸುಮುಖ ಕಾಂಪ್ಲೆಕ್ಸ್, ಗಾರ್ಡನ್ ಏರಿಯಾ, ನೆಹರು ರಸ್ತೆ, ಶಿವಮೊಗ್ಗ.

ಸವಿತಾ ನಾಗಭೂಷಣ, ಹೆಚ್.ಐ.ಜಿ-೫, 'ನುಡಿ', ಕಲ್ಲಹಳ್ಳಿ ಬಡಾವಣೆ, ವಿನೋಬನಗರ, ಶಿವಮೊಗ್ಗ

ಅಕ್ಷತಾ ಹುಂಚದಕಟ್ಟೆ, 'ಅಹರ್ನಿಶಿ', ಕಂಟ್ರಿಕ್ಲಬ್ ಬಳಿ, ವಿದ್ಯಾನಗರ, ಶಿವಮೊಗ್ಗ

ಎಸ್.ಗಂಗಾಧರಯ್ಯ, ನಂ-೨೫೦, ೯ನೇ ಮುಖ್ಯರಸ್ತೆ, ಕಂಚಾಘಟ್ಟ ಬಡಾವಣೆ, ತಿಪಟೂರು.

ಪೂರ್ಣಿಮಾ, w/o ರಂಗನಾಥ, ಲಿಂಗದಹಳ್ಳಿ, ಚಿಕ್ಕಮಗಳೂರು(ಜಿ).

ಜ್ಯೋತಿ ಗುರುಪ್ರಸಾದ್, 'ಕಾವೇರಿ', ತೆಳ್ಳಾರು ರಸ್ತೆ, ಕಾರ್ಕಳ, ಉಡುಪಿ (ಜಿ).

ಕೆ.ಆರ್.ದಯಾನಂದ, 'ವಿಹಂಗಮ', ಭಾರತೀಪುರ (ಅಂಚೆ), ತೀರ್ಥಹಳ್ಳಿ(ತಾ)-೫೭೭೪೩೨.

ಚಂದ್ರಾವತಿ ರಮೇಶ್, 'ಇಂಚರ', ಮಂಡಗದ್ದೆ, ಶಿವಮೊಗ್ಗ(ಜಿ).

ಡಾ. ವಿನಯ್.ಸಿ, D.No-32, Vishnu Green meadow, Vishnupura, Bheemavaram, West Godavari, A.P-534202.

ಕೆ.ಎಸ್ ಉಲೂಪಿ, D.No-32, Vishnu Green meadow, Vishnupura, Bheemavaram, West Godavari,A.P-534202.

ಲಾಜವಂತಿ, ಇ-೧, ೨೦೩, ಶ್ರೀರಾಮ್ ಶ್ರೇಯಸ್ ಅಪಾರ್ಟ್‌ಮೆಂಟ್, ಕೊಡಿಗೇಹಳ್ಳಿ, ಸಹಕಾರ ನಗರ, ಬೆಂಗಳೂರು-೯೭.

ರಹಮತ್ ತರೀಕೆರೆ, ಸೂಫಿ, ಎಂ.ಪಿ. ಪ್ರಕಾಶ್ ನಗರ, ಹೊಸಪೇಟೆ- ೫೮೩೨೦೧.

ಡಿ.ಎಸ್. ನಾಗಭೂಷಣ, ಹೆಚ್.ಐ.ಜಿ-೫, 'ನುಡಿ', ಕಲ್ಲಹಳ್ಳಿ ಬಡಾವಣೆ, ವಿನೋಬನಗರ, ಶಿವಮೊಗ್ಗ-೫೭೭೨೦೪

ಎಂ.ಬಿ. ನಟರಾಜ್, 'ಸ್ನೇಹ', ೩ ನೇ ತಿರುವು, ಮುಖ್ಯರಸ್ತೆ, ಶರಾವತಿ ನಗರ 'ಬಿ' ಬ್ಲಾಕ್, ಶಿವಮೊಗ್ಗ-೫೭೭೨೦೨

ಬಿ.ಚಂದ್ರೇಗೌಡ, ನಂ-೭೮, ಎರಡನೇ ಹಂತ, ಕೆ.ಎಚ್.ಬಿ, ಗೋಪಾಳ, ಶಿವಮೊಗ್ಗ-೫೭೭೨೦೫

ಅಹರ್ನಿಶಿ ಪುಸ್ತಕಗಳು

ಯೋಳ್ತೀನ್ ಕೇಳಿ(ಅಂಕಣಬರಹ)
ಕುಸುಮಬಾಲೆ–ಬೆಲೆ: ರೂ.೧೬೫
ಮತ್ತೆ ಮತ್ತೆ ಮಾಸ್ತಿ(ವಿಮರ್ಶೆ)
ಟಿ.ಪಿ.ಅಶೋಕ–ಬೆಲೆ: ರೂ.೧೩೦
ನೀರ ಮೇಲಣ ಚಿತ್ರ(ಕವಿತೆಗಳು)
ಅಕ್ಷತಾ ಹುಂಚದಕಟ್ಟೆ–ಬೆಲೆ ರೂ.೬೫
ಜೋಗತಿ ಜೋಳಿಗೆ(ಕಥೆಗಳು)
ಅನುಪಮಾ ಪ್ರಸಾದ್–ಬೆಲೆ ರೂ.೧೨೦
ಬೂದಿಯಾಗದ ಕೆಂಡ(ಲೇಖನಗಳು)
ವಿಜಯಕುಮಾರ ಸಿಗರನಹಳ್ಳಿ–ಬೆಲೆ ರೂ.೭೦
ಸ್ತ್ರೀ ದರ್ಪಣದಲ್ಲಿ ನಾಟ್ಯಶಾಸ್ತ್ರ(ವಿಮರ್ಶಾ ಕೃತಿ)
–ಬಿ.ಎನ್.ಸುಮಿತ್ರಾಬಾಯಿ ಬೆಲೆ: ರೂ ೩೦೦
ವಿಮೋಚಕಿಯ ಕನಸುಗಳು (ಸಾವಿತ್ರಿಬಾಯಿ ಫುಲೆ ಬದುಕು–ಹೋರಾಟ)
ಬ್ರಜ್ ರಂಜನ್ ಮಣಿ, ಪಮೇಲಾ ಅನು: ಶ್ರೀಪಾದ ಭಟ್ ಬೆಲೆ: ರೂ. ೭೦
ಹುದುಗಲಾರದ ದುಃಖ(ಪ್ರಸಿದ್ಧ ಕೃತಿ 'ಏ ಗ್ರೀಫ್ ಟು ಬರಿ' ಯ ಅನುವಾದ)–ವಸಂತ
ಕಣ್ಣಭಿರಾನ್ ಅನುವಾದ ಸಂಯೋಜಕಿ: ಎಂಎಸ್ ಆಶಾದೇವಿ ರೂ.೩೧೦
ಅಮೃತ ನೆನಪುಗಳು (ಇಮ್ರೋಜ್ ನೆನೆದಂತೆ ಅಮೃತಾ ಪ್ರೀತಂ)
ರೇಣುಕಾ ನಿಡಗುಂದಿ ರೂ ೮೦/–
ರೆಕ್ಕೆ ಹಾವು (ಕಥೆಗಳು)
ಟಿ.ಕೆ.ದಯಾನಂದ್ ರೂ ೧೦೦/–
ಉರಿ (ಕಥೆಗಳು)
ವಿನಯಾ ರೂ ೯೦/–
ನಿಸರ್ಗ ಮತ್ತು ಗುಬ್ಬಚ್ಚಿ (ಮಕ್ಕಳ ಕಥೆಗಳು)
ಬೇಲೂರು ರಘುನಂದನ್ ರೂ. ೬೦/–
ಬೆತ್ತಲೆಯ ಬೆಳಕನುಟ್ಟು (ಕಥೆಗಳು)
ಜಿ.ಪಿ.ಬಸವರಾಜು ರೂ. ೧೩೦/–

ಜಾಲಾರ ಹೂವು (ಪ್ರಬಂಧಗಳು)
ಜಿ.ವಿ.ಆನಂದಮೂರ್ತಿ ರೂ.೮೫/-
ದಿಲ್ಲಿ ಡೈರಿಯ ಪುಟಗಳು (ಅಂಕಣಬರಹ)
ರೇಣುಕಾ ನಿಡಗುಂದಿ ಬೆಲೆ: ರೂ. ೧೪೦/-
ಸಾಸಿವೆ ತಂದವಳು (ಕ್ಯಾನ್ಸರ್ ಜತೆಗಿನ ಹೋರಾಟದ ಕಥನ)
ಭಾರತಿ ಬಿ ವಿ ಬೆಲೆ: ರೂ. ೧೧೦/-
ಹನ್ನೊಂದನೇ ಇಂದ್ರಿಯ (ಪ್ರಬಂಧ ಸಂಕಲನ)
ಕೆ ಸತ್ಯನಾರಾಯಣ ಬೆಲೆ: ರೂ. ೧೫೦/-
ದಲಿತಬ್ರಾಹ್ಮಣ (ಕಥಾಸಂಕಲನ)
ಶರಣಕುಮಾರ ಲಿಂಬಾಳೆ/ ಪ್ರಮೀಳಾ ಮಾಧವ್ ಬೆಲೆ: ರೂ. ೧೫೦/-
ಅಸಮಾನತೆಯ ಬಣ್ಣಗಳು (ಅಂಕಣ ಬರಹ)
-ಹರ್ಷ ಮಂದರ್(ಸಂ. ಜಿ ರಾಜಶೇಖರ/ ಕೆ ಫಣಿರಾಜ) ಬೆಲೆ: ರೂ. ೧೬೦
ಧ್ಯಾನಕೆ ತಾರೀಖಿನ ಹಂಗಿಲ್ಲ (ಕವಿತೆಗಳು)
-ಕಾವ್ಯಾ ಕಡಮೆ ಬೆಲೆ: ರೂ. ೭೦/-
ಬೆಂಕಿ ಬೆಡಗು (ನಟಿ ಉಮಾಶ್ರೀ ಬದುಕಿನ ಕೆಲ ಪುಟಗಳು)
-ನಿರೂಪಣೆ: ಬಿ ಗಣಪತಿ ಬೆಲೆ: ರೂ. ೧೦೦/-
ಕಥೆ ಹೇಳುವೆ (ವಿವಿಧ ಲೇಖಕಿಯರ ಕಥೆಗಳು)
ಅನುವಾದ: ಸುಕನ್ಯಾ ಕನಾರಳ್ಳಿ ಬೆಲೆ: ರೂ. ೧೬೦/-
ಮಾತು ಮಂತ್ರವಾಗುವವರೆಗೆ(ಕವಿತೆಗಳು)
ಎಚ್ ಎಸ್ ಶಿವಪ್ರಕಾಶ್ ಬೆಲೆ: ರೂ. ೮೦/-
ಮರೆತುಹೋದ ದೊಂಬರಾಕೆ(ಅನುವಾದಿತ ಕವಿತೆಗಳು)
ಜಿಂಗೋನಿಯಾ ಜಿಂಗೋನೆ/ಎಚ್‌ಎಸ್ ಶಿವಪ್ರಕಾಶ್ ಬೆಲೆ: ರೂ. ೭೫/-
ಅನುದಿನದ ಅಂತರಗಂಗೆ(ಆತ್ಮಕಥನ)
ಪ್ರತಿಭಾ ನಂದಕುಮಾರ್ ಬೆಲೆ: ರೂ. ೩೧೦/-
ಗಾಂಧಿ ಬಂದ (ಕಾದಂಬರಿ)
ಎಚ್ ನಾಗವೇಣಿ ಬೆಲೆ: ರೂ. ೩೬೦/-
ಮತ್ತೆ ಮತ್ತೆ ಲೋಹಿಯಾ (ಲೇಖನಗಳು)
ಡಾ. ರಾಜಾರಾಮ ತೋಳ್ಪಾಡಿ ಬೆಲೆ: ರೂ. ೭೫/-
ನಡುವೆ ಸುಳಿವ ಆತ್ಮ(ಸ್ತ್ರೀ ಸಂಕಥನದ ಚಹರೆಗಳು)
ಎಂ ಎಸ್ ಆಶಾದೇವಿ ಬೆಲೆ: ರೂ. ೧೦೫/-
ಅನಂತಮೂರ್ತಿ ಮಾತುಕತೆ ಹತ್ತು ಸಮಸ್ತರ ಜೊತೆ(ಸಂದರ್ಶನಗಳು)
ಸಂ: ಪಟ್ಟಾಭಿರಾಮ ಸೋಮಯಾಜಿ ಬೆಲೆ: ರೂ. ೧೩೫/-
ಮತ್ತೆ ಮತ್ತೆ ಬೇಂದ್ರೆ (ಬೇಂದ್ರೆ ಕಾವ್ಯ ಕುರಿತ ಉಪನ್ಯಾಸಗಳು)

ಕಿ.ರಂ. ನಾಗರಾಜ/ ಸಂ: ಅಕ್ಷತಾ ಕೆ ಬೆಲೆ: ರೂ. ೭೫/-

ಅವ್ವನ ಅಂಗನವಾಡಿ (ಕವನ ಸಂಕಲನ)


ಅರುಣ್ ಜೋಳದಕೂಡ್ಲಗಿ ಬೆಲೆ: ರೂ. ೬೦/-

ಆ ದಶಕ (80ರ ದಶಕದ ಬರಹ ಮತ್ತು ಪತ್ರಗಳು)

ಕಡಿದಾಳು ಶಾಮಣ್ಣ ಬೆಲೆ: ರೂ. ೯೫/-

ಮತ್ತೆ ಮತ್ತೆ ಬ್ರೆಕ್ಟ್ (ಬರ್ಟೋಲ್ಟ್ ಬ್ರೆಕ್ಟ್‌ನ ಕವನಗಳ ಅನುವಾದ)

ಯು.ಆರ್. ಅನಂತಮೂರ್ತಿ ಬೆಲೆ: ರೂ. ೧೦೦/-



ನಮ್ಮ ಶಾಮಣ್ಣ

ಕಡಿದಾಳು ಶಾಮಣ್ಣ ಗೌರವ ಗ್ರಂಥ

ಶಾಮಣ್ಣ ಸದಾ ಕಷ್ಟದಲ್ಲಿದ್ದವರ ಸಹಾಯಕ್ಕೆ ಮುಂದಾಗುತ್ತಿದ್ದ. ಇಂಥ ಸ್ಪಂದನೆಯ ಕಾರಣಕ್ಕೇ ಎಲ್ಲರಿಗೂ ಇಷ್ಟವಾಗುತ್ತಿದ್ದ. ಶಾಮಣ್ಣನಂಥ ಶಿಷ್ಯರು ಎಲ್ಲಾ ಮೇಷ್ಟ್ರುಗಳಿಗೂ ಸಿಗುವುದಿಲ್ಲ.

ಪ್ರಭುಶಂಕರ

ಶಾಮಣ್ಣನದು ಪಕ್ವವಾದ ವ್ಯಕ್ತಿತ್ವ. ಅದು ತನ್ನ ಪ್ರಭಾವವನ್ನು ಸುತ್ತಲ ಜನರ ಮೇಲೂ ಚೆಲ್ಲುತ್ತಿರುತ್ತದೆ. ಈಗಿನ ಕಾಲಕ್ಕದು ಅವಶ್ಯಕ.

ರಾಜೀವ ತಾರಾನಾಥ

ಶಾಮಣ್ಣನವರು ಮುನ್ನಡೆಸಿರುವ ಚಳುವಳಿಗಳಲ್ಲಿ ಸಾತ್ವಿಕ ಶಕ್ತಿಯನ್ನು ಮೀರದೆ ನಡೆಸಿದ್ದಾರೆ. ಸಾತ್ತ್ವಿಕ ಮಾರ್ಗದಲ್ಲಿಯೇ ಸಾಮಾಜಿಕ ಸುಧಾರಣೆಯನ್ನು ಮಾಡಲು ಅವರು ಶ್ರಮಿಸಿದ್ದಾರೆ. ಹೀಗಾಗಿ ಎಲ್ಲರೂ ಅವರನ್ನು ಪ್ರೀತಿಸುತ್ತಾರೆ.

ಎಸ್.ಎಲ್. ಭೈರಪ್ಪ

ಸಮಾನತೆ, ಸಹಜತೆ, ಸರಳತೆ ಇವೆಲ್ಲವನ್ನು ನಾನು ಒಂದು ರೀತಿ ಅದರ ತುದಿಯಲ್ಲಿ, ಅದರ ತೀವ್ರತೆಯಲ್ಲಿ ಪ್ರತ್ಯಕ್ಷವಾಗಿ ಕಂಡಿದ್ದು ಶಾಮಣ್ಣನಲ್ಲಿ.

ಯು.ಆರ್. ಅನಂತಮೂರ್ತಿ

ಶಾಮಣ್ಣನವರ ಪ್ರಭಾವದಿಂದ ತಮಾಷೆ, ವಿನೋದ, ಹಾಸ್ಯಗಳು ನನ್ನ ವ್ಯಕ್ತಿತ್ವದ ಅವಿಭಾಜ್ಯ ಅಂಗಗಳಾಗಿ ಹೋದವು. ಇದರಿಂದಾಗಿ ಒಂದು ಸಂಗತಿಯನ್ನು ಏಕಕಾಲದಲ್ಲಿ ಅರ್ಥಪೂರ್ಣವಾಗಿಯೂ ಅಸಂಗತವಾಗಿಯೂ ಕಾಣಬಹುದಾದ ಸಂಗತಿಗಳು ನನಗೆ ಗೋಚರಿಸಿದವು

ಕೆ.ಪಿ. ಪೂರ್ಣಚಂದ್ರ ತೇಜಸ್ವಿ

ರೈತರ ಚಳವಳಿಗೆ ವ್ಯವಹಾರ ಜ್ಞಾನದ, ವಿನೋದದ, ನಿಸ್ವಾರ್ಥತೆಯ ಆಯಾಮ ಕೊಡುತ್ತಿರುವ ಶಾಮಣ್ಣ ಮೊನ್ನೆ ತೀರ್ಥಹಳ್ಳಿಯ ಹಳ್ಳಿಗಳಿಗೆ ಗಾಂಧಿಜಿಯವರನ್ನು ತಂದರು.

ಪಿ. ಲಂಕೇಶ್

ಶಾಮಣ್ಣನವರ ಮುಗ್ಧತೆ (ಅದು ಅಮಾಯಕತೆ ಅಲ್ಲ), ಸಾವಧಾನತೆ, ತಾಳ್ಮೆ ಪ್ರಸನ್ನಚಿತ್ತತೆ, ಋಜುತ್ವ, ಈ ಯುಗದ್ದಲ್ಲ, ಯಾವುದೋ ಪುಣ್ಯ ಯುಗದಲ್ಲಿ ಕಾಣುವಂಥದು.

ವೈದೇಹಿ

ಅಹರ್ನಿಶಿ